ಕನ್ನಡ-ತಮಿಳು ದಲಿತ ಸಾಹಿತ್ಯ: ತೌಲನಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಲೀಲಾವತಿ ಜಿ.

ಮಾರ್ಗದರ್ಶಕರು
ಡಾ. ಎ. ಮೋಹನ ಕುಂಟಾರ್
ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ
ಭಾಷಾ ನಿಕಾಯ
ನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೨೦

ಕನ್ನಡ-ತಮಿಳು ದಲಿತ ಸಾಹಿತ್ಯ: ತೌಲನಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಲೀಲಾವತಿ ಜಿ.

ಮಾರ್ಗದರ್ಶಕರು
ಡಾ. ಎ. ಮೋಹನ ಕುಂಟಾರ್
ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
ಸೆಪ್ಟೆಂಬರ್-೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

ಲೀಲಾವತಿ ಜಿ. ಅವರು **"ಕನ್ನಡ-ತಮಿಳು ದಲಿತ ಸಾಹಿತ್ಯ: ತೌಲನಿಕ ಅಧ್ಯಯನ"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಭಾಷಾಂತರ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ: ೧೫.೦೫.೨೦೨೦

ಸ್ಥಳ: ವಿದ್ಯಾರಣ್ಯ

(ಡಾ. ಎ. ಮೋಹನ ಕುಂಟಾರ್)
ಮುಖ್ಯಸ್ಥರು ಮತ್ತು ಮಾರ್ಗದರ್ಶಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

"ಕನ್ನಡ-ತಮಿಳು ದಲಿತ ಸಾಹಿತ್ಯ: ತೌಲನಿಕ ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಭಾಷಾಂತರ ಅಧ್ಯಯನ ವಿಭಾಗದ ಮುಖ್ಯಸ್ತರಾದ ಡಾ. ಎ. ಮೋಹನ ಕುಂಟಾರ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Leelavathi. G.

ದಿನಾಂಕ: ೧೨/೦೮/೨೦೨೦

ಸ್ಥಳ : ವಿದ್ಯಾರಣ್ಯ

(ಲೀಲಾವತಿ ಜಿ.)
ಸಂಶೋಧನ ವಿದ್ಯಾರ್ಥಿ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪರಿವಿಡಿ

ಅಧ್ಯಾಯ: ಒಂದು

ಪ್ರಸ್ತಾವನೆ

ಯಾವುದೇ ಸಾಹಿತ್ಯ ಕೃತಿಗೆ ಮುಖ್ಯ ಆಧಾರವಾಗಿರುವುದು ಆ ಕೃತಿಕಾರರ ಸಮಾಜ. ಅವರ ಸಾಮಾಜಿಕ ಸನ್ನಿವೇಶ, ಜೀವನ ಶೈಲಿ, ಸಂಸ್ಕೃತಿ, ಪರಿಸರವೇ ಕಾರಣವಾಗಿರುತ್ತದೆ. ಹೀಗೆ ಕೃತಿಕಾರರು ತಮ್ಮ ಸಾಮಾಜಿಕ ಅನುಭವವನ್ನು ಸಾಹಿತ್ಯದಲ್ಲಿ ದಾಖಲಿಸುತ್ತಾರೆ. ಈ ರೀತಿ ದಾಖಲಾದ ಸಾಹಿತ್ಯಕ್ಕೆ ಅವರ ಸಾಮಾಜಿಕ ಪರಿಸರದೊಂದಿಗೆ ಮತ್ತೊಂದು ಸಾಹಿತ್ಯದ ಪ್ರಭಾವ ಪ್ರೇರಣೆಯಾಗಿರಲೂಬಹುದು. ಈ ರೀತಿಯಾಗಿ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಸಂವೇದನೆಗಳನ್ನು ಭಾಷಾಂತರಿಸುವ ಕಾರ್ಯ ಈ ಕಾಲದಲ್ಲಿ ಮಹತ್ವ ಪಡೆದುಕೊಂಡಿದೆ. ಹಾಗಾಗಿ ಒಂದೇ ಸಂವೇದನೆಯ ಸಾಹಿತ್ಯ ರಚನೆ ವಿವಿಧ ಭಾಷೆಗಳಲ್ಲಿಯೂ ರೂಪುಗೊಳ್ಳುತ್ತದೆ. ಅಂತಹ ವಿವಿಧ ಸಾಹಿತ್ಯಗಳ ತುಲನೆಯೇ ತೌಲನಿಕ ಸಾಹಿತ್ಯವಾಗಿದೆ. ಪ್ರಸ್ತುತ ಸಂಶೋಧನೆಯು ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ರಚಿತವಾದ ದಲಿತ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡುವ ಉದ್ದೇಶ ಹೊಂದಿದೆ.

ಕನ್ನಡ ಮತ್ತು ತಮಿಳು ದ್ರಾವಿಡ ಭಾಷೆಗಳಾದರೂ ಕನ್ನಡದಲ್ಲಿ ದಲಿತ ಸಾಹಿತ್ಯ ಮೂಡಿಬಂದು ಸುಮಾರು ೩೦ ವರ್ಷಗಳ ನಂತರ ತಮಿಳಿನಲ್ಲಿ ದಲಿತ ಸಾಹಿತ್ಯದ ವಿಚಾರಗಳು ಚರ್ಚಿತವಾಗುತ್ತಿವೆ. ತನ್ನದೇ ಆದ ಸಾಮಾಜಿಕ ಸ್ಥಿತಿಗತಿಗಳ ಒತ್ತಡ ಹಾಗೂ ಸಾಮಾಜಿಕ ಆಯಾಮಗಳು ಕಾರಣವಾಗಿವೆ. ಕನ್ನಡದಲ್ಲಿದ್ದ ೭೦ರ ದಶಕದಲ್ಲಿನ ಚಳುವಳಿಗಳ ಸ್ವರೂಪವು ತಮಿಳುನಾಡಿನಲ್ಲಿ ಕಂಡು ಬರುವುದಿಲ್ಲ. ತಮಿಳಿನಲ್ಲಿ ಕೆಲವು ದಲಿತ ಲೇಖಕರು ಸಾಹಿತ್ಯ ರಚನೆಗೆ ಅಲ್ಲಲ್ಲಿ ತೊಡಗಿಕೊಂಡಿದ್ದರು. ಅಂಬೇಡ್ಕರ್ ಜನ್ಮ ಶತಮಾನೋತ್ಸವದ ಆಚರಣೆಯ ನಂತರ ೯೦ರ ದಶಕದಲ್ಲಿ ತಮಿಳು ದಲಿತ ಸಾಹಿತ್ಯವು ತನ್ನ ವಿಸ್ತಾರವನ್ನು ಹೆಚ್ಚಿಸಿಕೊಂಡಿತು. ಆ ಕಾಲದಲ್ಲಿ ತಮಿಳು ಸಾಹಿತ್ಯ ದಲಿತ ಕೇರಿಯ ಕಡೆಗೆ ಮುಖಮಾಡಿತು. ಕನ್ನಡ ಮತ್ತು ತಮಿಳು ದಲಿತ ಸಾಹಿತ್ಯ ಕುರಿತು ಹೇಳಬಹುದಾದ ಅಂಶವೆಂದರೆ ಕರ್ನಾಟಕದಲ್ಲಿ ದಲಿತ ಸಾಹಿತ್ಯವು ಆರಂಭದಿಂದಲೂ ಹೋರಾಟದೊಂದಿಗೆ ಬೆಳೆದು ಬಂದಿದೆ. ಹೋರಾಟದ ಸಾಮಾಜಿಕ ಅಂಶಗಳು ಸಾಹಿತ್ಯಕ್ಕೆ ಒತ್ತಾಸೆಯಾಗಿ ನಿಂತಿವೆ. ಆದರೆ ತಮಿಳುನಾಡಿನಲ್ಲಿ ಈ ರೀತಿಯ ಪರಿಸ್ಥಿತಿ ಕಂಡು ಬರುವುದಿಲ್ಲ. ಅಲ್ಲಿನ ಸಾಮಾಜಿಕತೆ, ಧಾರ್ಮಿಕತೆ, ಆರ್ಥಿಕತೆಯ ನೆಲೆಗಳು

ಭಿನ್ನವಾಗಿವೆ. ಈ ರೀತಿಯಾಗಿರುವ ದಲಿತರ ಸಮಾಜವು ತಮಿಳು ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವುದನ್ನು ತಿಳಿದುಕೊಳ್ಳಬಹುದಾಗಿದೆ.

ಕನ್ನಡ-ತಮಿಳು ಭಾಷೆಗಳಲ್ಲಿ ದಲಿತ ಸಾಹಿತ್ಯವು ಬೇರೆ ಬೇರೆ ಕಾಲಘಟ್ಟದಲ್ಲಿ ಉದಯವಾದರೂ ಎರಡು ಸಾಹಿತ್ಯಗಳ ಮೂಲ ಆಶಯ ಮಾತ್ರ ಒಂದೇ ಆಗಿದೆ. ಹಾಗೇ ಕನ್ನಡ-ತಮಿಳು ದಲಿತ ಸಾಹಿತ್ಯಕ್ಕೆ ಮೂಲ ಪ್ರೇರಣೆಯಾಗಿ ಮರಾಠಿ ಸಾಹಿತ್ಯವಿದೆ. ಈ ಸಾಹಿತ್ಯದಲ್ಲಿ ಜ್ಯೋತಿಬಾ ಪುಲೆ, ಛತ್ರಪತಿ ಶಾಹೂ ಮಹಾರಾಜರು, ಬಾಬಾ ಸಾಹೇಬ ಅಂಬೇಡ್ಕರ್ ಮುಂತಾದವರ ಚಿಂತನೆಗಳು, ವಿಚಾರಧಾರೆಗಳು ಅಡಕವಾಗಿವೆ. ಇವುಗಳೊಂದಿಗೆ ಲೋಹಿಯಾವಾದ, ಮಾರ್ಕ್ಸ್‌ವಾದ, ವಚನ ಚಳುವಳಿ, ಪೆರಿಯಾರ್ ಚಿಂತನೆಗಳು, ದ್ರಾವಿಡ ಚಳುವಳಿಗಳು, ಆಫ್ರಿಕಾದ ಕಪ್ಪು ಸಾಹಿತ್ಯ ಗಾಢವಾದ ಪ್ರಭಾವವನ್ನು ಬೀರಿವೆ. ಇವುಗಳು ಮಾತ್ರವಲ್ಲದೆ ಈ ಭಾಷೆಗಳ ಸಾಹಿತ್ಯದಲ್ಲಿ ದೈನಂದಿನ ಜೀವನದ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಧಾರೆಗಳು, ಪ್ರಭಾವಿ ವ್ಯಕ್ತಿಗಳ ವಿಚಾರಗಳು, ಸಂಘ ಸಂಸ್ಥೆಗಳ ಚಿಂತನೆಗಳು ಮುಂತಾದ ಅನೇಕ ಅಂಶಗಳನ್ನು ಕನ್ನಡ-ತಮಿಳು ದಲಿತ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಕನ್ನಡ-ತಮಿಳು ದಲಿತ ಸಾಹಿತ್ಯದ ಬೆಳವಣಿಗೆಯನ್ನು ಚಾರಿತ್ರಿಕ ದೃಷ್ಟಿಕೋನದಿಂದ ಅವಲೋಕಿಸಿದಾಗ ಸೂಕ್ಷ್ಮ ಸಂಗತಿಗಳು ತೆರೆದುಕೊಳ್ಳುತ್ತವೆ. ಕನ್ನಡದಲ್ಲಿ ದಲಿತ ಸಾಹಿತ್ಯವು ೧೯೭೦ರ ಸುಮಾರಿಗೆ ಆರಂಭವಾದರೆ, ತಮಿಳಿನಲ್ಲಿ ೧೯೯೦ರ ಸುಮಾರಿಗೆ ದಲಿತರ ಕುರಿತು ಸಾಹಿತ್ಯಿಕ ಚಿಂತನೆಗಳು ನಡೆದವು. ಕನ್ನಡ ದಲಿತ ಸಾಹಿತ್ಯಕ್ಕೆ ಪ್ರೇರಕವಾದ ಅಂಶಗಳಾಗಿ ರಾಮಮನೋಹರ ಲೋಹಿಯಾರ ಶೂದ್ರ ಪ್ರಜ್ಞೆಯನ್ನು ಜಾಗೃತಗೊಳಿಸುವುದರೊಂದಿಗೆ ಪುರೋಹಿತ ಶಾಹಿಯ ಬಗ್ಗೆ ತೀವ್ರವಾದ ಅತೃಪ್ತಿ ಬೆಳಸಿದ್ದು, ಗಾಂಧೀಜಿ ಹಳ್ಳಿಗಳ ಬಗೆಗೆ ಒಲವು ಮೂಡುವಂತೆ ಮಾಡಿದ್ದು, ಮಾವೋ ನಕ್ಸಲ್ ಬಾರಿ ಚಟುವಟಿಕೆಗಳಿಗೆ ಪ್ರೇರಣೆ ನೀಡಿ ಸಶಸ್ತ್ರ ಹೋರಾಟಕ್ಕೆ ಜನರನ್ನು ತಯಾರು ಮಾಡಿದ್ದು, ಮಾರ್ಕ್ಸ್ ಜನರಲ್ಲಿನ ವರ್ಗ ಪ್ರಜ್ಞೆಯನ್ನು ಜಾಗೃತಿಗೊಳಿಸಿದ್ದು, ಜ್ಯೋತಿಬಾ ಪುಲೆ ನಾಸ್ತಿಕತೆಗೆ ನೀರೆರೆದದ್ದು, ಪೆರಿಯಾರ್ ವೈದಿಕ ಪ್ರಕರಣಗಳ ಬಗ್ಗೆ ಜಿಗುಪ್ಸೆ ಬೆಳೆಸಿದ್ದು, ನಾರಾಯಣಗುರು ಮತ್ತು ಕುದ್ಮಲ್ ರಂಗರಾಯರು ಅಸ್ಪೃಶ್ಯರ ಕಡೆಗೆ ಇತರರ ಗಮನವನ್ನು ಗಂಭೀರವಾಗಿ ಸೆಳೆದದ್ದು, ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ, ಕರ್ನಾಟಕ ದಲಿತ ಸಂಘರ್ಷ ಸಮಿತಿಗಳ ಹುಟ್ಟು, ಕನ್ನಡ ಸಾಹಿತ್ಯ ಪರಿಷತ್ತಿನ ವ್ಯವಸ್ಥೆ ಕೊಳೆತು ಹೋದದ್ದು, ಹೆಚ್ಚಿದ ನಕ್ಸಲೈಟ್ ಚಟುವಟಿಕೆಗಳು, ಬ್ರಾಹ್ಮಣೇತರ ಸಂಘಟನೆಗಳ ಹೆಚ್ಚಳ, ಪಕ್ಷ ಕಮ್ಯುನಿಷ್ಟರ ಚಟುವಟಿಕೆಗಳು ಇತ್ಯಾದಿಗಳನ್ನು ಗುರುತಿಸಬಹುದು.

ಇತರ ಪೂರಕ ವಿಷಯಗಳು-ಮೀಸಲಾತಿಯಿಂದ ದಲಿತರಿಗಾದ ಲಾಭ, ಭೂ ಮಸೂದೆಯಿಂದ ಭೂಮಿ ಸಂಬಂಧದಲ್ಲಾದ ಬದಲಾವಣೆ, ತುರ್ತು ಪರಿಸ್ಥಿತಿಯಿಂದಾದ ಎಚ್ಚರ, ಮತಾಂತರದಿಂದ ಹಿಂದೂಗಳಲ್ಲಿ ಉಂಟಾದ ಭಯ, ಕರ್ನಾಟಕದಲ್ಲಿ ಹೆಚ್ಚಿದ ಜಾನಪದ ಅಭ್ಯಾಸ, ಬಸವಲಿಂಗಪ್ಪನವರ ಬೂಸಾ ಪ್ರಕರಣ, ಕಾಂಗ್ರೆಸ್ಸಿನ ಬೂರ್ಜ್ವಾ ಉದಾರತ್ವದ

ಅಲ್ಪ ಪರಿಣಾಮ, ಜಯಪ್ರಕಾಶ ನಾರಾಯಣರ ಪ್ರಭಾವ, ಜನಾಂಗವಾದ, ಪ್ರಾದೇಶಿಕವಾದದಂತಹ ಪ್ರಮುಖ ಅಂಶಗಳು ಯುವ ದಲಿತರಲ್ಲಿದ್ದ ಕ್ರಾಂತಿ ಕಿಡಿ ದಲಿತ ಸಾಹಿತ್ಯದ ಮೂಲಕ ಹೊರ ಸಿಡಿದು ಹೊತ್ತಿ ಉರಿದವು. ಇದರ ಕಿಡಿಗಳು ತಮಿಳುನಾಡಿನ ದಲಿತ ಸಾಹಿತ್ಯದ ಮೇಲೂ ಸಿಡಿದವು. 'ಬೂಸ ಪ್ರಕರಣ'ವು ಕರ್ನಾಟಕದಲ್ಲಿ ದಲಿತ ಸಾಹಿತ್ಯ ಉಗಮಕ್ಕೆ ತತ್‌ಕ್ಷಣದ ಕಾರಣವಾದರೆ, ತಮಿಳಿನಲ್ಲಿ ದಲಿತ ಸಾಹಿತ್ಯ ಉಗಮಕ್ಕೆ ಭಿನ್ನವಾದ ರಾಜಕೀಯ ಸ್ಥಿತಿಯನ್ನು ಕಾಣಬಹುದು. ಮರಾಠಿ ದಲಿತ ಸಾಹಿತ್ಯ ಮತ್ತು ಆಫ್ರಿಕಾದ ಕಪ್ಪು ಸಾಹಿತ್ಯದ ಜೊತೆಗೆ ರಾಮಸ್ವಾಮಿ ಪೆರಿಯಾರ್, ಅಯೋತಿದಾಸ್ ಪಂಡಿತರ್, ಕಟ್ಟಮಲ್ಯೆ ಶ್ರೀನಿವಾಸನ್ ಮುಂತಾದವರ ವಿಚಾರಧಾರೆಗಳು ಮತ್ತು 'ಈಳಂ' ಜನರ ಬರವಣಿಗೆಗಳು ದಲಿತ ಸಾಹಿತ್ಯ ಉಗಮಕ್ಕೆ ಪ್ರೇರಣೆಗಳಾದವು. ಇದಲ್ಲದೆ "ತಮಿಳಿಲ್ ದಲಿತ್ ಇಲಕ್ಕಿಯಮ್ ತೋನ್ರುಮಾ" ("ತಮಿಳಿನಲ್ಲಿ ದಲಿತ ಸಾಹಿತ್ಯವು ಉದಯವಾಗುವುದೇ?") ತಮಿಳವನ್ (ಕಾರ್ಲೋಸ್) ಅವರು ಲೇಖನ ಬರೆದರು. ೧೯೯೦ರಲ್ಲಿ ಭಾರತದ ವಿವಿಧೆಡೆ ಅಂಬೇಡ್ಕರ್ ಜಯಂತಿಯನ್ನು ವೈಭವದಿಂದ ಆಚರಿಸಿದ ಸಂದರ್ಭದಲ್ಲಿ ತಮಿಳುನಾಡಿನಲ್ಲಿಯು ಅವರ ವಿಚಾರಧಾರೆ ಹಾಗೂ ಚಿಂತನೆಗಳನ್ನು ಸಂಘ ಸಂಸ್ಥೆ ಮತ್ತು ಸರ್ಕಾರಗಳು ಜನತೆಗೆ ತಲುಪಿಸುವ ಕಾರ್ಯ ಮಾಡಿದುವು. ಇದು ತಮಿಳುನಾಡಿನಲ್ಲಿ ಚಳುವಳಿ ಮತ್ತು ಹೋರಾಟಗಳಿಗೆ ಪ್ರೇರಣೆ ನೀಡಿತು. ಇದೇ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ದಲಿತ ಸಾಹಿತ್ಯವು ಪ್ರಕಾಶಮಾನವಾಗಿ ಬೆಳೆಯುತ್ತಿತ್ತು. ಔದ್ಯೋಗಿಕ ಕಾರಣಕ್ಕಾಗಿ ಕರ್ನಾಟಕದಲ್ಲಿ ನೆಲೆಸಿದ್ದ ತಮಿಳು ವಿದ್ವಾಂಸರು ಅದನ್ನು ಗಮನಿಸಿ ತಮಿಳಿನಲ್ಲಿಯೂ ಪಸರಿಸುವಂತೆ ಮಾಡಿದರು. ಇದೇ ಸಮಯಕ್ಕೆ ಉತ್ತರ ತಮಿಳುನಾಡಿನಲ್ಲಿ ಕೃಷ್ಣಸ್ವಾಮಿಯುಂ ರಾಜಕೀಯ ಶಕ್ತಿಗಳಾಗಿ ಕಾಣಿಸಿಕೊಂಡರು. ಇದರ ಜೊತೆಗೆ ಸಾಹಿತ್ಯದಲ್ಲೂ ಬದಲಾವಣೆಯ ಗಾಳಿ ಬೀಸತೊಡಗಿತ್ತು. ಕನ್ನಡದ ನವ್ಯ, ಪ್ರಗತಿಶೀಲ ಸಾಹಿತ್ಯದಂತೆ ತಮಿಳಿನಲ್ಲಿ "ವ್ಯಾಪಾರ ಎಳುತ್ತುಕ್ಕಳ್" (ವ್ಯಾಪಾರ ಬರಹಗಳು), "ಸಿಟ್ರದಳ್ ಎಳುತ್ತುಕ್ಕಳ್" (ಮಾರ್ಕ್ಸಿಸಂ ಬರಹಗಳು), "ಪ್ರಚಾರ ಎಳುತ್ತುಕ್ಕಳ್" (ಪ್ರಚಾರ ಬರಹಗಳು), ದ್ರಾವಿಡಂ ಬರಹಗಳು ಎಂಬ ಮುಂತಾದ ಬರಹಗಳಿದ್ದವು. ಅವುಗಳಿಂದ ಬಿಡುಗಡೆ ಹೊಂದಿ ಹೊಸ ಬರವಣಿಗೆಗಳು ಅನಿವಾರ್ಯವಾದುವು. ಹಾಗಾಗಿ ವಿವಿಧ ತುದಿಗಳಿಂದ ಪ್ರೇರಣೆ ಪಡೆದ ತಮಿಳು ದಲಿತ ಸಾಹಿತ್ಯ ವಿಕಾಸವಾಯಿತು. ಕನ್ನಡ ದಲಿತ ಸಾಹಿತ್ಯ ಲೋಕದ ಪ್ರತಿನಿಧಿಗಳಾಗಿ ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ದೇವಯ್ಯ ಹರವೆ, ಅರವಿಂದ ಮಾಲಗತ್ತಿ, ಮುಳ್ಳೂರು ನಾಗರಾಜ, ಮ.ನ. ಜವರಯ್ಯ, ವಿ. ಮುನಿವೆಂಕಟಪ್ಪ, ಚೆನ್ನಣ್ಣ ವಾಲೀಕಾರ, ಕೆ.ಬಿ. ಸಿದ್ದಯ್ಯ. ಎಲ್. ಹನುಮಂತಯ್ಯ, ಮೊಗಳ್ಳಿ ಗಣೇಶ, ಎನ್.ಕೆ. ಹನುಮಂತಯ್ಯ ಮುಂತಾದವರು ಮುಖ್ಯವೆನಿಸಿದ್ದರೆ, ತಮಿಳಿನಲ್ಲಿ ರಾಜಗೌತಮನ್, ರವಿಕುಮಾರ್, ಸುಬ್ಬಯ್ಯ, ರಾಜ ಮುರುಗು ಪಾಂಡಿಯನ್, ಶಿವಕಾಮಿ ಬಾಮಾ, ಅಳಗಿಯ ಪೆರಿಯವನ್, ಪ್ರತಿಭಾ ಜಯಚಂದ್ರನ್, ವಿಳಿ. ಪಾ. ಇದಯವೇಂದನ್ ಮುಂತಾದವರು ದಲಿತ ಸಾಹಿತ್ಯವನ್ನು ಮುನ್ನಡೆಸಿದರು. ಎನ್.ಟಿ. ರಾಜಕುಮಾರ್, ಮ.ಮದಿವಣ್ಣನ್,

ಕೋಮದಿ, ಅನ್ಬಾದವನ್, ಅಭಿಮಾನಿ, ಅರಂಗ ಮಲ್ಲಿಗಾ, ಸುಕೃದಾ ರಾಣಿ, ಆದವನ್, ಭಾರತಿ ನಿವೇದನ್, ಎ.ಪಿ. ವೆಳ್ಳಿನಾಯಗಂ, ಪೂವಿಳಿಯನ್, ಆದಿ ಮುಂತಾದವರು ದಲಿತ ಸಾಹಿತ್ಯದ ಜೊತೆಗೆ ದಲಿತ ಸಂಶೋಧನೆ, ದಲಿತ ಸಂಸ್ಕೃತಿ, ದಲಿತ ರಾಜಕೀಯವನ್ನು ಮುನ್ನಡೆಸುತ್ತಿದ್ದಾರೆ.

ಕನ್ನಡ-ತಮಿಳು ದಲಿತ ಸಾಹಿತ್ಯದ ಉಗಮ ಬೇರೆ ಬೇರೆ ಕಾಲಘಟ್ಟದಲ್ಲಿ ಆಗಿದ್ದರೂ ಇವುಗಳ ಮುಖ್ಯ ಉದ್ದೇಶ, ಆಶಯಗಳು ಒಂದೇ ಆಗಿವೆ.

ಅಧ್ಯಯನದ ಉದ್ದೇಶ

ದಲಿತ ಸಾಹಿತ್ಯವು ಭಾರತದಲ್ಲಿ ಆಯಾ ಕಾಲಘಟ್ಟದ ಸಾಮಾಜಿಕತೆ, ಧಾರ್ಮಿಕತೆ, ರಾಜಕೀಯತೆಗೆ ಅನುಗುಣವಾಗಿ ಹೇಗೆ ಬೆಳೆದು ನಿಂತಿದೆ, ಅದರಲ್ಲಿನ ಸೂಕ್ಷ್ಮ ಅಂಶಗಳು ಪ್ರಾದೇಶಿಕವಾಗಿ ಹೇಗೆ ಭಿನ್ನತೆಯನ್ನು ಹೊಂದಿವೆ ಎಂಬುದನ್ನು ಗುರುತಿಸುವ ಉದ್ದೇಶವನ್ನು ಪ್ರಸ್ತುತ ಮಹಾಪ್ರಬಂಧವು ಹೊಂದಿದೆ. ಕನ್ನಡ-ತಮಿಳು ದಲಿತ ಸಾಹಿತ್ಯವು ಒಂದೇ ಬಗೆಯ ಕಥಾವಸ್ತುವನ್ನು ಒಳಗೊಂಡಿದೆ. ಆದರು ಅದರ ಸ್ವರೂಪ ಮತ್ತು ನಿರೂಪಣೆಯಲ್ಲಿ ಇರುವ ಭಿನ್ನತೆ, ಸಾಮಿಪ್ಯ, ಅಂತರ್ ಸಂಬಂಧದ ನೆಲೆಗಳನ್ನು ಗುರುತಿಸಲಾಗಿದೆ. ದಲಿತ ಸಾಹಿತ್ಯದಲ್ಲಿ ಮಹಿಳೆಯ ಭಾಗವಹಿಸುವಿಕೆ ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಕನ್ನಡ ಮತ್ತು ತಮಿಳು ದಲಿತ ಸಾಹಿತ್ಯವನ್ನು ಕೇಂದ್ರ ಆಕರವಾಗಿಸಿಕೊಂಡು ಸಂಶೋಧನೆ ಮಾಡಲಾಗಿದೆ. ಹಾಗಾಗಿ ಪ್ರಸ್ತುತ ಬರವಣಿಗೆಯ ವ್ಯಾಪ್ತಿಯು ಕನ್ನಡ ಮತ್ತು ತಮಿಳು ದಲಿತ ಸಾಹಿತ್ಯದ ಪ್ರಕಾರಗಳಾದ ಕತೆ, ಕಾವ್ಯ, ಕಾದಂಬರಿ, ಆತ್ಮಕತೆ, ನಾಟಕಗಳನ್ನು ಒಳಗೊಂಡಿದೆ. ಇವುಗಳಲ್ಲಿ ಪ್ರಮುಖವಾದವುಗಳನ್ನು ಆಯ್ದುಕೊಳ್ಳಲಾಗಿದೆ.

ಅಧ್ಯಯನದ ವಿಧಾನ

ಒಂದು ಸಾಹಿತ್ಯವು ಮತ್ತೊಂದು ಸಾಹಿತ್ಯದ ಪ್ರೇರಣೆ, ಪ್ರಭಾವದಿಂದ ರೂಪಿತಗೊಂಡಿರುತ್ತದೆ. ಈ ರೀತಿಯಾಗಿ ಮೂಡಿಬಂದಿರುವ ಸಾಹಿತ್ಯವನ್ನು ಎರಡು ಭಾಷೆಗಳಲ್ಲಿರುವ ಭಿನ್ನತೆ, ಸಾದೃಶ್ಯ ಮತ್ತು ಅಂತರ್ ಸಂಬಂಧದ ನೆಲೆಗಳನ್ನು ತುಲನಾತ್ಮಕವಾಗಿ ನೋಡುವ ಕ್ರಮವೇ ತೌಲನಿಕ ಮಾದರಿ ಕ್ರಮವಾಗಿದೆ. ಪ್ರಸ್ತುತ 'ಕನ್ನಡ-ತಮಿಳು ದಲಿತ ಸಾಹಿತ್ಯ: ತೌಲನಿಕ ಅಧ್ಯಯನ'ವೆಂಬ ಸಂಶೋಧನ ಪ್ರಬಂಧವು ಕೂಡ ಮುಖ್ಯವಾಗಿ ಎರಡು ಭಾಷೆಯಲ್ಲಿ ರಚಿತಗೊಂಡಿರುವ ದಲಿತ ಸಾಹಿತ್ಯದ ಹಲವು ಪ್ರಕಾರಗಳನ್ನು ತೌಲನಿಕ ಅಧ್ಯಯನ ಮಾದರಿಯನ್ನು ಅನುಸರಿಸಿಕೊಂಡು ಅಧ್ಯಯನ ಮಾಡಲಾಗುವುದು. ಕಥೆ, ಕಾವ್ಯ, ಕಾದಂಬರಿ, ಆತ್ಮಕಥೆ, ನಾಟಕ ಇವುಗಳನ್ನು ವಿಶ್ಲೇಷಣಾ ಮಾದರಿ ಕ್ರಮದಿಂದ ನೋಡಲಾಗಿದೆ.

ಅಧ್ಯಯನದ ಸ್ವರೂಪ

ಕನ್ನಡ-ತಮಿಳು ದಲಿತ ಸಾಹಿತ್ಯ: ತೌಲನಿಕ ಅಧ್ಯಯನದಿಂದಾಗಿ ಕನ್ನಡ-ತಮಿಳಿನಲ್ಲಿ ದಲಿತ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆಯ ಅಂಶಗಳನ್ನು ತಿಳಿದುಕೊಳ್ಳಬಹುದಾಗಿದೆ. ಸಾಹಿತ್ಯದಲ್ಲಿ ಕಂಡುಬರುವ ದಲಿತರ ಸಮಗ್ರ ಸಂಘರ್ಷಮಯ ಜೀವನದ ವಾಸ್ತವಿಕ ಚಿತ್ರಣವನ್ನು ಗಮನಿಸಬಹುದಾಗಿದೆ. ಪ್ರಾದೇಶಿಕವಾಗಿ ಭಿನ್ನತೆ ಹೊಂದಿದ್ದರೂ ಎರಡೂ ಭಾಷೆಗಳಲ್ಲಿ ರಚಿತವಾಗಿರುವ 'ದಲಿತ' ಎನ್ನುವ ಪರಿಕಲ್ಪನೆ ಬಳಕೆಯಾದ ಬಗೆಯನ್ನು ವಿಶ್ಲೇಷಿಸಲಾಗಿದೆ. ಅದು ನಿರೂಪಿತಗೊಂಡಿರುವ ಬಗೆ, ಎದುರಾಗಿರುವ ಸವಾಲು ಮತ್ತು ಸಾಧ್ಯತೆಗಳನ್ನು ಕಂಡುಕೊಳ್ಳಲಾಗಿದೆ. ದಲಿತ ಸಾಹಿತ್ಯವು ದ್ರಾವಿಡ ಪರಂಪರೆಯಲ್ಲಿ ಅಭಿವ್ಯಕ್ತಿಗೊಂಡಿದ್ದು, ಅದರ ವ್ಯಾಪ್ತಿ, ಸ್ವರೂಪ ಮತ್ತು ವಿಭಿನ್ನ ನೆಲೆಗಳ ಕುರಿತು ದಕ್ಷಿಣ ಭಾರತದಲ್ಲಿ ಕಂಡುಬರುವ ಬಗೆಯನ್ನು ಇಲ್ಲಿ ಗಮನದಲ್ಲಿರಿಸಿಕೊಳ್ಳಲಾಗಿದೆ.

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

"ತಮಿಳು ಮತ್ತು ಕನ್ನಡ ದಲಿತ ಸಾಹಿತ್ಯ ತೌಲನಿಕ ಅಧ್ಯಯನ"ವೆಂಬ ಸಂಶೋಧನ ಮಹಾಪ್ರಬಂಧದ ಅಧ್ಯಯನದ ಪೂರ್ವದಲ್ಲಿ ಕನ್ನಡ ಮತ್ತು ತಮಿಳು ಸಾಹಿತ್ಯದಲ್ಲಿ ಇದುವರೆಗೆ ನಡೆದಿರುವ ಅಧ್ಯಯನವನ್ನು ಮಾಡುವುದರ ಮೂಲಕ ಪ್ರಸ್ತುತ ಅಧ್ಯಯನದ ಅನನ್ಯತೆಯನ್ನು ಕಂಡುಕೊಳ್ಳಲು ಯತ್ನಿಸಲಾಗಿದೆ.

ಪಿಎಚ್.ಡಿ ಮಹಾಪ್ರಬಂಧಗಳು

'ಕನ್ನಡ ಮತ್ತು ತಮಿಳು ಭಾಷೆಯಲ್ಲಿ ಆಧುನಿಕ ದಲಿತ ಕಾವ್ಯ-ಒಂದು ತೌಲನಿಕ ಅಧ್ಯಯನ' ಎಂಬುದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ೨೦೧೦ರಲ್ಲಿ ಸಲ್ಲಿಕೆಯಾದ ಸಂಶೋಧನ ಪ್ರಬಂಧ. ತಮಿಳು-ಕನ್ನಡ ಭಾಷೆಯಲ್ಲಿ ರೂಪಿತಗೊಂಡಿರುವ ಅದರಲ್ಲೂ ಮುಖ್ಯವಾಗಿ ಆಧುನಿಕ ದಲಿತ ಕಾವ್ಯವನ್ನು ಕೇಂದ್ರವಾಗಿರಿಸಿಕೊಂಡು ಇದರಲ್ಲಿ ಅಧ್ಯಯನ ಮಾಡಲಾಗಿದೆ. ಕನ್ನಡ ಮತ್ತು ತಮಿಳು ದ್ರಾವಿಡ ಭಾಷೆಗಳಾದರೂ ಕನ್ನಡ ದಲಿತ ಸಾಹಿತ್ಯ ಮೂಡಿಬಂದು ಸುಮಾರು ೩೦ ವರ್ಷಗಳ ನಂತರ ತಮಿಳಿನಲ್ಲಿ ದಲಿತ ಸಾಹಿತ್ಯದ ವಿಚಾರಗಳು ಚರ್ಚಿತವಾಗುತ್ತಿವೆ. ಇದಕ್ಕೆ ತನ್ನದೇ ಆದ ಸಾಮಾಜಿಕ ಸ್ಥಿತಿಗತಿಯ ಒತ್ತಡ, ಸಾಮಾಜಿಕ ಆಯಾಮಗಳು ಕಾರಣವಾಗಿವೆ. ಕನ್ನಡದಲ್ಲಿ ೭೦ರ ದಶಕದಲ್ಲಿದ್ದ ಚಳುವಳಿಗಳ ಸ್ವರೂಪ ತಮಿಳುನಾಡಿನಲ್ಲಿ ಕಂಡುಬರುವುದಿಲ್ಲ, ಹಾಗಾಗಿ ೯೦ರ ದಶಕದಲ್ಲಿ ತಮಿಳು ದಲಿತ ಸಾಹಿತ್ಯವು ತನ್ನ ವಿಸ್ತಾರತೆಯನ್ನು ಹೆಚ್ಚಿಸಿಕೊಂಡಿತು. ಆ ಕಾಲದಲ್ಲಿ ತಮಿಳು ದಲಿತ ಸಾಹಿತ್ಯದ ಬರವಣಿಗೆಯು ದಲಿತ ಕೇರಿಯ ಕಡೆಗೆ ಮುಖಮಾಡಿತು. ಕನ್ನಡ ಮತ್ತು ತಮಿಳು ದಲಿತ ಸಾಹಿತ್ಯ ಕುರಿತು ಹೇಳಬಹುದಾದ ಅಂಶವೆಂದರೆ ಕರ್ನಾಟಕದಲ್ಲಿ ದಲಿತ ಸಾಹಿತ್ಯವು ಆರಂಭದಿಂದಲೂ ಹೋರಾಟದೊಂದಿಗೆ ಬೆಳೆದು ಬಂದಿದೆ. ಹೋರಾಟದ ಸಾಮಾಜಿಕ ಅಂಶಗಳು ಸಾಹಿತ್ಯಕ್ಕೆ ಒತ್ತಾಸೆಯಾಗಿ ನಿಂತಿವೆ. ಆದರೆ ತಮಿಳುನಾಡಿನಲ್ಲಿ ಈ

ರೀತಿಯ ಪರಿಸ್ಥಿತಿ ಕಂಡುಬರುವುದಿಲ್ಲ. ಅಲ್ಲಿನ ಸಾಮಾಜಿಕತೆ, ಧಾರ್ಮಿಕತೆ, ಆರ್ಥಿಕತೆಯ ನೆಲೆಗಳು ಭಿನ್ನವಾಗಿವೆ. ಹಾಗಾಗಿ ತಮಿಳುನಾಡಿನ ಸಂಘರ್ಷಮಯ ಇತಿಹಾಸವು ಒಂದು ಪ್ರಮುಖ ಜಾತಿ ಕೇಂದ್ರವಾಗಿ ಇರುವುದನ್ನು ಕಾಣಬಹುದಾಗಿದೆ.

ಈ ಸಂಶೋಧನ ಮಹಾಪ್ರಬಂಧವು ಆಧುನಿಕ ದಲಿತ ಕಾವ್ಯವೆಂದು ಹೇಳಿದರೂ ತಮಿಳು ಮತ್ತು ಕನ್ನಡ ದಲಿತ ಸಾಹಿತ್ಯದ ಉಗಮ, ವಿಕಾಸ, ಅದರ ಬೆಳವಣಿಗೆಯ ಸ್ವರೂಪವನ್ನು ಆರಂಭದಲ್ಲಿ ವಿಶ್ಲೇಷಣೆ ಮಾಡಿದೆ. ಅದರೊಂದಿಗೆ ದಲಿತ ಪದದ ಅರ್ಥ ಮತ್ತು ಅದರ ಸಾಂಸ್ಕೃತಿಕ, ಸಾಮಾಜಿಕ ಚಹರೆಗಳನ್ನು ಅದರೊಂದಿಗಿರುವ ಅಂತರ್ ಸಂಬಂಧಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ.

ದಲಿತ ಸಾಹಿತ್ಯವು ಭಾರತೀಯ ಇತರೆ ಭಾಷೆಗಳಲ್ಲಿ ರೂಪಿತಗೊಂಡಿರುವ ಬಗೆಯನ್ನು ಸಂಶೋಧಕರು 'ಭಾರತೀಯ ಭಾಷೆಗಳಲ್ಲಿ ದಲಿತ ಸಾಹಿತ್ಯ' ಎನ್ನುವ ಅಧ್ಯಯನದಲ್ಲಿ ಚರ್ಚೆಮಾಡಿದ್ದಾರೆ. ದಲಿತ ಸಾಹಿತ್ಯ ಆರಂಭವಾಗಿದ್ದು ಮಹಾರಾಷ್ಟ್ರದಿಂದ. ನಂತರ ಅದು ಕನ್ನಡ, ತೆಲುಗು, ಗುಜರಾತಿ, ತಮಿಳು, ಮಲಯಾಳಂ, ಬಂಗಾಳಿ ಮುಂತಾದ ಕಡೆ ತನ್ನ ಚಿಂತನೆಗಳನ್ನು ಹೇಗೆ ವಿಸ್ತರಿಸಿಕೊಂಡಿದೆ ಎನ್ನುವ ಅಂಶಗಳನ್ನು ವಿವರಿಸಿದ್ದಾರೆ. ದಲಿತ ಸಾಹಿತ್ಯವು ಭಾರತೀಯ ಇತರ ಭಾಷೆಗಳಲ್ಲಿ ಕಾಣಿಸಿಕೊಂಡ ಬಗ್ಗೆ ಮತ್ತು ಅದರ ಚಿಂತನ ಸ್ವರೂಪವು ಹೇಗೆ ಒಂದು ಪ್ರದೇಶದ ಪರಿಸರದಿಂದ ಮತ್ತೊಂದು ಪ್ರದೇಶದ ಪರಿಸರಕ್ಕೆ ಭಿನ್ನವಾಗಿದೆ ಎನ್ನುವ ಮೂಲ ಅಂಶಗಳನ್ನು ತಿಳಿಸುತ್ತದೆ. ಉದಾ: ಮಹಾರಾಷ್ಟ್ರದಲ್ಲಿ ಮಹಾರ್, ಕರ್ನಾಟಕದಲ್ಲಿ ಹೊಲೆಯ, ಅದೇ ಬಂಗಾಳಿಯಲ್ಲಿ ದಲಿತ ಎನ್ನುವ ಜಾತಿ ಕೇಂದ್ರಿತ ಚಹರೆಗಳು ವಿಭಿನ್ನವಾಗಿವೆ. ಹಾಗೆ ಶೋಷಣೆಯ ಸಂದರ್ಭಗಳು ಪರಿಸ್ಥಿತಿಗೆ ಅನುಗುಣವಾಗಿ ವಿಭಿನ್ನವಾಗಿರುವುದನ್ನು ವಿವರಿಸಲಾಗಿದೆ. ಇದಕ್ಕೆಲ್ಲ ಮೂಲವಾಗಿ ಕರ್ನಾಟಕದಲ್ಲಿ ಚಳವಳಿಯಿಂದ ರೂಪಿತಗೊಂಡ ದಲಿತ ಮತ್ತು ಬಂಡಾಯ ಸಾಹಿತ್ಯವನ್ನು ಅಧ್ಯಯನ ಮಾಡಲಾಗಿದೆ. ಹಾಗೆಯೇ ಇವರು ತಮಿಳಿನಲ್ಲಿ ಕಾಣಿಸಿಕೊಂಡ ದಲಿತ ಕಾವ್ಯದ ಮೊದಲ ಕಾಲಘಟ್ಟದ ಕುರುಹುಗಳನ್ನ ಗುರುತಿಸುತ್ತ ಅದರ ಮೇಲೆ ಪ್ರಭಾವಿಸಿದ ಅಂಶಗಳನ್ನು ಚರ್ಚಿಸಲಾಗಿದೆ. ವಚನ ಸಾಹಿತ್ಯ ಮತ್ತು ನಾಯನ್ಮಾರ್ ಹಾಗೂ ಆಳ್ವಾರ್ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವ ಮತೀಯ ಸಹಿಷ್ಣುತೆಯನ್ನು ಪರಿಶೀಲಿಸಲಾಗಿದೆ. ಆಧುನಿಕ ದಲಿತ ಸಾಹಿತ್ಯಕ್ಕೂ ಕನ್ನಡದ ೧೨ನೇ ಶತಮಾನದಲ್ಲಿ ಕಾಣಿಸಿಕೊಂಡ ವಚನ ಸಾಹಿತ್ಯಕ್ಕೂ ಇರುವ ಸಾಮ್ಯ ಮತ್ತು ಭಿನ್ನತೆಗಳನ್ನು ಕುರಿತು ಚರ್ಚೆಮಾಡಲಾಗಿದೆ. ವಚನ ಸಾಹಿತ್ಯದ ಆಶಯಗಳು, ಆಲೋಚನೆಗಳು ಕನ್ನಡದಲ್ಲಿದ್ದ ಸಾಹಿತ್ಯದ ಆಶಯಗಳಿಗೆ ಹೇಗೆ ಭಿನ್ನವಾಗಿವೆ. ವಚನಗಳಲ್ಲಿ ಕಂಡುಬರುವ ಅಸ್ಪೃಶ್ಯತೆ, ಶೋಷಣೆ ಮುಂತಾದ ಸಾಮಾಜಿಕ ಸಂಗತಿಗಳ ವಿರುದ್ಧ ಎತ್ತಿರುವ ಧ್ವನಿಗಳನ್ನು ದಲಿತೀಯ ದೃಷ್ಟಿಕೋನದಲ್ಲಿ ನೋಡಬಹುದಾಗಿದೆ. ಹಾಗೆ ತಮಿಳುನಾಡಿನಲ್ಲಿ ೭ನೇ ಮತ್ತು ೮ನೆಯ ಶತಮಾನದಲ್ಲಿ ಕಾಣಿಸಿಕೊಂಡ ನಾಯನ್ಮಾರ್ ಮತ್ತು ಆಳ್ವಾರ್‌ರ ಸಾಹಿತ್ಯವು ಕೂಡ ದಲಿತತತ್ವವನ್ನು ಹೇಗೆ ರೂಪಿಸಿದೆ ಮತ್ತು

ಕನ್ನಡ ಸಾಹಿತ್ಯ ಮತ್ತು ತಮಿಳ್ ನಾಯನ್ಮಾರ್ ಮತ್ತು ಆಳ್ವಾರ್ ಸಾಹಿತ್ಯವನ್ನು ತೌಲನಿಕವಾಗಿ ಚರ್ಚೆ ಮಾಡಿದ್ದಾರೆ. ತಮಿಳು ಪ್ರಗತಿಪರ ಸಾಹಿತ್ಯ ಪರಂಪರೆ ಎನ್ನುವ ಅಧ್ಯಾಯದಲ್ಲಿ ತಮಿಳು ಪ್ರಗತಿಪರ ಸಾಹಿತ್ಯದ ಪರಂಪರೆಯನ್ನು ಆಂಶಿಕವಾಗಿ ಗುರುತಿಸುತ್ತ ಆಧುನಿಕ ಸಾಹಿತ್ಯದಲ್ಲಿ ದಲಿತಪರ ಧ್ವನಿಗಳನ್ನು ಕುರಿತು ಚರ್ಚೆ ಮಾಡಲಾಗಿದೆ. ಆಧುನಿಕ ಕಾವ್ಯಗಳಲ್ಲಿ ಕಂಡುಬರುವ ಜಾತಿ, ಆಹಾರ ಮೊದಲಾದ ವಿಷಯಗಳನ್ನು ಸಂಶೋಧಕರು ಅರ್ಥಪೂರ್ಣವಾಗಿ ಚರ್ಚೆ ಮಾಡಿದ್ದಾರೆ. ಅದಲ್ಲದೆ ಪ್ರಮುಖ ತಮಿಳು ದಲಿತ ಸಾಹಿತಿಗಳನ್ನು ಕುರಿತು ಅವಶ್ಯಕವಾದ ಕಾವ್ಯದ ವಸ್ತು ಮತ್ತು ಆಶಯಗಳ ಬಗೆಗೂ ಚರ್ಚಿಸಿದ್ದಾರೆ.

ಪ್ರಮುಖವಾಗಿ ಬಾಮಾ.ಪ.ಶಿವಗಾಮಿ, ಕೆ.ಎ.ಗುಣಶೇಖರನ್, ದಲಿತ ಸುಬ್ಬಯ್ಯ ರವಿಕುಮಾರ್, ರಾಜಾಗೌತಮನ್, ಆದವನ್‌ದೀಕ್ಷಣ್ಯ, ಮ.ಮದಿವಣ್ಣನ್, ಅಭಿಮಾನಿ ಇವರುಗಳ ಸಾಹಿತ್ಯ ಕೃಷಿಯನ್ನು ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದ್ದಾರೆ. ಸಂಶೋಧಕರು ಎರಡು ಪ್ರಾದೇಶಿಕ ಭಾಷೆಯಲ್ಲಿನ ಆಧುನಿಕತೆಯನ್ನು ಕುರಿತು ಚರ್ಚೆ ಮಾಡಿದ್ದಾರೆ. ವಸ್ತು, ವಿಷಯ, ಭಾವ, ಭಾಷೆ, ಆಶಯ, ಧೋರಣೆ, ದಲಿತರ ಬಗೆಗಿನ ಧ್ವನಿಗಳು ಮೊದಲಾದ ಅಂಶಗಳನ್ನು ಕುರಿತು ತೌಲನಿಕವಾಗಿ ನೋಡಿದ್ದಾರೆ. ಒಟ್ಟಾರೆ ದಲಿತ ಸಾಹಿತ್ಯವು ನಾನಾ ಭಾಷೆಗಳಲ್ಲಿ ಮೂಡಿ ಬಂದ ಬಗೆಯನ್ನು ಕಂಡುಕೊಳ್ಳಲಾಗಿದೆ. ಹಾಗೆ ಮೂಡಿ ಬರುವ ಸಾಮಾಜಿಕ ಕಾಲ ಘಟ್ಟವು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಪ್ರೇರಕವಾಗಿ ಅಥವಾ ಪರಸ್ಪರ ಪೋಷಕವಾಗಿ ಬೆಂಬಲ ಪಡೆದು ಬೆಳೆದು ಬಂದಿದೆ ಎಂಬುದನ್ನು ಪಿ.ಮಣಿಯವರು ತಮ್ಮ ಸಂಶೋಧನೆಯಲ್ಲಿ ಗುರುತಿಸಿದ್ದಾರೆ.

ಈ ಸಂಶೋಧನೆಯ ಮುಖ್ಯ ಉದ್ದೇಶ ಕನ್ನಡ ಮತ್ತು ತಮಿಳು ದಲಿತ ಸಾಹಿತ್ಯ ಕುರಿತಂತೆ ಕಾವ್ಯಗಳ ಮೂಲಕ ತೌಲನಿಕವಾಗಿ ನೋಡುವುದು. ಮತ್ತೊಂದು ಎರಡು ಭಾಷೆಯ ಸಾಹಿತ್ಯದಲ್ಲಿ ಆರಂಭದಿಂದ ದಲಿತ ಸಾಹಿತ್ಯದವರೆಗೆ ಉಂಟಾಗಿರುವ ಸಾಮಾಜಿಕ ಚಲನಶೀಲತೆಯನ್ನು ಗುರುತಿಸುವುದು. ಈ ಎರಡು ಮುಖ್ಯ ಉದ್ದೇಶಗಳು ಪ್ರಸ್ತುತ ಸಂಶೋಧನೆಯ ಲಕ್ಷದಲ್ಲಿದೆ. ಇದು ಕಾವ್ಯ ಕೇಂದ್ರಿತವಾಗಿರುವ ಸಂಶೋಧನೆಯಾಗಿದೆ.

ತಮಿಳಿನಲ್ಲಿ ಕನ್ನಡದ ವೀರಶೈವ ಕೃತಿಗಳು

೧೯೮೩ರಲ್ಲಿ ಪಾ.ಶ. ಶ್ರೀನಿವಾಸರವರ ಮಾರ್ಗದರ್ಶನದಲ್ಲಿ ಮದುರೈ ಕಾಮರಾಜ ವಿಶ್ವವಿದ್ಯಾಲಯಕ್ಕೆ ಪ್ರ.ವಿ. ಕುಲಕರ್ಣಿಯವರು ಸಾದರಪಡಿಸಿದ ಮಹಾಪ್ರಬಂಧ **"ತಮಿಳಿನಲ್ಲಿ ಕನ್ನಡದ ವೀರಶೈವ ಕೃತಿಗಳು"** ಈ ಮಹಾಪ್ರಬಂಧವನ್ನು ಅಧ್ಯಾಯಕ್ಕೆ ಪೂರಕವಾಗಲು ಸಮೀಕ್ಷೆ ಮಾಡಲಾಗಿದೆ. ಈ ಮಹಾಪ್ರಬಂಧವು ಒಟ್ಟು ೬ ಅಧ್ಯಾಯಗಳನ್ನು ಒಳಗೊಂಡಿದೆ.

ಕರ್ನಾಟಕದಲ್ಲಿ ವೀರಶೈವ ಧರ್ಮದ ಹುಟ್ಟು, ಹಿನ್ನೆಲೆ ಮತ್ತು ಬೆಳವಣಿಗೆಗಳು, ವೀರಶೈವ ಧರ್ಮದ ಪ್ರಭೇಧಗಳು, ವೀರಶೈವ ಸಾಹಿತ್ಯಗಳ ಕುರಿತ ಚರ್ಚೆ ಮಾಡಲಾಗಿದೆ. ಶೈವ ಧರ್ಮದ ಹಿನ್ನೆಲೆ, ತಮಿಳು ಕೃತಿಗಳಲ್ಲಿ ಶಿವನ ವಿಚಾರಗಳು, ಶೈವ ಕೃತಿಗಳಲ್ಲಿ ವೀರಶೈವ

ಧರ್ಮದ ಪ್ರಭಾವ, ವೀರಶೈವ ಪದದ ಉಗಮ ಮತ್ತು ಬೆಳವಣಿಗೆ ಕುರಿತ ಚರ್ಚೆ ಮಾಡಲಾಗಿದೆ. ತಮಿಳು 'ಬಸವ ಪುರಾಣ'ವು ಕನ್ನಡದ 'ಬಸವ ಪುರಾಣ'ವನ್ನೇ ಆಧರಿಸಿ ಅನುವಾದ ಮಾಡಿರುವ ವಿಚಾರ ಮಂಡಿಸುತ್ತಾ ಕಥಾಸಾರವನ್ನು ನೀಡಲಾಗಿದೆ. ಕರ್ತೃ ಪರಿಚಯದೊಂದಿಗೆ ತೆಲುಗಿಗಿಂತಲೂ ಕನ್ನಡದೊಡನೆ ಸಾಮಿಪ್ಯ ಇರುವುದನ್ನು ಗುರುತಿಸಲಾಗಿದೆ. ಕನ್ನಡ-ತಮಿಳು ಎರಡೂ ಭಾಷೆಯಲ್ಲಿನ ಬಸವ ಪುರಾಣಗಳು ಭಾಷಾಂತರ ಪಠ್ಯಗಳಾಗಿದ್ದರೂ ಎರಡರಲ್ಲಿರುವ ಸಾಮ್ಯತೆ-ಭಿನ್ನತೆಗಳ ಜೊತೆಗೆ ಕಥೆಗಳಲ್ಲಿನ ವ್ಯತ್ಯಾಸಗಳನ್ನು ತೌಲನಿಕವಾಗಿ ನೋಡಲಾಗಿದೆ. ಎರಡೂ ಭಾಷೆಯ ಪಠ್ಯಗಳಲ್ಲಿನ ಛಂದಸ್ಸು, ವರ್ಣನೆ, ಅನುವಾದ ಪದ್ಯಗಳ ಸಂಖ್ಯೆ ಮುಂತಾದ ಅಂಶಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ತಮಿಳಿನಲ್ಲಿ ಕನ್ನಡದ ವೀರಶೈವ ಕೃತಿಗಳು ಎಂಬ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ನೀಡಲಾಗಿದೆ. ಇಲ್ಲಿ ಸಂಶೋಧಕರು ಒಟ್ಟು ಒಂಬತ್ತು ಪ್ರಕಾರದಲ್ಲಿ ಅಂದರೆ ಕಥೆ, ಸಂಪ್ರದಾಯ, ವರ್ಣನೆ, ಛಂದಸ್ಸು, ಶೈಲಿ, ಪಾತ್ರ, ಪವಾಡ ಮತ್ತು ಅನುವಾದ ಎಂಬ ಅಂಶಗಳಲ್ಲಿ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ನೀಡಿದ್ದಾರೆ.

ಈ ಪ್ರಬಂಧದ ಅಧ್ಯಯನದಿಂದ ಒಂದು ಧಾರ್ಮಿಕ ಚೌಕಟ್ಟಿನಲ್ಲಿ ಮೂಡಿಬಂದ ಕೃತಿಯು ಮೂಲದಲ್ಲಿ ಅನುವಾದವಾಗಿ ಹೇಗೆ ಎರಡು ಭಾಷೆಗಳಲ್ಲಿ ಮೂಡಿಬಂದಿದೆ ಎಂಬ ಅಂಶವನ್ನು ತಿಳಿದುಕೊಳ್ಳಬಹುದಾಗಿದೆ. ಪರಿಸರ ಮತ್ತು ಸಮಾಜಕ್ಕೆ ತಕ್ಕಂತೆ ಕೃತಿಗಳಲ್ಲಿ ಆಗುವ ಬದಲಾವಣೆಗಳು ಹಾಗು ಬೀರುವ ಪ್ರಭಾವಗಳನ್ನು ಕುರಿತಂತೆ ಈ ಅಧ್ಯಯನದಿಂದ ತಿಳಿಯಬಹುದು.

"ಮಾಸ್ತಿ ಮತ್ತು ಪುದುಮೈಪಿತ್ತನ್ ಸಣ್ಣ ಕಥೆಗಳ ತೌಲನಿಕ ಅಧ್ಯಯನ"

ದ್ರಾವಿಡ ವಿಶ್ವವಿದ್ಯಾಲಯಕ್ಕೆ ಕೆ. ಮಳರ್‌ವಿಳಿಯವರು ೨೦೦೪ರಲ್ಲಿ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ **"ಮಾಸ್ತಿ ಮತ್ತು ಪುದುಮೈಪಿತ್ತನ್ ಸಣ್ಣ ಕಥೆಗಳ ತೌಲನಿಕ ಅಧ್ಯಯನ"** ಈ ಮಹಾಪ್ರಬಂಧವನ್ನು ಅಧ್ಯಯನಕ್ಕೆ ಪೂರಕವಾಗಿ ಸಮೀಕ್ಷೆ ಮಾಡಲಾಗಿದೆ.

ಕನ್ನಡ ಸಣ್ಣ ಕಥೆ ಉಗಮ ಮತ್ತು ಬೆಳವಣಿಗೆಯನ್ನು ಕುರಿತು ಚರ್ಚೆ ಮಾಡಲಾಗಿದೆ. ಕನ್ನಡದಲ್ಲಿ ಈಗಾಗಲೇ ಸಣ್ಣ ಕಥೆಗಳನ್ನು ಕುರಿತು ಸಾಕಷ್ಟು ಅಧ್ಯಯನಗಳು ನಡೆದಿರುವುದರಿಂದ ಪ್ರಸ್ತುತ ಸಂದರ್ಭದಲ್ಲಿ ಈ ಅಧ್ಯಯನದ ಅವಶ್ಯಕತೆ ಇಲ್ಲವೆಂದು ತಿಳಿಯಬಹುದು. ತಮಿಳು ಸಣ್ಣ ಕಥೆ ನಡೆದು ಬಂದ ದಾರಿ ಕುರಿತು ಅಧ್ಯಯನ ಮಾಡಲಾಗಿದೆ. ಕನ್ನಡದ ಸಂದರ್ಭಕ್ಕೆ ತಮಿಳು ಸಣ್ಣ ಕಥೆಯನ್ನು ಕುರಿತು ಹೆಚ್ಚು ಮಾಹಿತಿ ಇಲ್ಲದಿರುವುದರಿಂದ ಈ ಅಧ್ಯಾಯ ತಮಿಳು ಸಣ್ಣಕಥೆಯ ಉಗಮ, ಅದರ ಬೆಳವಣಿಗೆಯನ್ನು ಕುರಿತು ವಿವರಿಸುತ್ತದೆ. ಪುದುಮೈಪಿತ್ತನ್ ಅವರ ಕಥೆಗಳ ಹಿಂದಿನ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳನ್ನು ಅರ್ಥೈಸಿಕೊಳ್ಳಲು ಸಹಕರಿಸುತ್ತದೆ. ಮಾಸ್ತಿ ಮತ್ತು ಪುದುಮೈಪಿತ್ತನ್ ಕಥೆಗಳಲ್ಲಿ ಸಮಾನ ಅಂಶಗಳು ಮತ್ತು ವಿಭಿನ್ನ ನೆಲೆಗಳನ್ನು

ಕುರಿತ ವಿಭಾಗ ಕ್ರಮದಲ್ಲಿ ಸಂಶೋಧಕರು ತೌಲನಿಕವಾಗಿ ಚರ್ಚಿಸಿದ್ದಾರೆ. ಮಾಸ್ತಿ ಮತ್ತು ಪುದುಮೈಪಿತ್ತನ್ ಕಥೆಗಳಲ್ಲಿ ಬಳಸುವ ಭಾಷೆ, ತಂತ್ರ ಮತ್ತು ಶೈಲಿಯನ್ನು ಕುರಿತು ಚರ್ಚಿಸಲಾಗಿದೆ. ಇಲ್ಲಿ ಲೇಖಕರ ಕಥಾವಸ್ತು, ಭಾಷೆ, ಕಥೆಗಳಲ್ಲಿನ ತಂತ್ರಗಳನ್ನು ಕುರಿತು ಚರ್ಚಿಸಿದ್ದಾರೆ.

ಈ ಮಹಾಪ್ರಬಂಧದ ಅಧ್ಯಯನದಿಂದ ಎರಡು ಭಾಷೆಗಳಲ್ಲಿನ ಪ್ರಮುಖ ಲೇಖಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳು, ಜೀವನಕ್ರಮಗಳು, ಪರಿಸರದ ಸಂದರ್ಭಗಳು ಭಿನ್ನವಾಗಿದ್ದರೂ ಈ ಲೇಖಕರ ಕಥೆಗಳಲ್ಲಿನ ಕಥಾವಸ್ತುವಿನ ಸಾಮಾಜಿಕ ಕಳಕಳಿ ಏಕಾಭಿಪ್ರಾಯವಾಗಿರುವುದನ್ನು ತಿಳಿಯಬಹುದು.

"ಸ್ತ್ರೀವಾದಿ ಹಿನ್ನೆಲೆಯಿಂದ ಕನ್ನಡ ಮತ್ತು ತಮಿಳು ಮಹಿಳಾ ಸಾಹಿತ್ಯ ಅಧ್ಯಯನ"

ಈ ಸಂಶೋಧನಾ ಮಹಾಪ್ರಬಂಧವನ್ನು ರಂಗಸ್ವಾಮಿಯವರು ಡಾ. ಅಕ್ಕಮಹಾದೇವಿ ಅವರ ಮಾರ್ಗದರ್ಶನದಲ್ಲಿ ೨೦೦೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಕೆ ಮಾಡಿದ್ದಾರೆ. ಕನ್ನಡ ಮತ್ತು ತಮಿಳು ಭಾಷೆಯಲ್ಲಿ ರಚಿತಗೊಂಡಿರುವ ಮಹಿಳಾ ಸಾಹಿತ್ಯವನ್ನು ಕೇಂದ್ರವಾಗಿಸಿಕೊಂಡು ಈ ಸಂಶೋಧನೆ ಮಾಡಲಾಗಿದೆ. ಮಹಿಳಾ ಸಾಹಿತ್ಯವು ತನ್ನದೇ ಆದ ಕೊಡುಗೆಯನ್ನು ಸಾಹಿತ್ಯವಲಯಕ್ಕೆ ನೀಡಿದೆ. ಮಹಿಳಾ ಸಾಹಿತ್ಯವು ಮಹಿಳಾ ಶೋಷಣೆ, ಲಿಂಗ ತಾರತಮ್ಯ, ಅಸಮಾನತೆಯ ವಿರುದ್ಧ ತನ್ನದೇ ಆದ ಹೊಸ ಮಾದರಿಯನ್ನು ಬಳಸಿಕೊಂಡು ಸಾಮಾಜಿಕ ಸಂಗತಿಗಳ ವಿರುದ್ಧ ಧ್ವನಿ ಎತ್ತಿದೆ. ಹೊಸ ಕೌಶಲ್ಯಗಳನ್ನು ಪ್ರತಿಪಾದಿಸುವ ಈ ಮಹಿಳಾ ಸಾಹಿತ್ಯವು ಒಂದು ಸಂಘಟನಾತ್ಮಕ ನೆಲೆಯಲ್ಲಿ ಗುರುತಿಸಿಕೊಂಡಿದೆ. ಹಾಗಾಗಿ ಇದು ಸ್ತ್ರೀಯ ತತ್ವ, ಸ್ತ್ರೀವಾದಿತ್ವ, ಸ್ತ್ರೀಯಾತ್ಮಕತೆ ಎಂಬ ಮೂರು ಪ್ರಧಾನ ನೆಲೆಯಲ್ಲಿ ಬೆಳವಣಿಗೆ ಹೊಂದಿದೆ. ಸಾಹಿತ್ಯವು ಮಾನವನ ಬದುಕನ್ನು ಪ್ರತಿನಿಧಿಸುವ ಕನ್ನಡಿಯಾಗಿ, ಜೀವನದ ಪ್ರತಿಬಿಂಬವಾಗಿ ಸಮಾಜದಲ್ಲಿ ಘಟಿಸುವ ಸಂಗತಿಗಳನ್ನು ಓದುವ ವಲಯಕ್ಕೆ ತನ್ನದೇ ಆದ ಭಿನ್ನ ನೆಲೆಗಳಲ್ಲಿ ಹೊಸ ದೃಷ್ಟಿಕೋನಗಳಲ್ಲಿ ಬರವಣಿಗೆಯ ರೂಪದಲ್ಲಿ ನೀಡುತ್ತ ಬಂದಿದೆ. ಈ ರೀತಿಯಾಗಿರುವ ಸಾಹಿತ್ಯವು ಪುರುಷ ನೆಲೆಯಿಂದ ಬಿಡಿಸಿಕೊಂಡು ಮಹಿಳಾ ನೆಲೆಯಾಗಿ ರೂಪುಗೊಳ್ಳಲು ಅನೇಕ ಸಾಮಾಜಿಕ ಒತ್ತಡಗಳು ಕಾರಣವಾಗಿವೆ. ಅವುಗಳನ್ನು ಸಾಹಿತ್ಯದ ಪ್ರಕಾರಗಳಾದ ಕಥೆ, ಕಾವ್ಯ, ಕಾದಂಬರಿ, ನಾಟಕ ಪ್ರಕಾರಗಳಲ್ಲಿ ಮಹಿಳೆಯು ತನ್ನ ಅಸ್ತಿತ್ವವನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಿಸುವ ಗಟ್ಟಿತನದ ಸಮಾಜ ಮುಖೇನ ಮುಂದೆ ನಿಲ್ಲುವಂತೆ ಮಾಡಿದೆ. ಈ ರೀತಿಯಾದ ಮಹಿಳಾ ಸಾಹಿತ್ಯವು ಭಾರತೀಯ ಹಲವು ಭಾಷೆಗಳಲ್ಲಿ ಅಭಿವ್ಯಕ್ತಗೊಂಡಿದೆ. ಅದನ್ನು ಸಂಶೋಧಕರು ಗುರುತಿಸಿ ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಹೇಗೆ ಸ್ತ್ರೀವಾದಿ ಧೋರಣೆ ತಮ್ಮ ಮಹಿಳಾ ಸಾಹಿತ್ಯದಲ್ಲಿ ಕಂಡುಬಂದಿದೆ ಎನ್ನುವುದನ್ನು ಗುರುತಿಸುವ ಉದ್ದೇಶದಿಂದ ಸಂಶೋಧನೆ ಮಾಡಿದ್ದಾರೆ. ಈ ಸಂಶೋಧನೆಯು ಎರಡು ಭಾಷೆಗಳಲ್ಲಿ ಸ್ತ್ರೀವಾದಿ ಚಿಂತನೆಯ ಹೊಸ ಮಾದರಿಗಳು ಹೇಗೆ ಅಭಿವ್ಯಕ್ತಗೊಂಡಿದೆ, ಅವುಗಳ ಸ್ವರೂಪವನ್ನು ಗುರುತಿಸಿ ಅದನ್ನು ತೌಲನಿಕವಾಗಿ ನೋಡುವ ಮತ್ತೊಂದು ಮುಖ್ಯ ಉದ್ದೇಶದಿಂದ ಸಂಶೋಧನೆಯನ್ನು ಕೈಗೊಂಡಿದ್ದಾರೆ.

ಸಂಶೋಧಕರೇ ಹೇಳುವಂತೆ ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ಇತ್ತೀಚಿನ ದಶಕಗಳಲ್ಲಿ ಮಹಿಳಾ ಸಾಹಿತ್ಯ ಹಲವು ಪ್ರಕಾರಗಳಲ್ಲಿ ವಿಪುಲವಾಗಿ ರೂಪಗೊಂಡಿದೆ. ಈ ಮಹಿಳಾ ಸಾಹಿತ್ಯವನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಕಷ್ಟ ಸಾಧ್ಯ. ಹಾಗಾಗಿ ಮಹಿಳೆಯರೆಲ್ಲರೂ ಕಥೆ ಬರೆಯುವುದರ ಮೂಲಕ ಸಾಹಿತ್ಯ ಲೋಕವನ್ನು ಪ್ರವೇಶ ಮಾಡಿದ್ದಾರೆ. ಅವರು ಎತ್ತಿರುವ ಪ್ರಶ್ನೆಗಳಿಗೆ ಸಮಾಜವು ನೀಡುವ ಉತ್ತರ ಮಹಿಳೆಯರು ಪ್ರತಿಪಾದಿಸುವ ಹೊಸ ಮೌಲ್ಯಗಳ ಸಾಧಕ ಬಾಧಕಗಳ ಕುರಿತು ಕಥೆಗಳಲ್ಲಿ ಅಭಿವ್ಯಕ್ತಗೊಂಡಿರುವ ಭಿನ್ನ ಮಾದರಿಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಈ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಕನ್ನಡ ಸಣ್ಣ ಕಥೆ ಪ್ರಕಾರದಲ್ಲಿರುವ ಪ್ರಮುಖ ಮಹಿಳಾ ಕಥೆಗಾರ್ತಿಯರಾದ ವೀಣಾ ಶಾಂತೇಶ್ವರ, ಬಿ.ಟಿ.ಲಲಿತ ನಾಯಕ, ಸಾ.ರಾ.ಅಬೂಬಕರ್, ಬಾನು ಮುಷ್ತಾಕ್, ವೈದೇಹಿ, ಗಂಗಾ, ಪಂದೇಕ್ಲ, ಗೀತಾನಾಗಭೂಷಣ, ನೇಮಿಚಂದ್ರ, ಡಾ.ಸಂಧ್ಯರೆಡ್ಡಿ, ಡಾ.ಎಂ.ಎಸ್.ವೇದಾ, ರೇಖಾ ಮುಂತಾದವರು ಹಾಗೂ ತಮಿಳು ಕಥೆಗಾರ್ತಿಯರಾದ ರಾಜಮ್‌ಕೃಷ್ಣನ್, ಅಂಬೈಕೋಮಗಳ್, ಕುಮಾರಿ ರಾಜೇಶ್ವರಿ, ರಮಣನ್ ಜ್ಯೋತಿರ್ ಬಜಾಗಿರಿಜಾ, ಆರ್.ಚೂಡಾಮಣಿ, ಕಾವೇರಿ, ಶಿವಗಾಮಿ, ಪಿ.ತಿಲಕವತಿ ಮುಂತಾದವರು. ಇವರ ಆಯ್ದ ಕಥೆಗಳನ್ನು ಈ ಸಂಶೋಧನೆಯ ವ್ಯಾಪ್ತಿಯನ್ನಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಸ್ತ್ರೀವಾದಿ ಹಿನ್ನೆಲೆಯಿಂದ ಕನ್ನಡ ಮತ್ತು ತಮಿಳು ಮಹಿಳಾ ಸಾಹಿತ್ಯದ ಅಧ್ಯಯನವು ಮುಖ್ಯವಾಗಿ ೫ ಅಧ್ಯಾಯಗಳನ್ನಾಗಿಸಿಗೊಂಡಿದೆ. ಸ್ತ್ರೀವಾದಿ ಹಿನ್ನೆಲೆಯಿಂದ ಮಹಿಳಾ ಸಾಹಿತ್ಯವನ್ನು ಅಧ್ಯಯನ ಮಾಡಿರುವುದರಿಂದ ಮಹಿಳಾ ಸಾಹಿತ್ಯ ಕುರಿತಾಗಿರುವ ವೇದಗಳ ಅಧ್ಯಾಯದಲ್ಲಿ ಅದರ ಇತಿಹಾಸಕ್ಕೆ ಸಂಬಂಧಿಸಿದಂತೆ ಸ್ತ್ರೀವಾದದ ಚಾರಿತ್ರಿಕ ಬೆಳವಣಿಗೆಯನ್ನು ಕುರಿತು ವಿವರಿಸಿದ್ದಾರೆ. ಸ್ತ್ರೀವಾದ ಎಂದರೆ ಏನು? ಅದು ರೂಪುಗೊಂಡಿರುವ ಬಗೆ, ಸ್ತ್ರೀವಾದಿ ನೆಲೆಯು ಮುನ್ನೆಲೆಗೆ ಎಂಬ ಅಂದಿನ ಕಾಲದಲ್ಲಿದ್ದ ಸಾಮಾಜಿಕ ಸಂಗತಿಗಳನ್ನು ವಿವರಿಸಿದ್ದಾರೆ.

ಕನ್ನಡ ಮತ್ತು ತಮಿಳು ಸಣ್ಣ ಕಥೆಗಳಲ್ಲಿ ವ್ಯಕ್ತಗೊಂಡಿರುವ ಸಾಮಾಜಿಕ ಸಂಗತಿಗಳಾದ ಮಹಿಳೆಯ ಶೋಷಣೆ, ಶಿಕ್ಷಣ, ಉದ್ಯೋಗ, ಸಾಮಾಜಿಕ ತಾರತಮ್ಯ, ಕುಟುಂಬ, ನೋವು ಮೊದಲಾದ ಸಮಸ್ಯೆಗಳನ್ನು ಕುರಿತಾಗಿ ಕಥೆಗಳಲ್ಲಿರುವ ಮಾದರಿಗಳನ್ನು ಎರಡೂ ಭಾಷೆಯಲ್ಲಿ ಅಭಿವ್ಯಕ್ತಪಡಿಸಿರುವ ಕ್ರಮಗಳನ್ನು ತೌಲನಿಕವಾಗಿ ನೋಡುವ ಕಾರ್ಯ ಮಾಡಿದ್ದಾರೆ. ಸ್ಥಾಪಿತ ಮೌಲ್ಯಗಳ ಪ್ರಶ್ನೆಗಳಿಗೆ ಮಹಿಳಾ ಸಾಹಿತ್ಯವು ಸ್ತ್ರೀವಾದಿ ಧೋರಣೆಯಿಂದ ನೀಡುವ ಉತ್ತರಗಳನ್ನು ಚರ್ಚೆಮಾಡಿ ಅದನ್ನು ಎರಡು ಭಾಷೆಗಳಲ್ಲಿ ನಿರೂಪಿತವಾಗಿರುವ ಬಗೆಯನ್ನು ವಿವರಿಸಿದ್ದಾರೆ. ಪ್ರತಿರೋಧಕ ಮಾದರಿಯ ನೆಲೆಗಳು, ಹೊಸ ಆಯಾಮಗಳ ಒಳನೋಟಗಳು ಸಣ್ಣ ಕಥೆಗಳಲ್ಲಿ ಮೂಡಿ ಬಂದಿರುವ ಕ್ರಮಗಳು ಹಾಗು ಅದರ ನಿರೂಪಣೆಯ ಮಾದರಿಗಳನ್ನು ವಿವರಿಸಲಾಗಿದೆ. ಮುಖ್ಯವಾಗಿ ಎರಡೂ ಭಾಷೆಗಳಲ್ಲಿ ಮಹಿಳಾ ಚಿಂತನೆಗಳು ಯಾವ ಯಾವ ಮಾದರಿಯ ಕ್ರಮಗಳನ್ನು ಅನುಸರಿಸಿವೆ ಅವುಗಳಿಂದ ಸಮಾಜದಲ್ಲಿ ರೂಪುಗೊಳ್ಳುತ್ತಿರುವ ಹೊಸ ಮಾದರಿ

ಉದಯಕ್ಕೆ ಹೇಗೆ ಕಾರಣವಾಗಿವೆ, ಅವುಗಳ ಅನುಸಂಧಾನಗಳು ಯಾವ ಯಾವ ರೀತಿಯಲ್ಲಿ ರೂಪಿತಗೊಂಡಿವೆ. ಅವುಗಳ ಅಂತರ್ ಸಂಬಂಧಗಳು ಎರಡೂ ಭಾಷೆಯಲ್ಲಿ ಹೇಗೆ ಸಣ್ಣ ಕಥೆಗಳಲ್ಲಿ ಚಿತ್ರಿತವಾಗಿವೆ ಎಂಬುದನ್ನು ಸಂಶೋಧಕರು ಚರ್ಚೆ ಮಾಡಿದ್ದಾರೆ.

ತೌಲನಿಕತೆಯನ್ನು ಈ ಸಂಶೋಧನೆಯು ತನ್ನ ವೈಧಾನಿಕತೆಯನ್ನಾಗಿ ಮಾಡಿಕೊಂಡಿದೆ. ತೌಲನಿಕತೆಯೊಂದಿಗೆ ಶೋಷಣೆ ಮಾದರಿಯ ವೈಧಾನಿಕತೆಯನ್ನು ಬಳಸಿಕೊಂಡಿದೆ. ಹಾಗಾಗಿ ನನ್ನ ಅಧ್ಯಯನಕ್ಕೆ ಈ ಮಾದರಿ ಕ್ರಮವು ಮುಖ್ಯವಾಗಿರುವುದರಿಂದ ಸಮೀಕ್ಷೆಗೆ ಆಯ್ಕೆ ಮಾಡಿಕೊಂಡಿದ್ದೇನೆ. ಇಲ್ಲಿ ಎರಡೂ ಭಾಷೆಯಲ್ಲಿನ ಮಹಿಳೆಯನ್ನೇ ಕೇಂದ್ರವಾಗಿಸಿಕೊಂಡಿದ್ದೇನೆ. ಇದು ಎರಡು ಭಾಷೆಯಲ್ಲಿ ಮಹಿಳೆಯನ್ನು ಕೇಂದ್ರವಾಗಿಸಿಕೊಂಡಿರುವ ಕಾರಣ ಆ ಮಹಿಳೆಯರಲ್ಲಿ ದಲಿತರೂ ಬರುವುದರಿಂದ ಅವರ ಕಥೆಗಳಲ್ಲಿ ದಲಿತ ಮಹಿಳೆಯರನ್ನು ಕುರಿತು ಬಂದಿರುವ ಸಂಗತಿಗಳನ್ನು ತಿಳಿಯಬಹುದಾಗಿದೆ. ಅಲ್ಲದೆ ಈ ಸಮಾಜದಲ್ಲಿ ಲಿಂಗ ತಾರತಮ್ಯ, ಮೇಲು-ಕೀಳು ಮೊದಲಾದ ಶೋಷಣೆಗಳಿಗೆ ಒಳಗಾಗಿರುವ ದಲಿತರು ಹಾಗೂ ಮಹಿಳೆಯರು ಅನುಭವಿಸಿರುವ ಸಮಸ್ಯೆಗಳು, ನೋವುಗಳು, ತಲ್ಲಣ, ಆತಂಕ ಮೊದಲಾದವು ಒಂದೇ ರೀತಿಯಲ್ಲಿವೆ.

ಈ ಎಲ್ಲ ಕಾರಣಗಳು ಸಂಶೋಧನೆಗೆ ಪೂರಕವಾಗಿರುವ ಹಿನ್ನೆಲೆಯಲ್ಲಿ ಈ ಸಮೀಕ್ಷೆಯನ್ನು ಕೈಗೊಂಡಿದ್ದೇನೆ.

ಕೃತಿಗಳು

"ತಮಿಳುನಾಡಿನ ದಲಿತ ಸಾಹಿತ್ಯ"- ಸೋಮಣ್ಣ ಹೊಂಗಳ್ಳಿಯವರು

ಡಾ.ಸೋಮಣ್ಣ ಹೊಂಗಳ್ಳಿಯವರು ೧೯೯೬ನೇ ಸಾಲಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡಮಿ ಅನುದಾನದ ಮೂಲಕ ತಮಿಳುನಾಡಿಗೆ ಪ್ರವಾಸ ಕೈಗೊಂಡು ೨೦೦೯ರಲ್ಲಿ ಪ್ರಕಟಿಸಿರುವ ಕೃತಿ "ತಮಿಳುನಾಡಿನ ದಲಿತ ಸಾಹಿತ್ಯ". ಈ ಕೃತಿಯಲ್ಲಿ ೧೯೯೬ರ ಸಂದರ್ಭದ ತಮಿಳು ಸಾಹಿತ್ಯದ ಪರಿಸರದಲ್ಲಿ ಸಂಗ್ರಹಿಸಿದ ಮಾಹಿತಿಯಿದೆ. ಕೃತಿ ೨೦೦೯ರಲ್ಲಿ ಪ್ರಕಟಗೊಳ್ಳುವ ಸಂದರ್ಭಕ್ಕೆ "ತಮಿಳು ದಲಿತ ಸಾಹಿತ್ಯವು" ಮಹತ್ವದ ಸ್ಥಾನವನ್ನು ಗಳಿಸಿಕೊಂಡಿತ್ತು." "ತಮಿಳು ನಾಡಿನ ದಲಿತ ಸಾಹಿತ್ಯ" ಎಂಬ ಲೇಖನದಲ್ಲಿ ದಲಿತ ಸಾಹಿತ್ಯದ ಬಗ್ಗೆ ಮಾಡನಾಡಲು ಹೊರಟರೆ ಸಾಮಾನ್ಯವಾಗಿ ನಮಗೆ ದೊರೆಯುವುದು ಬಹುಶಃ ತಮಿಳುನಾಡಿನಲ್ಲಿ ಇನ್ನೂ ಭ್ರೂಣಾವಸ್ಥೆಯಲ್ಲಿದೆ ಎನ್ನುವ ತೀರ್ಮಾನವನ್ನು ಹಲವಾರು ತಮಿಳು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ." (ತಮಿಳು ನಾಡಿನ ದಲಿತ ಸಾಹಿತ್ಯ-ಸೋಮಣ್ಣ ಹೊಂಗಳ್ಳಿ ಪು.ಸಂ.೦೧) ಎಂದು ದಾಖಲಿಸಿದ್ದಾರೆ. ಆದರೆ ಅವರು ಮಾಹಿತಿಗಾಗಿ ಸಂದರ್ಶಿಸಿರುವ(ಕೃತಿಯಲ್ಲಿನ ಮಾಹಿತಿ ಪ್ರಕಾರ) ಸಾಹಿತಿಗಳಲ್ಲಿ ಭಾಮ, ಶಿವಗಾಮಿ, ರವಿಕುಮಾರ್, ರಾಜಗೌತಮ್, ಕಣ್ಣನ್ ಎಮ್. ಪೂಮಣಿ ಮೊದಲ ತಲೆಮಾರಿನವರು ಹಾಗೂ ಅನ್ಬಾದವನ್, ವಿಳಿ.ಪಾ. ಇದಯವೇಂದನ್ ಸೊ.ಧರ್ಮನ್,

ಮೊದಲಾದವರು ಆಗಲೆ ಬರವಣಿಗೆ ಮಾಡುತಿದ್ದರು. "ನಾನು ಪ್ರವಾಸ ಕೈಗೊಂಡ ತಮಿಳಿನ ಭಾಗದಲ್ಲಿ ತಮಿಳುನಾಡಿನಲ್ಲಿನ 'ದಲಿತರ ಸಾಹಿತ್ಯ' ಕುರಿತಂತೆಯೇ ಹೆಚ್ಚು ಕಾಳಜಿ ವಹಿಸಿದ್ದೇನೆ. ಜೊತೆ ಜೊತೆಗೆ ತಮಿಳಿನ ಕಾವ್ಯ-ಕಥೆ ಇತ್ಯಾದಿಗಳ ವಿವರಗಳನ್ನು ಹೋಲಿಕೆಗಾಗಿ ಜೊತೆ ಜೊತೆಗೆಯೇ ತಂದಿದ್ದೇನೆ." (ತಮಿಳುನಾಡಿನ ದಲಿತ ಸಾಹಿತ್ಯ, ಸೋಮಣ್ಣ ಹೊಂಗಳ್ಳಿ)ಲೇಖನ ಹೊರತುಪಡಿಸಿ ತಮಿಳುನಾಡಿನ ದಲಿತ ಸಾಹಿತ್ಯದ ಬಗ್ಗೆ ವಿವರಣೆಗಳಿಲ್ಲ. ಅಲ್ಲದೆ ತಮಿಳು ಪರಿಭಾಷೆಗಳನ್ನು ಸರಿಯಾಗಿ ಗ್ರಹಿಸದಿರುವುದು ಕಂಡುಬರುತ್ತದೆ.

೧೯೯೦ರ ದಶಕವನ್ನು ತಮಿಳು ದಲಿತ ಸಾಹಿತ್ಯದ ಆರಂಭದ ಘಟ್ಟವೆಂದು ಗುರುತಿಸುವ ಇವರು ತಮಿಳು ದಲಿತ ಸಾಹಿತ್ಯದ ಆರಂಭಕಾಲ ಘಟ್ಟದಲ್ಲಿ ದಲಿತ ಬರವಣಿಗೆಯನ್ನು ಪ್ರಕಟಿಸಲು ಪ್ರಕಾಶಕರು ಆಸಕ್ತಿ ಹೊಂದದಿರುವುದು, ಆರಂಭಕಾಲದ ದಲಿತೇತರ ಬರಹಗಾರರಲ್ಲಿ ದಲಿತ ಸಾಹಿತ್ಯದ ಬಗೆಗಿದ್ದ ತಿರಸ್ಕಾರ, ನಿರ್ಲಕ್ಷ್ಯವನ್ನು ಗುರುತಿಸಿದ್ದಾರೆ. ತೊಂಬತ್ತರ ದಶಕದ ದಲಿತ ಬರಹಗಾರರು ಸಿಪಿಐ, ಸಿಪಿಎಂ ಚಿಂತನೆಯುಳ್ಳವರೆಂಬ ಮಾಹಿತಿ ಸರಿಯಾದ ಗ್ರಹಿಕೆಯಾಗಿದೆ. ಹೀಗೆ ಹೊಂಗಳ್ಳಿ ಸೋಮಣ್ಣನವರ 'ತಮಿಳುನಾಡಿನ ದಲಿತ ಸಾಹಿತ್ಯ' ಕೃತಿಯು ಪರಿಚಯಾತ್ಮಕವಾದ ಕಾರಣಗಳಿಂದ ಮುಖ್ಯವಾಗುತ್ತದೆ. ರಂಗಸ್ವಾಮಿ ಅವರು 'ತಮಿಳು ಸಾಹಿತ್ಯ ಒಂದು ವಾರೆನೋಟ' ಎಂಬ ಕೃತಿಯ ಭಾಗ-೧ರಲ್ಲಿ ಸಂಗಂ ಸಾಹಿತ್ಯ ಮತ್ತು 'ಸಂಸ್ಕೃತಿ' ಎಂಬ ಎರಡನೆ ಭಾಗದಲ್ಲಿ ಆಧುನಿಕ ತಮಿಳು ಪ್ರಮುಖ ಬರಹಗಾರರನ್ನು ಕುರಿತು ಬರೆದಿದ್ದಾರೆ.

ಕನ್ನಡ-ತಮಿಳು (ಭಾಷಿಕ ಮತ್ತು ಸಾಹಿತ್ಯಕ ಸಂಬಂಧಗಳು) ಸಂಪಾದಕರು ಜಯಶ್ರೀ ದಂಡೆ

ಕೃತಿಯು ೨೦೧೧ರ ಜನವರಿಯಲ್ಲಿ ನಡೆದ ವಿಚಾರ ಸಂಕಿರಣದ ಲೇಖನಗಳ ಮಾಲೆಯಾಗಿದೆ. ಕನ್ನಡ-ತಮಿಳು ತೌಲನಿಕತೆಗೆ ಸಂಬಂಧಿಸಿದ ಒಟ್ಟು ೧೦ ಲೇಖನಗಳಿದ್ದು, ಈ ಕೃತಿಯಲ್ಲಿ ಭಾಷಿಕ, ಸಾಹಿತ್ಯಿಕ, ಧಾರ್ಮಿಕ ಮತ್ತು ಜಾನಪದ ಎಂಬ ನಾಲ್ಕು ವಿಭಾಗದಲ್ಲಿ ವಿವಿಧ ಪ್ರಕಾರದ ಲೇಖನಗಳಿವೆ. ದ್ರಾವಿಡ ಭಾಷೆಗಳಲ್ಲಿ ಕನ್ನಡ-ತಮಿಳಿನ ಸ್ಥಾನ, ತೊಲ್ಕಾಪಿಯನಾರ್ ಮತ್ತು ಮಾರ್ಗಕಾರನ ಸಂವೇದನೆಯ ಸ್ವರೂಪ, ಕನ್ನಡ ಮತ್ತು ತಮಿಳು ಸಾಹಿತ್ಯ ಸಂಬಂಧ, ಪ್ರಭಾವ, ಕನ್ನಡ ತಮಿಳು ಜನಪದ ರಂಗಭೂಮಿ, ಕನ್ನಡ-ತಮಿಳು ಜನಪದ ಕಲೆಗಳು, ಕನ್ನಡ ತಮಿಳು ಜನಪದ ಮತ್ತು ಕಥನ ಕಾವ್ಯಗಳು ಮುಂತಾದ ಲೇಖನಗಳು ಎರಡು ಭಾಷೆಗಳಲ್ಲಿನ ತೌಲನಿಕವಾದ ವಿಚಾರವನ್ನು ತಿಳಿಸುತ್ತವೆ. ಪ್ರತಿ ಲೇಖನಗಳು ವಿಸ್ತಾರವಾದ ಅಧ್ಯಯನಕ್ಕೆ ಪೀಠಿಕೆಯಾಗಿವೆ.

ಪಾ.ವೆಂ. ಶ್ರೀನಿವಾಸ್‌ರವರ 'ಸಾರೂಪ್ಯ' ಕೃತಿಯನ್ನು ಸಮೀಕ್ಷೆ ಮಾಡಲಾಗಿದೆ. ಈ ಕೃತಿಯಲ್ಲಿ ಕನ್ನಡ-ತಮಿಳು ಸಾಹಿತ್ಯದ ತೌಲನಿಕತೆಗೆ ಪೂರಕವಾದ ವಸ್ತುವಿವರಣೆಯಿದೆ. ತಿರುವಳ್ಳುವರ್ ಮತ್ತು ಸರ್ವಜ್ಞ, ಬಸವ ಮತ್ತು ತಿರುವಳ್ಳುವರ್, ಶೆಕ್ಕಿಳಾರ್ ಮತ್ತು ಹರಿಹರ,

ಕಂಬ-ಕುವೆಂಪು, ಸೀತಾ ಸ್ವಯಂವರ ಎರಡು ಮಾದರಿಗಳು ಮುಂತಾದ ಲೇಖನಗಳು ವಿಸ್ತಾರವಾದ ಸಂಶೋಧನೆಗೆ ಓದುಗರನ್ನು ಆಹ್ವಾನಿಸುತ್ತವೆ.

ಲೇಖನಗಳು

"ತಮಿಳಿಲ್ ದಲಿತ್ ಇಲಕ್ಕಿಯಮ್ ತೋನ್ರುಮಾ" ("ತಮಿಳಿನಲ್ಲಿ ದಲಿತ ಸಾಹಿತ್ಯವು ಉದಯ ವಾಗುವುದೇ?") -ತಮಿಳವನ್ (ಕಾರ್ಲೋಸ್)

ತಮಿಳುನಾಡಿನಲ್ಲಿ ೧೯೯೦ರ ದಶಕದಲ್ಲಿ ಸಾಮಾಜಿಕ ಚಹರೆಯಿಂದ ದೂರವಾಗಿದ್ದ ದಲಿತತ್ವವು ಸಾಹಿತ್ಯದ ಮೂಲಕ ಹೊರ ಜಗತ್ತಿಗೆ ಪರಿಚಿತವಾಯಿತು. ಈ ದಲಿತ ಸಾಹಿತ್ಯವು ತಮಿಳು ಸಾಹಿತ್ಯ ವಲಯಕ್ಕೆ ಹೊಸತೊಂದು ತಿರುವನ್ನು ತಂದುಕೊಟ್ಟಿತು. ದಲಿತ ಎನ್ನುವ ಜಾತಿಸೂಚಕವನ್ನು ಬಳಸಿಕೊಂಡು ಸಾಹಿತ್ಯವನ್ನು ನೋಡುವ ಕ್ರಮವು ಅಂದಿನ ಕಾಲದ ಸಾಹಿತಿಗಳು ಮತ್ತು ವಿಚಾರವಾದಿಗಳಲ್ಲಿದ್ದು, 'ದಲಿತ' ಪದದ ವಿಸ್ತಾರದ ಕುರಿತು ಚರ್ಚೆ ಮಾಡಿದರು. ಅದರಲ್ಲಿ 'ಜಾತಿ'ಗೆ ಸೀಮಿತವಾದ ಸಾಹಿತ್ಯವೆಂದು ತಪ್ಪಾಗಿ ಗ್ರಹಿಸಿದ್ದ ಬಹುಪಾಲು ಸಾಹಿತಿಗಳು ದಲಿತ ಸಾಹಿತ್ಯದ ಔಚಿತ್ಯವನ್ನು ಪ್ರಶ್ನಿಸಿದರು. ಈ ಸಮಯಕ್ಕೆ ತಮಿಳುನಾಡಿನಲ್ಲಿ ದಲಿತ ಸಾಹಿತ್ಯದ ಉಗಮಕ್ಕೆ ಕಾರಣವಾಗುವ ಅಂಶಗಳನ್ನು ಕುರಿತು ಲೇಖನ ರೂಪದಲ್ಲಿ ಪುಸ್ತಕವನ್ನು ಹೊರತರುವ ಪ್ರಯತ್ನಗಳು ನಡೆದವು. **ಕಾವ್ಯ ಪ್ರಕಾಶನವು "ದಲಿತತ್ವ" ಎಂಬ ಕೃತಿಯನ್ನು ಪ್ರಕಟಿಸಿತ್ತು.** ಈ ಕೃತಿಯಲ್ಲಿರುವ ಪ್ರಮುಖ ಲೇಖನವೇ **ತಮಿಳವನ್ (ಕಾರ್ಲೋಸ್) ಅವರ "ತಮಿಳಿನಲ್ಲಿ ದಲಿತ ಸಾಹಿತ್ಯವು ಉದಯವಾಗುವುದೇ?"** ಈ ಲೇಖನವು ಭಾರತದಲ್ಲಿ ದಲಿತ ಸಾಹಿತ್ಯವು ಹೇಗೆ ಕನ್ನಡ ಮರಾಠಿ ಪರಿಸರದಲ್ಲಿ ಚಳುವಳಿಯ ಮೂಲಕ ದಲಿತರ ದನಿಯಾಗುತ್ತಿರುವುದನ್ನು ಚರ್ಚಿಸಿದ್ದಾರೆ. ಜೊತೆಗೆ ದಲಿತ ಸಾಹಿತ್ಯ, ಅದರ ಬೆಳವಣಿಗೆಯನ್ನು ಕುರಿತು ಗಂಭೀರವಾದ ಚರ್ಚೆಯನ್ನು ಮಾಡಿದ್ದಾರೆ. ಹಾಗೆಯೇ ಇವರು 'ದಲಿತ' ಎಂಬ ಪರಿಭಾಷೆಯ ಬಳಕೆಗೆ ಚಾಲನೆ ನೀಡುವ ಪ್ರಯತ್ನವನ್ನು ಮಾಡಿದ ಮೊದಲಿಗರಾಗಿದ್ದಾರೆ. ತಮ್ಮ ಲೇಖನದಲ್ಲಿ ತಮಿಳಿನ ದ್ರಾವಿಡ ಪಕ್ಷಗಳೇ ನಿಜವಾದ ದಲಿತ ವಿರೋಧಿಗಳು ಎಂಬ ಗಂಭೀರ ಆರೋಪ ಮಾಡಿದ್ದಾರೆ.

ತಮಿಳು ದಲಿತ ಸಾಹಿತ್ಯ -ಅಕ್ಷರವೇ ಅಸ್ತ್ರವಾದ ಅಚ್ಚರಿ-ತಮಿಳ್ ಸೆಲ್ವಿ

ತಮಿಳು ದಲಿತ ಸಾಹಿತ್ಯವನ್ನು ಕುರಿತು ತಮಿಳ್ ಸೆಲ್ವಿಯವರು ೨೦೧೨ರ ಸೆಪ್ಟೆಂಬರ್ ತಿಂಗಳ 'ಮಯೂರ' ಮಾಸ ಪತ್ರಿಕೆಯಲ್ಲಿ ಪರಿಚಯಾತ್ಮಕ ಲೇಖನ ಬರೆದಿದ್ದಾರೆ. ತಮಿಳು ದಲಿತ ಸಾಹಿತ್ಯ ಅಕ್ಷರವೇ ಅಸ್ತ್ರವಾದ ಅಚ್ಚರಿ ಹಾಗು ತಮಿಳುನಾಡಿನ ದಲಿತ ಸಾಹಿತ್ಯ ಕುರಿತು ಸಮಗ್ರವಾಗಿ ಚರ್ಚಿಸುವ ಮೂಲಕ ದಲಿತ ಸಾಹಿತ್ಯದ ಆರಂಭ ಮತ್ತು ಅದರ ವಿಕಾಸವನ್ನು ತಮಿಳು ಸೆಲ್ವಿಯವರು ತಮ್ಮ ಲೇಖನದಲ್ಲಿ ಗುರುತಿಸಿದ್ದಾರೆ. ಅವರು ಭಾರತೀಯ ಭಾಷೆಗಳಲ್ಲಿ ದಲಿತ ಸಾಹಿತ್ಯ ವಿಸ್ತೃತವಾಗುವ ಸಾಮಾಜಿಕ ಸಂದರ್ಭಗಳನ್ನು ವಿವರಿಸುತ್ತ ಹೀಗೆ ಹೇಳುತ್ತಾರೆ. ಮರಾಠಿ ಭಾಷೆಯಲ್ಲಿ ಬಿ.ಆರ್. ಅಂಬೇಡ್ಕರ್ ಅವರ ಪ್ರೇರಣೆಯಿಂದ ದಲಿತ ಸಾಹಿತ್ಯ ಗಟ್ಟಿಯಾಗಿ ರಚನೆಗೊಂಡಿತು ಇದರ ನಂತರ ಇತರ ಭಾಷೆಗಳಲ್ಲಿ ದಲಿತರ ಧ್ವನಿ ಬರತೊಡಗಿತು.

ಪ್ರಸ್ತುತ ದಲಿತ ಸಾಹಿತ್ಯ ಎಂಬುದು ಭಾರತೀಯ ಸಾಹಿತ್ಯದ ಒಂದು ಪ್ರಮುಖ ಪ್ರಕಾರ. ಅಂದರೆ ದಲಿತ ಸಾಹಿತ್ಯವೂ ತನ್ನದೇ ಆದ ಮಹತ್ವದ ಸ್ಥಾನವನ್ನು ಭಾರತೀಯ ಸಾಹಿತ್ಯ ಪ್ರಕಾರದಲ್ಲಿ ಪಡೆದುಕೊಂಡಿದೆ. ಅದಕ್ಕೆ ಅಂತಹ ಶಕ್ತಿ ಇದೆ ಎನ್ನುವ ಲೇಖಕರು ಅಂತಹದ್ದೊಂದು ಮಹತ್ವದ ಸಂಗತಿಯನ್ನು ತಿಳಿಸುತ್ತಾರೆ.

ತಮಿಳ್ ಸೆಲ್ವಿಯವರು ದಲಿತ ಸಾಹಿತ್ಯಕ್ಕೆ ಒಂದು ನಿರ್ದಿಷ್ಟ ಮಾನದಂಡ ನೀಡುವ ಹಲವು ಮಾದರಿಗಳನ್ನು ಹೇಳುತ್ತಾರೆ. ಯಾರು ದಲಿತರು? ದಲಿತ ಸಾಹಿತ್ಯವು ಹೇಗೆ ದಲಿತರಿಂದಲೇ ರೂಪಿತವಾದಾಗ ಅದರ ಗಟ್ಟಿತನ ಎಂತಹದ್ದು? ಎನ್ನುವ ವಿಚಾರಗಳನ್ನು ವಿವರಿಸಿದ್ದಾರೆ. ದಲಿತ ಪದದ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕಿಂತ ಈಗ ಅದು ಹುಟ್ಟಿ ಬೆಳೆದಿರುವ ಹಿನ್ನೆಲೆಯಲ್ಲಿ ಅದನ್ನು ಅಸ್ಪೃಶ್ಯ ಜನಾಂಗಕ್ಕೆ ಸೀಮಿತಗೊಳಿಸುವುದು. ಈ ರೀತಿಯ ಚಿಂತನ ಕ್ರಮ ಮುಖ್ಯವಾಗಿ ದಲಿತರ ಒಡಲಿನಿಂದ ವ್ಯಕ್ತಗೊಂಡ ಕ್ರಮಕ್ಕೂ, ಹೊರಗಿನಿಂದ ಅದರ ಬಗ್ಗೆ ವಿವರಣೆ ನೀಡುವ ಕ್ರಮಕ್ಕೂ, ವ್ಯತ್ಯಾಸವಿದೆ. ಹೊರಗಿನಿಂದ ನೀಡುವ ಮಾದರಿ ಹೊರ ಭಾಗವನ್ನು ಸ್ಪರ್ಶ ಮಾಡಬಹುದು. ಆದರೆ ಅವರಿಗೆ ದಲಿತರ ಒಳಗಿನ ನೋವು, ನಲಿವು, ಸಾಂಸ್ಕೃತಿಕ ವಿದ್ಯಮಾನಗಳು ಸೂಕ್ಷ್ಮವಾಗಿ ಗೊತ್ತಾಗುವುದಿಲ್ಲ. ಹಾಗಾಗಿ ಇದನ್ನು ಅವರೇ ಬರೆದರೆ ಸೂಕ್ತವೆನ್ನುತ್ತಾರೆ. ಅದನ್ನೆ ಮುಂದುವರಿಸಿಕೊಂಡು ಯಾವ ವ್ಯಕ್ತಿ ದಲಿತ ಸಮಾಜದೊಳಗೆ ಹುಟ್ಟಿ ದಲಿತ ಪ್ರಜ್ಞೆಯಿಂದ ಬರೆಯುತ್ತಾನೋ ಅಂತವನ ಒಟ್ಟು ಮೊತ್ತವು ದಲಿತ ಸಾಹಿತ್ಯವಾಗುತ್ತದೆ. ಅವನು ದಲಿತನಾಗಿ ಬದುಕಿನ ಅಸಹಾಯಕತೆಗಳನ್ನು ಶೋಧನೆ ಮಾಡುವ ಮುಖ್ಯ ಉದ್ದೇಶ ಅವನದಾಗಿರುತ್ತದೆ. ಹಾಗಾಗಿ ಅವನಲ್ಲಿರುವ ಅನೇಕ ಸೂಕ್ಷ್ಮ ಗ್ರಹಿಕೆಗಳು, ಸಾಮಾಜಿಕ ಒತ್ತಡಗಳು ತನ್ನ ಸಮಾಜದಲ್ಲಿನ ಮಾನಸಿಕ ತೊಳಲಾಟವನ್ನು ಸಾಹಿತ್ಯದ ಮೂಲಕ ಹೊರ ಜಗತ್ತಿಗೆ ಪರಿಚಯಿಸುವ ಸಮಯದಲ್ಲಿ ಕೆಲವೊಂದು ತಪ್ಪುಗಳಾಗಬಹುದು. ಕಾರಣ ಅವನು ಬೆಳೆದ ಪರಿಸರ, ಅಂದರೆ ಒಂದು ಘಟನೆಯನ್ನು ವಿವರಿಸುವುದರಲ್ಲಿ ತಪ್ಪಾಗಬಹುದು. ಆದರೆ ಆ ಘಟನೆ ತಪ್ಪೆಂದು ಭಾವಿಸಬಾರದು.

ತಮಿಳ್ ಸೆಲ್ವಿಯವರ ಲೇಖನವನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ತಮಿಳು ದಲಿತ ಸಾಹಿತ್ಯದ ಸಮಗ್ರ ವಿಕಾಸವನ್ನು ಕುರಿತು ಚರ್ಚೆ ಮಾಡುತ್ತಾರೆ. ಅವರ ಈ ವಿಚಾರಗಳನ್ನು ಈ ರೀತಿಯಾಗಿ ವಿಂಗಡಿಸಬಹುದು.

* ಪ್ರಾಚೀನ ಕಾವ್ಯಗಳಲ್ಲಿನ ದಲಿತರು
* ಅಂಬೇಡ್ಕರ್ ಅವರ ಬದುಕು ಮತ್ತು ಬರವಣಿಗೆ
* ತಮಿಳಿನಾಡಿನ ಚಿಂತಕರ ಪ್ರಭಾವ
* ದಲಿತ ಪತ್ರಿಕೆಗಳು
* ತಮಿಳು ದಲಿತ ಸಾಹಿತ್ಯಕ್ಕೆ ಮಾರ್ಕ್ಸ್ ಪ್ರಭಾವ

'ಅಡಗದಿರು'- ತಮಿಳು ದಲಿತ ಹೋರಾಟಗಾರರಾದ ತೊಲ್ ತಿರುಮಾವಳವನ್

ಬೆಂಗಳೂರಿನ ಪಸುಮಲ್ಯೆಯವರು ೨೦೦೫ರಲ್ಲಿ ತಮಿಳು ದಲಿತ ಹೋರಾಟಗಾರರಾದ ತೊಲ್ ತಿರುಮಾವಳವನ್‌ರ 'ಅಡಗದಿರು' ಲೇಖನ ಸಂಗ್ರಹವನ್ನು ಕನ್ನಡಕ್ಕೆ ತಂದಿದ್ದಾರೆ. ಈ ಕೃತಿಯಲ್ಲಿ ತೊಲ್ ತಿರುಮಾವಳವನ್ 'ಇಲ್ಲಿ ಬರಹದಲ್ಲೂ ಜಾತಿ ಗಬ್ಬು ನಾರುತ್ತಿದೆ ಎಂದು ಸೂಕ್ಷ್ಮ ಒಳನೋಟಗಳಿಂದ ಮಾತನಾಡುತ್ತಾರೆ'. ಒಟ್ಟು ೩೪ ಲೇಖನಗಳ ಈ ಕೃತಿಯಲ್ಲಿ 'ತಮಿಳು ರಾಷ್ಟ್ರೀಯತೆ ದಲಿತರ ಏಳಿಗೆ, ದ್ರಾವಿಡ ಪಕ್ಷಗಳ ನಿಜಮುಖಗಳು, ಹೆಸರು ಬದಲಾವಣೆ ಭಾಷೆಯ ಉಳಿವಿಗಲ್ಲ ಚರಿತ್ರೆಯ ಉಳಿವಿಗೆ, ದೇಶವನ್ನು ಆಳುವುದು ಕಾನೂನೋ? ಜಾತಿತ್ವವೋ? ಮೊದಲಾದ ಮಹತ್ವದ ವಿಚಾರಗಳನ್ನು ಚರ್ಚಿಸಲಾಗಿದೆ. ಸಾಮಾನ್ಯ ಜನರ ಕಾಮದ ಬಗ್ಗೆ ಬರೆದು ಹಣಮಾಡಿಕೊಳ್ಳುವ ಬರಹಗಾರರು ಅವರ ಸಮಸ್ಯೆಗಳ ಕುರಿತು ಮಾತನಾಡದಿರುವುದರ ಬಗ್ಗೆ ತಕರಾರು ಎತ್ತುತ್ತಾರೆ. "ಶೀಲದ ಸಂಕೇತವಾಗಿ ಕಣ್ಣಾಗಿಯಲ್ಲ! ಆದರೂ ಕಣ್ಣಾಗಿ ಎಂಬ ಸಂಕೇತ ಮತ್ತೊಂದು ಕಾರಣದಿಂದ ಬೇಕಿದೆ. ಅಂದರೆ ಅವಳು ಶೀಲದಲ್ಲಿ ಪಾವಿತ್ರ್ಯಳು ಎಂಬುದಕ್ಕಲ್ಲ ಅವಳ ಗಂಡನನ್ನು ವಿಚಾರಣೆ ಇಲ್ಲದೆ ದಂಡನೆ ನೀಡಿದ ರಾಜನನ್ನು ಎದುರಿಸಿ ನಿಂತು ರಾಜನೇ ಕೊಲೆಗಾರ ಎಂದು ನಿರೂಪಿಸಿ ನೀತಿಯನ್ನು ರಕ್ಷಿಸಿದ ಸಮರಗುಣದ ಸಂಕೇತ ಎಂಬುದಕ್ಕಾಗಿ, ಕ್ರಾಂತಿ ಮಹಿಳೆ ಎಂಬುದಕ್ಕಾಗಿ ಅವಳು ಬೇಕೆ ಬೇಕು" (ಅಡಗದಿರು-ತೊಲ್ ತಿರುಮಾವಳವನ್, ಅನು-ಪಸುಮಲ್ಯೆ-ಪು. ೩೯) ಎಂದು ವಾದಿಸುತ್ತಾರೆ. ತಿರುಮಾವಳವನ್ ಚಿಂತನೆಗಳು ತಮಿಳು ದೇಶಿಯತೆಯ ಕೇಂದ್ರಿತವಾಗಿಯೇ ಪ್ರತಿಫಲನಗೊಂಡಿವೆ.

ಇಲ್ಲಿ ಈ ಅಂಶಗಳನ್ನು ಉಲ್ಲೇಖಿಸಿ ಚರ್ಚಿಸಲು ಪ್ರಮುಖ ಕಾರಣವೆಂದರೆ ತಮಿಳು ಮತ್ತು ಕನ್ನಡ ದಲಿತ ಸಾಹಿತ್ಯಗಳು ರೂಪುಗೊಳ್ಳಲು ಸಮಾನವಾದಂತಹ ಆಶಯಗಳು, ತತ್ವ ಸಿದ್ಧಾಂತಗಳಿವೆ ಎಂಬುದನ್ನು ತಾತ್ವಿಕವಾಗಿ ಗ್ರಹಿಸಲು. ಭೌಗೋಳಿಕ ಪರಿಸರಗಳು ಭಿನ್ನವಾಗಿದ್ದಾಗಲು ಭಾರತದ ಸಾಮಾಜಿಕ ವ್ಯವಸ್ಥೆಯು ಮಾನಸಿಕವಾಗಿ, ವೃತ್ತಿ, ಜಾತಿ ಧರ್ಮಗಳ ಅಡಿಯಲ್ಲಿ ಕಟ್ಟಿಹಾಕಿದೆ. ಹೀಗಾಗಿ ತಮಿಳಿನ ದಲಿತರ ನೋವು, ದುಃಖ, ಸುಖ, ಸಂತೋಷ, ಸಾಂಸ್ಕೃತಿಕ ಬಿಕ್ಕಟ್ಟುಗಳು ಭಿನ್ನವಲ್ಲ. ಕನ್ನಡ ಮತ್ತು ತಮಿಳಿನ ಭೌಗೋಳಿಕ ಪರಿಸರ, ಭಾಷಿಕ ಪರಿಸರವು ಪರಸ್ಪರ ಹೊಂದಿಕೊಂಡು ಅನಾದಿ ಕಾಲದಿಂದಲೂ ನಡೆದುಬಂದಿವೆ. ಪ್ರಮುಖವಾಗಿ ಸಾಹಿತ್ಯಿಕ ಚಟುವಟಿಕೆಗಳು, ಜನಪರ ಹೋರಾಟಗಳು, ಜನರ ಬಿಡುಗಡೆಗಾಗಿ ನಡೆದ ಚಳುವಳಿಗಳ ಪ್ರಭಾವಗಳನ್ನು ಹೊಂದಿವೆ. ದ್ರಾವಿಡ ಭಾಷಾವರ್ಗದ ಕನ್ನಡ ತಮಿಳು ಭಾಷೆಗಳು ಧರ್ಮ ವಿಚಾರಗಳು ಮತ್ತು ತತ್ವ ಸಿದ್ಧಾಂತಗಳನ್ನು ಸಾಹಿತ್ಯದಲ್ಲಿ ವಿಸ್ತರಿಸಿಕೊಂಡಿವೆ.

ಕನ್ನಡ ದಲಿತ ಸಾಹಿತ್ಯವು ತಮಿಳಿನ ದಲಿತ ಸಾಹಿತ್ಯದೊಂದಿಗೆ ಅನುಸಂಧಾನ ನಡೆಸಿದ್ದು, ತಮಿಳಿನ ಮೇಲೆ ಪ್ರಭಾವ ಬೀರಿದೆ. ಆದರೆ ತಮಿಳು ದಲಿತ ಸಾಹಿತ್ಯದ ಕುರಿತ ಗಂಭೀರವಾದ ಚರ್ಚೆಗಳು, ಹೆಚ್ಚು ತಿಳುವಳಿಕೆಗಳು ಕನ್ನಡ ಸಾಹಿತ್ಯವಲಯದಲ್ಲಿ ಕಂಡುಬಂದಿಲ್ಲ. ಕೆಲವು ಸಂಶೋಧನೆಗಳು ಬಿಡಿ-ಬಿಡಿ ಲೇಖನಗಳು, ಪರಿಚಯಾತ್ಮಕ ಟಿಪ್ಪಣಿಗಳು, ಅನುವಾದಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ದಕ್ಕಿವೆ.

ಅಧ್ಯಾಯ: ಎರಡು

ದಲಿತ ಸಾಹಿತ್ಯದ ಉಗಮ, ವಿಕಾಸ ಮತ್ತು ಬೆಳವಣಿಗೆಯ ಸ್ವರೂಪ

ಸಾಹಿತ್ಯವು ಎಲ್ಲಾ ಕಲೆಗಳಿಗಿಂತಲೂ ಶ್ರೇಷ್ಠವಾದ ಒಂದು ಸಂವಹನ ಕಲೆಯಾಗಿದೆ. ಸಾಹಿತ್ಯ ಎಂಬುದು ಸಮಾಜದ ಕೈಗನ್ನಡಿಯಾಗಿದ್ದು ಇಲ್ಲಿ ಲೇಖಕರು, ಕವಿಗಳು ಸಮುದಾಯಗಳ ಸಾಂಸ್ಕೃತಿಕ ವಿಚಾರಗಳನ್ನು, ಆ ಸಮುದಾಯದ ವ್ಯಕ್ತಿಗಳ ಜೀವನ ಮತ್ತು ಅವರ ಸಾಮಾಜಿಕ ಪರಿಸರವನ್ನು ದಾಖಲಿಸುತ್ತಾರೆ. ಸಂಘ ಜೀವಿಯಾದ ಮನುಷ್ಯರ ಸಾಮಾಜಿಕ ಬದುಕಿನ ವಿವರಗಳನ್ನು ಸಾಹಿತ್ಯ ದಾಖಲಿಸುತ್ತದೆ. ಅಂದರೆ ವ್ಯಕ್ತಿಗಳು ಸಮುದಾಯ ಅಥವಾ ಸಮಾಜದಲ್ಲಿ ಇರುವ ಬಗೆ, ಅವರ ಬದುಕು, ಬವಣೆಗಳು, ದುಃಖ-ದುಮ್ಮಾನಗಳು, ಸುಖ-ಸಂತೋಷಗಳು, ಮೇಲ್ವರ್ಗದ ದಬ್ಬಾಳಿಕೆ, ದೌರ್ಜನ್ಯ, ಬಲವಂತದಿಂದ ದುಡಿಸಿಕೊಳ್ಳುವ ಶೋಷಣೆ, ಭೂಮಿ ಮತ್ತು ಮನುಷ್ಯ ನಡುವಿನ ಸಂಬಂಧಗಳನ್ನು ಹಾಗು ಸಾಮಾಜಿಕ ಜೀವನಾನುಭವಗಳನ್ನು ಅಭಿವ್ಯಕ್ತಿಸುವ ಪ್ರಯತ್ನವನ್ನು ಸಾಹಿತ್ಯ ಮಾಡುತ್ತದೆ.

ಭಾರತೀಯ ಸಮಾಜದಲ್ಲಿ ಒಬ್ಬ ಮನುಷ್ಯನ ಹುಟ್ಟಿನಿಂದ ಸಾವಿನವರೆಗೆ ಹಲವಾರು ಸ್ಥಿತಿಗಳನ್ನು ತೀರ್ಮಾನಿಸುವ ಶಕ್ತಿ ಸಮುದಾಯಗಳಿಗಿದೆ. ಸಮೂಹ ರಚನೆಗಳಲ್ಲಿ ಜಾತಿಯು ಸಮಾಜದಲ್ಲಿ ಬೆಳೆದು ಮೇಲು ಕೀಳು ಎಂಬ ಭಾವನೆಯನ್ನು ನಿರ್ಮಿಸಿದೆ. ಅದರಲ್ಲಿ ದಲಿತರು ಪಂಚಮ ಸ್ಥಿತಿಯಲ್ಲಿ ಇರುವುದರಿಂದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ನಿರ್ಧರಿಸುವ ಸ್ಥಿತಿಯಲ್ಲಿ ಹಿಂದಿದ್ದಾರೆ. ಸಾಹಿತ್ಯದಲ್ಲಿ ದಲಿತರ ದಾಖಲೆಗಳು ಇದ್ದರೂ ಕೂಡ, ಅದು ಬೆರಳೆಣಿಕೆಯಷ್ಟು ಮಾತ್ರ ಕಂಡು ಬರುತ್ತದೆ. ಆದ್ದರಿಂದ ಇಂತಹ ಪರಿಸ್ಥಿತಿಯಲ್ಲಿ ದಲಿತ ಸಾಹಿತ್ಯದ ಬರಹಗಳು, ಅಧ್ಯಯನಗಳು, ಸಂಶೋಧನೆಗಳು ಅವಶ್ಯಕವಾಗಿವೆ.

ದಲಿತ ಸಾಹಿತ್ಯವೂ ಸಮುದಾಯ ಕೇಂದ್ರಿತವಾಗಿ ಮೂಡಿಬಂದಿರುವುದರಿಂದ ಅದರಲ್ಲಿ ದಲಿತ ಕೇರಿಗಳ ಸಮಗ್ರ ಚಿತ್ರಣವನ್ನು ದಾಖಲಿಸುವ ಪ್ರಯತ್ನ ಮಾಡಿದೆ. ದಲಿತ ಸಾಹಿತ್ಯವು ಸಮಾಜದೊಳಗಿನ ನೈಜ ಕಥಾವಸ್ತು ಮತ್ತು ಆಶಯ ಕೇಂದ್ರಿತ ನೆಲೆಯಲ್ಲಿ ರೂಪುಗೊಂಡಿರುವುದ ರಿಂದ ದಲಿತರ ಬದುಕು ಇತರರಿಗಿಂತ ಹೇಗೆ ಭಿನ್ನವಾಗಿದೆ? ಸಮಾಜದೊಂದಿಗಿರುವ ಅವರ

ಸಾಮಾಜಿಕ ಸಂಬಂಧಗಳು ಯಾವ ಬಗೆಯಲ್ಲಿವೆ? ಸಮಾಜ ಮತ್ತು ಧರ್ಮ ಯಾವ ಯಾವ ರೀತಿಯಲ್ಲಿ ದಲಿತರನ್ನು ನಡೆಸಿಕೊಂಡು ಬಂದಿವೆ? ಅದಕ್ಕೆ ದಲಿತರು ತಮ್ಮೊಳಗಿನ ಸೃಜನಶೀಲತೆಯ ಮೂಲಕ ಹೇಗೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದಾರೆ? ದಲಿತ ನೆಲೆಯಲ್ಲಿ ಕಂಡುಬರುವ ಈ ರೀತಿಯ ವಾಸ್ತವ ಸಂಗತಿಗಳು ಹಾಗೂ ಶೋಷಣೆಯ ಬದುಕನ್ನು ನಾವು ಅವರ ನೋವು-ನಲಿವುಗಳನ್ನು ಅಕ್ಷರ ರೂಪದಲ್ಲಿ ಕಾಣಬಹುದಾಗಿದೆ. ಪ್ರಸ್ತುತ ಈ ಅಧ್ಯಯನದಲ್ಲಿ ತಮಿಳು ದಲಿತ ಸಾಹಿತ್ಯದ ಉದಯ, ವಿಕಾಸ ಮತ್ತು ಬೆಳವಣಿಗೆಯ ಸ್ವರೂಪವನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಿದೆ.

ತಮಿಳು ಸಾಹಿತ್ಯ ತನ್ನ ಅಸ್ತಿತ್ವವನ್ನು ಸಂಗಂ ಸಾಹಿತ್ಯದೊಂದಿಗೆ ಗುರುತಿಸಿಕೊಂಡಿದೆ. ಈ ಸಾಹಿತ್ಯವು ಕ್ರಿ.ಪೂ. ಮೂರನೇ ಶತಮಾನದಿಂದ ಕ್ರಿ.ಶ. ಆರನೇ ಶತಮಾನದವರೆಗೆ ತನ್ನ ಉಗಮ ವಿಕಾಸವನ್ನು ಹೇಳುತ್ತದೆ. ತಮಿಳು ಸಾಹಿತ್ಯ ಕ್ರಿ.ಶ. ೨ನೇ ಶತಮಾನದಲ್ಲಿ ರಚಿತಗೊಂಡ ಶಿಲಪ್ಪಾದಿಗಾರಂ, ತೊಲ್ಕಾಪ್ಪಿಯಂ ಮುಂತಾದ ಕೃತಿಗಳ ನೆರವಿನಿಂದ ತನ್ನ ಪ್ರಾಚೀನತೆಯನ್ನು ತಿಳಿಸುತ್ತದೆ. ಈ ರೀತಿಯಾಗಿ ಬೆಳೆದು ಬಂದ ತಮಿಳು ಸಾಹಿತ್ಯವು ಆಧುನಿಕತೆಗೆ ತನ್ನನ್ನು ತಾನು ಬೇಗ ತೆರೆದುಕೊಂಡಿತು. ಕಾರಣ ಮದ್ರಾಸ್ ಪ್ರಾಂತ್ಯವು ಬ್ರಿಟೀಷ್ ಆಡಳಿತಕ್ಕೆ ನೇರವಾಗಿ ಒಳಪಟ್ಟಿದ್ದರಿಂದ, ಆಂಗ್ಲ ಭಾಷೆಯ ಪರಿಚಯದಿಂದಾಗಿ ತಮಿಳು ಸಾಹಿತ್ಯದಲ್ಲಿ ಹೊಸದಾದ ಗಾಳಿ ಬೀಸತೊಡಗಿತು. ಈ ಸಮಯದಲ್ಲಿ ರೂಪುಗೊಂಡ ಸಾಹಿತ್ಯವು ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿತು. ತಮಿಳು ಸಾಹಿತ್ಯಕ್ಕೆ ದಲಿತ ಲೋಕ ಪ್ರವೇಶ ಮಾಡಿದ್ದು ಮಾತ್ರ ಸುಮಾರು ೨೦ನೇ ಶತಮಾನದ ಕೊನೆಯ ದಶಕದಲ್ಲಿ. ಅದಕ್ಕೂ ಪೂರ್ವದಲ್ಲಿ ಅಂದರೆ ಪ್ರಾಚೀನ ಕಾವ್ಯಗಳಲ್ಲಿ ದಲಿತರನ್ನು ಕುರಿತ ವಿವರಣೆಗಳು ಅಲ್ಲಲ್ಲಿ ಕಾಣಸಿಗುತ್ತವೆ. ದಲಿತ ನಾಯಕರ ಉಲ್ಲೇಖಗಳನ್ನು ತಮಿಳು ಪ್ರಾಚೀನ ಕಾವ್ಯಗಳು ದಾಖಲಿಸುತ್ತವೆ. ಈ ರೀತಿಯಾದ ದಲಿತ ಸಂವೇದನೆಗಳು ಮುಂದೆ ತಮಿಳು ಸಾಹಿತ್ಯವನ್ನು ಪ್ರವೇಶ ಮಾಡಿದವು. ಆರಂಭದಲ್ಲಿ ಕಥೆ, ಕಾದಂಬರಿ, ನಾಟಕ, ಕಾವ್ಯ ಮುಂತಾದ ಪ್ರಕಾರಗಳಲ್ಲಿ ನಾವು ದಲಿತ ಸಂವೇದನೆಯ ಹಲವು ಆಯಾಮಗಳನ್ನು ಗುರುತಿಸಬಹುದಾಗಿದೆ. ಈ ಬಗೆಯಲ್ಲಿ ದಲಿತ ಸಂವೇದನೆಯು ವ್ಯಕ್ತಗೊಂಡಿದ್ದರೂ ದಲಿತ ಸಾಹಿತ್ಯವೆಂಬ ಹೊಸ ಪ್ರಕಾರವೇ ತಮಿಳಿನಲ್ಲಿ ಆರಂಭವಾಗಿದ್ದು ಸುಮಾರು ೧೯೯೦ರ ದಶಕದಲ್ಲಿ. ೨೦ನೆಯ ಶತಮಾನದ ಕೊನೆಯ ಮೂರ್‍ನಾಲ್ಕು ದಶಕಗಳ ಅವಧಿಯಲ್ಲಿ ಕನ್ನಡ ಮತ್ತು ಮರಾಠಿ ಸಾಹಿತ್ಯದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿದ್ದ ದಲಿತ ಸಾಹಿತ್ಯ ತಮಿಳು ಸಾಹಿತ್ಯವನ್ನು ಪ್ರವೇಶ ಮಾಡಲು ಸುಮಾರು ನಾಲ್ಕು ದಶಕಗಳೇ ಬೇಕಾದವು.

ತಮಿಳುನಾಡಿನ ಸಾಮಾಜಿಕ ಚಹರೆಯಿಂದ ದಲಿತತ್ವವು ಸಾಹಿತ್ಯದ ಮೂಲಕ ಹೊರ ಜಗತ್ತಿಗೆ ಅನಾವರಣಗೊಂಡಿರುವ ಕಾಲ ಮತ್ತು ಸಾಮಾಜಿಕ ಸ್ಥಿತಿಯು ಬಹುಮುಖ್ಯವಾಗಿದೆ. ತಮಿಳು ಸಾಹಿತ್ಯವನ್ನು ದಲಿತ ಲೋಕ ಪ್ರವೇಶ ಮಾಡಿದ ರಾಜಕೀಯ, ಸಾಮಾಜಿಕ ಹಾಗೂ

ಧಾರ್ಮಿಕ ಸಂದರ್ಭಗಳು ಹೆಚ್ಚು ಹೆಚ್ಚು ಚರ್ಚೆಗೆ ಒಳಪಡುತ್ತವೆ. ಕಾರಣ ಜಾಗತೀಕರಣವು ಭಾರತಕ್ಕೆ ಪ್ರವೇಶ ಮಾಡಿದ ಸಂದರ್ಭದ ಕಾಲವದು. ಈ ಸಮಯದಲ್ಲಿ ದಲಿತರು ತಮ್ಮ ಮನದಾಳದ ನೋವು-ನಲಿವುಗಳನ್ನು, ಪರ್ಯಾಯ ಆಲೋಚನೆಗಳನ್ನು, ಸಂಘಟಿತವಾಗಿ, ಏರುಧ್ವನಿಯಲ್ಲಿ, ಅಕ್ಷರವೆಂಬ ಅಸ್ತ್ರಗಳನ್ನು ಬಳಸಿಕೊಂಡು ತಮಿಳು ಸಾಹಿತ್ಯವನ್ನು ಪ್ರವೇಶ ಮಾಡಿದರು. ಭಾರತದಲ್ಲಿ ಗಾಂಧೀ ಮತ್ತು ಬಿ.ಆರ್.ಅಂಬೇಡ್ಕರ್ ಅವರಿಗಿಂತ ಪೂರ್ವದಲ್ಲಿ ಜಾತಿ ಕುರಿತಾಗಿ ಅದರಲ್ಲೂ ದಲಿತರ ಕುರಿತಾಗಿ ಹೆಚ್ಚಾಗಿ ಯಾರು ಕೆಲಸ ಮಾಡಿರುವುದಿಲ್ಲ. ಒಂದು ವೇಳೆ ಮಾಡಿದ್ದರೂ ಅದು ಹೆಚ್ಚು ವ್ಯಾಪ್ತಿಯನ್ನು ಒಳಗೊಂಡಿರುವುದಿಲ್ಲ. ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಶಾಹು ಮಹಾರಾಜ, ಜ್ಯೋತಿಬಾ ಫುಲೆ, ಕರ್ನಾಟಕದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ತಮಿಳುನಾಡಿನಲ್ಲಿ ಪೆರಿಯಾರ್, ಅಯೋದಿದಾಸ್, ಕೇರಳದಲ್ಲಿ ನಾರಾಯಣ ಗುರು, ಆಂಧ್ರದಲ್ಲಿ ವೇಮನ, ಶ್ರೀ ಶ್ರೀ ಹೀಗೆ ಕೆಲವರನ್ನು ಮಾತ್ರ ಹೆಸರಿಸಬಹುದಾಗಿದೆ. ದಲಿತರ ಕುರಿತು ಚಿಂತನೆ ಮಾಡಿದವರಲ್ಲಿ ಬಿ.ಆರ್. ಅಂಬೇಡ್ಕರ್ ಅವರು ಪ್ರಮುಖರು, ಇವರ ಸಮಗ್ರ ಬರಹಗಳು, ಭಾಷಣಗಳು ದಲಿತರಲ್ಲಿ ಹೆಚ್ಚು ಜಾಗೃತಿಯನ್ನು ಮೂಡಿಸಿವೆ. ಅಲ್ಲದೆ ಹೊಸ ಚಿಂತನಾಶೀಲತೆಯನ್ನು ಮೂಡಿಸುವಲ್ಲಿ ಇವರ ಬರಹಗಳು ಸಹಾಯಕವಾಗಿವೆ.

ದಲಿತ ಪದ ಪ್ರವೇಶ

೧೯ನೇ ಶತಮಾನದ ತಮಿಳು ಸಾಹಿತ್ಯ ಸಂದರ್ಭದಲ್ಲಿ 'ದಲಿತ' ಎಂಬ ಪದ ಬಳಕೆಗಿಂತ ಪೂರ್ವದಲ್ಲಿ ತಮಿಳು ಭಾಷೆಯಲ್ಲಿ 'ತಾಳ್‌ತ್ತಪ್ಪಟ್ಟ ವಗುಪ್ಪಿನರ್' (ಕುಗ್ಗಿದ ವರ್ಗ), 'ತೀಂಡಾದೋರ್' (ಅಸ್ಪೃಶ್ಯರು), 'ಕೀಳ್‌ಚ್ಚಾದಿ' (ಕೀಳುಜಾತಿ), 'ತೀಂಡಾದ ಜಾತಿ' (ಅಸ್ಪೃಶ್ಯ ಜಾತಿ), 'ಇಳಿಕುಲತ್ತಾರ್' (ಕೀಳುವರ್ಗ), 'ಇಡಂಗ್ಯೆ ಜಾದಿ' (ಎಡಗೈ ಜಾತಿ), 'ಒದುಕ್ಕಪ್ಪಟ್ಟ ಜಾದಿ' (ದೂರವಿಟ್ಟ ಜಾತಿ), 'ತಾಂಳ್‌ತ್ತ ಜಾದಿ', 'ಪೂರ್ವಿಗ ಕುಡಿಗಳ್' (ಬುಡಕಟ್ಟಿನವರು), 'ದ್ರಾವಿಡರು', 'ಆದಿ ದ್ರಾವಿಡರು', 'ಹರಿಜನ್', 'ಒದುಕಪ್ಪಟ್ಟ ಹಿಂದುಕ್ಕಲ್' ಮುಂತಾದ ಹಲವಾರು ಹೆಸರುಗಳಲ್ಲಿ ದಲಿತರನ್ನು ರಾಜಕೀಯ ಉದ್ದೇಶದಿಂದ ವಿಭಾಗಿಸಿರುವುದನ್ನು ಕಾಣಬಹುದು. ತಾಳ್‌ತ್ತಪ್ಪಟ್ಟ ಮತ್ತು ಒದುಕ್ಕಪ್ಪಟ್ಟ ಜಾತಿಯವರನ್ನು 'ದಲಿತ' ಎಂಬ ಒಂದು ಪದದಿಂದ ಕರೆಯುವುದನ್ನು ತಮಿಳು ದೇಶೀಯವಾದಿಗಳು ನಿರಾಕರಿಸುತ್ತಾರೆ.

ದಲಿತ ಎಂಬ ಪದದ ಬಳಕೆಯಲ್ಲಿ ಹಲವು ರೀತಿಯ ಅರ್ಥಗಳು, ವಿರೋಧಗಳು ಪ್ರಾರಂಭವಾದವು. ದಲಿತರಲ್ಲಿಯೇ ಕೆಲವು ಜಾತಿಗಳಲ್ಲಿ ಈ ವಿರೋಧದ ಧ್ವನಿಗಳು ಬಂದಿರುವುದನ್ನು ತಮಿಳು ದಲಿತ ಚರಿತ್ರೆಯಲ್ಲಿ ಕಾಣಬಹುದು. ದಲಿತ ಎಂಬ ಪದವನ್ನು ಒಪ್ಪಿಕೊಳ್ಳುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ದಲಿತ ಎಂಬ ಪದವು ಹಲವಾರು ಸಮಸ್ಯೆಗಳಿಂದ ಆ ಸಂದರ್ಭದಲ್ಲಿ ಕಾಣಿಸಿಕೊಂಡಿತು. ದಲಿತರ ಆಹಾರ, ದಲಿತರ ಸಾಹಿತ್ಯ, ದಲಿತ ಸಂಗೀತದಲ್ಲಿ ಗುರುತಿಸಿಕೊಂಡ ದಲಿತ ಪದವು ಆದಿ ದ್ರಾವಿಡ ಗುಂಪಿನಲ್ಲಿಯೇ ಬಿಡಿಸಿಕೊಂಡ ಇತರೆ ಜಾತಿಗಳು ಅದರಲ್ಲೂ ಮುಖ್ಯವಾಗಿ ದೇವೇಂದ್ರರ್‌ರು, ಅರುಂದಿಯರ್‌ರು ದಲಿತ ಪದವನ್ನು ವಿರೋಧಿಸಿದರು. ಅಲ್ಲದೆ ಇವರ ಚಿಂತನೆಗಳು ವಿರುದ್ಧ ದಿಕ್ಕಿನಲ್ಲಿ ಪಯಣಿಸುತ್ತಿದ್ದವು.

ಜಾತಿ

ಭಾರತ ದೇಶದಲ್ಲಿ ಹಿಂದೂ ಧರ್ಮ ಪ್ರಬಲವಾದ ಧರ್ಮವಾಗಿದೆ. ಹಿಂದೂ ಧರ್ಮದ ಮುಖ್ಯ ನಾಲ್ಕು ವರ್ಣಗಳು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಮತ್ತು ಶೂದ್ರ, ಈ ನಾಲ್ಕು ವರ್ಣಗಳಲ್ಲೂ ನೂರೆಂಟು ಜಾತಿಗಳು ಸೇರಿವೆ. ಪ್ರತಿಯೊಂದು ಜಾತಿಯು ತನಗಿಂತ ಕೀಳು ಜಾತಿಯನ್ನು ಹೊಂದಿದೆ. ಮನುಶಾಸ್ತ್ರದಲ್ಲಿ ಬ್ರಾಹ್ಮಣ ಜಾತಿಯು ಎಲ್ಲಾ ಜಾತಿಗಿಂತ ಶ್ರೇಷ್ಠ ಜಾತಿಯೆಂದು ಪರಿಗಣಿಸಲಾಗಿದೆ. ಇವರು ಪ್ರಮುಖವಾಗಿ ಪುರೋಹಿತ ವೃತ್ತಿಯನ್ನು ಮಾಡುತ್ತಾರೆ. ಬ್ರಾಹ್ಮಣರಿಗಿಂತ ಕೆಳಗೆ ಕ್ಷತ್ರಿಯರಿದ್ದಾರೆ ಇವರ ವೃತ್ತಿ ರಾಜಕೀಯ. ವೈಶ್ಯರು ಕ್ಷತ್ರಿಯರಿಗಿಂತ ಕೆಳಗಿದ್ದು ವ್ಯಾಪಾರವನ್ನು ಮಾಡುತ್ತಾರೆ. ವೈಶ್ಯರಿಗಿಂತ ಕೀಳಾಗಿ ಶೂದ್ರರಿದ್ದಾರೆ, ಇವರು ಇನ್ನಿತರೆ ವೃತ್ತಿಗಳನ್ನು ಮಾಡುತ್ತಾರೆ. ಈ ಮೇಲಿನ ಎಲ್ಲರೂ ಸ್ಪೃಶ್ಯರು, ಆದರೆ ಇವರಿಗಿಂತ ಕೀಳಾದ ಒಂದು ವರ್ಗವಿದೆ. ಅದು ಈ ಮೇಲಿನ ಯಾರಿಂದಲೂ ಮುಟ್ಟಿಸಿಕೊಳ್ಳಲಾಗದ ಸ್ಥಿತಿಯಲ್ಲಿದ್ದು ದಲಿತ ಜಾತಿಗಳಾಗಿವೆ.

ತಮಿಳಿನ ಜಾತಿಯ ವಿಭಾಗಗಳು ಹೀಗಿವೆ

ಮೇಲ್ಜಾತಿಗಳು	FC (Fast Class)
ಹಿಂದುಳಿದ ಜಾತಿಗಳು	BC (Backword Class)
ಅತಿಯಾಗಿ ಹಿಂದುಳಿದ ಜಾತಿಗಳು	MBC (Minotary Backword Class)
ಪರಿಶಿಷ್ಟ ಜಾತಿಗಳು	SC (Shaduld Cast)
ಪರಿಶಿಷ್ಟ ಪಂಗಡಗಳು	ST(Shaduld Traibs)
ಸೀರ್ ಮರಬಿಣರ್	Dehotified tribes

ತಮಿಳು ಪರಿಸರದಲ್ಲಿ ಬ್ರಾಹ್ಮಣರು, ವೇಳಾಳರು ಎಂಬ ಎರಡು ಜಾತಿಗಳು ಶ್ರೇಷ್ಠ ಮತ್ತು ಮೇಲ್ಜಾತಿಯಾಗಿ ಗುರುತಿಸಿಕೊಳ್ಳುತ್ತಾರೆ. ಇವರು ಒಂದು ಊರಿನ ಮೇಲ್ ಭಾಗದಲ್ಲಿ ವಾಸಿಸುತ್ತಾರೆ. ಮತ್ತೊಂದು ಪ್ರದೇಶದಲ್ಲಿ ಕೋನಾರ್, ಮರವರ್, ಸೇರ್ವೈಕ್ಕಾರರ್, ಸೆಟ್ಟಿಯಾರ್ ಮುಂತಾದವರು ವಾಸಿಸುತ್ತಾರೆ. ಇವರ ಕೆಳಗೆ ಜೀವಿಸುವ ತಚ್ಚರ್, ಗೊಲ್ಲರ್, ಪಂಡಾರಂ ಮುಂತಾದವರಿದ್ದಾರೆ. ಇವರ ನಂತರ ವಣ್ಣಾರ್, ನಾವಿದರ್ ಮುಂತಾದ ಜಾತಿಗಳು ಸಮಾಜದ ಸೇವೆ ಮಾಡುವ ಜಾತಿಗಳೆಂದು ವಿಭಾಗಿಸಿಕೊಂಡು ಊರಿನಲ್ಲಿ ವಾಸಿಸುತ್ತಾರೆ. ಈ ಜಾತಿಗಳಲ್ಲಿ ಬ್ರಾಹ್ಮಣರನ್ನು ಬಿಟ್ಟು ಬೇರೆ ಎಲ್ಲರೂ ತಮ್ಮಲ್ಲಿ ಅಣ್ಣ, ತಮ್ಮ, ಮಾವ ಎಂಬ ಸಂಬಂಧವಾಚಕಗಳನ್ನು ಬಳಸುವುದನ್ನು ಕಾಣಬಹುದು. ಇವರು ಆರ್ಥಿಕ ಮತ್ತು ಅಧಿಕಾರಯುತ ಸ್ಥಾನದಲ್ಲಿರುವುದರಿಂದ ಈ ರೀತಿಯ ಸಂಬಂಧವಾಚಕಗಳನ್ನು ಬಳಸಿ ಸಮಾನವಾಗಿ ಜೀವಿಸುವುದನ್ನು ನಾವು ಕಾಣಬಹುದು. ಇವರು ಎಲ್ಲರೂ ಸ್ಪೃಶ್ಯರು.

ಬ್ರಾಹ್ಮಣರನ್ನು ಎಲ್ಲರೂ 'ಸ್ವಾಮಿ' ಎಂದೇ ಕರೆಯುತ್ತಾರೆ. ಪಳ್ಳರು, ಪರೈಯರರು ಆಚಾರಿ ಜಾತಿಯವರನ್ನು 'ಅಪ್ಪು' (ತಂದೆ) ಎಂದು ಕರೆದರೆ, ವಣ್ಣಾರ್, ನಾವಿದರ್ ಜಾತಿಯವರು ಇವರನ್ನು 'ಅಪ್ಪುಚ್ಚಿ' (ತಂದೆ) ಎಂದು ಕರೆಯುತ್ತಾರೆ. ವಣ್ಣಾರ್, ನಾವಿದರ್ ತಮ್ಮೊಳಗೆ ತಾವೇ ಅಣ್ಣ, ತಮ್ಮಂದಿರಾಗಿ ಸಂಬಂಧವಾಚಕವಾಗಿ ಕರೆಯುತ್ತಾರೆ. ಕೋನಾರ್, ಮರವರ್, ಸೇರ್ವೈಕ್ಕಾರರ್, ಚೆಟ್ಟಿಯಾರ್, ಪಂಡಾರಂ ಮುಂತಾದ ಜಾತಿಯವರನ್ನು ವಣ್ಣಾರ್, ನಾವಿದರ್, ಪಳ್ಳರ್, ಪರೈಯರ್, ಸಕ್ಕಲಿಯರ್ ಮುಂತಾದ ಜಾತಿಯವರು 'ಅಯ್ಯಾ' ಎಂದು ಗೌರವ ಸೂಚಕವಾಗಿ ಕರೆಯುತ್ತಾರೆ.

ಊರಿನ ಸೀಮೆ(ಗಡಿ)ಯನ್ನು ಬಿಟ್ಟು ಸ್ವಲ್ಪ ದೂರದಲ್ಲಿ ಪೂರ್ವದ ಕೇರಿಯಲ್ಲಿ ಪಳ್ಳರ್, ಪರೈಯರ್, ಸಕ್ಕಲಿಯರ್‌ರು ವಾಸಿಸುತ್ತಾರೆ. ಇವರು ವಾಸಿಸುವ ಪ್ರದೇಶವು ತಗ್ಗುಗಳಲ್ಲಿ ನೀರು ನಿಲ್ಲುವ ಪ್ರದೇಶವಾಗಿರುತ್ತದೆ. ಇವರೆಲ್ಲರು ಅಸ್ಪೃಶ್ಯರಾಗಿದ್ದು ಊರಿನಲ್ಲಿರುವ ಜಮೀನು ಒಡೆತನವಿರುವ ಮನೆಗಳಲ್ಲಿ ಗುಲಾಮರಾಗಿ ಜೀವಿಸುತ್ತಿರುವುದನ್ನು ಕಾಣಬಹುದು.

ಪರೈಯರ್: ಪರೈಯರ್‌ರು ಅಸ್ಪೃಶ್ಯ ದಲಿತರಾಗಿದ್ದು ಇವರ ವಾಸಸ್ಥಳ ಊರಿಗೂ ಮತ್ತು ರಸ್ತೆಗೂ ದೂರದಲ್ಲಿ ಪರೈಕೇರಿಯಲ್ಲಿ ವಾಸಿಸುತ್ತಾರೆ. ಸಾಂಬರ್ ಎಂದು ಕರೆಯಿಸಿಕೊಂಡರೂ ಹೆಚ್ಚಾಗಿ ಆದಿ ದ್ರಾವಿಡರು ಎಂದೇ ಕರೆಯಿಸಿಕೊಳ್ಳುತ್ತಾರೆ. 'ಪರೈ' ಎಂದರೆ 'ತಮಟೆ' ಎಂದು ಅರ್ಥ. ಪರೈ ಹೊಡೆಯುವುದರಿಂದ ಇವರನ್ನು ಪರೈಯರು ಎಂದು ಹೆಸರು ಬಂದಿದೆ. ಪರೈಯರ್ ಜಾತಿಯಲ್ಲಿ ಒಳಗಿರುವ ಉಪಜಾತಿಗಳ ಕುರಿತು ಕೋ.ಕೇಸವನ್‌ರು "ಅಮ್ಮ ಪರೈಯರ್, ಕಟ್ಟಿಪ್ ಪರೈಯರ್, ಕೀಳ್‌ಕ್ಕಟ್ಟಿ, ಕೋಲಿಯಾಳ್, ಕೊಂಗು, ಗೊರಂ, ಕೋಟ್ಟೈ, ಮುರಸು, ಮೊಟ್ಟೈ, ಪಚ್ಚೈ, ಸಾಂಬನ್, ಸಂಗು ಸೋಳಿಯನ್, ತಂಗಲಾನ್, ವಲಂಗಮತ್ತು, ವಳ್ಳೈ, ದಾದನ್ ಮುಂತಾದ ನೂರ ಇಪ್ಪತ್ತೆಂಟು ಉಪಜಾತಿಗಳಾಗಿ ಪರೈಯರ್ ಇದ್ದಾರೆ" (ಕೋ.ಕೇಸವನ್, ಸಮೂಗ ವಿಡುದಲೈಯುಂ ತಾಳತ್ತಪ್ಪಟ್ಟೋರುಂ. ಪು. ೧೧೬) ಎಂದು ಹಲವು ಹೆಸರುಗಳನ್ನು ತಿಳಿಸುತ್ತಾರೆ.

ಪಳ್ಳರು: ಪಳ್ಳರು ದಲಿತ ಅಸ್ಪೃಶ್ಯರಾಗಿದ್ದು ವ್ಯವಸಾಯ ಕೂಲಿಗಳಾಗಿ ಕಂಡುಬರುತ್ತಾರೆ. ಪ್ರಸ್ತುತ ಇವರು ತಮ್ಮನ್ನು ಪಳ್ಳರು ಅಥವಾ ದಲಿತರು ಎಂದು ಕರೆಯಿಸಿಕೊಳ್ಳಲು ಇಷ್ಟಪಡದೇ 'ದೇವೇಂದ್ರ ಕುಲ ವೇಳಾಳರ್' ಎಂದು ಗುರುತಿಸಿಕೊಳ್ಳುವುದನ್ನು ಕಾಣಬಹುದು. ಪಳ್ಳರ ಬಗೆಗೆ ಎಡ್ಗರ್ ಥರ್ಸಟನ್ ತಮ್ಮ ಕೃತಿಯಲ್ಲಿ "ಪಳ್ಳರು ತಾವು ಕೋಪದಲ್ಲಿದ್ದ ಶೂದ್ರನಿಗೂ ಬ್ರಾಹ್ಮಣ ಮಹಿಳೆಯಲ್ಲಿ ಹುಟ್ಟಿದವರು ಎಂದು ಕೆಲವರು ಹೇಳುತ್ತಾರೆ. ಕೆಲವರು ದೇವೇಂದ್ರನಿಂದ ವ್ಯವಸಾಯ ಕೆಲಸಗಳನ್ನು ಮಾಡುವ ಉದ್ದೇಶದಿಂದ ಸೃಷ್ಟಿಸಲ್ಪಟ್ಟವರು ಪಳ್ಳರು" (Edgar thurston, op.cit, vol-5, pp 473) ಎಂದು ತಿಳಿಸುತ್ತಾರೆ.

ಸಕ್ಕಲಿಯರ್: ಸಕ್ಕಲಿಯರ್ ಅಥವಾ ಅರುಂದಿಯರ್ ಎಂದು ಕರೆಸಿಕೊಳ್ಳುವ ಇವರನ್ನು ತಲಸ್ಪರ್ಶಿಯರಲ್ಲಿ ಅತೀ ಕೆಳ ಮಟ್ಟದಲ್ಲಿ ದಲಿತ ಅಸ್ಪೃಶ್ಯರಾಗಿ ಪರಿಗಣಿಸಲಾಗಿದೆ. ಮಲ ಎತ್ತುವ

ಕೆಲಸ, ಊರನ್ನು ಗುಡಿಸುವ ಕೆಲಸ, ಚರ್ಮ ಸಂಬಂಧಿತ ಕೆಲಸಗಳನ್ನು ಮಾಡುವುದರಿಂದ ಪರೈಯರ್ ಮತ್ತು ಪಳ್ಳರ್‌ಗಿಂತ ಆರ್ಥಿಕವಾಗಿ, ಸಾಮಾಜಿಕವಾಗಿ ಸ್ಥಾನಮಾನದಲ್ಲಿ ಕೆಳಗಿದ್ದಾರೆ.

ಇವರೊಂದಿಗೆ ಪುದಿರೈ ವಣ್ಣಾನ್, ಬುಡಕಟ್ಟು ಜನಾಂಗದ ಕುರವರ್, ಇರುಳರು ಮುಂತಾದವರನ್ನು ದಲಿತರು ಎಂಬುದಾಗಿ ಗುರುತಿಸಲಾಗಿದೆ.

ದಲಿತ: ಪ್ರಸ್ತುತ ದಲಿತ ಎಂಬ ಪದವನ್ನು ಅಂಚಿನಲ್ಲಿರುವವರು ಕೆಳಗೆ ತಳ್ಳಲ್ಪಟ್ಟವರು ಎನ್ನುವ ಅರ್ಥದಲ್ಲಿ ಬಳಸಲಾಗುತ್ತಿದೆ. ಇದು ಜಾತಿಯನ್ನು ಸೂಚಿಸುವುದಿಲ್ಲ. ಆದರೆ ಇದು ಅಂಚಿನಲ್ಲಿರುವ ಜನರು ಎಂಬ ವಿಷಯ ವಸ್ತುವನ್ನು ವಿವರಿಸುತ್ತದೆ. ಪಂಚಮರು, ಹರಿಜನರು ಆದಿ ದ್ರಾವಿಡರು ಎಂದು ಕರೆಯುತ್ತಿದ್ದವರನ್ನು ಈಗ ದಲಿತರು ಎಂದು ಗುರುತಿಸಲಾಗುತ್ತದೆ.

"ದಲಿತ ಎನ್ನುವುದನ್ನು ತಮಿಳು ಸಂದರ್ಭದಲ್ಲಿ ತಳಸ್ಪರ್ಶೀಯರು ಎಂದು ಕರೆದರೆ ಹೆಚ್ಚು ಹೊಂದಿಕೆಯಾಗುತ್ತದೆ" (ಕೊ. ಕೇಸವನ್, ತಾಳ್‌ತ್ತಪಟ್ಟೋರ್ ಇಲಕ್ಕಿಯಂ, ಪು. ೩) ಎಂದು ದಲಿತ ಪದ ತಮಿಳು ಪ್ರದೇಶದಲ್ಲಿ ಮಾತ್ರ ತಳಸ್ಪರ್ಶೀಯರಾಗಿ ಬೇರೆ ಬೇರೆ ಪ್ರದೇಶದ ಜನರನ್ನು ಕೂಡಿಸಿದಾಗ ದಲಿತ ಎಂದು ಗುರುತಿಸಬಹುದೆಂದು ಕೊ. ಕೇಸವನ್ ಅವರು ತಿಳಿಸುವುದನ್ನು ಕಾಣಬಹುದು.

"ದಲಿತ ಎಂಬ ಪದವು ಹಳ್ಳದಲ್ಲಿ ಬಿದ್ದವರು ಎಂದು ಅರ್ಥ. ಇಲ್ಲಿ ಹಳ್ಳ ಎನ್ನುವುದು ಸಮಾಜದಲ್ಲಿನ ಜಾತೀಯ ಹಳ್ಳವನ್ನು ಸೂಚಿಸುತ್ತದೆ." (ತೇ. ಜ್ಞಾನ ಶೇಖರನ್, ದಲಿತ್ತಿಯಂ, ಪು. ೩೫) ಎಂದು ವಿವರಿಸುತ್ತಾರೆ. ಮಾರ್ಕ್ಸ್‌ರವರು ದಲಿತ ಪದ ಕುರಿತು "ಒಟ್ಟಾರೆ ಮೇಲ್ಜಾತಿಯವರಿಂದ ಯಾವುದೋ ರೀತಿಯಲ್ಲಿ ಅಸ್ಪೃಶ್ಯತೆಗೆ ಗುರಿಯಾಗುವ ಜಾತಿಗಳಿಗೆ ಸೇರಿದವರನ್ನು ನಾವು ದಲಿತರು ಎಂದು ಚಿತ್ರಿಸಬಹುದು." (ಅ.ಮಾರ್ಕ್ಸ್, ದಲಿತ್ ಅರಸಿಯಲ್, ಪು. ೧೮) ಎಂದು ವಿವರಿಸುತ್ತಾರೆ.

೧೯೯೦ಕ್ಕಿಂತ ಹಿಂದೆ ತಮಿಳುನಾಡಿನಲ್ಲಿ 'ದಲಿತ' ಎಂಬ ಪದವನ್ನು ನಿರಪ್ಪಿರಿಗ್ಯೆ ಪತ್ರಿಕೆಯಲ್ಲಿ ಪೊದಿಯವೆರ್ಪನ್‌ರು ಮೊಟ್ಟಮೊದಲು ಬಳಸಿದ್ದಾರೆ. ಈ ಪದವನ್ನು ಜಾತೀಯತೆಯ ಮೂಲದಲ್ಲಿ ಬಳಸಿದ್ದಾಗಿಯು ಸಾಹಿತ್ಯ ವಿಮರ್ಶಕ ವೇಲುಸಾಮಿ ತಿಳಿಸುತ್ತಾರೆ.

"ದಲಿತ ಎಂಬ ಹೆಸರಿನಲ್ಲಿ ಕರೆಯಲಾಗುವ ಒಂದು ಸಮೂಹದವರನ್ನು ದೂರ ತಳ್ಳಲ್ಪಟ್ಟವರು ಎಂದು ತಮಿಳಿನಲ್ಲಿ ಗುರುತಿಸುತ್ತೇವೆ. ತಮಿಳು ದೇಶಿಯ ಚಿಂತನೆಯ ಪರಿಸರದಲ್ಲಿ ದೂರ ತಳ್ಳಲ್ಪಟ್ಟವರು ಎಂಬ ಹೆಸರಿನಿಂದ ಕರೆಯುವುದೇ ಹೊಂದಿಕೆಯಾಗುತ್ತದೆ. ಈ ರೀತಿಯ ಪದ ಬಳಕೆಯನ್ನು ಸರಳವಾಗಿ ಮುಕ್ತಾಯಗೊಳಿಸುವುದು ಅಲ್ಲ. 'ದಲಿತ' ಎಂದು ಹೇಳುವಾಗ ಅದರಲ್ಲಿ ಹೋರಾಟದ ಭಾವನೆ ವಿರೋಧಿಸುವ ಎಚ್ಚರಿಕೆಯನ್ನು ನೀಡುತ್ತದೆ." (ತಿಲಕವತಿ(ಸಂ), ಕೋಡೈ ಉಮಿಳುಂ ಕುರಲ್, ಪು. ೩೨೧) ತಮಿಳಿನಲ್ಲಿ ದಲಿತ ಎಂಬ ಪದವು ಮರಾಠಿ ಮೂಲದಿಂದ ತೆಗೆದುಕೊಂಡುದಾಗಿದೆ. ಮರಾಠಿಯಲ್ಲಿ ಈ ಪದಕ್ಕೆ ಎರಡು ಹೇಳಿಕೆಗಳಿರುವುದನ್ನು

ಕಾಣಬಹುದು. "ಕುಣಿಯಲ್ಲಿ (ಆಳದಲ್ಲಿ) ಬಿದ್ದವರು ಎಂದು ಒಂದರ್ಥವಿದ್ದರೆ ದಲಿತ ಸಾಹಿತಿ ದಯಾಪವಾರ್‌ರವರು ದಲಿತ ಪದಕ್ಕೆ 'ದಲ್' ಎಂದರೆ ಮರಾಠಿಯಲ್ಲಿ ಭೂಮಿ ಮತ್ತು ಮಣ್ಣನ್ನು ಸೂಚಿಸುತ್ತದೆ. ಮತ್ತು ಅದರೊಳಗೆ ಬೇರು ಬಿಟ್ಟ ಅರ್ಥವನ್ನು ನೀಡುತ್ತದೆ. ಅದೇ ರೀತಿಯಾಗಿಯೇ ಈ ಮಣ್ಣಿನಲ್ಲಿ ಬೇರು ಬಿಟ್ಟವರು ಎಂಬ ಅರ್ಥದಲ್ಲಿ ಈ ಪದವನ್ನು ಬಳಸುತ್ತೇವೆ." (ಸಜನ್, ದಲಿತ್ತಿಯಮುಂ-ಇಯಕ್ಕಮುಂ ಇಲಕ್ಕಿಯುಂಮುಂ, ಪು. ೭೬-೭೭)

"ತಮಿಳಿನಲ್ಲಿ ದಲಿತ ಸಾಹಿತ್ಯ ಉದಯವಾಗುವುದೇ? ಎಂದು ೧೯೮೨ರಲ್ಲಿ 'ಪಡಿಗಾಳ್' ಪತ್ರಿಕೆಯಲ್ಲಿ ಪ್ರಕಟವಾದ ತಮಿಳವನ್‌ರ ಲೇಖನದಲ್ಲಿ ದಲಿತ್ ಎಂಬ ಪದ ತಮಿಳಿನಲ್ಲಿ ಮೊದ ಮೊದಲು ಬಳಸಲಾಗಿತ್ತು. ತೊಂಬತ್ತರ ದಶಕದಲ್ಲಿ ಅಂಬೇಡ್ಕರ್ ಚಿಂತನೆಗಳಿಂದ ಕೂಡಿದ ಚಳುವಳಿಗಳು, ಸಂಘಟನೆಗಳು, ತಮಿಳು ಮಣ್ಣಿನಲ್ಲಿ ಬೇರು ಬಿಟ್ಟಿತು. ದಲಿತ್ ಎಂಬ ಪದವೂ ತಮಿಳಿನಲ್ಲಿ ಸ್ಥಾನ ಪಡೆಯಿತು." (ಸಜನ್, ದಲಿತ್ತಿಯಂ ಇಯಕ್ಕಮುಂ ಇಲಕ್ಕಿಯಂಮುಂ, ಪು. ೭೭) ಎಂದು ಸಜನ್‌ರವರು ದಲಿತ ಪದದ ಬಳಕೆಯ ಬಗೆಗೆ ತಿಳಿಸುತ್ತಾರೆ.

"ತಮಿಳು ಪ್ರದೇಶದಲ್ಲಿ ದಲಿತ್ ಎಂಬ ಪದವು ಶೆಡ್ಯೂಲ್ ಜಾತಿ ಒಬ್ಬರನ್ನು ಪರಿಚಯಿಸುವಾಗ ಇವರೊಬ್ಬ ದಲಿತರು ಎಂದು ಹೇಳಲಾಗುತ್ತದೆ. ಇಲ್ಲಿ ಇವರೊಬ್ಬ ಹರಿಜನ ಎನ್ನುವುದರ ಬದಲಾಗಿ ಇವರು ದಲಿತ ಎನ್ನುತ್ತಾರೆ. ಅಷ್ಟೆ ಶೆಡ್ಯೂಲ್ ಜಾತಿ ಅಲ್ಲದ ಹಿಂದುಳಿದ ಇತರೆ ಜಾತಿಯವರನ್ನು ದಲಿತ ಎನ್ನುವ ಪದದಿಂದ ಕರೆದರೆ ಇದರಲ್ಲಿ ಜಾತಿ ಸೂಚಕವಾಗಿಲ್ಲ ಎಂದು ಹೇಳಬಹುದು. ಅದು ಅಲ್ಲದ ಪಕ್ಷದಲ್ಲಿ ಇದು ಜಾತಿಯನ್ನು ಗುರುತಿಸುವ ಪದವೇ. ಇಂದು ಗ್ರಾಮಗಳಲ್ಲಿ ದಲಿತ ಎಂಬ ಪದ ಅಸ್ಪೃಶ್ಯತೆ ಸೂಚಿಸುವ ಪದವಾಗಿಬಿಟ್ಟಿದೆ. ಬಾನುಲಿ, ದೂರದರ್ಶನ, ಪತ್ರಿಕೆಗಳು ಎಲ್ಲವೂ ಶೆಡ್ಯೂಲ್ ಜಾತಿಯವರನ್ನು ಗುರುತಿಸುವುದಕ್ಕಾಗಿ ದಲಿತ ಎಂದೇ ಬಳಸುತ್ತಿವೆ." (ತೇ. ಜ್ಞಾನಶೇಖರನ್, ದಲಿತ್ ಎನ್ನುಂ ಸೊಲ್ ಎದರ್ಕು? ದಲಿತ್ತಿಯಂ, ಪು. ೧೩೦) ಎಂದು ಜನಸಾಮಾನ್ಯರಿಂದ ಹಿಡಿದು ಜನರ ಸಂಪರ್ಕ ಸಾಧನದವರೆಗೂ 'ದಲಿತ' ಎಂಬ ಪದಕ್ಕೆ ಜಾತಿ ಎಂಬ ಅರ್ಥದಲ್ಲಿ ಬಳಸುವುದನ್ನು ತೇ. ಜ್ಞಾನಶೇಖರನ್ ತಿಳಿಸುತ್ತಾರೆ.

ತಮಿಳು ದಲಿತ ಸಾಹಿತ್ಯದಂತೆ ಕನ್ನಡದ ಸಿ. ವೀರಣ್ಣನವರು ಸಹ ದಲಿತ ಪದದ ಕುರಿತು ಅಸ್ಪೃಶ್ಯ ಜನಾಂಗಕ್ಕೆ ಸೀಮಿತಗೊಳಿಸಿರುವುದನ್ನು ಕಾಣಬಹುದು. "ಎಲ್ಲಾ ಜಾತಿಗಳಲ್ಲಿಯೂ ತುಳಿತಕ್ಕೊಳಗಾಗಿರುವವರನ್ನೆಲ್ಲ ದಲಿತರು ಎಂದು ಕರೆದು 'ದಲಿತ' ಪದದ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕಿಂತ ಈಗ ಅದು ಹುಟ್ಟಿ ಬೆಳೆದಿರುವ ಹಿನ್ನೆಲೆಯಲ್ಲಿ ಅದನ್ನು ಅಸ್ಪೃಶ್ಯ ಜನಾಂಗಕ್ಕೆ ಸೀಮಿತಗೊಳಿಸಬಹುದು. ಚಾರಿತ್ರಿಕ ಅಧ್ಯಯನದ ದೃಷ್ಟಿಯಿಂದ ಸೂಕ್ತವೆನಿಸುತ್ತದೆ." (ವೀರಣ್ಣ ಸಿ., ಸಾಹಿತ್ಯ ಮತ್ತು ಸಮುದಾಯ, ಪು. ೪೨) ಈ ವ್ಯಾಖ್ಯಾನವನ್ನು ಸಮರ್ಥಿಸುವಂತೆ ಎಲ್. ಹನುಮಂತಯ್ಯನವರು ದಲಿತ ಪದದ ಕುರಿತು "ಸಂಘಟನಾತ್ಮಕ ಹೋರಾಟದ ದೃಷ್ಟಿಯಿಂದ

ಈ ಪದದ ವ್ಯಾಪ್ತಿಯನ್ನು ದೊಡ್ಡದು ಮಾಡಿ ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಿತರಾದ ಎಲ್ಲಾ ಜನಾಂಗವನ್ನು ಸೇರಿಸಿದರೂ, ಸಾಹಿತ್ಯಿಕವಾಗಿ ಅಸ್ಪೃಶ್ಯತೆಯನ್ನು ನಿವಾರಿಸಲು ಅಸ್ಪೃಶ್ಯರು ಮತ್ತು ಇವರಷ್ಟೇ ಶೋಷಣೆಗೆ ಒಳಗಾದ ಕೆಳವರ್ಗದ ಜನರು ದಲಿತರಾಗುತ್ತಾರೆ" (ಎಲ್. ಹನುಮಂತಯ್ಯ, ದಲಿತ ಲೋಕದ ಒಳಗೆ, ಪು. ೩).

ಈ ಎಲ್ಲಾ ವ್ಯಾಖ್ಯಾನಗಳಿಂದ ದಲಿತ ಎಂಬ ಪದವು ತಲಸ್ಪರ್ಶಿಯರನ್ನು ಸೂಚಿಸುತ್ತದೆ. ಮುಖ್ಯವಾಗಿ ಅಸ್ಪೃಶ್ಯತೆಗೆ ಒಳಗಾಗುವ ಜಾತಿಯವರನ್ನು ಹೆಚ್ಚು ಚಿತ್ರಿಸುತ್ತದೆ.

ದಲಿತ ಪದಕ್ಕೆ ವಿರೋಧ

ದಲಿತ ಪದಕ್ಕೆ ಅನೇಕರು ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ಪೆ. ತಂಗರಾಸುರವರು ದಲಿತ ಎಂಬ ಪದದ ಬಳಕೆಯು ತಲಸ್ಪರ್ಶಿಯವರು ಮತ್ತೆ ಬಿಡಿಯಾಗಿ ದೂರ ನಿಲ್ಲುವುದರ ಅಪಾಯವನ್ನು ಸೂಚಿಸುತ್ತಾರೆ. "ಜಾತಿಯ ಜಾಲದಲ್ಲಿ ಸಿಲುಕಿ ಬಿದ್ದವರಿಗೆಲ್ಲಾ ಒಂದು ಪದವೆಂದರೆ ಬೀಳದೇ ಮೇಲೇರುವವರಿಗೆ ಏಕೆ ಒಂದು ಪದ ಇಲ್ಲ? ಅವರೇಕೆ ದಲಿತರಲ್ಲದವರಾಗಿ ಕರೆಯಿಸಿಕೊಂಡಿಲ್ಲ? ಜಾತಿ ಕಾರಣಕ್ಕಾಗಿ ಹೋರಾಡುತ್ತಿರುವ ಜನರಿಗೆ ಯಾರು ಯಾವುದೇ ಹೆಸರಿಟ್ಟರೂ ಅದನ್ನು ಒಪ್ಪಿಕೊಳ್ಳುವುದು ಸರಿಯೇ? ಎಂದು ಕೇಳುತ್ತಿದ್ದೇವೆ" (ಪೆ. ತಂಗರಾಸು, "ದಲಿತ ಎಂಡ್ರ ಸೊಲ್ ಪೇರ್‌ಪುರೈಯದಾ?" ತಾಳ್ತ್ತಪ್ಪಟ್ಟೋರ್ ಇಲಕ್ಕಿಯಂ, ಪು. ೩೧) ಎಂಬುದಾಗಿ ವಿವರಿಸುತ್ತಾರೆ. ಪೆರುಂಚಿತ್ತನಾರ್‌ರು 'ದಲಿತ' ಎಂಬ ಪದ ಕುರಿತು,

"ಆದಿ ದ್ರಾವಿಡ ಎನ್ನುವುದು ಚಾರಿತ್ರಿಕ ದೋಷ,

ಅರಿಜನ್ ಎನ್ನುವುದು ಗಾಂಧಿಯ ಮೋಸ,

ತಲಸ್ಪರ್ಶಿಯನು ಎನ್ನುವುದು ಅಭಿಮಾನ ಹೀನತ್ವ

ದಲಿತ್ ಎನ್ನುವುದು ತಮಿಳಿನ ನಷ್ಟ" (ಪೆರುಂಚಿತ್ತನಾರ್(ಲೇ), ಕೋ. ಕೇಸವನ್(ಸಂ), ತಾಳ್ತ್ತಪಟ್ಟೋರ್ ಇಲಕ್ಕಿಯಂ, ಪು. ೨೫) ಎಂದು ವಿವರಿಸುತ್ತಾರೆ.

ದಲಿತ ಆಹಾರವೆಂದು ಹೇಳಲಾಗುವ ಗೋ ಮಾಂಸವನ್ನು ತಮ್ಮಿಂದ ಸ್ವೀಕರಿಸಲು ಆಗದೆ ದಲಿತ ಸಂಗೀತವೆಂದು (ಪರೈ ಇಸೈ) ಅಂಗೀಕರಿಸಲಾದ ಸಂಗೀತ ತಮ್ಮವೆಂದು ತಮಿಳು ದಲಿತ ಸಾಹಿತ್ಯ ದೇವೇಂದಿರರ್‌ರನ್ನು ದಾಖಲಿಸಿಲ್ಲವೆಂದು ಈ ಜನರು 'ದಲಿತ' ಎಂಬ ರಾಜಕೀಯದ ಒಳಗೆ ಬರುವುದನ್ನು ಇಷ್ಟ ಪಡದೇ ತಮ್ಮ ವಿರೋಧವನ್ನು ಹಲವು ವಿಧಾನಗಳಲ್ಲಿ ತೋರಿಸಿದರು.

ಆದರೆ ಅರುದಿಯರ್‌ರು ತಮ್ಮದೇ ಆದ ಬೇರೆ ವಿಧಾನದಲ್ಲಿ ಇದನ್ನು ವಿವರಿಸಿಕೊಂಡರು. ದಲಿತರಲ್ಲಿ ದೇವೇಂದಿರ್‌ರಂತೆ ತಮ್ಮನ್ನು ಸೇರಿಸಿಕೊಳ್ಳಲು ಇಷ್ಟ ಪಡದೆ ಇರುವ ದಲಿತ ಎಂಬ

ಪದವನ್ನು ಸಾಂಸ್ಕೃತಿಕ ಗುರುತಾಗಿ ನೋಡಲು ಪ್ರಯತ್ನಿಸಿದರು. ಇದರ ಪರಿಣಾಮವಾಗಿ 'ಮಧುರೈ ವೀರನ್' ಎಂಬ ಹೊಸ ಚಾರಿತ್ರಿಕ ನಾಯಕನನ್ನು ತಂದು ನಿಲ್ಲಿಸಿ ದಲಿತ ಚರಿತ್ರೆ ಸ್ಥಾಪಿಸಲು ಪ್ರಯತ್ನಿಸಿದರು. ತಿರುವಣ್ಣಾಮಲೈಯಲ್ಲಿ ಪ್ರತಿವರ್ಷ ಪುರಟ್ಟಾಸಿ (ಬಾದ್ರಪದ) ತಿಂಗಳು ಕೊನೆಯ ಶನಿವಾರದಂದು ಅರುಂದಿಯರ್‌ರು ಜಾತ್ರಾ ಮಹೋತ್ಸವವನ್ನು ಆಚರಿಸುತ್ತಾರೆ. ಅಂದು ಎಲ್ಲರೂ ಸೇರುವ ರಾತ್ರಿಯ ಸಂದರ್ಭವನ್ನು "ಅರುಂದಿಯರ್ ಕಳೈವಿಳಾ" ಎಂದು ನೀಡುವ ಬಹುಮಾನ, ಮರ್ಯಾದೆಗಳನ್ನು 'ಪೆರಿಯ ಮೇಳಂ' ಎಂಬ ಸಂಪೂರ್ಣವಾದ ಆರುಂದಿಯಾರ್ ನಡೆಸುವ ಜಾನಪದ ಕಲೆಯೂ ಈ ಜಾತ್ರೆಯಲ್ಲಿ ವಿಶೇಷವಾಯಿತು. ದೇವೇಂದರ್‌ರು ಬಹಿರಂಗವಾಗಿ ಹೇಳಲು ಇಷ್ಟಪಡದ ದಲಿತ ಎಂಬ ಪದವು 'ಪರೈ'ಯನ್ನು ಸೂಚಿಸುತ್ತದೆ ಎಂಬುದಕ್ಕೆ ಅರುಂದಿಯರ್‌ರು ಧೈರ್ಯವಾಗಿ ತಮ್ಮ ವಿರೋಧವನ್ನು ತೋರಿಸಿದರು. ದೇವೇಂದರ್, ಅರುಂದಿಯರ್, ಆದಿದ್ರಾವಿಡರ್ ಎಂದು ಕರೆಯಿಸಿಕೊಳ್ಳುವ ಈ ಮೂರು ಶೋಷಿತ ಜಾತಿಗಳು ಪಾರಂಪರ್ಯವಾಗಿ ತಮ್ಮೊಳಗೆ ಹೇಳಿಕೊಳ್ಳುವಂತ ಭೇದಗಳನ್ನು ಕಾಣದೆ ಹಿಂದುಳಿದವರಾಗಿದ್ದರೂ 'ದಲಿತ' ಎಂಬ ಪದದ ಬಳಕೆಯಲ್ಲಿ ತಮ್ಮ ತಮ್ಮ ವಿರೋಧವನ್ನು ಒಮ್ಮತವಿಲ್ಲದೆ ಭಿನ್ನಮತಗಳಲ್ಲಿಯೇ ವಿವರಿಸಿಕೊಂಡವು.

ದಲಿತತ್ವ

ದಲಿತರ ಸಮಸ್ಯೆಗಳನ್ನು ಇತರರು ತಿಳಿಯುವ ಮೊದಲು ದಲಿತರೇ ತೆಗೆದು ಹೇಳುವುದು ಸೂಕ್ತ. ತಮ್ಮಲ್ಲಿರುವ ಜಾತಿ, ಮತ, ಇನ್ನಿತರೇ ಸಮಸ್ಯೆಗಳು, ಒಳಜಾತಿ ಭೇದಗಳು ಮುಂತಾದ ಎಲ್ಲಾ ರೀತಿಯ ಸಮಸ್ಯೆಗಳ ಮೂಲಕ ದಲಿತರಲ್ಲಿಯೇ ಜಾಗೃತಿ ಮೂಡಿಸುವ ಚಿಂತನೆಯೇ ದಲಿತತ್ವವಾಗಿದೆ. ಮುಖ್ಯವಾಗಿ ದಲಿತತ್ವ, ದಲಿತರ ಬಿಡುಗಡೆ ಅಂದರೆ ಜಾತೀಯ ಮೇಲಾಧಿಕಾರವನ್ನು ಒಡೆದು ಬದಲಾವಣೆ ತರುವ ಚಿಂತನೆಯಿಂದ ಕೂಡಿರುವುದನ್ನು ಕಾಣಬಹುದು. ಈಗಾಗಲೇ ಅನುಸರಿಸಿಕೊಂಡು ಬರುತ್ತಿರುವ ನೀತಿ ನಿಯಮಗಳ ವಿರುದ್ಧ ಕಲಹದ ಧ್ವನಿಯನ್ನು ಹಲವು ರೀತಿಯಲ್ಲಿ ವ್ಯಕ್ತಪಡಿಸುವುದಾಗಿದೆ. ಒಟ್ಟಾರೆ ದಲಿತತ್ವ ಎನ್ನುವುದು ಜಾತಿಗೆ ವಿರುದ್ಧವಾದದ್ದು, ಸಮಾನತೆಯನ್ನು ಬುನಾದಿಯನ್ನಾಗಿ ಮಾಡಿಕೊಂಡು ದಲಿತರ ಸಾಮಾಜಿಕ, ಸಾಂಸ್ಕೃತಿಕ ಬಿಡುಗಡೆಯ ಚಿಂತನೆಯನ್ನು ಮುಂದಿರಿಸುತ್ತದೆ.

ದಲಿತತ್ವ ಎಂಬ ಪದಕ್ಕೆ ರಾಜೇಂದ್ರ ಚೋಳನ್ "ದಲಿತತ್ವದ ಕುರಿತು ಮಾತಾಡುವ ಯಾರಾಗಲಿ ಇದೇ ದಲಿತತ್ವ ಎಂದು ಖಚಿತವಾಗಿ ಚಿತ್ರಿಸಿ ಯಾವುದನ್ನೂ ಹೇಳದಿದ್ದರೂ, ದಲಿತ ಎಂಬ ಪದ ತಲಸ್ಪರ್ಶಿಯರನ್ನು ಗುರುತಿಸುವುದಕ್ಕೆ ಬಳಕೆಯಾಗುವಂತೆ ದಲಿತತ್ವ ಎನ್ನುವುದು ತಲಸ್ಪರ್ಶೀಯರಿಗೆ ಸೇರಿದ ಸಮಸ್ಯೆಗಳು, ಜೀವನ ನೆಲೆಗಳು, ಅವರು ಅನುಭವಿಸುತ್ತಿರುವ ಶೋಷಣೆಗಳು ಮುಂತಾದವುಗಳನ್ನು ಮುಂದಿರಿಸಿ ಅದಕ್ಕಾಗಿ ಪರಿಹಾರವನ್ನು ಕಂಡುಕೊಳ್ಳುವ ಒಂದು ಚಿಂತನೆ ಎಂಬುದಾಗಿ ತಿಳಿದುಕೊಳ್ಳಬಹುದು" ಎಂದು ಹೇಳಿದ್ದಾರೆ (ರಾಜೇಂದ್ರ ಚೋಳನ್, ದಲಿತ್ತಿಯಂ, ಪು. ೭)

ತನಿಗೈಸೆಲ್ವನ್‌ರು ಇದನ್ನು ಸಮ್ಮತಿಸುವಂತೆ "ದಲಿತರ ಬಿಡುಗಡೆಯ ಚಿಂತನೆಯನ್ನು ದಲಿತತ್ವ ಎಂಬ ಪದ ಪ್ರಬಲವಾಗಿ ನಿಖರವಾಗಿ ಮಂಡಿಸುತ್ತದೆ." (ತನಿಗೈ ಸೆಲ್ವನ್, ಮುನ್ನುಡಿ, ದಲಿತ್ತಿಯಂ ತಮಿಳಯಂ-ಇಂದಿಯಂ, ಪು. ೦೧)

ದಲಿತ ಸಾಹಿತ್ಯ

ಕನ್ನಡದಲ್ಲಿ ದಲಿತ ಸಾಹಿತ್ಯವು ಎಪ್ಪತ್ತರ ದಶಕದಲ್ಲಿ ದಲಿತ ಚಳುವಳಿಯ ಜೊತೆ ಜೊತೆಯಲ್ಲಿಯೇ ಬೆಳೆದುಬಂದಿತು. ಅದರೊಂದಿಗೆ ಇದಕ್ಕೆ ಅನೇಕ ಚಾರಿತ್ರಿಕ ಕಾರಣಗಳಿದ್ದವು. ೧೯೭೩ರ ಬಸವಲಿಂಗಪ್ಪನವರ ಭೂಸಾ ಪ್ರಕರಣ ಮತ್ತು ದಲಿತರ ಜಾತಿ ವಿನಾಶ ಸಮ್ಮೇಳನ ಮತ್ತು ಕರ್ನಾಟಕ ದಲಿತ ಬರಹಗಾರರ ಮತ್ತು ಕಲಾವಿದರ ಒಕ್ಕೂಟ ಸ್ಥಾಪನೆಯು ದಲಿತ ಯುವ ಬರಹಗಾರರಲ್ಲಿ ಹೊಸ ಚೈತನ್ಯ ಮೂಡಿಸಿತು. ೧೯೭೪ರಲ್ಲಿ ದಲಿತ ಸಂಘರ್ಷ ಸ್ಥಾಪನೆಯು ದಲಿತ ವಿದ್ಯಾವಂತರಲ್ಲಿ ಬರಹದ ಚಾಪು ಮೂಡಿಸಿತು. ಇದರ ನಡುವೆ ದೇವನೂರು ಮಹಾದೇವರ 'ದ್ಯಾವನೂರು' ಕಥಾಸಂಕಲನವು ೧೯೭೩ರಲ್ಲಿ ಪ್ರಕಟವಾದರೆ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಕವನ ಸಂಕಲನವು ೧೯೭೫ರಲ್ಲಿ ಪ್ರಕಟಗೊಂಡು ಕನ್ನಡ ಸಾಹಿತ್ಯದಲ್ಲಿ ದಲಿತತ್ವದ ಪ್ರವೇಶ ಮಾಡಿದುವು.

ತಮಿಳು ದಲಿತ ಸಾಹಿತ್ಯವು ಏಕಕಾಲಕ್ಕೆ ಸೃಷ್ಟಿಯಾದದ್ದಲ್ಲ. ಕಾಲಕ್ಕೆ ತಕ್ಕಂತೆ ತನ್ನಲ್ಲಿ ಅನೇಕ ಬದಲಾವಣೆಗಳನ್ನು ಕಂಡುಕೊಂಡಿದೆ. ಸಾಹಿತ್ಯ ಹಲವು ಬಗೆಯಲ್ಲಿ ತನ್ನನ್ನು ತಾನು ವ್ಯಾಪಿಸಿಕೊಂಡಿರುವುದರಿಂದ ಅದಕ್ಕೆ ತನ್ನದೇ ಆದ ಆಂತರಿಕ ಮತ್ತು ಬಾಹ್ಯ ಪ್ರೇರಣೆ ಮತ್ತು ಪ್ರಭಾವವಿರುತ್ತವೆ. ಈ ಎಲ್ಲಾ ಅಂಶಗಳು ಆಯಾ ಕಾಲಕ್ಕೆ ಅಲ್ಲಿ ಘಟಿಸಿರುವ ಘಟನೆ, ಸಂಗತಿ ಮುಂತಾದ ಅಂಶಗಳಿಂದ ಕೂಡಿರುತ್ತವೆ. ತಮಿಳು ದಲಿತ ಸಾಹಿತ್ಯಕ್ಕೆ ತಮಿಳುನಾಡಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಅಂಶಗಳು ಪ್ರಮುಖ ಪ್ರೇರಣೆಯ ಅಂಶಗಳಾಗಿವೆ. ಈ ಅಂಶಗಳಿಂದ ಅಲ್ಲಿನ ಪ್ರಮುಖ ಚಿಂತಕರು, ಸಮಾಜ ಸುಧಾರಕರು, ರಾಜಕೀಯ ನೇತಾರರು, ಸಾಹಿತಿಗಳು ಮುಂತಾದವರಿಂದ ತಮಿಳು ದಲಿತ ಸಾಹಿತ್ಯ ವಿಕಾಸ ಕಂಡುಕೊಂಡಿದೆ.

ತಮಿಳು ದಲಿತ ಸಾಹಿತ್ಯದ ಪ್ರೇರಣೆ ಮತ್ತು ಪ್ರಭಾವದ ಅಂಶಗಳನ್ನು ಅಧ್ಯಯನದ ದೃಷ್ಟಿಯಿಂದ ಈ ಕೆಳಕಂಡಂತೆ ವಿಭಾಗಿಸಬಹುದಾಗಿದೆ.

೧. ಬುದ್ಧನ ಚಿಂತನೆಗಳು

೨. ಪ್ರಾಚೀನ ಕಾಲದ ಕವಿಗಳು

೩. ರಾಜಕೀಯ ನಾಯಕರುಗಳು ಮತ್ತು ಹೋರಾಟಗಳು

೪. ಅಂಬೇಡ್ಕರ್ ಅವರ ಬದುಕು ಮತ್ತು ಬರಹಗಳು

೭. ದೇಸಿ ಪ್ರಜ್ಞೆಯ ಚಿಂತನೆಗಳು

೬. ಪತ್ರಿಕೆಗಳು

೭. ಸಾಹಿತ್ಯಿಕ ಅಂಶಗಳು (ಅನುವಾದಗಳು)

೮. ಹೋರಾಟಗಳು

೯. ದಲಿತ ಚಳುವಳಿಗಳು

೧೦. ದಲಿತ ಪ್ರಕಾಶನಗಳು

೧. ಬುದ್ಧನ ಚಿಂತನೆಗಳು: ತಮಿಳು ದಲಿತ ಸಾಹಿತ್ಯವೂ ಹಿಂದೂ ಧರ್ಮದ ಕಂದಾಚಾರಗಳನ್ನು ವಿರೋಧಿಸಿ ಸ್ವತಂತ್ರ ಧರ್ಮ ಸ್ಥಾಪನೆ ಮಾಡಿ ಒಂದು ಒಪ್ಪಿತ ವ್ಯವಸ್ಥೆಯನ್ನು ಹೇಗೆ ಪ್ರತಿರೋಧಿಸಬೇಕೆಂದು ತಿಳಿಸಿಕೊಟ್ಟ ಬುದ್ಧನ ಆಲೋಚನೆ, ತತ್ವಗಳಿಂದ, ಪ್ರೇರಣೆ ಪಡೆದುಕೊಂಡಿದೆ.

ಉದಾಹರಣೆಗೆ ತಮಿಳಿನ ಆಯೋತ್ತಿದಾಸ್‌ರ ಚಿಂತನೆಗಳಲ್ಲಿ ಬುದ್ಧನ ತತ್ವಗಳು ಹೇಗೆ ದಲಿತ ನೆಲೆಯಲ್ಲಿ ಚಿತ್ರಿತವಾಗಿವೆ, ಅವುಗಳಿಂದ ಹೇಗೆ ದಲಿತರು ತಮ್ಮನ್ನು ತಾವು ಜಾಗೃತಿಗೊಳ್ಳಬೇಕೆಂದು ತಿಳಿಸಿದ್ದಾರೆ. ಈ ಚಿಂತನೆಗಳು ಆರಂಭದ ದಲಿತ ಲೇಖಕರನ್ನು ಹಾಗೂ ವಿದ್ಯಾವಂತರನ್ನು ದಲಿತರ ಬಗೆಗೆ ಚಿಂತಿಸುವಂತೆ ಪ್ರೇರಣೆ ನೀಡಿದವು.

೨. ಪ್ರಾಚೀನ ಕಾಲದ ಕವಿಗಳು: ತಮಿಳು ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಿರುವ ಪ್ರಾಚೀನ ತಮಿಳು ಕಾವ್ಯಗಳು ಕ್ರಿ.ಶ. ಆರಂಭದಲ್ಲಿನ ದಲಿತರ ಸಾಮಾಜಿಕ ಜೀವನವನ್ನು ದಾಖಲಿಸಿವೆ. ಅವುಗಳಲ್ಲಿ ವ್ಯಕ್ತಗೊಂಡಿರುವ ದಲಿತ ಸಾಂಸ್ಕೃತಿಕ ನಾಯಕರುಗಳಾದ ನಾದನ್ ಮತ್ತು ನಾಯನಾರ್ ಎಂಬ ಇಬ್ಬರು ನಾಯಕರು ಅನುಭವಿಸಿದ ಅಸ್ಪೃಶ್ಯತೆ, ಶೋಷಣೆ, ಅಪಮಾನ, ಅಸಮಾನತೆ ಮುಂತಾದ ವಿವರಗಳು ತಿಳಿದುಬರುತ್ತದೆ.

ದಲಿತ ಸಾಹಿತ್ಯದ ಚಿಂತನೆಯನ್ನು ತಮಿಳು ಪ್ರಾಚೀನ ಕೃತಿಯಾದ ತೋಲ್ಕಾಪ್ಪಿಯಂನಲ್ಲಿ ಬರುವ 'ಅಡಿಯೋರ್', 'ವಿಳೈವಲರ್' ಎಂಬ ಪದಗಳು ತಿಳಿಸಿಕೊಡುತ್ತವೆ. ಆದರೆ ಈ ಪದಗಳು ಜಾತಿಯನ್ನು ಸೂಚಿಸುತ್ತವೆಯೋ ಅಥವಾ ಆರ್ಥಿಕತೆಯಲ್ಲಿ ಹಿಂದುಳಿದವರನ್ನು ಸೂಚಿಸುತ್ತವೆಯೋ ಎಂಬುದು ಸ್ಪಷ್ಟವಾಗಿ ಚಿತ್ರಿತವಾಗಿಲ್ಲ.

ಸಂಗಂ ಸಾಹಿತ್ಯದಲ್ಲಿ 'ಪುಲೈಮಗನ್', 'ಇಳಿಪ್ಪಿರಪ್ಪಾಳನ್', 'ತುಡಿಯನ್', 'ಪಾಣನ್', 'ಪರೈಯನ್', 'ಕಡಂಬನ್', 'ಪುಲೈಯನ್', 'ಇಳಿಸಿನನ್' ಎನ್ನುವ ಹಲವು ಪದಗಳು ದಲಿತರನ್ನು ಸೂಚಿಸುತ್ತವೆ. ಆರ್ಥಿಕವಾಗಿ ಪ್ರಬಲರಾಗಿದ್ದ ಜಾತಿಯವರ ಹೊಲಸು ಬಟ್ಟೆಗಳನ್ನು, ಮೈಲಿಗೆಯ ಬಟ್ಟೆಗಳನ್ನು ಒಗೆದು ಗಂಜಿ ಹಾಕಿ ಒಣಗಿಸಿ ಮಡಿಚಿ ಕೊಡುವ ಮಹಿಳೆ 'ಪುಲತ್ತಿ' ಎಂದು ಕರೆಯಿಸಿಕೊಳ್ಳುತ್ತಾಳೆ. ಹೆಣವನ್ನು ಸುಡುವವನನ್ನು 'ಪುಲೈಯನ್' ಎಂದು ಕರೆಯಲಾಗಿದೆ. 'ಪಾಣನ್' ಎಂಬ ಪದವು ಕೀಳು ಎಂಬ ಅರ್ಥವನ್ನು ನೀಡುತ್ತದೆ. ಪಾಣರು, ಪಾಣ್

ಕೇರಿಗಳಲ್ಲಿ ಆಡು, ದನ, ಮೊಲ, ಆಮೆ ಮುಂತಾದ ಮಾಂಸ ತಿನ್ನುತ್ತಿದ್ದರಿಂದ ಅವರನ್ನು ಕೀಳಾಗಿ ಕರೆಯಲಾಗಿತ್ತು. ಇದು ಅಂದಿನ ಪರಿಸರದಲ್ಲಿದ್ದ ತಳಸ್ತರದವರ ಸ್ಥಿತಿಯನ್ನು ತಿಳಿಸುತ್ತದೆ.

ಸಿಲಪ್ಪಾದಿಗಾರಂನಲ್ಲಿ ಅರಸ ಸೆಂಕುಟ್ಟುವನನ್ನು ಉದ್ದೇಶಿಸಿ 'ಏಳ್ ಪಿರಪ್ಪಡಿಯೇಂ' ಎಂದು ಬುಡಕಟ್ಟು ಜನಾಂಗದ ಕುರವರು ಹೇಳುತ್ತಾರೆ. ಇದಕ್ಕೆ ನ.ಮು.ವೆಂಕಟಸಾಮಿ ನಾಟ್ಟರೆರು ಏಳು ಜನ್ಮಗಳಲ್ಲೂ ನಿನಗೆ ಗುಲಾಮರಾಗಿರುತ್ತೇವೆ ಎಂಬ ಅರ್ಥವನ್ನು ಸೂಚಿಸುತ್ತಾರೆ. ಮಣಿಮೇಗಳೈಯಲ್ಲಿ 'ವಪುಲೈಮಗನ್' ಎನ್ನುವುದಕ್ಕೆ ಅಶುದ್ಧವಾದ ಮಗನು ಎಂಬ ಅರ್ಥವನ್ನು ನೀಡುತ್ತಾರೆ. ಉ.ವೇ.ಸಾಮಿನಾದಯ್ಯರ್ ಈ ಕಾವ್ಯದಲ್ಲೇ ಮೊದಲ ಬಾರಿಗೆ ತೀಂಡತ್ತಕಾದವನ್ (ಅಸ್ಪೃಶ್ಯ) ಎಂಬ ಪದ ಬಳಕೆಯಾಗಿದೆ. ಆದರೆ ಅದು ಜಾತಿಯನ್ನು ಸೂಚಿಸದೆ ನಡತೆಯಲ್ಲಿ ಸರಿಯಿಲ್ಲದವನನ್ನು ಗುರುತಿಸಲು ಬಳಕೆಯಾಗಿತ್ತು.

ಪದಿನೆಣ್ ಕೀಳ್‌ಕನಕ್ಕು ಕೃತಿಗಳಲ್ಲಿ ಜಾತಿಯನ್ನು ದಾಖಲಿಸಿಲ್ಲ ಆದರೆ ಗುಣಗಳ ಮೂಲದಲ್ಲಿ ಮೇಲು-ಕೀಳು ಎಂದು ವಿಭಾಗಿಸುತ್ತಾರೆ. ಔವ್ವೆಯಾರ್ ಧಾನ ಧರ್ಮ ಮಾಡಿದವರನ್ನು ಮೇಲೆಂದು ಧಾನ ಧರ್ಮ ಮಾಡದವರನ್ನು ಕೀಳೆಂದು ತಿಳಿಸುತ್ತಾರೆ. ತಿರುವಳ್ಳುವರ್ ಮೇಲಿನಲ್ಲಿದ್ದರೂ ದೊಡ್ಡ ಗುಣ ಇಲ್ಲದವರು ಕೀಳೆಂದು ಕೆಳಗೆ ಇದ್ದರೂ ದೊಡ್ಡ ಗುಣ ಇರುವವರು ಮೇಲೆಂದು ತಿಳಿಸುತ್ತಾರೆ. ತಿರುವೇಳವರ್ ನಾಲ್ಕಡಿಯರ್ ತನ್ನ ಸಮಕಾಲೀನ ಸಮಾಜದಲ್ಲಿ ಜಾತಿ, ಅಸಮಾನತೆ, ಶೋಷಣೆ ಮುಂತಾದ ಸಂಗತಿಗಳ ವಿರುದ್ಧ ಗಟ್ಟಿಯಾಗಿ ಧ್ವನಿ ಎತ್ತಿದ್ದಾರೆ. ಅವರ ಬರಹಗಳಲ್ಲಿ ಜಾತಿ ಪದ್ಧತಿಯನ್ನು ವಿರೋಧಿಸಿದ್ದಾರೆ. ಅವರ ಈ ಸಾಮಾಜಿಕ ಕಳಕಳಿಯನ್ನು ನಾವು ಅವರ ಸಾಹಿತ್ಯದಲ್ಲಿ ನೋಡಬಹುದಾಗಿದೆ. ಭಕ್ತಿ ಸಾಹಿತ್ಯದಲ್ಲಿ ಕಣ್ಣಪ್ಪನ್, ನಂದನನ್ರ ಚರಿತ್ರೆಯ ಮೂಲಕ ದಲಿತರ ಚಿತ್ರಣ ಕಾಣಬಹುದು. ಈ ಸಂಗತಿಗಳು ದಲಿತ ಸಾಹಿತ್ಯವನ್ನು ಮತ್ತಷ್ಟು ಸಮುದಾಯ ಕೇಂದ್ರಿತ ನೆಲೆಯಲ್ಲಿ ಆಲೋಚಿಸುವಂತೆ ಮಾಡಿವೆ.

೩. ರಾಜಕೀಯ ನಾಯಕರುಗಳು ಮತ್ತು ಹೋರಾಟಗಳು: ತಮಿಳು ಸಾಹಿತ್ಯಕ್ಕೆ ಸಾಮಾಜಿಕ ಅಂಶಗಳು ಪ್ರಭಾವ ಬೀರಿದಷ್ಟೇ ಪ್ರಮುಖವಾಗಿ ರಾಜಕೀಯ ಹಿನ್ನೆಲೆ ಕೂಡ ಇದೆ. ತಮಿಳುನಾಡಿನ ಪ್ರಮುಖ ದಲಿತರ ನಾಯಕರುಗಳಾದ ಎಂ.ಸಿ.ರಾಜ, ರಾವ್‌ಬಹದ್ದೂರ್, ಎಲ್.ಸಿ.ಗುರುಸ್ವಾಮಿ, ರೆಟ್ಟಮಲ್ಲೈ ಶ್ರೀನಿವಾಸ, ಎಮ್.ಜಗನಾಥನ್ ಮೊದಲಾದ ದಲಿತ ಹೋರಾಟಗಾರರು ಮದ್ರಾಸ್ ರೆಜಿಮೆಂಟ್‌ನಲ್ಲಿ ದಕ್ಷಿಣ ಭಾರತದ ಅಸ್ಪೃಶ್ಯರ ಪ್ರತಿನಿಧಿಗಳಾಗಿ ದಲಿತ ಜಾಗೃತಿ ಮತ್ತು ಶೈಕ್ಷಣಿಕ ಬೆಳವಣಿಗೆ ಹೊಂದಲು ಕಾರಣರಾಗಿದ್ದಾರೆ. ಇವರ ಈ ಹೋರಾಟಗಳು, ಚಿಂತನೆಗಳು ತಮಿಳು ದಲಿತ ಸಾಹಿತ್ಯವನ್ನು ಗಾಢವಾಗಿ ಪ್ರಭಾವಿಸಿವೆ. ಹಾಗೆ ತಮಿಳುನಾಡಿನಲ್ಲಿ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅವರ ಜಸ್ಟೀಸ್ ಪಾರ್ಟಿಯು ದಲಿತರಿಗೆ ಆಡಳಿತಾತ್ಮಕ ಅಧಿಕಾರಗಳನ್ನು ನೀಡುವುದರ ಮೂಲಕ ದಲಿತರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನ ಮಾಡಿದೆ. ಅದೇ

ಕಾಲದಲ್ಲಿ ವಿಕಾಸವಾದ ಬ್ರಾಹ್ಮಣೇತರರ ಸಾಮಾಜಿಕ ನ್ಯಾಯದ ಕಲ್ಪನೆಯಲ್ಲಿ ಹೋರಾಟಗಳನ್ನು ರೂಪಿಸಿದರು. ಈ ಹೋರಾಟಗಳಲ್ಲಿ ದಲಿತರ ಭಾಗವಹಿಸುವಿಕೆ ಕೂಡ ಮಹತ್ವ ಪಡೆದುಕೊಂಡಿದೆ. ಇದರಿಂದ ಪ್ರೇರಣೆ ಪಡೆದ ತಮಿಳುನಾಡಿನ ದಲಿತರು ತಮ್ಮ ಸಮುದಾಯಗಳಿಗೆ ಆಗಿರುವ ಅನ್ಯಾಯಗಳ ಕುರಿತು ಚಿಂತನೆ ಮಾಡಲು ಹಾಗೂ ಹೋರಾಟ ಮಾಡಲು ಮುಂದಾದರು.

೪. ಅಂಬೇಡ್ಕರ್ ಅವರ ಬದುಕು ಮತ್ತು ಬರಹಗಳು: ಭಾರತದಲ್ಲಿ ದಲಿತ ಸಾಹಿತ್ಯವು ೬೦ರಿಂದ ಮಹಾರಾಷ್ಟ್ರದಲ್ಲಿ, ೭೦ರಿಂದ ಕರ್ನಾಟಕದಲ್ಲಿ, ೭೫ರಿಂದ ಆಂಧ್ರದಲ್ಲಿ ಚಳವಳಿಯ ರೂಪದಲ್ಲಿ ವಿಕಾಸವಾಯಿತು. ಇದಕ್ಕೆ ನೇರ ಪ್ರಭಾವವೆಂದರೆ ಅದು ಡಾ.ಬಿ.ಆರ್.ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಚಿಂತನೆಗಳು. ಇವುಗಳು ಒಪ್ಪಿತ ಸಮಾಜದ ಮಾದರಿ ಕ್ರಮವನ್ನೇ ಮುರಿದು ಕಟ್ಟುವ ಆಲೋಚನೆಗಳ ಮಾದರಿಗಳಾಗಿವೆ. ಇವರ ಚಿಂತನೆಗಳು ಭಾರತದ ಎಲ್ಲಾ ರಾಜ್ಯಗಳಿಗೆ ವಿಸ್ತರಿಸಿಕೊಂಡವು. ಅಂಬೇಡ್ಕರ್ ಅವರ ೧೦೦ನೇ ಜನ್ಮ ದಿನಾಚರಣೆಯು ತಮಿಳುನಾಡಿನ ದಲಿತರಲ್ಲಿ ಸಮುದಾಯ ಪ್ರಜ್ಞೆ ಮತ್ತು ಸಾಹಿತ್ಯ ರಚನೆಗೆ ಮುಖ್ಯ ಪ್ರೇರಣೆಯಾಯಿತು. ಈ ಸಂದರ್ಭದಲ್ಲಿ ದಲಿತ ಪ್ರಕಾಶನಗಳು, ಪತ್ರಿಕೆಗಳು ಅಂಬೇಡ್ಕರ್ ಬದುಕು ಮತ್ತು ಬರಹಗಳನ್ನು ಜನತೆಗೆ ತಲುಪಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದವು. ಈ ಸಾಮಾಜಿಕ ಕಾಲಘಟ್ಟದಲ್ಲಿ ದಲಿತ ಪರವಾದ ಪುಸ್ತಕಗಳು, ಚಿಂತನೆಗಳು ಹೆಚ್ಚು ಹೆಚ್ಚು ಜನತೆಗೆ ತಲುಪಿದವು. ಇದರಿಂದ ತಮಿಳುನಾಡಿನ ದಲಿತರಲ್ಲಿ ತಮ್ಮ ಸ್ವ–ಅನುಭವದ ಕಥನಗಳನ್ನು ಬರವಣಿಗೆಯ ರೂಪದಲ್ಲಿ ಅಭಿವ್ಯಕ್ತಪಡಿಸಲು ತುಂಬಾ ಸಹಕಾರಿಯಾಯಿತು. ಅಷ್ಟೇ ಅಲ್ಲದೆ ಪ್ರಮುಖ ಸಿದ್ಧಾಂತಗಳ ನೆಲೆಯಿಂದ ದಲಿತ ಸಾಹಿತ್ಯ ಬರವಣಿಗೆಯಂತೆಯೇ ಅದರಲ್ಲಿ ತನ್ನ ದೇಸಿ ನೆಲೆಯ ಬರವಣಿಗೆಯನ್ನು ಹೆಚ್ಚು ಮುನ್ನೆಲೆಗೆ ತಂದಿತು. ಬದಲಾದ ರಾಜಕೀಯ ವ್ಯವಸ್ಥೆಯು ಕೂಡ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಮಗ್ರ ಸಾಹಿತ್ಯವನ್ನು ಉಚಿತವಾಗಿ ಆಯಾ ಭಾಷೆಗಳಿಗೆ ಮುದ್ರಿಸಿಕೊಡುವ ಕಾರ್ಯಕ್ಕೆ ಮುಂದಾಯಿತು. ಈ ಎಲ್ಲ ಅಂಶಗಳು ತಮಿಳು ಸಾಹಿತ್ಯವನ್ನು ದಲಿತ ಕೇಂದ್ರಿತ ನೆಲೆಯಲ್ಲಿ ಚಿತ್ರಿಸಲು ಸಹಾಯಕವಾದವು.

೫. ದೇಸಿ ಪ್ರಜ್ಞೆಯ ಚಿಂತನೆಗಳು: ದಲಿತ ಸಾಹಿತ್ಯವು ದೇಸಿ (ದ್ರಾವಿಡ) ನೆಲೆಯಲ್ಲಿ ತನ್ನ ಬರವಣಿಗೆಯನ್ನು ಆರಂಭಿಸಿತು. ಪರಿಣಾಮ ದಲಿತ, ದಲಿತತ್ವದ ಪ್ರಜ್ಞೆ ದಲಿತರಲ್ಲಿ ಹೆಚ್ಚು ಜಾಗೃತಿ ಮೂಡಿಸಲು ಕಾರಣವಾಯಿತು. ದ್ರಾವಿಡ ಚಳವಳಿ (ಬ್ರಾಹ್ಮಣೇತರರ) ದೇಸಿ ಸಂಸ್ಕೃತಿಯನ್ನು ದಲಿತರ ಭಾಗವಾಗಿ ನೋಡಲು ಆರಂಭಿಸಿತು.

೬. ಪತ್ರಿಕೆಗಳು: ತಮಿಳುನಾಡಿನ ಜನತೆಯಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸಲು ದಲಿತ ಸಾಹಿತ್ಯವನ್ನು ಜನತೆಗೆ ತಲುಪಿಸಲು ಆರಂಭವಾದ ದಲಿತ ಪತ್ರಿಕೆಗಳು ತಮಿಳು ದಲಿತ ಸಾಹಿತ್ಯದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಮೊದಲ ಕಾಲಘಟ್ಟದಲ್ಲಿ ಆರಂಭವಾದ ಈ ಪತ್ರಿಕೆಗಳು ದಲಿತ ಬರವಣಿಗೆಗಳಿಗೆ ಮೀಸಲಾಗಿದ್ದು ಇದರ ಮತ್ತೊಂದು ವಿಶೇಷ.

ರಟ್ಟಮಲ್ಲೈ ಶ್ರೀನಿವಾಸ ಅವರು ೧೯೦೭ರಲ್ಲಿ 'ಒರುಪೈಸಾ ತಮಿಳನ್', ಬಾಲಕೃಷ್ಣನ ಅವರ 'ಅರಂದಿರ್' ಎಂಬ ಪತ್ರಿಕೆಗಳು ದಲಿತರ ಸಾಮಾಜಿಕ ಬದುಕಿನ ನೈಜ ಅನುಭವಗಳನ್ನು ಬರಹಗಳ ರೂಪದಲ್ಲಿ ಪ್ರಕಟಿಸಿದವು. ಇದರಿಂದ ದಲಿತ ಸಾಹಿತ್ಯಕ್ಕೆ ಒಂದು ವೇದಿಕೆ ನಿರ್ಮಾಣವಾಯಿತು. ಇದರಿಂದಲೇ ಮುಂದೆ ದಲಿತ ಸಾಹಿತಿಗಳು ತಮ್ಮ ಬರಹಗಳನ್ನು ಹೆಚ್ಚಿಸಿಕೊಂಡರು. ಈ ಪತ್ರಿಕೆಗಳಲ್ಲಿ ವ್ಯಕ್ತಗೊಂಡಿರುವ ದಲಿತರ ಸ್ವ-ಅನುಭವಗಳನ್ನು ದಲಿತರೆ ಓದುವ ಮತ್ತು ತಮ್ಮ ತಮ್ಮ ಜೀವನಾನುಭವಗಳನ್ನು ದಾಖಲಿಸುವ ಪ್ರಯತ್ನ ಮಾಡಿದರು.

ದಲಿತ ಪತ್ರಿಕೆಗಳು: ತಮಿಳಿನ ಪತ್ರಿಕೆಗಳ ಚರಿತ್ರೆ ದೇಶೀಯ ಮಟ್ಟದಲ್ಲಿ ದ್ರಾವಿಡ ರಾಜಕೀಯ ಉದ್ದೇಶದಲ್ಲಿ ಬರೆಯಲಾಗಿದೆ. ಅದರಲ್ಲಿ ದಲಿತ ಪತ್ರಿಕೆಗಳನ್ನು ಕುರಿತು ಕೆಲವು ಅಂಶಗಳನ್ನು ದಾಖಲು ಮಾಡಲಾಗಿದೆ. ಕೆಲವು ಕೃತಿಯಲ್ಲಿ ಉಲ್ಲೇಖಿಸಿರುವಂತೆ 'ಸೂರ್ಯೋದಯಂ' ೧೮೬೯, 'ಪಂಚಮನ್' ೧೮೭೧, 'ಹಿಂದುಮತ ಸೀರ್‌ತಿರುತ್ತ' ೧೮೮೩, 'ದ್ರಾವಿಡಪ್ ಪಾಂಡಿಯನ್' ೧೮೮೫, 'ಆಂಡ್ರೋರ್ ಮಿತ್ತಿರನ್' ೧೮೮೬, 'ಮಹಾವಿಕಡದೂದನ್' ೧೮೮೬, 'ಪರ್ರೈಯನ್' ೧೮೯೨, 'ಇಲ್ಲರ ಒಳುಕಂ' ೧೮೯೮, 'ಬಾಲೋಕ ವಿಯೋಸನ್' ೧೯೦೦, 'ತಮಿಳ್‌ಪೆನ್' ೧೯೧೬ ಮುಂತಾದ ಪತ್ರಿಕೆಗಳು ಕೇವಲ ಹೆಸರು ತಿಳಿದ ಮಾಹಿತಿಗಳು.

ತಳಸಮುದಾಯದವರ ಚಳುವಳಿಗೆ ಹೊಂದಿಕೊಂಡೆ ಅಯಾರಾದಿದಾಪ್ ಒರು ಪೈಸಾ ತಮಿಳನ್ ಇರಬ್ಬೈ ಮಲ್ಲೈ ಶ್ರೀನಿವಾಸನ್‌ರ 'ಪರ್ರೈಯನ್' ಮಕ್ತಾ ಪಂಚಮನ್ ಮುಂತಾದ ಪತ್ರಿಕೆಗಳು ಈಗಾಗಲೇ ದಲಿತರಿಗಾಗಿಯೇ ಕಾರ್ಯ ನಿರ್ವಹಿಸುತ್ತಿದ್ದವು. ಅವರು ಐಯಂಗಾಲ, ಅಂಬೇಡ್ಕರ್ ಮುಂತಾದವರಂತೆ ದಲಿತರ ಬೆಳವಣಿಗೆಯನ್ನು ಪ್ರಬಲವಾಗಿ ದಾಖಲಿಸುವ ಪತ್ರಿಕೆಗಳು ಹೊರಬರಲಿಲ್ಲ. ಚಿಕ್ಕ ಚಿಕ್ಕ ಪತ್ರಿಕೆಗಳು ಸಂಪೂರ್ಣವಾಗಿ ದಲಿತ ಸಾಹಿತ್ಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಪತ್ರಿಕೆಗಳನ್ನು ಎರಡು ರೀತಿಯಾಗಿ ವರ್ಗೀಕರಿಸಬಹುದು. ದಲಿತ ಸಾಹಿತ್ಯವನ್ನು ಮಾತ್ರ ಪ್ರಕಟಿಸಿದ ದಲಿತ ಪತ್ರಿಕೆಗಳು ಹಾಗು ದಲಿತ ಸಾಹಿತ್ಯವನ್ನು ವಿಶೇಷ ಪುರವಣಿಗಳನ್ನು ಪ್ರಕಟಿಸುವವುಗಳು ಎಂದು ವಿಭಾಗಿಸಿಕೊಳ್ಳಬಹುದು. ದಲಿತ ಸಾಹಿತ್ಯಕ್ಕಾಗಿ ಪ್ರತ್ಯೇಕ ಪ್ರತಿಗಳಲ್ಲಿ ಪ್ರಕಟಿಸಿದ ಪತ್ರಿಕೆಗಳು ದಲಿತ ಸಾಹಿತ್ಯಕ್ಕಾಗಿ ಪ್ರತ್ಯೇಕ ಭಾಗಗಳನ್ನೆ ಮೀಸಲಿಟ್ಟ ಪತ್ರಿಕೆಗಳಾಗಿವೆ. ಕೋಡಂಗಿ, ಪುದಿಯ ಕೋಡಂಗಿ, ಮಳ್ಳರ್ ಮಳರ್, ದಲಿತ್, ದಲಿತ್ ಮುರಸು, ಮನುಷಂಗ, ಪಡಿ, ಎಳುಚ್ಚಿ, ಏಳು ದಲಿತ್‌ವಾಯ್ಸ್, ಆಳಿ, ಪಂಡಿತಂ ಮುಂತಾದ ಪತ್ರಿಕೆಗಳು ದಲಿತ ಪತ್ರಿಕೆಗಳಾಗಿವೆ. ಈ ಪತ್ರಿಕೆಗಳು ತಮಿಳು ಬೆಳವಣಿಗೆಗಾಗಿದ್ದರೂ ತಮಿಳುನಾಡಿನ ಸಣ್ಣ ಪುಟ್ಟ ಅಂಗಡಿಗಳಲ್ಲಿ ಸಹ ದೊರೆಯುತ್ತಿದ್ದವು.

ದಲಿತ ಸಾಹಿತ್ಯಕ್ಕಾಗಿ ಪ್ರತ್ಯಕ್ಷ ಪುರವಣಿಗಳನ್ನು ಪ್ರತ್ಯೇಕ ಪುಟಗಳನ್ನು ಮೀಸಲಿಟ್ಟ ಪತ್ರಿಕೆಗಳು, ಸುಭಮಂಗಳ, ನಿರಪ್ಪಿರಿಗೈ, ಕವಿತಾಚರನ್, ಇಲಕ್ಕು, ದಿನಮಣಿಕ್ಕದಿರ್, ಸದಂಗೈ, ಕಾಲಚ್ಚುವಡು, ಉನ್ನೈ, ತಾಮರೈ ಮುಂತಾದವುಗಳನ್ನು ಗುರುತಿಸಬಹುದು.

"ದಲಿತ್ ಸಾಹಿತ್ಯ ವಿಚಾರಗಳನ್ನು ಬಿತ್ತರಿಸಲು ಕಾರ್ಯ ನಿರ್ವಹಿಸಿದ/ನಿರ್ವಹಿಸುತ್ತಿರುವ ತಮಿಳು ಸಣ್ಣ ಪತ್ರಿಕೆಗಳನ್ನು ಕೆಳಗಿನಂತೆ ಕೂಡಿಸಿ ನೋಡೋಣ. 'ಕವಿತಾಚರನ್', 'ಸುಭಮಂಗಳ' ಮುಂತಾದವು ದಲಿತ ವ್ಯಾಖ್ಯಾನಗಳಿಗೆ ವಿಸ್ತಾರವಾಗಿ ಸ್ಥಳ ನೀಡಿರುವುದನ್ನು ಕಾಣಬಹುದು. 'ಕಾಲಚ್ಚುವಡು' ಭಿನ್ನ ರೀತಿಯಲ್ಲಿ ದಲಿತತ್ವದ ಮುಖ್ಯನಳಿಗೆ ವಿವಾದ ವೇದಿಕೆಯನ್ನು ರೂಪಿಸಿತು. ಆ ವ್ಯಾಖ್ಯಾನಗಳನ್ನು ಸಂಕಲಿಸಿ ಒಂದು ಪ್ರತ್ಯೇಕ ಸಂಚಿಕೆಯಾಗಿ ಮಾಡಿ ಪ್ರಕಟಿಸುವುದನ್ನು ಮುಂದುವರೆಸಿತು. 'ನಿಗಳ್', 'ಇಲಕ್ಕು', 'ವಯಂ', 'ಉನ್ನದಂ' ಮುಂತಾದವು ದಲಿತತ್ವದ ಅಭಿಪ್ರಾಯ ವಿಚಾರಗಳನ್ನು ಪ್ರಕಟಿಸಿದವು. ಈ ರೀತಿಯಾಗಿ ಪತ್ರಿಕೆಗಳ ಕಾರ್ಯ ನಿರಪ್ಪಿರಿಗ್ಯೆಯಲ್ಲಿ ಮುಂದುವರೆದು 'ಕಿಳಕ್ಕು', 'ಉಡಗಂ', 'ಮನುಸಂಗ' 'ಕಳಂ ಪುದಿದು' ಮುಂತಾದುವು ವಾರ್ಷಿಕ ಪತ್ರಿಕೆಗಳಾಗಿ ಬರುತ್ತಿವೆ" (ವೀ.ಅರಸು, ತಮಿಳ್‌ಚ್ ಸಿರುಪತ್ರಿಗ್ಯೆಚ್ ಸೂಳಳುಂ ದಲಿತ್ ಕರುತ್ತಾಡಲುಂ, ದಲಿತ್ ಕಲ್ಯೆ ಇಲ್ಕಿಯಂ ಅರಸಿಯಲ್, ಪು. ೨೨೪) ಎಂದು ದಲಿತ ಪತ್ರಿಕೆಯ ಮಹತ್ವವನ್ನು ವೀ. ಅರಸುರವರು ತಿಳಿಸುತ್ತಾರೆ.

೭. ಸಾಹಿತ್ಯಿಕ ಅಂಶಗಳು (ಅನುವಾದಗಳು): ತಮಿಳು ದಲಿತ ಸಾಹಿತ್ಯವು ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದ್ದು ಅನುವಾದಗಳ ಮೂಲಕ. ಮರಾಠಿ, ಕನ್ನಡ, ತೆಲುಗು ಭಾಷೆಗಳಲ್ಲಿ ವ್ಯಕ್ತಗೊಂಡಿರುವ ದಲಿತ ಸಾಹಿತ್ಯವನ್ನು ತಮಿಳು ಭಾಷೆಗೆ ಅನುವಾದ ಮಾಡಿಕೊಳ್ಳುವುದರ ಮೂಲಕ ತನ್ನ ಸಾಹಿತ್ಯದ ಪರಧಿಯನ್ನು ವಿಸ್ತರಿಸಿಕೊಂಡಿದೆ. ಅಲ್ಲದೆ ಆಫ್ರಿಕಾದ ಕಪ್ಪು ಸಾಹಿತ್ಯ, ಕನ್ನಡ ಕವಿ ಸಿದ್ಧಲಿಂಗಯ್ಯನವರ ಸಂದರ್ಶನ, ಮರಾಠಿ ಲೇಖಕರ ಸಂದರ್ಶನಗಳು, ತಮಿಳು ಭಾಷೆಯಲ್ಲಿ ಪ್ರಕಟಗೊಂಡವು. ಇವುಗಳಲ್ಲಿ ದಲಿತತ್ವವು ತಮಿಳು ದಲಿತ ಸಾಹಿತ್ಯ ತನ್ನ ಬೆಳವಣಿಗೆಗೆ ಬಳಸಿಕೊಂಡಿದೆ. ಈ ರೀತಿಯಾಗಿ ಅನುವಾದಗೊಂಡಿರುವ ದಲಿತ ಸಾಹಿತ್ಯದ ಸಾಹಿತ್ಯಿಕ ಅಂಶಗಳು ತನ್ನ ಮೂಲ ನೆಲೆಯಿಂದಲೇ ಹುಟ್ಟಿಕೊಂಡಿವೆ. ಹಾಗಾಗಿ ತಮಿಳಿನ ದಲಿತರ ಸಾಮಾಜಿಕ ಬದುಕನ್ನು ಇತರ ಭಾಷೆಯ ದಲಿತರಿಗೆ ಹೋಲಿಕೆ ಮಾಡಿ ನೋಡುವ ಸಂಗತಿಗಳು ದಲಿತರ ಬರವಣಿಗೆಗೆ ಪ್ರೇರಣೆ-ಪ್ರಭಾವವನ್ನು ಬೀರಿವೆ.

ಈ ೩೦ ವರ್ಷಗಳ ಇತಿಹಾಸದಲ್ಲಿ ತಮಿಳು ದಲಿತ ಸಾಹಿತ್ಯ ತನ್ನ ಜನರ ಸಾವಿರಾರು ವರ್ಷಗಳ ನೋವಿನ ಮೂಕ ವೇದನೆಗೆ ಧ್ವನಿಯಾಗುವ ಕಾರ್ಯ ಮಾಡಿತು.

ಮರಾಠಿ ದಲಿತ ಸಾಹಿತ್ಯ ಮತ್ತು ಆಫ್ರಿಕಾದ ಕಪ್ಪು ಸಾಹಿತ್ಯದ ಜೊತೆಗೆ ರಾಮಸ್ವಾಮಿ ಪೆರಿಯಾರ್, ಅಯೋತಿದಾಸ್, ಕಟ್ಟಮಲ್ಯೆ ಶ್ರೀನಿವಾಸನ್ ಮುಂತಾದವರ ವಿಚಾರಧಾರೆಗಳು ಮತ್ತು ಈಳಂ ಜನರ ಬರವಣಿಗೆಗಳು ದಲಿತ ಸಾಹಿತ್ಯ ಉದಯಕ್ಕೆ ಮುಖ್ಯ ಪ್ರೇರಣೆಗಳಾದವು. ಇದಲ್ಲದೆ ೧೯೯೦ರ ಪ್ರಾರಂಭದಲ್ಲಿ ತಮಿಳು ಸಣ್ಣ ಕಥೆಗಳು, ದಲಿತ ಚಳುವಳಿಗಳು, ದ್ರಾವಿಡ ಚಳುವಳಿಗಳನ್ನು ಕುರಿತು ಚರ್ಚೆ ಸಂವಾದ ನಡೆಸುತ್ತಿತ್ತು. ಇದರಲ್ಲಿ 'ನಿಗಳ್' ಎಂಬ ಪತ್ರಿಕೆಯು ೧೯೯೧ರ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ "ವಿಳುಪ್ಪುರಂ ಸೀರಾಳಿನಿನ್ ಎನ್ ಸನಂಗಳಿನ್ ಕಥೈ" ಎಂಬ ಸಣ್ಣ ಕಥೆಯು ದಲಿತ ಸಾಹಿತ್ಯದ ಕುರಿತ ವಿವಾದವನ್ನು ಪ್ರಾರಂಭಿಸಿತು.

ಇದಲ್ಲದೆ ಎನ್.ಪಿ.ರಾಜಕುಮಾರ್‌ರ ೧೯೮೨ರಲ್ಲಿ ಪ್ರಕಟಿತವಾದ "ತಮಿಳಿಲ್ ದಲಿತ್ ಇಲಕ್ಕಿಯಮ್ ತೋನ್ರುಮೊ" ಲೇಖನ, 'ಮೇಲುಂ' ಎಂಬ ಪತ್ರಿಕೆಯಲ್ಲಿ ರಾಜ್‌ಗೌತಮನ್‌ರ "ತಮಿಳಿಗ ದಲಿತ್ತುಂ ದಲಿತ್ ಇಲಕ್ಕಿಯಮುಂ" ೧೧.೦೮.೧೯೯೧ರಲ್ಲಿ ಪ್ರಕಟವಾದ ದೀರ್ಘ ಲೇಖನವು ದಲಿತ ಸಾಹಿತ್ಯದ ಮೇಲೆ ಬೆಳಕು ಚೆಲ್ಲುತ್ತವೆ. ಇದೇ ಸಮಯದಲ್ಲಿ ಕನ್ನಡ ಸಾಹಿತ್ಯದಲ್ಲಿ ದಲಿತ ಸಾಹಿತ್ಯ ಉಜ್ವಲವಾಗಿ ಬೆಳೆದು ನಿಂತಿತ್ತು. ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು', ಮರಾಠಿ ದಲಿತ ಆತ್ಮಕಥೆಗಳು ತಮಿಳಿಗೆ ಭಾಷಾಂತರಗೊಂಡವು. ಔದ್ಯೋಗಿಕ ಕಾರಣಗಳಿಂದ ಕರ್ನಾಟಕದಲ್ಲಿ ನೆಲೆಸಿದ್ದ ತಮಿಳು ವಿದ್ವಾಂಸರು ತಮಿಳು ನಾಡಿನಲ್ಲೂ ದಲಿತ ಸಾಹಿತ್ಯ ಕುರಿತು ಚರ್ಚೆಗಳನ್ನು ಮಾಡಿದರು. ಸುಭಮಂಗಳ, ಆಯ್ವು, ಸ್ಲೇಡ್ ಮುಂತಾದ ಪತ್ರಿಕೆಗಳು ಸಹ ದಲಿತ ಸಾಹಿತ್ಯ ಕುರಿತು ವಿವರವಾದ ಲೇಖನವನ್ನು ಪ್ರಕಟಿಸಿದವು. ಇವೆಲ್ಲವುಗಳ ಪ್ರಭಾವ ಪರಿಣಾಮದಿಂದ ದಲಿತ ಸಾಹಿತ್ಯವು ಸಮಾಜದಲ್ಲಿನ ಅತ್ಯಂತ ಕೆಳವರ್ಗದ ಜನತೆಯ ಹಸಿವು, ಅನ್ನ, ಭೂಮಿ, ಅಸಮಾನತೆ, ನೋವು ಅಧಿಕಾರಯುತವಾದ ದಬ್ಬಾಳಿಕೆ, ಶೋಷಣೆ, ಗುಲಾಮಗಿರಿಯಂತಹ ವಿಷಯವನ್ನು ತನ್ನ ಕಥಾವಸ್ತುವನ್ನಾಗಿಸಿಕೊಂಡು ದಲಿತರ ನೈಜ ಬದುಕನ್ನು, ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಸಾಹಿತ್ಯದ ಮೂಲಕ ಚಿತ್ರಿಸಿತು.

ಪ್ರಾರಂಭದಲ್ಲಿನ ನವೀನ ತಮಿಳು ಸಾಹಿತ್ಯ ಗಾಂಧೀಯ ಚಿಂತನೆ ಹಾಗೂ ಹೋರಾಟವನ್ನು ದಾಖಲಿಸುವಷ್ಟು ದ್ರಾವಿಡ ಹೋರಾಟವನ್ನು ದಾಖಲಿಸಿರಲಿಲ್ಲ ಎಂಬುದನ್ನು ಮುಖ್ಯವಾಗಿ ಗಮನಿಸಬೇಕು. ಯಾವ ಸಮಾಜದ ಉನ್ನತಿಯ ವಿಧಿ-ವಿಧಾನದ ವಿರುದ್ಧ ದ್ರಾವಿಡ ಹೋರಾಟ ನಡೆಯುತಿತ್ತೋ ಅದೇ ಸಮುದಾಯಕ್ಕೆ ಸೇರಿದವರೆ ಆಧುನಿಕ ತಮಿಳು ಸಾಹಿತ್ಯದ ಮುಂಚೂಣಿಯಲ್ಲಿದ್ದರು. 'ಮನಿಕ್ಕೊಡಿ ಕಾಲಂ', 'ಎಳುತ್ತುಕಾಲಂ', ಎಂದು ತಮಿಳು ಸಾಹಿತ್ಯದ ವಿಭಾಗಗಳನ್ನು ನೋಡಿದರೂ ಅಲ್ಲಿ ಬ್ರಾಹ್ಮಣರೇ ಹೆಚ್ಚಾಗಿರುವುದನ್ನು ಗಮನಿಸಬಹುದು. ಮುಂದೆ ಆಧುನಿಕ ಸಾಹಿತ್ಯದ ಬರಹಗಾರರು 'ನವೀನತ್ವ ಕಲೆ, ಸಂಪ್ರದಾಯ ಉನ್ನತವಾದದ್ದು' ಎಂದು ತಮ್ಮ ಬರಹಗಳಲ್ಲಿ ಒತ್ತಿ ಹೇಳಿದರು. ಕುಂಬಕೋಣಂ, ತಂಜಾವೂರು ಬ್ರಾಹ್ಮಣರು, ತಿರುನಲ್ವೇಲಿ ಪಿಳ್ಳೆಗಳು ಮುಂತಾದ ಜಾತಿಯ ಗುರುತಿನಲ್ಲಿ ನವೀನ ತಮಿಳು ಸಾಹಿತ್ಯದ ಬರಹಗಳು ಕೂಡಿದ್ದವು. 'ಕರಿಸಲ್ ಸಾಹಿತ್ಯ', 'ಕೊಂಗು ಸಾಹಿತ್ಯ', 'ನಾಂಜಿಲ್ ಸಾಹಿತ್ಯ' ಮುಂತಾದವು ಪ್ರಾದೇಶಿಕ ಸಾಹಿತ್ಯ ಪ್ರಕಾರಗಳಾಗಿದ್ದರೂ, ಇವೆಲ್ಲವೂ ಆಯಾ ಪ್ರದೇಶಗಳ ಪ್ರಭಾವ ಜಾತೀಯ ಹಿನ್ನೆಲೆಯಲ್ಲೇ ಸಾಹಿತ್ಯ ಮೂಡಿ ಬಂದಿತ್ತು. ಇದರ ನಡುವೆ ದಲಿತ ಎಂಬ ಹೊಸ ಬಗೆಯ ಬರಹವು ತಮಿಳು ಸಾಹಿತ್ಯ ಲೋಕದಲ್ಲಿ ಕಾಣಿಸಿಕೊಂಡಿತು.

೧೯೮೦ರ ಕೊನೆಯ ವರ್ಷಗಳಲ್ಲಿಯೇ ದಲಿತ ಸಾಹಿತ್ಯದ ಬೇರುಗಳು ತಮಿಳು ಬರಹಗಳಲ್ಲಿ ಕಾಣಿಸಿಕೊಂಡವು. ಆದರೂ ವಿದ್ವಾಂಸರು ೧೯೯೦ರ ವರ್ಷವನ್ನೇ ದಲಿತ ಸಾಹಿತ್ಯ ಪ್ರಾರಂಭದ ಕಾಲವೆಂದು ಹೇಳುತ್ತಾರೆ. ದಲಿತ ಸಾಹಿತ್ಯ ಎನ್ನುವುದು ತಮಿಳು ಸಾಹಿತ್ಯ ಕ್ಷೇತ್ರದಲ್ಲಿ ಹೊಸದಾಗಿ

ಕಾಣಿಸಿಕೊಂಡ ನವೀನ ಸಾಹಿತ್ಯಿಕ ಬಗೆಯಾಗಿತ್ತು. ಪತ್ರಿಕೆಗಳು, ವಿಮರ್ಶೆಗಳು, ಮಾಸ ಪತ್ರಿಕೆಗಳಲ್ಲಿ ಈ ಸಾಹಿತ್ಯದ ಧ್ವನಿಗಳು ಕೇಳಿಸಿದವು.

ಭಾರತೀಯ ಸಾಹಿತ್ಯದಲ್ಲಿ ಗಾಂಧೀವಾದ, ಅಂಬೇಡ್ಕರ್‌ವಾದ, ಮಾರ್ಕ್ಸ್‌ವಾದ ಈ ಮೂರು ವಾದಗಳು ತಮ್ಮ ಚಿಂತನೆಗಳ ಮೂಲಕ ಪ್ರಭಾವವನ್ನು ಬೀರಿರುವುದನ್ನು ಕಾಣುತ್ತೇವೆ. ತಮಿಳು ದಲಿತ ಸಾಹಿತ್ಯ ಸಹ ಈ ಮೂರು ವಾದಗಳ ಪ್ರಭಾವಗಳನ್ನಿಟ್ಟುಕೊಂಡು ಪ್ರಾರಂಭವಾಯಿತು. ದಲಿತ ಸಾಹಿತ್ಯವು ರಾಜಕೀಯ, ಹೋರಾಟ, ಸಂಘಟನೆಗಳ ಮಿಶ್ರಣದಿಂದ ಕೂಡಿದೆ.

ನವ್ಯ ಸಾಹಿತ್ಯದ ಬರಹಗಾರರು ಹರಿಜನರ ಜೀವನ ಚರಿತ್ರೆಯನ್ನು ಬರೆಯುವುದು ಎಂಬ ಕಾರಣಕ್ಕೆ ದಲಿತ ಸಾಹಿತ್ಯವನ್ನು ಬರಮಾಡಿಕೊಂಡರು. ಗಾಂಧಿ/ಮಾರ್ಕ್ಸ್ ಬರಹಗಳ ಪ್ರಭಾವವನ್ನು ಹೊಂದಿದ್ದ ನವ್ಯ ಬರಹಗಾರರಿಗೆ ಹರಿಜನ, ಬಡವರ, ಹಿಂದುಳಿದವರ ಜೀವನವನ್ನು ಬರೆಯುವುದು ಒಂದು ರೀತಿಯಲ್ಲಿ ಹೊಸದಾಗಿ, ಹೋರಾಟವಾಗಿ, ಸೇವಾ ಮನೋಭಾವವಾಗಿ ಕಂಡು ಬಂದಿತು. ಆದರೆ ದಲಿತ ಅನುಭವ ಇವರು ತಿಳಿದುಕೊಂಡಿರುವಷ್ಟು ಸುಲಭವಾಗಿರಲಿಲ್ಲ. ಅಲ್ಲದೆ ಈ ಕಾಲಘಟ್ಟದಲ್ಲಿ ತಮಿಳು ಸಾಹಿತ್ಯವನ್ನು ಬರಹಗಳ ಮೂಲಕ ಮೂರು ಮುಖ್ಯ ಪ್ರಕಾರಗಳಲ್ಲಿ ನೋಡಬಹುದು. ವ್ಯಾಪಾರ ಬರಹಗಳು, ಪ್ರಚಾರ ಬರಹಗಳು, ಸಿಟ್ರಿದಳ್ ಬರಹಗಳು.

- **ವ್ಯಾಪಾರ ಬರಹಗಳು:** ವ್ಯಾಪಾರ ಬರಹಗಳೆಂದರೆ ಬರಹದಿಂದ ಹಣಗಳಿಸುವುದು. ಅಂದರೆ ಕೇವಲ ಹಣಕ್ಕಾಗಿ, ಪ್ರಶಸ್ತಿಗಾಗಿ ಬರೆಯುವ ಬರಹಗಳು. ಇದರಲ್ಲಿ ಕಾದಂಬರಿಗಳು, ಸಣ್ಣಕಥೆಗಳು, ಹಾಸ್ಯ ಮುಂತಾದವುಗಳನ್ನು ಕಾಣಬಹುದು.

- **ಪ್ರಚಾರ ಬರಹಗಳು:** ಪ್ರಚಾರ ಬರಹಗಳ ಮುಖ್ಯ ಉದ್ದೇಶವೇ ತಮ್ಮ ಚಿಂತನೆಗಳು ಎಲ್ಲರಿಗೂ ತಿಳಿಯಲಿ ಎನ್ನುವುದು. ಈ ಕಾಲದಲ್ಲಿ ಮಾರ್ಕ್ಸ್ ಬರಹಗಳು, ಪೆರಿಯಾರ್ ಬರಹಗಳು, ಗಾಂಧೀ ಬರಹಗಳು ಮುಂತಾದವು ಕೆಲವು ಸಂಘ-ಸಂಸ್ಥೆಗಳ ಹಿನ್ನೆಲೆಯಿಂದ ತಮ್ಮ ವಾದವನ್ನು ಸಮುದಾಯಕ್ಕೆ ತಿಳಿಸುವ ಉದ್ದೇಶದಿಂದ ಬಳಸಲಾಗಿತ್ತು.

- **ಸಿಟ್ರಿದಳ್ ಬರಹಗಳು:** ನವ್ಯ ಸಾಹಿತ್ಯ ಬಳಸಿಕೊಂಡ ಸಿಟ್ರಿದಳ್ ಬರಹಗಳು ಸಮುದಾಯದ ಉನ್ನತಿಗೆ ಬಳಸಿಕೊಳ್ಳಲಾಗುತ್ತಿತ್ತು. ಪತ್ರಿಕೆಗಳು, ಸಾಹಿತ್ಯ ವಲಯವು ಈ ಬರಹವನ್ನು ಬರಮಾಡಿಕೊಂಡಿತ್ತು. ಮುಂದೆ ಈ ಬರಹಗಳೇ ದಲಿತ ಸಾಹಿತ್ಯಕ್ಕೆ ಪ್ರೇರಣೆಯಾಯಿತು ಎಂದು ಹಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ವಸ್ತು, ಆಶಯವು ಸಮಾಜದಲ್ಲಿನ ಎಲ್ಲಾ ರೀತಿಯ ಉನ್ನತೀಕರಿಸಲ್ಪಟ್ಟ ಅಭಿಪ್ರಾಯ, ಚಿಂತನೆಗಳನ್ನು ಒಡೆದು ಹಾಕಿ ನಾಶ ಪಡಿಸುವುದಕ್ಕೆ ತುಡಿಯುತ್ತದೆ. ಮೂಲದಲ್ಲಿ ದಲಿತ ಸಾಹಿತ್ಯ ಎಲ್ಲಾ ಸ್ತರಗಳನ್ನು ಮೀರಿಸುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ. ದಲಿತ ಸಾಹಿತ್ಯದ ಮುಖ್ಯ ಉದ್ದೇಶ ದಲಿತರ ಬಿಡುಗಡೆ ಮತ್ತು ಎಲ್ಲಾ ಅಸ್ಪೃಶ್ಯರ ಬಿಡುಗಡೆ.

"ಮೂಲದಲ್ಲಿ ದಲಿತ ಸಾಹಿತ್ಯ ಆಕ್ರಮಣಾಶೀಲ ರಾಜಕೀಯ ಚಳುವಳಿಯಲ್ಲಿ ಅದು ಸಂಸ್ಕೃತಿ ಪರಂಪರೆಯ ನಡವಳಿಕೆಯಾಗಿರುತ್ತದೆ" ಎಂದು ತಮಿಳು ದಲಿತ ಚಿಂತಕ ರಾಜ್ ಗೌತಮನ್ ಅಭಿಪ್ರಾಯ ಪಡುತ್ತಾರೆ.

೮. ಹೋರಾಟಗಳು: ಮೀಸಲಾತಿ ಹೋರಾಟಗಳು, ದಲಿತರ ಭೂ ಹಕ್ಕಿನ ಹೋರಾಟಗಳು, ದಲಿತ ಚಳುವಳಿಗಳು ಕೂಡ ತಮಿಳು ದಲಿತ ಸಾಹಿತ್ಯವನ್ನು ಪ್ರಭಾವಿಸಿವೆ. ಅಂದರೆ ಸಮಾಜದಲ್ಲಿ ನಡೆದ ಸಾಮಾಜಿಕ ಸಂಗತಿಗಳನ್ನು ಸಾಹಿತ್ಯ ರೂಪದಲ್ಲಿ ವ್ಯಕ್ತಪಡಿಸಲು ಈ ಹೋರಾಟ, ಚಳುವಳಿಗಳ ಪಾತ್ರ ಪ್ರಮುಖವಾಗಿದೆ. ದೇಸಿಯ ಚಿಂತನೆಗಳಾದ ಪ್ರಾದೇಶಿಕ ಭಾಷೆ, ಸಂಸ್ಕೃತಿ ಮುಂತಾದವುಗಳನ್ನು ಕೇಂದ್ರವಾಗಿಸಿಕೊಂಡು ತನ್ನ ಬದುಕಿನ ಸಂಘರ್ಷಮಯವಾದ ವಿವರಗಳು ತನ್ನ ಬರವಣಿಗೆಯಲ್ಲಿ ಮೈಗೂಡಿಸಿಕೊಂಡು ಬೆಳೆಯಿತು. ಮುಂದೆ ವೈದಿಕ ಪರಂಪರೆಯ ಒಪ್ಪಿತ ಮಾದರಿಯ ವ್ಯವಸ್ಥೆಯನ್ನು ಪ್ರತಿಭಟಿಸುವುದರ ಮೂಲಕವೇ ಹಿಂದೂ ಧರ್ಮ, ಸಂಪ್ರದಾಯವನ್ನು ಪ್ರಶ್ನಿಸುವ ಕಾರ್ಯಕ್ಕೆ ದಲಿತ ಸಾಹಿತ್ಯ ಪ್ರವೇಶ ಪಡೆದುಕೊಂಡಿತು.

೯. ದಲಿತ ಚಳುವಳಿಗಳು: ಕಾಲ ಕಾಲಕ್ಕೆ ಸಾಹಿತ್ಯವು ಚಳುವಳಿಯ ನೆರವಿನೊಂದಿಗೆ ಬರುತ್ತದೆ. ಆ ರೀತಿಯಲ್ಲಿ ಭಕ್ತಿ ಸಾಹಿತ್ಯ ಚಳುವಳಿ ಪ್ರತ್ಯೇಕ ತಮಿಳು ಸಾಹಿತ್ಯ ಚಳುವಳಿ, ದ್ರಾವಿಡ ಸಾಹಿತ್ಯ ಚಳುವಳಿ, ಗಾಂಧೀಯ ಸಾಹಿತ್ಯ ಚಳುವಳಿ, ಮಾರ್ಕ್ಸ್‌ರ ಸಾಹಿತ್ಯ ಚಳುವಳಿ, ಮಹಿಳಾ ಸಾಹಿತ್ಯ ಚಳುವಳಿ, ದಲಿತ ಸಾಹಿತ್ಯ ಚಳುವಳಿ ಎಂದು ಚಳುವಳಿಯ ಮೂಲಕ ತಮಿಳು ಬೆಳವಣಿಗೆ ಹೊಂದಿರುವುದನ್ನು ಕಾಣಬಹುದು.

"ಡಾ.ಬಿ.ಆರ್.ಅಂಬೇಡ್ಕರ್ ಜನ್ಮ ಶತಮಾನೋತ್ಸವದ ನಂತರ ಅಖಿಲ ಭಾರತದ ಮಟ್ಟದಲ್ಲಿ ತಮಿಳಿನಲ್ಲಿ ದಲಿತರಲ್ಲಿ ಏರ್ಪಟ್ಟ ರಾಜಕೀಯ ಎಚ್ಚರಿಕೆ ನಮಗೆಲ್ಲಾ ಶಕ್ತಿ ನೀಡುವಂತೆ ಇದೆ. ಆರ್ಥಿಕವಾಗಿ ಹಿಂದುಳಿದ ಸ್ಥಿತಿಯಲ್ಲಿದ್ದ ದಲಿತರನ್ನು ಇತರರಿಗೆ ಹೋಲಿಸಿದಾಗ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಹೋರಾಟಗಳಲ್ಲಿ ಮುಂಚೂಣಿಯಲ್ಲಿಯೇ ಇದ್ದಾರೆ. ಒಂದು ಮತ ವಿರೋಧ ದೇಶೀಯ ವರ್ಣ ತಿರಸ್ಕಾರದ ವಿರೋಧ, ಏಕಾಧಿಪತ್ಯದ ವಿರೋಧ, ತಳಸ್ತರದ ಹಿಂದುಳಿದವರು ಮತ್ತು ಕೆಳಗುಳಿದವರನ್ನು ಒಗ್ಗೂಡಿಸಿ ಎಲ್ಲಾ ಸಾರ್ವಜನಿಕ ಹೋರಾಟಗಳಿಗೂ ಬೆಂಬಲ ಸೂಚಿಸುವ ಸ್ಥಿತಿಯಲ್ಲಿ ಇಂದು ತಮಿಳಿನ ಮಟ್ಟಿಗೆ ಸ್ನೇಹಿತ ರಾ.ತಿರುಮಾಳವನ್ ಮುಖಂಡತ್ವದಲ್ಲಿ 'ವಿಡುದಲೈ ಸಿರುತ್ತೈಗಳ್,' ಗುಣಶೇಖರನ್ ಮುಖಂಡತ್ವದಲ್ಲಿ 'ತಮಿಳ್‌ದೇಸ ಮನಿದ ಉರಿಮೈ ಕಳಗಂ', ಪೊಳಿಲನ್ ಮುಖಂಡತ್ವದಲ್ಲಿ 'ಒಡುಕ್ಕಪ್ಪಟ್ಟೋರ್ ವಿಡುದಲೈ ಮುನ್ನನಿ', ಚಂದ್ರಬೋಸ್ ಮುಖಂಡತ್ವದಲ್ಲಿ 'ಇಮಾನುವೇ ಪೇರವೈ' ಮುಂತಾದವು ಇಂದು ದಲಿತ ಕಲೈ, ರಾಜಕೀಯ ರೀತಿಯಾಗಿ ಬೆಳೆದು ಬರುತ್ತಿವೆ. ಅದೇ ಸಮಯದಲ್ಲಿ ದಲಿತರ ಹಕ್ಕು ಹೋರಾಟಗಳಿಗಾಗಿ ಹಿಂದುಳಿದ, ಅತೀ ಹಿಂದುಳಿದ ಜಾತಿಗಳನ್ನು ಸೇರಿದವರ ಬಳಿ ತಿಳಿಸಿ ಹೇಳಲಾಗುತ್ತಿಲ್ಲ. ವಿಧಿನಿಷೇಧದಂತೆ ಕೆಲವು ಸ್ಥಳಗಳಲ್ಲಿ ಕೆಲವು ಚಳುವಳಿಗಳು ಅಥವಾ ಪ್ರತ್ಯೇಕ ವ್ಯಕ್ತಿಗಳು ಪ್ರಯತ್ನಿಸುತ್ತಿರಬಹುದು." (ಪಾ. ಕಲ್ಯಾಣಿ, ದಲಿತ್ ಆಧರವಾಳರ್ಗಳ್ ಎನ್ನ

ಸೆಯ್ಯಲಾಂ? ಸಿಲ ಕುರಿಪ್ಪುಗಳ್, ಕಲಿತ್ ಕಲ್ಯೆ ಇಲಕ್ಕಿಯಂ ಅರಸಿಯಲ್, ಪು. ೨೦೬-೨೦೭) ದಲಿತ ಚಳುವಳಿಗಳ ಕುರಿತು ಮತ್ತು ಚಳುವಳಿಯ ಸ್ನೇಹಿತರನ್ನು ಕುರಿತು ಪಾ. ಕಲ್ಯಾಣಿ ಹೀಗೆ ತಿಳಿಸಿದ್ದಾರೆ.

೧೦. **ದಲಿತ ಪ್ರಕಾಶನಗಳು:** "ದಲಿತರಿಗೆ ಆಧಾರವಾಗಿ ಮುಂದುವರೆದು ಕೃತಿಗಳನ್ನು ಪ್ರಕಟಿಸುತ್ತಿರುವ ತಿರುಪ್ಪರ್ ಸಮೂಗಂದಿ ಪ್ರಕಾಶನ, ಕೋವೈ ವಿಡಿಯಲ್ ಪ್ರಕಾಶನ, ಮಧುರೈ ಪಿಡಿಯಾನ್ ಪ್ರಕಾಶನ ಮುಂತಾದವುಗಳ ಕೆಲಸಗಳನ್ನು ಪ್ರಶಂಸಿಸಬಹುದು. (ಪಾ. ಕಲ್ಯಾಣಿ, ದಲಿತ್ ಆಧರವಾಳರ್‌ಗಳ್ ಎನ್ನ ಸೆಯ್ಯಲಾಂ? ಸಿಲ ಕುರಿಪ್ಪುಗಳ್, ದಲಿತ್ ಕಲ್ಯೆ ಇಲಕ್ಕಿಯಂ ಅರಸಿಯಲ್, ಪು. ೨೦೧೨) ಎಂದು ದಲಿತ ಪ್ರಕಾಶನಗಳನ್ನು ಕುರಿತು ವಾ.ಕಲ್ಮಿಣಿ ಪ್ರಶಂಸಿಸುತ್ತಾರೆ.

ದಲಿತ ಸಾಹಿತ್ಯದ ಉದಯದ ಕಾರಣಗಳು

ತಮಿಳಿನಲ್ಲಿ ದಲಿತ ಸಾಹಿತ್ಯದ ಉದಯ ಅನಿರೀಕ್ಷಿತವಾಗಿತ್ತು. ಪ್ರಬಲವಾದ ಸಮೂಹ, ರಾಜಕೀಯ ಸಂದರ್ಭದ ಹಿನ್ನೆಲೆಯಲ್ಲೇ ಆರಂಭವಾದದನ್ನು ಕಾಣಬಹುದು. ಐವತ್ತು ವರ್ಷಗಳ ಪೆರಿಯಾರ್‌ರ ವಿಚಾರ ಚಿಂತನೆಗಳ ಒತ್ತಡ, ಸಾರ್ವಜನಿಕ ರಾಜಕೀಯದ ಆರ್ಥಿಕ ಸಿದ್ಧಾಂತಗಳ ಕಾರ್ಯಾಚರಣೆಗಳು ಮುಂತಾದವು ದಲಿತ ಸಾಹಿತ್ಯ ಉದಯಕ್ಕೆ ಅನುವು ಮಾಡಿತೆಂದು ರಾಜ್‌ಗೌತಮನ್ ಪೊಯ್-ಅಪದ್ದಂ-ಉನ್ಮೈ ಎಂಬ ಕೃತಿಯಲ್ಲಿ ತಿಳಿಸಿದ್ದಾರೆ.

"ಮರಾಠಿ ಬರಹಗಾರರಿಂದ ಆರಂಭವಾದ ದಲಿತ ಚಿಂತನೆಗಳ ಚಳುವಳಿಯ ಮತ್ತು ಅವರ ಪ್ರಕಟನೆಗಳು, ಅದನ್ನು ಕುರಿತ ವಿಚಾರಗಳು ತಮಿಳು ಸಾಹಿತ್ಯದೊಳಗೂ ತಮಿಳುನಾಡಿನ ಯುವಕರೊಳಗೂ ಆಳವಾದ ಚಿಂತನೆಯನ್ನು ಏರ್ಪಡಿಸಿತು. ಮಹಾರಾಷ್ಟ್ರ ದಲಿತ ಯುವಕರು ಒಗ್ಗಟ್ಟಾಗಿ ತಮಿಳುನಾಡಿನಲ್ಲಿ ಚಳುವಳಿಗಳನ್ನು ಆರಂಭಿಸಿದರು(ಪುದಿಯ ಕೋಡಾಂಗಿ, ಸೆಪ್ಟಂಬರ್ ೨೦೦೧ ಪು ೫೦). ಇಂತಹ ಸಂದರ್ಭದಲ್ಲಿ ಹೊಸ ಮಾದರಿ ಸಾಹಿತ್ಯದ ಪ್ರಭಾವದ ಹಿನ್ನೆಲೆಯಲ್ಲಿ ಮರಾಠಿ ಸಾಹಿತ್ಯದ ಪ್ರಭಾವವು ತಮಿಳು ಸಾಹಿತ್ಯವನ್ನು ಪ್ರವೇಶಿಸಿತು. ಮರಾಠಿ ದಲಿತ ಸಾಹಿತ್ಯ ಮುಂತಾದವನ್ನು ಒಂದು ಹೊಸ ಸಾಹಿತ್ಯ ಪ್ರಕಾರವಾಗಿಸಿಕೊಂಡು ತಮಿಳು ಸಾಹಿತ್ಯ ಆರಂಭವಾಯಿತು ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

೧೯೭೦ರ ಕೊನೆ ಹಾಗು ಎಂಬತ್ತರ ಆರಂಭದಲ್ಲಿಯೇ ದಲಿತ ಸಾಹಿತ್ಯ ಬರಹಗಳು ಆರಂಭವಾಗಿದ್ದರೂ ತೊಂಬತ್ತರಲ್ಲಿ ಎಲ್ಲರೂ ಒಪ್ಪಿಕೊಳ್ಳುವಂತಾಯಿತು. ಆ ಕಾಲದಲ್ಲಿ ಸಾಹಿತ್ಯ ವಲಯದಲ್ಲಿ ಕಾಣಿಸಿಕೊಂಡಿದ್ದ ಸಂವೇದನೆಗಳು, ಕಲ್ಪನೆ, ಪೋಸ್ಟ್ ಮಾಡರ್‌ನಿಸಂ ಮುಂತಾದ ಪದಗಳು ತಮಿಳು ಸಾಹಿತ್ಯ ಲೋಕವನ್ನು ಧಾರಾಳವಾಗಿ ಪ್ರವೇಶಿಸಿತ್ತು. ಆಗ ತಾನೇ Existencism ನಿಂದ ಹೊರ ಬರುತ್ತಿದ್ದ ಹೊಸ ಮಾದರಿ ತಮಿಳು ಸಾಹಿತ್ಯ ದಲಿತ ಸಾಹಿತ್ಯದ ಪ್ರವೇಶವನ್ನು ಸ್ವೀಕರಿಸಲು ಸುಲಭ ಸನ್ನಿವೇಶ ಇರಲಿಲ್ಲ.

ದಲಿತ ಸಾಹಿತ್ಯ ಪ್ರವೇಶ ಪಡೆದಾಗ ತಮಿಳು ಸಾಹಿತ್ಯ ಪ್ರದೇಶದಲ್ಲಿ ವ್ಯಾಪಾರ ಬರಹಗಳು, ಸಿಟ್ರಿದಳ್ ಬರಹಗಳು, ಪ್ರಚಾರ ಬರಹಗಳು (ಮಾಕ್ಸಿಸಂ, ದ್ರಾವಿಡಂ ಮುಂತಾದವು) ಎಂಬ

ಮೂರು ಬಗೆಯಾಗಿ ವಿಭಾಗಿಸಿಕೊಂಡಿದ್ದವು. ಮೊದಲ ಬಗೆಯಾದ ವ್ಯಾಪಾರ ಬರಹಗಳು ಹಣ, ಹೆಸರನ್ನೇ ಆಕ್ರಮಿಸಿತ್ತು. ಸಿಟ್ರದಳ್ ಬರಹಗಳು ಕೀರ್ತಿಯನ್ನು ಆಕ್ರಮಿಸಿದರೆ, ಪ್ರಚಾರ ಬರಹಗಳಿಗೆ ಆರ್ಭಟವಾದ ಸಾಮಾಜಿಕ ಅಂಗೀಕಾರವು ದೊರೆತಿತ್ತು.

ಇವುಗಳ ಜೊತೆ ಎರಡು ಪ್ರಮುಖ ರಾಜಕೀಯ ವಿಚಾರಗಳು ದಲಿತ ಸಾಹಿತ್ಯ ಉದಯಕ್ಕೆ ಕಾರಣವಾಯಿತು.

೧. ಅಂಬೇಡ್ಕರ್ ಜನ್ಮಶತಮಾನೋತ್ಸವ ಆಚರಣೆ

೨. ಮಂಡಲ ಕಮಿಷನ್

ಅಂಬೇಡ್ಕರ್ ಜನ್ಮಶತಮಾನೋತ್ಸವ ಆಚರಣೆ

ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದು, ಅಸ್ಪೃಶ್ಯರ ಬಿಡುಗಡೆಗಾಗಿ ಹೋರಾಡಿ, ಸಮುದಾಯದ ಸಮಾನತೆಗಾಗಿ ಶ್ರಮಿಸಿದ ಅಂಬೇಡ್ಕರ್ ಜನ್ಮಶತಮಾನೋತ್ಸವದ ಆಚರಣೆಯು ಭಾರತದಾದ್ಯಂತ ವಿಜೃಂಭಣೆಯಿಂದ ನಡೆಯಿತು. ೯೦-೯೧ರಲ್ಲಿ ನಡೆದ ಅಂಬೇಡ್ಕರ್ ಜಯಂತಿಯು ತಮಿಳುನಾಡಿನಲ್ಲಿ ಹೊಸ ಚಿಂತನೆಯನ್ನು ಆರಂಭಿಸಲು ಅನುವು ಮಾಡಿಕೊಟ್ಟಿತು. ಇದರ ಒಂದು ಭಾಗವಾಗಿ ಅಂಬೇಡ್ಕರ್‌ರ ಸಿದ್ಧಾಂತಗಳು, ಚಿಂತನೆಗಳು, ಹೋರಾಟಗಳನ್ನು ಕುರಿತ ಚರ್ಚೆಗಳು, ವಿವಾದಗಳು, ವಿಚಾರ ವಿನಿಮಯಗಳು, ಹಲವು ವಿಚಾರ ಸಂಕಿರಣಗಳನ್ನು ನಡೆಸಲಾಯಿತು.

ಅಂಬೇಡ್ಕರ್ ಕೃತಿಗಳು, ಲೇಖನಗಳು ತಮಿಳಿನಲ್ಲಿ ಭಾಷಾಂತರವಾಗಿ ಹೊರಬಂದವು. ಇದರ ಫಲವಾಗಿ ಹಿಂದೆಂದೂ ಕಾಣದಂತಹ ಮಟ್ಟಿಗೆ ಜಾತೀಯತೆಗೆ ವಿರುದ್ಧವಾದ ಸಾರ್ವಜನಿಕ ಚಿಂತನೆಗಳು ಬೆಳವಣಿಗೆ ಹೊಂದಿದವು. ಇದರಿಂದ ತಳಸಮುದಾಯದವರಲ್ಲಿ ಹೊಸ ಜಾಗೃತಿಕ ಹಾಗೂ ಸಾಮಾಜಿಕ ಎಚ್ಚರಿಕೆ ಉಂಟಾಯಿತು. ಅಲ್ಲದೆ ಶಿಕ್ಷಣ ಪಡೆದ ದಲಿತ ಯುವಕರಲ್ಲಿ ಅಂಬೇಡ್ಕರ್‌ರ ವಿಚಾರಗಳು ಹೆಚ್ಚು ಪ್ರಭಾವ ಬೀರಿದವು. ಇದರಿಂದ ಅವರು ತಮಗಾದ ಅನುಭವದ ಜೊತೆಗೆ ತಮ್ಮ ಪೂರ್ವಜರ ಮೇಲಾದ ಶೋಷಣೆಗಳನ್ನು ಕುರಿತು ಸಾರ್ವಜನಿಕವಾಗಿ ನಿರ್ಭೀತಿಯಿಂದ ಹೇಳಿಕೊಂಡರು. ಅಲ್ಲದೆ ಈವರೆಗಿದ್ದ ಶೋಷಣೆಗಳ ವಿರುದ್ಧ ಹೋರಾಡಲು ಆರಂಭಿಸಿದರು. ೧೯೯೦ರಲ್ಲಿ ಅಂಬೇಡ್ಕರ್ ಅವರ ಜನ್ಮ ಶತಮಾನೋತ್ಸವವನ್ನು ವೈಭವದಿಂದ ಆಚರಿಸಲಾಯಿತು. ಅಂಬೇಡ್ಕರ್‌ರ ವಿಚಾರಧಾರೆಗಳು, ಚಿಂತನೆಗಳನ್ನು ಸರ್ಕಾರ ಮತ್ತು ದಲಿತ ಸಂಘಟನೆಗಳು ಚಳುವಳಿಯನ್ನಾಗಿ ಮಾರ್ಪಡಿಸಿ ಜನರಲ್ಲಿ ಹೊಸ ಉತ್ಸಾಹವನ್ನು ಮೂಡಿಸಿದವು.

ಮಂಡಲ ಕಮಿಷನ್

ವಿ.ಪಿ.ಸಿಂಗ್‌ರ ಮುಖಂಡತ್ವದಲ್ಲಿ ೧೯೯೦ರಲ್ಲಿ ಬಂದ ಮಂಡಲ ಕಮೀಷನ್‌ನ ಶಿಫಾರಸ್ಸುಗಳು ಕಾರ್ಯರೂಪಕ್ಕೆ ಬರಲು ಉತ್ಸಾಹವನ್ನು ತೋರಿಸಿತು. ನಂತರ ೧೯೯೧ರಲ್ಲಿ ತಳಸಮುದಾಯದ,

ಬುಡಕಟ್ಟು ಜನರು, ಪರಿಶಿಷ್ಟ ಪಂಗಡಗಳು ಭೂ ಮೀಸಲಾತಿಯನ್ನು ಕುರಿತು ಕಮಿಟಿಯ ಶಿಫಾರಸ್ಸುಗಳು ಜಾರಿಗೊಳಿಸಿತು. ಈ ಸಂದರ್ಭವು ತಳಸಮುದಾಯ ತಮ್ಮ ಸಾರ್ವಜನಿಕ ಹಕ್ಕನ್ನು ತಿಳಿದು ಸಮೂಹ ಕುಗ್ಗಿಸುವ ರೀತಿಗಳಿಗೆ ವಿರುದ್ಧವಾಗಿ ಹೋರಾಡಲು ದಾರಿ ಮಾಡಿಕೊಟ್ಟಿತು. ಸಮುದಾಯ–ರಾಜಕೀಯ ದಳದಲ್ಲಿ ಉದ್ಭವಿಸಿದ ಈ ರೀತಿಯ ಜಾಗೃತಿಯು ಇತರೆ ವಿಭಾಗದಲ್ಲಿ ತನ್ನ ಪ್ರಭಾವವನ್ನು ಬೀರಿತು. ಇದು ದಲಿತ ಸಾಹಿತ್ಯ ಬೆಳವಣಿಗೆಗೆ ಜೊತೆಯಾಯಿತು. ಅದರೊಂದಿಗೆ ಶ್ರೀಲಂಕಾದ ಬರಹಗಾರ ಕೆ.ಡ್ಯಾನಿಯಲ್‌ರ 'ಪಂಚಮರ್' ಕಾದಂಬರಿ ಪ್ರಕಟನೆಯು ತಮಿಳು ಬರಹಗಾರರಲ್ಲಿ ಪ್ರಭಾವ ಬೀರಿತು ಎಂದು ಪ್ರದಿಯ ಕೋಡಾಂಗಿ ಪತ್ರಿಕೆ ಸೆಪ್ಟಂಬರ್ ಸಂಚಿಕೆಯಲ್ಲಿ ತಿಳಿಸುತ್ತದೆ.

ತಮಿಳು ಹೊಸ ಬಗೆಯ ಸಾಹಿತ್ಯ ಗಾಂಧಿಯ ಹೋರಾಟವನ್ನು ದಾಖಲಿಸಿದಷ್ಟು ದ್ರಾವಿಡ ಹೋರಾಟವನ್ನು ದಾಖಲಿಸಿಲ್ಲ. ಒಂದೆರಡು ದಾಖಲಾಗಿದ್ದರೂ ಅದು ಮುದ್ರಣ ಯಂತ್ರದ ಕುರಿತ ಹೋರಾಟದ ಕಾರ್ಯವನ್ನು ಪರಿಹಾಸ ಮಾಡಿ, ಮರೆಮಾಚುವಂತೆ ಮಾಡಿದೆ. ಮುಖ್ಯವಾಗಿ ದ್ರಾವಿಡ ಹೋರಾಟದ ಪ್ರಮುಖ ಅಂಶವಾದ ವೇದಿಕೆಯ ಭಾಷಣಗಳನ್ನು, ಮಾತಿನ ತಂತ್ರಗಾರಿಕೆಯನ್ನು, ಹೊಸ ರಾಜಕೀಯ ನಾಯಕರ ಆಡಂಬರವನ್ನು ಬಿಂಬಿಸುವ ರೀತಿಯಲ್ಲಿ ಕವಿತೆಗಳು, ಕತೆಗಳು ತಮಿಳಿನಲ್ಲಿ ಪ್ರಕಟವಾಗಿದ್ದವು. ಇದಕ್ಕೆ ಕಾರಣಗಳು ಸರಳವಾಗಿದ್ದವು. ಯಾವ ಸಮೂಹದ ಶ್ರೇಷ್ಟತೆಯನ್ನು ಹತೋಟಿಗೆ ತರುವ ರೀತಿಯ ವಿರುದ್ಧ ದ್ರಾವಿಡ ಹೋರಾಟ ನಡೆಯಿತೋ ಆ ಸಮೂಹವನ್ನು ಸೇರಿದವರೆ ನವೀನ ತಮಿಳು ಸಾಹಿತ್ಯದ ಮುಂಚೂಣಿಯಲ್ಲಿದ್ದರು. 'ಮಣಿಕ್ಕೊಡಿ ಕಾಲ', 'ಎಳುತ್ತು ಕಾಲ' ಎಂದು ಹೇಳಿದರೂ ಅದರಲ್ಲಿ ಬಹುಪಾಲು ಬ್ರಾಹ್ಮಣರೇ ಇದ್ದಿದ್ದನ್ನು ಕಾಣಬಹುದು. ಕುಂಬಕೋಣಂ, ತಂಜಾವೂರ್ ಬ್ರಾಹ್ಮಣರು, ತಿರುನೆಲ್ವೇಲಿ ಶೈವ ಪಿಳ್ಳೈಯರು ಎಂಬ ಗುರುತಿನೊಂದಿಗೆ ಹೇಳುವಂತೆ ನವೀನ ಸಾಹಿತ್ಯ ಕೂಡಿತ್ತು. ಕರಿಸಲ್ ಸಾಹಿತ್ಯ, ಕೊಂಗು ಸಾಹಿತ್ಯ, ನಾಂಜಿಲ್ ಸಾಹಿತ್ಯ, ಪ್ರಾದೇಶಿಕ ಸಾಹಿತ್ಯ ಎಂದು ಹೇಳಿದರೂ ಅವರವರೂ ಅವರ ಜಾತಿ ಸಾಹಿತ್ಯವನ್ನೇ ಬರೆದರು. ಅಲ್ಲದೆ ತಮ್ಮನ್ನು ಕುರಿತು ತಾವು ಬರೆಯುವುದು ವಾಸ್ತವವಾಗಿದ್ದು, ಇತರರನ್ನು ಕುರಿತು ಬರೆಯುವುದು ವಾಸ್ತವಿಕತೆಗೆ ವಿರುದ್ಧವಾಗಿ ಕೂಡಿರುತ್ತದೆ ಎಂಬುದಾಗಿ ನಂಬಲಾಗಿತ್ತು.

"ತಮಿಳು ಸಾಹಿತ್ಯ ಚರಿತ್ರೆಯಲ್ಲಿ ಸಂಗಂ ಕಾಲ ನಂತರದ ಕಾಲ ನೀತಿ ಕೃತಿಗಳಿಂದ ಆರಂಭವಾಗಿ ಇಂದಿನವರೆಗೂ ಜಾತಿಯ ವಿರುದ್ಧದ ಚಿಂತನೆಯನ್ನು ಸಾಹಿತ್ಯದಲ್ಲಿ ದಾಖಲಿಸಿದರೂ ಮಹಾರಾಷ್ಟ್ರ ಕರ್ನಾಟಕ ರಾಜ್ಯಗಳಲ್ಲಿನ ದಲಿತ ಸಾಹಿತ್ಯ ಬೆಳವಣಿಗೆಯ ಪ್ರಭಾವ ಮತ್ತು ಅಂಬೇಡ್ಕರ್ ಜನ್ಮ ಶತಮಾನೋತ್ಸವ ಆಚರಣೆಯು ದಲಿತ ಜನರ ಜಾಗೃತಿಯು ತಮಿಳಿನಲ್ಲಿ ದಲಿತ ಸಾಹಿತ್ಯ ಬೆಳೆಯಲು ಕಾರಣವಾಗಿದ್ದಿತು"(ಆ.ಜೀವಾನಂದಂ, ತಮಿಳಲ್ ದಲಿತ್ ಇಲಕ್ಕಿಯಂ, ಪು. ೩) ಎಂದು ಜೀವಾನಂದಂ ತಿಳಿಸುತ್ತಾರೆ.

ತಮಿಳಿನಲ್ಲಿ ದಲಿತ ಸಾಹಿತ್ಯ

ದಲಿತ ಬಿಡುಗಡೆಯನ್ನು ಮುಂಚೂಣಿಗೆ ತರುವ ಚಿಂತನೆಗಳು ಅಥವಾ ಸಿದ್ಧಾಂತಗಳೇ ದಲಿತ ಸಾಹಿತ್ಯದ ಪ್ರಮುಖ ಉದ್ದೇಶವಾಗಿದೆ. ಸಮಾಜದಲ್ಲಿ ಜಾತಿ ರೀತಿಯಾಗಿ ದೂರಸರಿಸಿರುವ, ಗುಲಾಮರಂತೆ ನಡೆಸಲಾಗುವ ಜನರ ಜೀವನವನ್ನು ರಾಜಕೀಯ, ಆರ್ಥಿಕವಾಗಿ ಹಿಂದೆ ತಳ್ಳಲ್ಪಟ್ಟಿರುವವರ ಮತ್ತು ಅವರ ಜೀವನದಲ್ಲಿ ನಡೆಯುವ ಸಂಕಟಗಳು, ದುಃಖಗಳು, ನಿರೀಕ್ಷೆಗಳು ಮುಂತಾದ ಮೂಲ ವ್ಯಾಖ್ಯಾನಗಳನ್ನು ಅವರಿಗಾಗಿರುವ ಕೊಂಕು ಮಾತು, ಗೇಲಿ, ಕೋಪ ಮುಂತಾದ ರೀತಿಗಳಲ್ಲಿ ವ್ಯಕ್ತಪಡಿಸುವುದರ ಮೂಲಕ ದಲಿತ ಜನರ ಬಿಡುಗಡೆಯನ್ನು ಸೂಚಿಸುವುದು ದಲಿತ ಸಾಹಿತ್ಯ.

"ಮೂಲದಲ್ಲಿ ದಲಿತ ಸಾಹಿತ್ಯವೆನ್ನುವುದು ವಿಸ್ತರಿಸಿದ ದಲಿತ ರಾಜಕೀಯ ಚಳುವಳಿಯ ಕೆಳಗೆ ಬರುವ ಸಾಂಸ್ಕೃತಿಕ ನಡವಳಿಕೆಯಾಗಿದೆ. ಕಲಹವೇ ಇದರ ರೂಪ, ವಸ್ತು ವಿಷಯ ಎಲ್ಲವೂ ಇದನ್ನು ಒಂದು ರೀತಿಯ ಸಂಪ್ರದಾಯ ರಾಜಕೀಯ ಎಂದು ಕರೆಯಬಹುದು. ದಲಿತ ರಾಜಕೀಯದ ಒಂದು ಸಂಪ್ರದಾಯ ನಡವಳಿಕೆಯನ್ನು ದಲಿತ ಸಾಹಿತ್ಯ ಎಂದು ಕರೆಯಬಹುದು. ಇದು ದಲಿತ ಕಲಹ ಸೌಂದರ್ಯವನ್ನು ದಲಿತ ರಾಜಕೀಯದ ಜೊತೆ ಜೋಡಿಸುತ್ತದೆ" (ರಾಜ್‌ಗೌತಮಾನ್, ದಲಿತ್ ಪನ್ನಾಡು ಪು. ೯೭) ಎಂದು ದಲಿತ ಸಾಹಿತ್ಯ ಸಾಮಾಜಿಕ ಅಂಶಗಳ ಕುರಿತು ಲೇಖಕರು ತಿಳಿಸುತ್ತಾರೆ.

"ದಲಿತ ಎಂಬ ಪದದ ಬಳಕೆ ತಮಿಳಿನಲ್ಲಿ ಹೊಸದಾಗಿದ್ದು ಎಂದರೂ, ದಲಿತ ಸಾಹಿತ್ಯದಲ್ಲಿ ಪ್ರಕಟವಾಗುವ ಅಂಶಗಳು ಒಳಗಿದ್ದು, ತಮಿಳು ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ದಲಿತ ಸಾಹಿತ್ಯದ ಪ್ರತಿಗಳನ್ನು ತಮಿಳಿನ ಪ್ರಾದೇಶಿಕ ಬರಹಗಳೊಂದಿಗೆ ಸುಲಭವಾಗಿ ಗುರುತಿಸಬಹುದು. ಪ್ರಾದೇಶಿಕತೆಯನ್ನು ಬರೆಯದೆ ಪ್ರಾದೇಶಿಕ ಬರಹ ಎಂಬ ಹೆಸರನ್ನು ಇಟ್ಟುಕೊಂಡು ಇಲ್ಲಿನ ಬರಹಗಳು ಹೆಮ್ಮೆ ಪಟ್ಟವು. ನಿಜವಾಗಿ ಅವು ಕಥಾ ಪಾತ್ರಗಳನ್ನು ಪ್ರಧಾನವಾಗಿಸಿಕೊಂಡ ಬರಹಗಳೆ. ಇದರ ಮರುರೂಪವಾಗಿ ದಲಿತ ಸಾಹಿತ್ಯದಲ್ಲಿ ದಲಿತ ಕಥಾ ಪಾತ್ರಗಳನ್ನು ಪ್ರಧಾನವಾಗಿರಿಸಿ ದಲಿತ ಸಾಹಿತ್ಯ ಪ್ರವೇಶ ಪಡೆಯಿತು" (ಅ. ರಾಮಸಾಮಿ, ತಮಿಳಗತ್ತಿಲ್ ದಲಿತ್ ಇಲಕ್ಕಿಯಂ, ತಮಿಳಿನಿ, ಪು. ೫೦) ಎಂದು ತಮಿಳು ದಲಿತ ಸಾಹಿತ್ಯ ಬೆಳೆದುಬಂದ ಬಗೆಯನ್ನು ವಿವರಿಸುತ್ತಾರೆ.

"ಇದು ನಡವಳಿಕೆಗೆ ವಿರುದ್ಧವಾದ ಕಲಹ ಭಾವದಿಂದ ಕೂಡಿದ್ದು, ಈ ಸಾಹಿತ್ಯವನ್ನು ಸಾಹಿತ್ಯ ರೀತಿಯಾಗಿಯೇ, ಅರಿವು ರೀತಿಯಾಗಿಯೇ ನೋಡುವುದಕ್ಕಿಂತ ಸಾಮಾಜಿಕ ಚೌಕಟ್ಟಿನೊಳಗೆ ನೋಡಿದಾಗ ಸಂಪೂರ್ಣ ಮಾಹಿತಿ ಲಭ್ಯವಾಗುತ್ತದೆ. ಈ ರೀತಿಯ ಸಾಹಿತ್ಯ ಕಲ್ಪನೆ ಕಾಲಹರಣದಿಂದ ಕೂಡಿರದೇ, ವಂಚನೆಗೆ ಒಳಪಡುವ ಜನರ ಅಭಿಪ್ರಾಯಗಳನ್ನು, ನಂಬಿಕೆಗಳನ್ನು ಪ್ರಕಟಿಸುವುದಾಗಿರುತ್ತದೆ. ಮೇಲ್ಜಾತಿ, ಮೇಲಾಧಿಕಾರದ ವಿರುದ್ಧವಾಗಿ ಕಲಹ ಭಾವವನ್ನು

ಪ್ರಕಟಿಸುವುದಲ್ಲದೆ, ಹಳೆಯ ಸಂಪ್ರದಾಯವನ್ನು, ಅಂಶಗಳನ್ನು ನಿರಾಕರಿಸಿ ಹೊಸ ಸಂಪ್ರದಾಯವನ್ನು, ಸೌಂದರ್ಯವನ್ನು ಹೊಸ ಪದ್ಧತಿಯನ್ನು ಸೃಷ್ಟಿಸುವಂತೆ ಇವೆ" (ಕೋ.ಕೇಸವನ್, ದಲಿತ್ ಇಲಕ್ಕಿಯಂ ಸಿಲ ಕಟ್ಟುರೈಗಳ್, ಪು. ೬) ಎಂದು ದಲಿತ ಸಾಹಿತ್ಯ ಯಾವುದನ್ನು ಒಪ್ಪಿಕೊಳ್ಳಬೇಕು ಯಾವುದನ್ನು ಬಿಡಬೇಕೆಂದು ಹೇಳುತ್ತಾರೆ.

"ಸ್ವಾತಂತ್ರ, ಸಮಾನತೆ, ಸಹೋದರತ್ವದ ತಳದಲ್ಲಿ ಕೂಡಿದ ಸಾರ್ವಜನಿಕ ಸೋಸಿಯಲಿಸಂ, ಹೊಸ ಸಮಾಜ ಮತ್ತು ಕಾಯಕ ಕ್ಷಮತೆ ಇಂದಿನ ಕ್ರಾಂತಿಯತೆ ಮುಂತಾದವು ದಲಿತ ಸಾಹಿತ್ಯದ ಸಾರಾಂಶಗಳಾಗಿವೆ." (ಕೋ.ಕೇಸವನ್, ದಲಿತ ಇಲಕ್ಕಿಯಂ ಸಿಲ ಕಟ್ಟುರೈಗಳ್, ಪು. ೮೮) ಎಂದು ಲೇಖಕರು ದಲಿತ ಸಾಹಿತ್ಯದ ಸಾಮಾಜಿಕ ಅಂಶಗಳ ಕುರಿತು ವಿವರಿಸುತ್ತಾರೆ.

ದಲಿತ ಸಾಹಿತ್ಯದ ಸಾಮಾಜಿಕ ಸಮಾನತೆಯನ್ನು ಕುರಿತ ಚಿಂತನೆಗಳು ಈ ಮೇಲಿನ ವ್ಯಾಖ್ಯಾನಗಳಿಂದ ತಿಳಿದು ಬರುತ್ತವೆ.

"ಕಳೆದ ಹತ್ತು ವರ್ಷಗಳಲ್ಲಿ ಒಂದು ಮುಖ್ಯವಾದ ಚಾರಿತ್ರಿಕ ತತ್ವ ವಿಭಾಗ ಹಲವು ದೇಶಗಳಲ್ಲಿ ಚರಿತ್ರೆಯನ್ನು ಬದಲಿಸಿ ಬರೆಯುತ್ತಾ ಬಂದಿದೆ. ಅದು ತಳಸಮುದಾಯದ ಚರಿತ್ರೆ ಎಂದು ಕರೆಯಿಸಿಕೊಳ್ಳುತ್ತದೆ. ಈ ವಿಭಾಗ ಕ್ರಮವನ್ನು ಕೆಳ ಹಂತದಿಂದ ಬರೆಯುವ ಚರಿತ್ರೆ ಎಂದು ಹೇಳಬಹುದು" (ಎಳಿಳ್ ಇಳಂಗೋವನ್, ಆರುಂದಿಯರ್ ವರಲಾರುಂ ಪನ್ಪಾಡುಂ, ಆದಿತ್ತಮಿಳರ್ ಪೇರವೈ, ಕೋವೈ ೨೦೦೩, ಪು. ೨) ಎಂದು ದಲಿತ ಸಾಹಿತ್ಯ ಕುರಿತು ವಿವರಿಸುತ್ತಾರೆ.

"ದಲಿತ ಸಾಹಿತ್ಯ ಕನ್ನಡದಲ್ಲಿ ಉದಯವಾಯಿತು. ನಂತರ ತಮಿಳಿನಲ್ಲಿ ಆರಂಭವಾಯಿತು ಎಂದೇ ಹೇಳುತ್ತಾರೆ. ಆದರೆ ನನ್ನ ಪ್ರಕಾರ ದಲಿತ ಸಾಹಿತ್ಯ ಮೊದಮೊದಲು ಭಾರತದಲ್ಲಿ ತಮಿಳಿನಲ್ಲೇ ಉದಯವಾಯಿತು ಎನ್ನುವೆನು. ೧೯೩೦ರಲ್ಲಿ ಹೊರಬಂದ ಇರಟ್ಟೈಮಲೈ ಶ್ರೀನಿವಾಸನ್ ಮತ್ತು ಅಯೋತಿದಾಸ್ ಪಂಡಿತರ್ ಕೃತಿಗಳೇ ಇದಕ್ಕೆ ಸಾಕ್ಷಿಯಾಗುತ್ತದೆ." (ತಮಿಳ್ ಓಸೈ ಕಳಂಜಿಯಂ, ಭಾನುವಾರ ಪತ್ರಿಕೆ, ೫.೮.೦೭, ಪು. ೩) ಎಂದು ಅಳಗಿಯ ಪೆರಿಯವನ್ ತಿಳಿಸುತ್ತಾರೆ.

ಈ ರೀತಿಯ ಬೆಳವಣಿಗೆಯು ೭೦ರ ದಶಕದಲ್ಲಿ ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿದರೆ ೯೦ರ ದಶಕದಲ್ಲಿ ತಮಿಳು ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ. ದಲಿತ ಸಾಹಿತ್ಯವು ಅಥವಾ ದಲಿತ ಲೋಕವು ತಮಿಳು ಸಾಹಿತ್ಯವನ್ನು ಪ್ರವೇಶ ಮಾಡುವ ಸಂದರ್ಭಗಳು ತುಂಬಾ ಪ್ರಮುಖವಾಗಿದೆ. ಈ ಸಂದರ್ಭವನ್ನು ತಮಿಳು ಬರಹಗಾರರಾದ ಸಂಪ್ರದಾಯವಾದಿ ಅಳಗಿಯ ಪೆರಿಯವನ್ ಈ ರೀತಿ ಪ್ರತಿಕ್ರಿಯಿಸುತ್ತಾರೆ.

"ದಲಿತ ಸಾಹಿತ್ಯವು ತಮಿಳಿಗೆ ಪ್ರವೇಶಿಸುವುದನ್ನು ಸಾಂಪ್ರದಾಯಿಕ ಸಾಹಿತಿಗಳು ಸ್ವೀಕರಿಸಲಿಲ್ಲ. ದಲಿತ ಸಾಹಿತ್ಯವನ್ನು ಅಪನಂಬಿಕೆ, ವ್ಯಂಗ್ಯ ಮನೋಭಾವದಿಂದ ಕಂಡಿದ್ದಲ್ಲದೆ, ದಲಿತ ಸಾಹಿತ್ಯ

ಕೃತಿಗಳು ಬರುವುದಕ್ಕೆ ಮುಂಚೆಯೆ ವಿಮರ್ಶೆಗಳು ಮೊದಲುಗೊಂಡವು"(ಅಳಗಿಯ ಪೆರಿಯವನ್, ದಲಿತ ಸಾಹಿತ್ಯದ ಭವಿಷ್ಯಕಾಲ, ಪು. ೨೫) ಎನ್ನುವ ಅವರ ಮಾತುಗಳಲ್ಲಿ ದಲಿತ ಸಾಹಿತ್ಯವನ್ನು ಒಪ್ಪದ ಮನಸ್ಥಿತಿಗಳು ಹೇಗೆ ತನ್ನ ಸಮಾಜದಲ್ಲಿನ ಧರ್ಮ ಮತ್ತು ಪ್ರಭುತ್ವವನ್ನು ಬಳಸಿಕೊಂಡಿವೆ ಎನ್ನುವ ವಿವರಗಳನ್ನು ತಿಳಿಸುತ್ತಾರೆ. ಮುಂದುವರೆದು ತಮಿಳಿನಲ್ಲಿ ದಲಿತ ಸಾಹಿತ್ಯವು ಹುಟ್ಟುವ ಪೂರ್ವದಲ್ಲಿಯೇ ಅದರ ಅಗತ್ಯತೆಯನ್ನು ಕೆಲವರು ಪ್ರಶ್ನೆ ಮಾಡುತ್ತಾರೆ.

ದಲಿತ ಸಾಹಿತ್ಯದ ಉದ್ದೇಶ

ದಲಿತ ಸಾಹಿತ್ಯ ಸಾಮಾನ್ಯ ಓದಿಗೆ ನಿಲುಕದ್ದು. ಇದನ್ನು ಓದುವವರು ಆಕ್ರೋಶಗೊಳ್ಳಬೇಕು, ಮುಖ ಬೇಸರದಿಂದ ತಿರುಗಿಸಬೇಕು, ಜಾತಿ ಮತಗಳಿಲ್ಲ ಎಂದು ಹೇಳುತ್ತಿರುವವರ ಎದುರು ಹುದುಗಿರುವ ಜಾತಿ ಮತಗಳ ಚರ್ಮ ಸುಲಿದು ತೋರಿಸಬೇಕು, ನಾಗರೀಕತೆ, ನಾಜೂಕು ಎಂದು ನೋಡದೆ ಓದುಗನ ಕಣ್ಣು, ಹೃದಯ ಕಿಚ್ಚೇರಬೇಕು.

ಇಲ್ಲಿಯವರೆಗೆ ನಾವು ಮನುಷ್ಯರೇ ಅಲ್ಲ. ಅದೇ ರೀತಿ ಈ ದಿನದವರೆಗೆ ನಮ್ಮ ಸಾಹಿತ್ಯ ನಿಮಗೆ ಸಾಹಿತ್ಯವೇ ಅಲ್ಲ. ನಮ್ಮ ಮೌಲ್ಯ ಬೇರೆ, ನಿಮ್ಮ ಮೌಲ್ಯಗಳೇ ಬೇರೆ ಎಂದು ನೀಗ್ರೋಗಳು ಹೇಳಿದರು. ಪ್ರಸ್ತುತ ಕಾಲದ ದಲಿತರು ಇದೇ ಉತ್ತರವನ್ನು ಮೇಲ್ಜಾತಿಯವರ ವಿರುದ್ಧವಾಗಿ ಹೇಳುತ್ತಿದ್ದಾರೆಂದು ತಮಿಳವನ್ ಕನ್ನಡ ದಲಿತ ಸಾಹಿತ್ಯ ಎಂಬ ಕೃತಿಯಲ್ಲಿ ತಿಳಿಸುತ್ತಾರೆ. ಒಟ್ಟಾರೆ ದಲಿತ ಸಾಹಿತ್ಯದ ಉದ್ದೇಶಗಳು ಹೀಗಿವೆ.

ದಲಿತರ ಬಿಡುಗಡೆ, ಮನೋ ರೀತಿಯಾಗಿ ಬದಲಾವಣೆಯನ್ನು ತರುವುದು, ದಲಿತರು ಇತರರಿಗೆ ಸಮನಾದವರೆಂಬ ಸಮಾನತೆಯನ್ನು ತರುವುದು, ತಲಸ್ಪರ್ಶಿಯರು ಒಬ್ಬೊಬ್ಬರು ತಮ್ಮ ಗುರುತನ್ನು ಕಾಣುವುದು, ಹಕ್ಕನ್ನು ತಿರಸ್ಕರಿಸಿದಾಗ ವಿರೋಧಿಸುವಂತೆ, ಅದನ್ನು ಎದುರಿಸುವಂತೆ, ಕಲಹ ಮಾಡುವುದು, ಮೇಲ್ಜಾತಿಯವರಿಂದ ನಡೆದುಕೊಂಡು ಬರುತ್ತಿದ್ದ ಸಂಪ್ರದಾಯವನ್ನು ಮೀರುವುದು ಮತ್ತು ಅದನ್ನು ಕಲಹ ಸೌಂದರ್ಯದೊಂದಿಗೆ ಪ್ರಕಟಿಸುವುದು ಜಾತಿಯನ್ನು ನಾಶ ಪಡಿಸುವುದು, ದಲಿತ ಸಮಸ್ಯೆಯನ್ನು ಮಾತಾಡುವುದು, ದಲಿತರ ಬಿಡುಗಡೆಯನ್ನು ಹೋರಾಟದ ಒಂದು ಅಂಶವಾಗಿ ಮಾರ್ಪಡಿಸುವುದು.

"ದಲಿತ ಸಾಹಿತ್ಯದ ಮುಖ್ಯ ಉದ್ದೇಶ ದಲಿತರ ಬಿಡುಗಡೆ, ಅದರೊಂದಿಗೆ ಸಾಮಾನ್ಯ ಉದ್ದೇಶ ತಳಸ್ತರದವರ ಎಲ್ಲರ ಬಿಡುಗಡೆ" (ರಾಜ್‌ಗೌತಮನ್, ದಲಿತ್ ಪನ್ಪಾಡು, ಪು. ೯೭) ಎಂದು ದಲಿತ ಸಾಹಿತ್ಯದ ಉದ್ದೇಶವನ್ನು ಕುರಿತು ರಾಜ್ ಗೌತಮನ್ ಈ ರೀತಿ ತಿಳಿಸುತ್ತಾರೆ.

ದಲಿತತ್ವ ಮತ್ತು ಸಾಹಿತ್ಯ

ದಲಿತರ ಕುರಿತ ಚಿಂತನೆಗಳು ಸಂಗಂ ಸಾಹಿತ್ಯದಲ್ಲಿ, ಭಕ್ತಿ ಸಾಹಿತ್ಯ ಹಾಗೂ ಆ ನಂತರ ಬಂದ ಸಾಹಿತ್ಯದಲ್ಲಿ ಅವರ ಜೀವನ ಕುರಿತು ಸಂಕ್ಷಿಪ್ತವಾಗಿ ಚಿತ್ರಿಸಿರುವುದನ್ನು ಕಾಣಬಹುದು. 'ಇಳಿಜನರ್', 'ಇಳಿಪಿರಪ್ಪಾಳನ್', 'ಪುಲೈಯನ್', 'ಪುಲತ್ತಿ' ಮುಂತಾದ ಪದಗಳು ದಲಿತರನ್ನು

ಸೂಚಿಸುತ್ತವೆ. 'ಪೆರಿಯ ಪುರಾಣ'ದಲ್ಲಿ ನೀಲಕಂಠ ಯಾಳಪ್ಪಾನಾರ್, ತಿಣ್ಣನ್, ನಂದನ್ ಮುಂತಾದ ಪಾತ್ರಗಳು ನಾಯನ್ಮಾರ್‌ಗಳಾಗಿ ಬರುವುದನ್ನು ಕಾಣಬಹುದು. ತಮಿಳು ಸಾಹಿತ್ಯ ಎಂಬಲ್ಲಿ ದಲಿತ ಸಾಹಿತ್ಯ ಎನ್ನುವುದು ಒಂದು ಚಿಕ್ಕ ದಳದಲ್ಲಿ ದಾಖಲಾಗುತ್ತದೆ. ಆದರೆ ದಲಿತ ಸಾಹಿತ್ಯ ಇಲ್ಲದೆ ತಮಿಳು ಸಾಹಿತ್ಯ ಎಂಬುದು ಸಂಪೂರ್ಣತೆಯನ್ನು ಹೊಂದುವುದಿಲ್ಲ ಎಂಬುದನ್ನು ಗಮನಿಸಬೇಕು. ಕಳೆದ ಶತಮಾನದವರೆಗೆ ಬ್ರಾಹ್ಮಣರು ಮತ್ತು ಮೇಲ್ಜಾತಿಯವರೆ ತುಂಬಿದ ಕಾರಣ ಅಂದಿನ ಸಮುದಾಯ ಚಿಂತನೆಯನ್ನು ಕಾಣಬಹುದಾಗಿತ್ತು. ಆದರೆ ದಲಿತ ಸಾಹಿತ್ಯದಿಂದ ತಮಿಳು ಸಾಹಿತ್ಯದಲ್ಲಿ ದಲಿತರ ಅನುಭವಗಳನ್ನು ತಿಳಿದುಕೊಳ್ಳಬಹುದಾಗಿದೆ.

ದಲಿತ ಸಾಹಿತ್ಯ ಮತ್ತು ಜಾತಿ ವಿನಾಶ

ದಲಿತ ಸಾಹಿತ್ಯ ಎಂಬುದು ಜಾತಿ ವಿರೋಧಿ ಸಾಹಿತ್ಯ ಎಂಬ ವಾದವಿದೆ. ಆದರೆ ಅದು ವಿರೋಧಿ ಸಾಹಿತ್ಯ ಎನ್ನುವುದಕ್ಕಿಂತ ಜಾತಿ ವಿನಾಶದ ಸಾಹಿತ್ಯ ಎಂದರೆ ಹೆಚ್ಚು ಸೂಕ್ತ. ಜಾತಿ ವಿಭಾಗಗಳನ್ನು ಸಂಪೂರ್ಣವಾಗಿ ನಾಶ ಪಡಿಸಿದಾಗಲೇ ಜಾತಿ ಇಲ್ಲದ ಸಮಾಜವನ್ನು ನಿರ್ಮಿಸಬಹುದು. ಒಬ್ಬ ಗುಲಾಮ ತಾನು ಬಿಡುಗಡೆ ಹೊಂದಿದಾಗ ಕೇವಲ ಅವನು ಗುಲಾಮತನದಿಂದ ಬಿಡುಗಡೆ ಹೊಂದದೆ ಯಜಮಾನನನ್ನು ಗುಲಾಮತನ ನಡೆಸುವುದರಿಂದ ಬಿಡುಗಡೆಗೊಳಿಸುತ್ತಾನೆ. ಒಬ್ಬ ಶ್ರಮ ಜೀವಿಯು ತಾನು ಬಿಡುಗಡೆಗೊಂಡಾಗ ಯಜಮಾನ ವರ್ಗವನ್ನು ಬಿಡುಗಡೆಗೊಳಿಸುತ್ತಾನೆ. ಅಲ್ಲಿ ಮಾನವೀಯತೆ ಬಿಡುಗಡೆಯಾಗಿರುತ್ತದೆ ಎಂಬುದು ಮಾರ್ಕ್ಸ್ ಸಿದ್ಧಾಂತ. ಅದರಂತೆ ದಲಿತ ಎಂಬ ಜಾತಿ ತನ್ನನ್ನು ತಾನು ಇಲ್ಲವಾಗಿಸಿದಾಗ ಬೇರೆ ಜಾತಿಯನ್ನು ಇಲ್ಲವಾಗಿಸುತ್ತಾನೆ. ಜಾತಿ ನಾಶ ದಲಿತರ ಮುಖ್ಯ ಉದ್ದೇಶ. ದಲಿತ ಒಂದು ಜಾತಿ ಅಲ್ಲ. ಆದ್ದರಿಂದ ದಲಿತ ಜಾತಿ ಸಾಹಿತ್ಯವಲ್ಲ ಅದು ಜನರ ಸಾಹಿತ್ಯ.

ಯಾರು ಬರೆಯುವುದು ದಲಿತ ಸಾಹಿತ್ಯ

ದಲಿತ ಸಾಹಿತ್ಯವನ್ನು ಯಾರು ಬರೆಯಬೇಕು ಎಂಬ ಪ್ರಶ್ನೆಗಳು ತಮಿಳು ಸಾಹಿತ್ಯ ವಲಯದಲ್ಲಿ ಕಂಡು ಬಂದಿತು. ಅದರ ಜೊತೆಯಾಗಿ ಯಾರು ದಲಿತರು? ದಲಿತ ಸಾಹಿತ್ಯ ಎನ್ನುವುದು ದಲಿತರ ಕುರಿತ ಬರಹವೋ? ಅಥವಾ ದಲಿತರು ಬರೆಯುವ ಬರಹವೋ? ದಲಿತರಲ್ಲದವರು ಏಕೆ ದಲಿತ ಸಾಹಿತ್ಯವನ್ನು ಬರೆಯಬಾರದು? ಎಂಬುದಾಗಿ ಹಲವು ಪ್ರಶ್ನೆಗಳು ಹುಟ್ಟಿಕೊಂಡವು. ಪ್ರಶ್ನೆಗಳು ಸಾಮಾನ್ಯವಾಗಿ ಕಂಡರು ಸೂಕ್ಷ್ಮವಾಗಿ ಗಮನಿಸಿದಾಗ ಹಲವು ದ್ವಂದ್ವಗಳಿಗೆ ಕಾರಣವಾಗುತ್ತವೆ.

ಇತರ ಸಾಹಿತ್ಯಗಳಿಗಿಂತ ಭಿನ್ನವಾಗಿ ತನಗೆಂದು ಒಂದು ವೇದಿಕೆಯನ್ನು ನಿರ್ಮಿಸಿಕೊಂಡಿರುವ ದಲಿತ ಸಾಹಿತ್ಯವನ್ನು ಬರೆಯುವಲ್ಲಿ ಹಲವು ತೊಂದರೆಗಳು ಕಾಣಿಸುತ್ತವೆ.

ಕೇಸವನ್ ಅವರು ದಲಿತ ಸಾಹಿತ್ಯ ಕುರಿತು ಹೀಗೆ ಹೇಳುತ್ತಾರೆ. "ದಲಿತರು ಬರೆಯುವ ಸಾಹಿತ್ಯವು ದಲಿತರನ್ನು ಕುರಿತು ಇತರರೂ ಬರೆಯುವ ಸಾಹಿತ್ಯವು ದಲಿತ ಸಾಹಿತ್ಯವೆಂದೇ

೧೯೫೮ರಲ್ಲಿ ತೀರ್ಮಾನಿಸಲಾಯಿತು. ತಲಸ್ಪರ್ಶೀಯರು ಬರೆಯುವ ಎಲ್ಲವನ್ನು ತಳಸಮುದಾಯವನ್ನು ಕುರಿತ ಎಲ್ಲಾ ಬರಹಗಳು ದಲಿತ ಸಾಹಿತ್ಯವೆಂದು ಒಪ್ಪಿಕೊಳ್ಳಲಾಗುವುದಿಲ್ಲ. ಯಾವ ಅಂಶದಲ್ಲಿ ಮೂಲದಲ್ಲಿ ಚಿಂತನೆಯಲ್ಲಿ ದಲಿತ ಜೀವನವನ್ನು ಚಿತ್ರಿಸಲಾಗುತ್ತದೆ ಎಂಬುದೇ ಪ್ರಧಾನವಾಗಿರುತ್ತದೆ." (ಕೋ. ಕೇಸವನ್, ತಾಳ್ತ್ತಪ್ಪಟ್ಟೋರ್ ಇಲಕ್ಕಿಯಂ, ಪು. ೧೫) ಎನ್ನುವ ಅವರ ಮಾತಿನಲ್ಲಿ ದಲಿತ ಸಾಹಿತ್ಯದ ಅಗಲ ಮತ್ತು ಆಳವನ್ನು ವಿವರಿಸುವ ಪ್ರಯತ್ನ ಮಾಡುತ್ತಾರೆ.

ದಲಿತರಲ್ಲದವರು ಬರೆಯುವುದು ದಲಿತ ಸಾಹಿತ್ಯವೇ?

ದಲಿತರಲ್ಲದವರು ಬರೆಯುವುದು ದಲಿತ ಸಾಹಿತ್ಯವೇ ಎನ್ನುವ ಪ್ರಶ್ನೆ ಎದುರಾದಾಗ ಪ್ರಮುಖ ತಮಿಳು ವಿದ್ವಾಂಸರಾದ ಸುಭಮಂಗಳ ಅವರು ಈ ರೀತಿಯಾಗಿ ಪ್ರತಿಕ್ರಿಯಿಸುತ್ತಾರೆ. "ದಲಿತ ಸಾಹಿತ್ಯ ಎಂದು ಮಾತಾಡುವಾಗ ದಲಿತ ಸಾಹಿತ್ಯ ಎಂಬುದನ್ನು ದಲಿತರೇ ಬರೆಯಬೇಕು ಎಂಬ ಒಂದು ಧ್ವನಿಯನ್ನು ಕೆಲವರು ಒತ್ತಿ ಹೇಳುತ್ತಾರೆ. ಬರೆಯಬೇಕು ಎಂದು ಹೇಳಿದಾಗ ಬರೆಯುವುದಕ್ಕೆ ಅಭ್ಯಾಸ ಅವಶ್ಯಕ. ಹಲವರಿಗೆ ಅನುಭವ ಇದ್ದರೂ ಬರೆಯಲಿಕ್ಕೆ ಆಗುವುದಿಲ್ಲ. ದಲಿತರಲ್ಲಿ ಬರೆಯಲು ಬರುವವರಿಗೆ ಸಾಹಿತ್ಯದ ಅಭ್ಯಾಸ ಇರಬೇಕು. ಅವರು ಓದಿ ಕೆಲಸಕ್ಕೆ ಬರುವಾಗಲೇ ಜೊತೆಗೇ ಮಧ್ಯಮ ವರ್ಗದವರ ಗುಣಗಳೂ ಬಂದಿರುತ್ತದೆ. ಆದ್ದರಿಂದ ಈ ಓದಿದ ವರ್ಗದವರು ಬರೆಯುವುದು ನಿಜವಾದ ದಲಿತ ಸಾಹಿತ್ಯವಾಗಿ ಇರುತ್ತದೆಯೋ ಎಂಬ ಪ್ರಶ್ನೆಗೆ ಸ್ಥಾನವಿದೆ. ಇದ್ದರೂ ದಲಿತ ಒಬ್ಬರಿಂದ ತಮ್ಮ ಜನರ ಕುರಿತು ಸರಿಯಾಗಿ ಬರೆಯಬಹುದು ಎನ್ನುವುದನ್ನು ನಾವು ಒಪ್ಪಿಕೊಳ್ಳೋಣ. ಸಾಹಿತ್ಯಿಕ ಯುಕ್ತಗಳನ್ನು ಸರಿಯಾಗಿ ಬರಲಿಲ್ಲ ಎಂದು ನಾವು ಹೇಳುವುದು ಬೇಡ. ಮೊದಲು ಅವರು ಬರೆಯಲಿ, ಮುಂದುವರೆದು ಸಾಹಿತ್ಯದ ಪಕ್ವತೆ ಬರಲಿ ಇವರೂ ದಲಿತ ಕಲೆ ಸಾಹಿತ್ಯ ದಾಖಲಿಸಲು ಆಗುತ್ತದೆ. ಮತ್ತೊಂದು ದಲಿತ ಸಾಹಿತ್ಯವನ್ನು ಸಾಹಿತ್ಯದ ಬಗ್ಗೆ ಆಸಕ್ತಿಯುಳ್ಳ ಯಾರಾದರೂ ಬರೆಯಬಹುದು. ದಲಿತರು ಮಾತ್ರ ಬರೆಯಬೇಕು–ಇತರರು ಬರೆಯಬಾರದು ಎಂದು ಹೇಳುವುದು ಒಂದು ಕೊಲೆಗಾರನ ಜೀವನವನ್ನು ಒಬ್ಬ ಕೊಲೆಗಾರ ಮಾತ್ರ ಬರೆಯಲು ಆಗುತ್ತದೆ ಒಂದು ಹೆಣ್ಣಿನ ಜೀವನವನ್ನು ಒಂದು ಹೆಣ್ಣು ಮಾತ್ರ ಬರೆಯಬೇಕು ಎಂಬ ಸಮಸ್ಯೆಗಳು ಹೋಗಿಬಿಡುತ್ತದೆ. ಹೊಸ ತತ್ವ ಅಭಿಪ್ರಾಯದ ಗೊಂದಲ ಪ್ರಾರಂಭವಾಗುತ್ತದೆ. (ಜ್ಞಾನಿ, ನೇರ ಸಂವಾದ, ಸುಭಮಂಗಳ, ಆಗಸ್ಟ್ ೧೯೯೫, ಪು. ೧೪–೧೫) ಎಂದು ದಲಿತ ಸಾಹಿತ್ಯವನ್ನು ದಲಿತರೇ ಬರೆಯಬೇಕು ಎಂದು ಹೇಳುವಾಗ ಅದರಲ್ಲಿರುವ ಗೊಂದಲವನ್ನು ವಿವರಿಸುವ ಪ್ರಯತ್ನ ಮಾಡುತ್ತಾರೆ.

"ದಲಿತ ಸಾಹಿತ್ಯವೆಂದೇಕೆ ಪ್ರತ್ಯೇಕಿಸಿ ನೋಡುವುದು, ಧರ್ಮ ಜನರಿಗೆ ಅಫೀಮು ಆಗಿರುವಂತೆಯೇ ಜಾತಿ, ಮತ ಧರ್ಮದ ಹಣೆಪಟ್ಟಿಗಳಿಂದ ಪರಿಚಯಿಸಿಕೊಂಡು ಸಾಹಿತ್ಯ ರಚನೆ ಮಾಡುವುದರ ಅಗತ್ಯವಿಲ್ಲ. ದಲಿತ ಸಾಹಿತ್ಯವೆಂದು ಪ್ರತ್ಯೇಕವಾಗಿ ಉಚ್ಛಸ್ಥಾಯಿಯಲ್ಲಿ ಕೂಗಾಡುವುದು ಬೇಡ. ಸಮಾಜದಲ್ಲಿನ ರಾಜಕೀಯ, ಸಾಂಸ್ಕೃತಿಕ ದಮನತೆಯಲ್ಲಿ ಕಸಿದುಕೊಂಡವರ

ಬದುಕನ್ನು ಮರಳಿಸುವುದು ದಲಿತೇತರರು ಮಾತ್ರವಲ್ಲ ದಲಿತರ ಕರ್ತವ್ಯವು ಆಗಿದೆ." (ಷಣ್ಮುಖ ಸುಂದರಂ, ದಲಿತತ್ವ, ಪು. ೦೭) ಎಂದು ಹೇಳುವುದರ ಹಿಂದಿನ ಸಾಮಾಜಿಕ ಕಾಳಜಿಯನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡರೆ ಮಾತ್ರ ಸಮಾಜದಲ್ಲಿ ಭಿನ್ನತೆಯನ್ನು, ಬಿರುಕುಗಳನ್ನು, ಅಸಮಾನತೆಗಳನ್ನು ನೋಡಲು ಸಾಧ್ಯವಾಗುತ್ತದೆ. ಒಪ್ಪಿತ ಸಮಾಜದ ವಿರುದ್ಧ ಧ್ವನಿಯಾದರೆ ಅದನ್ನು ಅಡಗಿಸುವ ಕಾರ್ಯ ಚರಿತ್ರೆಯ ಉದ್ದಕ್ಕೂ ಕಾಣಿಸುತ್ತದೆ ಎನ್ನುವ ಅಂಶವನ್ನು ಕುರಿತು ಷಣ್ಮುಖ ಸುಂದರಂ ಹೇಳುತ್ತಾರೆ.

ದಲಿತ ಸಾಹಿತ್ಯವನ್ನು ದಲಿತರೇ ಬರೆದರೆ ಅದಕ್ಕೆ ಹೆಚ್ಚು ಗಟ್ಟಿತನ ಬರುತ್ತದೆ. ಯಾರು ಕಷ್ಟಗಳನ್ನು ಅನುಭವಿಸುತ್ತಾರೋ ಅವರಿಗೆ ಮಾತ್ರ ಕಷ್ಟದ ಬಿಡಿ ಬಿಡಿ ವಿವರಗಳು ತಿಳಿದಿರುತ್ತದೆ ಎನ್ನುವ ವಿಚಾರವನ್ನು ರಾಜ್‌ಗೌತಮ್ ಹೀಗೆ ಹೇಳುತ್ತಾರೆ. "ದಲಿತ ಸಾಹಿತ್ಯ ಬರೆಯಲು ಹುಟ್ಟಿನಿಂದಲೇ ಅರ್ಹತೆ ಪಡೆದವನು. ಅದೇ ಸಮಯ ದಲಿತನಾಗಿ ಹುಟ್ಟಿದ್ದರೂ ಮೇಲ್ವರ್ಗದ ಸಾಹಿತ್ಯ ರಸದಿಂದ ಸಾರ ಇಳಿಸಿ ದಲಿತರ ವಿರೋಧವಾಗಿಯೂ ಸಾಹಿತ್ಯವನ್ನು ಒಬ್ಬ ದಲಿತನಿಂದ ಬರೆಯಲು ಸಾಧ್ಯ. ಇದಕ್ಕೆ ಸಮೀಪದ ಉದಾಹರಣೆ ಇಮಯಂ ಎಂಬ ದಲಿತ ಬರೆದ 'ಕೋವೇರು ಕಳುದೈಗಳ್' ಎಂಬ ಕಾದಂಬರಿ ನಂತರ ಜಾತಿಯಲ್ಲಿ ದಲಿತನಾಗಿ ಹುಟ್ಟದಿದ್ದರು ತನ್ನನ್ನು ದಲಿತನಾಗಿ ಭಾವಿಸಿಕೊಂಡವರು ದಲಿತ ಸಾಹಿತ್ಯವನ್ನು ಬರೆಯಬಹುದು. ಪಸುಮಲೈ, ಇನ್ಕುಲಾಬ್, ಪಾ. ಜಯಪ್ರಕಾಶಂ, ಮಾರ್ಗು, ಅ.ಮಾರ್ಕ್ಸ್ ಮುಂತಾದವರು ಈ ರೀತಿಯವರು (ರಾಜ್ ಗೌತಮನ್, ಪೊಯ್+ಅಪದ್ದಂ= ಉಣ್ಮೈ, ಪು. ೬೮-೬೯) ಎಂದು ದಲಿತರಾಗಿ ಹುಟ್ಟಿದವರು ಮಾತ್ರ ದಲಿತ ಸಾಹಿತ್ಯವನ್ನು ಬರೆಯಲು ಅರ್ಹರಾಗಿರುತ್ತಾರೆ ಎನ್ನುವ ವಾದವನ್ನು ಒಪ್ಪಲಿಕ್ಕೆ ಆಗದು ಎಂದು ರಾಜ್ ಗೌತಮನ್ ಹೇಳಿದ್ದಾರೆ.

ದಲಿತರು ಬರೆಯುವುದೇ ದಲಿತ ಸಾಹಿತ್ಯ

"ದಲಿತ ಸಾಹಿತ್ಯ ದಲಿತರಿಂದ ಮಾತ್ರ ಬರೆಯಬೇಕು ಎಂಬುದರ ಕುರಿತು ಪ್ರಶ್ನೆ ಎಲ್ಲರಲ್ಲಿ ಕೇಳುವುದೇ ವಿಚಿತ್ರವಾಗಿದೆ. ದಲಿತರಿಂದಲೇ ದಲಿತ ಸಾಹಿತ್ಯ ಸಂಪೂರ್ಣತೆ ಪಡೆಯುತ್ತದೆ. ಎಂದರೂ ಹುಟ್ಟಿನ ಆಧಾರದಿಂದ ಮಾತ್ರ ತೀರ್ಮಾನಿಸುವ ವಿಷಯವಲ್ಲ ಇದು. ಬದಲಾಗಿ, ದಲಿತ ಚಿಂತನೆಯನ್ನು ಉಳ್ಳವರಿಂದಲೇ ದಲಿತ ಸಾಹಿತ್ಯವನ್ನು ಬರೆಯಬಹುದು ಎನ್ನುವುದೇ ಸತ್ಯ. ದಲಿತ ಚಿಂತನೆ ಎಂಬುದು ರಾಜಕೀಯ ಚಿಂತನೆಗಳನ್ನು ತನ್ನ ಒಳಗಿರಿಸಿಕೊಂಡ ಉದ್ದೇಶಗಳಿಂದ ಕೂಡಿದ್ದು. ದಲಿತ ಸಾಹಿತ್ಯವಾದಿಗಳು ಎನ್ನುವವರು ದಲಿತ ಬಿಡುಗಡೆಗಾಗಿ ದಲಿತ ಚಳುವಳಿಗಳೊಡನೆ ದಲಿತ ಬಿಡುಗಡೆಯ ಹೋರಾಟಗಳಲ್ಲಿ ಯಾವುದಾದರೊಂದು ಬಗೆಯಲ್ಲಿ ಭಾಗಿ ಆಗುವವರಾಗಿರಬೇಕು ಎಂಬುದೇ ನಮ್ಮ ಬಯಕೆಯಾಗಿದೆ. ಹಾಗಲ್ಲದೆ ಎಲ್ಲೋ, ಹೇಗೋ ಇದ್ದುಕೊಂಡು ಬರವಣಿಗೆ ಪ್ರಕಟಿಸುವುದರ ರೀತಿ ಯಾವ ಜನರಿಗಾಗಿ ಬರೆಯಲಾಗುತ್ತಿದೆಯೋ ಆ ಜನರಿಂದಲೇ ಅಲಕ್ಷ್ಯವಾಗುತ್ತದೆ. ಬರಹಗಾರ ಸೆ.ಯೋಗನಾದನ್ ಹೇಳುವಂತೆ, ತಲಸ್ಪರ್ಶಿಯರ ಗುಂಪಿಗೆ ಸೇರಿದ ಕೆಲವರು ವಂಚನೆಯ ರಾಜಕೀಯಕ್ಕೆ, ಕಲೆ

ಆಧಾರವಾಗಿ ನಿಲ್ಲುತ್ತಿದ್ದಾರೆ ಎನ್ನುವುದನ್ನು ಇಲ್ಲಿ ಗಮನಿಸಬೇಕು ಎಂಬ ಮಾತುಗಳಿಂದ ದಲಿತರಾಗಿ ಹುಟ್ಟಿದವರು ಹೇಗೆ ಬರೆದರೂ ದಲಿತ ಸಾಹಿತ್ಯವಾಗುವುದಿಲ್ಲ. ದಲಿತ ಸಾಹಿತ್ಯ ಎನ್ನುವುದು ತನ್ನೊಳಗೆ ಹೋರಾಟ ಗುಣ ಮತ್ತು ಐಕ್ಯತೆಯ ಭಾಗವನ್ನು ಒಳಗೊಂಡಿರಬೇಕು. ಅಸ್ಪೃಶ್ಯತೆ, ಸ್ತ್ರೀ ಗುಲಾಮತನ, ಜಾತಿ, ಮತ ಎಂದು ಸಾಂಸ್ಕೃತಿಕವಾಗಿ ನಿಗ್ರಹಿಸುವ ರೀತಿಯ ವಿರುದ್ಧ ಕೋಪಪಡುವ–ಕೋಪಗೊಳ್ಳುವಂತೆ ಮಾಡುವುದರಿಂದ ಕೂಡಿರಬೇಕು. ಈ ರೀತಿಯ ಅಂಶಗಳನ್ನು ಒಳಗಿರಿಸಿಕೊಳ್ಳದ ಸಾಹಿತ್ಯ ದಲಿತರಿಂದ ಬರೆದರೂ ಅದು ದಲಿತ ಸಾಹಿತ್ಯವಾಗುವುದಿಲ್ಲ." (ಉಂಜೈರಾಸನ್, ಸುಭಮಂಗಳ್, ನವೆಂಬರ್ ೧೯೯೩, ಪು. ೧೦೧) ಎಂದು ದಲಿತ ಸಾಹಿತ್ಯ ದಲಿತರು ಬರೆದಾಗ ಹೇಗಿರಬೇಕೆಂದು ಉಂಜೈರಾಸನ್ ತಿಳಿಸುವುದನ್ನು ಕಾಣಬಹುದು.

"ದಲಿತ ಸಾಹಿತ್ಯವನ್ನು ದಲಿತರು ಮಾತ್ರ ಬರೆಯಬಹುದು ಎನ್ನುವುದು ತಪ್ಪು. ದಲಿತರ ನೋವನ್ನು ಅರಿತುಕೊಂಡ ಯಾರು ಬೇಕಾದರು ಬರೆಯಬಹುದು ಎಂಬ ವ್ಯಾಖ್ಯಾನವನ್ನು ಎರಡು ಗುಂಪಿನವರು ಬೇರೆ ಬೇರೆ ರೀತಿಯಾದ ವಾದ ಮಾಡುತ್ತಾರೆ. ಒಂದು ಕಡೆ ಸುಂದರ ರಾಮಸಾಮಿ, ಜ್ಞಾನಿ ಮುಂತಾದವರು ಇನ್ನೊಂದೆಡೆ ಸಿದ್ಧಲಿಂಗಯ್ಯ, ಡಾಗ್ಲೆ ದಲಿತ ಸಾಹಿತ್ಯದ ಮುಂಚೂಣಿಗಳು ದಲಿತ ಸಾಹಿತ್ಯದ ಅವಶ್ಯಕತೆಯನ್ನು ತಿರಸ್ಕರಿಸುವವರು ಈ ವಿಷಯವನ್ನು ಗಣನೆಗೆ ತೆಗೆದುಕೊಂಡಾಗ ಈ ಮಾತನ್ನು ಬೆಲೆಕಟ್ಟಬೇಕು. ದಲಿತರು ಅನುಭವಿಸುವ ಹಲವು ಸಮಸ್ಯೆಗಳನ್ನು ಇತರರು ಅರ್ಥಮಾಡಿಕೊಳ್ಳಲಾಗುವುದಿಲ್ಲ. ಆಂಗ್ಲ ಪತ್ರಿಕೆಯೊಂದಲ್ಲಿ ಕೆಲವು ವರ್ಷಗಳ ಹಿಂದೆ ಒಬ್ಬ ದಲಿತ ಪತ್ರ ಬರೆದಿದ್ದ. ನನಗೆ ಏನೇ ವಸತಿ ಅವಕಾಶ ಸಿಕ್ಕರೂ ನೀನು ಯಾವ ಜಾತಿ ಎಂಬ ಪ್ರಶ್ನೆ ಯಾವಾಗಲೂ ನನ್ನನ್ನು ಒಂದು ಕ್ಷಣ ನಶಿಸಿ ಕುಗ್ಗಿ ನಿಲ್ಲಿಸುತ್ತದೆ. ಅದನ್ನು ನಿಮ್ಮಿಂದ ತಿಳಿದುಕೊಳ್ಳಲಾಗುವುದಿಲ್ಲ. ಇದನ್ನು ಸ್ವಲ್ಪ ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬೇಕು. ಹಸಿವನ್ನು ಕೂಡ ಒಬ್ಬ ದಲಿತ ತಿಳಿದಷ್ಟು ಮೇಲ್ಜಾತಿಯವರು ತಿಳಿದಿರುವುದಿಲ್ಲ. ಬರಹಗಾರರಲ್ಲಿ ಒಬ್ಬರಾದ ಮಣ್ಣದಾಸನ್‌ರ ಬಳಿ ಅವರ ಸ್ನೇಹಿತ ಲಿಂಗಂ ತಾನು ಒಬ್ಬ ದಲಿತನಾಗಿದ್ದು ತನ್ನ ಯೌವ್ವನ ಕಾಲದಲ್ಲಿ ಅನುಭವಿಸಿದ ಶೋಷಣೆಗಳನ್ನು ಹೇಳಿ, ಅದನ್ನು ಕಥೆಯಾಗಿ ಬರೆಯಬೇಕು ಎಂದು ಕೇಳಿಕೊಂಡಾಗ, 'ಅದನ್ನು ನನ್ನಿಂದ ಬರೆಯಲಾಗುವುದಿಲ್ಲ ನೀವೇ ಬರೆಯಬೇಕು' ಎಂದು ಹೇಳಿದ್ದನ್ನು ದಾಖಲಿಸುತ್ತಾರೆ. ದಲಿತರ ಸಂಕಷ್ಟಗಳನ್ನು ಸಂಪೂರ್ಣವಾಗಿ ದಾಖಲಿಸಬೇಕಾದರೆ ಅದು ದಲಿತರಿಂದ ಮಾತ್ರ ಸಾಧ್ಯ ಎಂಬುದು ವಾಸ್ತವತೆ ಇರುತ್ತದೆ. ತನ್ನನ್ನು ಸಂಪೂರ್ಣವಾಗಿ ದಲಿತನಾಗಿ ಒಗ್ಗಿಸಿಕೊಂಡ ಒಬ್ಬನಿಂದ ಮಾತ್ರ ದಲಿತತ್ವನ್ನು ಭಾವಿಸಬಹುದು. ಸೆರೆಮನೆಯಲ್ಲಿ ಇರುವಾಗ ಮಲ ತೆಗೆಯುವ ಕೆಲಸವನ್ನು ಬಯಸಿ ತೆಗೆದುಕೊಂಡನಂತೆ. ಮಲ ತೆಗೆಯುವ, ಹೆಣ ಸುಡಲು ನಾವು ತಯಾರಾದರೆ ಒಂದು ವೇಳೆ ದಲಿತನಾಗಿ ಭಾವಿಸಬಹುದು ದಲಿತ ಸಾಹಿತ್ಯ ಎನ್ನುವುದು ತಮಿಳಿನಲ್ಲಿ ಈಗ ಆರಂಭವಾಗುತ್ತದೆ" (ಅ.ಮಾರ್ಕ್ಸ್, ನೇರ ಸಂವಾದ, ಸುಭಮಂಗಳ, ಜುಲೈ, ೧೯೯೫, ಪು. ೧೫) ಎಂದು ಮಾರ್ಕ್ಸ್‌ರವರು ವ್ಯಾಖ್ಯಾನಿಸುತ್ತಾರೆ.

ದಲಿತ ಬರಹದ ಕುರಿತು ತನಿಗೈ ಸೆಲ್ವನ್ ವಿವರಿಸುವಂತೆ "ದಲಿತರಲ್ಲದವರಿಂದ ದಲಿತನನ್ನು ಕುರಿತು ಬರೆಯಲಾಗದು. ಆದರೂ ದಲಿತನ 'ಸುತ್ತಲು ಇರುವುದನ್ನು' ಬರೆಯಲು ಅವರಿಂದ ಸಾಧ್ಯ. ದಲಿತನಾಗಿ ಜೀವಿಸಿದವನ ಅನುಭವದ ದಾಖಲೆಯಾಗಿ ದಲಿತ ಕುರಿತ ಸಾಹಿತ್ಯ ಇರುತ್ತದೆ. ಊರಿನಿಂದ ಕೇರಿಯನ್ನು ನೋಡಿದ ಅನುಭವ, ಪಕ್ಕದಿಂದ ದಲಿತನನ್ನು ಭಾವಿಸಿದ ಅನುಭವ ಮುಂತಾದವು ದಲಿತ ಸಾಹಿತ್ಯವನ್ನು ಬರೆಯಲು ಆಧಾರವಾಗಿ ಇರುತ್ತದೆ. ಉದಾಹರಣೆ ನೀಡಬಹುದು. ದಲಿತನನ್ನು ಕುರಿತ ಬರಹದ ನೋಟ ಇದು. ಮನೆಯ ಬಾಗಿಲನ್ನು ಬಿಚ್ಚಿ ಮಂಚವಾಗಿ ಬೀದಿಯಲ್ಲಿ ಹಾಕಿ, ಅದರ ಮೇಲೆ ಇಟ್ಟು ಕಡಿದ ಹಂದಿ ಮಾಂಸವನ್ನು ಪಾಲು ಹಾಕಿ ಎಲ್ಲಾ ಕುಟುಂಬಗಳಿಗೆ ಹಂಚಿಕೆ ಮಾಡಿ ಸಂತಸ ಪಡುವ ದಲಿತ ಸಾಮೂಹಿಕ ಸಂಬಂಧದ ದೃಶ್ಯ ಹಳೆಯ ಸಂಸ್ಕೃತಿಯ ಸಂಪ್ರದಾಯದ ಮುಂದುವರಿಕೆಯಾಗಿ ತಮಿಳು ಕೇರಿಗಳಲ್ಲಿ ನಡೆಯುವ ಒಂದು ಸಾಮಾಜಿಕ ಸಂದರ್ಭವನ್ನು 'ಪಳಯನ ಕಳಿದಳುಂ' ಕಾದಂಬರಿಯಲ್ಲಿ ಸೂಕ್ಷ್ಮವಾಗಿ ದಾಖಲಿಸಿರುವ ಶಿವಗಾಮಿಯ ದಲಿತ ಅನುಭವದ ಒಂದು ಅಂಶವಾದರು ಇಂದಿರಾ ಪಾರ್ಥಸಾರಥಿಯವರ 'ಕುರುದಿಪ್ಪುನಲ್'ನಲ್ಲಿ ಹುಡುಕಿದರೂ ಸಿಗದು. ಈ ಕೃತಿಯು ವೆಣ್‌ಮಣಿ ದಲಿತ್ ಕಥಾ ಪಾತ್ರಗಳ ಕುರಿತ ಕಥೆ ಎಂದು ಎಷ್ಟು ಜನ ಗೋಪುರ ಏರಿ ಕಿರುಚಿದರೂ, ಸಾಹಿತ್ಯ ಅಕಾಡೆಮಿ ಅದಕ್ಕೆ ಪ್ರಾಶಸ್ತ್ಯ ಕೊಟ್ಟರೂ, ಕೇರಿ ಗುಡಿಸಲುಗಳು ಜನರ ಸುಟ್ಟ ದುಃಖ ದೆಹಲಿಯಲ್ಲಿ ಏನು ಬಾಧಿಸಿತು ಯಾವ ರೀತಿ ಎಂದು ಇಂದಿರಾ ಪಾರ್ಥಸಾರಥಿ ಬರೆದಿದ್ದಾರೆ. ಆ ಬರವಣಿಗೆಯಲ್ಲಿ ಒಂದು ವೇಳೆ ಸಾಹಿತ್ಯಿಕ ಪ್ರಾಮಾಣಿಕತೆ ಪ್ರಕಟವಾಗಿರುತ್ತಿತ್ತು. ದಲಿತನನ್ನು ಕುರಿತ ಬರಹಕ್ಕೆ ಉದಾಹಣೆಯಾಗಿ ನನ್ನ ನೆನಪಿಗೆ ಬರುವ ಕಾದಂಬರಿ 'ವೇರಿಲ್ ಪಳುತ್ತ ಪಲಾ' ಸಮುತ್ತಿರಂ ಬರೆದದ್ದು. ತಮಿಳುನಾಡಿನಲ್ಲಿ ಕೇಂದ್ರ ಸರ್ಕಾರದ ಕಛೇರಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ದಲಿತ ಸ್ತ್ರೀಯು ಬ್ರಾಹ್ಮಣತ್ವದ ಅಹಂಕಾರವನ್ನು ಒಳಗಿರಿಸಿಕೊಂಡ ಮೇಲ್ಜಾತಿ ಸಹ ಕೆಲಸಗಾರರಿಂದ ಕೆಲಸದಲ್ಲೂ ಮನಸ್ಸಿನಲ್ಲೂ ಸಂಧಿಸುವ ದುಃಖಗಳು, ಅದನ್ನು ಹತ್ತಿರದಿಂದ ಕಾಣುವ ಒಬ್ಬ ಮಾನವೀಯತೆಯ ದಲಿತನಲ್ಲದ ಯುವಕ ಆ ಹೆಂಗಸಿನ ಭಾವನೆಗಳನ್ನು ಗೌರವಿಸಿ ಅವಳಿಗೆ ಅನುಕಂಪದಿಂದ ಸಹಾಯ ಮಾಡುವ ವಾಸ್ತವತೆ ಚಿತ್ರಿತವಾಗಿದೆ. ದಲಿತನ ಸುತ್ತಲಿನ ಕಾದಂಬರಿ ಎಂದು ಇದನ್ನು ಧಾರಾಳವಾಗಿ ಹೇಳಬಹುದು. ಮೇಲ್ಕಂಡ ಎರಡು ವಿಭಾಗಗಳನ್ನು ಗುರುತಿಸಿದಾಗ ಒಂದು ದಲಿತ ಸಾಹಿತ್ಯವೆಂದು ಮತ್ತೊಂದು ದಲಿತ ಕುರಿತ ಸಾಹಿತ್ಯ ಎಂದು ವಿಭಾಗಿಸಬಹುದು. (ತನಿಗೈ ಸೆಲ್ವನ್, ದಲಿತ್ತಿಯಂ ತಮಿಳಿಯಂ ಇಂದಿಯಂ, ಪು. ೩೬-೩೭) ಎಂದು ದಲಿತ ಕುರಿತ ಬರಹದ ಬಗೆಗೆ ತನಿಗೈ ಸೆಲ್ವನ್ ವಿವರಿಸುತ್ತಾರೆ.

"ದಲಿತ ಸಾಹಿತ್ಯ ಯಾವಾಗ ಸಂಪೂರ್ಣತೆ ಹೊಂದುತ್ತದೆ ಎಂದರೆ, ತಮ್ಮ ಮೇಲೆ ಹೇರಿಸಲ್ಪಟ್ಟ ಕಳಂಕದ ಗೋಡೆಗಳ ಭಾರವನ್ನು ಹೊರುವ ದಲಿತನಾಗಿದ್ದು ಅನುಭವಿಸಿ ಬರೆಯುವುದು ದಲಿತ ಸಾಹಿತ್ಯವಾಗುತ್ತದೆ. ಕುತ್ತಿಗೆಯಲ್ಲಿ ತೂಕವುಳ್ಳ ಘನವನ್ನು ಇರಿಸಿ ಸುತ್ತಾಡಿಸಿ ಚಾಟಿ ಏಟು

ಕೊಟ್ಟು ಸೆಗಣಿ ಹಾಲು ಕುಡಿದ ಪಾರಂಪರ್ಯದ ಅವಮಾನ ಅನುಭವಗಳನ್ನು ಮಾತಾಗಿಸಿ ಮೂಲವನ್ನು ಅಲ್ಲಾಡಿಸುವುದೇ ದಲಿತ ಸಾಹಿತ್ಯ. ಇತರರಿಗೆ ತಿಳಿದು, ಕೇಳಿ, ಕಲ್ಪನೆಯ ಮೂಲಕ ಬರೆಯಬಹುದು. ಸಂಕಷ್ಟ ಅನುಭವಿಸಿದವರು ನರಳುವಂತೆ ನಿಜವಾಗಿ ಇರುವುದಿಲ್ಲ. ಬೇಕಾದರೆ ಅದು ದಲಿತ ಬೆಂಬಲ ನೀಡುವ ಸಾಹಿತ್ಯ ಎಂದು ವಿಭಾಗಿಸಿ ಹೇಳಬಹುದು. ಚಪ್ಪಲಿ ಹಾಕಿಕೊಂಡವನಿಗೆ ಮಾತ್ರ ತಿಳಿಯುತ್ತದೆ ಅದು ಎಲ್ಲಿ ಕಡಿಯುತ್ತದೆಂದು" (ಪಾರಿ ಸೆಳಿಯನ್, ವಾಸಗರ್ ಕಡಿದಂ, ಸುಭಮಂಗಳ, ಆಗಸ್ಟ್ ೧೯೯೫ ಪು. ೫೫-೫೬) ಎಂದು ಒಬ್ಬ ದಲಿತನು ತನ್ನನ್ನು ದಲಿತನಾಗಿ ಭಾವಿಸಿ ಬರೆಯುವಾಗ ದಲಿತ ಸಾಹಿತ್ಯವಾಗುತ್ತದೆ ಎಂದು ಈ ರೀತಿ ಪಾರಿ ಸೆಳಿಯನ್ ತಿಳಿಸುತ್ತಾರೆ.

"ದಲಿತತ್ವ ಕುರಿತು, ಸ್ತ್ರೀವಾದ ಕುರಿತು, ಇತರೆ ಸಮೂಹದ ನೀತಿಗಳ ವಿಧಾನ, ರೀತಿಗಳ ಬಗೆಗಿನ ಎಲ್ಲಾ ಮುಂಚೂಣಿ ಚಿಂತನೆಗಳಲ್ಲೂ ನನಗೆ ಒಪ್ಪಿಗೆ ಇದೆ. ಸ್ತ್ರೀವಾದ ಸಮಸ್ಯೆಯನ್ನು ಒಬ್ಬ ಹೆಣ್ಣೇ ಸರಿಯಾಗಿ ಹೇಳಬಹುದು ಎನ್ನುವಂತೆ ದಲಿತತ್ವ ಕುರಿತ ವಿಷಯಗಳನ್ನು ಒಬ್ಬ ದಲಿತನು ಮಾತ್ರ ಉದ್ಧರಿಸಿ ಮಾತಾಡಬಹುದು. ಮುಂಚೂಣಿ ಸಾಹಿತ್ಯ ಎಂದು ರಾಜಕೀಯವಿದ್ದಂತೆ ದಲಿತ ಸಾಹಿತ್ಯ ಎಂದು ರಾಜಕೀಯವಿದೆ. ಇಂತಹ ನೆಲೆಗಳು ಬದಲಾಗಿ ಬರುತ್ತಲೇ ಇರುತ್ತದೆ. ಆದರೆ ಒಂದು ಚಳುವಳಿಯ ವ್ಯಾಖ್ಯಾನಗಳಲ್ಲಿ ಒಡಂಬಡಿಕೆ ಅಥವಾ ಭಿನ್ನಾಭಿಪ್ರಾಯ ಇದೆ ಎನ್ನುವುದನ್ನು ಇಟ್ಟುಕೊಂಡು ಆ ಚಳುವಳಿಗೆ ಸೇರಿದ ಬರಹಗಳನ್ನು ಸಾಹಿತ್ಯದ ಅರ್ಹತೆಯನ್ನು ನಾವು ತೀರ್ಮಾನಿಸಲು ಆಗುವುದಿಲ್ಲ. ಹಿಂದೆ ಮಾತಾಡಿದ್ದು ಎನ್ನುವುದಕ್ಕಾಗಿ ಮೂರನೇ ಹಂತದ ಬರಹವನ್ನು ಮೊದಲ ಹಂತದವೆಂದು ನಾವು ಒಪ್ಪಿಕೊಂಡಿದ್ದೇವೆಯೇ? ಅದರಂತೆಯೇ ಇದು ಒಪ್ಪಿಕೊಳ್ಳುವುದಕ್ಕೂ ತಿರಸ್ಕರಿಸುವುದಕ್ಕೂ ನೀನು ಯಾರು ಎಂಬ ಪ್ರಶ್ನೆ ಬರುತ್ತದೆ. ಏಕೆಂದರೆ ನಾನು ಮನುಷ್ಯನೆ ಮುಂದುವರೆದು ದಲಿತ ಎನ್ನುವುದು ಒಂದು ಸಮುದಾಯದ ಭಾಗ. ಆದರೂ ಎಲ್ಲಾ ಭಾಗದಲ್ಲೂ ದಲಿತರಿದ್ದಾರೆ ಅದನ್ನು ನಾವು ಗಣನೆಗೆ ತೆಗೆದುಕೊಂಡರೆ ಸಾಕು." (ನಾಂಜಿಲ್‌ನಾಡನ್, ನೇರ ಸಂವಾದ, ಸುಭ ಮಂಗಳ ಪು. ೧೫) ದಲಿತ ಸಾಹಿತ್ಯದ ಬರಹಗಾರರ ಕುರಿತು ನಾಂಜಿಲ್ ನಾಡನ್ ಈ ರೀತಿಯಾಗಿ ವಿವರಿಸುತ್ತಾರೆ.

ಕೆಲವೇ ಕೆಲವು ವರ್ಷಗಳ ಇತಿಹಾಸವಿರುವ ತಮಿಳು ದಲಿತ ಸಾಹಿತ್ಯ ತನ್ನ ಸ್ವ-ಅನುಭವದ ಬರವಣಿಗೆಯ ಮೂಲಕವೇ ಹೆಚ್ಚು ಹೆಚ್ಚು ವಿಸ್ತಾರ ಪಡೆದುಕೊಂಡಿತು. ಪರಿಣಾಮವಾಗಿ ತಮಿಳು ಸಾಹಿತ್ಯದಲ್ಲಿ ಭಿನ್ನ ಆಲೋಚನೆ ಕ್ರಮವನ್ನು ಬರಹ ಮತ್ತು ಭಾಷೆಯ ಮೂಲಕ ಸಮಾಜದ ಮುಂದೆ ದಲಿತರ ಸಮಗ್ರ ಜೀವನ ಚಿತ್ರಣವನ್ನು ತೆರೆದಿಟ್ಟಿದೆ. ಅದು ಅನೇಕ ಪ್ರಕಾರಗಳಲ್ಲಿ ಅಂದರೆ ಕಾವ್ಯ, ಕಥೆ, ಕಾದಂಬರಿ, ನಾಟಕ, ಆತ್ಮಕಥೆ ಮುಂತಾದ ಪ್ರಕಾರಗಳಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

ಈ ೩೦ ವರ್ಷಗಳ ಇತಿಹಾಸದಲ್ಲಿ ತಮಿಳು ದಲಿತ ಸಾಹಿತ್ಯ

ಅಳಗಿಯ ಪೆರಿಯವನ್ ಅವರು ತಮಿಳು ದಲಿತ ಸಾಹಿತ್ಯವನ್ನು, ಅದರ ವಿಸ್ತಾರತೆಯನ್ನು ಮೂರು ಹಂತಗಳಲ್ಲಿ ದಲಿತ ಲೇಖಕರೊಂದಿಗೆ ಪಟ್ಟಿ ಮಾಡುತ್ತಾರೆ.

ಮೊದಲ ತಲೆಮಾರು/ಆರಂಭ ಘಟ್ಟದ ಲೇಖಕರು

ಪೂಮಣಿ, ಶಿವಗಾಮಿ, ಬಾಮಾ, ರವಿಕುಮಾರ, ರಾಜಗೌತಮನ್, ಕೆ.ಎ. ಗುಣಶೇಖರನ್, ವಿಳಿ ಪಾ. ಇದಯವೆಂದರ್, ಪ್ರತಿಭಾ ಜಯಚಂದಿರನ್, ಊಂಜೈರಾಜನ್, ಅಭಿಮಾನಿ, ಇಂದಿರನ್, ಸೋ. ಧರ್ಮನ್, ರಾಜ ಮುರುಗು ಪಾಂಡಿಯನ್, ಚಂದ್ರು.

ಎರಡನೆ ತಲೆಮಾರಿನ ದಲಿತ ಲೇಖಕರು

ಇಮಯಂ, ಭಾರತಿ ವಸಂತನ್, ಅನ್ಬಾದವನ್, ಎನ್.ಟಿ.ರಾಜಕುಮಾರ್, ಅಳಗಿಯ ಪೆರಿಯವನ್, ಆದವನ್ ದೀಟ್ಚಣ್ಯ, ಶ್ರೀಧರ ಗಣೇಶನ್, ಟಿ.ಧರ್ಮರಾಜ, ಮದಿವಣ್ಣನ್, ಸುಧಾಕರ ಕಟಕ್, ಸುಕೃದಾರಾಣಿ, ಜಿ.ಪಿ.ಚಾಣಕ್ಯ, ವೆ.ವೆಂಕಟಾಚಲಂ, ಯಾಕ್ಕಿನ್, ಅರಂಗಮಲ್ಲಿಗಾ, ಮದಿಯಳಿಗನ್, ಪುತ್ತೂರ್ ಅಳಗಪ್ಪನ್, ತೈ.ಕಂದಸ್ವಾಮಿ, ಪಾಪ್ಲೆ ಅರಿವು ಕುಯಿಲ್, ಚಂದೈ ಸಾಂಬನ್.

ಮೂರನೇ ತಲೆಮಾರಿನ ದಲಿತ ಲೇಖಕರು

ಯಾಳಿನಿ ಮುನಿಸ್ವಾಮಿ, ಯಾಳನ್ ಆದಿ, ಎಸ್.ತೇನ್ ಮೊಳಿ, ಸ್ವಾಲಿನ್ ರಾಜಾಂಗಮ್, ಉಮಾದೇವಿ, ಗೌತಮ್‌ಸನ್ನಾ, ಅಧಿಯನ್, ಮುತ್ತುವೇಲು, ಮುತ್ತುಕಂದನ್, ದಿಂಡುಕಲ್ ತಮಿಳ್ ಪಿತ್ತನ್, ಪನಿಕೊಡಿ, ಅಮ್ಮಣಿ ದೊರೈ, ಗುಣ, ಮಾರಿಸೆಲ್ವರಾಜ(ಅಳಗಿಯ ಪೆರಿಯವನ್, ದಲಿತ ಸಾಹಿತ್ಯದ ಭವಿಷ್ಯಕಾಲ, ಪು. ೩). ಲೇಖಕರು ಅಧ್ಯಯನಕ್ಕೆ ಪೂರಕವಾಗಲಿ ಎನ್ನುವ ಉದ್ದೇಶದಿಂದ ಈ ವರ್ಗೀಕರಣಕ್ಕೆ ಮುಂದಾಗಿದ್ದಾರೆ.

ತಮಿಳು ದಲಿತ ಸಾಹಿತ್ಯವನ್ನು ಪ್ರವೇಶ ಮಾಡಿದ ದಲಿತರು ಆರಂಭದಲ್ಲಿ ತಮ್ಮ ಬರವಣಿಗೆಯ ಅಥವಾ ಸಾಹಿತ್ಯ ಬರವಣಿಗೆಯ ನಿಲುವುಗಳು ಏನು? ಅವುಗಳ ಸ್ವರೂಪ ಏನು? ಎನ್ನುವ ಕುರಿತು ಆಲೋಚನೆ ನಡೆಸಿದರು. ಈ ರೀತಿಯ ಚರ್ಚೆಯನ್ನು ರಾಜಗೌತಮನ್ ಎಂಬ ದಲಿತ ವಿದ್ವಾಂಸರು ಈ ರೀತಿಯಾಗಿ ಚರ್ಚಿಸಿದ್ದಾರೆ. "ಎಲ್ಲ ಬಗೆಯ ದಮನಕಾರಿ ನಡೆಗಳನ್ನು ಎದುರಿಸಿ ಇನ್ನೂ ತಾನು ದಮನಿಸಲು ಯಾರೂ ಉಳಿದಿಲ್ಲವೆಂಬ ನೆಲೆಗಟ್ಟಿನ ಉದ್ದೇಶವನ್ನು ಹೊಂದಿರುವುದನ್ನೇ ದಲಿತ ಸಾಹಿತ್ಯ ಎನ್ನಬಹುದು. ದಲಿತ ಸಾಹಿತ್ಯವು ಲಿಂಗತಾರತಮ್ಯವನ್ನು ಎತ್ತಿಹಿಡಿಯದೆ, ಲೈಂಗಿಕ ಶೋಷಣೆಯನ್ನು ಉತ್ಪ್ರೇಕ್ಷಿಸದೆ ಪವಿತ್ರೀಕರಿಸಿಕೊಳ್ಳದೆ ಬರವಣಿಗೆ ಮಾಡುವ ಗುಣವನ್ನು ಜನಪದ ಸಾಹಿತ್ಯದಿಂದಲೇ ಸ್ವೀಕರಿಸಬೇಕು" (ರಾಜಗೌತಮನ್, ದಲಿತೀಯ ವಿಮರ್ಶಾ ಲೇಖನಗಳು, ಪು. ೨೧) ಎನ್ನುವ ರಾಜಗೌತಮನ್ ಅವರು ದಲಿತ ಸಾಹಿತ್ಯದ ವಸ್ತು ಮತ್ತು ಆಶಯ ಏನಾಗಿರಬೇಕು ಮತ್ತು ನಾವು ನಮ್ಮ ಪೂರ್ವಜರಿಂದ

ಅಂದರೆ, ಜನಪದ ಸಾಹಿತ್ಯದಿಂದ ಪಡೆದಾಗ ಮಾತ್ರ ನಾವು ನಮ್ಮ ಮೂಲ ಸಂಸ್ಕೃತಿಗೆ ಹೆಚ್ಚು ಹೆಚ್ಚು ಹತ್ತಿರವಾಗುತ್ತೇವೆ ಎನ್ನುತ್ತಾರೆ. ಅದೇ ರೀತಿ ಮತ್ತೊಬ್ಬ ತಮಿಳು ಚಿಂತಕರಾದ ಮದಿವಣ್ಣನ್ ಅವರು "ದಲಿತರು ದಲಿತ ಸಂವೇದನೆಯಿಂದ ಬರವಣಿಗೆ ಮಾಡುವುದೇ ದಲಿತ ಸಾಹಿತ್ಯ. ಆದರೆ ದಲಿತ ಸಾಹಿತ್ಯವೂ ಜಾತೀಯ ಸಾಹಿತ್ಯವಲ್ಲ, ಹಿಂದು ಜಾತಿಯ ಕ್ರೈಸ್ತರ ಬರವಣಿಗೆಗಳಲ್ಲಿನ ಸ್ವಜಾತಿಯ ಮೇಲರಿಮೆ ದಲಿತ ಸಾಹಿತ್ಯದಲ್ಲಿಲ್ಲ. ಪ್ರಧಾನ ಧಾರೆಯ ಸಾಹಿತ್ಯ ಜಾತಿ ಶ್ರೇಷ್ಠತೆಯ ವ್ಯಸನವನ್ನು ಪ್ರತಿಪಾದಿಸುವಾಗ ದಲಿತ ಸಾಹಿತ್ಯವು ಮಾನವೀಯತೆಗಾಗಿ ಒತ್ತಾಯಿಸುತ್ತದೆ. ದಲಿತರು ನೋವುಂಡವರ ನೆಲೆಯಿಂದ ಬರವಣಿಗೆ ಮಾಡುವುದರಿಂದಲೇ ಇದು ಸಾಧ್ಯವಾಗುತ್ತದೆ. ದಲಿತ ಸಾಹಿತ್ಯದಲ್ಲಿ ಕಂಡುಬರುವ ಆಕ್ರೋಶ, ಸಿಟ್ಟು, ನೋವು, ದುಃಖದ ಜೊತೆಯಲ್ಲಿರುವ ಜಾತ್ಯಾತೀತ ನಿಲುವುಗಳನ್ನು ಗ್ರಹಿಸಬಹುದು. ಹಿಂದೂ ಸಮಾಜದಲ್ಲಿ ದಲಿತರು ಜಾತಿರಹಿತರಾಗಿಯೋ ಅಥವಾ ಅನ್ಯ ಜಾತಿಯವರಾಗಿಯೋ ಪರಿಗಣನೆಗೊಳಗಾಗಿದ್ದಾರೆ. ದಲಿತ ಸಾಹಿತ್ಯದ ಮಟ್ಟಿಗೆ ಜಾತಿಯ ಮೇಲರಿಮೆ ಎಂಬುದು ಒಂದು ಕೆಟ್ಟ ಪದವಾಗಿದೆ." (ಮದಿವಣ್ಣನ್, ತಮಿಳು ದಲಿತ ಸಾಹಿತ್ಯ ದಲಿತೀಯ ಚಿಂತನೆಗಳು, ಪು. ೪). ಮದಿವಣ್ಣನ್ ಅವರು ದಲಿತ ಸಾಹಿತ್ಯದಲ್ಲಿ ಅಡಕವಾಗಿರುವ ದಲಿತರ ಬದುಕು ಮತ್ತು ಅವರಲ್ಲಿರುವ ಆಲೋಚನೆಗಳನ್ನು ಕುರಿತು ಮಾತನಾಡುತ್ತಾರೆ. ಅವರು ಈ ದಲಿತ ಸಾಹಿತ್ಯದ ಮಟ್ಟಿಗೆ ಜಾತಿಯ ಮೇಲರಿಮೆ ಎಂಬುದು ಒಂದು ಕೆಟ್ಟ ಪದವಾಗಿದೆ ಎನ್ನುವ ಮಾತಿನ ಹಿಂದೆ ನಾವು ಮತ್ತು ಆರ್ಯರ ರೀತಿ ನಮ್ಮಲ್ಲಿ ಶ್ರೇಣೀಕರಣಗೊಳಿಸಿಕೊಂಡರೆ ಅದು ಸರಿಯಾದದ್ದಲ್ಲ. ಅದರಿಂದ ಯಾವ ರೀತಿಯಾದ ಪ್ರಯೋಜನವು ಇರುವುದಿಲ್ಲ ಎಂದಿದ್ದಾರೆ. ಹಾಗಾಗಿ ಮೇಲರಿಮೆ ಎನ್ನುವುದು ದಲಿತ ಸಾಹಿತ್ಯದಲ್ಲಿ ಬೇಡ ಎನ್ನುವ ಅಭಿಪ್ರಾಯವನ್ನು ಮದಿವಣ್ಣನ್ ವ್ಯಕ್ತಪಡಿಸುತ್ತಾರೆ.

ದಲಿತ ಸಾಹಿತ್ಯವು ತಳಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಮುರಿದು ಕಟ್ಟುವ ಆಶಯ ಹೊಂದಿದೆ. ಹಾಗಾಗಿ ಈ ಹಿಂದೆ ದಲಿತರನ್ನು ಹೀಗೆ ಬದುಕಬೇಕು, ನಿನ್ನ ಕೆಲಸವೇ ಇದು ಎನ್ನುವ ಸಮಾಜದ ಪರಂಪರೆಯನ್ನು ಪ್ರಶ್ನಿಸುವ ಮೂಲಕ ತಮ್ಮೊಳಗೆ ಅಡಗಿರುವ ಸ್ವ-ಚರಿತ್ರೆಯನ್ನು ಪುನರ್ ನಿರ್ಮಾಣ ಮಾಡುವ ಕನಸನ್ನು ಹೊಂದಿರುವ ದಲಿತ ಸಾಹಿತ್ಯವು ಪ್ರಶ್ನೆ ಮತ್ತು ಪ್ರತಿಭಟನಾತ್ಮಕ ನೆಲೆಯಲ್ಲಿ ರೂಪುಗೊಂಡಿದೆ.

ಇಮಯಮ್ ಅವರು "ತಮಿಳು ಬರಹಗಾರರು, ನಾವು ರಾಜಕೀಯೇತರರು, ನಾವು ಬರೆಯುವ ಸಾಹಿತ್ಯವು ಪರಿಶುದ್ಧ ಸಾಹಿತ್ಯವೆಂದು ಅದು ರಾಜಕೀಯದಿಂದ ಹೊರತಾದದ್ದು, ಅಂದರೆ ರಾಜಕೀಯ ಕುರಿತು ಮಾತನಾಡುವುದು ಉತ್ತಮ ಸಾಹಿತ್ಯವಾಗಲಾರದೆಂದು ಹೇಳುತ್ತಿದ್ದಾರೆಯೇ? ಹಾಗಾದರೆ ದಮನಿತ ತಳಸಮುದಾಯಗಳ ಸಾಹಿತ್ಯ ಯಾವುವು? ರಾಜಕೀಯ ಪ್ರಜ್ಞೆಯಿಂದ ಸಾಹಿತ್ಯ ಮತ್ತು ಬರಹಗಾರನಿರಲು ಸಾಧ್ಯವೆ ಎಂದು ಪ್ರಶ್ನಿಸುತ್ತಾರೆ" (ಇಮಯಮ್, ಕಲ್ಪನೆಗಳಲ್ಲಿಯೆ ಒಡೆದು ಹಾಕಲಾಗದ ಉತ್ತಮಪುರದ ಗೋಡೆಗಳು, ಅಪ್ರಕಟಿತ ಲೇಖನ, ಪು. ೭).

ಇಮಯಮ್ ಅವರು ದಲಿತ ಸಾಹಿತ್ಯಕ್ಕೆ ಅಥವಾ ತಳಸಮುದಾಯಗಳ ದಮನಿತ ಧ್ವನಿಗೆ ರಾಜಕೀಯ ಪ್ರಜ್ಞೆ ಕೂಡಿದಾಗ ಅದು ಮತ್ತಷ್ಟು ಬಲಗೊಳ್ಳುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ದಲಿತ ಸಾಹಿತ್ಯವು ತಮಿಳು, ಕನ್ನಡ, ಮರಾಠಿಗಳಲ್ಲಿ ಮೂಡಿಬಂದರೂ ಅದರ ಪ್ರಧಾನ ಆಶಯ ದಲಿತ ಸಮಾಜವನ್ನು ಜಾಗೃತಗೊಳಿಸುವುದೇ ಆಗಿದೆ. ಸಾಹಿತ್ಯವು ತನ್ನ ಸಮುದಾಯಗಳ ಪರವಾಗಿ ನಿಂತು ಆ ಸಮುದಾಯವನ್ನು ರಾಜಕೀಯ, ಶೈಕ್ಷಣಿಕ, ಸಾಮಾಜಿಕವಾಗಿ ಮುನ್ನಡೆಸಿಕೊಂಡು ಹೋಗುವ ಗುರುತರವಾದ ಜವಾಬ್ದಾರಿಯು ಆ ಸಮುದಾಯದ ಲೇಖಕರಿಗೆ ಇರುತ್ತದೆ. ಹೀಗೆ ದಲಿತ ಸಾಹಿತ್ಯವು ಚಳುವಳಿ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಯಿಂದಾಗಿ ಅನ್ಯಾಯಕ್ಕೊಳಗಾದ ಸಮುದಾಯಗಳು ಅವರ ಪ್ರತಿನಿಧಿಯಾಗಿ ಗಟ್ಟಿ ಧ್ವನಿಯಲ್ಲಿ ಸಮಾಜವನ್ನು ಪ್ರಶ್ನೆ ಮಾಡುತ್ತದೆ.

ತಮಿಳು ದಲಿತ ಸಾಹಿತ್ಯವು ಈ ಎಲ್ಲಾ ಬಗೆಯ ಅಂಶಗಳಿಂದ ಕೂಡಿದೆ. ಅಲ್ಲದೆ ಪೆರಿಯಾರ್ ಭಿನ್ನ ಆಲೋಚನಾ ಕ್ರಮ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ವೈಚಾರಿಕತೆಯನ್ನು ಮೈಗೂಡಿಸಿಕೊಂಡಿದೆ. ದ್ರಾವಿಡ ಚಳುವಳಿಯು ಈ ನಾಡಿನಲ್ಲಿಯೇ ಗತಿಸಿರುವುದರಿಂದ ತಳಸಮುದಾಯಗಳ ಅಸ್ಮಿತೆಯನ್ನು ಶೋಧಿಸುವ ಕಾರ್ಯ ಮಾಡಿದೆ. ದಲಿತರ ಸಾಮಾಜಿಕ ಜೀವನ ವಿಧಾನವನ್ನು ದಲಿತರ ಜಾಗೃತಿಯನ್ನು ದಲಿತರು ಅಸ್ತಿತ್ವವನ್ನು ಹೇಗೆ ಉಳಿಸಿಕೊಂಡಿದ್ದಾರೆ. ಅವರು ಅನುಸರಿಸಿರುವ ಕ್ರಮಗಳೇನು ಎಂಬ ವಿವರಗಳನ್ನು ಸಮಗ್ರ ದಲಿತ ಕೇರಿಯ ಚಿತ್ರಣವನ್ನು ತಮಿಳು ದಲಿತ ಸಾಹಿತಿಗಳು, ವಿಮರ್ಶಕರು, ವಿದ್ವಾಂಸರು, ಸಂಸ್ಕೃತಿ ಚಿಂತಕರು ಮೊದಲಾದವರು ಬರಹದ ಮೂಲಕ ಹೊರ ಜಗತ್ತಿಗೆ ತಿಳಿಸಿದ್ದಾರೆ.

ಅವರ ಈ ಚಿಂತನೆಗಳು ಕೂಡ ಯಾವುದು ದಲಿತ ಸಾಹಿತ್ಯ? ಅದರ ಸಾಮಾಜಿಕ ಕಳಕಳಿ ಯಾವುದು ಅದರ ನಿಲುವುಗಳೇನು ಎನ್ನುವ ವಿವರಗಳನ್ನು ದಾಖಲಿಸುತ್ತವೆ.

ತಮಿಳು ದಲಿತ ಸಾಹಿತ್ಯದ ಪ್ರಮುಖ ನಿಲುವುಗಳು ಈ ರೀತಿಯಾಗಿ ಕಾಣಬಹುದಾಗಿದೆ.

* ಯಾಕೆ? ಏನು? ಎನ್ನುವ ಪ್ರಶ್ನೆಗಳಿಂದ ದಲಿತ ಸಾಹಿತ್ಯ ರೂಪುಗೊಳ್ಳಬೇಕು. ಸಿದ್ಧ ಮಾದರಿ ಸಾಂಸ್ಕೃತಿಕ ಚರಿತ್ರೆಯನ್ನು ಮುರಿದು ತನ್ನದೇ ಆದ ಸಾಂಸ್ಕೃತಿಕ ಚರಿತ್ರೆಯನ್ನು ತನ್ನ ಅಸ್ಮಿತೆಯ ನೆಲೆಯಲ್ಲಿ ಮುರಿದು ಕಟ್ಟಬೇಕು.

* 'ದಲಿತ ಪ್ರಜ್ಞೆ' ಸಾಹಿತ್ಯದ ಮೂಲ ಆಶಯವಾಗಿರಬೇಕು. ಪ್ರತಿ ಸಂಸ್ಕೃತಿ, ಪರ್ಯಾಯ ಸಂಸ್ಕೃತಿಯನ್ನು ಹಿಂದೂ ಧರ್ಮದ ಸಂಸ್ಕೃತಿಗೆ ಪ್ರತಿಯಾಗಿ ನಮ್ಮದೇ ಒಂದು ಬಹುತ್ವದ ಸಂಸ್ಕೃತಿ ಎಂದು ತಿಳಿಸಬೇಕು.

* ಒಂದು ಸೈದ್ಧಾಂತಿಕತೆಯನ್ನು ದಲಿತ ಸಾಹಿತ್ಯ ರೂಪಿಸಿಕೊಳ್ಳುವುದು. ಘಟನೆಗಳು, ಸಾಮಾಜಿಕ ಚಿತ್ರಣಗಳು ದಲಿತರ ಮೇಲಿನ ದೌರ್ಜನ್ಯಗಳು, ಅನ್ಯಾಯಗಳು, ಅಪಮಾನಗಳು ಮುಂತಾದವುಗಳು ದಲಿತ ಸಾಹಿತ್ಯದ ವಸ್ತುಗಳಾಗಬೇಕು.

* ಹಿಂದೆ ನಿರ್ಮಿಸಿದ ಸಾಮಾಜಿಕ ಮೌಲ್ಯದ ಮೂಲಕ ದಲಿತ ಲೋಕದ ಚಿತ್ರಣವನ್ನು 'ಸಾಮಾಜಿಕ ನ್ಯಾಯ' ಎನ್ನುವ ಪರಿಕಲ್ಪನೆಯಲ್ಲಿ ದಲಿತ ಸಾಹಿತ್ಯವನ್ನು ಚಿತ್ರಿಸುವುದು.

ಈ ಕುರಿತು ತೊಲ್ ತಿರುಮಾವಳಿವನ್ ಅವರು ತಮ್ಮ 'ಅಡಗದಿರು' ಕೃತಿಯ ಮುನ್ನುಡಿಯಲ್ಲಿ 'ಇಲ್ಲಿ ಬರಹದಲ್ಲೂ ಜಾತಿ ಗಬ್ಬು ನಾರುತ್ತದೆ' ಎಂದಿದ್ದಾರೆ. ಮುಂದುವರಿದು "ಹಾಳಾಗಿ ನಿಂತಿರುವ ಕಟ್ಟಡಗಳಲ್ಲಿ ದುರಸ್ತಿಯಾಗದೆ ಬಿದ್ದಿರುವ ವಾಹನಗಳಲ್ಲಿ /ಅರ್ಧಂಬರ್ಧ ಕತ್ತಲಿನಲ್ಲಿ ಏನು ನಡೆಯುತ್ತದೆ ಎಂದು ತಮ್ಮ ಗೂಬೆ ಕಣ್ಣುಗಳಿಂದ ಅಗಲವಾಗಿಯು ಆಳವಾಗಿಯು ಅಗೆದು ದುರುಗುಟ್ಟಿ ನೋಡಿ ರಸ್ತೆಯ ಬದಿಗಳಲ್ಲಿರುವ ಸಾಮಾನ್ಯ ಜನರ ಕಾಮ ಇಚ್ಛೆಯ ಬಲಹೀನತೆಗಳನ್ನು ಪುಟ ಪುಟಗಳಾಗಿ ಬರೆದು ಹಣ ಸಂಪಾದಿಸಲು ಬರೆಯುವ ಬರಹಗಾರರು ಇಲ್ಲಿ ಹೇರಳವಾಗಿದ್ದಾರೆ. ಸಾಮಾನ್ಯ ಜನರ ಜೀವನ ಸ್ಥಿತಿಗೆ ಏನು ಕಾರಣ ಎಂಬುದನ್ನು ರಾಜಕೀಯ, ಸಾಮಾಜಿಕ, ಆರ್ಥಿಕ ಶೋಷಣೆಯ ಹಿನ್ನೆಲೆಯಲ್ಲಿದ್ದು ಸೂಕ್ಷ್ಮವಾಗಿ ಅಧ್ಯಯನ ಮಾಡದೆ ಅಥವಾ ಹಾಗೆ ಅಧ್ಯಯನ ಮಾಡಿದ್ದರೂ, ವಿಷಯ ತಿಳಿದಿದ್ದರೂ, ಆ ಹಿನ್ನೆಲೆಯನ್ನು ಹೊರಹಾಕಲು ಬಯಸದೆ ಅವರನ್ನು ಹೀಯಾಳಿಸಿ ಆಳುವ ಅಧಿಕಾರ ಗುಂಪುಗಳಿಗೆ ತೋರಿಸಿಕೊಟ್ಟ ಅವರನ್ನು ಕೀಳಾದ ಸ್ಥಿತಿಗೆ ತಳ್ಳಿ ನೋಯಿಸುವ ಅಲ್ಪಬುದ್ಧಿಯ ಬರಹಗಾರರ ದೃಷ್ಟಿಗೆ ಬೀಳದಿರುವವೂ, ಅವರಿಂದ ದಾಖಲಾಗದವು ಹೇರಳವಾಗಿವೆ" (ತೋಲ್ ತಿರುಮಾವಳಮ್ ಅಡಗದಿರು (ಅನುವಾದ) ಪಸುಮಲೈ, ಪು. ೭). ಅಂದರೆ ತಮಿಳು ಸಾಹಿತ್ಯವು ತನ್ನೊಳಗಿರುವ ಪ್ರಾದೇಶಿಕ, ಜಾತಿ, ಅಕ್ಷರ ಮುಂತಾದವುಗಳಿಂದ ಜನತೆಯ ಬದುಕಿನಲ್ಲಿರುವ ಭಿನ್ನತೆಗಳು ಅವರ ಸಾಮಾಜಿಕ ಜೀವನ ಹೀಗೆ ಇರಬೇಕೆಂದುಕೊಂಡಿರುವ ಸಾಮಾಜಿಕ ಮೌಲ್ಯಗಳನ್ನು ಒಪ್ಪಿಕೊಂಡು ಬಂದಿರುವ ಸಾಹಿತ್ಯದ ನಿಲುವನ್ನು ಮೊದಲ ಬಾರಿಗೆ ದಲಿತ ಸಾಹಿತ್ಯ ಪ್ರಶ್ನೆ ಮಾಡುತ್ತದೆ. ಈ ರೀತಿಯ ಅಸಮಾನತೆ ಮತ್ತು ಭಿನ್ನ ನೆಲೆಯ ಸಾಮಾಜಿಕ ಬದುಕು ದಲಿತರಿಗೆ ಏಕೆ ನೇರವಾಗಿ ಸಿಕ್ಕಿಲ್ಲ? ಅದಕ್ಕೆ ಇರುವ ಕಾರಣಗಳೇನು? ಎನ್ನುವ ಪ್ರಶ್ನೆ ಮಾಡುವ ಧೈರ್ಯ ಮಾಡುತ್ತದೆ.

ದಲಿತ ಸಾಹಿತ್ಯ ಸಾಮಾನ್ಯ ಜನತೆಯ ಬದುಕನ್ನು ಸಾಹಿತ್ಯದಲ್ಲಿ ಅಕ್ಷರ ರೂಪದಲ್ಲಿ ಮೂಡಿಸಲು ಪ್ರಯತ್ನ ಮಾಡಿತು. ಇದರ ಹಿಂದಿನ ಉದ್ದೇಶವೊಂದೆ ಸಾಹಿತ್ಯವು ಸಾಮಾಜಿಕ ಜವಾಬ್ದಾರಿಯಾಗಿ ಮೂಡಿ ಬರಬೇಕು. ಈ ಹಿಂದಿನ ಸಾಹಿತ್ಯಕ್ಕೆ ಸಾಮಾಜಿಕ ಮೌಲ್ಯ, ಧರ್ಮ ಮತ್ತು ಪ್ರಭುತ್ವದ ಮನ್ನಣೆಗಾಗಿ ಬರೆಯುವ ಒಂದು ಬಗೆಯ ಏಕ ಸಂಸ್ಕೃತಿ ಕೇಂದ್ರ ನೆಲೆಯಾಗಿತ್ತು. ಹಾಗಾಗಿ ಆ ಸಂದರ್ಭದಲ್ಲಿ ದಲಿತರ ಬಗ್ಗೆ ಬರೆದರೂ ಅದು ವಾಸ್ತವತೆಗೆ ಹೆಚ್ಚು ಹತ್ತಿರವಾಗಿರಲಿಲ್ಲ. ದಲಿತರೆಂದರೆ ಹೀಗೆ ಇರಬೇಕು ಸಾಮಾಜಿಕ ಕಟ್ಟಳೆಗಳನ್ನು ಮೀರಬಾರದು, ಮೀರಿದರೆ ಅದು ಸಂಸ್ಕೃತಿಯನ್ನು ಮೀರಿದಂತೆ ಎನ್ನುವ ರೀತಿಯ ಬರಹಗಳೇ ಹೆಚ್ಚಾಗಿದ್ದವು. ಇಂತಹ ಏಕ ಕೇಂದ್ರಿತ ನೆಲೆಯಿಂದ ತಮಿಳು ದಲಿತ ಸಾಹಿತ್ಯ ಬಿಡಿಸಿಕೊಳ್ಳುವ ಪ್ರಯತ್ನ ಮಾಡಿತು. ಹಾಗಾಗಿ ಸಾಮಾಜಿಕ ನ್ಯಾಯ ಪರಿಕಲ್ಪನೆಯು ಹೆಚ್ಚು ಹೆಚ್ಚು ಮುನ್ನೆಲೆಗೆ ಬಂತು.

ಅದೇ ರೀತಿಯ ಸಾಹಿತ್ಯವು ಮುಂದೆ ಹೆಚ್ಚು ಜನಪ್ರಿಯತೆ ಮತ್ತು ಮನ್ನಣೆ ಪಡೆದುಕೊಂಡಿತು. ತಮಿಳು ದಲಿತ ಸಾಹಿತ್ಯವು ಸಾಹಿತ್ಯ ವೈಚಾರಿಕತೆ ಮತ್ತು ಸಾಮಾಜಿಕ ಬದ್ಧತೆ ಎಂಬ ಅಂಶಗಳಲ್ಲಿ ಪ್ರಮುಖವಾದ ಸ್ಥಾನ ಪಡೆದುಕೊಂಡಿದೆ. ಕಾರಣ ದಲಿತ ಸಾಹಿತ್ಯವು ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಚಳುವಳಿಯಾಗಿ ರೂಪ ಪಡೆದುಕೊಂಡಿತು. ಅಂಬೇಡ್ಕರ್ ಬದುಕು ಬರಹ, ವಚನ ಚಳವಳಿ, ಮಾರ್ಕ್ಸ್‌ವಾದಿ ಚಿಂತನೆ, ಲೋಹಿಯಾವಾದಿ ಚಿಂತನೆ, ರೈತ ಚಳವಳಿ, ಭೂ ಹೋರಾಟ ಮುಂತಾದ ಸಾಮಾಜಿಕ ಚಳವಳಿಯ ಭಾಗವಾಗಿ ಬೆಳೆದುಬಂದಿದೆ. ಹಾಗಾಗಿ ದಲಿತ ಸಾಹಿತ್ಯದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಬದ್ಧತೆ ಪ್ರಮುಖ ಅಂಶಗಳಾಗಿವೆ.

ತಮಿಳು ದಲಿತ ಸಾಹಿತ್ಯ ೯೦ರ ದಶಕದಲ್ಲಿ ಬೆಳೆದು ಬಂದರೂ ಅದರ ಪ್ರವೇಶಕ್ಕೂ ಮುನ್ನ ತಮಿಳುನಾಡಿನಲ್ಲಿರುವ ಪ್ರಮುಖ ದಲಿತ ಚಿಂತಕರು ಅದೇ ಮಾನದಂಡವನ್ನು ತಮ್ಮ ಬರಹಗಳಲ್ಲಿ ವ್ಯಕ್ತಪಡಿಸಿದ್ದಾರೆ. ಪ್ರಮುಖ ದಲಿತ ಚಿಂತಕರು ಹಾಗೂ ಬರಹಗಾರರಾದ ಅಯೋತಿದಾಸ್, ತೊಲ್ ತಿರುಮಾಳವನ್, ಮದವಣ್ಣನ್, ರವಿಕುಮಾರ, ರಾಜಗೌತಮನ್, ಅಧಿಯಮಾನ್ ಮುಂತಾದ ಪ್ರಮುಖ ಚಿಂತಕರನ್ನು ಹೆಸರಿಸಬಹುದಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ 'ದಲಿತ' ಎನ್ನುವ ಪದ ಭಾರತದ ಯಾವುದೇ ಪ್ರದೇಶಕ್ಕೆ ಹೋದರೂ ಒಂದೇ ಬಗೆಯಲ್ಲಿ ಕಂಡುಬರುತ್ತದೆ. ಪ್ರಾದೇಶಿಕತೆ ಮತ್ತು ಭಾಷೆ ಬೇರೆಯಾಗಿರುತ್ತದೆ ಎನ್ನುವ ಒಂದೇ ಒಂದು ಅಂಶವನ್ನು ಬಿಟ್ಟರೆ ಅದರ ಸಾಮಾಜಿಕತೆ ಹಾಗೂ ಆಚರಣೆಯು ಸಾಮಾನ್ಯವಾಗಿ ಒಂದೇ ಆಗಿರುತ್ತದೆ. ದಲಿತರು ಭಾರತದ ಯಾವುದೇ ಪ್ರದೇಶಕ್ಕೆ ಹೋದರೂ ಅವರಿಗೆ ದೇವಾಲಯಗಳ ಪ್ರವೇಶ ನಿಷೇಧ. ಮೇಲ್ವರ್ಗದ ಜನತೆಯ ಚಾಕರಿ ಮಾಡಲೇಬೇಕು. ಅಲ್ಲಿನ ಸಂಸ್ಕೃತಿಯ ಹೆಸರಿನಲ್ಲಿ ನಡೆಯುವ ಸಾಮಾಜಿಕ ಆಚರಣೆಗಳಲ್ಲಿ ಭಾಗಿಯಾಗಲೇಬೇಕು. ಅದರಿಂದ ಅವರ ಬಿಡುಗಡೆ ಅಸಾಧ್ಯ. ಆದರೆ ಅವರಿಗೆ ಬೇರೆ ಬೇರೆ ಹೆಸರುಗಳಿಂದ ಕರೆಯುವುದನ್ನು ಬಿಟ್ಟರೆ ಉಳಿದಂತೆ ದಲಿತರು ದಲಿತರೇ. ಅವರ ಆರ್ಥಿಕತೆ, ಸಾಮಾಜಿಕತೆ, ಧಾರ್ಮಿಕತೆ, ಸಾಂಸ್ಕೃತಿಕತೆ ಅವರಿಗಷ್ಟೇ ಸಿಮೀತ. ಭಾರತದ ರಾಜಕೀಯವು ಒಂದೇ ಧರ್ಮದ ಏಕಸಂಸ್ಕೃತಿ, ಏಕಭಾಷೆಯನ್ನು ಮುನ್ನೆಲೆಗೆ ತರುವ ಪ್ರಯತ್ನ ಮಾಡಿದೆ. ಬಹುತ್ವದ ಪರಿಕಲ್ಪನೆಯನ್ನು ಜನತೆಯಲ್ಲಿ ಬಿತ್ತುವುದಕ್ಕೆ ಸಾಧ್ಯವಾಗಿಲ್ಲ.

ತಮಿಳು ದಲಿತ ಸಾಹಿತ್ಯವು ಸಾಮಾಜಿಕ ನ್ಯಾಯ, ದಲಿತರ ಘನತೆ, ಸಮಾನತೆ ಜಾತೀಯತೆ ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಕೇಂದ್ರವಾಗಿಸಿಕೊಂಡು ದಲಿತರ ಬದುಕಿನ ಬವಣೆಗಳನ್ನು ವಾಸ್ತವದ ನೆಲೆಗಟ್ಟಿನಲ್ಲಿ ಬರವಣಿಗೆಯ ಮೂಲಕ ಸಮಾಜದ ಮುಂದಿಡುವ ಕಾರ್ಯ ಸಾಹಿತ್ಯಿಕವಾಗಿ ಮೂಡಿತು. ಮುಂದೆ ದಲಿತರನ್ನು ಒಟ್ಟುಗೂಡಿಸುವ, ಸಂಘಟಿಸುವ ಜಾಗೃತಿ ಮೂಡಿಸುವ ಕಾರ್ಯವನ್ನು ತಮಿಳು ದಲಿತ ಸಾಹಿತ್ಯ ಮಾಡಿತು.

ಈ ರೀತಿ ದಲಿತರ ಸಂವೇದನೆಗಳು ಅನಕ್ಷರಸ್ಥ ದಲಿತರ ಬದುಕನ್ನು ಸಮಾಜದ ಕಡೆ ಮುಖ ಮಾಡುವಂತೆ ಸಾಂಪ್ರದಾಯಿಕತೆಯ ಹೆಸರಿನಲ್ಲಿ ಮೌಢ್ಯವನ್ನು ಬಿತ್ತುವ ಮೇಲ್ವರ್ಗದ ವೈದಿಕ ಸಾಹಿತ್ಯ ಪರಂಪರೆಯನ್ನು ಪ್ರಶ್ನೆ ಮಾಡುವ ಹಂತಕ್ಕೆ ದಲಿತರನ್ನು ಜಾಗೃತಿಗೊಳಿಸಿದೆ. ಈ ತಮಿಳು ದಲಿತ ಸಾಹಿತ್ಯವು ಸಮಾಜದಲ್ಲಿ ಸೃಷ್ಟಿ ಮಾಡಿದ ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ. ಹಾಗೆ ದಲಿತರಲ್ಲಿ ಸಮುದಾಯ ಪ್ರಜ್ಞೆ ಮೂಡಿ ಅವರ ಸ್ವ ಅನುಭವಗಳನ್ನು ಕಥೆ, ಕಾವ್ಯ, ಕಾದಂಬರಿ, ನಾಟಕ, ಆತ್ಮಕಥೆಗಳಂತಹ ಪ್ರಕಾರಗಳಲ್ಲಿ ದಾಖಲಿಸುವ ಮಹತ್ವದ ಕಾರ್ಯವನ್ನು ತಮಿಳು ದಲಿತ ಸಾಹಿತ್ಯ ಮಾಡಿತು.

ದಲಿತ ಸಾಹಿತಿಗಳು ತನ್ನ ಸುತ್ತಲಿನ ಸಮಾಜದಲ್ಲಿ ತನಗಿರುವ ಸಾಮಾಜಿಕ ಬದ್ಧತೆಯನ್ನು ಸಾಹಿತ್ಯದಲ್ಲಿ ವ್ಯಕ್ತಪಡಿಸುತ್ತಾರೆ. ಅವರ ಸಾಹಿತ್ಯದಲ್ಲಿ ಸೃಜನಾತ್ಮಕತೆಯ ಮಾನವೀಯ ಸಂಬಂಧ, ಸಂವೇದನೆಗಳು ಹಾಗೂ ಸ್ವಾತಂತ್ರ್ಯ ಬಂಧುತ್ವದ ಭಾವನೆಗಳನ್ನು ಅದರಲ್ಲಿ ಸೇರಿಸುವ ಕಾರ್ಯ ಮಾಡುತ್ತಾರೆ. ಇದರಿಂದ ಸಾಹಿತ್ಯದ ದೃಷ್ಟಿಯಲ್ಲಿ ಪ್ರತಿಯೊಬ್ಬ ವ್ಯಕ್ತಿ(ದಲಿತ)ಯ ನೋವು-ನಲಿವು ಅವರ ಸುಖ-ದುಃಖ ಮಹತ್ವಪೂರ್ಣವಾಗಿರುತ್ತದೆ. ಅದು ದಲಿತರೇ ಆಗಿರಲಿ ಸ್ತ್ರೀಯರೇ ಆಗಿರಲಿ ಇವರ ಬದುಕಿನ ಭಾಗವನ್ನು ಅವರ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳಲು ದಲಿತ ಸಾಹಿತ್ಯ ಪ್ರಮುಖ ಪ್ರಯೋಜನವಾಗಿದೆ.

"ದಲಿತ ಸಾಹಿತ್ಯವು ಹೊಸ ಬಗೆಯ ಚಿಂತನೆಯ ಆಯಾಮಗಳಿಂದ ಸಾಹಿತ್ಯದ ಭಾವನೆಯನ್ನು ವಿಸ್ತಾರಗೊಳಿಸಿದೆ. ಪಾರಂಪರಿಕ ಹಾಗೂ ಸ್ಥಾಪಿತ ಸಾಹಿತ್ಯವನ್ನು ಆತ್ಮ ವಿಶ್ಲೇಷಣೆ ಹಾಗೂ ಪುನರ್ ವಿಶ್ಲೇಷಣೆಗೆ ಬದ್ಧಗೊಳಿಸಿದೆ. ದಲಿತ ಸಾಹಿತ್ಯವು ಸುಳ್ಳು ಹಾಗೂ ಅತಾರ್ಕಿಕ ಒಪ್ಪಿತಗಳನ್ನು ನಿರ್ಮಮತೆಯಿಂದ ವಿರೋಧಿಸುತ್ತದೆ. ತನಗಿಂತ ಹಿಂದಿನ ಸಾಹಿತಿಗಳ ಬಗ್ಗೆ ಆಸ್ಥೆಯನ್ನಿಟ್ಟುಕೊಂಡಿಲ್ಲ. ವಿಮರ್ಶಾತ್ಮಕ ದೃಷ್ಟಿಯನ್ನಿಟ್ಟುಕೊಂಡು ದಲಿತ ಸಾಹಿತಿಗಳ ಪುನರ್ ಮೌಲ್ಯಾಂಕದ ಪ್ರಯತ್ನ ನಡೆಸಿದ್ದಾರೆ. ಅದರಿಂದ ಜಡತ್ವ ದೂರವಾಗಿದೆ. ಸಾಹಿತ್ಯವೂ ಆಧುನಿಕತೆ ಹಾಗೂ ಸಮಕಾಲೀನತೆಯ ಕಡೆ ಮುನ್ನಡೆದಿದೆ" ಎಂದು ಓಮ್ ಪ್ರಕಾಶ ವಾಲ್ಮೀಕಿಯವರು ದಲಿತ ಸಾಹಿತ್ಯದ ಪ್ರಸ್ತುತತೆ ಕುರಿತು ವಿಷಯ ಮಂಡಿಸುತ್ತಾರೆ(ದಲಿತ ಸಾಹಿತ್ಯದ ಸೌಂದರ್ಯಶಾಸ್ತ್ರ, ಪು. ೩೧).

ಈ ರೀತಿಯಾದ ವಿಶಿಷ್ಟವಾದ ಗುಣ-ಲಕ್ಷಣ-ಧೋರಣೆಗಳಿಂದ ಕೂಡಿದ ದಲಿತ ಸಾಹಿತ್ಯ ಅದರ ಸಾಮಾಜಿಕತೆಯ ವಿವಿಧ ಚಹರೆಗಳು ಬಹುಮುಖಿ ಆಯಾಮಗಳನ್ನು ಪಡೆದುಕೊಂಡಿದೆ. ದಲಿತ ಸಾಹಿತ್ಯವೂ ಬರೀ ರಭಸದ ಘೋಷಣೆಗಳಿಗೆ ಸೀಮಿತವಾದರೆ ಸಾಲದು ಅದು ಸಾಹಿತ್ಯದ ಮೌಲ್ಯಗಳಿಗೆ ಸೈದ್ಧಾಂತಿಕ ನಿಲುವುಗಳಿಗೆ ಬದ್ಧವಾಗಿರಬೇಕು. ಅದನ್ನು ಜೀವದ ಸಾಹಿತ್ಯವೆಂದು ಕೆಲವರು ಕರೆಯುತ್ತಾರೆ. ದಲಿತ ಪ್ರಜ್ಞೆಯಿಂದ ಮೂಡಿಬಂದ ಸಾಹಿತ್ಯಕ್ಕೂ ತನ್ನದೇ ಆದ ವಿಶಿಷ್ಟ ಮಾನದಂಡಗಳಿರುತ್ತವೆ. ಮೂಲ ದಲಿತ ಸಾಂಸ್ಕೃತಿಕ ಲೋಕದಿಂದ ಬಂದ ದಲಿತ ಪ್ರಜ್ಞೆ ಮತ್ತು ಮೇಲ್ನೋಟದ ದಲಿತ ಪ್ರಜ್ಞೆ ಅಂದರೆ, ದಲಿತರ ಬರವಣಿಗೆ ಮತ್ತು

ದಲಿತೇತರ ಬರವಣಿಗೆ ಎಂಬ ದ್ವಂದ್ವ ನಿಲುವುಗಳಿಗೆ ದಲಿತ ಸಾಹಿತ್ಯವೂ ತನ್ನದೇ ಆದ ಪರಿಭಾಷೆಯ ಮೂಲಕ ಚಿತ್ರಿಸುತ್ತದೆ. ಅದನ್ನು ಕೆಲವು ವಿದ್ವಾಂಸರು ಅನೇಕ ಬಗೆಯಲ್ಲಿ ಚರ್ಚಿಸಿದ್ದಾರೆ. ಹಾಗೆಯೇ ದಲಿತರೆಂದರೆ ಯಾರು? ದಲಿತ ಸಾಹಿತ್ಯವೆಂದರೇನು? ಎನ್ನುವ ಪ್ರಶ್ನೆಗಳಿಗೆ ಕೆಲವರು ಉತ್ತರ ನೀಡುವ ಪ್ರಯತ್ನ ಮಾಡಿದ್ದಾರೆ.

ಜಿ.ಎಸ್.ಶಿವರುದ್ರಪ್ಪನವರು "ದಲಿತರು ಮೂಲತಃ ಶೋಷಿತರು ಶೋಷಣೆಯ ಜೊತೆಗೆ ಅಮಾನವೀಯ ಹಿಂಸೆ ಮತ್ತು ಕ್ರೌರ್ಯಗಳಿಗೆ ಬಲಿಯಾದವರು. ಒಂದು ವ್ಯಕ್ತಿತ್ವವೇ ಇಲ್ಲದವರಂತೆ ನಡೆಸಿಕೊಳ್ಳಲ್ಪಟ್ಟವರು ಎಂದಿದ್ದಾರೆ"(ಲೋಕಾಪುರ, ಕನ್ನಡ ದಲಿತ ಕಾವ್ಯ, ಪು. ೨) ಅದೇ ರೀತಿ ಡಾ.ಅರವಿಂದ ಮಾಲಗತ್ತಿ ಅವರು ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು ದಲಿತರೆಂದಿದ್ದಾರೆ. (ಅದೇ, ಪು. ೩) ಅದೇ ರೀತಿ ತಮಿಳು ಚಿಂತಕರಾದ ಇಮಯಮ್ ಅವರು "ದಲಿತ ಸಾಹಿತ್ಯ ಕುರಿತು ನಾವು ಎಲ್ಲವನ್ನು ಬರಿ ಮಾಹಿತಿಗಳಾಗಿ ಅಂಕಿ ಅಂಶಗಳಾಗಿ ಮಾತ್ರವೆ ಕೊಡುತ್ತಿದ್ದೇವೆ. ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿಗತ ಕಥೆಗಳು, ನೋವು, ದುಃಖ, ಕಣ್ಣೀರು, ಶೋಷಣೆಗಳನ್ನು ಮಾತ್ರ. ಆದರೆ ಇದು ಕೆಳವರ್ಗದ, ದಮನಿತ, ತಳ ಸಮುದಾಯಗಳ ನೆಲೆಯನ್ನು ಹೇಳುತ್ತಿಲ್ಲ. ಈ ಕಥೆಯಲ್ಲಿನ ಇತಿಹಾಸವೂ ಅಲ್ಲ ಸಾಂಸ್ಕೃತಿಕ ಬಹುತ್ವದ ಸಂಪ್ರದಾಯಗಳೂ ಅಲ್ಲ. ರಾಜಕೀಯ, ಆರ್ಥಿಕ ಬದಲಾವಣೆಗಳು ಸಹ ಅಲ್ಲ. ಸಾಹಿತ್ಯದಲ್ಲಿ ಚರಿತ್ರೆಯಲ್ಲಿ ವ್ಯಕ್ತಿಗತ ಕಥೆಗಳಿಗಿಂತಲೂ ಸಾಮೂಹಿಕ ಜನಸಮುದಾಯಗಳ ಕತೆಯ ಚರಿತ್ರೆಯು ಮುಖ್ಯವಾಗುತ್ತದೆ" (ಇಮಯಮ್, ಪುನೈವುಗಳಿಲ್ ಕೂಡ ತವಿರ್ಕಪಡಾದ ಎತ್ತೀರಪುರಂ ಸುವರುಗಳು, (ಅನು) ಪ್ರಕಟಿತ ಲೇಖನ, ಪು. ೪).

ಅಳಗಿಯ ಪೆರಿಯವನ್ ಜಾತಿಯ ಬೇರಾಗಿರುವ ಮತಧರ್ಮಗಳನ್ನು ಹಿಡಿದು ಅಲುಗಾಡಿಸಿಲ್ಲ. ತನ್ನ ಜನರ ವೀರತ್ವದ ಬದುಕನ್ನು ದಾಖಲಿಸಲಿಲ್ಲ, ದಲಿತ ಸಾಹಿತ್ಯಕ್ಕೆ ಚರಿತ್ರೆಯೂ ರಾಜಕೀಯ ಇತಿಹಾಸವೂ ಇಲ್ಲ. ದಲಿತ ಮಹಿಳೆಯರ ಕುರಿತ ಚಿತ್ರಣಗಳಿಲ್ಲ. ಆತ್ಮ ಚರಿತ್ರೆಗಳಲ್ಲಿ ತಮಿಳುನಾಡಿನಲ್ಲಿ ಎಪ್ಪತ್ತಾರು ಪರಿಶಿಷ್ಟ ಜಾತಿಗಳು, ಮೂವತ್ತಾರೂ ಬುಡಕಟ್ಟು ಜನರಿದ್ದಾರೆ. ತಮಿಳು ದಲಿತ ಸಾಹಿತ್ಯದಲ್ಲಿ ಪೆರಿಯರ್, ಆರುಂಧತಿಯರ್, ಪಳ್ಳಿರ್‌ರನ್ನು ಹೊರತಾಗಿ ಇತರೆ ದಲಿತ ಸಮುದಾಯ ಜನರ ಬಗೆಗೆ ಉಲ್ಲೇಖಗಳಿಲ್ಲವೆಂದು ಅಭಿಪ್ರಾಯಪಡುತ್ತಾರೆ.

ತಮಿಳು ಸಾಹಿತ್ಯದಲ್ಲಿ ದಲಿತರು ಬರವಣಿಗೆಯ ಮೂಲಕ ಸಾಹಿತ್ಯ ಲೋಕಕ್ಕೆ ಪ್ರವೇಶಿಸಿದ ಕಾಲವು ವಿಶೇಷವಾದೊಂದು ಚಾರಿತ್ರಿಕ ಸಂಗತಿಯಾಗಿದೆ. ಭಾರತವು ಜಾಗತೀಕರಣಕ್ಕೆ ತೆರೆದುಕೊಂಡಿರುವ ಕಾಲವಾಗಿದ್ದು ಅದರ ಪರಿಣಾಮವಾಗಿ ಸಾಮಾಜಿಕ, ರಾಜಕೀಯ ಸಂದರ್ಭವು ಹೊಸ ಬಗೆಯ ಆಲೋಚನೆಗಳನ್ನು ದಲಿತರಲ್ಲಿ ಉಂಟುಮಾಡಿತು. ಈ ಕಾಲಘಟ್ಟದಲ್ಲಿ ತಮಿಳು ದಲಿತ ಸಾಹಿತ್ಯ ವಿಕಾಸ ಹೊಂದುವ ಹಂತದಲ್ಲಿದ್ದರಿಂದ ದಲಿತ ಸಾಹಿತ್ಯದ ಅವಶ್ಯಕತೆಯನ್ನು ಕುರಿತು ಚರ್ಚೆ, ವಾದ-ವಿವಾದಗಳು ನಡೆದಿವೆ. ಈ ಸಂಗತಿಗಳನ್ನು

ಕೇಂದ್ರವಾಗಿಸಿಕೊಂಡು ತಮಿಳು ದಲಿತ ಸಾಹಿತ್ಯ ಯಾರು ದಲಿತರು? ಎನ್ನುವ ಪ್ರಶ್ನೆಗಳಿಗೆ ಉತ್ತರ ಕೊಡುವ ಪ್ರಯತ್ನವನ್ನು ಆ ಕಾಲಘಟ್ಟದಲ್ಲಿ ನಡೆಸಿದೆ. ಅಂತಹದೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ದಲಿತ ಸಾಹಿತ್ಯದ ಉಗಮದ ಕಾಲದಲ್ಲಿ ನಡೆದ ತಮಿಳು ದಲಿತ ಸಾಹಿತ್ಯದಲ್ಲಿ ದಲಿತರು ಎನ್ನುವ ಕಲ್ಪನೆಯನ್ನು ನಿರ್ಮಿಸಿಕೊಂಡು ಕಾವ್ಯ ಪ್ರಕಾಶವು ೧೯೯೦ರ ದಶಕದಲ್ಲಿ 'ದಲಿತತ್ವ' ಎಂಬ ಕೃತಿಯನ್ನು ಹೊರತಂದಿದೆ. ಈ ಕೃತಿಯು ತಮಿಳು ದಲಿತ ಸಾಹಿತ್ಯವನ್ನು ಕೇಂದ್ರವಾಗಿರಿಸಿಕೊಂಡು ದಲಿತರಿಗೆ ಸಂಬಂಧಿಸಿದಂತೆ ಬರೆದ ಲೇಖನಗಳನ್ನು ಒಳಗೊಂಡಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ 'ದಲಿತತ್ವ' ಎಂಬ ಕೃತಿಯಲ್ಲಿ ಲೇಖನಗಳನ್ನು ಬರೆದಿರುವವರಲ್ಲಿ ಯಾರೂ ದಲಿತರಿಲ್ಲ. ಆದರೆ ಅವರ ಚಿಂತನೆ ದಲಿತ ಸಾಹಿತ್ಯದ ಬೆಳವಣಿಗೆಗೆ ಪೂರಕವಾಗುವ ಎಲ್ಲಾ ಅಂಶಗಳನ್ನು ಒಳಗೊಂಡಿವೆ. ಈ ಕೃತಿಯ ಸಂಪಾದಕ ಮತ್ತು ಪ್ರಕಾಶಕರು ಆದ ಕಾವ್ಯ ಷಣ್ಮುಖ ಸುಂದರಂ ಅವರು ಈ ಕೃತಿಯನ್ನು ಕುರಿತು ಈ ಮಾತುಗಳನ್ನಾಡಿದ್ದಾರೆ. ತಮಿಳಿನಲ್ಲಿ 'ದಲಿತ' ಎಂಬ ಪದವು ಸಾಹಿತ್ಯಿಕವಾಗಿ, ರಾಜಕೀಯವಾಗಿಯು ಕೆಲವು ವರ್ಷಗಳಿಂದ ಅನಿವಾರ್ಯವು, ಜರೂರಿನ ಧ್ವನಿಯಾಗಿ ಕೇಳಿಬರುತ್ತದೆ. 'ದಲಿತ' ಪದ ಮರಾಠಿಯಿಂದ ಕರ್ನಾಟಕದ ಮೂಲಕ ತಮಿಳಿಗೆ ಬಂದಿದೆಯೆಂದು ಹೇಳಬಹುದು. ಇದು ದಲಿತ ಸಾಹಿತ್ಯಕ್ಕಾಗಿ ಪ್ರತ್ಯೇಕ ಪತ್ರಿಕೆಗಳು(ಕೋಡಾಂಗಿ, ನಿರುಪ್ಪಿಂಗ್ಯೆ ಇತ್ಯಾದಿ) ಪ್ರತ್ಯೇಕ ಪ್ರಕಾಶನ ಸಂಸ್ಥೆಗಳು(ವಿಳುಂಬು, ವಿಡಿಯಲ್), ನಾಟಕ, ಸಂಘಟನೆಗಳು, ಸಂಸ್ಥೆಗಳು, ದಲಿತ ಸಾಹಿತಿಗಳಾದ ರಾಜಗೌತಮ್, ರವಿಕುಮಾರ್, ಬಾಮಾ, ಶಿವಗಾಮಿ, ಗುಣಶೇಖರನ್, ಪ್ರತಿಭ ಜಯಚಂದಿರನ್ ಎಂದಿದ್ದರೂ ಕೂಡ ತಮಿಳು ಕಿರುಪತ್ರಿಕೆಗಳ ಸಂದರ್ಭದಲ್ಲಿ ತಮಿಳವನ್‌ರ ಪಡಿಗಳ್(ಪತ್ರಿಕೆ)ನಲ್ಲಿ ಈ ಕುರಿತು ಮಾಹಿತಿ ಮೊದಲು ಪ್ರಕಟಿಸಲಾಯಿತು. ತಮಿಳವನ್ ಅವರೆ ದಲಿತ ಪದವನ್ನು ತಮಿಳಿಗೆ ಪರಿಚಯಿಸಿದರು ಎನ್ನಬಹುದು. ಹಾಗಾಗಿ ದಲಿತರನ್ನು ಕುರಿತ ಕಾಳಜಿ ದಲಿತೇತರರಲ್ಲಿಯು ಇರುವುದೆಂಬುದನ್ನು ತಳ್ಳಿ ಹಾಕಲಾಗುವುದಿಲ್ಲ. ತಮಿಳ್ ಪುಸ್ತಗಾಲಯಂ(ತಮಿಳು ಪುಸ್ತಕ ಪ್ರಕಾಶನ) ಕ್ರಿಯಾ, ಅನ್ನಂ(ಹಂಸ) ಮೊದಲಾದ ಪ್ರಕಾಶನಗಳು ದಲಿತ ಸಾಹಿತ್ಯವನ್ನು ಪ್ರಕಟಿಸಿದ್ದಾರೆ. ದಿನಮಣಿ ಕದಿರ್ 'ಇಂಡಿಯಾ ಟುಡೇ'ಯಂತಹ ಪತ್ರಿಕೆಗಳು ದಲಿತ ಸಾಹಿತ್ಯದ ವಿಶೇಷಾಂಕಗಳನ್ನು ಹೊರತಂದವು. ಭಾಗಶಃ ಎಲ್ಲ ಪತ್ರಿಕೆಗಳು ದಲಿತ ಸಾಹಿತ್ಯದ ಕುರಿತಾದ ಪರಿಚಯಾತ್ಮಕ ಚರ್ಚೆ, ವಾದ, ವಿವಾದಗಳನ್ನು ಮಾಡಿವೆ. ಕಾವ್ಯ ಪ್ರಕಾಶ ಸಂಸ್ಥೆ ಕೈಕಟ್ಟಿಕೊಂಡಿದ್ದಾರೆ. ದಲಿತ್ ವಿರೋಧಿಯೆಂದು ಹಣೆಪಟ್ಟಿಗೆ ಪಾತ್ರವಾಗಿ ಬಿಡಬಹುದೆಂದು ಅಂಜಿಕೆಯಿಂದ ಈ ಕೃತಿಯನ್ನು ಪ್ರಕಟಿಸುತ್ತಿಲ್ಲ. ನಿಜವಾದ ಕಾಳಜಿಯಿಂದಲೇ ಕೃತಿ ಪ್ರಕಟಣೆಗೆ ಮುಂದಾಗಿದೆ. ನಂತರದ ದಿನಮಾನಗಳಲ್ಲಿ ದಲಿತ ಸಾಹಿತ್ಯ ಎಂಬ ಲೇಖನಗಳ ಸಂಗ್ರಹವನ್ನು ಪ್ರಕಟಿಸಲಿದ್ದೇವೆ"(ಕಾವ್ಯ ಷಣ್ಮುಖ ಸುಂದರಂ, ದಲಿತತ್ವ ಸಂಪಾದಕೀಯ ಮಾತು, ೧೯೯೬) ಎಂದು ಹೇಳಿದ್ದಾರೆ.

ದಲಿತ ಭಾಷೆ ಮತ್ತು ಸೌಂದರ್ಯ

ದಲಿತ ಸೌಂದರ್ಯ ಎನ್ನುವುದು ಬ್ರಾಹ್ಮಣ ಸೌಂದರ್ಯಕ್ಕೆ ವಿರುದ್ಧವಾಗಿರುತ್ತದೆ. ಹಾಲಿನಂತಹ ದೇಹ, ಮೃದುವಾದ ಬೆರಳುಗಳು ಎನ್ನುವುದರ ವಿರುದ್ಧವಾಗಿ ಕಪ್ಪು, ಶ್ರಮದಿಂದ ಗಟ್ಟಿಯಾದ

ಕೈಗಳು ಎಂದು ಗುಣಾಂಕಗಳಿಂದ ಜಾತೀಯತೆಯ ಸೌಂದರ್ಯವನ್ನು ನೋಡುವುದಾಗಿದೆ. ಸೌಂದರ್ಯ ಕೇವಲ ನೋಟದಲ್ಲಿ ಇರದೆ ವಸ್ತು ವಿಷಯದ ಮಿಶ್ರಗೊಂಡಿರುತ್ತದೆ. ದಲಿತರ ಭಾವನೆಗಳು, ಭಾಷೆ, ಜೀವನ ವಿಧಾನ ಮುಂತಾದವುಗಳನ್ನು ಕಲಾ ಅಂಶದಿಂದ ಪ್ರಕಟವಾಗುವುದೇ ದಲಿತ ಸೌಂದರ್ಯವಾಗಿದೆ. ಭಾಷೆ ಒಂದು ಸಂವಹನ ಮಾಧ್ಯಮ. ಭಾಷೆಯು ಒಂದು ಸಮಾಜದ, ಒಂದು ವರ್ಗದ ಚರಿತ್ರೆಯನ್ನು ಆ ಜನರ ಗುರುತನ್ನು ತಿಳಿಸುತ್ತದೆ. ಅಲ್ಲದೆ ಭಾಷೆ ಒಬ್ಬ ಮನುಷ್ಯನ ಜಾತಿಯನ್ನು ಧರ್ಮವನ್ನು ಅವನು ಜೀವಿಸುವ ಪ್ರದೇಶವನ್ನು ಸೂಚಿಸುತ್ತದೆ. ದಲಿತ ಸಾಹಿತ್ಯದಲ್ಲಿ ಬಳಕೆಯಾಗಿರುವ ಭಾಷೆಯು ದಲಿತರ ಗುರುತು, ಅವನ ನೋವು, ನಲಿವುಗಳನ್ನು ಮೇಲ್ಜಾತಿಯ ಅಧಿಕಾರವನ್ನು ತಮಗೆ ಅರಿವಿರುವ ಭಾಷೆಯಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಹೇಳುತ್ತವೆ. ದಲಿತ ಭಾಷೆ ಮತ್ತು ಸೌಂದರ್ಯದ ಕುರಿತು ವಿಳಿ. ಪಾ. ಇದಯವೇಂದನ್ ಈ ರೀತಿ ಹೇಳುತ್ತಾರೆ.

"ಸೌಂದರ್ಯ ಎನ್ನುವುದು ಒಂದು ಮಾಯೆ ದಲಿತರ ಹೊಲಸು, ದುರ್ವಾಸನೆ, ಮಾಂಸದ ವಾಸನೆಗಳೇ ದಲಿತ ಸೌಂದರ್ಯ. ಇದರ ಖಾರ ಸೃಷ್ಟಿಸಲ್ಪಟ್ಟ ಸೌಂದರ್ಯದ ಮುಂದೆ ಮುಖಾಮುಖಿಯಾದದ್ದು"(ದಲಿತ ಮುರಸು ವಿಡುತಲೈಯಿನ್ ಸಾತ್ತಿಯಂಗಳ್, ಪು. ೧೯೮) ಮುಂದುವರಿದು ದಲಿತ ಭಾಷೆಯ ಬಗೆಗೆ "ನಾವುಗಳು ಅನುಭವಿಸಿದ ಬಡತನ ಮನದಲ್ಲಿ ಆಳವಾಗಿ ಮುಳುಗಿಸಿ ಬಿಟ್ಟಿದೆ. ಜೊತೆಗೆ ನಮ್ಮ ಜನರು ಪಡುವ ಕಷ್ಟಗಳನ್ನು ಪದ ವಾಕ್ಯಗಳಲ್ಲಿ ಹೇಳಲಾಗದು. ಎಷ್ಟು ಕಥೆ, ಕಾದಂಬರಿ ಬರೆದರೂ ಸಾಲದು. ದಿನಂಪೂರ್ತಿ ಕಾಲುವೆ, ಮಲ, ತಿಪ್ಪೆ, ಸೆಪ್ಟಿಕ್ ಟ್ಯಾಂಕ್ ಜೊತೆಗಿನ ನಗರದ ವಾಸನೆಯ ಜೀವನ, ಕಛೇರಿಗಳಲ್ಲಿ ಅಧಿಕಾರಿಗಳ ಅಲಕ್ಷ್ಯದ ನಡತೆ, ಊರು ಜನರ ಕೇವಲವಾದ ನೋಟಗಳು, ಚಕ್ರ ಬಡ್ಡಿಗಾರರ ಶೋಷಣೆ... ಹೀಗೆ ಹಲವು ವಿಷಯಗಳು ನನ್ನಲ್ಲಿ ಒತ್ತಡ ಬೀರಿವೆ"(ದಲಿತ ಮುರಸು ವಿಡುದಲೈಯಿನ್ ಸಾತ್ತಿಯಂಗಳ್, ಪು. ೧೯೭) ಎಂಬ ಮಾತುಗಳು ದಲಿತ ಭಾಷೆ ಮತ್ತು ಸೌಂದರ್ಯ ಯಾವ ರೀತಿ ಇರುತ್ತದೆ ಎನ್ನುವುದನ್ನು ನಾವು ತಿಳಿಯಬಹುದು.

ಭಾಷೆ ಓದುಗರಿಗೆ ಸರಳವಾಗಿರಬೇಕು. ಸಾಹಿತ್ಯದಲ್ಲಿ ಪದಗಳು ಪಯಣಿಸುವ ರೀತಿಯೇ ಸಾಹಿತ್ಯದ ಭಾಷೆ ಎನ್ನುತ್ತೇವೆ. ಮನುಷ್ಯ ಜೀವನ ವಿಧಾನದಂತೆ ಅವನ ಪ್ರಾಮಾಣಿಕತೆಗೆ ಅನುಗುಣವಾಗಿ ಭಾಷೆ ಕೂಡಿರುತ್ತದೆ. ಒಂದೊಂದು ಸಮುದಾಯದವರು ತಮಗೆಂದು ಪ್ರತ್ಯೇಕವಾದ ಭಾಷಾ ಶೈಲಿಯನ್ನು ರೂಪಿಸಿಕೊಂಡಿರುವುದನ್ನು ಕಾಣಬಹುದು. ಭಾಷೆ ಅನುಭವದಿಂದ ಕೂಡಿದ್ದು ಸ್ಪಷ್ಟತೆಯನ್ನು ಹೊಂದಿರುತ್ತದೆ.

ದಲಿತ ಭಾಷೆ ಎನ್ನುವುದು ದಲಿತರ ವಾಸ್ತವತೆಯ ಜೀವನದಿಂದ ಬರುವಂತದ್ದು. ಸಾಂಪ್ರದಾಯಿಕ ಜೀವನದ ರೀತಿ, ಭಾವನೆಗಳು ಮುಂತಾದವುಗಳನ್ನು ಕೂಡಿಸಿ ಭಾಷೆ ಬೆಳೆದಿರುತ್ತದೆ. ದಲಿತ ಸಾಹಿತ್ಯದ ಭಾಷಾ ರೀತಿಯ ಎನ್ನುವುದು ದಲಿತರ ನೇರವಾದ ಮಾತು, ಅಲ್ಲದೆ, ಅದು ಗುಲಾಮತನದಲ್ಲಿದ್ದ ಅಂಶವನ್ನು ಹೊಂದಿರುತ್ತದೆ. ಇಂದಿನ ಸಾಹಿತ್ಯ ನಾಗರೀಕವಾದ ಭಾಷೆಯಲ್ಲಿ

ಸೃಷ್ಟಿಯಾಗುತ್ತದೆ. ಇದನ್ನು ಎದುರಿಸಿ ಯಾವುದನ್ನು ಅಸಹ್ಯ, ಅವಮಾನ ಎಂದು ತಿಳಿಯಲಾಗಿತ್ತೋ ಅದನ್ನೇ ಬರವಣಿಗೆಯಲ್ಲಿ ಬಳಸುವುದೇ ದಲಿತ ಭಾಷೆಯ ರೀತಿಯಾಗಿದೆ. ಸಮಾಜದಲ್ಲಿ ದಲಿತರ ಮಾತನ್ನು ಕೆಟ್ಟ ಮಾತು ಎಂದು ವಿರೋಧಿಸಿದ ಶ್ರೇಷ್ಠ ಭಾಷೆಯ ವಿರುದ್ಧ ಕೊಳೆಗೇರಿಯ ಭಾಷೆಯನ್ನು ಬಳಸುವುದೇ ದಲಿತ ಭಾಷೆಯ ಮುಖ್ಯ ಉದ್ದೇಶವಾಗಿದೆ.

ಅಂಬೇಡ್ಕರ್ ವಾದವನ್ನು ಅರ್ಥೈಸಿಕೊಳ್ಳದ ಜಾತೀಯ ತಂತ್ರಗಾರಿಕೆಗಳನ್ನು ಪ್ರಶ್ನಿಸದ ಮನುವಾದವನ್ನು ಒಪ್ಪಿಕೊಳ್ಳುವ ಯಾವ ಬರಹವೂ ದಲಿತ ಸಾಹಿತ್ಯ ಆಗುವುದಿಲ್ಲ. ಹುಟ್ಟಿನಿಂದ ಒಬ್ಬ ದಲಿತನಾಗಿದ್ದು ಅವನು ಮಾತ್ರ ದಲಿತ ಸಾಹಿತ್ಯ ಸೃಷ್ಟಿಗೆ ಕಾರಣನಾಗಿರುವುದಿಲ್ಲ. ಒಬ್ಬ ಬರಹಗಾರನು ಮಾನಸಿಕವಾಗಿ ಭಾವನೆಯಲ್ಲಿ ದಲಿತನಾಗಿ ಚಿಂತನೆಯಲ್ಲಿ ಜಾತಿ, ಮತ, ಧರ್ಮ, ವರ್ಣ ಪದ್ಧತಿಗಳನ್ನು ಎದುರಿಸುವವನೇ ದಲಿತ ಸಾಹಿತ್ಯಗಾರನಾಗಿರುತ್ತಾನೆ.

ದಲಿತ ಎಂಬ ಪದವು ಭಾರತದಾದ್ಯಂತ ರಾಜಕೀಯವಾಗಿ, ಆರ್ಥಿಕವಾಗಿ, ತಲಸ್ಪರ್ಶೀಯರನ್ನು ಗುರುತಿಸುವ ಪದವಾಗಿದೆ. ದಲಿತ ಸಾಹಿತ್ಯವನ್ನು ಯಾರು ಬರೆಯುತ್ತಾರೆ? ಮತ್ತು ಯಾರು ಬರೆಯಬೇಕು ಎನ್ನುವ ಪ್ರಶ್ನೆಗಳು ದಲಿತ ಸಾಹಿತ್ಯ ಸಂದರ್ಭದಲ್ಲಿ ಉದ್ಭವವಾಗುವುದು ಸಾಮಾನ್ಯ. ಆದರೆ ಅಧಿಕೃತವಾಗಿ ದಲಿತರು ಬರೆದಿದ್ದು ಮಾತ್ರ ದಲಿತ ಸಾಹಿತ್ಯವಾಗುತ್ತದೆ ಎಂಬುದು ಹಲವು ವಿದ್ವಾಂಸರ ಅಭಿಪ್ರಾಯ. ಕನ್ನಡ–ತಮಿಳು ಎರಡೂ ಭಾಷೆಗಳಲ್ಲಿ ಇದರ ಚರ್ಚೆ ಕಂಡುಬಂದರೂ ಕೊನೆಗೆ ದಲಿತರು ದಲಿತಾನುಭವದಿಂದ ಬರೆದದ್ದು ಮಾತ್ರ ದಲಿತ ಸಾಹಿತ್ಯ ಎಂಬ ಸಿದ್ಧ ಮಾದರಿಯ ಉತ್ತರಗಳನ್ನು ನೋಡಬಹುದು. ಈ ರೀತಿಯ ಚರ್ಚೆ, ಚಿಂತನೆಗಳ ಹಿನ್ನೆಲೆಯಲ್ಲಿ ತಮಿಳು ದಲಿತ ಸಾಹಿತ್ಯದ ಬರಹಗಳು ಕಾಣಿಸಿಕೊಂಡವು.

ತಮಿಳು ಸಾಹಿತ್ಯದಲ್ಲಿ ದಲಿತಲೋಕ ಪ್ರವೇಶಮಾಡಿದ ಸಂದರ್ಭಗಳು ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ, ಧಾರ್ಮಿಕವಾಗಿಯೂ ಹೆಚ್ಚು ಚರ್ಚೆಗೆ ಒಳಪಡುತ್ತವೆ. ಕಾರಣ ಭಾರತದಲ್ಲಿ ಹೆಚ್ಚು ತುಳಿತಕ್ಕೆ ಒಳಪಟ್ಟಿರುವವರು ದಲಿತರು. ತಮ್ಮ ಮನದಾಳದ ನೋವಿಗೆ ಧ್ವನಿಯಾಗಿರುವ ಯಾವ ಅಸ್ತ್ರಗಳು ಪರ್ಯಾಯ ಆಲೋಚನೆಗಳು ಬಂದಿರಲಿಲ್ಲ. ಗಾಂಧಿ ಮತ್ತು ಅಂಬೇಡ್ಕರ್ ಪೂರ್ವದಲ್ಲಿ ಜಾತಿ ಕುರಿತಾಗಿ, ಅದರಲ್ಲೂ ದಲಿತರ ಕುರಿತಾಗಿ ಹೆಚ್ಚು ಯಾರೂ ಕೆಲಸ ಮಾಡಿಲ್ಲ. ಮಾಡಿದರೂ ಅದು ಹೆಚ್ಚು ವ್ಯಾಪ್ತಿಯನ್ನು ಒಳಗೊಂಡಿಲ್ಲ. ಈಗಾಗಲೇ ಹೇಳಿದಂತೆ ಮಹಾರಾಷ್ಟ್ರದಲ್ಲಿ ಶಾಹು ಮಹಾರಾಜ, ಜ್ಯೋತಿ ಭಾ ಫುಲೆ, ಕರ್ನಾಟಕದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು, ತಮಿಳಿನಲ್ಲಿ ಪೆರಿಯಾರ್, ಅಯೋದಿದಾಸ, ಕೇರಳದಲ್ಲಿ ನಾರಾಯಣ ಗುರು ಆಂಧ್ರದಲ್ಲಿ ಹೇಮನ, ಶ್ರೀ ಶ್ರೀ ಹೀಗೆ ಹೆಸರಿಸುವಂತ ಕೆಲವರು ಮಾತ್ರ ದಲಿತರ ಕುರಿತು ಚಿಂತನೆ ಮಾಡಿದ್ದಾರೆ. ಪರಿಣಾಮವಾಗಿ ಇವರೆಲ್ಲರ ಜೊತೆ ದಲಿತರಲ್ಲಿ ಹೆಚ್ಚು ಜಾಗೃತಿ ಮೂಡಿಸಿದ್ದು ಡಾ. ಬಿ.ಆರ್.ಅಂಬೇಡ್ಕರ್‌ರ ಸಮಗ್ರ ಬರಹಗಳು, ಭಾಷಣಗಳು ದಲಿತರಲ್ಲಿ ಹೊಸ ಚಿಂತನಾಶೀಲತೆಯನ್ನು ಮೂಡಿಸುವಲ್ಲಿ ಹೆಚ್ಚು ಸಹಾಯಕವಾದವು.

ದಲಿತ ಎಂಬ ಪದವು ತಮಿಳು ಸಾಹಿತ್ಯವನ್ನು ಪ್ರವೇಶ ಮಾಡಿದ್ದು ೮೦–೯೦ ದಶಕದಲ್ಲಿ. ಅಂದರೆ ಕರ್ನಾಟಕದಲ್ಲಿ ದಲಿತ ಸಾಹಿತ್ಯ ರಚಿತವಾದ ಸುಮಾರು ಎರಡು ದಶಕಗಳ ತರುವಾಯ ದಲಿತರು ತಮಿಳು ಸಾಹಿತ್ಯ ಲೋಕವನ್ನು ಪ್ರವೇಶ ಮಾಡಿದರು. ಕೆಲವೇ ಕೆಲವು ವರ್ಷಗಳ ಇತಿಹಾಸ ಇರುವ ತಮಿಳು ದಲಿತ ಸಾಹಿತ್ಯವು ತನ್ನ ಸ್ವ ಅನುಭವದ ಬರವಣಿಗೆಯ ಮೂಲಕ ಹೆಚ್ಚು ಹೆಚ್ಚು ವಿಸ್ತಾರವನ್ನು ಪಡೆದುಕೊಂಡಿತು. ಪರಿಣಾಮವಾಗಿ ತಮಿಳು ಸಾಹಿತ್ಯದಲ್ಲಿನ ಭಿನ್ನ ಚಿಂತನಾ ಕ್ರಮವನ್ನು ಬರಹ ಮತ್ತು ಭಾಷೆಯ ರೂಪದಲ್ಲಿ ಬದಲಾಯಿಸಿತು.

ಅಧ್ಯಾಯ: ಮೂರು

ಕಾವ್ಯ

ಮನುಷ್ಯನಿಗೆ ತನ್ನ ಅನುಭವಗಳೇ ಜೀವನವಾಗಿರುತ್ತವೆ. ಆ ಅನುಭವವನ್ನು ಬರಹಗಳಲ್ಲಿ ವ್ಯಕ್ತಪಡಿಸಿದಾಗ ಅವು ಮರುಸೃಷ್ಟಿಯಾಗುತ್ತವೆ. ಈ ಮರುಸೃಷ್ಟಿಯು ಕಾವ್ಯ, ಕಥೆ, ನಾಟಕ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಮರುರೂಪವನ್ನು ಪಡೆದುಕೊಳ್ಳುತ್ತದೆ. ಹೀಗೆ ಜೀವನದ ಅನುಭವವನ್ನು ವ್ಯಕ್ತಪಡಿಸುವ ಸಾಹಿತ್ಯ ಪ್ರಕಾರಗಳಲ್ಲಿ ಕವಿತೆಯು ಒಂದಾಗಿದೆ. ಒಂದು ನಿರ್ದಿಷ್ಟ ವಸ್ತು ಅಥವಾ ವಿಷಯಕ್ಕೆ ವಾಕ್ಯಗಳಲ್ಲಿ ಜೀವವಿತ್ತು, ಕಲ್ಪನೆಯಲ್ಲಿ ರೂಪಕೊಟ್ಟು ಸಹೃದಯನಿಗೆ ಭಾವಪೂರ್ಣ ಸಂದೇಶವನ್ನು ತಿಳಿಸುವುದೇ ಕವಿತೆಯಾಗಿರುತ್ತದೆ.

'ಕಾವ್ಯ' ಚಿಕ್ಕ ಸಾಲಿನ ಪದ, ಒಂದು ಸಾಲಿನಲ್ಲಿಯೇ ದೊಡ್ಡ ಪ್ರಮಾಣದ ಅರ್ಥವನ್ನು ಹೇಳುವ ಅಕ್ಷರ ಸಾಮರ್ಥ್ಯಕ್ಕೆ ಕಾವ್ಯವೆಂದು ಕರೆಯುತ್ತಾರೆ. ಸಮಾಜದಲ್ಲಿ ಬದಲಾವಣೆಯನ್ನು ಮೈಗೂಡಿಸಿಕೊಂಡು ಸಮಾಜಮುಖಿ ಚಿಂತನೆಗಳಿಂದ ಕೆಳವರ್ಗದ ಜನತೆಯಲ್ಲಿ ಜಾಗೃತಿ ಮೂಡಿಸುವ, ಮೇಲ್ವರ್ಗದವರ ದರ್ಪ ದೌರ್ಜನ್ಯಗಳನ್ನು ಮಾತಿನ ದಾಟಿಯ ಮೂಲಕವೇ ಹಾಡುವ, ಓದುವ ಬಂಡಾಯವೆದ್ದು, ಸಿಡಿದು ಮಾತಾಡುವಂತೆ, ಶೋಷಣೆ ವಿರುದ್ಧ ಅಕ್ಷರದ ಪ್ರತಿರೋಧ ಒಡ್ಡುವ, ಮೂಕನಿಗೆ ಧ್ವನಿಯಾಗುವುದರ ಮೂಲಕ ಬಹುದೊಡ್ಡ ಧ್ವನಿಯಾಗಿರುವ ಕಾವ್ಯವೇ ದಲಿತ ಕಾವ್ಯ. ಈ ಹಿನ್ನೆಲೆಯಲ್ಲಿ ದಲಿತ ಕಾವ್ಯದೊಳಗಿರುವ ದಲಿತ ಜಗತ್ತಿನ ಅನುಭವಗಳು ಕನ್ನಡ–ತಮಿಳಿನಲ್ಲಿ ಹೇಗೆ ವ್ಯಕ್ತವಾಗಿವೆ ಎಂಬುದನ್ನು ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಲಿತ ಸಾಹಿತ್ಯವು ೭೦ರ ದಶಕದಲ್ಲಿ ಆರಂಭವಾದರೆ, ಪೂರ್ಣ ಪ್ರಮಾಣದ ದಲಿತ ಕಾವ್ಯ ಆರಂಭವಾಗಿದ್ದು ೭೬ರ ಸಮಯದಲ್ಲಿ. ಅಂದರೆ ೧೯೭೬ರಲ್ಲಿ 'ಹೊಲೆಮಾದಿಗರ ಹಾಡು' ಎಂಬ ಕವನ ಸಂಕಲನವನ್ನು ಸಿದ್ಧಲಿಂಗಯ್ಯನವರು ಪ್ರಕಟಿಸಿದ ನಂತರ. ಇದರಲ್ಲಿ ದಲಿತರ ಮನದಾಳದ ನೋವು ಆಕ್ರೋಶವನ್ನು ಜನಪದರ ಮಾತಿನ ದಾಟಿಯಲ್ಲೇ ದಲಿತರ ಆಡು ಮಾತುಗಳಾಗಿಯೇ ಹೊರತಂದರು. ಅದು ಕನ್ನಡ ದಲಿತ ಸಾಹಿತ್ಯದಲ್ಲಿ ಮೂಡಿದ ಅಧಿಕೃತವಾದ ಮೊದಲ ದಲಿತ ಕಾವ್ಯವಾಗಿದೆ.

ನೆರೆಯ ಆಂಧ್ರ ಪ್ರದೇಶದಲ್ಲೂ ಇದೇ ಮಾದರಿಯ ದಲಿತ ಕಾವ್ಯ 'ಮಾಲವಾಂಡ್ರಪಾಟ' ೧೯೭೫ರಲ್ಲಿ ಪ್ರಕಟವಾಯಿತು. ಆಂಧ್ರ ಪ್ರದೇಶದ ಪ್ರಸಿದ್ಧ ಕವಿಗಳಾದ ಚೆರಬಂಡರಾಜು, ನಗ್ನಮುನಿ, ಬಬಲೇಶ್ವರ, ಜ್ವಾಲಾಮುಖಿ, ಭೈರವಯ್ಯ, ಮಹಾಸ್ವಪ್ನ ಈ ಆರು ಪ್ರಮುಖ ಕವಿಗಳ ಕವನಗಳನ್ನು ಒಟ್ಟಾರೆ ಸೇರಿಸಿ 'ದಿಗಂಬರ' ಸಾಹಿತ್ಯ ಎನ್ನುವ ಪ್ರಕಾರದ ಮೂಲಕ ಹೊರತರಲಾಯಿತು. ಇವರ ಈ ಸಾಹಿತ್ಯವನ್ನೇ 'ದಿಗಂಬರ ಕವಿಗಳು' ಎನ್ನುವ ಹೆಸರಿನಿಂದ ಕನ್ನಡಕ್ಕೆ ಅನುವಾದ ಮಾಡಲಾಗಿದೆ. ಈ ರೀತಿಯ ಬೆಳವಣಿಗೆಯು ಮುಂದೆ ಕನ್ನಡ ದಲಿತ ಸಾಹಿತ್ಯದಲ್ಲಿ ಕಾವ್ಯ ಪ್ರಕಾರ ಹುಟ್ಟು ಹಾಕುವಲ್ಲಿ ತನ್ನದೇ ಆದ ಪ್ರಭಾವವನ್ನು ಬೀರಿದೆ. ಕನ್ನಡದ ತೆಲುಗು ಮನೆ ಮಾತಾಗಿರುವ ಲೇಖಕರು ತೆಲುಗಿನ ಪದ್ಯಗಳನ್ನು ಕನ್ನಡಕ್ಕೆ ಅನುವಾದ ಮಾಡಿದ ಪರಿಣಾಮವಾಗಿ ದಲಿತ ಕಾವ್ಯದ ಮೊದಲ ಕವನ ಸಂಕಲನವಾದ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಮೂಡಿಬರಲು ಪ್ರೇರಣೆಯಾಯಿತೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಕನ್ನಡದಲ್ಲಿ ದೇವರಾಯ ಇಂಗಳೆಯವರು ದಲಿತ ಪ್ರಜ್ಞೆಯನ್ನು ಪ್ರಚುರ ಪಡಿಸಿದವರಲ್ಲಿ ಮೊದಲಿಗರು. ಇವರು ನಾಟಕಗಳಿಗಾಗಿ ಹಲವಾರು ಗೀತೆ(ಕವಿತೆ)ಗಳನ್ನು ಬರೆದರು. ಇವುಗಳನ್ನು ೧೯೩೭ರಲ್ಲಿ 'ಹರಿಜನಾಭ್ಯುದಯ' ಎಂಬ ಹೆಸರಿನ ಕವನ ಸಂಕಲನವನ್ನು ಪಿ. ಗೋವಿಂದದಾಸ್ ಪ್ರಕಟಿಸಿದರು. ಅದೇ ಕಾಲಘಟ್ಟದ ಗೋವಿಂದದಾಸ್ ಅವರು ಗಾಂಧೀಜಿಯವರ ಪ್ರಭಾವದಿಂದಾಗಿ ತಮ್ಮ ಬದಲಾವಣೆಗೆ ನಮ್ಮ ಸಾಂಸ್ಕೃತಿಕ ಚರಿತ್ರೆಯ ಪ್ರಜ್ಞೆ(ಅರಿವು) ನಮಗಿರಬೇಕೆನ್ನುವ ಅರ್ಥದಲ್ಲಿ ದಲಿತ ಪ್ರಜ್ಞೆಯಿಂದ ಕೂಡಿದ ಕವಿತೆಗಳನ್ನು, ದಲಿತರ ಜಾಗೃತಿಗಾಗಿ ಬರೆದರು. ಇವರು ನವೋದಯ ಕಾಲಘಟ್ಟದವರಾಗಿರುವುದರಿಂದ ಅವರ ಕವಿತೆಗಳು ಹೆಚ್ಚು ಸೌಮ್ಯಭಾವದಲ್ಲಿ ಕಂಡುಬರುತ್ತವೆ. ಅಲ್ಲದೆ ಬರಹಗಳಲ್ಲಿ ಅವರ ವೈಚಾರಿಕ ಚಿಂತನೆಗಳು ರಾಷ್ಟ್ರೀಯತೆ ಮತ್ತು ಅರಿವು ಮೂಡಿಸುವ ಪ್ರಯತ್ನ ಮಾಡುತ್ತವೆ.

ದಲಿತ ಕಾವ್ಯವು ಬೀದಿಯ ಮಕ್ಕಳ ಕೈಯಲ್ಲಿ ಪಂಜಾಗಿ, ತನ್ನಲ್ಲಿನ ಬಿಸಿ ಬೆಂಕಿ ಉಂಡೆಗಳನ್ನು ಭಾಷೆಯ ಮೂಲಕ ಹೊರ ಹಾಕುತ್ತ ಬಂದಿದೆ. ಈ ವ್ಯವಸ್ಥೆಯ ಕೊಂಕು ಬಿರುಕುಗಳನ್ನು ಕತ್ತರಿಸಿ ಹಾಕುವಲ್ಲಿ ತನ್ನ ಸಾಮಾಜಿಕ ಕಳಕಳಿಯನ್ನು ದಲಿತ ಕಾವ್ಯ ತೋರುತ್ತ ಬಂದಿರುವುದು ಚಾರಿತ್ರಿಕ ಸತ್ಯವಾಗಿದೆ. ನವೋದಯ ಪ್ರಗತಿಶೀಲ-ನವ್ಯ ಕಾವ್ಯ ಮೌಲ್ಯಗಳಿಗೆ ಪ್ರತಿಭಟನೆಯಾಗಿ ಮೂಡಿಬಂದ ಈ ಕಾವ್ಯ ಸಾಮಾಜಿಕ ಮೂಲ ನಿರ್ಧಾರದ ನೆಲೆಯನ್ನು ಕಟುವಾಗಿ ಖಂಡಿಸಿ, ಬೀದಿಯಲ್ಲಿ ಕಸಗುಡಿಸುವ, ಮಲಹೊರುವ, ಚಪ್ಪಲಿ ಹೊಲಿಯುವ ಶ್ರಮಿಕರನ್ನು ಕಾವ್ಯದೊಳಗೆ ನಿರೂಪಿಸಿದ್ದು, ದಲಿತ ಕಾವ್ಯದ ಪ್ರಮುಖ ಜೀವಪರ ಕಾಳಜಿಯಾಗಿಯೇ ಕಂಡುಬರತೊಡಗಿತ್ತು. ಭಾವಪರವಶತೆಯ ನವೋದಯವನ್ನು ದಾಟಿ, ಜನಪರ ನಿಲುವಿನ ಪ್ರಗತಿಶೀಲ ಕಾವ್ಯವನ್ನು ಮೀರಿ, ಚಿಂತನಪರ ನವ್ಯ ಕಾವ್ಯವನ್ನು ಹಿಂದೆ ತಳ್ಳಿ, ಬೆಳೆದ ದಲಿತ ಕಾವ್ಯ ಭಾವಾವೇಶದ ಬೀದಿಮಾತಿನ ಆಡು ಭಾಷೆಯ ಜನಸಾಮಾನ್ಯರ ಕಾವ್ಯವಾಗಿ ಮೂಡಿಬಂತು.

ಕ್ರಿಯೆ ಮತ್ತು ಪ್ರತಿಕ್ರಿಯೆಗಳು ಅನಿವಾರ್ಯವೆಂಬಂತೆ ದಲಿತ ಕಾವ್ಯ ಜನಪರ ಧೋರಣೆಯನ್ನೇ ತನ್ನ ಜೀವಸತ್ವವನ್ನಾಗಿಸಿಕೊಂಡಿತು. ಸ್ವಾತಂತ್ರ್ಯ, ಸಮಾನತೆ, ಮಾನವೀಯತೆ, ನ್ಯಾಯ, ಅನುಕಂಪ ಮುಂತಾದ ಸಾಹಿತ್ಯದ ಜೀವಪರ ಚಿಂತನೆಗಳು, ಮೌಲ್ಯಗಳನ್ನು ದಲಿತ ಕಾವ್ಯ ಹೊಸ ಬಗೆಯ ದೃಷ್ಟಿಕೋನದಲ್ಲಿ ಪ್ರತಿಪಾದಿಸಿತು.

ಜನಪದ ಹಿನ್ನೆಲೆಯುಳ್ಳ ದಲಿತ ಕವಿಗಳು ಜನಸಾಮಾನ್ಯರಿಗೂ ಅರ್ಥವಾಗುವ ಕಾವ್ಯವನ್ನು ಬರೆದರು. ಅವರ ಕಾವ್ಯಗಳಲ್ಲಿ ಶೋಷಣೆಗೆ ಒಳಗಾದವರನ್ನು ಆ ನೆಲೆಯಿಂದ ಬಡಿದೆಬ್ಬಿಸಿ, ಅವರಿಗೆ ತನ್ನ ತನದ ಅಥವಾ ತನ್ನ ಅಸ್ತಿತ್ವದ ಬಗೆಗೆ ಅರಿವನ್ನು ಹುಟ್ಟಿಸಲು ಅವರ ಆಡು ಭಾಷೆ ಹಾಗೂ ಜನಪದ ನುಡಿ–ನುಡಿಗಟ್ಟು ಅಲ್ಲದೆ ಪ್ರತಿಮೆ ಪ್ರತೀಕಗಳಿಗಿಂತ ಹೆಚ್ಚಾಗಿ ವಾಸ್ತವಿಕ ವ್ಯಕ್ತಿ ಘಟನೆಗಳನ್ನೇ ತಮ್ಮ ಕಾವ್ಯದ ಮುಖ್ಯ ವಸ್ತುವನ್ನಾಗಿ ರೂಪಿಸಿಕೊಂಡರು. ಹೀಗಾಗಿ ಒಮ್ಮಿಂದೊಮ್ಮೆಲೆ ಹುಟ್ಟಿದ ಕಾವ್ಯವು ಜನಪರವಾಗುವುದಿರಲಿ, ಜನತೆಯದೇ ಆಗಿ ಮಾರ್ಪಟ್ಟಿತು. ದಲಿತ ಸಾಹಿತ್ಯಕ್ಕೆ ಇರುವ ಶಕ್ತಿ ಕನ್ನಡ ಪರಂಪರೆಯ ಕಾವ್ಯಕ್ಕೆ ಹೊಸ ಚಿಗುರಷ್ಟೇ ಅಲ್ಲ ಹೊಸ ಹೂ, ಕಾಂಡ–ಹಣ್ಣನ್ನು ನೀಡಿತು. ಇದರಿಂದಾಗಿ ಹೊಸಗನ್ನಡ ಕಾವ್ಯದಲ್ಲಿ ದಲಿತ ಕಾವ್ಯಕ್ಕೆ ಚಾರಿತ್ರಿಕ ಮಹತ್ವ ದೊರೆತು, ಜನಸಾಮಾನ್ಯರಲ್ಲಿಯೂ ದಲಿತ ಪ್ರಜ್ಞೆ ಜಾಗೃತವಾದುದನ್ನು ನಾವು ಈ ಕಾಲಘಟ್ಟದಲ್ಲಿ ಗಮನಿಸಬಹುದು. ಬಸವಣ್ಣ, ಫುಲೆ, ಪೆರಿಯಾರ್, ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್ ಮುಂತಾದವರ ವಿಚಾರಧಾರೆಗಳು ಮತ್ತು ಅವರ ಕ್ರಾಂತಿಕಾರಕ ಧೋರಣೆಗಳು ಕನ್ನಡದ ದಲಿತ ಕವಿಗಳ ಮೇಲೆ ವಿಶೇಷ ಪ್ರಭಾವವನ್ನು ಉಂಟು ಮಾಡಿಸಿದ್ದು ದಲಿತ ಕಾವ್ಯದ ಈ ಸೃಷ್ಟಿಗೆ ಪ್ರೇರಣೆಯಾಯಿತು. ಹಾಗೆಯೇ ನೆರೆಯ ಮಹಾರಾಷ್ಟ್ರದಲ್ಲಿ ನಡೆದ ದಲಿತ ಪ್ಯಾಂಥರ್ಸ್ ಚಳವಳಿ, ಆಂಧ್ರದಲ್ಲಿ ಹುಟ್ಟಿದ ದಿಗಂಬರ ವಿಪ್ಲವ ಕಾವ್ಯ ಚಳವಳಿ ಮತ್ತು ಬಂಗಾಳದಲ್ಲಿ ಎದ್ದ ನಕ್ಸಲೈಟ್ ಕ್ರಾಂತಿ ದಲಿತ ಕಾವ್ಯದ ಮೇಲೆ ರಾಷ್ಟ್ರೀಯ ಪರಿಣಾಮವನ್ನುಂಟು ಮಾಡಿತ್ತು. ಮತ್ತು ಆಫ್ರಿಕದ ಕಪ್ಪುಕಾವ್ಯ, ಅಮೇರಿಕದಲ್ಲಿ ಕಪ್ಪು ಜನತೆಯ ಹೋರಾಟ ಮುಂತಾದ ಅಂತರರಾಷ್ಟ್ರೀಯ ಮಟ್ಟದಲ್ಲಿ ಜರುಗಿದ ಘಟನೆಗಳು ಕನ್ನಡ ದಲಿತ ಕವಿಗಳ ಮೇಲೆ ಪ್ರಭಾವ ಬೀರಿವೆ.

ದಲಿತ ಕಾವ್ಯಕ್ಕೆ ಪ್ರೇರಣೆಗಳು

ಎಪ್ಪತ್ತರ ದಶಕ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಅತ್ಯಂತ ಮಹತ್ತರವಾದದ್ದು. ರಾಜಕೀಯ, ಸಾಮಾಜಿಕ ಏರುಪೇರುಗಳ ಜೊತೆಗೆ ಪ್ರಮುಖವಾದ ಸಾಹಿತ್ಯಿಕ ಬದಲಾವಣೆಯನ್ನು ಕಂಡ ಕಾಲವಾಗಿದೆ. ದಲಿತ ಪ್ರಜ್ಞೆಯ ಹಿರಿಯ ಕಿರಿಯ ಕವಿಗಳು ಮಾನವ ಸ್ವಾತಂತ್ರ್ಯ–ಸಾಮಾಜಿಕ ಜೀವನದಲ್ಲಿ ಸಮಾನತೆ, ಶ್ರೀಸಾಮಾನ್ಯರಿಗೂ ಸಲ್ಲಬೇಕಾದ ನ್ಯಾಯ ಯಾವುದೇ ಬಗೆಯ ಶೋಷಣೆಯ ವಿರೋಧಿ ನಿಲುವನ್ನು ತಳೆದು ಪ್ರತಿಭಟನಾ ಕಾವ್ಯವನ್ನು ನಿರ್ಮಿಸುವುದು ಅನಿವಾರ್ಯವೆಂಬಂತೆ ಎಚ್ಚರಗೊಂಡ ಸಂದರ್ಭ ಅದಾಗಿತ್ತು. ಅಂತೆಯೇ ನವ್ಯ ಕಾವ್ಯದ ಗುಂಗಿನಲ್ಲಿದ್ದ ಬಹಳಷ್ಟು ಜನ ಕವಿಗಳು ಮತ್ತೇ ಬಂಡಾಯದತ್ತ ಒಲಿದು ಬಂದುದು ಇಲ್ಲಿ

ಗಮನಿಸಬೇಕಾದ ಅಂಶ. ಚಂಪಾ ಅವರು ಗುರುತಿಸಿರುವಂತೆ "ಎಪ್ಪತ್ತರ ದಶಕವು ಅನೇಕ ಆಸ್ಫೋಟನೆಗಳ ಸರಮಾಲೆಯಾಗಿ ಕಂಡುಬರುತ್ತದೆ. ಸಾಹಿತಿಗಳೇ ಕ್ರಾಂತಿದರ್ಶಿಗಳಾಗಿ ಹೋರಾಟಕ್ಕೆ ಧುಮುಕುವ ಅವಶ್ಯಕತೆ ಉಂಟಾಯಿತು. ಸಮಾಜವಾದಿ ಯುವ ಜನ ಸಭಾ, ನವನಿರ್ಮಾಣ ಸಮಿತಿ, ದಲಿತ ಸಂಘರ್ಷ ಸಮಿತಿ, ಸಮುದಾಯ ಮತ್ತು ಬಂಡಾಯ ಸಾಹಿತ್ಯ ಸಂಘಟನೆ, ಬರಹಗಾರರ ಒಕ್ಕೂಟ ಈ ಅವಧಿಯಲ್ಲಿ ಮಾಡಿದೆ" ಎಂದು ಹೇಳುವ ಅವರ ಮಾತುಗಳು ಅರ್ಥಪೂರ್ಣವಾದವು. ಕನ್ನಡ ಕಾವ್ಯ ಸಂದರ್ಭದ ಮೂಲ ಬದಲಾವಣೆಗಳು ಅಂದಂದಿನ ಕಾಲಮಾನ ಪರಿಸ್ಥಿತಿಯನ್ನವಲಂಬಿಸಿದ್ದರಿಂದ ಅಂದಿನ ಸಾಮಾಜಿಕ ಮತ್ತು ರಾಜಕೀಯ ಬದುಕಿನಲ್ಲಿ ಅನೇಕ ಸ್ಥಿತ್ಯಂತರಗಳು ಬಂದೊದಗುವುದು ಸಹಜ. ಜನರಿಂದಲೇ ನಿರ್ಧಾರಗೊಳ್ಳ ಬೇಕಿರುವ ಈ ಎಲ್ಲಾ ಸಂಗತಿಗಳು ಎಪ್ಪತ್ತರ ದಶಕದ ಜನರ ಸೂಕ್ಷ್ಮ ಪ್ರಜ್ಞೆಯನ್ನು ಹಲವಾರು ಬಗೆಯಲ್ಲಿ ಸ್ಫೋಟಗೊಳಿಸಿದವು.

ಸ್ವಾತಂತ್ರ್ಯ ಲಭಿಸಿದ ನಂತರದ ದಶಕಗಳಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಕಟ್ಟಿಕೊಂಡಿದ್ದ ಜನರ ಆಶೋತ್ತರಗಳು ತೀವ್ರವಾಗಿ ನೆಲಕಚ್ಚಿದಾಗ, ಆಗಬೇಕಿದ್ದ ಪರಿವರ್ತನೆಗಳು ರೂಪದಲ್ಲಿ ಮಾತ್ರ ಕಾಣಿಸಿಕೊಂಡು ಅದು ಆಚರಣೆಯಲ್ಲಿ ಅವನತಿ ಹೊಂದಿದಾಗ, ಅದುವರೆಗೂ ತುಂಬಿಕೊಂಡು ಬಂದಿದ್ದ ಜನರಲ್ಲಿಯ ದೇಶ ಪ್ರೇಮದ ಹಂಬಲ, ಹತಾಶೆ ಮತ್ತು ನಿರಾಶೆಗಳು ಬಿರುಗಾಳಿ ಹೊಡೆತಕ್ಕೆ ಬಿರುಕು ಬಿಟ್ಟ ಗೋಡೆಯಂತಾಗಿದ್ದವು. ಇಡೀ ಸಾಮಾಜಿಕ ಬದುಕೇ ಏರಿಳಿತಗಳ ಅಸಮಾತೋಲನಕ್ಕೆ ಬಲಿಯಾಗಿದ್ದರಿಂದ, ರಾಜಕೀಯದ ಅನೈತಿಕ ಕಾರ್ಯಗಳಿಂದ ಬೇಸತ್ತ ಸಂದರ್ಭದಲ್ಲಿ ಹೊಸ ಧ್ವನಿಯೊಂದರ ಉಗಮಕ್ಕೆ ಹೊಸ ರಾಗವನ್ನು ಸಜ್ಜುಗೊಳಿಸಿದವು.

ಈ ರೀತಿಯಾದ ಸಾಹಿತ್ಯಿಕ ಬೆಳವಣಿಗೆಯು ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗೆ ದಾರಿ ಮಾಡಿಕೊಟ್ಟಿತು. ಎಪ್ಪತ್ತರ ದಶಕದಲ್ಲಿ ದೇಶ ಮತ್ತು ರಾಜ್ಯದ ತುಂಬ 'ಗರೀಬಿ ಹಟಾವೋ' ಬಡತನ ನಿರ್ಮೂಲನೆಯ ಘೋಷಣೆ ಕರ್ನಾಟಕದ ದಲಿತರ ಮತ್ತು ಹಿಂದುಳಿದ ವರ್ಗದಲ್ಲಿ ತುಳಿತಕ್ಕೊಳಗಾದ ಜನತೆಯಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿತು. ಈ ಸಮಯದಲ್ಲಿ ಕರ್ನಾಟಕದಲ್ಲಿ 'ಹಾವನೂರು' ವರದಿಯು ಜಾರಿಯಾಗಿದ್ದು ದಲಿತರನ್ನ, ಹಿಂದುಳಿದವರನ್ನ ಪರೋಕ್ಷವಾಗಿ ತಮ್ಮ ಚರಿತ್ರೆ ಮತ್ತು ಸಾಂಸ್ಕೃತಿಕತೆಯನ್ನು ಕುರಿತು ಚಿಂತನೆ ಮಾಡಲು ಅಣಿಗೊಳಿಸಿತು. ಈ ದಶಕದಲ್ಲಿ ಅನೇಕ ಕಲಿತ-ದಲಿತ ಜನಾಂಗದ ಯುವಕರು ತಮ್ಮ ಸುತ್ತಮುತ್ತಲಿನ ದಲಿತ ಕೇರಿಯ ಸಮಗ್ರ ಚಿತ್ರಣವನ್ನು ಕಾವ್ಯದ ಮೂಲಕ ನಿರೂಪಿಸಲು ಪ್ರೇರಣೆ ನೀಡಿತು. ೧೯೭೫ರಲ್ಲಿ ಜಾರಿಗೆ ಬಂದ ತುರ್ತು ಪರಿಸ್ಥಿತಿ, ಜಯ ಪ್ರಕಾಶನಾರಾಯಣರ ಹೊಸ ವಿಚಾರಧಾರೆಗಳು, ಅವರ ರಾಜಕೀಯ ಪ್ರಜ್ಞೆ, ರಾಜ್ಯದಲ್ಲಿನ 'ಬೂಸಾ' ಸಾಹಿತ್ಯ ಪ್ರಕರಣ, ಮಾರ್ಕ್ಸ್‌ವಾದಿ ಚಿಂತನೆ, ಲೋಹಿಯಾ ಚಿಂತನೆ, ಅಂಬೇಡ್ಕರ್ ವಾದಗಳ ತೀವ್ರ ಪ್ರಭಾವಗಳಿಂದ ಪ್ರೇರಣೆ ಹೊಂದಿದ ದಲಿತ ಕವಿಗಳಲ್ಲಿ ಸ್ವತಂತ್ರ ವ್ಯಕ್ತಿತ್ವ ನಿರ್ಮಾಣಕ್ಕಾಗಿ ಬರೆಯುವ ಮನಸ್ಥಿತಿಗಳಿಗೆ ಈ ಸಾಮಾಜಿಕ ರಾಜಕೀಯ ಪಲ್ಲಟಗಳು ಪ್ರೇರಣೆಯಾದವು. ಬೆಲ್ಜಿ

ಪ್ರಕರಣವೂ ಇಡೀ ದಲಿತ ಜನಾಂಗದವರಿಗೆ ಜಾಗೃತ ಪ್ರಜ್ಞೆ ಮೂಡಿಸುವಲ್ಲಿ ವಿಶೇಷವಾದ ಪಾತ್ರ ವಹಿಸಿತು.

ಭಾರತದಂತಹ ಬಹುಸಂಸ್ಕೃತಿಯ ನಾಡಿನಲ್ಲಿ ಸ್ವಾತಂತ್ರ್ಯ ಬಂದರೂ ಏಕಮುಖಿ ಆಲೋಚನೆ ಮತ್ತು ಧರ್ಮದ ಮೂಲಕ ಜಾತಿ ಹೆಸರಿನಲ್ಲಿನ ಶೋಷಣೆಯು ಸಾಮಾಜಿಕ ಪಿಡುಗಾಗಿತ್ತು. ಭಾರತದಲ್ಲಿ ಜಾತಿ–ಮತ–ಪಂಥಗಳ ಮುಖಾಂತರ ನಡೆಯುವಷ್ಟು ಸಾಮಾಜಿಕ ವೈಪರಿತ್ಯಗಳು ಪ್ರಪಂಚದ ಯಾವ ರಾಷ್ಟ್ರದಲ್ಲಿಯೂ ಕಾಣಸಿಗುವುದಿಲ್ಲ. ಈ ಸಾಮಾಜಿಕ ಸಂಗತಿಯು ದಲಿತ ಸಮುದಾಯಕ್ಕೆ ನೀಡುವ ನೋವುಗಳು ಸ್ವಾತಂತ್ರ್ಯ ನಂತರ ಓದಿಗೆ ತೆರೆದುಕೊಂಡ ದಲಿತ ತರುಣರು ತಮ್ಮ ದಲಿತ ಸಮುದಾಯದ ಮೇಲೆ ನಡೆಯುತ್ತಿರುವ ಅನ್ಯಾಯ ಅತ್ಯಾಚಾರಗಳು, ಜಾತಿಯ ಹೆಸರಿನಲ್ಲಿ ತಮ್ಮ ಜನ ಅನುಭವಿಸುವ ಅವಮಾನ ಅಸಹ್ಯಗಳು ಕಾವ್ಯದ ಪ್ರಧಾನ ವಸ್ತುಗಳಾದವು.

೧೯೭೬ರಲ್ಲಿ ಕೋಲಾರ ಜಿಲ್ಲೆಯ ಹುಣಸೆಕೋಟೆಯಲ್ಲಿ ನಡೆದ ದಲಿತ ಹೆಣ್ಣು ಮಗಳೊಬ್ಬಳ ಮೇಲಿನ ಅತ್ಯಾಚಾರ ಪ್ರಕರಣ ಇಡೀ ದಲಿತ ಮನಸ್ಸುಗಳನ್ನೆಲ್ಲಾ ಒಂದುಗೂಡಿಸಿ ಸಂಘಟಿತರಾಗುವಂತೆ ಮಾಡಿತು. ತತ್ಪರಿಣಾಮವಾಗಿ ಅಂದಿನ ಘಟನೆಯನ್ನೇ ತಮ್ಮ ಸಿಟ್ಟಿನ ಕಾವ್ಯವನ್ನಾಗಿಸಿ, ದಲಿತ ಕವಿಗಳು ತಮಗಾದ ಅನ್ಯಾಯವನ್ನು ಅಸಮಾನತೆಯನ್ನು ಬೀದಿ ಬೀದಿಯಲ್ಲಿ ಹಾಡಿ ಸಾಮೂಹಿಕವಾಗಿ ಮೆರವಣಿಗೆ ಮಾಡಿ ಜಾಗೃತರಾಗಲು ಸಹಾಯ ಮಾಡಿತು. ಇದರಿಂದಾಗಿ ಇಡೀ ದಲಿತ ಸಮೂಹದ ಜನ ಸಾಮಾಜಿಕ, ಸಾಂಸ್ಕೃತಿಕ ಶಕ್ತಿಯನ್ನು ನ್ಯಾಯಕ್ಕಾಗಿ ಬಲಿಷ್ಠವಾದ ಜಾಗೃತ ಪ್ರಜ್ಞೆಯಾಗಿ ಮೈಗೂಡಿಸಿಕೊಳ್ಳುವಂತಾಯಿತು.

ಕರ್ನಾಟಕದಲ್ಲಿ ದಲಿತ ಕಾವ್ಯಕ್ಕೆ ಪ್ರೇರಣೆಯಾದ ಅಂಶಗಳು

* ನೆರೆ ರಾಜ್ಯದ ಚಳುವಳಿಗಳು
* ಪತ್ರಿಕೆಗಳ ಪ್ರಭಾವ
* ದಲಿತ ಕಲಾ ಮೇಳಗಳು
* ಬಂಡಾಯ ಸಾಹಿತ್ಯ ಸಂಘಟನೆ
* ದಲಿತ ಸಂಘಟನೆ

ನೆರೆ ರಾಜ್ಯದ ಚಳುವಳಿಗಳು: ದಲಿತ ಕಾವ್ಯದ ಹುಟ್ಟಿನ ಹಿನ್ನೆಲೆಯಲ್ಲಿ ನೆರೆಯ ರಾಜ್ಯದ ದಲಿತ ಚಳುವಳಿಗಳ ಪ್ರಭಾವವನ್ನು ಕಾಣಬಹುದು. ದೇಶದಲ್ಲಿನ ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿನ ಸ್ಥಿತ್ಯಂತರಗಳು ದಲಿತ ಕಾವ್ಯದ ಉಗಮ ವಿಕಾಸಕ್ಕೆ ಮಹತ್ವದ ಪಾತ್ರವಹಿಸಿವೆ. ಮಹಾರಾಷ್ಟ್ರದಲ್ಲಿನ ಮರಾಠಿ ದಲಿತ ಪ್ಯಾಂಥರ್ಸ್ ಚಳುವಳಿ, ಆಂಧ್ರದ ದಿಗಂಬರ ಚಳುವಳಿ, ಹಿಂದಿಯ ಜನವಾದಿ ಸಾಹಿತ್ಯಗಳ ಚಳುವಳಿಗಳು ಗಾಢವಾದ ಪರಿಣಾಮ ಬೀರಿದವು. ಅದೇ

ರೀತಿ 'ವಚನ ಚಳುವಳಿ'ಯು ಕೂಡ ದಲಿತರನ್ನು ಜಾಗೃತಿಗೊಳಿಸುವ, ದುಡಿಯುವ ವರ್ಗಗಳಿಗೆ ಮುಖಮಾಡುವಂತೆ ಮಾಡಿವೆ. ಇದರೊಂದಿಗೆ ಜಾಗತಿಕ ಮಟ್ಟದಲ್ಲಿ ನಡೆದ ಕಪ್ಪು ಜನರ ಸಾಂಸ್ಕೃತಿಕ ಆಂದೋಲನಗಳು ಪತ್ರಿಕೆಗಳ ಮೂಲಕ ಎಚ್ಚರಗೊಳಿಸಿವೆ. ದಕ್ಷಿಣ ಆಫ್ರಿಕಾದ ನೀಗ್ರೋ ಸಾಹಿತ್ಯ, ಚಿಲಿಯ ಜನಪರ ಸಾಹಿತ್ಯ ಆಂದೋಲನಗಳು ಕನ್ನಡ ದಲಿತ ಕವಿಗಳಿಗೆ ಹೊಸ ಸ್ಫೂರ್ತಿಯನ್ನು ತಂದುಕೊಟ್ಟವು.

ಪತ್ರಿಕೆಗಳ ಪ್ರಭಾವ: ಎಪ್ಪತ್ತರ ದಶಕದಲ್ಲಿ ಮೂಡಿಬಂದ ದಲಿತ ಕೇಂದ್ರಿತ ಪತ್ರಿಕೆಗಳಾದ 'ದಲಿತ', 'ಸಂಕ್ರಮಣ', 'ಶೂದ್ರ', 'ಶೋಷಿತ', 'ಪಂಚಮ', 'ಅಂಬೇಡ್ಕರವಾಹಿನಿ', 'ದಲಿತ ವಾಯ್ಸ್', 'ಅನ್ವೇಷಣೆ' ಈ ಮೊದಲಾದ ಪತ್ರಿಕೆಗಳಲ್ಲಿ ಬರುತ್ತಿದ್ದ ಚಿಂತನಪರ ಲೇಖನಗಳು ದಲಿತ ಕವಿಗಳನ್ನು ಎಚ್ಚರಗೊಳಿಸುವುದರ ಜೊತೆಗೆ ದಲಿತ ಜನಾಂಗದ ನೈಜ ಬದುಕನ್ನು ಸಾಂಸ್ಕೃತಿಕ ವ್ಯಾಪ್ತಿಯಲ್ಲಿ ಸೇರುವಂತೆ ಮಾಡಿದವು.

ದಲಿತ ಕಲಾಮೇಳಗಳು: ದಲಿತರು ತಮ್ಮ ನೋವು-ನಲಿವುಗಳನ್ನು ಹಾಡಿನ ರೂಪದಲ್ಲಿ ದಲಿತರ ಸಾಮಾಜಿಕ ಬದುಕನ್ನು ಶ್ರೀಮಂತಗೊಳಿಸುವ ಅದಕ್ಕೊಂದು ಸಾಂಸ್ಕೃತಿಕ ರೂಪ ನೀಡಲು ಬಳಸಿಕೊಂಡ ಮಾಧ್ಯಮವೆ 'ದಲಿತ ಕಲಾಮೇಳ'. ಈ ದಲಿತ ಕಲಾಮೇಳಗಳ ಮೂಲಕ ತಮ್ಮ ಜೀವನದ ಎಲ್ಲಾ ನೋವು-ನಲಿವುಗಳನ್ನು ಹಾಡುವ ಪ್ರಯತ್ನಪಟ್ಟರು. ಮುಂದೆ ೧೯೭೪ರ ಸುಮಾರಿಗೆ ಪ್ರತಿಭಾವಂತ ದಲಿತ ಹಾಡುಗಾರರು ತಮ್ಮಲ್ಲಿನ ಕೀಳರಿಮೆಯನ್ನು ತೊರೆದು ಸ್ವಾಭಿಮಾನಿಗಳಾಗಿ ತಮ್ಮ ನೋವುಗಳಿಗೆ ಕಾವ್ಯಕ್ಕೆ ಜೀವ ತುಂಬುವಲ್ಲಿ ಮಹತ್ವದ ಕಾರ್ಯ ಮಾಡಿದರು. ಈ ದಲಿತ ಕಲಾಮೇಳಗಳು ದಲಿತ ಹೊಸ ಕವಿಗಳ ಬದುಕಿಗೆ ಕಾವ್ಯಗಳ ಬರವಣಿಗೆಗೆ ಪ್ರೇರಕ ಶಕ್ತಿಯಾಗಿ ಹೊರಹೊಮ್ಮಿದವು.

ಬಂಡಾಯ ಸಾಹಿತ್ಯ ಸಂಘಟನೆ: ೧೯೭೪ರಲ್ಲಿ ಹುಟ್ಟಿಕೊಂಡ ಬಂಡಾಯ ಸಂಘಟನೆ ಸ್ವಾಭಾವಿಕವಾಗಿಯೇ ಎಲ್ಲ ದಲಿತ-ಹಿಂದುಳಿದ ಪ್ರಗತಿಪರ ವಿಚಾರ ಮಂಥನಕ್ಕೊಂದು ವಿಶೇಷ ವೇದಿಕೆಯಾಯಿತು. ಭಾರತದಲ್ಲಿ ಅನೇಕ ಶತಮಾನಗಳಿಂದ ಬೇರೂರಿದ್ದ ಯಜಮಾನ್ಯ ಸಂಸ್ಕೃತಿಗೆ ಸವಾಲೊಡ್ಡಿದ್ದ ಈ ಸಂಘಟನೆ ದಲಿತರಲ್ಲಿ ವಿಶೇಷವಾದ ಜಾಗೃತಿ ಪ್ರಜ್ಞೆಯನ್ನು ಮೂಡಿಸುವಲ್ಲಿ ಸಹಾಯಕವಾಯಿತು. ಈ ಸಂಘಟನೆಯಿಂದ ಬಂದಿರುವ ಪ್ರಮುಖ ಲೇಖಕರಾದ ಎನ್.ಹನುಮಂತಯ್ಯ, ಸಿದ್ಧಲಿಂಗಯ್ಯ, ಸತ್ಯಾನಂದ ಪಾತ್ರೋಟ ಮುಂತಾದವರು ಮುಂದೆ ದಲಿತ ಕಾವ್ಯವನ್ನು ಶ್ರೀಮಂತಗೊಳಿಸಿದರು.

ದಲಿತ ಸಂಘಟನೆಗಳು: ದಲಿತ ಸಂಘಟನೆಗಳು ದಲಿತ ಜನಾಂಗಕ್ಕೊಂದು ರಾಜಕೀಯ ಮತ್ತು ಸಾಮಾಜಿಕ ವಾತಾವರಣ ನಿರ್ಮಿಸಲು ಹೋರಾಟ ಮಾಡುವ ಮೂಲಕ ವ್ಯವಸ್ಥೆಯನ್ನು ಪ್ರತಿರೋಧಿಸುವ ಕಲೆಯನ್ನು ಸಾಮಾನ್ಯ ದಲಿತರಲ್ಲಿ ಮೂಡುವಂತೆ ಮಾಡಿದವು. ಈ ಪ್ರಜ್ಞೆ ಕಾವ್ಯದಲ್ಲಿಯು ಜನಪರ ಚಿಂತನಾಕ್ರಮವನ್ನು ಮೈಗೂಡಿಸುವಲ್ಲಿ ಸಹಕಾರಿಯಾಯಿತು.

ತಮಿಳು ಕಾವ್ಯ ಸಾಹಿತ್ಯ

ಕನ್ನಡದ ಸಾಹಿತ್ಯ ಚರಿತ್ರೆಯಲ್ಲಿರುವಂತೆ ಹಳಗನ್ನಡ, ಹೊಸಗನ್ನಡ ಸಾಹಿತ್ಯ ಎಂದು ತಮಿಳು ಸಾಹಿತ್ಯದಲ್ಲಿಯೂ ಅದೇ ಮಾದರಿ ಸಾಹಿತ್ಯ ಚರಿತ್ರೆ ಇರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ದಲಿತ ಕಾವ್ಯವು ವಿಸ್ತರಿಸಿಕೊಂಡಿದ್ದರ ಪರಿಣಾಮವಾಗಿ ನೆರೆಯ ರಾಜ್ಯಗಳಿಗೂ ತನ್ನ ಪ್ರಭಾವವನ್ನು ಬೀರಿತು. ಅಲ್ಲದೆ ೮೫–೯೦ರ ದಶಕದಲ್ಲಿ ದಲಿತ ಸಾಹಿತ್ಯದ ಬರಹಗಳನ್ನು, ಅಂಬೇಡ್ಕರ್ ಜೀವನ ಮತ್ತು ಬರಹಗಳನ್ನು ತಮಿಳಿಗೆ ಅನುವಾದಿಸಿದ್ದು, ತಮಿಳುನಾಡಿನಲ್ಲಿ ದಲಿತ ಕಾವ್ಯದ ಉಗಮಕ್ಕೆ ಪ್ರೇರಣೆಯಾದವು.

ಕರ್ನಾಟಕದಲ್ಲಿ ಹೇಗೆ ಕಾವ್ಯವು ನವೋದಯದಿಂದ ಆರಂಭವಾಗಿ ದಲಿತ ಕಾವ್ಯದವರೆಗೆ ವಿಸ್ತರಿಸಿಕೊಂಡಿತೋ ಹಾಗೆ ತಮಿಳುನಾಡಿನಲ್ಲಿಯೂ ಕೂಡ ಕಾವ್ಯವೂ ವಿವಿಧ ಹಂತಗಳಲ್ಲಿ ಬೆಳವಣಿಗೆ ಹೊಂದಿ ತಮಿಳು ದಲಿತ ಕಾವ್ಯ ಬೆಳೆದುಬಂದಿದೆ. ಹಾಗೇ ನಡೆದು ಬಂದ ಚಾರಿತ್ರಿಕ ಕಾಲಘಟ್ಟವನ್ನು ಅಧ್ಯಯನದ ಅನುಕೂಲಕ್ಕೆ ಈ ಕೆಳಕಂಡಂತೆ ವಿದ್ವಾಂಸರು ವರ್ಗೀಕರಿಸಿಕೊಂಡಿದ್ದಾರೆ.

ತಮಿಳು ಸಾಹಿತ್ಯ ಚರಿತ್ರೆಯಲ್ಲಿ ಕಾವ್ಯ ಪ್ರಕಾರ, ಬೆಳವಣಿಗೆಯನ್ನು ಎರಡು ರೀತಿಯಾಗಿ ವಿಂಗಡಿಸುತ್ತಾರೆ.

ಅ. ಸಾಂಪ್ರದಾಯಿಕ ಕವಿತೆ (ಮರಭು ಕವಿದೈ)

ಆ. ಹೊಸ ಕವಿತೆಗಳು (ಪುದು ಕವಿದೈ)

ಅ. ಸಾಂಪ್ರದಾಯಿಕ ಕವಿತೆಗಳು: ತಮಿಳು ಕಾವ್ಯ ಸಾಹಿತ್ಯದಲ್ಲಿ ಆಕಾರ, ಬಣ್ಣ, ರೂಪ, ಪ್ರತಿಮಾಶಾಸ್ತ್ರ, ಛಂದಸ್ಸು ಮುಂತಾದ ವ್ಯಾಕರಣ ಪ್ರಕಾರಗಳಲ್ಲಿ ಹೆಚ್ಚು ಬದಲಾವಣೆ ಕಾಣದೆ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಗ್ರಂಥಸ್ಥ ಭಾಷೆಯಲ್ಲಿ ಛಂದಸ್ಸು, ಲಯ, ಪ್ರಾಸಗಳ ಛಂದೋ ಪ್ರಕಾರದಲ್ಲಿ ಮೂಡಿಬಂದಿರುವ ಕಾವ್ಯ ಪರಂಪರೆಯು ಸಾಂಪ್ರದಾಯಿಕ ಕವಿತೆಗಳಾಗಿವೆ. ಸಾಂಪ್ರದಾಯಿಕ ಕವಿತೆಗಳು ಬಹುಪಾಲು ಪ್ರೇಮ, ಪರಿಸರ, ಧರ್ಮ, ರಾಜಕೀಯದ ವಿಷಯಗಳನ್ನೆ ಮತ್ತೆ ಮತ್ತೆ ಕಾವ್ಯದ ವಸ್ತುವಾಗಿಸಿಕೊಂಡವು. ಇದನ್ನು ಪ್ರಾ.ಪಾವಿನಂ(ಹಾಡು, ಕಲ್ಪನೆ) ಎಂಬ ಬಗೆಯಲ್ಲಿ ಅನುಪ್ರಾಸ, ಆದಿಪ್ರಾಸ, ತಾಳ, ಗಣ, ಚರಣ, ನಿರಂತರತೆ ಮುಂತಾದ ಅಂಶಗಳು ಕಡ್ಡಾಯವಾಗಿ ಹೊಂದಿರಬೇಕೆಂಬ ನಿಯಮವಿತ್ತು. ಸಂಗಂ ಕಾಲದ ಸಾಹಿತ್ಯದಿಂದಲೂ ಇಪ್ಪತ್ತನೆಯ ಶತಮಾನದ ಆರಂಭದವರೆಗೆ ತಮಿಳು ಸಾಹಿತ್ಯದಲ್ಲಿ ರಾಜ ವೈಭವದಿಂದ ಮೆರೆದ ಸಾಹಿತ್ಯವೇ ಸಾಂಪ್ರದಾಯಿಕ ಕಾವ್ಯಗಳು.

ಆ. ಹೊಸ ಕವಿತೆಗಳು(ಪುದು ಕವಿದೈ): ಇಪ್ಪತ್ತನೆಯ ಶತಮಾನದ ಆರಂಭದ ಕಾಲಘಟ್ಟದ ತಮಿಳು ಸಾಹಿತ್ಯದಲ್ಲಿ ಹೊಸ ಕವಿತೆಗಳು ಕಾಣಿಸಿಕೊಂಡವು. ಈವರೆಗೆ ಇದ್ದ ಸಾಂಪ್ರದಾಯಿಕ

ಕವಿತೆಗಳ ಲಕ್ಷಣ, ಛಂದಸ್ಸು, ಪ್ರಾಸ, ಮರಭು, ಅಲಂಕಾರಗಳ ಬಿಗಿ ಮುಷ್ಟಿಯಿಂದ ಮುಕ್ತಿ ಪಡೆದು ಸ್ವತಂತ್ರ ಕವಿತೆಗಳಾಗಿ ಮೂಡಿಬಂದವು.

ಭಾರತಿಯಾರ್ ಅವರು ಬರೆದ ವಚನ ಕವಿತೆಗಳು(ವಸನ ಕವಿದೈಗಳ್) ತಮಿಳಿನಲ್ಲಿ ಕಾಣುವ ಹೊಸ ಕವಿತೆಗಳಾಗಿವೆ. ಪ್ರಾರಂಭದಲ್ಲಿ 'ಸ್ವ ಇಚ್ಛಾ ಕವಿತೆಗಳು'(ಸುಯೇಚ್ಚ ಕವಿದೈ) ಲಘು ಕವಿತೆಗಳು, 'ವಿಡುನಿಲೈಯಿಪ್ಪಾ' ಮುಂತಾದ ಹೆಸರುಗಳಲ್ಲಿ ಕರೆಯಲಾಗುತ್ತದೆ.

ಹೊಸ ಕವಿತೆಯನ್ನು ಕುರಿತು ಕವಿಮಣಿ ದೇಶಿಗವಿನಾಯಗಂರವರು ಒಂದು ಕವಿತೆಯಲ್ಲಿ ಈ ರೀತಿ ತಿಳಿಸುತ್ತಾರೆ.

"ಅಂತರಂಗದಲ್ಲಿರುವ ಕವಿತೆ– ಸುಖ
ಅದರ ಮೂರ್ತರೂಪವೇ ಕವಿತೆ
ಶುದ್ಧ ತಮಿಳಿನಲ್ಲಿ– ಸತ್ಯ
ತಿಳಿಸಿ ಕೊಡುವುದೇ ಕವಿತೆ"

"ಉಳ್ಳತ್ತುಳ್ಳದು ಕವಿದೈ– ಇನ್‌ಬಂ
ಉರುವೆಡುಪ್ಪದು ಕವಿದೈ
ತೆಳ್ಳತ್ ತೆಳಿಂದ ತಮಿಳಿಲ್– ಉಣ್ಮೈ
ತೆರಿಂದುರೈಪ್ಪದು ಕವಿದೈ"

(ಕವಿಮಣಿ ದೇಶಿಗವಿನಾಯಗಂ, ಮಲರುಂ ಮಾಲೈಯುಂ, ಪು. ೪೫) ಎನ್ನುವ ಕವಿತೆಯಲ್ಲಿ ಹೊಸ ಕವಿತೆಗಳು ಹೇಗೆ ತನ್ನ ಮೂಲವನ್ನು ದಿಕ್ಕರಿಸಿ ಹೊಸ ಬಗೆಯ ನಿರೂಪಣೆಯಲ್ಲಿ ವ್ಯಕ್ತಗೊಂಡಿವೆ. ಅವುಗಳ ಕಥಾ ಸಾರವು ಹೊಸ ಚಿಂತನೆಗಳನ್ನು ಮೈಗೂಡಿಸಿಕೊಂಡಿರುವ ಬಗ್ಗೆ ಕವಿಗಳು ತಿಳಿಸುತ್ತಾರೆ.

೧೯೬೦ರ ಕಾಲಘಟ್ಟದಲ್ಲಿ ತಮಿಳಿನ ಕವಿತೆಗಳಿಗೆ ಆಂಗ್ಲ ಪದವಾದ (ನ್ಯೂ ಪೊಯಟ್ರಿ) New poetry, Modern poetry ಎನ್ನುವ ಪದಗಳನ್ನು ಸಮನಾಗಿ ಬಳಸಲಾಯಿತು. ಕವಿತೆಯ ಭಾವಗಳಿಗೆ ಸ್ವತಂತ್ರವಾದ ರೂಪ ಕೊಡುವ ಕಾವ್ಯಕ್ಕೆ 'ವಸನ ಕವಿದೈ'(ವಚನ ಕವಿತೆ) ಎಂದು ಕರೆಯಲಾಗಿತ್ತು. ನಂತರ ಛಂದಸ್ಸಿಲ್ಲದ ಕವಿತೆ 'ಲಘು ಕವಿತೆ' ಕಟ್ಟಿಲಡಂಗಾಕಕ್ ಕವಿದೈ' (Free verce) ಮುಂತಾದ ಹೆಸರಿನ ಮೂಲಕ ಕರೆಯಲಾಗಿತ್ತು. ಸಂಪ್ರದಾಯ ಕಾವ್ಯದಿಂದ ಬದಲಾಗಿ ಹೊಸದಾಗಿ ಬಂದ ಕವಿತೆಗಳಿಗೆ 'ಹೊಸ ಕವಿತೆಗಳು' ಎಂದು ಕರೆಯಲಾಯಿತು. ಸುಬ್ರಮಣ್ಯ ಭಾರದಿಯಾರ್ ತಮ್ಮ ಎಲ್ಲಾ ಕವಿತೆಗಳಿಗೆ ಹೊಸ ಕವಿತೆಗಳು ಎಂದು ಕರೆದಿದ್ದಾರೆ. ಅವರು ಒಂದು ಕವಿತೆಯಲ್ಲಿ,

"ರುಚಿ ಹೊಸದು, ವಸ್ತು ಹೊಸದು,
ಸಮೃದ್ಧಿ ಹೊಸದು,
ಮಾತು ಹೊಸದು, ಶೋಧಿಸಲು
ನವಕವಿತೆ"

ಎಂದು ಹೊಸ ಕವಿತೆಯನ್ನು ಕರೆದಿದ್ದಾರೆ. ಹೊಸ ಕವಿತೆಗಳಲ್ಲಿ ಅನೇಕ ಪ್ರಯೋಗ ಮತ್ತು ವಚನಕ್ಕಿಂತ ಮೀರಿದ ಕವಿತೆಗಳ ಪೂರ್ಣತ್ವವನ್ನು ನೀಡಿದ್ದರಿಂದ ಅವರನ್ನು 'ಹೊಸ ಕವಿತೆಗಳ ತಂದೆ' ಎಂದು ಕರೆಯುತ್ತಾರೆ. ಸಾಮಾಜಿಕ ಬದಲಾವಣೆಗಳ ಉದ್ದೇಶ ಹೊಂದಿದ ಭಾರತಿಯಾರ್ ಜಾತಿ ವಿನಾಶ, ಅಸ್ಪೃಶ್ಯತೆಯ ನಾಶವನ್ನು ಕುರಿತು ಅನೇಕ ಕವಿತೆಗಳನ್ನು ಬರೆದಿದ್ದಾರೆ.

'ಜಾತಿಗಳು ಇಲ್ಲ ಮಗುವೆ!! ಕುಲ	"ಜಾದಿಗಳ್ ಇಲ್ಲೈಯಡಿ ಪಾಪ್ಪಾ! ಕುಲತ್
ಮೇಲು-ಕೀಳು ಹೀನ ಎಂದು	ತಾಳ್ಚ್ಚಿ ಉಯರ್ಚ್ಚಿ
ಹೇಳುವುದು ಪಾಪ	"ಸೊಲ್ಲಲ್ ಪಾವಂ"

(ಪಾಪ್‌ಪಾಪ್ ಪಾಟ್ಟು-೧೫) ಎಂದು ಮಗುವನ್ನು ನೋಡಿ ಹಾಡುತ್ತಾರೆ.

"ಶೂದ್ರನಿಗೊಂದು ನೀತಿ ಸೋಮಾರಿಯಾಗಿ	"ಸೂತ್ತಿರ ನುಕ್ಕೊರು ನೀತಿ ದಣ್‌ಡಚ್
ತಿನ್ನುವ ಬ್ರಾಹ್ಮಣನಿಗೆ ಬೇರೊಂದು ನೀತಿ	'ಸೋರುಣ್ಣುಂ ಪಾರ್ಪುಕ್ಕು ವೇರೊರು ನೀದಿ
ಶಾಸ್ತ್ರ ಹೇಳುವುದಂತೆ ಅದು	ಸಾತ್ತಿರಂಜ್ ಸೊಲ್ಲಿಡುವಮಾಯಿನ್ ಅದು
ಶಾಸ್ತ್ರವಲ್ಲ ತಂತ್ರವೆಂದು ಕಂಡೆವು"	ಸಾತ್ತಿರಮಂಡ್ರು ಸದಿಯೆಂಡ್ರು ಕಂಡೋಂ"

(ಉಯಿರ್ ಪೆಟ್ರ ತಮಿಳರ್ ಪಾಟ್ಟು ಸೆಲ್ಲೈಗಳ್-೧೩) ನೀತಿ ನಿಯಮಗಳನ್ನು ಖಂಡಿಸುವ ರೀತಿಯಲ್ಲಿ ಕಾವ್ಯವು ಶಾಸ್ತ್ರವನ್ನು ತಂತ್ರವೆಂದು ಹೇಳಿ ಅದರಿಂದ ದಲಿತರನ್ನು ಧರ್ಮ ದೇವರ ಹೆಸರಿನಲ್ಲಿ ಹೇಗೆ ವಂಚನೆ ಮಾಡುತ್ತಾ ಬಂದಿದೆ ಎನ್ನುವ ಅಂಶಗಳನ್ನು ಈ ಕವಿತೆ ತಿಳಿಸುವ ಪ್ರಯತ್ನ ಮಾಡುತ್ತದೆ.

ತಮಿಳಿನ ವಿದ್ವಾಂಸರು ಹೊಸ ಕವಿತೆಗಳ ಬೆಳವಣಿಗೆಯನ್ನು ಸಾಹಿತ್ಯ ಪತ್ರಿಕೆಗಳ ಮೂಲಕ ಗುರುತಿಸುವುದನ್ನು ಕಾಣಬಹುದು.

ಮಣಿಕ್ಕೊಡಿ ಕಾಲ (೧೯೩೦-೧೯೪೫)

ಎಳುತ್ತ ಕಾಲ (೧೯೫೦-೧೯೭೦)

ವಾನಂಬಾಡಿ ಕಾಲ (೧೯೭೦-ನಂತರ)

ಪ್ರಸ್ತುತ ಕಾಲ

ಮಣಿಕ್ಕೊಡಿ ಕಾಲ (೧೯೩೦-೧೯೪೫)

೧೯೩೦ರ ಸೆಪ್ಟಂಬರ್ ೧೬ರಂದು ಕು.ಶ್ರೀನಿವಾಸನ್, ವ.ಇ.ರಾಮಸ್ವಾಮಿ, ತಿ.ಸ. ಸೊಕ್ಕಲಿಂಗಂರ ಪ್ರಯತ್ನದಿಂದ 'ಮಣಿಕ್ಕೊಡಿ' ಪತ್ರಿಕೆ ಆರಂಭವಾಯಿತು. ಆರಂಭದಲ್ಲಿ ರಾಜಕೀಯ ಸಮುದಾಯವನ್ನೇ ಚಿತ್ರಿಸಿದ ಪತ್ರಿಕೆ ನಂತರ ಸಾಹಿತ್ಯ ಬೆಳವಣಿಗೆಯೇ ಮೂಲ ಉದ್ದೇಶವಾಗಿ

ಮಾರ್ಪಟ್ಟಿತು. ಲೇಖನ ಮತ್ತು ಸಣ್ಣ ಕಥೆಗಳ ಜೊತೆಯಲ್ಲಿ ಪುದುಮೈಪಿತ್ತನ್, ನ.ಪಿಚ್ಚಮೂರ್ತಿ, ಕು.ಬಾ.ರಾಜಗೋಪಾಲನ್‌ರ ಕವಿತೆಗಳನ್ನು ಪ್ರಕಟಿಸಿತು. ಇದು ಹೊಸ ಕವಿತೆಗಳ ಬೆಳವಣಿಗೆಗೆ ಕಾರಣವಾಯಿತು. ಆದ್ದರಿಂದ ಈ ಕಾಲವನ್ನು ಮಣಿಕ್ಕೊಡಿ ಕಾಲ ಎಂದು ಕರೆಯಲಾಯಿತು. ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ ಪತ್ರಿಕೆಯನ್ನು ಹೆಸರಿಸಿ ಕಾಲಘಟ್ಟವನ್ನು ವಿಂಗಡಿಸುವ ಕ್ರಮ ತಮಿಳಿನಲ್ಲಿ ಇದೆ.

ಭಾರತೀಯರ ನಂತರ ಹೊಸಕವಿತೆಗಳಂತೆ ಕಾವ್ಯ ರಚನೆಗೆ ಪ್ರಯತ್ನಿಸಿದವರು ನ.ಪಿಚ್ಚಮೂರ್ತಿ ಇವರು 'ಪಿಕ್ಷ್ವಾ' ಎಂಬ ನಾಮಾಂಕಿತದಲ್ಲಿ ಕವಿತೆಗಳನ್ನು ಬರೆದರು. ಸಾಂಪ್ರದಾಯಿಕ ಛಂದಸ್ಸಿನ ರೀತಿಗೆ ಒಳಪಡದ ಅಮೇರಿಕಾದ ಕವಿ ವಾಲ್ಟ್ ಮಿಲ್ಬನ್‌ರ 'Leaves of Grass' ಎಂಬ ಸಂಕಲನ ಮತ್ತು ಭಾರತಿಯವರ 'ವಚನ ಕವಿತೆ'ಗಳು ನನ್ನ ಕವಿತೆಗಳ ಬರವಣಿಗೆಗೆ ಮುಖ್ಯ ಪ್ರೇರಣೆ ಬೀರಿದ ಅಂಶಗಳಾಗಿವೆ ಎಂದು ಪಿಕ್ಷ್ವಾ ಅವರು ತಿಳಿಸುತ್ತಾರೆ. ೧೯೩೪ರಲ್ಲಿ ಮಣಿಕ್ಕೊಡಿಯಲ್ಲಿ ಪ್ರಕಟವಾದ ಇವರ ಮೊದಲ ಕವಿತೆ 'ಕಾದಲ್'. ಇವರ ನಂತರ ಕು.ಬ. ರಾಜಗೋಪಾಲನ್ ಹಳ್ಳಿಯ ಪ್ರೇಮದ ಕುರಿತು ಮತ್ತು ಗ್ರಾಮೀಣ ಸೊಗಡಿನಲ್ಲಿ ಕವಿತೆಯನ್ನು ರಚಿಸಿದರು. 'ರಾಕ್ಕಿ ನೆನಪ್ಪು' ಎಂಬ ಕವಿತೆಯಲ್ಲಿ ದಲಿತ ಹುಡುಗಿಯನ್ನು ಕುರಿತು ಈ ರೀತಿಯಾಗಿ ಹೇಳುತ್ತಾರೆ.

"ಹುಡುಗಿ ಅವಳು ಏನು ಶೋಕಿ	"ಕುಟ್ಟಿ ಅವ ಎಣ್ಣ ಸೋಕ್ಕು
ಏನುಜ ಜೋರು ಗೊತ್ತೇ?	ಎನ್ನ ಸೋರು ತೆರಿಯುಮಾ?
ಅಸ್ಪೃಶ್ಯದ ಜಾತಿಯವಳು	ತೀಂಡಾದ ಜಾದಿಯವ
ಕಲಿಯನ್ ಸಾಂಬಾನ್‌ನ ಮಗಳು!"	ಕಲಿಯನ್ ಸಾಂಬಾನ್ ಪೊಣ್ಣುಡಾ!"

(ರಾಕ್ಕಿ ನೆನಪು, ಮಣಿಕ್ಕೊಡಿ ಪತ್ರಿಕೆ, ಏಪ್ರಿಲ್ ೧೫, ೧೯೩೭)

ಎಂದು ದಲಿತ ಜಾತಿಯ ಹುಡುಗಿಯ ಮೈಮಾಟಕ್ಕೆ ಮನಸೋತು, ಅವಳ ಬಿಂಕ ಬಿಗುಮಾನವನ್ನು ಕುರಿತು ವರ್ಣಿಸಿದ್ದಾರೆ. ಇವರ ನಂತರ ವಳ್ಳಿಕಣನ್ ಸಹ ಹಲವು ಕವಿತೆಗಳನ್ನು ರಚಿಸಿದರು. ಇವರ ವೇದನೈ

ಸತ್ಯಕ್ಕಾಗಿ	ಉಣ್ಮೈಕ್ಕಾಗ
ಹಕ್ಕಿಗಾಗಿ	ಉರಿಮೈಕ್ಕಾಗ
ಮನುಷ್ಯರಿಗಾಗಿ	ಮನಿದರುಕ್ಕಾಗ
ಸತ್ತ ಸಾಕ್ರಟಿಸ್, ಲಿಂಕನ್	ಸೆತ್ತ ಸಾಕ್ರಟಿಸ್ ಲಿಂಕನ್
ಬುದ್ಧ ಮುಂತಾದವರಿಗಾಗಿ	ಬುದ್ದನ್ ವಕ್ಕೆಯಾರಾ

ಎಲ್ಲರ ಆತ್ಮವು　　　　　　　　ಅತ್ತನೈಪೇರಿಯನ್ ಆನ್‌ಮಾವುಂ
ಶಾಂತಿ ಇಲ್ಲದೆ ಕಾಡುತ್ತಿದೆ　　　　　ಅಮ್ಮೈದಿಯಟ್ರುತ್ ತವಿಕ್ಕುಂ
ಎಂದೂ ಎಂದೂ　　　　　　　　ಎಂಡ್ರೂಂ ಎಡ್ರುಂ

(ವಳ್ಳಿಕಣ್ಣನ್, ಅಮರ ವೇದನೈ, ಪು. ೧೮)

ಎಂಬ ಕವಿತೆಯಲ್ಲಿ ಸಮಕಾಲೀನ ಸಂದರ್ಭದಲ್ಲಿನ ಒಗ್ಗಟ್ಟನ್ನು ಸಮುದಾಯಗಳ ಸಂಘರ್ಷವನ್ನು ಕವಿತೆಯಲ್ಲಿ ಹಿಡಿದಿಡುವ ಪ್ರಯತ್ನ ಮಾಡುತ್ತಾರೆ. ಇವರೊಂದಿಗೆ ಸಿ.ಸು. ಸೆಲ್ವಪ್ಪಾ, ಪುದುಮೈಪಿತ್ತನ್ ಮುಂತಾದವರು ಮಣಿಕ್ಕೊಡಿ ಎನ್ನುವ ಮೊದಲ ಘಟ್ಟದ ಕವಿಗಳಾಗಿದ್ದಾರೆ. **'ಜೆಯ ಬಾರದಿ', 'ಸುಹಾಷಿನಿ', 'ಗ್ರಾಮ ಊಳಿಯನ್', 'ಕಾಲಯೋಗಿಣಿ'** ಮುಂತಾದ ಪತ್ರಿಕೆಗಳು ಕವಿತೆಗಳನ್ನು ಪ್ರಕಟಿಸಿದವು. ಪ್ರಬಲರಾದ ಅಧಿಕಾರಿ ವರ್ಗದ ವಿರುದ್ಧ ಕವಿತೆಗಳು ಮತ್ತು ಸ್ವಾತಂತ್ರ್ಯದ ಚಿಂತನೆಯನ್ನು ಈ ಕಾಲದ ಕವಿತೆಗಳು ಚಿತ್ರಿಸಿದವು.

ಎಳುತ್ತು ಕಾಲ (೧೯೫೦-೧೯೭೦)

ಸಿ.ಸು.ಸೆಲ್ಲಪ್ಪಾ ೧೯೫೯ರ ಜನವರಿಯಲ್ಲಿ ಎಳುತ್ತು ಪತ್ರಿಕೆಯನ್ನು ಪ್ರಾರಂಭ ಮಾಡುತ್ತಾರೆ. ಕ.ನ.ಸುಬ್ರಮಣ್ಯಂ ಅವರು ಪ್ರಾರಂಭದಲ್ಲಿ ಎಳುತ್ತು ಪತ್ರಿಕೆಯಲ್ಲಿ ಕವಿತೆ ಬರೆಯಲು ಆರಂಭಿಸಿದರು. ತಿ.ಸೋ. ವೇಣುಗೋಪಾಲನ್, ಡಿ.ಕೆ.ದುರೈಸ್ವಾಮಿ, ಸುಂದರ ರಾಮಸ್ವಾಮಿ ಮುಂತಾದವರು ಕವಿತೆಗಳನ್ನು ಬರೆದರು. **'ನಾನು-ಕವಿಯಾದೆನು', 'ಪ್ರವಾಹ', 'ನಿನ್ನ ಕೈ ಉಗುರು', 'ಕವಿತೆ', 'ಜೀವನ', 'ಬಾಗಿಲನ್ನು ತೆರೆ', 'ಮೇಸ್ತ್ರಿಗಳು'** ಮುಂತಾದ ಗುರುತಿಸುವಂತಹ ಕವಿತೆಗಳಾಗಿವೆ. ಇವುಗಳ ಪ್ರೇರಣೆಯಿಂದ ಮಾ ಇಳಯ ಪೆರುಮಾಳ್, ಕಿ.ಕಸ್ತೂರಿರಂಗನ್, ಸಿ.ಪಳನಿಸ್ವಾಮಿ, ಚಕ್ರದಾರಿ, ಸು.ಬ.ಕೋ.ನಾರಾಯಣಸ್ವಾಮಿ ಆ ಕಾಲಘಟ್ಟದಲ್ಲಿ ಕವಿತೆಗಳನ್ನು ಬರೆಯಲು ಆರಂಭಿಸಿದರು. ದ.ಸಿ.ರಾಮಲಿಂಗಂರ **'ನಾನು', 'ಬೆಳೆ'**, ಕಿ.ಕಸ್ತೂರಿರಂಗನ್‌ರ **'ಕಲ್ಪನೆಯ ಹುಡುಗಿ'**, ಜೆಯಕಾಂತನ್‌ರ **'ನೀನು ಯಾರು'**, ವೇಣುಗೋಪಾಲನ್‌ರ **'ಜ್ಞಾನ'** ಮುಂತಾದ ಕವಿತೆಗಳು ಈ ಕಾಲಘಟ್ಟದಲ್ಲಿ ಬಂದವು. ಈ ಕಾಲದ ಮತ್ತಷ್ಟು ಮುಖ್ಯವಾದ ಕವಿಗಳಲ್ಲಿ ಒಬ್ಬರು ಸಿ.ಮಣಿ ಇವರ ಮೊದಲ ಕವಿತೆ **'ಗುಹೆ', 'ರಂಗಸ್ಥಳ', 'ತಿರಸ್ಕಾರ', 'ನಗರ', 'ಬಾಗಿಲನ್ನು ಹಾಕು'** ಮುಂತಾದ ಪ್ರಮುಖ ಕವಿತೆಗಳು ಬರೆದಿದ್ದಾರೆ.

ಮಧ್ಯಮ ವರ್ಗದ ಜನರ ಬದುಕಿನ ಜೀವನ ದೃಷ್ಟಿ ಕೋನಗಳನ್ನು ಹೊಸತು ಮತ್ತು ಹಳೆಯದರ ನಡುವೆ ಸಂಭವಿಸುವ ಗೊಂದಲಗಳನ್ನು ಪ್ರಧಾನವಾಗಿರಿಸಿಕೊಂಡು ಕವಿತೆಗಳು ಪ್ರಕಟವಾದವು. **'ಇಲಕ್ಕಿಯ ವಟ್ಟಂ', 'ನಡೈ'** ಮುಂತಾದ ಪತ್ರಿಕೆಗಳಲ್ಲೂ ಕವಿತೆಗಳು ಪ್ರಕಟವಾಗಿದ್ದರೂ ಎಳುತ್ತು ಪತ್ರಿಕೆಯಲ್ಲಿ ಪ್ರಬಲವಾಗಿ ಕವಿತೆಗಳು ಪ್ರಕಟವಾಗಿ ಪ್ರಶಂಸೆಗೆ ಪಾತ್ರವಾಗಿತ್ತು. ಆದ್ದರಿಂದ ಈ ಕಾಲವನ್ನು ಎಳುತ್ತು ಕಾಲವೆಂದು ಗುರುತಿಸುತ್ತಾರೆ.

ವಾನಂಬಾಡಿ ಕಾಲ (೧೯೭೦–ನಂತರ)

ಮನುಷ್ಯ ಸಮುದಾಯದ ದುಃಖಗಳನ್ನು ವೇದನೆಗಳನ್ನು ಇಲ್ಲಿಯಾದರೂ; ಎಲ್ಲಿಯಾದರೂ, ಸ್ವಂತ ಸಂಬಂಧವನ್ನು ಸಂಭ್ರಮಿಸು(ಕೊಂಡಾಡು)ವವರು ನಾವು. ಮಾನವೀಯತೆ, ಶ್ರಮದ ಮಹತ್ವ ವಿಜ್ಞಾನ ಇವುಗಳನ್ನು ಕವಿತೆಯ ಕಲೆಯಲ್ಲಿ ಜೀವ ನೀಡುವ ಕೈಗಳು ನಮ್ಮವು. ಭಾಷೆ, ವರ್ಣ, ಜಾತಿ–ಮತ, ಬಣ್ಣದ ಶೋಷಣೆ, ಬಿರುಕುಗಳು, ಭೂತಗಳನ್ನು ಹುದಾರಿ ಹುಳುವಿನಂತೆ ತುಳಿದು ಹಿಸುಕಿ ಹಾಕುವ ಆವೇಶ ನಮ್ಮ ಮೂಲ. ಹೊಸ ಮಾತು(ಯುಕ್ತಿ)ಗಳಲ್ಲಿ, ಹೊಸ ಬಗೆಯ ರೂಪದಲ್ಲಿ, ಸಮಾಜದಲ್ಲಿ ಅಧೀನಕ್ಕೊಳಪಟ್ಟವರಿಗೆ ನ್ಯಾಯ ಒಳಗಿರಿಸಿಕೊಂಡು ಸೃಷ್ಟಿಸುವ ಸಾಹಿತ್ಯವಾದಿಗಳು ನಾವು ಒಂದೇ ಸಮಾಜದಲ್ಲಿ ಸಮುದಾಯದ ದೃಷ್ಟಿಕೋನವನ್ನು ಹೊಸ ಸಾಹಿತ್ಯ ಉದ್ದೇಶವನ್ನು ಹೊಂದಿದ ಒಂದು ಕವಿತಾ ಚಳುವಳಿ ನಮ್ಮದು. 'ಮಾಣುಡಂ ಪಾಡುಂ ವಾನಂಬಾಡಿಗಳ್' ಎಂದು ವಾನಂಬಾಡಿಗಳು ತಮ್ಮನ್ನು ತಾವು ಪ್ರಕಟಪಡಿಸಿಕೊಳ್ಳುತ್ತಾರೆ.

ವರ್ತಮಾನದ ಸತ್ಯಗಳನ್ನು ಭವಿಷ್ಯತ್ತಿನ ಮಹೋನ್ನತಿಗಳನ್ನು ತಿಳಿಯುವುದಕ್ಕಾಗಿ 'ಸತ್ಯವನ್ನು' ಭಾವನೆಗಳನ್ನು ರೆಕ್ಕೆಗಳಾಗಿಸಿ' ಕವಿತೆಗಳನ್ನು ಬಾನಿನಲ್ಲಿ ಸಂಚರಿಸಲು ಆರಂಭಿಸಿದ ಕವಿಗಳೇ ವಾನಂಬಾಡಿ(ಪತಂಗ ಚಿಟ್ಟೆ)ಗಳು.

ಸಮುದಾಯದ ಸಂಕಟಗಳನ್ನು ಕಂಡು ನೈತಿಕವಾಗಿ ಕೋಪಗೊಂಡು, ತಮ್ಮ ಮನದಲ್ಲಿನ ಭಾವನೆಗಳಿಗೆ ಕವಿತೆಯ ರೂಪಕೊಡಲು ಪ್ರಯತ್ನಿಸಿದ ಕವಿಗಳು ಈ ವಾನಂಬಾಡಿಗಳು ಕವಿಗಳು. ಈ ಕಾಲದ ಕವಿಗಳು ಸಮುದಾಯದ ಏಳು–ಬೀಳುಗಳನ್ನು ಕಂಡು ಕೋಪಗೊಳ್ಳುತ್ತಾರೆ, ಪರಿತಪಿಸುತ್ತಾರೆ, ಕೊರತೆಯನ್ನು ಹೇಳುತ್ತಾರೆ ಈಗಿನ ಸ್ಥಿತಿ ಬದಲಾಗಬೇಕೆಂದು ಆಸೆ ಪಡುತ್ತಾರೆ. ಅಧೀನತೆಯ ಸಮುದಾಯವನ್ನು ಕಾಪಾಡುವ ತತ್ವಗಳನ್ನು, ದೇವರುಗಳನ್ನು, ಜಾತಿ–ಮತಗಳನ್ನು ನೋಡಿ ಅದಕ್ಕೆ ಗಾಂಧಿ, ಏಸು, ಕೃಷ್ಣನನ್ನು ಪರಂಪರೆಯ ಮಾದರಿಯಲ್ಲಿ ಹೊಸ ದಿಕ್ಕಿನಲ್ಲಿ ವೈಚಾರಿಕತೆಯನ್ನು, ನವಚಿಂತನೆಯನ್ನು ಕಾಣುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಾರೆ.

ಹಲವು ವಾದಗಳು, ಸಿದ್ಧಾಂತಗಳು, ಪ್ರಮುಖ ವ್ಯಕ್ತಿಗಳ ಚಿಂತನೆ, ಚಳುವಳಿಗಳ ಜೊತೆಯಲ್ಲಿ ವಾನಂಬಾಡಿ ಕವಿತೆಗಳು ಪ್ರಕಟವಾದವು. ಮು.ಮೇಕ್ತಾ ಅವರ ಸಮುದಾಯವನ್ನು ನೋಡಿ ಒಂದು ಕವಿತೆಯ ಮೂಲಕ ಜಾತಿ, ಮತ, ಮನುಷ್ಯತ್ವದ ಬಗ್ಗೆ ವಿವರಿಸುತ್ತಾರೆ.

"ಮತವನ್ನು ಹೇಳುತ್ತೀಯಾ	"ಮದತ್ತೈ ಸೊಲ್ಲುರಾಯ್
ಜಾತಿಯನ್ನು ಹೇಳುತ್ತೀಯಾ	ಸಾದಿಯೈ ಸೊಲ್ಲುರಾಯ್
ಯಾವಾಗ	ಎಪ್ಪೋದು
ಮನುಷ್ಯ ಎಂದು ನೀ	ಮನಿದನ್ ಎಂಡ್ರು ನೀ
ಹೇಳುತ್ತೀಯಾ?"	ಸೊಲ್ಲಪ್ ಪೋಗಿರಾಯ್?"

(ಮು ಮೇಕ್ತಾ, ಮನಿದನ್ನೈ ತೇಡಿ, ಪು. ೯೧)

ಪುವಿಯರಸು, ಗಂಗೈ ಕೊಂಡಾನ್, ಸಿರ್ಪಿ ಬಾಲಸುಬ್ರಹ್ಮಣ್ಯಂ, ತಮಿಳ್‌ನಾಡನ್, ಅಗ್ನಿಪುತ್ರನ್, ಶಕ್ತಿಕ್ಕನಲ್, ಮು.ಮೆಕ್ತಾ, ರವೀಂದ್ರನ್, ತಮಿಳಪನ್, ಜ್ಞಾನಿ, ಮೀರಾ, ಜಯಪ್ರಕಾಶಂ, ಅಬ್ದುಲ್ ರೆಹಮಾನ್, ಪ್ರಪಂಚನ್, ಬಾಲಾ, ಕೋ, ರಾಜಾರಾಂ ಇನ್ನೂ ಮುಂತಾದವರ ಬರವಣಿಗೆಗಳು ಈ ಕಾಲದಲ್ಲಿ ಹಲವು ಮುಖ್ಯ ಕವಿತೆಗಳಾಗಿ ಕಾಣಬಹುದು.

ಪ್ರಸ್ತುತ ಕಾಲಘಟ್ಟದ ಕಾವ್ಯ

ತಮಿಳುನಾಡಿನಲ್ಲಿ ೭೦ರ ದಶಕದ ನಂತರದ ಕಾಲಘಟ್ಟದಲ್ಲಿ ವಾನಂಬಾಡಿಯ ಕವಿತೆಗಳೇ ಮತ್ತೊಂದು ರೂಪದಲ್ಲಿ ಸಮಾಜಮುಖಿಯಾಗಿ ಸಾಮಾಜಿಕ ಸಂದರ್ಭಗಳಿಗೆ ಪ್ರತಿಕ್ರಿಯೆ ನೀಡುವ ಕವಿತೆಗಳಾಗಿ ಅವುಗಳ ವಿಸ್ತಾರತೆಯನ್ನು ಪಡೆದುಕೊಂಡವು. ತಮಿಳು ಕಾವ್ಯ ಪ್ರಕಾರವು ದಲಿತ, ಸ್ತ್ರೀವಾದ, ಮುಸ್ಲಿಂ ಸಂವೇದನೆ ಮುಂತಾದ ನೆಲೆಗಳಲ್ಲಿ ಆಯಾ ಸಮುದಾಯಗಳ ನೋವು ನಲಿವುಗಳನ್ನು ಕಾವ್ಯದಲ್ಲಿ ವ್ಯಕ್ತಪಡಿಸಿದವು. ಮುಂದೆ ೯೦ರ ದಶಕದಲ್ಲಿ ತಮಿಳುನಾಡಿನಲ್ಲಿ ದಲಿತ ಸಾಹಿತ್ಯ ಪ್ರವೇಶದಿಂದಾಗಿ, ತಮಿಳು ಸಾಂಪ್ರದಾಯಿಕ ಕವಿತೆಗಳು ಮತ್ತು ಹೊಸ ತಲೆಮಾರಿನ ಕವಿತೆಗಳ ಪ್ರೇರಣೆಯಿಂದ ಮರಾಠಿ ಮತ್ತಿತರ ಭಾಷೆಗಳ ಕವಿತೆಗಳು ತಮಿಳಿಗೆ ಅನುವಾದಗೊಂಡಿದ್ದರ ಪರಿಣಾಮ ತಮಿಳು ದಲಿತ ಕಾವ್ಯಗಳ ಮೇಲೆ ಆಗಿದೆ. ಇದರಿಂದ ಆರಂಭದಲ್ಲಿ ಕೋಪ ಆವೇಶಗಳಿಂದ ಕವಿತೆಗಳು ವ್ಯಕ್ತಗೊಂಡು ಮುಂದೆ ಪೂರ್ಣತೆಯ ಸ್ವ ಅನುಭವದಿಂದಾಗಿ ಆವೇಶದ ಜೊತೆಗೆ ದಲಿತ ಸಮುದಾಯಗಳ ಜಾಗೃತಿ, ದಲಿತರ ನೋವು ನಲಿವುಗಳ ಪಾತ್ರ ಚಿತ್ರಣ ದಲಿತ ಕಾವ್ಯದ ಪ್ರಧಾನವಸ್ತುವಾಗಿ ರೂಪಗೊಂಡಿತು.

ಪ್ರಸ್ತುತ ಕಾಲದ ಕಾವ್ಯವು ಸಾಹಿತ್ಯದಲ್ಲಿ ಹಲವು ರೀತಿಯಲ್ಲಿ ವಿಸ್ತಾರತೆಯನ್ನು ಪಡೆದಿದೆ. ಅದರಲ್ಲಿ ದಲಿತ, ಸ್ತ್ರೀವಾದ, ಮುಸ್ಲಿಂ ಸಂವೇದನೆಗಳನ್ನು ವ್ಯಕ್ತಪಡಿಸುವ ಮಾಧ್ಯಮವಾಗಿದೆ. ತಮ್ಮ ನೋವು-ನಲಿವುಗಳನ್ನು ಹಲವು ನೆಲೆಗಳಲ್ಲಿ ವ್ಯಕ್ತಪಡಿಸುತ್ತಿದೆ. ದಲಿತ ಕವಿತೆಗಳು, ತಮಿಳು ಸಾಂಪ್ರದಾಯಿಕ ಕವಿತೆಗಳು ಮತ್ತು ಹೊಸ ಕವಿತೆಗಳ ಪ್ರೇರಣೆಯಿಂದ, ಮರಾಠಿ ಮತ್ತಿತರ ಭಾಷಾ ಸಾಹಿತ್ಯದ ಅನುವಾದದಿಂದ ತನ್ನದೇ ಆದ ಚೌಕಟ್ಟಿನಲ್ಲಿ ಆರಂಭವಾಯಿತು. ಕೇವಲ ಕೋಪ ಆವೇಶಗಳಿಂದ ಆರಂಭವಾಗಿದ್ದ ದಲಿತ ಕವಿತೆಗಳು ನಂತರ ಪೂರ್ಣತೆ ಪಡೆದು ಆವೇಶದ ಜೊತೆಗೆ ಜಾಗೃತಿ, ನಲಿವುಗಳನ್ನು ಚಿತ್ರಿಸುತ್ತಿವೆ.

ದಲಿತ ಕಾವ್ಯವು ಅಲಕ್ಷಿತ ಸಮುದಾಯಗಳ ಜೀವನ ವಿಧಾನವನ್ನು ತನ್ನ ಕೇಂದ್ರವಾಗಿಸಿಕೊಂಡಿದ್ದರಿಂದ ಈ ಕಾವ್ಯದೊಳಗೆ ಚಿಂದಿ ಆರಿಸುವ, ತಿಪ್ಪೆ ಆರಿಸುವವರು, ಹಂದಿ ಮೇಯಿಸುವವರು, ನಗರ ಸ್ವಚ್ಛ ಮಾಡುವ ಕೆಲಸಗಾರರು(ತೋಟ್ಟಿ), ಮೂಟೆ ಹೊರುವವರು, ವ್ಯವಸಾಯ ಕೂಲಿಗಳು, ಬಡತನ, ನಿರುದ್ಯೋಗ, ಅಸ್ಪೃಶ್ಯತೆ, ಲೈಂಗಿಕ ಶೋಷಣೆಯನ್ನು ಅನುಭವಿಸಿದವರು, ಸ್ಮಶಾನದಲ್ಲಿ ಹೆಣ ಸುಡುವವರು, ಮಲ ಹೊರುವವರು ಮುಂತಾದ ದಲಿತ ಸಮುದಾಯದ ಎಲ್ಲ ಜನರು ದಲಿತ ಸಾಹಿತ್ಯದಲ್ಲಿ ಪ್ರವೇಶ ಪಡೆದುಕೊಂಡರು. ಇದುವರೆಗೆ ಯಾವ ಕಾವ್ಯಗಳಲ್ಲಿಯೂ ಕಾಣಿಸಿಕೊಳ್ಳದವರು ಈ ಕಾವ್ಯದ ಮೂಲಕ ಮುಖ್ಯವಾಹಿನಿಗೆ

ಬಂದರು. ಸಾಹಿತ್ಯದ ಔನ್ನತ್ಯ(ಅಹಂಕಾರ)ವು ಬದಲಾಗಿ ಮೊಟ್ಟ ಮೊದಲು ಸಾಹಿತ್ಯವು ತಳಸಮುದಾಯದ ಜನರ, ಸಮಾಜದಿಂದ ತಳ್ಳಲ್ಪಟ್ಟ ಅಲಕ್ಷಿತರ, ದಲಿತರ ಕಾವ್ಯ ಮೇಲ್ದೆದು ಸಮುದಾಯಗಳ ಒಂದುಗೂಡುವಿಕೆ ಮತ್ತು ಅಲಕ್ಷಿತರ ಧ್ವನಿಯಾಗಿ ಕವಿತೆ ಮಾತಾಡಿತು. ದಲಿತ ಬರಹಗಳಂತೆ ದಲಿತ ಕಾವ್ಯವು ದಲಿತರ ಹೋರಾಟದ ಧ್ವನಿಯನ್ನು ಯಾವುದೇ ರೀತಿಯ ನಟನೆ(ವಂಚನೆ) ಇಲ್ಲದೆ ದಾಖಲು ಮಾಡಿತು. ಹಿಂದೆಂದೂ ಇಲ್ಲದ ರೀತಿಯಲ್ಲಿ ದಲಿತ ಕವಿಗಳು ಹಿರಿಮೆ ಹೊಂದಿ, ತಮ್ಮ ಮೇಲೆ ನಡೆದಿದ್ದ ಎಲ್ಲ ರೀತಿಯ ಅವಮಾನ, ಶೋಷಣೆ, ಅನ್ಯಾಯದ ವಿರುದ್ಧ ಬಂಡೆದ್ದು ಕಾವ್ಯಗಳನ್ನು ಬರೆದರು. ಹಿಂದೂ ಸಂಸ್ಕೃತಿಯ ವೈರುಧ್ಯದ ಲಕ್ಷಣಗಳನ್ನು ಹೊಂದಿದ್ದು, ದಲಿತ ಸಂಸ್ಕೃತಿಯ ಮುಖ್ಯ ಭಾಗವಾಗಿದೆ. ಸಂಪ್ರದಾಯ, ಬಡತನ, ಅಸ್ಪೃಶ್ಯತೆ, ಶಿಕ್ಷಣ, ಪರಿಸರ, ಚರಿತ್ರೆಯಲ್ಲಿ ದಲಿತರ ಪ್ರಾಚೀನತೆ, ಪೊಲೀಸರ ಶೋಷಣೆ ಮುಂತಾದವು ದಲಿತ ಕವಿಗಳ ವಸ್ತು ವಿಷಯವಾಯಿತು.

ಸಮಕಾಲೀನ ಕವಿತೆಯ ಉದ್ದೇಶ, ದಿಕ್ಕು, ಸಂವೇದನೆಗಳ ಬದಲಾವಣೆ, ಹಲವು ಚಿಂತನೆಗಳು ತಮಿಳು ಸಾಹಿತ್ಯವನ್ನು ಪ್ರವೇಶ ಪಡೆದಿದ್ದರಿಂದ ಕವಿತೆಯ ದಿಕ್ಕುದೆಸೆಗಳು ಬದಲಾದವು. ಸ್ತ್ರೀವಾದ, ದಲಿತ, ಪೆರಿಯಾರ್‌ವಾದ, ಮುಸ್ಲಿಂ ಸಂವೇದನೆ ಮುಂತಾದ ಸಂವೇದನೆಗಳಲ್ಲಿ ಕವಿತೆಗಳು ರಚಿತಗೊಂಡವು. ಒಟ್ಟಾರೆ ಹಿಂದಿನ ಕಾವ್ಯದ ಪ್ರಭಾವವನ್ನು ಬೆನ್ನತ್ತಿ ಸಾಮಾಜಿಕ ಸ್ಥಿತಿಗತಿಗಳಿಗನುಗುಣವಾಗಿ ಕವಿತೆಗಳು ಬದಲಾವಣೆಯಾಗಿವೆ. ಈ ನಿಟ್ಟಿನಲ್ಲಿ ಇಲ್ಲಿ ದಲಿತ ಕಾವ್ಯದ ಲಕ್ಷಣಗಳನ್ನು ನೋಡುವುದೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಈ ರೀತಿಯ ಸಾಮಾಜಿಕ ಬದಲಾವಣೆಯು ಕಾವ್ಯದೊಳಗೆ ಪ್ರವೇಶ ಪಡೆದುಕೊಂಡಿದ್ದರ ಪ್ರಭಾವದಿಂದಾಗಿ 'ದಲಿತ ಕಾವ್ಯ' ದಲಿತ ಕೇರಿಯ ಭಾಗವಾಗಿ ತಮಿಳು ಸಾಹಿತ್ಯ ಲೋಕವನ್ನು ಪ್ರವೇಶ ಮಾಡಿತು. ಈ ರೀತಿಯಾದ ಪ್ರವೇಶವು ಭಾರತೀಯ ಎಲ್ಲಾ ಭಾಷೆಯಲ್ಲೂ ಕಂಡುಬಂದಿರುವುದನ್ನು ಪ್ರಸ್ತುತ ಅಧ್ಯಯನವು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ ಕನ್ನಡ-ದಲಿತ ಸಾಹಿತ್ಯ ಪ್ರಕಾರದಲ್ಲಿ ವ್ಯಕ್ತಗೊಂಡಿರುವ ದಲಿತ ಜೀವ ವಾಸ್ತವ ಸಂಗತಿಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಭಾರತಿಯವರ 'ಆಡುವೋಮ್ಮೆ ಪಳ್ಳು ಪಾಡುವೋಮೇ ಆನಂದ ಸುದಂಡಿರಂ ಆಡೈಂದು ವಿಟ್ಟೋಂಮೆಡ್ರು' ಎಂದು ಆರಂಭವಾಗುವ ಕವಿತೆಯ ಸಾಲುಗಳು ತಮಿಳು ಹೊಸಕವಿತೆಯ ಸಾಹಿತ್ಯದ ದಲಿತತ್ವದ ಕುರಿತಾದ ಮೊದಲ ಚಿಂತನೆಯಾಗಿದೆ. "ಪರೈಯರುಕ್ಕುಂ ಇಂಗು ತೀಯಾರ್ ಪುಲ್ಯೆಯರುಕ್ಕುಂ ವಿಡುದಲೈ" "ವಲ್ಲಮೈ ತಾರಾಯೇ ಇಂದ ಮಾನಿಲಂ ಪಯನುರ ವಾಳ್‌ವದರ್‌ಕ್ಕೆ' ಮುಂತಾದ ಕವಿತೆಗಳು ದಲಿತ ಕಾವ್ಯ ಸಾಹಿತ್ಯಕ್ಕೆ ತಮ್ಮ ಪ್ರಭಾವವನ್ನು ಬೀರಿವೆ. ಅಲ್ಲದೆ ೭೦-೮೦ರ ದಶಕದಲ್ಲಿ ಬಂದ ವಾಣಂಬಾಡಿ ಕವಿತೆಗಳು ಸಮಾಜ ಸುಧಾರಣೆಯ ಬಯಕೆಯನ್ನು ಬಯಸಿದ ಕವಿತೆಗಳು ೯೦ರ ದಶಕದಲ್ಲಿ ತಮಿಳು ದಲಿತ ಕಾವ್ಯದ ಉದಯಕ್ಕೆ ನಾಂದಿಯಾಯಿತು.

ದಲಿತ ಕವಿತೆಗಳು

ದಲಿತ ಕಾವ್ಯ ದಲಿತರ ನೋವಿನಿಂದಲೇ ರಚಿತಗೊಂಡಿದೆ. ನೋವು, ಅಪಮಾನ, ಶೋಷಣೆಗಳಂತಹ ಸಂಕೋಲೆಗಳಿಂದ ಬಿಡಿಸಿಕೊಂಡು ಮನುಷ್ಯ ಸಹಜವಾದ ಸ್ವಾತಂತ್ರ್ಯದ ಬದುಕನ್ನು ಕಟ್ಟಿಕೊಳ್ಳುವ ಮಹತ್ವದ ಉದ್ದೇಶದಿಂದಲೇ ದಲಿತ ಸಾಹಿತ್ಯವು ಒಂದು ಸಾಮಾಜಿಕ ಚಳವಳಿಯಾಗಿ ರೂಪುಗೊಂಡಿತು.

ತಮಿಳು ದಲಿತ ಸಾಹಿತ್ಯ ೯೦ರ ದಶಕದಲ್ಲಿ ಆರಂಭವಾಗಿರುವುದಕ್ಕೆ ತನ್ನದೇ ಆದ ಸೈದ್ಧಾಂತಿಕ ಕಾರಣ, ಹಿನ್ನೆಲೆಯನ್ನು ಹೊಂದಿದೆ. ತಮಿಳಿನ ಪೆರಿಯಾರ್‌ರ ದ್ರಾವಿಡ ಚಳವಳಿಯ, ಅಯೋತಿದಾಸರ ದೇಶಿಯ ಚಿಂತನೆಗಳು ಮತ್ತು ಅಲ್ಲಿನ ರಾಜಕೀಯ ಪರಿಸ್ಥಿತಿಯು ತಮಿಳು ದಲಿತ ಸಾಹಿತ್ಯವನ್ನು ಪ್ರಮುಖವಾಗಿ ಪ್ರಭಾವಿಸಿದೆ. ಆದ್ದರಿಂದ ತಮಿಳು ಕಾವ್ಯವೂ ಕನ್ನಡ ದಲಿತ ಸಾಹಿತ್ಯ(ಕಾವ್ಯ)ದಂತೆಯೇ ರೂಪಿತಗೊಂಡಿದೆ. ಕನ್ನಡ ದಲಿತ ಕಾವ್ಯಕ್ಕೆ ಕ್ರಾಂತಿಯ ಸಿಟ್ಟಿನ ರೊಚ್ಚಿನ ಆವೇಶದ ನುಡಿಗಳು ಆರಂಭದಲ್ಲಿ ಹೆಚ್ಚು ಹೆಚ್ಚಾಗಿ ಕಂಡು ಬಂದರೂ ನಂತರ ಅದು ಸಾಮಾಜಿಕ ಬೆಳವಣಿಗೆಯ ಹಂತಕ್ಕೆ ಬಂದಾಗ ಅದರ ಆವೇಶದ ತೀವ್ರತೆಯು ಕಡಿಮೆಯಾಗುತ್ತಾ ಬರುತ್ತದೆ. ಈ ಸಮಯದಲ್ಲಿ ತಮಿಳು ದಲಿತ ಕಾವ್ಯವು ಬೆಳವಣಿಗೆಯ ಹಂತದಲ್ಲಿದ್ದರಿಂದ ಸಹಜವಾಗಿ ಅದರ ಪ್ರಭಾವ ಪಡೆದು ತನ್ನದೇ ಆದ ಪ್ರಾದೇಶಿಕತೆ ಮೈಗೂಡಿಸಿಕೊಂಡು ರೂಪಿತಗೊಂಡಿತು. ೧೯೯೦ರ ನಂತರ ತಮಿಳು ನಾಡಿನ ಸಾಹಿತ್ಯ ಚರಿತ್ರೆಯಲ್ಲಿ ದಲಿತ ಕಾವ್ಯ ತನ್ನ ಭಿನ್ನ ಆಲೋಚನೆಗಳಿಂದ ಎಲ್ಲರ ಗಮನ ಸೆಳೆಯಿತು. ಮುಖ್ಯವಾಗಿ ಕ್ರಿಯಾಶೀಲತೆ, ವಿಗ್ರಹ ಭಂಜಕವಾದ ಪ್ರಬಲ ಶಕ್ತಿಯಲ್ಲಿನ ಪರಂಪರೆಯ ಗೋಜುಗಳನ್ನು, ವಸ್ತು ವಿಷಯಗಳನ್ನು, ತೀವ್ರವಾಗಿ ವಿರೋಧಿಸುವ ಬರವಣಿಗೆಯ ಅಸ್ತ್ರವಾಗಿ ಬೆಳೆಯಿತು.

ತಮಿಳು ದಲಿತ ಕಾವ್ಯವು ದಲಿತರಲ್ಲೇ ಹುಟ್ಟಿದ್ದರಿಂದ ಅಸ್ಪೃಶ್ಯತೆ, ಬಡತನ, ಸಾವು–ನೋವುಗಳಿಂದ ಉಂಟಾದ ಸಾಮಾಜಿಕ ಪ್ರಜ್ಞೆ, ದಲಿತ, ದಲಿತತ್ವದ ತುಮುಲಗಳನ್ನು ಮುನ್ನೆಲೆಗೆ ತರುವಲ್ಲಿ ಸಹಾಯಕವಾಯಿತು. ತಮಿಳಿನ ಪ್ರಮುಖ ದಲಿತ ಕವಿಗಳಾದ ಇಂದಿರನ್, ವಿಳಿ. ಪಾ.ಇದಯವೆಂದನ್, ಎನ್.ಟಿ.ರಾಜಕುಮಾರ್, ಅನ್ಬಾದವನ್, ಅಳಗಿರಿಯ ಪೆರಿಯಮ್, ಸುಕೃದಾರಾಣಿ ಮುಂತಾದವರು ಪ್ರಮುಖರಾಗಿದ್ದಾರೆ. ದಲಿತ್ ಮರಸು, ಕೋಡಾಂಗಿ, ಕವಿತಾಚರನ್, ಸುಬಮಂಗಳ, ನಿರಪ್ಪಿರಿಗೈ, ತೀರಾನದಿ, ಪನ್‌ಮುಗಂ, ಪಣಿಕ್ಕೂಡಂ, ಉಯಿರ್‌ಮೈ, ತಾಮರೈ ಮುಂತಾದ ಪತ್ರಿಕೆಗಳು ದಲಿತ ಕವಿತೆಗಳಿಗೆ ಕವಿತೆಗಳನ್ನು ಪ್ರಕಟಿಸಲು ಅನುವು ಮಾಡಿಕೊಟ್ಟವು. ಇವರ ಕಾವ್ಯಗಳಲ್ಲಿ ಮನುಷ್ಯ ಮತ್ತು ಅವನ ನೋವುಗಳು, ಆ ನೋವು ಅಪಮಾನಗಳಿಂದ ಹೇಗೆ ಬಿಡುಗಡೆ ಪಡೆಯಬೇಕು, ದಲಿತ ಸಮುದಾಯದಲ್ಲಿ ಜಾತಿಪ್ರಜ್ಞೆ, ಪ್ರತಿರೋಧ, ದಲಿತತ್ವದ ನೆಲೆಗಳನ್ನು ಕುರಿತು ಹೇಗೆ ಜಾಗೃತಿ ಮೂಡಿಸಬೇಕು ಎನ್ನುವ ಸಾಮಾಜಿಕ ಅಂಶಗಳನ್ನು ನಾವು ಗುರುತಿಸಬಹುದಾಗಿದೆ. ಅಧಿಕಾರಕ್ಕೆ ವಿರುದ್ಧವಾಗಿ ಬಿಡುಗಡೆಯಾಗಿ ಹುಟ್ಟಿಕೊಂಡ

ಕವಿತೆಗಳೇ ದಲಿತ ಕವಿತೆಗಳು. ಸಂಸ್ಕೃತಿ, ಸಂಪ್ರದಾಯ, ಅಧಿಕಾರ ಪ್ರಾಬಲ್ಯ ಎಂಬ ಬಂಧಗಳನ್ನು ಒಡೆಯಲು ಮತ್ತು ತಮ್ಮ ಮೇಲೆ ವಿಧಿಸಿದ್ದ ತಪ್ಪಿತಸ್ಥ ಭಾವವನ್ನು ತೊಡೆದು ಹಾಕಲು ದಲಿತ ಬರಹಗಾರರು ಕವಿತೆಗಳನ್ನು ಬರೆದರು.

ತಮಿಳು ದಲಿತ ಕಾವ್ಯದ ಬರಹಗಳು ಏಕ ರೀತಿಯಾಗಿ ಕಂಡು ಬರುವುದಿಲ್ಲ. ದಲಿತ ಎಂಬ ಗುರುತಿನಲ್ಲಿ ಬರೆಯುವ ದಲಿತ ಕವಿತೆಗಳು, ದಲಿತರಲ್ಲದವರ ದಲಿತ ಕವಿತೆಗಳು ಜಾತಿಯ ಗುರುತನ್ನು ತಿಳಿಸದೇ ಬರುವ ದಲಿತ ಕವಿತೆಗಳು, ಮಾರ್ಕ್ಸ್‌ಸಿಸಂ, ಪೆರಿಯಾರಿಸಂ, ತಮಿಳು ದೇಶೀಯಂ ಮುಂತಾದ ಚಿಂತನೆಗಳಲ್ಲಿ ಬರುವ ದಲಿತ ಕವಿತೆಗಳು ಎಂಬ ಒಟ್ಟು ನಾಲ್ಕು ಮುಖ್ಯ ವಿಭಾಗಗಳಲ್ಲಿ ದಲಿತ ಕವಿತೆಗಳು ತಮಿಳಿನಲ್ಲಿ ಕಂಡುಬರುತ್ತದೆ. ತಮಿಳಿನ ಹೆಚ್ಚು ಲೇಖಕರು ಮಾರ್ಕ್ಸ್ ಪೆರಿಯಾರ್ ಮತ್ತು ತಮಿಳ್ ದೇಶೀಯ ಚಿಂತನೆಗಳು ಮತ್ತು ಚಳುವಳಿಗಳ ಜೊತೆ ಜೊತೆಗೆ ಆ ಚಿಂತನೆಗಳಲ್ಲಿ ದಲಿತ ಕವಿತೆಗಳನ್ನು ಬರೆದಿರುವುದನ್ನು ಕಾಣಬಹುದು.

ದಲಿತ ಕವಿತೆಗಳು ದಲಿತ ರಾಜಕೀಯಕ್ಕೆ ತಕ್ಕಂತೆ ಸ್ಪಷ್ಟ ಮತ್ತು ನಿರ್ದಿಷ್ಟ ಸಾಮರ್ಥ್ಯವನ್ನು ತನ್ನಲ್ಲಿ ಸುಧಾರಿಸಿಕೊಂಡು ಈ ಕೆಳಗಿನ ಕೆಲವು ಪ್ರಮುಖ ಲಕ್ಷಣಗಳಲ್ಲಿ ಚಿತ್ರಿತವಾಗಿದೆ.

* ದಲಿತ ಕವಿತೆಗಳು ಅಂಬೇಡ್ಕರ್ ತತ್ವವನ್ನು ಮೂಲ ಆದರ್ಶವಾಗಿಸಿಕೊಂಡಿವೆ.
* ಈವರೆಗೆ ಪವಿತ್ರವೆಂದು ಕರೆಯಿಸಿಕೊಂಡವುಗಳನ್ನು ಒಡೆದು ಕಟ್ಟುವುದು. ಪರಂಪರೆಯ ಹೆಸರಿನಲ್ಲಿದ್ದ ಕಂದಾಚಾರ, ಕಟ್ಟುಪಾಡುಗಳನ್ನು ಮುರಿಯುವುದು ಅಥವಾ ಪ್ರತಿರೋಧಿಸುವುದು.
* ಧ್ವನಿ ಹೀನವಾದ ದಲಿತರಿಗೆ ವ್ಯವಸ್ಥೆಯನ್ನು ಪ್ರಶ್ನಿಸುವ ಧ್ವನಿಯನ್ನು ನೀಡುವುದು.
* ಕೊಚ್ಚೈ ಮೊಳಿ(ಕೆಳ ಭಾಷೆ) ಎಂದು ಹಗುರಗೊಳಿಸಿರುವ ದಲಿತ ಭಾಷೆಯನ್ನು ಮುಂಚೂಣಿಗೆ ತರುವುದು. ಮೌಖಿಕ ಚರಿತ್ರೆಯಲ್ಲಿ ದಾಖಲಾದ ದಲಿತರ ಜೀವನ ಚರಿತ್ರೆಯನ್ನು ಕಾವ್ಯದ ಮೂಲಕ ಕಟ್ಟುವುದು.
* ಸ್ಪಷ್ಟ ಜೀವನ ಚರಿತ್ರೆಯ ಗುಣವನ್ನು ಹೊಂದಿರುವುದು
* ದಲಿತ ಕವಿತೆಗಳನ್ನು ದಲಿತರೇ ಬರೆಯಲಿ ಎಂಬ ವಾದವನ್ನು ಬಲಪಡಿಸುವುದು.
* ಸ್ತ್ರೀವಾದದಲ್ಲೂ ದಲಿತ ಸ್ತ್ರೀವಾದಿ ಕವಿತೆಗಳು ಎಂದು ಪ್ರತ್ಯೇಕ ಸಾಹಿತ್ಯ ರಚಿಸುವುದು.
* ಮೂಲ ಜಾನಪದದ ದಲಿತ ಅಂಶಗಳನ್ನು ಸಂಪ್ರದಾಯವನ್ನು ಮುಂಚೂಣಿಗೆ ತರುವುದು..

ತಮಿಳು ಸಾಹಿತ್ಯದಲ್ಲಿ ಭಾಷಾಂತರವು ದಲಿತ ಸಾಹಿತ್ಯದಲ್ಲಿ ವಿಕಾಸಕ್ಕೆ ತನ್ನದೇ ಆದ ಕೊಡುಗೆ ನೀಡಿದೆ. ತಮಿಳಿನಲ್ಲಿ ಮೊದಲು ಭಾಷಾಂತರವಾದ ದಲಿತ ಕವಿತೆಗಳು ೧೯೮೭ರಲ್ಲಿ ಆಫ್ರಿಕಾದ ಕಪ್ಪು ಕಾವ್ಯವನ್ನು 'ಆರೈಕ್ಕುಳ್‌ವಂದ ಆಫ್ರಿಕಾ ವಾಣಂ' ಎಂಬ ಕೃತಿಯಾಗಿದೆ.

"ಹೊಸ ತಲೆಮಾರಿಗೆ ಸೇರಿದ
ನೀಗ್ರೋ ಕವಿಗಳಾದ ನಾವು
ನಮ್ಮ ವೈಯಕ್ತಿಕವಾದ ಕಪ್ಪು ಚರ್ಮವನ್ನು
ಹೊದಿಸಿದ ರೀತಿಯನ್ನು ಯಾವುದೇ
ಭಯ, ನಾಚಿಕೆ ಇಲ್ಲದೆ
ಪ್ರಕಟಿಸಲು ಪ್ರಾರಂಭಿಸುತ್ತಿದ್ದೇವೆ
ನಾವು ಸುಂದರರು ಎಂದು
ನಮಗೆ ತಿಳಿದಿದೆ
ಅಸಹ್ಯವಾದವರೆಂದು ತಿಳಿದಿದೆ
ತುಟಿಗಳು ಕೆಲವು ಸಲ ನಗುತ್ತವೆ. ಕೆಲವು ಸಲ ಅಳುತ್ತವೆ
ನಾವು ನಮಗೆ ತಿಳಿದ
ರೀತಿಯಲ್ಲಿ ನಮಗಾಗಿನ ನಾಳೆಯ
ದೇವಾಲಯಗಳನ್ನು ಕಟ್ಟುತ್ತಿದ್ದೇವೆ."

('ಅರ್ರೈಕುಲ್ ವಂದ ಆಫ್ರಿಕ ವಾನಂ' ಭಾಷಾಂತರಕಾರರು ಇಂದ್ರನ್ ಪು. ೧)

ಈ ಸಂಕಲನ ತಮಿಳು ಕವಿತೆಯ ಪಾರಂಪರಿಕ ಅಂಶಗಳಾಗಿದ್ದ ರಾಜಕೀಯ ಮತ್ತು ಆರ್ಥಿಕ ನೆಲೆಯಲ್ಲೆ ಈವರೆಗೆ ಮಾತಾಡುತ್ತಿದ್ದ ದಲಿತರ ಬಗೆಗೆ ಇದು ಸಾಮಾಜಿಕ ಬದಲಾವಣೆ ಮತ್ತು ಸಂಸ್ಕೃತಿಯ ರೀತಿಯಲ್ಲಿ ದಲಿತರನ್ನು ಬರೆಯುವ ಅವಶ್ಯಕತೆಯನ್ನು ತಿಳಿಸಲು ಮಾಡಿದ ಕೇವಲ ಘೋಷಣೆಗಳಾಗಿವೆ. ಜೀವನದ ಬಾಗಿಲನ್ನು ಅದರ ಎಲ್ಲಾ ಅವಶ್ಯಕತೆಗಳನ್ನು ಗಮನದಲ್ಲಿ ಇಟ್ಟುಕೊಂಡು ಬ್ರಾಹ್ಮಣ ಸಂಪ್ರದಾಯವನ್ನು ಪ್ರಶ್ನಿಸುವಂತೆ ಸರಳವಾಗಿ ತೀವ್ರತೆಯಿಂದ ದಲಿತ ಕವಿತೆಗಳ ಉದಯಕ್ಕೆ ಈ ಸಂಕಲನ ಮುಖ್ಯ ಆಸ್ಥೆ ವಹಿಸಿತು.

ತಮಿಳು ಕವಿತೆಗಳ ಪಾರಂಪರಿಕ ಅಂಶಗಳಾಗಿದ್ದ ರಾಜಕೀಯ ಮತ್ತು ಆರ್ಥಿಕ ನೆಲೆಗಳಲ್ಲಿ ಮಾತ್ರ ದಲಿತರ ಬದಲಾವಣೆಯನ್ನು ತರುವ ಆಲೋಚನೆಯಲ್ಲಿದ್ದವು. ಆದರೆ ಈ ಕೃತಿಯಲ್ಲಿ ದಲಿತರ ಸಾಮಾಜಿಕ ಬದಲಾವಣೆ ಮತ್ತು ಸಾಂಸ್ಕೃತಿಕ ಬದಲಾವಣೆಯಾಗಬೇಕೆನ್ನುವ ಪ್ರಧಾನ ಆಶಯದಿಂದ ಹೊರಬಂದಿತು. ಅಂದಿನ ಕಾಲಘಟ್ಟದಲ್ಲಿ ದಲಿತರು ಬ್ರಾಹ್ಮಣತತ್ವವನ್ನು ಪ್ರಶ್ನಿಸುವಂತೆ ಪರಂಪರೆಯ ಹೆಸರಿನಲ್ಲಿ ನಡೆಯುವ ಮೋಸ, ಶೋಷಣೆ, ಅಪಮಾನ ಮುಂತಾದ ಸಂಗತಿಗಳ ವಿರುದ್ಧ ಗಟ್ಟಿ ಧ್ವನಿ ಎತ್ತುವಂತೆ ದಲಿತರಿಗೆ ಧ್ವನಿಯಾಗುವ ಉದ್ದೇಶ ಈ ಕವನ ಸಂಕಲನದ್ದಾಗಿತ್ತು.

ಇವರೊಂದಿಗೆ ಶ್ರೀಲಂಕಾ ತಮಿಳರ ಮೇಲೆ ಶೋಷಣೆ ನಡೆದದ್ದು ಅಲ್ಲಿಯ ಕವಿ ಚೇರನ್ ಅವರ ಕವಿತೆಗಳು ದಲಿತರ ಬರಹಗಳಿಗೆ ವಿರೋಧಿಸುವ ಗುಣವನ್ನು ಕಲಿಸಿತು. ಕೆ.ಎ.ಗುಣಶೇಕರನ್ ಅವರು ಸಂಕಲಿಸಿದ 'ಅಗ್ನಿ ಸ್ವರಂಗಳ್', 'ನಗರಸಾರ್ ನಾಟ್ಟುಪ್ಪುರಕ್ ಕದೈಪ್ ಪಾಡಲ್‌ಗಳ್' ಈ ಜಾನಪದ ಹಾಡುಗಳ ಸಂಕಲನಗಳು ತಮಿಳಿನಲ್ಲಿ ಹೆಚ್ಚಿನ ಪ್ರಭಾವವನ್ನು ಬೀರಿದವು. ಅಲ್ಲದೆ ಜಾತ್ರೆಗಳಲ್ಲಿ, ವಿಶ್ವವಿದ್ಯಾಲಯಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಈ ಹಾಡುಗಳನ್ನು ಪ್ರಸಾರ ಮಾಡಲಾಯಿತು. ಇವೆಲ್ಲವುಗಳ ಪ್ರಭಾವದಿಂದ ತಮಿಳಿನಲ್ಲಿ ದಲಿತ ಕವಿತೆಗಳು ಹೆಚ್ಚು ವಿಸ್ತರಿಸಿಕೊಂಡವು.

ಪ್ರಮುಖ ದಲಿತ ಕವಿತೆಗಳು ಮತ್ತು ಸಂಕಲನಗಳು

ಯಾಳಿನ್ ಆದಿ: 'ಇಲೈಯುದಿರ್ ಕಾಲಂ', 'ಸೆವಿಪ್ಪರೈ', 'ನೆಡುಂತೀ', 'ಕಪ್ಪಾ' ಇವರ ಮುಖ್ಯ ಕವನ ಸಂಕಲನಗಳು. ದ್ರಾವಿಡ ದಾಸನ್ ಎಂಬ ಕಾವ್ಯನಾಮದಿಂದ ಬರೆಯುವ ಇವರ ಕವಿತೆಗಳು ದಲಿತರ ಧ್ವನಿಯಾಗಿ ಮೇಲ್ವರ್ಗದವರನ್ನು ವಿರೋಧಿಸುತ್ತಿವೆ.

ದಲಿತರು ತಮ್ಮ ಪೂರ್ವಜರಿಂದ ಪಡೆದ ಪರಂಪರೆಯನ್ನು ಯಥಾವತ್ತಾಗಿ ಸ್ವೀಕರಿಸದೆ ಅದನ್ನು ಧಿಕ್ಕರಿಸುವ ವ್ಯವಸ್ಥೆಯನ್ನು ಪ್ರಶ್ನಿಸುವುದಕ್ಕೆ ಅವರೇ ನೀಡಿದ ಸಗಣಿಯ ನೀರು ನೀಡುವ ನಿಮ್ಮ ಮನಸ್ಥಿತಿಯನ್ನು ಕವಿತೆಯಾಗಿ ಬರೆಯುತ್ತಿದ್ದೇನೆ ಎಂದಿದ್ದಾರೆ.

"ನನ್ನ ಪೂರ್ವಜರಿಗೆ ಕುಡಿಯಲು

ಕೊಟ್ಟ ಸಗಣಿಯ ಹಾಲನ್ನೇ

ಕಕ್ಕುತ್ತಿದ್ದೇನೆ ಹೊರಹಾಕುತ್ತಿದ್ದೇನೆ

ಕವಿತೆಯಾಗಿ"

ಎನ್.ಟಿ. ರಾಜಕುಮಾರ್ : ಈ ಹಸ್ತಪ್ರತಿಯನ್ನು ನಾವಲ್ಲದೆ ಇತರರೂ ಓದುವ ಸಂದರ್ಭ ಬಂದರೆ ತಲೆಸುತ್ತುತ್ತದೆ, ಎದೆ ಬಡಿದುಕೊಳ್ಳುತ್ತದೆ, ತಾಪವೇರಿ ಕಣ್ಣುಗಳು ಮೂರ್ಛೆ ಹೋಗುತ್ತವೆ; ಮೂಳೆ ಭ್ರಾಂತಿಗೊಳ್ಳುತ್ತದೆ ಎಂದು ಎಚ್ಚರಿಸುತ್ತದೆ ಇವರ ಕವಿತೆಗಳು.

'ತೆರಿ', 'ಒಡಕ್ಕು', 'ರಕ್ತ ಸಂದನಪ್ ವಾವೈ', 'ಕಾಟ್ಟಾಳನ್', 'ಕಲ್‌ವಿಳಕ್ಕುಗಳ್' ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಮಾಂತ್ರಿಕ ಕುಟುಂಬದಲ್ಲಿ ಜನಿಸಿದ ಇವರು ದೆವ್ವ, ಮಾಂತ್ರಿಕತೆ ಜೊತೆಯಲ್ಲಿಯೇ ಇವರ ಕವಿತೆಗಳು ಸಾಗುತ್ತಿವೆ. ದಲಿತ ಕವಿತೆಗಳಲ್ಲಿ ಪ್ರತ್ಯೇಕ ಸ್ಥಾನ ಪಡೆದ ಇವರ ಕವಿತೆಗಳು ದೆವ್ವ, ಮಾಂತ್ರಿಕತೆ ಮತ್ತು (ಸಾರಾಯಿ ಸೇವನೆ), ಹಳಮೆ, ಪಿಶಾಚಿ, ಮಾಂಸ ಇವುಗಳಿಂದ ತುಂಬಿವೆ. ದಲಿತ ಜೀವನವನ್ನು ಮತ್ತು ಸಂಸ್ಕೃತಿಯನ್ನು ಮುಖ್ಯವಾಗಿ ಇವರ ಕವಿತೆಗಳು ಮಾತಾಡುತ್ತವೆ. ಹಿಂದುತ್ವದ ವಿರೋಧ, ದಲಿತರ ಬಿಡುಗಡೆಯನ್ನು ಇವರ ಕವಿತೆಗಳಲ್ಲಿ ಕಾಣಬಹುದು.

ಅಳಗಿಯ ಪೆರಿಯವನ್ : 'ನೀ ನಿಗಳ್‌ಂದಪೋದು', 'ಅರೂಬ ನಂಜು', 'ಉನಕ್ಕುಂ ಎನಕ್ಕುಮಾನ ಸೊಲ್' ಇವರ ಮುಖ್ಯ ಕವನ ಸಂಕಲನಗಳಾಗಿವೆ. ದಲಿತರ ನೋವುಗಳನ್ನು ಸಂಕಟಗಳನ್ನು ದಾಖಲಿಸುತ್ತಿವೆ. ಇವರ ಕವಿತೆಗಳು 'ಇನ್ನು ಯಾರಾದರೂ ಜಾತಿಗಳು ಇಲ್ಲ ಮಗುವೆ? ಎಂದರೆ ಅವನನ್ನು ಚಪ್ಪಲಿಯಲ್ಲಿ ಹೊಡಿ' ಎಂದು ಕಟುವಾಗಿ ವಿಮರ್ಶಿಸುತ್ತಾರೆ. ತಮಿಳಚ್ಚಿ ತಂಗವಾಂಡಿಯನ್‌ರು 'ಉನಕ್ಕುಂ ಎನಕ್ಕುಮಾನ ಸೋಲ್' ಎಂಬ ಸಂಕಲನದ ಮನ್ನುಡಿಯಲ್ಲಿ "ಅಧಿಕಾರದ ಕ್ರೂರತೆ, ಸಂಕಟಗಳು ಎಂದಿಗೂ ಮನುಷ್ಯನ ಸಾಮರ್ಥ್ಯವು ಸ್ವಲ್ಪವೂ ಸೊರಗುವಂತೆ ಮಾಡಲಾಗದು ಎಂಬುದನ್ನು ಗಟ್ಟಿಯಾಗಿ ದಾಖಲಿಸುತ್ತವೆ ಈ ಕವಿತೆಗಳು. ಮುಖಾಮುಖಿಯ ಅನುಭವವನ್ನು ಈ ರೀತಿಯ ಸೌಂದರ್ಯದಿಂದ ಹೇಳುತ್ತಿದೆಯೇ? ಎಂದು ಭ್ರಮಿಸುತ್ತಾ ಸೌಂದರ್ಯ, ಕಲಹ, ನವೀನತೆ, ಸೂಕ್ಷ್ಮತೆ, ದಲಿತರನ್ನು ತುಂಬಿದ ಭಾಷೆ 'ಮನುಷ್ಯ ಮನಸ್ಸು' ಅಸಹಾಯಕತೆ ನೆಲೆಯ ಜೀವನ' ಇಬ್ಬಗೆಯ ಸ್ವಭಾವ ಎದುರಿಸಿದ ಹಿನ್ನೆಲೆ ಕವಿಯದು" (ಅಳಗಿಯ ಪೆರಿಯನ್, ಉನಕ್ಕುಂ ಎನಕ್ಕುಮಾನ ಸೊಳ್, ಪು. ೧) ಎಂದು ಅವರ ಒಟ್ಟಾರೆ ಕವಿತೆಗಳ ಬಗೆಗೆ ಅಭಿಪ್ರಾಯವನ್ನು ಪಡುತ್ತಾರೆ.

ಅಭಿಮಾನಿ : ದಲಿತರ ಮೇಲೆ ನಡೆಯುವ ಎಲ್ಲಾ ರೀತಿಯ ಶೋಷಣೆಗಳನ್ನು ಇವರ **'ಎದಿರಾಗ'** ಸಂಕಲನದ ಕವನಗಳು ವಿರೋಧಿಸುತ್ತದೆ. ಎಲ್ಲಾ ಕಾರ್ಯಗಳಲ್ಲೂ ಕೀಳು ಎಂದು ದೂರ ಇಡುವ ಮೇಲ್ಜಾತಿ ಸಮೂಹ ನಮ್ಮ ಹೆಂಗಸರನ್ನು ಮುಟ್ಟುವಾಗ ಮಾತ್ರ ಜಾತಿ ಕಾಣುವುದಿಲ್ಲ ಎಂಬುದನ್ನು ಇವರ ಕವಿತೆಗಳು ತಿಳಿಸುತ್ತದೆ.

ತಯ್.ಕಂದಸಾಮಿ: 'ತನಿ ಇರುಟ್ಟು' ಇವರ ಕವನ ಸಂಕಲನ. ಊರಿಗೂ, ಕೇರಿಗೂ ನಡುವೆ ಇರುವ ಅಂತರವನ್ನು ತಿಳಿಸುತ್ತದೆ. ಓದುಗರು ದಲಿತರಾಗಿದ್ದಾರೆ. ಅವರಲ್ಲಿ ಈ ಕವನ ಸಂಕಲನ ಜಾತೀಯತೆಯ ವಿರುದ್ಧದ ಮನಸ್ಥಿತಿಯನ್ನು ದಲಿತರಲ್ಲದವರಿಗೆ ಸಮಾಜದ ಮೋಸ, ದೌರ್ಜನ್ಯ ಇತ್ಯಾದಿಗಳನ್ನು ಕುರಿತು ಬರೆಯುತ್ತಾರೆ.

ತಲೈಯಾರಿ : 'ಎಂಗೇ ಎಮದು ಮುಗಂ?' ಇವರ ಕವನ ಸಂಕಲನವಾಗಿದೆ. ಅಂಬೇಡ್ಕರ್ ಚಿಂತನೆಗಳನ್ನು ಇವರ ಕವಿತೆಗಳಲ್ಲಿ ಕಾಣಬಹುದು. ಕಳೆದುಕೊಂಡ ನೆಲ, ಕೇರಿಯ ಸ್ಥಿತಿ, ತಲಸ್ಪರ್ಶಿಯರ ದುಃಖ ಮುಂತಾದ ವಸ್ತುಗಳನ್ನು ಒಳಗೊಂಡು ಇವರ ಕವಿತೆಗಳು ಮಾತಾಡುತ್ತವೆ.

ಕು.ಉಮಾದೇವಿ : 'ದಿಸೈಗಳೈಪ್ ಪರುಗಿಯವಳ್' ಎಂಬುವುದು ಇವರ ಕವನ ಸಂಕಲನ. ಸ್ತ್ರೀವಾದಿ ಚಿಂತನೆಯುಳ್ಳ ಇವರ ಕವಿತೆಗಳು ಹೆಣ್ಣಿನ ಸಹಜ ಸ್ಥಿತಿಯನ್ನು ವಿಜೃಂಭಿಸುತ್ತದೆ.

ಆದವನ್ ದೀಟ್ಚನ್ಯ: 'ಪೊರುತ್ತಿರುಂದು', 'ಪೂಜ್ಜೆಯತ್ತಿಲಿರುಂದು ತುವಂಗುಂ ಆಟ್ಟಂ', 'ತಂದುಗಿ', 'ಆದವನ್ ದೀಟ್ಚನ್ಯ ಕವಿದೈಗಳ್', 'ಮಿಚ್ಚವಿರುಕ್ಕುಂ ಒನ್ಬದು ವಿರಲ್‌ಗಳ್' ಎಂಬ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಮತತ್ವವನ್ನು ಮಾತಾಡುವ ಅವರ ಕವನಗಳಲ್ಲಿ ಕರುಣೆ, ಪಶ್ಚಾತ್ತಾಪಗಳಿಗೆ ಸ್ಥಾನವಿಲ್ಲ. ಅದರ ಧ್ವನಿ ಗಡಸು, ಸ್ತ್ರೀಯರು, ರಾಜಕೀಯ,

ಸಮಾಜವನ್ನು ಕುರಿತು ಇವರ ಕವಿತೆಗಳು ಮಾತಾಡುತ್ತಾ ದಲಿತ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುತ್ತವೆ.

ಸುಕೃದಾರಾಣಿ: 'ಕೈಪ್ಪಟ್ರಿಯ ಎನ್ ಕನವು', 'ಇರವು ಮಿರುಗಂ', 'ಅವಳೈ ಮೊಳಿಪೆಯರ್‌ತ್ತಲ್' ಇವರ ಮುಖ್ಯ ಕವನ ಸಂಕಲನಗಳು. ಸ್ತ್ರೀವಾದ, ದಲಿತ ಮತ್ತು ದಲಿತ ಸ್ತ್ರೀವಾದ ಕುರಿತ ಇವರ ಕವಿತೆಗಳು ಸ್ತ್ರೀದೇಹ, ಲೈಂಗಿಕ ರಾಜಕೀಯ, ಹೆಣ್ಣಿನ ಕಾಮ, ಪ್ರೀತಿ, ಭಾಷೆ, ಜೀವನವನ್ನು ಕವಿತೆಯಲ್ಲಿ ಕಾಣಬಹುದು.

"ಈಗ ಯಾರಾದರೂ ಕೇಳಿದರೆ

ಸ್ಪಷ್ಟವಾಗಿ ಹೇಳಿಬಿಡುತ್ತೇನೆ

ಪರಚ್ಚಿ ಎಂದು"

('ಇರವು ಮಿರುಗಂ' ಸುಕೃದಾರಾಣಿ ಪು. ೩೨)

ಬ್ರಾಹ್ಮಣನು ಹೇಗೆ ತನ್ನನ್ನು ಉನ್ನತವಾದ ಜಾತಿ ಎಂದು ಹೇಳಿಕೊಳ್ಳುತ್ತಾನೋ ಹಾಗೆ ಇಲ್ಲಿ ಕವಿಯೂ ತಾನು ಪರೈಚ್ಚಿ(ಕೀಳು ಜಾತಿ) ಎಂದು ಹೆಮ್ಮೆಯಿಂದ ಹೇಳಿಕೊಳ್ಳುವುದನ್ನು ಕಾಣಬಹುದು.

ಅರಸ ಮುರುಗು ಪಾಂಡಿಯನ್ : 'ಸಿಲ ದಲಿತ ಕವಿದೈಗಳ್' **'ವೆಗು ದೂರಮಿಲ್ಲೈ'** ಎಂಬ ಕವನ ಸಂಕಲನಗಳು ಪ್ರಕಟವಾಗಿವೆ. ದಲಿತರನ್ನು ಒಗ್ಗೂಡಿಸಿ ಅವರ ಸಾಮರ್ಥ್ಯ(ವೀರತ್ವ)ವನ್ನು ಜಾಗೃತಿಗೊಳಿಸಿ ಅಧಿಕಾರಿ ಜಾತಿಗಳ ನರಿಗುಣಕ್ಕೆ ಚಾಟಿ ಏಟು ನೀಡುವಂತೆ ಇವೆ. ದಲಿತರಾಗಿ ಜೀವನ ನಡೆಸುವಾಗ ಬರುವ ಸಂಕಟಗಳ ಕುರಿತು ದಲಿತರಾಗಿ ಹುಟ್ಟಿದರೆ ದೊರಕಲ್ಪಡುವ ನೆಲೆಯನ್ನು ದಾಖಲಿಸುತ್ತಾರೆ. ಹರಿಜನ ಪದವನ್ನು ಕಟುವಾಗಿ ವಿರೋಧಿಸುತ್ತಾರೆ.

ವಿಳಿ.ಪಾ.ಇದಯವೇಂದನ್ : 'ಕನವುಗಳ್ ವಿರಿಯುಂ' **'ಮುರನ್‌ತಡೈ', 'ಎವರುಂ ಅರಿಯಾದ ನಾಮ್'** ಇವರ ಕವನ ಸಂಕಲನಗಳಾಗಿವೆ. ದಲಿತರ ಬಡತನದ ಸ್ಥಿತಿಯನ್ನು ಅವರ ಗ್ರಾಮವನ್ನು ಮತ್ತೆ ಕಡೆಗಣಿಸಿದ ಅವರ ಧ್ವನಿಯನ್ನು ಇವರ ಕವಿತೆಗಳು ಮಾತಾಡುತ್ತವೆ.

ಇಂದಿರನ್ : ಭಾಷಾಂತರಕಾರರಾಗಿ ಓರಿಯಾ, ಆಫ್ರಿಕಾ, ಅಮೆರಿಕಾ ಬುಡಕಟ್ಟು ಸಮುದಾಯಗಳ ಕವಿತೆಗಳನ್ನು ತಮಿಳಿಗೆ ಭಾಷಾಂತರಿಸಿದ್ದಾರೆ. **'ಸಾಂಬಲ್ ವಾರ್‌ತ್ತೈ', 'ಅನ್ನಿಯನ್', 'ಮುಪ್ಪಟ್ಟೈ ನಗರಂ', 'ಮಿನ್ ದುಗಳ್ ಪರಪ್ಪು'** ಇವರ ಕವನಗಳಾಗಿವೆ. "ಯಾವ ಕವಿತೆಯೂ ನಾನು ಸಂಪೂರ್ಣವಾಗಿ ಬರೆದ ನೆಮ್ಮದಿ ನನಗೆ ಸಿಕ್ಕಿಲ್ಲ ಎಲ್ಲಾ ಕವಿತೆಗಳು, ಚಿತ್ರಗಳು ಅರ್ಧದಲ್ಲೇ ಬಂದಂತೆ ನನಗೆ ಕಾಣಿಸುತ್ತದೆ(ಗೋಚರಿಸುತ್ತದೆ)" ಇಂದ್ರನ್‌ರು ಕವಿತೆಗಳಿಗೆ ಈ ರೀತಿಯಾಗಿ ಹೇಳುತ್ತಾರೆ.

ಮ.ಮದಿವಣ್ಣನ್ : 'ನೆರಿಂದು', 'ನಮಕ್ಕಿಡೈಯಿಲಾನ ತೊಳೈವು' ಕವನ ಸಂಕಲನಗಳು ಇವರ ಕವಿತೆಗಳು ಜಾತಿಯ ಸಮುದಾಯವನ್ನು ಅತೀ ಕೋಪದಿಂದ ನೋಡುತ್ತವೆ. ಸಾಮಾಜಿಕವಾಗಿ ಮೋಸವಾಗಿರುವುದರಿಂದ ಕೋಪಗೊಳ್ಳುವುದು ಅನಿವಾರ್ಯತೆಯಾಗಿದೆ. ಆ ಕೋಪವೇ ಬಿಡುಗಡೆಗೆ ಬೀಜವಾಗಿ ಕಾಣುತ್ತದೆ.

'ನನ್ನ ಅಜ್ಜನು ಒಬ್ಬನ

ಗುಣವೂ ಸುವಾಸನೆಯಿಂದ ಕೂಡಿದ ಹೂಸುವಿನಿಂದ

ತೆಗೆದುಕೊಂಡಿದ್ದೇನೆ

ನನ್ನ ನಿಜವಾದ ಕವಿತೆಗಳಿಗೆ

ಕಚ್ಚಾ ಸರಕು(ವಸ್ತು)ಗಳನ್ನು (ನೆರಿಂದು ಪು. ೩೯)

ಸಾಮಾಜಿಕ ಬಿಡುಗಡೆಯ ಚಿಂತನೆಯನ್ನು ಆ ದಲಿತರ ಜೀವನದಿಂದಲೇ ತೆಗೆದುಕೊಳ್ಳುವುದಾಗಿ ಚಿತ್ರಿಸುತ್ತಾರೆ.

ಅನ್ಬಾದವನ್ : 'ಸೆಂಬಳುಪ್ಪಾಯ್ ಸೂರಿಯನ್', 'ನೆರುಪ್ಪಿಲ್ ಕಾಯ್‌ಚ್ಚ ಪರ್ರೈ' ಕವನ ಸಂಕಲನಗಳು. ಪ್ರಸ್ತುತ ದಲಿತರ ಮೇಲೆ ನಡೆಯುವ ಶೋಷಣೆಗಳನ್ನು ದೇಹಕ್ಕೆ ಸಂಬಂಧಿಸಿದ, ಭಾವನೆಗೆ ಸಂಬಂಧಿಸಿದ, ಆಚಾರ-ವಿಚಾರಗಳಿಗೆ ಸಂಬಂಧಿಸಿದಂತೆ ಮಾತಾಡುವಾಗ ಕೋಪ ಆವೇಶಗಳು ಸ್ಫೋಟಿಸುತ್ತಿವೆ. ಕೆಲವು ದಲಿತ ಕವಿತೆಗಳು ದಲಿತರ ಮಾನಸಿಕ ಸಮಸ್ಯೆಗಳನ್ನು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ದಾಖಲಿಸುತ್ತವೆ.

"ಕಾದು ಕಾದು

ಗಟ್ಟಿಯಾಗಿದೆ ನನ್ನ ಪರ್ರೈ (ತಮಟೆ)

ತಳ್ಳಲ್ಪಟ್ಟವರ ಮನಸಾಗಿ

ಅಸ್ಪೃಶ್ಯರ ಧ್ವನಿಯಾಗಿ ('ನೆರುಪ್ಪಿಲ್ ಕಾಯ್‌ಚ್ಚ ಪರ್ರೈ', ಅನ್ಬಾದವನ್ ಪು. ೧೬)

'ಪರ್ರೈ' ಎಂಬುದು ಸಾಧಾರಣ ತಮಟೆಯಲ್ಲ. ಅದು ಸಾವಿರ ಜನರ ನಡುವೆ ಕೇಳುವ ಹೋರಾಟದ ಧ್ವನಿ ಎಂದು ಕವಿ ಹೇಳುತ್ತಾರೆ.

ಉಂಜೈರಾಜನ್ ಚಂದ್ರು ಮುಂತಾದವರು ದಲಿತ ಕವಿತೆಗಳನ್ನು ಬರೆಯುವುದರಲ್ಲಿ ಪ್ರಮುಖರಾಗಿದ್ದರು.

ದಲಿತ ಕವಿತೆಗಳು

ಒಬ್ಬನಿಗೆ ನೋವಾದಾಗ, ಅವನು ರಾಗದಿಂದ ಅಳಲು ಸಾಧ್ಯವಿಲ್ಲ. ಹಾಗೆಯೇ ನೋವಿನ ಸಂಕಟ ಎಷ್ಟಿರುತ್ತದೆಯೋ ಆ ರೀತಿಯಲ್ಲಿ ಅವನ ಧ್ವನಿ ಪ್ರಕಟವಾಗುತ್ತದೆ. ಹಾಗೆಯೇ ದಲಿತ

ಕವಿತೆಗಳು ನೋವಿನಿಂದ ಅನಾದಿ ಕಾಲಗಳಿಂದಲೂ ಮೇಲ್ಜಾತಿ ಸಂಚುಗಳು ನಡೆಸಿಕೊಂಡು ಬರುತ್ತಿರುವ ದೌರ್ಜನ್ಯ, ಶೋಷಣೆಗಳನ್ನು ಸಹಿಸಿಕೊಂಡಿರುವ ದಲಿತ ಮನಸ್ಸುಗಳು ಅವುಗಳಿಗೆ ಪ್ರತ್ಯುತ್ತರ ನೀಡುವ, ಪ್ರತಿರೋಧಿಸಿ ದಲಿತರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತವೆ. ದಲಿತರ ಅಮಾಯಕತೆ, ಅಸಹಾಯಕತೆ, ನೋವಿನ ಸಂಕಟ, ಸಮುದಾಯದೊಳಗಿನ ಆರ್ಥನಾದವು ದಲಿತ ಕವಿತೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ದಲಿತ ಕವಿತೆಗಳು ಜಾತಿ ನಾಶ, ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಮುಂತಾದ ಚಿಂತನೆಗಳನ್ನು ಒಳಗಿರಿಸಿಕೊಂಡು ಗೌಪ್ಯವಾಗಿರುವ ಮತ್ತು ಗುಲಾಮರಾಗಿರುವ ತಮ್ಮ ಚರಿತ್ರೆಯನ್ನು ಬಿಡಿಸಿ ಹೇಳುವ ಗುಣವನ್ನು ಹೊಂದಿವೆ. ತಮಗಿರುವ(ತಮಗಾಗಿನ) ಹಕ್ಕಿಗಾಗಿ ಹೋರಾಡುತ್ತವೆ.

ತಮಿಳು ದಲಿತ ಕಾವ್ಯಗಳಲ್ಲಿ ವ್ಯಕ್ತಗೊಂಡಿರುವ ಪ್ರಮುಖ ಅಂಶಗಳು

ವಿಳಿ. ಪಾ ಇದಯವೇಂದನ್ ಅವರ ಕವನ ಸಂಕಲನವಾದ 'ಕನವುಗಳ್ ವಿರಿಯುಮ್' ಕವಿತೆಯಲ್ಲಿ ಒಬ್ಬ ವ್ಯಕ್ತಿಯ ಬಡತನವು ಒಂದು ಸಮುದಾಯದ ಬಡತನವಾಗಿ ಹೇಗೆ ಕವಿತೆಯಲ್ಲಿ ವ್ಯಕ್ತಗೊಳ್ಳುತ್ತದೆ ಎಂದು ವಿವರಿಸಿದ್ದಾರೆ.

"ಬಡತನದ ಕಡು ಬಿಸಿಲು

ನನ್ನ ಮನೆಯಲ್ಲಿ ಮಾತ್ರವಲ್ಲ

ಕೇರಿಯ ಎಲ್ಲರ ಮನೆಯಲ್ಲೂ" (ವಿಳಿ.ಪಾ.ಇದಯಿವೇಂದನ್, ಕನವುಗಳ್ ವಿರಿಯುಮ್, ಪು. ೨೫)

ಕವಿತೆಯಲ್ಲಿ ದಲಿತರ ಜೀವನವು ಸಾಮೂಹಿಕತೆಯಿಂದ ಕೂಡಿದ್ದು ಸಮಾಜದಲ್ಲಿ ಎಲ್ಲದಕ್ಕೂ ಅಸಮಾನತೆ ಇದ್ದರೆ ದಲಿತ ಕೇರಿಯಲ್ಲಿ ಬಡತನವು ಎಲ್ಲಾ ದಲಿತರಿಗೂ ಸಮಾನವಾಗಿ ಹಂಚಿಕೆಯಾಗಿದೆ. ಇದು ಸಮುದಾಯ ಕೇಂದ್ರಿತ ಚಿಂತನೆಯಾಗಿ ನಿರೂಪಿತಗೊಳ್ಳುವ ಕವಿತೆಯಾಗಿ ನೋಡಬಹುದಾಗಿದೆ.

ಅಸ್ಪೃಶ್ಯತೆ ಮತ್ತು ಮೈಲಿಗೆ: ಅಸ್ಪೃಶ್ಯತೆ ಎಂಬುದು ಒಂದು ಸಾಮಾಜಿಕ ಪಿಡುಗು ಮತ್ತು ಅವಮಾನ. ಬೇರೆ ದೇಶಗಳಲ್ಲಿ ಹೆಚ್ಚಾಗಿ ಕಾಣಿಸದಿದ್ದರೂ ಭಾರತೀಯ ಹಿಂದೂ ಸಂಪ್ರದಾಯ ಜಾತಿ ಪದ್ಧತಿಯಲ್ಲಿ ಆಚರಿಸಿಕೊಂಡು ಬರುತ್ತಿರುವ ದುಷ್ಟ ಪದ್ಧತಿಯಾಗಿದೆ. ಹುಟ್ಟಿನ ಹಿನ್ನೆಲೆಯಲ್ಲಿ ಜಾತಿಯ ಕಾರಣದಿಂದ ಅಸ್ಪೃಶ್ಯತೆಯನ್ನು ಆಚರಿಸುತ್ತದೆ. ಅಲ್ಲದೆ ಸಾವಾದ ಮನೆಯಲ್ಲಿನ ಅಸ್ಪೃಶ್ಯತೆ, ಹೆಣ್ಣು ಸಂಭ್ರಮಿಸುವ ಋತುಮತಿಯ ಸಂದರ್ಭದಲ್ಲಿ ಅವಳನ್ನು ಸೋಕಿದರೆ ಮೈಲಿಗೆ, ಸಂತಾನವಾದರೆ ಮೈಲಿಗೆ ಹೀಗೆ ಹಲವು ಸಂದರ್ಭಗಳಲ್ಲಿ ಅಸ್ಪೃಶ್ಯತೆ ಮತ್ತು ಮೈಲಿಗೆ ಎಂದು ಹಿಂದೂ ಧರ್ಮ ಈ ಅನಿಷ್ಟ ಆಚರಣೆಗಳನ್ನು ಕಾಪಾಡುತ್ತಾ ಬರುತ್ತಿದೆ. ಭಾರತದ ವೈದಿಕ ಸಂಸ್ಕೃತಿಯ ಆಚರಣೆಯಾದ ಈ ಪದ್ಧತಿ ಬ್ರಾಹ್ಮಣತ್ವವನ್ನು ಉಚ್ಚ ಸ್ಥಾನದಲ್ಲಿರಿಸುವ ಕೆಲಸ ಮಾಡಿ ಇಂತಹ ಕನಿಷ್ಠ ಆಚರಣೆಗಳ ಮೂಲಕ ಬ್ರಾಹ್ಮಣರು ದುಡಿಯುವ ಜನರಲ್ಲಿ

ಮೂಢನಂಬಿಕೆಗಳನ್ನು ಪ್ರೇರೇಪಿಸಿ ಅದರ ಲಾಭ ಪಡೆಯುತ್ತಿದ್ದಾರೆ. ಈ ರೀತಿಯ ಕುತಂತ್ರಗಳನ್ನು ಎದುರಿಸುವ ಮತ್ತು ಎಚ್ಚರಿಕೆಗಳನ್ನು ತಮಿಳು ದಲಿತ ಕಾವ್ಯಗಳು ಧ್ವನಿಸಿರುವುದನ್ನು ಕಾಣಬಹುದು.

ಹಿಂದೂ ಧರ್ಮದಲ್ಲಿ ಅಸ್ಪೃಶ್ಯರು ಎಂದು ಕರೆಯಲಾಗುವ ದಲಿತರು ಹೀಗೆ ಇರಬೇಕು ಎಂದು ಮನುಧರ್ಮ ಹೇಳುವುದರಿಂದ ಮೇಲ್ಜಾತಿಗಳು ದಲಿತರನ್ನು ಅಮಾನವೀಯ ರೀತಿಯಲ್ಲಿ ನಡೆಸಿಕೊಂಡಿರುವುದನ್ನು ಈ ಕವಿತೆಯಲ್ಲಿ ಕಾಣಬಹುದು.

"ನೀ ಒರು ಪಂಚಮನಾ	"ನೀನು ಒಬ್ಬ ಪಂಚಮನೇ
ಇಡುಪ್ಪಿಲ್ ತುಡ್ಪೈಪ್ಪಂ ಕಟ್ಟಾಮಾಲ್	ಸೊಂಟದಲ್ಲಿ ಕಸಬರಿಗೆ ಕಟ್ಟದೆ
ತೆರುವಿಲ್ ನಡಕ್ಕ ಅನುಮದಿ ಇಲ್ಲೈ	ಬೀದಿಯಲ್ಲಿ ನಡೆಯಲು ಅನುಮತಿ ಇಲ್ಲ.
ಕಳುತ್ತಿಲ್ ಕಲಯಂ ಮಟ್ಟಾಮಲ್	ಕತ್ತಿನಲ್ಲಿ
ಎಚ್ಚಿಲ್ ತುಪ್ಪ ಮುಡಿಯಾದ ನಿಲೈ	ಉಗುಳನ್ನು ಉಗುಳಲೂ ಆಗದ ಸ್ಥಿತಿ
ಪಿನಂಗಳಿನ್ ಕಂದಲ್‌ಗಳೈಂತ್ ತವಿರಪ್	ಹೆಣಗಳ ಚಿಂದಿ ಬಟ್ಟೆಗಳನ್ನು ಬಿಟ್ಟು
ಪ್ರದಿದಾಯ್ ಉಡುತ್ತ ಅನುಮದಿಯಲ್ಲೈ	ಹೊಸ ಬಟ್ಟೆ ಉಡಲು ಅನುಮತಿ ಇಲ್ಲ
ನಾಯ್‌ಗಳೈಯುಂ ಕಳುದೈಗಳೈಯಂ	ತವಿರಚ್ ನಾಯಿ ಕತ್ತೆಗಳ ಬಿಟ್ಟು
ಸೊತ್ತು ಸೇರ್‌ಕ್ಕ ಉರಿಮೈಯಿಲ್ಲೈ	ಆಸ್ತಿ ಕೂಡಿಡಲು ಹಕ್ಕಿಲ್ಲ
ಕಾಲಿಲ್ ಸೆರುಪ್ಪಣಿಯ ವಾಯ್‌ಪ್ಪಿಲೈ	ಕಾಲಿನಲ್ಲಿ ಚಪ್ಪಲಿ ಹಾಕುವಂತಿಲ್ಲ.
ತೋಳಿಲ್ ತುಂಡು ಪೋಡ ಮುಡಿಯಾ ನಿಲೈ	ತೋಳಿನಲ್ಲಿ ಟವಲ್ ಹಾಕಲು ಆಗದ ಸ್ಥಿತಿ
ಇತ್ತನೈ ಇಳಿ ಸೆಯಲ್‌ಗಳೈಯಂ	ಇಷ್ಟು ಕೀಳು ಕೆಲಸಗಳು
ಇಂದು ಮದಂ	ಹಿಂದು ಮತವು
ಸಟ್ಟಮಾಕ್ಕಿಂ ನ್ಯಾಯಪ್ಪಡುತ್ತಿಯದು"	ಶಾಸನ ಮಾಡಿ ನ್ಯಾಯೀಕರಿಸುತ್ತಿದೆ"

(ಕ. ಸುಬ್ಬಯ್ಯ, ಯುದ್ದಂ ತೊಡರುಂ, ಪು. ೧೭)

ಮಾಲಗತ್ತಿಯವರ 'ಕುತ್ತು' ಕವಿತೆಯಲ್ಲೂ ಈ ರೀತಿಯ ಚಿಂತನೆಯನ್ನು ಕಾಣಬಹುದು.

"ಹುಟ್ಟ ಬಾರ್ದದ್ರೆಪ್ಪೊ ಹುಟ್ಟ ಬಾರ್ದ
ಏಳೇಳು ಜನ್ಮದಾಗ ಈ ಭೂಮಿ ಮ್ಯಾಗೆ
ಹೊಲೆ ಮಾದಿಗ್ರಾಗಿ ಹುಟ್ಟಬಾರ್ದ"

ಈ ಎರಡೂ ಕವಿತೆಗಳಲ್ಲೂ ದಲಿತರ ಅಸ್ಪೃಶ್ಯತೆ ಕರಾಳ ನೋವನ್ನು ತಿಳಿಸಿಕೊಡುತ್ತವೆ. ಅಸ್ಪೃಶ್ಯರು ಹೇಗಿರಬೇಕು ಏನೇನು ಮಾಡಬೇಕು ಏನು ಮಾಡಬಾರದು ಎಂಬುದನ್ನು ಇಲ್ಲಿ ಕಾಣಬಹುದು.

"ಧನ ತೊಳೆಯಬಹುದು

ಹೇಲು ಬಟ್ಟೆ ಒಗೆಯಬಹುದು

ತಿಕವನ್ನು ತೊಳೆಯಬಹುದು

ನಾವು ಮಾತ್ರ ನೀರು ತುಂಬಬಾರದು"

ರವಿಕುಮಾರ್ ಅಸ್ಪೃಶ್ಯತೆಗೆ ವಿರುದ್ಧವಾದ ಧ್ವನಿ ನೀಡುತ್ತಾರೆ.

ಅಳಗಿಯ ಪೆರಿಯವನ್ ಅವರು 'ಅರೂಪನಂಜು' ಎಂಬ ಕವನ ಸಂಕಲನದಲ್ಲಿ ಈ ಸಮಾಜದಲ್ಲಿ ಜಾತಿ ಅಸಮಾನತೆ ವಿಷದ ನಂಜಿನತರ ಹೇಗೆ ಬೇರು ಬಿಟ್ಟಿದೆ. ಅದು ಯಾವ ಯಾವ ಸಮಯದಲ್ಲಿ ಹುದುಗಿರುವ ವಿಷ ಹೊರಬರುತ್ತದೆ ಎನ್ನುವುದನ್ನು ಕವಿತೆ ಮೂಲಕ ಈಗ ಕಟ್ಟಿಕೊಟ್ಟಿದ್ದಾರೆ.

"ಒಂದೇ ನಾಡಗೀತೆಯನ್ನು ಹಾಡಿದೇವು

ಒಂದೇ ಸಂಗೀತವನ್ನು ಆಸ್ವಾದಿಸಿದೇವು

ಒಂದೇ ಕವಿತೆಯನ್ನು ಕೇಳಿ ಬದುಕಿದೇವು

ಆದರೆ ನಮ್ಮಿಬ್ಬರ ಮಧ್ಯೆ ಇರುವ ಸ್ನೇಹ

ಮಾತ್ರ ಒಂದಾಗಲೇ ಇಲ್ಲ"

ಬಾಲ್ಯದಿಂದಲೂ ಶಾಲೆಯಲ್ಲಿ, ಪಾಠದಲ್ಲಿ ಒಂದು ಕಡೆ ಸೇರಿ ಪರಸ್ಪರ ನೋವು–ನಲಿವುಗಳನ್ನು ಹಂಚಿಕೊಳ್ಳುತ್ತೇವೆ. ನಾಡು–ನುಡಿ ಎಂದರೆ ಒಂದಾಗಿ ಸೇರುವ ನಾವುಗಳು ಜಾತಿ–ಜಾತಿಗಳ ನಡುವೆ ಹುದುಗಿರುವ ವಿಷವನ್ನು ಯಾಕೆ? ಹಾಗೆ ಉಳಿಸಿಕೊಂಡು ಬರುತ್ತೇವೆ. ಅದನ್ನು ಸಮಯಕ್ಕೆ ಸರಿಯಾಗಿ ಯಾಕೆ? ಹೊರ ಹಾಕುತ್ತೇವೆ ಎನ್ನುವ ಪ್ರಶ್ನೆಯನ್ನು ಕವಿ ಹುದುಗಿರುವ ವಿಷದ ಕವಿತೆಯಲ್ಲಿ ವ್ಯಕ್ತಪಡಿಸುತ್ತಾರೆ.

ಮತ(ಧರ್ಮ)

ದಲಿತ ಕಾವ್ಯವು ಹಿಂದೂ ಧರ್ಮದಲ್ಲಿನ ಧಾರ್ಮಿಕತೆ, ಪರಂಪರೆಯನ್ನು ವಿರೋಧಿಸುತ್ತದೆ. ಜಾತಿ ಮತ್ತು ಅಸ್ಪೃಶ್ಯತೆಯು ಹಿಂದೂ ಧರ್ಮದ ಸಂಚಿನಿಂದ ಬೆಳೆಯುತ್ತದೆ. ದಲಿತರ ಬಿಡುಗಡೆಯನ್ನು ಬಯಸುವ ದಲಿತ ಕವಿಗಳು ಜಾತಿ–ಅಸ್ಪೃಶ್ಯತೆಗೆ ಹಿಂದೂ ಧರ್ಮದಲ್ಲಿನ ನೀತಿಗಳೇ ಪ್ರಮುಖ ಕಾರಣ ಎಂದು ನಂಬಿದ್ದಾರೆ. ಅವರು ದೇವರು ಧರ್ಮ ಪ್ರಚಾರ

ಮಾಡುವ ಪೀಠಗಳನ್ನು ವಿಮರ್ಶಿಸುತ್ತಾರೆ. ಅಂಬೇಡ್ಕರ್ ಹೇಳುವಂತೆ ದೇವರ ಹೆಸರಿನಲ್ಲಿ ನಡೆಯುವ ಶೋಷಣೆಗಳು ಹಿಂದೂ ಧರ್ಮದ ಭಾಗವಾಗಿವೆ. ಆದ್ದರಿಂದ ಹಿಂದೂ ಧರ್ಮ ದಲಿತರಿಗಲ್ಲ ಎಂದು ತೀರ್ಮಾನಿಸುತ್ತಾರೆ. ಹಿಂದೂ ಧರ್ಮದ ವಿರೋಧದ ಅವಶ್ಯಕತೆ ಮತ್ತು ಮತಾಂತರದಿಂದಾಗುವ ಫಲಿತಾಂಶವನ್ನು ದಲಿತ ಕವಿಗಳು ಕವಿತೆಯ ಮೂಲಕ ವ್ಯಕ್ತಪಡಿಸಿದ್ದಾರೆ.

ದಲಿತರು ಜೀವನದ ಮೂಲಾಧಾರವೂ ಇಲ್ಲದಿರುವ ನಿರ್ಗತಿಕರನ್ನಾಗಿ ಹಿಂದೂ ಧರ್ಮ ಮಾರ್ಪಡಿಸಿರುವ ಕಾರ್ಯವನ್ನು ವಿಳಿ.ಪಾ. ಇದಯವೇಂದನ್ ಈ ರೀತಿಯಾಗಿ ಹೇಳುತ್ತಾರೆ.

"ಒಂದು ಅಡಿ ಮಣ್ಣು	"ಒರಡಿ ಮಣ್ಣೋ
ಒಂದು ಸಣ್ಣ ಗುಡಿಸಲು	ಒರು ಚಿನ್ನಕ್ಕುಡಿಸೈಯೋ
ಒಂದೊತ್ತಿನ ಊಟ	ಒರುವೇಳೈ ಉಣವೋ
ಒಂದು ತುಂಡು ಬಟ್ಟೆ	ಒರು ತುಂಡು ತುಣಿಯೇ
ಸ್ವಲ್ಪವಾದರೂ ಸ್ವ ಮರ್ಯಾದೆ	ಕೊಂಜಮೇನುಂ ಸುಯಮರಿಯಾದೈ
ಯಾವುದಕ್ಕೂ ಭರವಸೆ ಇಲ್ಲದ	ಎದರ್ಕುಂ ಉತ್ತರವಾದ ಮಿಂಡ್ರಿ
ಮಾಯವಾಗಿ ಬಂದು ನಿಂತಿದೆ	ಮಾಯಮಾಯ್ ವಂದು ನಿರ್ಕಿರದು
ಮದ ಹಿಡಿದ (ತಾಯಿ) ಮತ	ಮದಂ ಪಿಡಿತ್ತದಾಯ್ ಮದಂ
ಈ ಮತ	ಇಂದ ಮದಂ
ಇನ್ನು ಮುಂದೆ ನನಗಾಗಿಯವಲ್ಲ	ಇನಿ ಎನಕ್ಕಾನದಾಯ್ ಇಲ್ಲೈ
ಎನ್ನುವುದನ್ನು	ಎನ್‌ಬದೈ
ಎನ್ನ ಚರಿತ್ರೆ ಸತ್ಯವಾಗಿಸುತ್ತದೆ."	ಎನ್ ವರಲಾರುಗಳ್ ಮೆಯ್‌ಪ್ಪಿಕುಂ"

(ವಿಳಿ.ಪಾ.ಇದಯ ವೇಂದನ್, 'ಎವರುಂ ಅರಿಯಾದ ನಾಂ' ಪು. ೬೭)

ಹಿಂದೂ ಧರ್ಮದಲ್ಲಿ ದಲಿತರಿಗೆ ಯಾವುದೇ ಭರವಸೆ ಇಲ್ಲದಿರುವುದನ್ನು ನಿರೂಪಿಸುತ್ತದೆ. ದಲಿತರ ವಿರುದ್ಧವಾದ ಹಿಂದೂಧರ್ಮ (ದಲಿತರನ್ನು) ಕೀಳುಮಟ್ಟದ ಎಲ್ಲಾ ಆಕ್ರಮಣಗಳನ್ನು ಮಾಡುತ್ತದೆ. ಆದ್ದರಿಂದ ಹಿಂದೂ ಧರ್ಮ ದಲಿತರಿಗಲ್ಲ ಎಂದು ಕವಿ ಹೇಳುತ್ತಾರೆ.

ದೇವರು ಮತ್ತು ದೈವತ್ವದ ನಂಬಿಕೆಯಿಂದ ದಲಿತರನ್ನು ಹೇಗೆ ದಿಕ್ಕು ತಪ್ಪಿಸುತ್ತಾರೆ ಎನ್ನುವುದಕ್ಕೆ ಎನ್.ಟಿ. ರಾಜಕುಮಾರ ಅವರ ಕವಿತೆ ಸಾಲುಗಳನ್ನು ನಾವು ಗಮನಿಸಬಹುದು.

"ನಾನು ದೆವ್ವದ ಮಗು	"ನಾನ್ ಸಾತ್ತಾನಿನ್ ಕುಳಂದೈ
ನಾಯಿ	ನಾಯುಮ್

ರಾಕ್ಷಸ	ಪೇಯುಮ್
ಪಿಶಾಚಿಗಳೇ ನನ್ನ ದೇವರು:	ಪಿಸಾಸುಂದಾನ್ ಎನದು ದೆಯ್‌ವಂ:
ನನ್ನ ನಾಯಕ ಕರುಪ್ಪಳಗನು:	ಎನದು ತಲೈವನ್ ಕರುಪ್ಪಳಗನ್:
ತಂತ್ರಗಾರ ರಾಮನನ್ನು	ಸದಿಗಾರ ರಾಮನೈ
ಎದುರು ನಿಂತು ಚುಚ್ಚಿದ	ನೇರಿಲ್ ನಿಂಡ್ರು ಕುತ್ತಿ ಪುಲತ್ತಿಯ
ಅನಾಗರಿಕ ಮನುಷ್ಯನು"	ಕಾಟ್ಟಾಳನ್"

(ಎನ್.ಟಿ. ರಾಜಕುಮಾರ, ಕಾಟ್ಟಾಳನ್, ಪು. ೧೯)

ದೆವ್ವದ ಮಗು ಎಂದು ವೈದಿಕ ಸಂಸ್ಕೃತಿಯ ವಿರುದ್ಧ ಕವಿತೆ ಘರ್ಜಿಸುತ್ತದೆ. ದೇವರು X ದೆವ್ವ, ಪುರುಷೋತ್ತಮ X ಅನಾಗರಿಕ ಮನುಷ್ಯ ವಿರುದ್ಧ ದಿಕ್ಕುಗಳನ್ನು ನಿರೂಪಿಸುವ ಕವಿ ರಾಮನನ್ನು ಚುಚ್ಚಿದ ಅನಾಗರಿಕ ಮನುಷ್ಯ ನನ್ನ ನಾಯಕನೆಂದು ಹಿಂದೂ ಧರ್ಮದ ಸಾಂಸ್ಕೃತಿಕ ನಾಯಕನನ್ನು ವಿರೋಧಿಸುತ್ತದೆ.

ಇದೇ ರೀತಿಯ ಎನ್.ಟಿ.ರಾಜಕುಮಾರ್‌ರವರ ಮತ್ತೊಂದು ಕವಿತೆ ರಾಮಾಯಣ ಪುಸ್ತಕವನ್ನು ನಾಶ ಮಾಡುವುದಾಗಿ ದಾಖಲಿಸುತ್ತದೆ. ದೈನಂದಿನ ಬದುಕಿನ ಶ್ರಮಕ್ಕೂ ಇತಿಹಾಸ(ರಾಮಾಯಣ) ಹೇಳುವ ಕಥೆಗೂ ವಿರುದ್ಧವಾಗಿರುವುದನ್ನು ಕಾಣಬಹುದು.

ಇಂದಿರನ್ ಅವರ 'ಕಡವುಳುಕ್ಕು ಮುನ್ ಪಿರಂದವರ್‌ಗಳ್'(ದೇವರಿಗೂ ಮುನ್ನ ಹುಟ್ಟಿದವರುಗಳು) ೨೦೦೨ ಎಂಬ ಕವನ ಸಂಕಲನದಲ್ಲಿ ದೈವದ ಅಸ್ತಿತ್ವವನ್ನು ಕುರಿತ 'ಪೀರಟ್ಟು'(ಹುಟ್ಟು) ಎಂಬ ಕವನದಲ್ಲಿ

ಶಿವ ಹೇಗೆ ಹುಟ್ಟಿದಾ?

ಹೇಳಲು ಸಾಧ್ಯವೇ

ನಿಮಗೆ

ಯೇಸು ಹೇಗೆ ಹುಟ್ಟಿದಾ?

ಹೇಳಲು ಸಾಧ್ಯವೇ

ನಿಮಗೆ

ದೇವಾನು ದೇವತೆಗಳ ಹುಟ್ಟಿಗಿಂತ ಮೊದಲೇ

ನಾವು ಎಲ್ಲ ಇದ್ದೇವೆ

ಇಂದಿರನ್ ಅವರು ಈ ಕವಿತೆಯಲ್ಲಿ ದೇವರ ಹೆಸರಿನಲ್ಲಿ ನಡೆಯುವ ದೌರ್ಜನ್ಯವನ್ನು ವಿಡಂಬಿಸಿದ್ದಾರೆ. ನಮ್ಮ ಜನಪದರು ನಂಬಿಕೆಯಿಂದ ದೇವರನ್ನು ಕಂಡುಕೊಂಡವರು. ಅದಕ್ಕೆ ಮೂರ್ತಿ ಇಲ್ಲ. ನೀವು ಸೃಷ್ಟಿಸಿದ ಈ ದಲಿತರನ್ನು ದೇವರ ಕಲ್ಪನೆಯಲ್ಲಿ ನಮ್ಮನ್ನು ಹೇಗೆ ವಂಚಿಸಿ ನಾವು ದೇವರು ಮತ್ತು ಧರ್ಮದ ಹೆಸರಿನಲ್ಲಿ ಜನರು ಕೀಳಾಗಿ ಕಾಣುತ್ತೀರ ನೀವು ಸೃಷ್ಟಿ ಮಾಡಿದ ದೇವರುಗಳಿಗಿಂತ ನಮ್ಮ ಪೂರ್ವಜರು ಬದುಕಿದರು ಅವರ ಆಚರಣೆ ಮತ್ತು ನಂಬಿಕೆಯನ್ನು ನೀವು ಕೈವಶ ಮಾಡಿಕೊಂಡಿರುವಿರೆಂದು ಸೂಕ್ಷ್ಮವಾಗಿ ದೇವರು ಮತ್ತು ಧರ್ಮದ ಹೆಸರಿನಲ್ಲಿ ನಡೆಯುವ ಮೋಸವನ್ನು ಕವಿತೆಯ ಮೂಲಕ ಪ್ರತಿರೋಧಿಸುತ್ತಾರೆ. ಇದೇ ರೀತಿ ಸಿದ್ಧಲಿಂಗಯ್ಯನವರ 'ಒಂದು ಪದ' ಎಂಬ ಕವಿತೆಯಲ್ಲಿ

"ದೇವರು ಒಬ್ನೆ ಅಂತಾರೆ

ಓಣಿಗೊಂದೊಂದ್ ತರಾ ಗುಡಿ ಕಟ್ಟವ್ರೆ" ಎಂಬ ಸಾಲುಗಳು ದೇವರು ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆಗಳನ್ನು ತಿಳಿಸುತ್ತದೆ.

ಮಠಾಧಿಪತಿಗಳು ಕೇರಿಗಳಿಗೆ ಬರುವುದು ಮತ್ತು ಅದರಿಂದ ಯಾವುದೇ ಉಪಯೋಗ ಆಗದಿರುವುದನ್ನು ಅತೀ ಕೋಪದಿಂದ ಇಲ್ಲಿ ಯಾಳನ್ ಆದಿಯವರು ತಮ್ಮ ಕವಿತೆಯಲ್ಲಿ ಈ ರೀತಿ ವ್ಯಕ್ತಪಡಿಸುತ್ತಾರೆ.

"ಮಲ ಬಾಚುವ	"ಮಲಮುಳ್ಳುಂ
ನಮ್ಮ ಕೈಗಳಿಂದ	ಎಂಗಳ್ ಕೈಗಳಿಲಿರುಂದು
ಇಳಿಯುವ ನೀರು	ವಳಿಗಿಂಡ್ರ ನೀರ್
ನಿನ್ನ ಕಮಂಡಲದಲ್ಲಿ	ಉನ್ ಕಮಂಡಲತ್ತಿಲ್
ತೀರ್ಥವಾಗುವುದೇ?	ತೀರ್ತ್ತಮಾಗುಮಾ?
ದುಡಿದು ಮಾಸಿದ	ಉಳೈತ್ತುಕ್ ಕರುತ್ತ
ನಮ್ಮ ಲಂಗೋಟಿಯ ತುಂಡು	ಉಂಗಳ್ ಕೋವಣತ್ತುಂಡು
ನಿನ್ನ ಸೇನೆಯ	ಉನ್ 'ದಂಡ'ತ್ತಿಲ್
ಧ್ವಜವಾಗುವುದೇ?	ಕೊಡಿಯಾಗುಮಾ?
ಬೆವರು ಅಂಟಾಗಿರುವ	ವಿಯರ್‌ವೈ ಪಿಸುಪಿಸುತ್ತ
ನನ್ನ ಕೈಗಳು ತಾಗಿಸಲು	ಎಂ ಕೈಗಳ್ ಉರಸ
ನಿನ್ನ ಕೈಗಳಿಗೆ ಸಮ್ಮತಿಯೇ?	ಎನ್ ಕೈಗಳುಕ್ಕುಚ್ ಸಮ್ಮದಮಾ?

ಧೂಳು ಕಸ ತುಂಬಿದ	ದೂಸುದುಂಬು ನಿರೈಂದ
ನನ್ನ ಕೇರಿಗಳಲ್ಲಿ ನಡೆಯಲು	ಎಂ ತೆರುಕ್ಕಳಿಲ್ ನಡಕ್ಕ
ನಿನ್ನ ಪಾದದ ಪಾದುಕೆಗಳಿಗೆ ಬರುತ್ತದೆಯಾ?	ಉನ್‌ಪಾದಕ್ ಕರುಡುಗಳ ವರುಮಾ?
ಜಾತಿ ಆವೇಶ ತುಂಬಿದ	ಸಾದಿ ವೆರಿಯಿನ್ ನೀಟ್ಟಿಯಾಯ್
ಮಠಾಧೀಶನೇ	ನಿಗಳುಂ ಮಡತ್ ತಲೈವನೇ
ಏನಾಗುತ್ತವೆ ನಿನ್ನಿಂದ	ಎದುವಾಗುಂ ಉನ್ನಾಲ್
ನಮಗಾಗಿ	ಉಂಗಳುಕ್ಕಾಗ
ಹಿಂದೂ ಮತದ ಚರಂಡಿಯಲ್ಲಿ	ಇಂದು ಮದಚ್ ಚಾಕ್ಕಡೈಯಿಲ್
ನಮ್ಮನ್ನು ಹೂಳುವುದನ್ನು ಬಿಟ್ಟು	ಎಮ್ಮೈಡ್ ಪುದೈಪ್ಪದೈಟ್ ತವಿರ
ಮತ್ತೇಕೆ ಈ	ಪಿನ್ನೆದರ್‌ಕಿಂದ ಇಳಿಪ್ಪು
ಒಂದು ಕೊಡಲಿಯ ಹಿಡಿತದಂತೆ	ಒರು ಕೋಡಾರಿಯನ್ ಕೂರೈಪೋಲ್
ಇನ್ನು	ಇನಿ
ಹರಿದ ಚಪ್ಪಲಿಗಳನ್ನು	ಪಿಯ್‌ಂದ ಸೆರುಪ್ಪುಗಳೈಕ್
ಕಟ್ಟಿಡುತ್ತೇವೆ ಕೇರಿಗಳಲ್ಲಿ	ಕಟ್ಟಿ ವೈಪ್ಪೊಂ ಸೇರಿಗಳಿಲ್
ಬೇಡದವು ಕೆಲವು	ವೇಂಡಾದವೈ ಸಿಲ
ಬರಬಾರದು ಎನ್ನುವುದಕ್ಕಾಗಿ"	ವರಕ್ಕೂಡಾದೆನ್‌ಬಾದರ್‌ಕಾಗ

(ಯಾಳನ್ ಆದಿ, ಸೆವಿಪ್ಪರೈ, ಪು. ೫೪)

ನಾಲ್ಕು ವರ್ಣಗಳನ್ನು ಸೇರಿಸುವ ಹಿಂದೂ ಧರ್ಮದ ಕೋಪ, ಹಿಂದೂ ದೇವರುಗಳ ಜೊತೆ ಮಠಾಧಿಪತಿಗಳು ಕೇರಿಗೆ ಬರುವುದನ್ನು ವಿರೋಧಿಸುತ್ತದೆ.

"ಒಲೆಯಲ್ಲಿ ಬೆಂಕಿ ಹಚ್ಚಿ ಒಣಮೀನು ಇಟ್ಟು	"ಅಡುಪ್ಪಿಲ್ ಕನಲ್ ಸುಟ್ಟಿ ಕರುವಾಡು ವಚ್ಚು
ಹದವಾಗಿ ಸುಟ್ಟು ತೆಗೆದು ರೊಟ್ಟಿ ಮಾಡಿ	ಪದಮಾಗಚ್ ಸುಟ್ಟೆಡುತ್ತು ಸೆಳ್ಳು ತಟ್ಟಿ
ಹುಳಿಯನ್ನು ಹಸಿಮೆಣಸಿನಕಾಯಿ	ಉಳ್ಳಿಯುಂ ಪಚ್ಚಮಿಳಗಾಯುಂ
ಉಪ್ಪ ಇಟ್ಟು ತಿಂದು	ಉಪ್ಪುಂ ವಚ್ಚಿ ನವಟ್ಟಿತ್ ತಿನ್ನು

ಹಳೆಯ ಗಂಜಿಯನ್ನು ಕುಡಿಯುತ್ತೇವೆ	ಪಳಂಗಂಜಿಯುಂ ಕುಡಿಪ್ಪೋಂ
ಶುಕ್ರವಾರದ ಮುಂಜಾನೆಯಲ್ಲಿ"	ಒಡುಕ್ಕತ್ತ ವೆಳ್ಳಿಕ್ಕಿಳಮೈಕ್ ಕಾಲೈಗಳಿಲ್"

(ಎನ್.ಟಿ. ರಾಜಕುಮಾರ್, ತೆರಿ, ಪು. ೪೫)

ಸಾಮಾನ್ಯವಾಗಿ ಹಿಂದೂ ಧರ್ಮದ ಪ್ರಕಾರ ಶುಕ್ರವಾರ ಎನ್ನುವುದು ಪವಿತ್ರವಾದ ದಿನ. ಅದರಲ್ಲೂ ಶುಕ್ರವಾರದ ಮುಂಜಾವುಗಳಲ್ಲಿ ಮಾಂಸಹಾರವನ್ನು ತಿನ್ನುವುದಿಲ್ಲ. ಆದರೆ ಆ ಪವಿತ್ರತೆಯನ್ನು ಮೀರುವ ಪ್ರಯತ್ನವನ್ನು ಕಾಣಬಹುದು. ಅದಲ್ಲದೆ ಹಳೆಯ ಗಂಜಿಯನ್ನು ಕುಡಿಯುವಾಗ ಇತರರು ಉಪ್ಪಿನಕಾಯಿ, ಹಸಿಮೆಣಸಿನಕಾಯಿ, ಈರುಳ್ಳಿಯನ್ನು ಬಳಸುತ್ತಾರೆ. ದಲಿತರು ಇವುಗಳ ಜೊತೆಗೆ ಬಿಸಿ ಮಾಡಿದ ಒಣಮೀನನ್ನು ತಿನ್ನುತ್ತಾರೆ ಎಂಬುದನ್ನು ಇಲ್ಲಿ ಕಾಣಬಹುದು. ಅಲ್ಲದೆ ಅನೇಕ ದಲಿತ ಕವಿತೆಗಳು ಗೋಮಾಂಸ, ಹಂದಿ, ಮೀನು, ಒಣಮೀನು ತಿನ್ನುವುದನ್ನು ದಾಖಲಿಸುತ್ತದೆ. ಇದರೊಂದಿಗೆ ಕೂಲಿ ಕೆಲಸಗಾರರು ಕೆಲಸ ಮಾಡಿ ದಣಿದು ಬಂದರೂ ಒಂದೊತ್ತಿನ ಊಟಕ್ಕೂ ಪರದಾಡುವ ಸ್ಥಿತಿಯನ್ನು ಹಲವು ಕವಿತೆಗಳು ವಿವರಿಸುತ್ತದೆ.

ಆಹಾರ ಪದ್ಧತಿ

"ನಮ್ಮ ಗ್ರಾಮದಲ್ಲಿ ನಡೆಯುವ	"ಎಂಗಲ್ ಗ್ರಾಮತ್ತಿಲ್ ನಿಗಳುಂ
ಕಾರ್ಯವಾಗಲಿ	ಕರುಮಾದಿಯುಂ
ಮದುವೆ ಮುಂಜಿಯಾಗಲಿ	ಕಲ್ಯಾಣಮುಂ
ನನಗೆ ಸಂತೋಷಿಸುವ ಸಂಗತಿಗಳು	ಎನಕ್ಕು ಮಗಿಳ್‌ಚ್ಚಿತರುಂ ನಿಗಳ್‌ಚ್ಚಿಗಳ್
ಒಗ್ಗರಣೆ ನೀಡಿದ ಸಾರು	ತಾಳಿತ್ತ ಕುಳಂಬುಂ
ಬಗೆಬಗೆಯಾದ ಆಹಾರಗಳು	ವಗೈವಗೈಯಾನ ವೆಂಜನಮುಂ
ಮಾಂಸ ತೆಗೆದ ಎಲುಬುಗಳು	ದಸೈ ನೀಕ್ಕಿಯ ಎಲುಂಬುಂ
ಎಲೆಯ ತುಂಬ ಅನ್ನ	ಇಲೈ ನಿರೈಯ ಸೋರುಂ
ಬೀದಿಯಲ್ಲಿ ಕುಳಿತು	ವೀದಿಯಲ್ ಅಮಂರದು
ಹೊಟ್ಟೆ ತುಂಬಾ ತಿಂದಿದ್ದೇನೆ"	ವಿಲಾವ್ ಪುಡೈಕ್ಕಕ್ ಸಾಪ್ಪಿಟ್ಟಿರುಕ್ಕಿರೇನ್"

(ಕ. ಸುಬ್ಬಯ್ಯ, ದಲಿತ ಕವಿತೆಗಳು, ಪು. ೬)

ಎಂಬ ಕವಿತೆಯ ಮೂಲಕ ತಮಗೆ ಸಿಗದ ಅಪರೂಪದ ಆಹಾರವಾಗಿ ಎಲೆಯಲ್ಲಿ ಬಡಿಸುವ ಅನ್ನವನ್ನು ದೊಡ್ಡ ವರವಾಗಿ ದಲಿತರು ತಿಳಿಯಬಹುದು. ಮತ್ತು ಅವರ ಬಡತನದ ತೀವ್ರತೆಯು ತಿಳಿಯುತ್ತದೆ. ಜೊತೆಗೆ ಅವರ ಇಷ್ಟವಾದ ಮಾಂಸ ಆಹಾರದ ಬಗ್ಗೆ ಇಲ್ಲಿ ಲೇಖಕರು ತಿಳಿಸುತ್ತಾರೆ.

ಮತಾಂತರ

ಬ್ರಿಟೀಷರ ಆಡಳಿತದಿಂದ ೧೮೫೭ರ ನಂತರ ತಮಿಳು ನಾಡಿನ ರಾಜಕೀಯ, ಶೈಕ್ಷಣಿಕ, ಆರ್ಥಿಕ ಜೀವನಗಳು ಬದಲಾದವು. ಎಲ್ಲರಿಗೂ ಸಮಾನವಾದ ಶಿಕ್ಷಣ ದೊರೆಯಿತು. ಕ್ರೈಸ್ತಪಾದ್ರಿಗಳು ಎಲ್ಲಾ ಮನುಷ್ಯರನ್ನು ಸಮಾನವಾಗಿ ಕಂಡರು. ಕತ್ತಲಾದ ಗ್ರಾಮಗಳಲ್ಲಿ ಕ್ರೈಸ್ತ ಧರ್ಮದ ಪಾದ್ರಿಗಳು ಪ್ರಚಾರ ನಡೆಸಿದರು. ಅಧಿಕಾರ ಬಲವೂ ಕ್ರೈಸ್ತರಿಗೆ ದೊರೆತಿದ್ದರಿಂದ ಕಾರ್ಯರೂಪದಲ್ಲಿ ಹಲವು ಬದಲಾವಣೆಗಳನ್ನು ತಂದರು. ಇದನ್ನು ಗಮನಿಸಿದ ಹಲವು ದಲಿತರು ಸ್ವಯಂಪ್ರೇರಿತವಾಗಿ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದರು.

ಅಂಬೇಡ್ಕರ್‌ರ ಪ್ರಭಾವದಿಂದ ಹಲವು ದಲಿತರು ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ್ದನ್ನು ಯಾಳಿನ್ ಆದಿ ನಡುಂತೀ ಎಂಬ ಕವಿತೆಯಲ್ಲಿ ಈ ರೀತಿ ವಿವರಿಸುತ್ತಾರೆ.

"ಕಳೆದ ರೂಪಗಳ ಮೇಲೆ	ತೊಲ್ಯೆಂದ ಉರುವಂಗಳಿನ್ ಮೀದು
ಶೇಖರಿಸಲ್ಪಟ್ಟ ಬೆಂಕಿಗಳನ್ನು	ಸೇಗರಿಕ್ಕಪ್ಪಟ್ಟ ನೆರುಪ್ಪುಗಳೈ
ವರ್ಧಿಸಿ ಬೆಳೆಸಿದ ಬೆಂಕಿಯಲ್ಲಿ	ಕಿಳರ್‌ತ್ತಿ ವಳರ್‌ತ್ತ ನೆಡುಂಲೇಯಿಲ್
	ಪೊಸುಂಗಿ ಅವಿಂದದು
ಜನ್ಮಾಂತರಗಳ ಗುಲಾಮತನ	ಜೆನ್‌ಮಾಂದಿರಂಗಳಿನ್ ಅಡಿಮೈತ್ತನಂ
ಯುಗದ ಬಿಡುಗಡೆಯ ಸಾಲು	ಯುಗ ವಿಡುದಲೈಕ್ ಕಿಟ್ರಾಯ್
ಬುದ್ದನ ಚಿಂತನೆಯ ಬೆಂಕಿಯಲ್ಲಿ	ಅಣ್ಣಲಿನ್ ಸಿಂದನೈತ್ತೀಲ್
ಅರಳಿತು ಮತಾಂತರ	ಮಲರ್‌ಂದದು ಮದಮಾಟ್ರಂ
ಕುಕ್ಕುವ ಹದ್ದಿನ ಸ್ಥಿತಿಯಿಂದ	ಕೊತ್ತಿತ್ ತಿರಿಯುಂ ಪರುಂದೆನ
ಹಿಂದೂ ಮತದ	ಸೂಳಲುಂ ಹಿಂದು ಮದತ್ತಿಲಿರುಂದು
ಪಡೆದ ಬಿಡುಗಡೆಯೇ	ಪೆಟ್ರ ವಿಡುದಲೈಯೇ
ದಲಿತ ಬಿಡುಗಡೆ	ದಲಿತ್ ವಿಡುದಲೈ

(ಯಾಳಿನ್ ಆದಿ, ನೆಡುಂತೀ, ಪು. ೫೯) ಬೌದ್ಧ ಮತವನ್ನು ಜನರು ಬೆಂಕಿಯಂತೆ ಜಾಗೃತಿಯಿಂದ ಒಪ್ಪಿಕೊಂಡಿದ್ದರಿಂದ ಗುಲಾಮತನ ಬಿಟ್ಟಂತೆ ಎನ್ನುತ್ತಾರೆ. ಒಟ್ಟಾರೆ ಗುಲಾಮತನದಿಂದ ಬಿಡುಗಡೆ ಪಡೆಯುವುದೆ ಮತಾಂತರಕ್ಕೆ ಮುಖ್ಯ ಕಾರಣ. ಹಿಂದೂ ಧರ್ಮವನ್ನು ಬಿಟ್ಟಾಗ ಸಹಜವಾಗಿಯೇ ಗುಲಾಮತನ ಬದಲಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ.

"ಬಿಸಿಲನ್ನು ಹುಡುಕುತ್ತಾ ಹೊರಗೆ	"ವೆಯಿಲ್ ತೇಡಿ ವೆಳಿಯೇ?
ಹೋಗುವಾಗ	ಸೆಲ್‌ಗೈಯಿಲ್
ಮಳೆಗಾಗಿ ಪ್ರಾರ್ಥನೆ ಮುಗಿಸಿ	ಮಳೈಕ್ಕಾನ ಪ್ರಾರ್ಥನ್ಯೆ ಮುಡಿಂದು
ಬರುತ್ತಿದ್ದರು ಅಷ್ಟೂ ಜನರು	ಕಿಳಂಬಿನಾರ್ ಅನೈವರುಂ
ಮಳೆಗಾಗಿ ಹಂಬಲಿಸುತ್ತಾ ಹೋಗುತ್ತಿದ್ದ	ಮಳೈಯೇಂಗಿಚ್ ಸೆಲ್ಲುಂ
ಗುಂಪಿನಲ್ಲಿ ನಾನು	ಕೂಟ್ಟತ್ತಿಲ್ ನಾನ್
ಈಗ	ಇಪ್ಪೋದು

(ಯಾಳಿನ್ ಆದಿ, ಸೆವಿಪ್ಪರೈ, ಪು. ೪೮)

ತಿಳಿಯದೇ ಅಲೆಯುತ್ತಿದ್ದಾಗ ಪ್ರಾರ್ಥನೆ ಮಾಡುವ ಕ್ರೈಸ್ತ ಮತದಲ್ಲಿ ತನ್ನನ್ನು ಸೇರಿಸಿಕೊಂಡಂತೆ ಕವಿ ತಿಳಿಸುತ್ತಾರೆ.

"ಟೋಪಿ ಹಾಕಿಕೊಳ್ಳಬಹುದು	"ಗುಲ್ಲಾಪ್ ಪೋಟ್ಟುಕ್ಕೈಲಾಂ
ದಿನಕ್ಕೆ ಐದು ಸಲ	ನಾಳುಕ್ಕು ಅಂಜುಮೊರ
ನಮಸ್ಕರಿಸಬಹುದು	ತೊಳುಗ ನಡತ್ತಿಕ್ಕಲಾಂ
ಅಸಾಧ್ಯವಾದುದೇನೊ ಅಲ್ಲ	ಮುಡಿಯಾದವೈಯಲ್ಲ
ಅದೆಲ್ಲ ನಮಗೆ	ಅವೈಯಲ್ಲಾಂ ಎಂಗಳುಕ್ಕು
ಆಗಬೇಕು ಲೇ ಆರುಮುಖ ಮಗನೆ	ಮುಡಿಯಣುಂ ಎಲೇ ಆರುಮೊವಂ ಮವನೇನ್ನು
ಎಂದು ಕರೆದ ಬಾಯಿಗಳಿಂದ	ಅಳೈಚ್ಚ ವಾಯ್‌ಗಳಿಲಿರುಂದು
'ಬನ್ನಿ ಅಬ್ದುಲ್ ಖಾದರ್' ಮಾತುಗಳು"	'ವಾಂಗ ಅಪ್‌ದುಲ್ ಖಾದರ್' ವಾರ್‌ತ್ತೈಗಳ್"

(ಅಭಿಮಾನಿ, ಎದಿರಾಗಿ, ಪು. ೧೨) ದಲಿತರ ಮೇಲೆ ಮುಂದುವರೆಯುತ್ತಿರುವ ಶೋಷಣೆಗಳಿಂದ ದಲಿತರಾಗಿರುವ ಒಬ್ಬ ಇಸ್ಲಾಂ ಧರ್ಮಕ್ಕೆ ಸೇರಿಬಿಡೋಣವೆಂದು ಹಾಗೆ ಸೇರಿರುವುದರ ಮೂಲಕ ಒಬ್ಬ ಮನುಷ್ಯನಾಗಿ ಸ್ವ ಮರ್ಯಾದೆಯನ್ನಾದರೂ ಕಾಪಾಡಿಕೊಳ್ಳಬಹುದು ಎಂದು ಕವಿ ತಿಳಿಸುತ್ತಾರೆ.

ಅಯ್ಯಪ್ಪ ಸ್ವಾಮಿಗೆ ಮಾಲೆ ಹಾಕಿದ ಮೇಲೆ ಯಾರಾಗಿದ್ದರೂ ಅವರಿಗೆ ಸ್ವಾಮಿ ಎಂದು ಕರೆಯುವುದು ವಾಡಿಕೆ. ಆದರೆ ಅದನ್ನು ದಲಿತನೊಬ್ಬನು ಹಾಕಿದಾಗ ಅವನಿಗೆ ಮರ್ಯಾದೆಯಲ್ಲಿ

ವಿಶೇಷತೆ ಇರುವುದಿಲ್ಲ ಎಂದು ಹಿಂದೂ ಧರ್ಮದ ಆಚರಣೆಗಳು ಕೇವಲ ವೈದಿಕರಿಗೆ ಮಾತ್ರ ದಲಿತರಿಗಲ್ಲ ಎನ್ನುವುದನ್ನು ಈ ಕೆಳಗಿನ ಕವಿತೆ ತಿಳಿಸುತ್ತದೆ.

ದಿನವೂ ಶುದ್ಧವಾಗಿ	ನಿತ್ತಮುಂ ಸುದ್ದಮಾಯ್
ವ್ರತ ನಿಯಮ ನೀತಿಗಳು	ವಿರದ ನಡೈಮುರೂಗಳ್
ಬೇರೆ ಜಾತಿಯವರಿಗೆಲ್ಲಾ 'ಸ್ವಾಮಿ' ಎಂದು...	ಮಟ್ರ ಸಾದಿಗಳೆಲ್ಲಾ ಸಾಮಿಗಳಾಗ
ಯಜಮಾನ ಕರೆಯುತ್ತಾನೆ.	ಆಂಡೈ ಅಳೈಪ್ಪಾನ್
ಅವನನ್ನು ಮಾತ್ರ	ಅವನ್ನೈ ಮಟ್ಟುಮೇ
"ಲೇ ಮಾಡಸಾಮಿ ಮಗನೇ ಎಂದು"	ಎಲೇ ಮಾಡಸಾಮಿ ಮವನೇ ಎನ"

(ಅಭಿಮಾನಿ, ಎದಿರಾಗ, ಪು. ೧೦)

ಮತಾಂತರವಾದರೂ ದಲಿತರನ್ನು ದಲಿತರಾಗಿಯೇ ನೋಡುವ ಸ್ಥಿತಿಗತಿಯನ್ನು ಈ ಕೆಳಗಿನ ಕವಿತೆ ವಿವರಿಸುತ್ತದೆ.

"ಎಲ್ಲಾ ಸಂಪ್ರದಾಯಗಳಲ್ಲಿ	"ಎಲ್ಲಾಚ್ ಸಡಂಗುಗಳಿಲುಂ
ನನ್ನ ಅಂಗಿ ಮಾತ್ರ ಬದಲಾಯಿತು	ಎನ್ ಸಟ್ಟೈ ತಾನ್ ಮಾರಿಯದು
ನನ್ನ ಜಾತಿ	ಎನ್ ಸಾದಿಯೋ
ಇನ್ನು ಪರ್ರೈ ಆಗಿಯೇ	ಇನ್ನುಂ ಪರ್ರೈಯನಾಗವೇ
ಇದೆ	ಇರುಕ್ಕಿರದು

(ಸಿಲ ದಲಿತ್ ಕವಿದೈಗಳ್, ರಾಜ ಮುರುಗು ಪಾಂಡಿಯನ್)

ಹಿಂದೂ ಧರ್ಮದಲ್ಲಿ	"ಇಂದು ಮದತ್ತಿಲ್
ಇವನು ಪಂಚಮ	ಇವನ್ ಪಂಚಮನ್
ಕ್ರೈಸ್ತನಾದರೆ	ಕಿರಿತ್ತುವನಾನಾಲ್
ಇವನು ಬೆಂಜಮಿನ್	ಇವನ್ ಬೆಂಜಮಿನ್
ಬೆಂಜಮಿನ್ ಆದರೂ	ಬೆಂಜಮಿನ್ ಆನಾಲುಂ
ಅಲ್ಲಿಯೂ ಪಂಚಮನು	ಅಂಗೇಯುಂ ಪಂಚಮನ್
ಪಂಚಮನೇ"	ಪಂಚಮನೇ!"

(ತನಿಗೈ ಸಲ್ವನ್, ದಲಿತ್ತಿಯಂ ತಮಿಳಿಯಂ, ಪು. ೮೩)

ದಲಿತ ಜಾಗೃತಿ

ಲಿಖಿತ ಚರಿತ್ರೆಯುದ್ದಕ್ಕೂ ದಲಿತರನ್ನು ಎಲ್ಲಾ ನೆಲೆಗಳಲ್ಲೂ ಕೀಳಾಗಿ ಪರಿಗಣಿಸಿರುವುದನ್ನು ಕಾಣುತ್ತೇವೆ. ಹಲವು ಸಮಾಜ ಸುಧಾರಕರು, ಧಾರ್ಮಿಕ ನಾಯಕರು, ವೈಚಾರಿಕ ಚಿಂತಕರು ಮುಂತಾದವರು ತಮ್ಮ ಜೀವನದ ಉದ್ದಕ್ಕೂ ದಲಿತರ ಪರವಾಗಿ ಧ್ವನಿ ಎತ್ತಿದ್ದರು. ದಲಿತರ ಜೀವನದಲ್ಲಿ ಕಂಡು ಬಂದ ಬದಲಾವಣೆ ಏನು? ಎಂಬುದು ತಿಳಿದಿರುವ ಸಂಗತಿ. ಇದಕ್ಕೆ ಮುಖ್ಯ ಕಾರಣ ರಾಜಕೀಯ, ಅಧಿಕಾರ ಮತ್ತು ಅರ್ಥಿಕ ಬಲಗಳು ತಮ್ಮ ಕೈಯೊಳಗಿರದೆ, ಅಧಿಕಾರ ಪಡೆದ ಯಾವುದೇ ಸಮುದಾಯವು ಉನ್ನತ ಸ್ಥಾನದಲ್ಲಿ ಇರಲು ಸಾಧ್ಯವಿಲ್ಲ ಎನ್ನುವ ಆಶಯದೊಂದಿಗೆ ಕವಿ ಉಳಿ ಇದಯವೇದನ್ ತನ್ನ ಕವಿತೆಯಲ್ಲಿ ದಲಿತರ ಜಾಗೃತಿ ಕುರಿತು ಹೀಗೆ ಹೇಳುತ್ತಾರೆ. ಹಾಗಾಗಿ ದಲಿತರ ಬೆಳವಣಿಗೆಗೆ ದಲಿತರೆಲ್ಲರೂ ಒಗ್ಗೂಡಿ ದಲಿತರಿಗೆ ಅಧಿಕಾರ ನೀಡಬೇಕು.

"ಕೊಲ್ಲುವುದಕ್ಕೆ	"ಕೊಲ್‌ವದರುಕು
ನೀನು ಕಾದಿರುವೆಯಾದರೂ	ನೀ ಕಾತ್ತಿರುಂದ ಪೋದಿಲುಂ
ಬಿದ್ದು ಸಾಯಲು ತಯಾರಿಲ್ಲ ನಾನು	ವೀಳ್‌ಂದು ಮಡಿಯ ತಯಾರಿಲ್ಲೈ ನಾನ್
ಸಾಧ್ಯವಿಲ್ಲ	ಮುಡಿಯಾದು
ಇನ್ನು ಮುಂದೆ ನಿನ್ನಿಂದ	ಇನಿಮೇಲ್ ಉನ್ನಾಲ್
ಮುಂದುವರಿಯುವ ಹೋರಾಟದಲ್ಲಿ	ತೊಡರುಂ ಪೋರಾಟ್ಟತ್ತಿಲ್
ಒಂದೇ ಕಣದಲ್ಲಿ ನಿಂತು	ಒರೇ ಕಣತ್ತಿಲ್ ನಿಂಡ್ರು
ಗರ್ಜಿಸಿ ಏಳುವೆ	ಕುಮುರಿ ಎಳುಂ
ಮಲೆಯೂ ನುಚ್ಚಾಗಿ ಚದುರುತ್ತದೆ	ಮಲೈಗಳುಂ ನೊರುಂಗಿಂತ್ ಸಿದರುಂ
ಸಾವಿರ ವರ್ಷಗಳ	ಆಯಿರಂ ಆಂಡುಗಳಿನ್
ಔನ್ನತ್ಯವಾಗಿ	ಉನ್ನದಂಗಳ್

(ವಿಳಿ. ಪಾ. ಇದಯ ವೇಂದನ್, ಎವರುಂ ಅರಿಯಾದ ನಾಂ, ಪು. ೬೬) ಈ ಕಾಲದಲ್ಲಿಯೇ ದಲಿತ ಬಿಡುಗಡೆ ಆಗಬೇಕು ಅದಕ್ಕಾಗಿ ಕೆಲಸವೂ ನಡೆಯುತ್ತಿದೆ. ಅದು ಸಿಗದೆ ಈ ತಲೆಮಾರಿನ ಜನರು ಬಿಡಲಾರರು. ಆದ್ದರಿಂದ ದಲಿತ ಬಿಡುಗಡೆ ಸಾಧ್ಯ ಎಂಬುದು ಇಲ್ಲಿಯ ಕವಿಯ ದೃಢ ನಂಬಿಕೆ. ಅವರು ಎಲ್ಲಾ ಕಾಲದಲ್ಲು ದಡ್ಡರಾಗಿರುವುದಿಲ್ಲ. ಇನ್ನು ಮುಂದೆ ಒದೆ ತಿನ್ನುವ, ಬಲಿ ಕೊಡುವ ತಂತ್ರಗಳ ಕೆಲಸ ನಡೆಯುವುದಿಲ್ಲ. ದಲಿತರೆಲ್ಲಾ

ಒಗ್ಗಟ್ಟಾಗಿ ಕೂಡಿ. ಎಚ್ಚರಿಕೆಯಿಂದ ಜೀವನ ನಡೆಸಬೇಕೆಂದು ಕವಿತೆ ತಿಳಿಸುತ್ತದೆ. ಮುನಿವೆಂಕಟಪ್ಪನವರ 'ಮತ್ತೆ ಚಿಗುರುತ್ತೇನೆ' ಎಂಬ ಕವನದಲ್ಲೂ ಈ ರೀತಿಯ ಚಿಂತನೆಯನ್ನು ಕಾಣಬಹುದು.

"ಕೊಚ್ಚಿದಷ್ಟು ಚಿಗುರುತ್ತೇನೆ

ತಳದಲ್ಲಿ ಬೇರು ಬಿಟ್ಟು, ಬಿಡುಗಡೆಯ ಪಡೆದು" ಎಂಬ ಸಾಲುಗಳು ದಲಿತ ಜಾಗೃತಿಯ ಭಾಗವಾಗಿ ಕಂಡು ಬರುತ್ತದೆ.

"ದಲಿತರು ಬರುವರು ದಾರಿ ಬಿಡಿ

ದಲಿತರ ಕೈಗೆ ರಾಜ್ಯ ಕೊಡಿ" ಎಂಬ ಕವಿತೆಯು ದಲಿತ ಜಾಗೃತಿಯಿಂದ ಆದ ಎಚ್ಚರಿಕೆಯ ಸಂಕೇತವಾಗಿ ಸಿದ್ಧಲಿಂಗಯ್ಯನವರು ಬಳಸಿರುವುದನ್ನು ಕಾಣಬಹುದು.

"ಕಾಲ ಕಾಲದಿಂದಲೂ ಹೋರಾಟಕ್ಕೆ	"ಕಾಲಂಗಾಲಮಾನ ತಾಕ್ಕುದಲುಕ್ಕುಪ್
ಉತ್ತರವಾಗಿ	ಬದಿಲಾಯ್
ಕಾದಿದೆ ಕಪ್ಪು ಸೈನ್ಯ"	ಕಾತ್ತಿರುಕ್ಕಿರುದು ಕರುಪ್ಪುಪ್ಪಡೈ"

(ಅನ್ಬಾದವನ್, ನೆರುಪ್ಪಿಲ್ ಕಾಯ್ಚ್ಚಿಯ ಪರೈ, ಪು. ೯೬) ದಲಿತ ರಾಜಕೀಯದ ಸಾಮರ್ಥ್ಯವನ್ನು ಕವಿತೆ ತಿಳಿಸುತ್ತದೆ. ಮುಖಾಮುಖಿಯಾಗಿ ಮಾತಾಡಲು, ಸ್ಪರ್ಧಿಸಲು, ಆಡಳಿತ ನಡೆಸಲು ಎಲ್ಲದಕ್ಕೂ ದೇಹದ ಬಲ, ಮನ ಇರುವುದಾಗಿ ಜೊತೆಗೆ ನಂಬಿಕೆ ಸ್ವ-ಮರ್ಯಾದೆ ಇರುವುದಾಗಿ ಕವಿ ಹೇಳುವುದನ್ನು ಕಾಣಬಹುದು.

ಸಾಮಾಜಿಕ ಅಧಿಕಾರವನ್ನು ಗಳಿಸಿಕೊಳ್ಳುವುದೇ ದಲಿತ ಬಿಡುಗಡೆಯ ಪ್ರಮುಖ ಭಾಗ. ಬಿಡುಗಡೆಯ ಮುಂದಿರುವ ದಾಖಲೆಗಳು, ಗುರುತುಗಳು, ತ್ಯಾಗಗಳು, ರಕ್ತದ ಕಲೆಗಳೆಲ್ಲವೂ ಕೇರಿಯಲ್ಲಿಯೇ ಇದೆ. ಆದ್ದರಿಂದ ದಲಿತ ಬಿಡುಗಡೆ ಮೇಲ್ಜಾತಿಯರ ಕೈಯಲ್ಲಿ ಇಲ್ಲ. ಅವರು ಕೊಡಬೇಕಾದ್ದೂ ಇಲ್ಲ. ತಾವೇ ತೆಗೆದುಕೊಳ್ಳಬಹುದು ಎನ್ನತ್ತಾರೆ ಕವಿ ಕಂದಸ್ವಾಮಿ.

"ನಿನ್ನ ಬೇಡಿಯ ಕಳಚುವ ಸಂಕೋಲೆಯನ್ನು ಬಿಡಿಸುವ	ಉನ್ ವಿಲಂಗೈ ತಿರಕ್ಕುಂ
ಬೀಗ ಕೇರಿಯಲ್ಲಿ ಇದೆ"	ನಾವಿ ಸೇರಿಯಲ್ ಕಿಡಕ್ಕಿರದು.

(ತಯ್ ಕಂದಸಾಮಿ, ತನಿ ಇರುಟ್ಟು, ಪು. ೨೦)

ಇದರೊಂದಿಗೆ ಶಿಕ್ಷಣ ಎಂಬುದು ಅಧಿಕಾರವನ್ನು ಸಮಾನತೆಯನ್ನು ನೀಡುತ್ತದೆ ಎಂದು.

"ಚೆನ್ನಾಗಿ ಓದಿದರೆ	"ಒಲುಂಗಾಪ್ ಪಡಿಚ್ಚಾ
ಊರು ಕೇರಿ ಒಂದಾಗುತ್ತದೆ"	ಊರುಂ ಚೇರಿಯಂ ಒಂಡ್ರಾಗುಂ"

(ಅದೇ ಪು. ೧೪) ಹೆಚ್ಚು ಓದಿದಾಗ ಇತರೆ ಜಾತಿ ವಿದ್ಯಾರ್ಥಿಗಳೊಡನೆ ಬೆರೆತು ಸ್ನೇಹ ಮಾಡಬಹುದು. ಜೊತೆಗೆ ಪದವಿ, ವ್ಯಾಪಾರ, ಜವಾಬ್ದಾರಿ ಮುಂತಾದ ವಿಷಯಗಳು ಶಿಕ್ಷಣದಿಂದ ಪಡೆಯಬಹುದೆಂದು ಇಲ್ಲಿ ಕವಿ ಆಶಯಪಡುತ್ತಾರೆ. ಇದೇ ರೀತಿ ಎಲ್.ಹನುಮಂತಯ್ಯನವರ 'ಅಕ್ಷರ ಅಕ್ಷರವೇ' ಎಂಬ ಕವನದಲ್ಲಿ

"ಅಕ್ಷರ ಅಕ್ಷರವೇ

ಸಂಕೋಲೆಗಳ ಬಿಡಿಸಿ

ಸುಂಕವಿಲ್ಲದೆ ಕಳಿಸೋ" ಎಂಬ ಸಾಲುಗಳು ಶಿಕ್ಷಣ ಪಡೆದರೆ ಸಮಾನತೆ ಜಾಗೃತಿ ಬರುವುದನ್ನು ತಿಳಿಸುತ್ತದೆ.

ಆಹಾರ ಕ್ರಮ

ಮನುಷ್ಯರ ಮೂಲಭೂತ ಅವಶ್ಯಕತೆಗಳಲ್ಲಿ ಆಹಾರವೂ ಬಹುಮುಖ್ಯವಾದ ಅಂಶವಾಗಿದೆ. ಜನರು ತಾವು ವಾಸಿಸುವ ಪ್ರದೇಶ, ಸ್ಥಿತಿಗತಿಗಳಿಗೆ ಅನುಗುಣವಾಗಿ ಕಡಿಮೆ ಬೆಲೆಗೆ ಸಿಗುವ ಆಹಾರವನ್ನು ಸೇವಿಸುತ್ತಾರೆ. ಸಸ್ಯಾಹಾರಿ, ಮಾಂಸಾಹಾರಿ ಎಂಬ ಎರಡೂ ಕ್ರಮಗಳಿದ್ದು, ಜನರು ಸ್ವ ಇಚ್ಛೆಯಿಂದ ಈ ಎರಡರಲ್ಲಿ ಒಂದನ್ನು ಸ್ವೀಕರಿಸುತ್ತಾರೆ. ಸಸ್ಯಹಾರಿಯ ಜೊತೆ ಆಡು, ಕೋಳಿ, ಮೀನು ತಿನ್ನುವವರನ್ನು ಮೇಲ್ಜಾತಿಯವರೆಂದು, ಸಸ್ಯಹಾರದ ಜೊತೆ ಧನ, ಎಮ್ಮೆ, ಹಂದಿ ತಿನ್ನುವವರನ್ನು ಕೀಳು ಜಾತಿ(ದಲಿತರು) ಎಂದು ವಿಭಾಗಿಸಲಾಗಿದೆ. ಇದರ ಕುರಿತು ಕವಿಯತ್ರಿಯಾದ ಸುಕೃತ ರಾಣಿಯವರ ಕವಿತೆ ಹೀಗಿದೆ.

"ಸತ್ತ ದನದ	"ಸೆತ್ತುಪ್ಪೋನಮಾಟ್ಟೈತ್
ಚರ್ಮ ಸುಲಿಯುವಾಗ	ತೋಲುರಿಕ್ಕುಂ ಪೋದು
ಕಾಗೆಗಳನ್ನು ಓಡಿಸುತ್ತೇನೆ	ಗಾಗಂ ವಿರಟ್ಟುವೇನ್
ಸಂಜೆವರೆಗೆ ನಿಂತು ಪಡೆದ	ವೆಗುನೇರಂ ನಿಂಡ್ರೂ ವಾಂಗಿಯ
ಊರಿನೂಟವನ್ನು ತಿಂದು	ಊರ್‌ಚ್ಚೋಟ್ರೈತ್ ತಿಂಡ್ರುವಿಟ್ಟು
ಬಿಸಿಯೂಟವೆಂದು ಹೆಮ್ಮೆಯಿಂದ ಹೇಳುವೆ"	ಸುಡುಸೋರೆನಪ್ ಪೆರುಮ್ಮೈ
	ಪೇಸುವೇನ್"

(ಸುಕೃದಾರಾಣಿ, ಇರವು ಮಿರುಗಂ, ಪು. ೩೨)

ಎಲ್ಲರ ಸಾಮಾನ್ಯವಾದ ಆಹಾರವಲ್ಲದ ದನದ ಮಾಂಸವನ್ನು ದಲಿತ ಕವಿಗಳು ತಮ್ಮ ಆಹಾರವೆಂದು ದಾಖಲಿಸುವುದಕ್ಕೆ ಮುಖ್ಯ ಕಾರಣವೇ ಪ್ರತಿಭಟನೆಯಾಗಿರುತ್ತದೆ. ಕೀಳಾಗಿ ಕಾಣುವ ಆಹಾರವನ್ನು ಬಹಿರಂಗವಾಗಿ ಹೆಮ್ಮೆಯಿಂದ ಕವಿ ಸ್ವಾಮಿನಾಥನ್ ಹೀಗೆ ಹೇಳಿಕೊಳ್ಳುತ್ತಾರೆ.

“ಹಸು, ಎಮ್ಮೆ, ಕುದುರೆ	“ಪಸುವೈ ಎರುಮೈಯೈಕ್ ಕುದಿರೈಯೈ
ಕೊಬ್ಬಿದ ಗೂಳಿಗಳನ್ನು ಯಜ್ಞದ	ಕೊಳುತ್ತ ಕಾಳೈಗಳೈ
ಬೆಂಕಿಗಳಲ್ಲಿ ಹಾಕಿದವರು	ವೇಳ್‌ವಿತ್ತೀಯಲ್ ಪೊಳಿಂದವರ್‌ಗಳ್
ಮಾಂಸ ಎಲುಬನ್ನು	ಅರಿವೈಯುಂ ಎಲುಂಬೈಯುಂ
ಕಡಿದು ಔತಣವಿಟ್ಟು ತಿಂದವರು	ವೆಟ್ಟಿಕ್ಕುವಿತ್ತು ವಿರುಂದು ಅಯರ್‌ಂದವರಗಳ್
ಇಂದು	ಇಂಡ್ರು
ಹಸುವನ್ನು ತಿನ್ನುವವರ ವಿರುದ್ಧವಾಗಿ	ಪಸುವೈತ್ ತಿನ್‌ಬೋರುಕ್ಕು ಎದಿರಾಗಪ್
ಭಾರತದೆಲ್ಲೆಡೆ ಹೋರಾಟ ಮಾಡುತ್ತಿದ್ದಾರೆ	ಬಾರದಪೋರ್ ತೊಡುಕ್ಕಿರಾರ್
ಇದ್ಯಾವ ದ್ವಂದ್ವ ವೇಶ	ಈದೆನ್ನ ಇರಟ್ಟೈ ವೇಡಂ”

(ಸ್ವಾಮಿನಾಥನ್, ಆಡುಂ ಪೆರಿಯ ಆಡುಂ, ಪು. ೬೮) ಹಲವು ಸಾವಿರ ವರ್ಷಗಳ ಹಿಂದೆ ಎಲ್ಲರೂ ಗೋಮಾಂಸ ತಿನ್ನುತ್ತಿದ್ದುದನ್ನು ತಿಳಿಸುತ್ತಾರೆ.

ದಲಿತರ ಆಹಾರ ಸಂಸ್ಕೃತಿಯನ್ನು ಪರಂಪರೆಯ ಹಿನ್ನೆಲೆಯಲ್ಲಿ ನೋಡುವ ಕವಿ ಆದವನ್ ದೀಜ್ಚನ್ನ ಅವರು ತನ್ನ ಕವಿತೆಗಳಲ್ಲಿ ತಿನ್ನುವ ಆಹಾರವನ್ನು ನಿರ್ಧರಿಸುವ ಯಾವ ಅಧಿಕಾರವು ಯಾರಿಗೂ ಇಲ್ಲ ಎಂದು ವಾದಿಸುತ್ತಾರೆ.

“ಹಸು ನನ್ನ ಊಟ	‘ಪಸು ಎನ್ ಉಣವು
ನನ್ನ ಪೂರ್ವಜರು ಕೊಟ್ಟ ಊಟ	ಎನ್ ಮುನ್ನೊರ್ ತಂದ ಉಣವು
ನನ್ನ ತಲೆಮಾರುಗಳು ಕಂಡ ಊಟ	ಎನ್ ತಲೈಮುರೈಗಳ್ ಕಂಡ ಉಣವು
ನನ್ನ ಊಟದಲ್ಲಿ ಕೈ ಹಾಕ	ಎನ್ ಉಣವಿಲ್ ಕೈ ವೈಕ್ಕ
ಯಾರಿಗೂ ಇಲ್ಲಿ ಅಧಿಕಾರವಿಲ್ಲ”	ಯಾರುಕ್ಕುಂ ಇಂಗು ಉರಿಮೈಯಿಲ್ಲೈ”

(ಆದವನ್ ದೀಜ್ಚನ್ಯ, ಪೂಜ್ಜಿಯತ್ತಿಲಿರುಂದು ತೊಡಂಗುಂ ಅಟ್ಟಂ, ಪು. ೬೮)

ದಲಿತರ ಪಾರಂಪರಿಕ ಆಹಾರವಾದ ಗೋಮಾಂಸದ ಮೇಲೆ ಯಾರೂ ನಿರ್ಬಂಧ ಹಾಕಬಾರದು ಎಂದು ಹಿಂದುತ್ವದ ತೀವ್ರವಾದಿಗಳಿಗೆ ಕವಿ ಎಚ್ಚರಿಸುತ್ತಾರೆ.

ಆಹಾರ ಸಂಸ್ಕೃತಿಯ ಬಗ್ಗೆ ಕವಿ ಅನ್ಬಾದವನ್ 'ಮಾಟ್ಟುಕ್ಕರಿ' (ದನದ ಮಾಂಸ) ಎಂಬ ಕವಿತೆಯಲ್ಲಿ

"ಇವನೇನು ದನದ ಮೈತೊಳೆಯುತ್ತಾನಾ?
ಮೇವು ಹಾಕುತ್ತಾನಾ?
ಆದರೂ
ಹಾಲುಬೇಕು, ಮೊಸರು ಬೇಕು
ಹದವಾದ ತುಪ್ಪ ಬೇಕು
ನಾವು ಮಾತ್ರ ಮಾಂಸ ತಿನ್ನಬಾರದು"

ದಲಿತರ ಆಹಾರದ ಹಕ್ಕಿನ ವಿಷಯವಾಗಿ ಪ್ರಶ್ನೆ ಎತ್ತುವ ಕವಿತೆಯು ದನಕಾಯುವ, ಅದನ್ನು ಮೈತೊಳೆದು, ಆಹಾರ ಹಾಕಿ ಸಾಕುವ ನಾವುಗಳು ಅದನ್ನು ತಿಂದರೆ ನಡುಬೀದಿಯಲ್ಲಿ ಹೊಡೆದು ಸಾಯಿಸಲು ಮುಂದೆ ಬರುತ್ತಾರೆ. ಆದರೆ ದನಕ್ಕೆ ಏನೂ ಮಾಡದವರಿಗೆ ಅದರ ಮೇಲೆ ಯಾವ ಅಧಿಕಾರವಿದೆ ಎಂದು ಪ್ರಶ್ನಿಸುವ ಮನೋಧೈರ್ಯತೆಯನ್ನು ಕವಿ ವ್ಯಕ್ತಪಡಿಸುತ್ತಾರೆ.

ದಲಿತ ಸ್ತ್ರೀ ಸಂವೇದನೆ

ತಮಿಳು ದಲಿತ ಲೇಖಕಿ ಸುಕೃದಾರಾಣಿ ತಮ್ಮ ಎರಡನೆ ಕೃತಿಯಾದ ಇರವು ಮಿರುಗಮ್ ಕವನದಲ್ಲಿ ಹೆಣ್ಣಿನ ಶೋಷಣೆಯು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿಗೆ ಸ್ವಾತಂತ್ರ್ಯ ಎಂಬುದು ಮರೀಚಿಕೆಯಾಗಿದೆ. ಹಲವು ಸಂಕೋಲೆಗಳಿಂದ ಅವಳನ್ನು ಬಂಧಿಸಿ ಶೋಷಣೆ ಮಾಡಲಾಗುತ್ತದೆ. ಹೆಣ್ಣು ಕೇವಲ ಅಡುಗೆಮನೆ ಮತ್ತು ಭೋಗಕ್ಕೆ ಮಾತ್ರ ಸೀಮಿತ ಮಾಡಿಕೊಂಡಿರುವ ಸಮಾಜವನ್ನು ಕವಿತೆಯ ಮೂಲಕ ಹೀಗೆ ಪ್ರಶ್ನೆ ಮಾಡುತ್ತಾರೆ.

ಹದಿಹರೆಯದ ಹೆಣ್ಣಿನ ಸೀರೆಯಂದದಿ
ಬಿಚ್ಚಿಕೊಳ್ಳತೊಡಗಿತು ತಂಪಾದ ರಾತ್ರಿ
ಬಾಗಿಲು ಮುಚ್ಚಿ
ಮೇಣದ ಬತ್ತಿಯ ಮಂದ ಬೆಳಕಿನಲ್ಲಿ
ನಾನು ಕುಳಿತಿದ್ದೆ
ಅಪೇಕ್ಷಿಸಿದೆ
ಅವರ ಬರುವಿಕೆಯಾಯಿತು
ನೋಡು ನೋಡುತ್ತಿರುವಾಗಲೇ
ನನ್ನನ್ನು ದ್ರೌಪದಿಯಾಗಿಸಿದ
ಇನ್ನೊಬ್ಬ ಹೊರಗಡೆ ಕಾದು ಕುಳಿತಿದ್ದ

ರಾತ್ರಿ ವೇಳೆಯಲ್ಲಿ ಹೆಣ್ಣಿನ ಮೇಲೆ ನಡೆಸುವ ಈ ವ್ಯವಸ್ಥೆಯ ಪೈಶಾಚಿಕ ಕೃತ್ಯವನ್ನು ಈ ಕವಿತೆ ಬಯಲು ಮಾಡುತ್ತದೆ. ಹೆಣ್ಣಿನ ದೇಹವನ್ನು ಮೇಲ್ವರ್ಗದ ಜಾತಿಯು ಭೋಗದ ವಸ್ತುವನ್ನಾಗಿರಿಸಿಕೊಂಡು ತೀಟೆ ತೀರಿಸಿಕೊಂಡು ಹೋಗುತ್ತದೆ. ಸಮಾಜದ ಈ ಅನಿಷ್ಠತೆಯನ್ನು ಪ್ರಶ್ನಿಸುವ ಸಲುವಾಗಿ ದಲಿತ ಮಹಿಳೆಯರಿಗೆ ಧ್ವನಿಯಾಗುವ ಪ್ರಯತ್ನ ಕವಿಯತ್ರಿ ಸುಕೃದಾರಾಣಿ ಮಾಡುತ್ತಾರೆ.

"ಹಲವು ಕೋಟಿ ವರ್ಷಗಳು	"ಫಲ ಕೋಡಿ ಆಂಡುಗಳ್
ಕಳೆದ ನಂತರ ಒಮ್ಮೆ	ಕಳಿಂದೊರು ಪರಿಮಾಣತ್ತಿಲ್
ಉಪಯೋಗವಿಲ್ಲದ	ಉಪಯೋಗಮಟ್ರ
ನಿನ್ನ ಗುರುತು ಮರೆತು ಹೋಗುತ್ತದೆ	ಉನ್ ಕುರಿ ಮರೈಂದು ಪೋಗಂ
ಆ ಕ್ಷಣದಲ್ಲಿ ತಿಳಿಯುತ್ತದೆ	ಅಕ್ಕಣತ್ತಿಲ್ ಪುರಿಯುಂ
ನಿನ್ನ ಸಂತತಿಗಳಿಗೆ	ಉನ್ ಸಂದದಿಗುಳುಕ್ಕು
ನಮ್ಮ ಯೋನಿಗಳ ಶೌರ್ಯ"	ಎಂ ಯೋನಿಗಳಿನ್ ವೀರಿಯಂ"

(ಸುಕೃದಾರಾಣಿ, ಇರವು ಮಿರುಗಂ, ಪು. ೬೦) ಹೆಣ್ಣಿನ ದೇಹದ ಶಕ್ತಿಯನ್ನು ಕವಿತೆ ವಿವರಿಸುತ್ತದೆ. ಹಲವು ವರ್ಷಗಳ ನಂತರ ಗಂಡು ದೇಹ ಮರೆಯಾಗುತ್ತದೆ. ಈಗ ನಡೆಯುತ್ತಿರುವ ದೌರ್ಜನ್ಯಕ್ಕೆ ಪಿತೃಪ್ರಧಾನ ಸಮಾಜ ಒಂದು ದಿನ ವ್ಯಥೆ ಪಡುತ್ತದೆ ಎಂಬುದನ್ನು ಕವಿ ತಿಳಿಸುತ್ತಾರೆ.

"ಕೆಳಜಾತಿ ಸ್ತ್ರೀಯರನ್ನು ಮಹಾಪಾಪಿ	'ಮಲಸಾದಿ ಪೆಣ್‌ಡುವಳ ಮಾಪಾವಿ
ಕೆಡಿಸಿ ಕೊಂದು	ಮಾನಂಗೆಡುತ್ತಿ ಕೊಣ್ಣುಟ್ಟು
ಹಣ ಕೊಟ್ಟು	ಪಣತ್ತಕ್ ಕೊಡುತ್ತು
ವಿಷ ಕುಡಿದು ಸತ್ತಳೆಂದು	ವೆಸತ್ತಕ್ ಕುಡಿಚ್ಚು ಸೆತ್ತಾಣ್ಣು
ಕೇಸು ತಿರುಚಿ	ಕೇಸುತ್ತಿರುಪ್ಪಿ
ಪೋಲೀಸರಿಗೆ ಸುಳ್ಳಿನ ಸುದ್ದಿ	ಪೋಲೀಸುಕ್ಕುಪ್ ಪೋಯ್‌ತ್ತಗವಲ್
ಕೊಟ್ಟೆಯಾ ಹೀಗೆ	ಕೊಡುತ್ತಿಯೇ ಇಪ್ಪಡಿ
ಎಷ್ಟು ಕುಟುಂಬಗಳು ನಿನ್ನ ವಿರುದ್ಧ	ಎತ್ತನ ಕುಟುಂಬ ಒನಕ್ಕು ಎದಿರಾ
ಮಣ್ಣು ತೂರಿ ಬಿಟ್ಟಿದೆಯೋ"	ಮಣ್ಣುವಾರಿಪ್ ಪೋಟ್ಟಿರುಕ್ಕು'

(ಎನ್.ಟಿ. ರಾಜಕುಮಾರ್, ಕಾಟ್ಟಾಳಿನ್, ಪು. ೪೫)

ಗ್ರಾಮಗಳಲ್ಲಿ ಜೀವಿಸುವ ದಲಿತ ಸ್ತ್ರೀಯರು ಮೇಲ್ಜಾತಿ ಪುರುಷರ ಕಾಮಕ್ಕೆ ಬಲಿಯಾಗಿ ಲೈಂಗಿಕ ಕ್ರಿಯೆಯ ನಂತರ ಸಾವನ್ನಪ್ಪಿದರೆ ಯಾವುದೇ ಭಯವಿಲ್ಲದೆ ಅವರ ಬಾಯಿಯಲ್ಲಿ ವಿಷವನ್ನು ಹಾಕಿ ಕೊಂದು ಕೇಸನ್ನು ಬದಲಿಸುವ ಶೋಷಣೆಯು ಕಾಲಕಾಲದಿಂದಲೂ ನಡೆದುಕೊಂಡು ಬಂದಿರುವುದನ್ನು ಕವಿ ತಿಳಿಸುತ್ತಾರೆ.

"ಹೊರುವುದು ತೆಗೆಸುವುದು	"ಸುಮಪ್ಪದುಂ ಕಲೈಪ್ಪದುಂ
ನನ್ನ ಬಯಕೆ ಎನ್ನುವುದರಿಂದ	ಎನ್ ವಿರುಪ್ಪಂ ಎನ್‌ಬದಾಲುಂ
ಉಗುಳುವ ಬಟ್ಟಲಾಗಿ	ಎಚ್ಚಿಲ್ ಕಿಣ್ಣಮೂಗ
ಇದ್ದದ್ದು ತಿಳಿಯುತ್ತಿದೆ	ಇರುಂದಿರುಪ್ಪದು ಪುರಿಗಿರದು
ಹೆಂಡತಿಯ ಗರ್ಭ"	ಮುನ್ನೈವಿಯಿನ್ ಕುರುಪ್ಪೈ"

(ತಯ್ ಕಂದಸಾಮಿ, ತನಿ ಇರುಟ್ಟು, ಪು. ೫೫) ಸ್ತ್ರೀಯರ ಶ್ರಮ, ಹಕ್ಕು, ಭಾವನೆ, ಆಹಾರ ಎಲ್ಲವೂ ನಿರ್ಬಂಧಿತ ಎನ್ನುವುದನ್ನು ಈ ಕವಿತೆ ತಿಳಿಸುತ್ತದೆ. ಮೇಲ್ಜಾತಿಯರ ಆವೇಶದಿಂದ ದಲಿತ ಮಹಿಳೆಯರ ಗರ್ಭವೂ ಸಹ ಉಗುಳುವ ಬಟ್ಟಲಾಗಿದೆ ಎನ್ನುವುದನ್ನು ತಿಳಿಸುತ್ತದೆ.

"ಕಟ್ಟಿಕೊಂಡವನಿಗೂ ಕೊಟ್ಟವನ ನಡುವೆ	'ನೀಟ್ಟಿಯವನುಕ್ಕುಂ ಸುರಟ್ಟಿಯವನುಕ್ಕುಮಿಡೈಯೇ
ಇಕ್ಕಟ್ಟಾಗಿದ್ದೀಯಾ ನೀನು	ಕುರುಕಿಕ್ಕಿಡಕ್ಕಿರಾಯ್ ನೀ
ಮೊಲೆಯಾಗಿ ಯೋನಿಯಾಗಿ	ಮುಲೈಯುಂ ಯೋನಿಯುಮಾಯ್
ಕೇವಲ	ವೆರುಂ
ಮೊಲೆಯಾಗಿ ಯೋನಿಯಾಗಿ	ಮುಲೈಯುಂ ಯೋನಿಯಾಮಾಯ್'

(ಮದಿವಣ್ಣನ್, ನೆರಿಂದು, ಪು. ೨೧) ಗಂಡಸರಿಗೆ ಸುಖ ಕೊಡುವ ವಸ್ತುವಾಗಿ, ತಾಳಿ ಕಟ್ಟಿದವನಿಗೂ, ಮೇಲ್ಜಾತಿ ಶೋಷಕನಿಗೂ ಕೀಳಾಗಿದ್ದು, ಲೈಂಗಿಕ ಶೋಷಿತೆಯಾಗಿ ಸ್ತ್ರೀ ಜೀವಿಸುತ್ತಿದ್ದಾರೆ ಎಂಬುದನ್ನು ಕವಿತೆ ವಿವರಿಸುತ್ತದೆ.

ಸಾಹಿತ್ಯ

"ಕಾಗೆಗಳು ಹಿಡಿಸುತ್ತದೆಯೇ ನಿಮಗೆ	"ಕಾಕ್ಕೈಗಳೈ ಪಿಡಿಕ್ಕುಮಾ ಉಂಗಳುಕ್ಕು
ಕಾಗೆಗಳು ಯಾರಿಗೆ ತಾನೆ ಹಿಡಿಸದು	ಕಾಕ್ಕೈಗಳೈ ಯಾರುಕ್ಕುದಾನ್ ಪಿಡಿಕ್ಕಾದು
ಕರೆದ ಕೂಡಲೇ ಬರುವವು. ಸ್ನೇಹಿತರಂತೆ	ಅಳೈತ್ತವುಡನ್ ವರುಬವೈ, ತೋಳಮೈಯಾನವೈ

ಅಶುದ್ಧಗಳನ್ನು ದೂರಾಗಿಸುವ	ಅಸುದ್ದಂಗಳ್ಳೆ ಅಗಟ್ರುಂ
ಆಕಾಶ ತೋಟಗಳು"	ಆಗಾಯತ್ ತೋಟ್ಟಿಗಳಾನ"

(ಅನ್ಬಾದವನ್, ನೆರುಪ್ಪಿಲ್ ಕಾಯ್‌ಚ್ಚ ಪರೈ, ಪು. ೩೦)

ಅಶುದ್ಧಗಳನ್ನು ಹೆಚ್ಚಿಸುವ ಸ್ವಭಾವದಿಂದಲೋ ಏನೋ ಕಾಗೆಗಳು ಕೆಲವರಿಗೆ ಹಿಡಿಸದೆ ಹೋಗಿವೆ ಎಂಬುದನ್ನು ಮೇಲಿನ ಸಾಲುಗಳು ತಿಳಿಸುತ್ತದೆ. ಕಾಗೆ ಕಪ್ಪು ಬಣ್ಣ, ಕರ್ಕಶ ಧ್ವನಿಯಿಂದ ಅವುಗಳು ಯಾರಿಗೂ ಹಿಡಿಸದೇ ಹೋಗಿವೆ. ಆದರೆ ಒಗ್ಗಟ್ಟಿನ ಚಿಹ್ನೆಯಾಗಿ ಕೋಗಿಲೆಗಳ ಮರಿಗಳನ್ನು ತನ್ನ ಮರಿಗಳಂತೆ ನೋಡುವ ದೊಡ್ಡತನ, ತನ್ನ ಕುಲಕ್ಕಾಗಿ ಧ್ವನಿ ನೀಡುವ, ಹೋರಾಡುವ ಗುಣ ಎಂಬುದಾಗಿ ಕಾಗೆಯ ಒಳ್ಳೆಯ ಗುಣಗಳನ್ನು ಕವಿತೆ ತಿಳಿಸುತ್ತದೆ. ಈ ಗುಣಗಳು ದಲಿತರಿಗೂ ಒಪ್ಪುತ್ತವೆಂದು ಕವಿ ತಿಳಿಸುತ್ತಾರೆ.

"ಗಿಳಿಗಳ ಭಾಷೆಗಳನ್ನು	"ಕಿಳಿಗಳಿನ್ ಮೊಳಿಗಳ್ಳೆ
ಸಂಗೀತವೆಂದು ಹೊಗಳಿದ	ಇಸೈಯೆನಪ್ ಪುಗಳ್‌ಂದ
ಕಾಲವೊಂದಿತ್ತು	ಕಾಲಮೊಂಡ್ರುಂಡು
ತನ್ನ ಧ್ವನಿಯು	ತನ್ ಕುರಲೈತ್
ಪ್ರತ್ಯೇಕ ಧ್ವನಿಯಾಗಿ ದಾಖಲಿಸುವ ಇದು	ತನಿಕ್ ಕುರಲಾಯಪ್ ಪದಿವು ಸುಯ್ಯುಮಿದು
ಕಾಗೆಗಳ ಕಾಲ"	ಕಾಕ್ಕೈಗಳಿನ್ ಕಾಲಂ".

(ಅದೇ, ಪು. ೩೦)

ಒಂದು ಕಾಲದಲ್ಲಿ ಮೇಲ್ಜಾತಿಯವರ ಸಾಹಿತ್ಯಕ್ಕೆ ಬರಹಗಳಿಗೆ ಪ್ರತಿಷ್ಠಿತವಾದ ಸ್ಥಾನ ಗೌರವ ನೀಡಲಾಗಿತ್ತು. ಇಂದು ದಲಿತರು ಪ್ರತ್ಯೇಕವಾಗಿ ಬರೆಯುತ್ತಿದ್ದಾರೆ. ಇದು ದಲಿತರ ಕಾಲ ಎನ್ನುವುದನ್ನು 'ಗಿಳಿ ಭಾಷೆ', 'ಕಾಗೆ ಧ್ವನಿ' ಎಂಬ ಎರಡು ವಿರುದ್ಧ ದಿಕ್ಕುಗಳನ್ನು ಎದುರಿಸುತ್ತಾರೆ.

ನೈಜ ಘಟನೆ ಶೋಷಣೆಗಳು

"ಗುರುವಾಯೂರ್(ಕೇರಳ)ನಲ್ಲಿ ಒಂದು ಕಪ್ಪು ಕೋಗಿಲೆ	"ಗುರುವಾಯೂರಿಲ್ ಒರು ಕರುಂಗುಯಿಲ್
ಹಾಡಲು ಹೋಯಿತು.	ಪಾಡಚ್ ಸೆಂಡ್ರದು
"ಅದರ ಬಣ್ಣ ಹಿಡಿಸದೆ	ಅದನ್ ನಿರಂ ಪಿಡಿಕ್ಕಾಮಲ್

ಹೊಡೆದೋಡಿಸಿದರು"

ಒಟ್ಟಿಯಡಿತ್ತನ ಕಲ್ ತೂಣ್‌ಗಳ್"

(ಎನ್.ಟಿ. ರಾಜಕುಮಾರ್, ರಕ್ತ ಸಿಂದನ ಪಾವೈ, ಪು. ೨೩)

ಬಣ್ಣ ಮತ್ತು ಜಾತಿ ಕಾರಣದಿಂದ ಏಸುದಾಸ್‌ನಂತಹ ಉತ್ತಮ ಹಾಡುಗಾರರನ್ನು ದೇವಾಲಯದ ಒಳಗೆ ಪ್ರವೇಶಕ್ಕೆ ಅವಕಾಶ ನೀಡದೆ ಇರುವುದನ್ನು ಇಲ್ಲಿ ಕವಿ ವಿವರಿಸುತ್ತಾರೆ.

"ಮರಣವು ಜಲ ಛಲದಿಂದ
ಓಡಿತು ನದಿ
ಮೌನ ಸಾಕ್ಷಿಯಾಗಿ
ಮರಗಳು ನಿಂತವು"

"ಮರಣತ್ತೈ ಸಲಸಲತ್ತು
ನಗರ್‌ಂದದು ನದಿ
ಮವುನ ಸಾಕ್ಷಿಗಳಾಯ್
ಮರಂಗಳ್ ನಿಂಡ್ರನ"

(ಕಂದಸಾಮಿ ತಯ್, ತನಿ ಇರುಟ್ಟು, ಪು. ೮೩೩)

ತಿರುನೆಲ್ವೇಲಿಯ, ತಾಮರ ಬರಣಿ ನದಿಯಲ್ಲಿ ೨೩.೦೭.೧೯೯೯ರಂದು ದಲಿತರ ೧೭ ಜೀವಗಳು ಬಲಿಯಾದವು. ಇದನ್ನು ಆಧಾರವಾಗಿಯೇ ಈ ಕವಿತೆ ಬರೆಯಲಾಗಿದೆ. ತಾಮ್ರಪರ್ಣಿಯಲ್ಲಿ ದಲಿತರು ಹೆಣವಾಗಿ ತೇಲುತ್ತಿದ್ದಾಗ ಮೇಲ್ಜಾತಿಯವರು ನದಿಯ ಪಕ್ಕದಲ್ಲಿ ನಿಂತ ಮರಗಳಾಗಿದ್ದರು ಎಂದು ತಿಳಿಸುತ್ತದೆ.

"ಒಂದು ಊರಿನ ಮುಖಂಡರನ್ನು
ಕೊಲೆ ಮಾಡಿದಿರಿ
ಎಷ್ಟು ಕಾಲ ಎಷ್ಟು ಹುದ್ದೆಗಳಲ್ಲಿ
ನೀವು ಮಾತ್ರ"

"ಒರು ಊರಾಟ್ಚಿತ್ ತಲೈವರ್
ಕೊಲೈ ಸೆಯ್‌ದೀರ್‌ಗಳ್
ಎತ್ತನೈಕ್ ಕಾಲಂ ಎತ್ತನೈಕ್
ಪದವಿಗಳಿಲ್
ನೀಂಗಳ್ ಮಟ್ಟುಮೇ"

(ಅನ್ಬಾದವನ್, ನೆರುಪ್ಪಿಲ್ ಕಾಯ್‌ಚ್ಚ ಪರೈ, ಪು. ೯೪)

ಮೇಲವಳೈವು ಎಂಬ ಗ್ರಾಮ ಪಂಚಾಯತಿಯಲ್ಲಿ ದಲಿತರು ಮುಖಂಡರಾಗಿದ್ದರಿಂದ ಎಲ್ಲರ ಮುಂದೆಯೇ ಮರುಗೇಶ್, ಕೇಶವಮೂರ್ತಿ, ಭೂಪತಿ, ಮೂಕ್ಕನ್, ರಾಜಾ, ಚೆಲ್ಲದುರೈ ಅವರನ್ನು ಮೇಲ್ಜಾತಿಯವರು ಕಡಿದು ಕೊಲೆ ಮಾಡಿದರು ಎಂಬುದನ್ನು ಕವಿತೆ ತಿಳಿಸುತ್ತದೆ.

"ಮೇಲವಳವಿನ ರಕ್ತದಿಂದಲೂ
ತಾಮರಬರಣಿಯ ನೀರಿನಲ್ಲೂ
ಇನ್ನೂ ಇನ್ನೂ
ಅಳಿದು ತುಳಿದ ಕುಗ್ಗಿದ ಪೂರ್ವಜರ

"ಮೇಲವಳವಿನ್ ರತ್ತತ್ತಿಲುಂ
ತಾಮಿರಬರಣಿಯಿನ್ ತಣ್ಣೀರಿಲುಂ
ಇನ್ನುಂ ಇನ್ನುಂ
ಅಳಿಂದ ಕುವಿಂದ ಮುನ್ನೋರ್‌ಗಳಿನ್

ಪ್ರಾಣಗಳಿಂದಲೂ	ಉಯರ್ಪ್ಪಿಲುಂ
ಸಿಗುತ್ತಿದೆ ನಮಗೆ ಆಯುಧಗಳು"	ಕಿಡೈಕ್ಕಿಂಡ್ರನ್ ಎಮಕ್ಕು ಆಯುದಂಗಳ್"

(ಯಾಳನ್ ಆದಿ, ಸೆವಿಪ್ಪರ್ೈ, ಪು. ೩೮)

ದಲಿತರ ಒಂದೊಂದು ಸಾವು, ಶೋಷಣೆಗಳು ಅವರಿಗಾದ ಬಿಡುಗಡೆಯಾಗಿ ಕವಿತೆ ಮೂಡಿಬಂದಿದೆ.

"ಡಿಸೆಂಬರ್ ೨೫	"ಡಿಸೆಂಬರ್ ೨೫
ಹಚ್ಚಿದ ಕೈಗಳ ಜೊತೆ	ಕೊಳುತ್ತಿಯ ಕೈಗಳುಡನ್
ಗುಂಪುಗಾರಿಕೆ ಮಾಡಲು	ಕೂಟ್ಟಣಿ ವೈಕ್ಕೆ
ಟವಲಿನ ಕೆಳಗೆ ಚುನಾವಣಾ ದಳ್ಳಾಳಿಗಳಿಗೆ	ತುಂಡುಕ್ಕಡಿಯಿಲ್ ತೇರ್ದಲ್ ತರಗು
ಗುಲಾಮರಾಗಿಲು ಆಗದೆ	ಅಡಿಮ್ಮೈಯಾರುಕ್ಕವು ಮಿಡಿಯಾಮಲ್
ಯಜಮಾನನಾಗಲು ಆಗದೇ	ಆಂಡಾನ್ ಆಗವುಂ ಮುಡಿಯಾಮಲ್
ಕಳೆದು ಹೋದ	ತೊಲ್ೈಂದು ಪೋನ
ವೆಣ್ಮಣಿ ಜನರು"	ವೆಣ್ಮಣಿ, ಮಕ್ಕಳ್"

(ಅನ್ಬಾದವನ್, ನೆರುಪ್ಪಿಲ್ ಕಾಯ್ಚ್ಚ ಪರ್ೈ, ಪು. ೩೬)

ಪ್ರಜಾಪ್ರಭುತ್ವ ನಾಡಿನಲ್ಲಿ ಜೀವಂತವಾಗಿ ಸುಟ್ಟು ಕೊಲ್ಲಲ್ಪಟ್ಟವರನ್ನು ಕವಿತೆ ವಿವರಿಸುತ್ತದೆ.

"ರಥಹೋದ ಮಾರ್ಗದಲ್ಲಿ

ವಧೆ ನಡೆದದು ಹಳೆಯ ಕಥೆ

ಕಾವಿ ಆವೇಶಧಾರಿಗಳ

ರಕ್ತ ಹಸಿವಿಗೆ

ರಾಮನೇ ಬಲಿಯಾದದ್ದು

ಹೊಸ ಕಥೆ

....

ಡಿಸೆಂಬರ್ ಆರು

ಕಪ್ಪು ಭಾನುವಾರವಾಯಿತು. (ಅನ್ಬಾದವನ್, 'ಸೆಂಬಳುಪ್ಪಾಯ್ಚ್ ಸೂರಿಯನ್', ಪು.. ೩೦-೩೧)

೧೯೯೨ ಡಿಸೆಂಬರ್ ೬ರಂದು ಬಾಬರ್ ಮಸೀದಿಯನ್ನು ರಾಮನ ಜನ್ಮ ಸ್ಥಾನವೆಂದು ಒಡೆಯಲಾಯಿತು. ಅಲ್ಲದೆ ಅಂಬೇಡ್ಕರ್‌ರ ಪರಿನಿರ್ವಾಣ ದಿನವೂ ಅಂದೇ ಹಿಂದೂ ಧರ್ಮದ ಸನಾತನವಾದಿಗಳು ತಮ್ಮ ತಂತ್ರದಿಂದ ದಲಿತ ನಾಯಕನನ್ನು ಆರಾಧಿಸುವ ದಿನವನ್ನು ಬಾಬರ್ ಮಸೀದಿಯನ್ನು ಉರುಳಿಸಿಬಿಟ್ಟರೆ ಜನರ ಮನಸ್ಸಿನಲ್ಲಿರುವ ಅಂಬೇಡ್ಕರ ನೆನಪನ್ನು ಅಳಿಸಿ ಹಾಕಿ ಬಿಡಬಹುದೆಂದು ಈ ರೀತಿಯ ಕಾರ್ಯ ಮಾಡಿರುವುದನ್ನು ಕವಿತೆ ತಿಳಿಸುತ್ತದೆ.

ಕನ್ನಡ ದಲಿತ ಸಾಹಿತ್ಯದಲ್ಲು ನೈಜ ಘಟನೆ ಆಧರಿಸಿ ಕೆಲವೊಂದು ಕವಿತೆಗಳು ಬಂದಿವೆ. ಅದರಲ್ಲಿ ಮುಖ್ಯವಾಗಿ ಕೋಟಿಗಾನಹಳ್ಳಿ ರಾಮಯ್ಯನವರು ಬರೆದಿರುವ ಅನುಸೂಯ ಕವಿತೆಯು ಪ್ರಮುಖವಾಗಿದೆ.

ಕೋಲಾರದ ಮಾಲೂರಿನ ಹುಣಸೀಕೋಟೆಯಲ್ಲಿ ನಡೆದ ಅನುಸೂಯ ಎಂಬ ಮಹಿಳೆಯ ಮೇಲೆ ನಡೆದ ಅತ್ಯಾಚಾರವನ್ನು ಕಾವ್ಯವಾಗಿ ಕಟ್ಟಿ ಹಾಡುವುದರ ಮೂಲಕ ನೈಜ ಘಟನೆಯನ್ನು ಕಾವ್ಯದೊಳಗೆ ತಂದು ಅವರಿಗೆ ಶಿಕ್ಷೆ ನೀಡಿಸುವ ಪ್ರಯತ್ನ ಮಾಡಿದರು.

"ನಿಮ್ಮೂರ ಕೃಷ್ಣಗೌಡ
ವೆಂಕಟೇಶ ನಂಜುಂಡ
ದುಷ್ಟಕೂಟ ಕಟ್ಟಿಕೊಂಡು
ನಿನ್ನದಾರಿ ಕಾದುಕೊಂಡು
ಸೀಬೆ ತೋಪು ಮುತ್ತಿದರಮ್ಮ
ನನ ತಂಗಿ ಅನಸೂಯ
ಕಾಮುಕರು ಎಲ್ಲಾ ಕೂಡಿ
ಒಂದಾಗಿ ಮೇಲೆರಗಿ
ದರದರ ಎಳದಾಡಿ
ಸೀರೆ ರವಿಕೆ ಹರಿದಾರೆ
ನಿನ ಶೀಲವ ಕೆಡಿಸಿ ಹೋದರಮ್ಮ
ನನ ತಂಗಿ ಅನಸೂಯ
ನಿನಗಾದ ಅನ್ಯಾಯ
ನಮ್ಮೆದೆಗೆ ಚೂರಿ ಇರಿತ
ಗಾಯವ ಮರೆತು ಬದುಕಲಾರೆವು
ನನ ತಂಗಿ ಅನಸೂಯ"

ಒಟ್ಟಾರೆ ತಮಿಳು ದಲಿತ ಕಾವ್ಯವು ಜಾತಿ ಶೋಷಣೆ, ಅಪಮಾನ, ಲೈಂಗಿಕ ಶೋಷಣೆ, ಆಹಾರ, ಧರ್ಮ, ದೇವರು, ಶಿಕ್ಷಣ, ಸಾಮಾಜಿಕ ಅಂತಸ್ತು, ನ್ಯಾಯ, ಮೀಸಲಾತಿ, ಸಂಸ್ಕೃತಿ, ಸಂಪ್ರದಾಯ ಮುಂತಾದವುಗಳಲ್ಲಿ ತಳಸ್ಥರದಲ್ಲಿರುವವರ ಜೀವನದ ಬಿಡುಗಡೆಯ ಚಿಂತನೆಯ ಆಶಯದಲ್ಲಿ ದಲಿತ ಕವಿತೆ ರಚಿತಗೊಂಡಿವೆ. ಸಮಾಜದಲ್ಲಿ ನಡೆಯುವ ಪೈಶಾಚಿಕ ಕೃತ್ಯಗಳನ್ನು ಕವಿತೆಯ ವಸ್ತುವನ್ನಾಗಿರಿಸಿಕೊಂಡಿರುವ ದಲಿತ ಕಾವ್ಯವು ಸಾಮಾಜಿಕ ಕಳಕಳಿಯನ್ನು ಸಾರುವ ಪ್ರಯತ್ನ ಮಾಡುತ್ತದೆ. ಮೇಲ್ವರ್ಗದ ದಬ್ಬಾಳಿಕೆಯನ್ನು ಹರಿತವಾದ ಶಬ್ದಗಳ ಮೂಲಕ ಪ್ರತಿರೋಧಿಸುವ, ವಿಡಂಬಿಸುವ, ಪ್ರಶ್ನಿಸುವುದನ್ನು ತಮಿಳು ದಲಿತ ಕಾವ್ಯಗಳಲ್ಲಿ ನಾವು ಕಾಣಬಹುದು. ಬ್ರಾಹ್ಮಣತ್ವದ ವಿರುದ್ಧವಾಗಿ, ಗಾಂಧೀವಾದದ ವಿರುದ್ಧವಾಗಿ, ಆಡಳಿತ (ಅಧಿಕಾರಿ) ವರ್ಗದ ವಿರುದ್ಧವಾಗಿ ಧ್ವನಿ ನೀಡುತ್ತದೆ. ದಲಿತರ ಮೇಲೆ ನಡೆಯುವ ಕೊಲೆ, ಬೆಂಕಿ ಇಡುವುದು, ಲೈಂಗಿಕ ಬಲಾತ್ಕಾರ ಮುಂತಾದ ಶೋಷಣೆಗಳ ವಿರುದ್ಧವಾಗಿ ಆಕ್ರೋಶಗೊಳ್ಳುತ್ತದೆ.

ಊರು-ಕೇರಿಗಳ ನಡುವೆ ಅಂತರ ಇರುವುದನ್ನು ತಯ್.ಕಂದಸಾಮಿ, ತಲೈಯಾರಿ ಅವರ ಕವಿತೆಗಳು ತಿಳಿಸುತ್ತವೆ. ಯಾವುದೇ ಜೀವನಾಧಾರಗಳಿಲ್ಲದೆ ಭದ್ರತೆಗಳಿಲ್ಲದೆ, ಗುಡಿಸಲುಗಳಲ್ಲಿ ಮಕ್ಕಳು ಪಡುವ ಕಷ್ಟ ಜೊತೆಗೆ ಬಡತನದ ಸ್ಥಿತಿಯನ್ನು ಮದಿವಣ್ಣನ್, ಅನ್ಬಾದವನ್, ವಿಳಿ.ಪಾ.ಇದಯವೇಂದನ್ ಕವಿತೆಗಳು ತಿಳಿಸುತ್ತವೆ. ವಾಸಸ್ಥಳ ಮಾತ್ರವಲ್ಲದೆ ಸುಡುಗಾಡಿಗೂ ಜಗಳ ಆಗುವುದನ್ನು ಯಾಳನ್ ಆದಿ, ಅಭಿಮಾನಿ ಕವಿತೆಗಳು ಪ್ರಕಟಿಸುತ್ತದೆ. ವಸತಿ ಮಾತ್ರವಲ್ಲದೆ ಸ್ಮಶಾನಕ್ಕೂ ಜಗಳ ಆಗುವುದನ್ನು ಯಾಳಿನ್ ಆದಿ, ಅಭಿಮಾನಿ ಕವಿತೆಗಳು ಸೂಚಿಸುತ್ತವೆ. ಬೀದಿಗಳನ್ನು ಶುದ್ಧಮಾಡುವುದು, ಮಲ ಹೊರುವುದು, ಹಂದಿಗಳೊಂದಿಗೆ ಜೀವಿಸುವುದು. ಅಶುದ್ಧಗಳ ಜೊತೆಗಿನ ಜೀವನವನ್ನು ಮದಿಮಾನ್, ವಿಳಿವಾ ಇದಯವೇದನ್, ಅಭಿಮಾನಿ ಕವಿತೆಗಳು ಮಾತಾಡುತ್ತವೆ. ದನದ ಮಾಂಸ, ಹಂದಿ ಮಾಂಸ, ಮೀನು, ಒಣಮೀನು, ಇಲಿ ಮುಂತಾದವುಗಳನ್ನು ದಲಿತರು ತಮ್ಮ ಆಹಾರವಾಗಿ ಸ್ವೀಕರಿಸುತ್ತಾರೆ ಎಂಬುದನ್ನು ವಿನ್ ಪಿ ರಾಜಕುಮಾರ್, ಮದಿವಣ್ಣನ್, ವಿಳಿ ವಾ ಇದಯವೇಂದನ್, ಅನ್ಬಾದವನ್, ಆದವನ್, ಸುಕೃತಾರಾಣಿ ಮುಂತಾದವರು ಅವರ ಕವಿತೆಗಳಲ್ಲಿ ಪ್ರಕಟಿಸುತ್ತಾರೆ. ಇದರೊಂದಿಗೆ ಗಂಜಿ, ಅನ್ನಕ್ಕಾಗಿ ಕೈಒಡ್ಡಿ ಬೇಡುವ ಹೀನಾಯ ಸ್ಥಿತಿಯನ್ನು ಅನ್ಬಾದವನ್ ಕವಿತೆಗಳು ತಿಳಿಸುತ್ತವೆ.

ಸಂಸ್ಕೃತಿಯನ್ನು ಮೀರುವುದು ದಲಿತ ಸಂಸ್ಕೃತಿಯನ್ನು ಸ್ಥಾಪಿಸುವುದು, ಪವಿತ್ರತೆಯನ್ನು ವಿರೋಧಿಸುವುದು, ಪುರಾಣ ಕಾವ್ಯಗಳನ್ನು ವಿಮರ್ಶಿಸುವುದನ್ನು ದಲಿತ ಕವಿತೆಗಳಲ್ಲಿ ಕಾಣಬಹುದು. ವೆಣ್ಣಮನಿಯಲ್ಲಿ ಜೀವಂತವಾಗಿ ಸುಟ್ಟಿದ್ದು, ವಿಳುಪಪ್ರಂ ಶೋಷಣೆ, ಎಂಜ್ಯೆನ್ಯೆಯ ಹತ್ಯಾಕಾಂಡ, ಮೇಲವಳಪನ್‌ನ, ತಾಮರ ಬರಣಿ ಮುಂತಾದ ನೈಜ ಘಟನೆಗಳ ಶೋಷಣೆಯನ್ನು ದಲಿತ ಕವಿತೆಗಳು ತಮ್ಮ ಕವಿತೆಯಲ್ಲಿ ದಾಖಲಿಸುತ್ತಾರೆ.

ಮತ, ಮತಾಂತರ, ಧರ್ಮ ವಿಚಾರಗಳಲ್ಲಿ ದಲಿತರು ದಲಿತರಾಗಿಯೇ ಇರುವ ಪರಿಸ್ಥಿತಿಯನ್ನು ದಲಿತ ಕವಿಗಳು ತಮ್ಮ ಕವಿತೆಗಳಲ್ಲಿ ದಾಖಲಿಸುತ್ತಾರೆ. ತಮಿಳು ದಲಿತ

ಕವಿಗಳು ಜಾತಿ, ಅಸ್ಪೃಶ್ಯತೆಯ ವಿರುದ್ಧವಾಗಿ ಘರ್ಜಿಸುವ ಧ್ವನಿ, ಜೀವನ, ಜೀವನಾಧಾರಗಳನ್ನು ಕಳೆದುಕೊಂಡುದರ ವಿರೋಧದ ಧ್ವನಿ, ಹಕ್ಕುಗಳಿಗಾಗಿ ಭಾವನೆಗಳಿಗಾಗಿ ಧ್ವನಿ, ಮೇಲ್ಜಾತಿಯವರ ವಿರುದ್ಧದ ಧ್ವನಿ. ಹೀಗೆ ಹಲವು ರೀತಿಯಲ್ಲಿ ದಲಿತರನ್ನು ಶೋಷಿಸುತ್ತಿರುವುದರ ವಿರುದ್ಧವಾದ ಕಲಹವನ್ನು ಏರ್ಪಡಿಸುವ ಕವಿತೆಗಳನ್ನು ಕಾಣಬಹುದು.

ದಲಿತರ ಜೀವನದ ಪ್ರದೇಶ, ಆಹಾರ ಕ್ರಮ, ಬಡತನ, ಉದ್ಯೋಗ, ವ್ಯವಸಾಯ, ಸಂಪ್ರದಾಯ, ನಂದನನು ಮತ್ತು ಏಕಲವ್ಯ, ಪುರಾಣ ಪಾತ್ರಗಳನ್ನು ಸಮರ್ಥಿಸುವ ರಾಮ, ಕೃಷ್ಣ ಅರ್ಜುನನಂತಹ ಪಾತ್ರಗಳನ್ನು ಪ್ರಶ್ನಿಸುವ ಧೋರಣೆಯನ್ನು ದಲಿತ ಕವಿತೆಗಳಲ್ಲಿ ಕಾಣಬಹುದು.

ಅಧ್ಯಾಯ ನಾಲ್ಕು

ಕಾದಂಬರಿ

ಭಾರತ ದೇಶವು ಸ್ವಾತಂತ್ರ್ಯವಾಗಿ ಎಪ್ಪತ್ಮೂರು ವರ್ಷಗಳು ಕಳೆದರೂ, ಈ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಜಾತಿಯ ಬೇರು ಇನ್ನೂ ಜೀವಂತವಾಗಿದೆ. ಮಾಹಿತಿ-ತಂತ್ರಜ್ಞಾನ, ವಿಜ್ಞಾನ ಕ್ಷೇತ್ರದಲ್ಲಿ ಎಷ್ಟೇ ಪ್ರಗತಿಯನ್ನು ಸಾಧಿಸಿದ್ದರೂ ಜಾತಿ-ಧರ್ಮದ ಹೆಸರಿನಲ್ಲಿ ನಡೆಯುವ ಮರ್ಯಾದ ಹತ್ಯೆಯಂತಹ ಕಗ್ಗೊಲೆಗಳು ಇಂದಿಗೂ ನಡೆಯುತ್ತಿವೆ. ಇವುಗಳು ಸಮಾಜದಲ್ಲಿ ಅಸಮತೋಲನ, ಅಶಾಂತಿಯನ್ನು ಉಂಟು ಮಾಡುತ್ತವೆ. ಇಂತಹ ವಿಷಯಗಳನ್ನು ಸಾಹಿತ್ಯವೂ ಖಂಡಿಸುತ್ತದೆ. ಅಲ್ಲದೆ ಸಾಹಿತ್ಯವು ಸಮಾಜದ ಕನ್ನಡಿಯಾಗಿರುವುದರಿಂದ ಈ ಎಲ್ಲಾ ಘಟನೆಗಳನ್ನು ಸಾಹಿತ್ಯದಲ್ಲಿ ಕಾಣಬಹುದು. ಇಂದಿನ ಕಾಲಘಟ್ಟದ ಬರಹಗಾರರು ಸೂಕ್ಷ್ಮ ಸಂವೇದಿಗಳಾಗಿದ್ದು, ತಮ್ಮ ಬರಹಗಳಲ್ಲಿ ಹೊಸ ಚಿಂತನೆಗಳನ್ನು, ಅಭಿಪ್ರಾಯಗಳನ್ನು ಓದುಗರೊಂದಿಗೆ ಸಂವಾದ ಮಾಡುವ ಪ್ರಯತ್ನ ಮಾಡುತ್ತಾರೆ. ಈ ರೀತಿಯ ಬರಹಗಾರರಲ್ಲಿ ದಲಿತ ಬರಹಗಾರರು ತಮ್ಮ ಅನುಭವಗಳನ್ನು ಸಾಹಿತ್ಯದ ಮೂಲಕ ನೋವು-ನಲಿವು, ಆಕ್ರೋಶಗಳನ್ನು ವ್ಯಕ್ತಪಡಿಸಿದ್ದಾರೆ. ಆತ್ಮಕಥೆ ಮತ್ತು ಕಾವ್ಯ ಪ್ರಕಾರವು ದಲಿತ ಬರಹಗಾರರಿಗೆ ತಮ್ಮ ಅನುಭವಗಳನ್ನು ವ್ಯಕ್ತಪಡಿಸುವ ಸಾಹಿತ್ಯವನ್ನು ಮುಖ್ಯ ಮಾಧ್ಯಮವಾಗಿ ಬಳಸಿಕೊಂಡಿದ್ದರೂ ಅದರ ನಂತರ ಆ ಸ್ಥಾನವನ್ನು ಕಾದಂಬರಿ ಸಾಹಿತ್ಯ ಪ್ರಕಾರವು ಹೆಚ್ಚು ದೀರ್ಘವಾಗಿ ವಿವರಿಸುತ್ತದೆ.

ನಿರ್ದಿಷ್ಟ ಕಥಾ ಪಾತ್ರಗಳ ಮೂಲಕ ಜೀವನದ ಸಾಮಾಜಿಕ ಸಂಘರ್ಷಮಯ ಬದುಕನ್ನು ಓದುಗನ ಮುಂದಿಡುತ್ತದೆ ಕಾದಂಬರಿ ಸಾಹಿತ್ಯ. ಈ ಸಾಹಿತ್ಯ ಪ್ರಕಾರವು ಕಾಲ ಕಾಲಕ್ಕೆ ತಕ್ಕಂತೆ ಸಮಾಜದಲ್ಲಿ ಜರುಗುವ ಜನರ ಜೀವನ ವಿಧಾನವನ್ನು ಚಾರಿತ್ರಿಕ ಸಂಗತಿಗಳಾಗಿ ದಾಖಲಿಸುವ ಪ್ರಯತ್ನ ಮಾಡುತ್ತದೆ. ಲೇಖಕರು ಸಮಾಜದಲ್ಲಿ ನಡೆಯುವ ಘಟನೆಗಳ ಸೂಕ್ಷ್ಮ ಸಂವೇದನೆಗಳನ್ನು, ಅವರು ನೋಡುವ, ಬಯಸುವ ಅಂಶಗಳನ್ನು ಈ ಸಾಹಿತ್ಯ ಪ್ರಕಾರದಲ್ಲಿ ಕಾಣಬಹುದಾಗಿದೆ. ಸಾಹಿತ್ಯದಲ್ಲಿ ಅನೇಕ ಪ್ರಕಾರಗಳಿದ್ದರೂ ಎಲ್ಲದಕ್ಕಿಂತ ಕಾದಂಬರಿಯು, ಸಾಮಾಜಿಕ ಜೀವನದ ಘಟನೆಗಳನ್ನು ಗಂಭೀರವಾಗಿ ಮತ್ತು ವಾಸ್ತವ ನೆಲೆಯಲ್ಲಿ ಚಿತ್ರಿಸುತ್ತದೆ. ಇದರಿಂದಲೇ ಕಾದಂಬರಿಯನ್ನು 'ಸಾಮಾಜಿಕ ಆತ್ಮಸಾಕ್ಷಿಯ ಸಾಧನ' ಎಂದು ಕರೆಯಲಾಗುತ್ತದೆ. ಆಧುನಿಕ ಕಾಲದ ಸೂಕ್ಷ್ಮ ಸಂವೇದಿ ಲೇಖಕರು ಜೀವನ

ಸಂಗತಿಗಳ ಚಿಂತನೆಗಳು, ಮಾನಸಿಕ ಸಂವೇದನೆಗಳನ್ನು ಕಾದಂಬರಿಗಳಲ್ಲಿಯೇ ಉತ್ತಮವಾಗಿ ಚಿತ್ರಿಸುತ್ತಾರೆ. ಜಾತಿ, ಮಹಿಳಾ ಶೋಷಣೆ, ವರ್ಗ ಸಂಘರ್ಷ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಅಸಮಾನತೆ ಮುಂತಾದವುಗಳನ್ನು ಕುರಿತು ಕಾದಂಬರಿ ಪ್ರಕಾರ ಗಂಭೀರ ಚಿಂತನೆ ಮಾಡುವ ವಲಯವಾಗಿದೆ.

ಕನ್ನಡ ದಲಿತ ಕಾದಂಬರಿಗಳ ಪ್ರೇರಣೆ

ದಲಿತ ಕಾದಂಬರಿಗಳು ಸಾಹಿತ್ಯದಲ್ಲಿ ಹಲವು ವಿಧಗಳಲ್ಲಿ ವಿಸ್ತರಿಸಿಕೊಳ್ಳುತ್ತವೆ. ಆದರೆ ಇಲ್ಲಿ ದಲಿತ ಕಾದಂಬರಿಗಳು ಬರುವುದಕ್ಕಿಂತ ಪೂರ್ವದಲ್ಲಿ ಕನ್ನಡ ಕಾದಂಬರಿ ಲೋಕದಲ್ಲಿ ದಲಿತರ ಕುರಿತ ಚಿಂತನೆಯನ್ನು ಸಂಕ್ಷಿಪ್ತವಾಗಿ ನೋಡುವುದಾದರೆ ಕನ್ನಡ ದಲಿತ ಕಾದಂಬರಿಗಳು ಬರುವುದಕ್ಕೆ ಪ್ರೇರಣೆಯಾದ ಸಾಹಿತ್ಯವು ತನ್ನನ್ನು ತಾನು ಹಲವು ವಿಧಗಳಲ್ಲಿ ವಿಸ್ತರಿಸಿಕೊಳ್ಳುತ್ತದೆ.

ನವೋದಯ ಕಾದಂಬರಿಗಳಲ್ಲಿ ದಲಿತತ್ವ

ನಿಸರ್ಗಕ್ಕೆ ಪ್ರತಿಕ್ರಿಯಿಸುವ ಮತ್ತು ಆಧ್ಯಾತ್ಮ ಕಲೆಯ ಕಾಳಜಿಗಳು ಸ್ತ್ರೀ ಶಿಕ್ಷಣ, ವಿಧವಾ ವಿವಾಹ ಮತ್ತು ಮೇಲ್ಜಾತಿ ಹೆಣ್ಣು ಮಕ್ಕಳ ಸಮಸ್ಯೆಗಳು ಮುಂತಾದ ಸಾಮಾಜಿಕ ಸಮಸ್ಯೆಗಳು ನವೋದಯ ಕನ್ನಡ ಕಾದಂಬರಿಗಳಲ್ಲಿ ಪ್ರಧಾನವಾಗಿ ಕಂಡುಬರುತ್ತವೆ. ನವೋದಯ ಕಾಲದ ಕನ್ನಡ ಸಾಹಿತ್ಯ ಲೋಕವು ಎಲ್ಲಾ ಬಗೆಯ ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಳ್ಳಲು ಆರಂಭಿಸಿದ ಕಾಲವದು. ಅಂದರೆ ಕಾದಂಬರಿ, ಸಣ್ಣಕಥೆ, ಕಾವ್ಯ, ಆತ್ಮಕಥೆ, ನಾಟಕ, ವಿಮರ್ಶೆ, ಗ್ರಂಥ ಸಂಪಾದನೆ ಮೊದಲಾದ ಅನೇಕ ಬಗೆಯ ಸಾಹಿತ್ಯ ಪ್ರಕಾರಗಳಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಆದರೂ ಕಾದಂಬರಿ ಪ್ರಕಾರವನ್ನ ಹೆಚ್ಚಿನ ರೀತಿಯಲ್ಲಿ ಬಳಸಿಕೊಂಡಿದೆ. ಕಾರಣ ಕಾದಂಬರಿಯ ಆರಂಭದ ಕಾಲಘಟ್ಟದಲ್ಲಿ ಸಾಮಾಜಿಕ ಸಮಸ್ಯೆಗಳನ್ನು ವಸ್ತುವನ್ನಾಗಿಸಿಕೊಂಡ ಕೆಲವು ಕಾದಂಬರಿಗಳನ್ನು ರಚಿಸಿರುವುದನ್ನು ಕಾಣಬಹುದು. ದಲಿತತ್ವ, ದಲಿತ ಚಿಂತನೆಯ ಕುರಿತಾಗಿ ಹಲವು ಕಾದಂಬರಿಗಳು ಮೂಡಿಬಂದಿದೆ. ಈ ಕಾಲಘಟ್ಟದ ಕಾದಂಬರಿಗಳಲ್ಲಿ ದಲಿತೋದ್ಧಾರದ ಪರಿಕಲ್ಪನೆಯು ಪ್ರಧಾನವಾಗಿದ್ದರೂ, ನಿರೂಪಣೆಗಳು ಜಾತಿಗೆ ಸೀಮಿತವಾಗಿದ್ದು, ಅಂದರೆ ಮೇಲು ಜಾತಿಯವರಿಗೆ ಸಂಬಂಧಿಸಿರುವಂತಹದ್ದು. ಅವರು ಹೇಳುವಂತೆ ಅವರೂ ಮನುಷ್ಯರೇ, ಅವರು ತಯಾರಿಸುವ ವಸ್ತು, ಬೆಳೆಯುವ ಬೆಳೆ ಎಲ್ಲ ಬೇಕು ಆದರೆ ಮುಟ್ಟಬೇಡಿ ಎಂದರೆ ಹೇಗೆ? ನಾಳೆ ಅವರೆಲ್ಲ ಮತಾಂತರ ಹೊಂದಿ ಬೇರೆ ಧರ್ಮಕ್ಕೆ ಸೇರಿದರೆ ನಮ್ಮ ದೇಶದಲ್ಲಿ ಹಿಂದುಗಳೇ ಅಲ್ಪಸಂಖ್ಯಾತರಾಗುತ್ತೇವೆ. ದಲಿತರನ್ನು ಮನುಷ್ಯರಂತೆ ಕಾಣಿರಿ ಎನ್ನುವ ಮಾತು ಮೇಲು ಜಾತಿಯ ನಾಯಕರ ಅಧಿಕಾರವಾಣಿಯ ಮಾತಿಗೆ, ಆದರ್ಶಕ್ಕೆ ಕಾರಣವಾಗಿದೆ. ನವೋದಯ ಕಾದಂಬರಿಗಳಲ್ಲಿ ದಲಿತ ಕೇಂದ್ರಿತ ಪಾತ್ರಗಳು ಕಂಡು ಬಂದರೂ ಆ ಪಾತ್ರಗಳು ಅಂದಿನ ಸಾಮಾಜಿಕ ಒತ್ತಡಗಳನ್ನು ನಿಭಾಯಿಸುವ ಪಾತ್ರಗಳಾಗಿರುತ್ತವೆ. ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡತಿ'

ಕಾದಂಬರಿಗಳ ನಾಯಕರಾದ ಮುಕುಂದಯ್ಯ ಮತ್ತು ಹೂವಯ್ಯರ ಮೂಲಕ ಹಿಂದುತ್ವವನ್ನು ಎತ್ತಿ ಹಿಡಿಯುವ ಪಾತ್ರಗಳಾಗಿ ಕಾಣಬಹುದು. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಗುತ್ತಿಯ ಪಾತ್ರ ಪ್ರಧಾನವಾಗಿದ್ದರೂ, ತನ್ನ ಒಡೆಯನಿಗೆ ಗುಲಾಮನನ್ನಾಗಿಯೇ ಚಿತ್ರಿಸಲಾಗಿದೆ. ಮತಾಂತರ ಹೊಂದುವ ವಿಚಾರದಲ್ಲಿ ದಲಿತ ಪಾತ್ರಗಳು ಹೆಚ್ಚಾಗಿ ಹಿಂದೂ ಧರ್ಮವನ್ನೇ ಒಪ್ಪಿಕೊಂಡಿವೆ ಎನ್ನುವ ಹಾಗೆ ಚಿತ್ರಿಸಲಾಗಿದೆ. ಮತಾಂತರ ದಲಿತರ ಸಮಸ್ಯೆಯಾಗಿರದೆ ಅದು ಅಂದಿನ ಧಾರ್ಮಿಕ ಸಮಾಜದ ಸಮಸ್ಯೆಯೂ ಆಗಿತ್ತು. ಅದನ್ನು ದಲಿತ ಪಾತ್ರಗಳ ಮೂಲಕ ದಲಿತರಿಗೆ ಮನವರಿಕೆ ಮಾಡಿಕೊಡುವಲ್ಲಿ ಈ ಕಾಲದ ಕಾದಂಬರಿಗಳು ಕಾರ್ಯ ನಿರ್ವಹಿಸಿದವು. ಕಾರಂತರ 'ಚೋಮನ ದುಡಿ' ಕಾದಂಬರಿಯು ಸಹ ನವೋದಯ ಕಾಲದ ದಲಿತ ಕಾದಂಬರಿಯಾಗಿ ಕಂಡುಬರುತ್ತದೆ.

ಚೋಮನ ಬದುಕಿನ ಸುತ್ತಲು ಹೆಣೆಯಲಾದ ಹಸಿವು, ಅನ್ಯಾಯ, ಅವಮಾನ, ಅಸ್ಪೃಶ್ಯತೆಗಳು ಕಥೆಯ ವಸ್ತುಗಳಾಗಿವೆ. 'ಮಣ್ಣು ಮತ್ತು ಮನುಷ್ಯ' ಎಂಬ ಪರಿಕಲ್ಪನೆಯನ್ನು ಕಾದಂಬರಿಯಲ್ಲಿ ಕಾಣಬಹುದು. ದಲಿತರು ತಮ್ಮ ಜಾನಪದ ಕಲೆಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾರೆ ಎಂಬುದನ್ನು ಚೋಮ ದುಡಿಯನ್ನು ಬಾರಿಸುವುದರಲ್ಲಿ ಕಾಣಬಹುದು. ತಿರುಮಲಾಂಬರವರ ನಭ, ವಿರಾಗಿಣಿ ಕಾದಂಬರಿಗಳು, ಸ್ತ್ರೀ ಲೇಖಕಿಯರ ಕಾದಂಬರಿಗಳು ಸಹ ಮೇಲ್ವರ್ಗದವರ ಸ್ತ್ರೀಯರ ಸಾಮಾಜಿಕ ಸ್ಥಾನಮಾನಗಳ ಕುರಿತೇ ವಿಷಯ ಪ್ರಸ್ತಾಪಿಸಿರುವುದನ್ನು ಕಾಣಬಹುದು.

ಒಟ್ಟಾರೆ ನವೋದಯ ಸಾಹಿತ್ಯದ ಕುರಿತಂತೆ ಡಿ.ಆರ್.ನಾಗರಾಜರ ಮಾತುಗಳು ಹೀಗಿವೆ. "ನಮ್ಮ ನವೋದಯ ಸಾಹಿತಿಗಳು ಸಾಮಾನ್ಯ ಮನುಷ್ಯನನ್ನು ಆತನನ್ನು ಕಿತ್ತುತಿನ್ನುತ್ತಿರುವ ದಾರಿದ್ರ್ಯಗ್ರಸ್ತ ಸ್ಥಿತಿಯನ್ನು ನೋಡಿಲ್ಲ ಎಂದಲ್ಲ. ಸಾಮಾನ್ಯ ಮನುಷ್ಯನನ್ನು ಅವನ ಹಿಂದಿರುವ ಜೀವನ ಕ್ರಮವನ್ನು ಇವರು ಅರ್ಥೈಸಿದ ರೀತಿ ಇವರ ಪ್ರಮುಖ ಧೋರಣೆಗಳಿಗಿಂತ ಏನೂ ಭಿನ್ನವಾದದ್ದಲ್ಲ. ಆದರ್ಶವಾದ ಮತ್ತು ಮಾನವತವಾದ ನವೋದಯ ಸಾಹಿತ್ಯದ ಹಿಂದಿನ ಪ್ರಮುಖ ಸಿದ್ಧಾಂತಗಳು ಈ ಎರಡೂ ವಿಚಾರಧಾರೆಗಳು ಸಮಾಜದಲ್ಲಿಯ ವರ್ತಮಾನ ಸ್ಥಿತಿಯನ್ನು ಇರುವ ರೀತಿಯಲ್ಲಿಯೇ ವಿವರಿಸುತ್ತದೆ"(ಡಿ.ಆರ್. ನಾಗರಾಜ್, 'ಅಮೃತ ಮತ್ತು ಗರುಡ' ಪು. ೪೮) ನವೋದಯ ಕಾದಂಬರಿಗಳು ಆದರ್ಶ ಜೀವನದ ನೆಲೆ ಸೆಲೆಯ ಪ್ರತೀಕವಾಗಿ ಮತ್ತು ಭಾರತೀಯ ಹಿಂದೂ ಸಂಸ್ಕೃತಿಯ ತಳಪಾಯವಾಗಿವೆ.

ವಾಸ್ತವವಾದದಿಂದ ಪ್ರೇರಿತವಾದ ಸಮಾಜದ ಓರೆಕೋರೆಗಳನ್ನು, ಕೆಳವರ್ಗದ, ಕೂಲಿಕಾರರ, ಕಲಾವಿದರ, ಸೂಳೆಯರ, ಸ್ವಾಮಿಗಳ ಜೀವನವನ್ನು ನಿರ್ಭಯವಾಗಿ ಬಳಸಿಕೊಂಡ ಕಾಲ ಪ್ರಗತಿಶೀಲವಾಗಿದೆ. ಹುಸಿ ಆದರ್ಶಗಳ ಮೂಲಕ ವೈಚಾರಿಕ ಪ್ರಗತಿಯ ಬದಲಾವಣೆ ಎನ್ನುವ ಮೂಲಕ ಸಾಹಿತ್ಯ ಲೋಕವನ್ನು ಪ್ರವೇಶ ಮಾಡಿದ ಪ್ರಗತಿಶೀಲ ಸಾಹಿತ್ಯದ ಕಾದಂಬರಿಗಳು ಜನರಲ್ಲಿದ್ದ ಮೂಢನಂಬಿಕೆಗಳನ್ನು ಬಯಲು ಮಾಡುವುದು ಮಠಗಳ ನೈತಿಕತೆಯನ್ನು ಪ್ರಶ್ನೆ ಮಾಡುವುದು. ಮತಾಂತರದಿಂದ ಯಾವ ರೀತಿಯಾದ ಲಾಭವಿಲ್ಲ. ಕ್ರೈಸ್ತ ಮಿಷನರಿಗಳು

ನೀಡುವ ಆಮಿಷಗಳೇನಿದ್ದರೂ ಅವು ತಾತ್ಕಾಲಿಕ ಎಂದು ಹೇಳುವ ಮೂಲಕ ಸಮಾಜಮುಖಿಯಾಗಿ ದಲಿತರ ಪರವಾದ ಸಾಹಿತ್ಯವೆಂದು ಬಿಂಬಿಸಲು ಪ್ರಯತ್ನ ಮಾಡಿದವು. ಮತಾಂತರ, ಅಂತರ್ ಜಾತಿಯ ವಿವಾಹ, ಸಾಮಾಜಿಕ, ಧಾರ್ಮಿಕ ವಿಷಯಗಳನ್ನು ಕುರಿತು ಹೆಚ್ಚು ಚರ್ಚೆಗೆ ಒಳಗಾಗಿದ್ದವೇ ಹೊರತು ಅವರ ಬದುಕಿನ ಆರ್ಥಿಕವಾದ ವಿಷಯಗಳು ಪ್ರಧಾನವಾಗಿ ಮೂಡಿ ಬರಲಿಲ್ಲ. ಕಾರಣ ದಲಿತರು ಆರ್ಥಿಕವಾಗಿ ಸಬಲರಾದರೆ, ಅವರು ಎಚ್ಚೆತ್ತುಕೊಂಡರೆ ನಮ್ಮ ಸಮಾಜದ ಗತಿ ಏನು? ಎನ್ನುವ ಆಲೋಚನೆಯು ನವೋದಯ ಕಾಲದ ಕಾದಂಬರಿಗಳಲ್ಲಿ ಇರುವಂತೆ ಚಿಂತಿಸಲು ಸಾಧ್ಯವಾಯಿತೇ ವಿನಃ ಅದರ ಆಚೆ ನಿಂತು ಚರ್ಚಿಸುವ ಧೈರ್ಯವನ್ನು ಪ್ರಗತಿಶೀಲ ಸಾಹಿತ್ಯವೂ ಮಾಡಲಿಲ್ಲ. ಅಲ್ಲದೆ "ಅನಕೃ ಮತ್ತು ತರಾಸು ಅವರಂಥ ಲೇಖಕರು ವೈಭವೀಕೃತ ಹಿಂದೂ ಧರ್ಮದ ನೆನಪುಗಳಿಗೆ ಶರಣರಾಗತೊಡಗಿದರು"(ಎಲ್. ನಾಗಭೂಷಣಸ್ವಾಮಿ, 'ವಿಮರ್ಶೆಯ ಪರಿಭಾಷೆ', ಪು. ೪೮೯-೪೯೦) ನಿರಂಜನ, ಕಟ್ಟೀಮನಿ ಮುಂತಾದವರು ಕೆಲವು ದಲಿತ ಪರ ಚಿಂತನೆಯ ಕಾದಂಬರಿಗಳನ್ನು ಬರೆದರು. ದುಡಿವ ವರ್ಗದ ಸಂಘಟನೆಯ ಹೋರಾಟವನ್ನು ವಿವರಿಸುವ ನಿರಂಜನರ 'ಚಿರಸ್ಮರಣೆ' ದುಡಿಯುವ ಜನರ ಹೋರಾಟವನ್ನೇ ವಸ್ತುವಾಗುಳ್ಳ ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ' ಕಾದಂಬರಿಯಲ್ಲಿ ಬರುವ ಶೋಷಕರ ಮತ್ತು ಶೋಷಣೆಗೆ ಒಳಗಾದವರ ಬದುಕಿನ ಚಿತ್ರಣ, ಚದುರಂಗರ 'ವೈಶಾಖ'ದಲ್ಲಿನ ದಲಿತನೊಬ್ಬನ ಪ್ರಜ್ಞೆಯ ವಿಕಾಸವೂ ಮುಗ್ಧತೆಯ ಶೋಧ, ಒಬ್ಬ ದಲಿತನ ಪ್ರಜ್ಞೆಯ ವಿಕಾಸ ಹಾಗೂ ಆತ ತನ್ನ ಕಳೆದುಹೋದ ನಿಷ್ಪಾಪ ಅವಸ್ಥೆಯನ್ನು ಮರಳಿ ದೊರಕಿಸಲು ನಡೆಸುವ ಪ್ರಯತ್ನ ಮಾಡಲಾಗಿದೆ" (ಜಿ.ಎಸ್. ಆಮೂರ, 'ಕನ್ನಡ ಕಥನ ಸಾಹಿತ್ಯ: ಕಾದಂಬರಿ', ಪು. ೨೦೮) "ಇವರ ಮತ್ತೊಂದು ಕಾದಂಬರಿ 'ಹೆಜ್ಜಾಲ' ದಲಿತ ಕಾಲೋನಿಯ ಅನುಭವಗಳನ್ನು ಚಿತ್ರಿಸುವ ಮೂಲಕ ವೈಶಾಖದ ಮುಂದುವರಿಕೆಯೆಂದೆನಿಸಿದರೂ ಅದರ ರಚನೆ ಹೆಚ್ಚು ಮುಕ್ತವಾಗಿದೆ" (ಅದೇ ಪು. ೨೧೨)

ಒಟ್ಟಾರೆ ಸ್ವಾತಂತ್ರ್ಯ ಪೂರ್ವದಲ್ಲಿದ್ದ ಈ ಎರಡೂ ಪಂಥಗಳು ಅಸ್ಪೃಶ್ಯತೆಯ ವಿರುದ್ಧ ಗಂಭೀರವಾಗಿ ಚಿಂತನೆ ಮಾಡಿರುವುದನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಆ ಕಾಲದಲ್ಲಿದ್ದ ಹಿಂದೂ ಧರ್ಮ ಪ್ರಜ್ಞೆ.

ನವ್ಯ ಕಾದಂಬರಿಗಳು ವ್ಯಕ್ತಿ ಕೇಂದ್ರಿತವಾಗಿ ಮೂಡಿಬಂದರೂ ಅವರಲ್ಲಿ ಕೂಡ ದಲಿತರ ಸಮಗ್ರ ಜೀವನ ಬದುಕನ್ನು ತೋರಿಸುವ ಕಾರ್ಯ ಮಾಡಲಿಲ್ಲ. ಆತ್ಮಾವಲೋಕನ ಮಾದರಿಯನ್ನೇ ಪ್ರಧಾನವಾಗಿರಿಸಿದ ನವ್ಯ ಕಾದಂಬರಿಗಳು ದಲಿತರ ಕುರಿತು ಅಂತರ್ ಜಾತಿ ವಿವಾಹದ ವಿಷಯಕ್ಕೆ ಬಂದು ನಿಲ್ಲುತ್ತವೆ. ಕ್ರಿಯಾತ್ಮಕವಾಗಿ ಮುಂದುವರೆದು ಪ್ರಶ್ನೆಗೆ ಉತ್ತರಿಸುವ ರೀತಿ ಕಂಡುಬರುವುದಿಲ್ಲ. ದಲಿತರಿಗೆ ಮಂದಿರ ಪ್ರವೇಶವೂ ಅಷ್ಟೇ ಪ್ರಧಾನ ಚರ್ಚಿತ ವಿಷಯದಲ್ಲೂ ಅದು ಸಹ ಸೋಲುವ ಕ್ರಮ ಕಾಣಿಸುತ್ತದೆ. ಇವರಲ್ಲಿ ಸಂಪೂರ್ಣವಾಗಿ ಹಳೆಯದನ್ನು ಬಿಡದ ಮತ್ತು ಹೊಸದನ್ನು ಹಿಡಿಯದ ನಡುವಿನ ಸ್ಥಿತಿಯಲ್ಲಿ ನಿಲ್ಲುವ ಸ್ವರೂಪದ ಕಾದಂಬರಿಗಳಾಗಿವೆ.

ವ್ಯಕ್ತಿಯೇ ಪ್ರಮುಖವಾಗಿರುವುದು, ವ್ಯಕ್ತಿ ತನ್ನನ್ನು ತಾನು ಕಂಡುಕೊಳ್ಳುವುದು, ಯಾಂತ್ರಿಕ ಬದುಕಿನಿಂದ ರಾಜಕೀಯ ಹಿಡಿತದಿಂದ ಹೊರಬರುವುದು. ಅಸ್ತಿತ್ವಕ್ಕಾಗಿ ಹುಡುಕಾಟ, ಹಳೆಯ ಮೌಲ್ಯಗಳಿಗೆ ಆಘಾತ ಮಾಡಿ ಹೊಸ ಮೌಲ್ಯ ಸೃಷ್ಟಿಸುವುದು ಮುಂತಾದ ವಸ್ತುಗಳನ್ನಾಧರಿಸಿದ ಕಾದಂಬರಿಗಳಾಗಿವೆ. ನವ್ಯ ಕಾಲದ ಬರಹಗಾರರು ಮನುಷ್ಯ ಸಂಬಂಧಗಳ ಆಲೋಚನೆ ಮತ್ತು ಕಾಮವನ್ನು ನೀಗಿಸಿಕೊಳ್ಳುವ ದ್ವಂದ್ವದಲ್ಲಿ ಈ ಕಾಲದ ಕಾದಂಬರಿಗಳು ಕಂಡುಬಂದವು. ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ', ಅನಂತಮೂರ್ತಿಯವರ 'ಸಂಸ್ಕಾರ' ಮುಂತಾದ ಕಾದಂಬರಿಗಳು ಇವುಗಳಿಗೆ ಉದಾಹರಣೆಯಾಗಿವೆ.

ಕನ್ನಡ ದಲಿತ ಕಾದಂಬರಿಗಳು

ನವ್ಯ ಸಾಹಿತ್ಯಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ ದಲಿತ ಸಾಹಿತ್ಯ ರೂಪಗೊಂಡಿತು. ದಲಿತದ ಜೊತೆ ಜೊತೆಗೆ ಬಂಡಾಯ ಪರಿಕಲ್ಪನೆಯೂ ಪ್ರಾರಂಭವಾಯಿತು. ಈ ದಲಿತ-ಬಂಡಾಯ ಕಾದಂಬರಿಗಳು ಮೊದಲು ವರ್ಗ ಹೋರಾಟದ ಪರಿಕಲ್ಪನೆಯನ್ನು ಕೇಂದ್ರವಾಗಿಸಿಕೊಂಡು ನಿಧಾನವಾಗಿ ವರ್ಣ ವ್ಯವಸ್ಥೆ, ಜಾತಿ ಪದ್ಧತಿ, ಅಸ್ಪೃಶ್ಯತೆ ಸಮಾಜದತ್ತ ತಿರುಗಿದವು. "ಮಾರ್ಕ್ಸವಾದಿ ತತ್ವಗಳ ಅರಿವಿನ ಹಿನ್ನೆಲೆಯಿದ್ದ ಬರಹಗಾರರು ಸಾಹಿತ್ಯಕ್ಕೊಂದು ಸ್ಪಷ್ಟ ನೆಲೆಘಟ್ಟನ್ನು ನಿರ್ಮಿಸಲು ಪ್ರಯತ್ನಿಸಿದರು. ಕಾದಂಬರಿಯನ್ನು ಸಾಮಾಜಿಕ ಕ್ರಾಂತಿಯ ಸಾಧನವನ್ನಾಗಿ ಬಳಸಬಹುದೆಂಬ ಇವರ ನಂಬಿಕೆ ಪ್ರಗತಿಶೀಲರ ಧೋರಣೆಗೆ ಹತ್ತಿರವಾದುದು. ಸಮಾಜ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಹಿಂಸೆ, ಶೋಷಣೆಗಳ ಅನುಭವವನ್ನು ದಟ್ಟವಾಗಿ ಅಭಿವ್ಯಕ್ತಿಸುವ ಕಾದಂಬರಿಗಳನ್ನು ದಲಿತ-ಬಂಡಾಯ ಬರಹಗಾರರು ನೀಡಿದ್ದಾರೆ. ನಂತರ ಈ ಕಾದಂಬರಿಗಳಲ್ಲಿ ಅಂಬೇಡ್ಕರ್, ಲೋಹಿಯಾ ಚಿಂತನೆಗಳು ಹೆಚ್ಚು ಕಾಣಿಸಿಕೊಂಡವು. ಇದರ ಪರಿಣಾಮವಾಗಿ ದಲಿತ ಕೇರಿಯ ಲೋಕವನ್ನು ಈವರೆಗೆ ಕನ್ನಡ ಸಾಹಿತ್ಯ ಕಾಲದ ಸ್ಥಿತಿಗತಿಯನ್ನು ಅನಾವರಣ ಮಾಡಿದವು. ನವಿರಾದ ಭಾಷೆ (ಶಿಷ್ಟ ಭಾಷೆಯಾಗಿರದೆ ಆಡು ಭಾಷೆ) ಬಳಕೆಗೆ ಈ ಕಾದಂಬರಿಗಳು ಹೊಸ ವಿಧಾನ ಪಡೆದವು.

ದಲಿತ ಕಾದಂಬರಿಗಳಲ್ಲಿ ಮಹಿಳಾ ಪಾತ್ರಗಳು ಮೇಲು ಜಾತಿಯ ಪುರುಷರಿಗೆ ಹಾಗೂ ದಲಿತ ಪುರುಷರಿಗೆ ಸವಾಲು ಹಾಕಿ ನಿಲ್ಲುವ ಗುಣ ಪ್ರಕಟವಾಗಿದೆ. ತನ್ನ ಅಸ್ತಿತ್ವವನ್ನು ತಾನು ಉಳಿಸಿಕೊಳ್ಳಲಾಗದ ಹೆಣ್ಣು ರೋಷದಿಂದ ದಲಿತ ಪುರುಷರನ್ನು ಪ್ರಶ್ನಿಸಿದರೆ ಮೇಲು ಜಾತಿಯವರ ದೌರ್ಜನ್ಯವನ್ನು ಸಹಿಸಿಕೊಳ್ಳಲಾಗದೆ ಸವಾಲಾಗುವ ಸನ್ನಿವೇಶಗಳನ್ನು ಕಾಣಬಹುದು. ಏಕೆಂದರೆ ದಲಿತರಿಗಿಂತ ದಲಿತ ಮಹಿಳೆಯು ಹೆಚ್ಚು ಶೋಷಣೆಗೆ ಒಳಗಾದವಳು ಎಂಬುದನ್ನು ಬಿಂಬಿಸುವ ಸನ್ನಿವೇಶವನ್ನು 'ಮಾಗಿ' ಕಾದಂಬರಿಯಲ್ಲಿ ಕಾಣಬಹುದು. ಇಲ್ಲಿ ಕಾಮ ಒಂದು ವಸ್ತುವಾಗಿ ಕಾಮದ ಅತೃಪ್ತಿಯಿಂದ ಬಳಲುವ ಹೆಣ್ಣುಗಳನ್ನು ಒಂದೆಡೆ ತೋರಿಸಿದರೆ ಕಾಮಕ್ಕಾಗಿ ದೌರ್ಜನ್ಯಕ್ಕೆ ತುತ್ತಾಗುವ ಬಗೆ ಇನ್ನೊಂದೆಡೆ ಹೆಚ್ಚು ಹರಿದಾಡಿದೆ. ಸಮಸ್ಯೆ ಕೇಂದ್ರಿತ ಕಾದಂಬರಿಗಳು ಸಮಾಜದ ಪರಿಷ್ಕರಣದ ಅಸ್ತ್ರಗಳಾಗಲು ಪ್ರಯತ್ನಿಸಿದವು.

ತಮಿಳು ಕಾದಂಬರಿಗಳು

ನೂತನ, ವಾರ್ತೆ, ಅತೀಶಯ ಎಂಬ ಅರ್ಥಗಳನ್ನು ನೀಡುವ 'ಪುದಿನಂ' (ಕಾದಂಬರಿ) ತಮಿಳು ಸಾಹಿತ್ಯ ಲೋಕದಲ್ಲಿ ಆಶ್ಚರ್ಯದ ಧ್ವನಿಯಾಗಿ ಆ ಕಾಲದವರಿಂದ ವ್ಯಾಖ್ಯಾನಕ್ಕೆ ಒಳಪಟ್ಟಿತು. ನವೀನತೆ, ಸಂಭಾಷಣಾ ಕಾವ್ಯ, ಗದ್ಯ ರೀತಿ, ದೀರ್ಘವಾದ ಹೊಸ ಸಾಹಿತ್ಯ ಬಗೆಯನ್ನು ಗುರುತಿಸಲು ಉಪಯೋಗವಾಗುತ್ತದೆ ಎಂಬುದಾಗಿ ಈ ಕಾದಂಬರಿಯನ್ನು ಕುರಿತು ವಿಮರ್ಶಕರು ವಿವರಿಸಿರುವುದನ್ನು ಕಾಣಬಹುದು. ತಮಿಳು ದಲಿತ ಕಾದಂಬರಿಗಳನ್ನು ಅಧ್ಯಯನ ಮಾಡುವುದಕ್ಕಿಂತ ಪೂರ್ವದಲ್ಲಿ ತಮಿಳು ಕಾದಂಬರಿಯು ಬೆಳೆದುಬಂದ ಕ್ರಮವನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡಲಾಗಿದೆ.

ಮೊದಲ ಘಟ್ಟದ ತಮಿಳು ಕಾದಂಬರಿಗಳು (೧೮೭೯-೧೯೧೦ರವರೆಗೆ)

೧೮೭೯ರಲ್ಲಿ ಪ್ರಕಟಗೊಂಡ ವೇದನಾಯಗಂ ಪಿಳ್ಳೈಯವರ 'ಪ್ರತಾಪ ಮುದಲಿಯಾರ್ ಚರಿತ್ರಂ' ಕಾದಂಬರಿಯು ತಮಿಳಿನ ಮೊದಲ ಕಾದಂಬರಿಯಾಗಿದೆ. ಇಲ್ಲಿ ಸ್ತ್ರೀ, ಭಾಷೆಯ ಹೆಮ್ಮೆ, ಶೀಲ, ಸ್ವಾಭಿಮಾನ, ಸ್ತ್ರೀ ಮುಖಂಡತ್ವವನ್ನು ಈ ಕಾದಂಬರಿ ವಿವರಿಸುತ್ತದೆ. ಕಾದಂಬರಿಯ ಮುನ್ನುಡಿಯಲ್ಲಿ ಕಾದಂಬರಿಕಾರರಾದ ಪಿಳ್ಳೈಯವರು ಈ ರೀತಿಯಾಗಿ ಹೇಳುತ್ತಾರೆ. "ತಮಿಳಿನಲ್ಲಿ ಈ ರೀತಿಯಾದ ಬರಹದ ಕ್ರಮ, ನವೀನತೆ ಸಾಮಾನ್ಯ ಜನತೆಗೆ ಇಲ್ಲಿಯವರೆಗೆ ಪರಿಚಯವಿರಲಿಲ್ಲ. ತಮಿಳಿನ ವಚನ ಕೃತಿಗಳು ಇಲ್ಲದ ದೊಡ್ಡ ಕೊರತೆಯನ್ನು ತೀರಿಸುವುದಕ್ಕೆ ಬರೆದಿದ್ದೇ ಈ ಕೃತಿಯ ಉದ್ದೇಶವಾಗಿದೆ. ಈ ಕೃತಿಯಲ್ಲಿ ದೇಶೀ ಸಂಸ್ಕೃತಿ, ಕೌಟುಂಬಿಕ ಜೀವನ, ದಕ್ಷಿಣ ಭಾರತದ ಜನರ ಆಚಾರ ವಿಚಾರಗಳು ಮುಂತಾದವುಗಳನ್ನು ಕೆಲವು ಉಪಕಥೆಗಳ ಮೂಲಕ ತಿಳಿಸಿದ್ದೇನೆ. ದೇವರಲ್ಲಿಯ ಭಕ್ತಿಯನ್ನು, ಸಮೂಹ ಜೀವನಕ್ಕೆ ಬೇಕಾಗುವ ಕರ್ತವ್ಯಗಳನ್ನು ತಿಳಿಸಲಾಗಿದೆ. ಆದ್ದರಿಂದ ಈ ಕೃತಿಯು ಓದುಗರಿಗೆ ರಸವಾಗಿಯೂ, ಬೋಧನೆಯಾಗಿಯೂ ಇರಬಹುದೆಂದು ಹೆಮ್ಮೆ ಪಡುತ್ತೇನೆ" (ವೇದನಾಯಗಂ ಪಿಳ್ಳೈ, ಪ್ರತಾಪ ಮುದಲಿಯಾರ್ ಚರಿತ್ರಂ ಮುನ್ನುಡಿ) ತಮಿಳಿನಲ್ಲಿ ಈವರೆಗೆ ಈ ರೀತಿಯಾಗಿ ಸಾಹಿತ್ಯವು ಪ್ರಾರಂಭವಾಗಿರಲಿಲ್ಲ ಎಂಬುದನ್ನು ಒಪ್ಪಿಕೊಳ್ಳುವ ಲೇಖಕರು ತಮ್ಮ ಕಾದಂಬರಿಯು ಆ ಸ್ಥಾನವನ್ನು ತುಂಬಬಲ್ಲದು ಎನ್ನುವ ಆಶಯ ವ್ಯಕ್ತಪಡಿಸುತ್ತಾರೆ.

ಪಿ.ಆರ್.ರಾಜಂ ಅಯ್ಯರ್‌ರವರ ೧೮೯೬ರಲ್ಲಿ ಪ್ರಕಟವಾದ 'ಕಮಲಂಬಾಲ್ ಚರಿತ್ರಂ' ಕಾದಂಬರಿಯಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ಮುಖಾಮುಖಿ ಮಾಡುತ್ತಾರೆ. ಅವಿಭಕ್ತ ಕುಟುಂಬಗಳ ಜೀವನದಲ್ಲಿ ನಡೆಯುವ ಸಂಬಂಧಗಳ ಬಿರುಕುಗಳು, ನಗರ ಜೀವನವು ಗ್ರಾಮೀಣ ಬದುಕನ್ನು ಕಸಿದುಕೊಳ್ಳುವ ಕ್ರಮ, ಸ್ತ್ರೀಯರ ಮುಂದಾಳತ್ವವನ್ನು ಕುರಿತು ಈ ಕಾದಂಬರಿ ತಿಳಿಸುತ್ತದೆ. ಆ.ಮಾದವಯ್ಯರವರ ೧೮೯೮ರಲ್ಲಿ ಮೊದಲ ಭಾಗ, ೧೯೦೦ರಲ್ಲಿ ಎರಡನೇಯ ಭಾಗ, ೧೯೧೦ರಲ್ಲಿ ಮೂರನೇ ಭಾಗವಾಗಿ ಪ್ರಕಟವಾದ 'ಪದ್ಮಾವತಿ ಚರಿತ್ರಂ'

ಕಾದಂಬರಿಯು ಗ್ರಾಮೀಣ ಪ್ರದೇಶದಲ್ಲಿ ಬಾಳಿದ ಒಂದು ಕುಟುಂಬ, ನಗರ ಪ್ರದೇಶಕ್ಕೆ ವಲಸೆ ಹೋಗಿ ಬದುಕುವುದಕ್ಕೆ ಎದುರಾಗುವ ನಿರ್ಬಂಧಗಳು, ಅಡ್ಡಿ ಆತಂಕಗಳ ಮೂಲಕ ಕಾದಂಬರಿ ಪ್ರಾರಂಭವಾಗುತ್ತದೆ. ಸಮಾಜದಲ್ಲಿ ಕಂಡುಬರುವ ಕೊರತೆಗಳು ಮತ್ತು ಸ್ತ್ರೀ ಶಿಕ್ಷಣದ ಅವಶ್ಯಕತೆಯ ಕುರಿತು ಕಾದಂಬರಿ ಒತ್ತಿ ಹೇಳುತ್ತದೆ.

ಮೊದಲ ತಲೆಮಾರಿನ ಮೂರು ಪ್ರಮುಖ ಕಾದಂಬರಿಗಳ ಜೊತೆ ಎಸ್.ಎಂ.ನಟೇಶಶಾಸ್ತ್ರಿ ಅವರ 'ದಾನವನ್', 'ದೀನದಯಾಳು', 'ಕೋಮಲಂ ಕುಮರಿಯಾನದು', 'ಮಾಮಿ ಕೊಲುವಿರುಕ್ಕೈ', 'ಮದಿಕೆಟ್ಟ ಮನೈವಿ', 'ದಿಕ್ಕೆಟ್ರ ಇರು ಕುಳೈಂದೈಗಳ್', ತಲೈಯನ್ನೈ ಮಂದಿರೋಪದೇಶಂ', 'ವಸಂತೋದ್ಯಾನಂ' ಮುಂತಾದ ಕಾದಂಬರಿಗಳನ್ನು ಬರೆದಿದ್ದಾರೆ. ಸು.ವೈ.ಗುರುಸ್ವಾಮಿ ಶರ್ಮಾ ಅವರು 'ಪ್ರೇಮ ಕಲಾವದಿಯಂ', ಸರವಣ ಮುತ್ತುಪಿಳ್ಳೈರವರ 'ಮೋಗನಾಂಗಿ', ಪೊಣ್ಣುಸಾಮಿ ಪಿಳ್ಳೈಯವರ 'ಕಮಲಾಕ್ಷಿ', 'ಜ್ಞಾನಾಂಭಿಕೈ', ರಾಜಾತ್ತಿ ಅಮ್ಮಾಳ್‌ರವರ 'ಜ್ಞಾನಪ್ರಕಾಶಂ' ಅರುಮೈನಾಯಗಂರವರ 'ಮೀದಿ ಇರುಳ್', ರಾಮಲಿಂಗ ಮುದಲಿಯಾರ್‌ರವರ 'ಜೀವರತ್ನಂ', 'ಮೋಗನ ಸುಂದರಿ' ವಿಶಾಲಾಕ್ಷಿ ಅಮ್ಮಾಳ್‌ರವರ 'ಸುಜಾತ', ದೇವಕುಂಜರಿ ಅಮ್ಮಾಳ್‌ರವರ 'ವಿಜಯಲಕ್ಷ್ಮಿ' ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಇವು ತಮಿಳು ಸಾಹಿತ್ಯದ ಪ್ರಾರಂಭ ಕಾಲದ ಪ್ರಮುಖ ಕಾದಂಬರಿಗಳಾಗಿವೆ.

ಎರಡನೆಯ ಘಟ್ಟದ ತಮಿಳು ಕಾದಂಬರಿಗಳು (೧೯೧೦-೪೦ರವರೆಗೆ)

ಎರಡನೆಯ ಕಾಲಘಟ್ಟದ ಕಾದಂಬರಿಗಳು ಹೇಳಿಕೊಳ್ಳುವಂತಹ ಪ್ರಮುಖವಾದ ಚಿಂತನೆಗಳನ್ನು, ಚರ್ಚೆಗಳನ್ನು ಹೆಚ್ಚಾಗಿ ಮಾಡಲಿಲ್ಲ. ಈ ಕಾಲವನ್ನು 'ಕತ್ತಲೆಯ ಯುಗ' ಎಂದು ಕರೆಯಲಾಗುತ್ತದೆ. ಆದರೆ ತಮಿಳು ಸಮಾಜದಲ್ಲಿ ಮುದ್ರಣ ಯಂತ್ರದ ಬಳಕೆಯಿಂದ ಈ ಕಾಲದಲ್ಲಿ ಕಾದಂಬರಿಗಳ ಸಂಖ್ಯೆಯು ಗಣನೀಯವಾಗಿ ಹೆಚ್ಚಳವಾದದ್ದನ್ನು ಕಾಣಬಹುದು. ಅಲ್ಲದೆ ಹೆಚ್ಚು ಜನಪ್ರಿಯತೆ ಪಡೆದು ಅನೇಕ ಓದುಗರನ್ನು ಬರಮಾಡಿಕೊಳ್ಳತೊಡಗಿತು.

ಪತ್ತೇದಾರಿ ಕಾದಂಬರಿಗಳು

ಎರಡನೇ ಘಟ್ಟದ ಕಾದಂಬರಿಗಳು ಪಶ್ಚಿಮದಲ್ಲಿ ಪ್ರಸಿದ್ಧಿ ಹೊಂದಿದ ಪತ್ತೇದಾರಿ ಕಾದಂಬರಿಗಳಿಂದ ಪ್ರೇರಣೆ ಪಡೆದ ತಮಿಳು ಲೇಖಕರು ಪತ್ತೆದಾರಿ ಕಾದಂಬರಿಗಳನ್ನು ಬರೆದರು. ಇದಕ್ಕೆ ತಮಿಳಿನಲ್ಲಿ 'ತುಪ್ಪರಿಯುಂ ಪುದಿನಂ' ಎನ್ನುತ್ತಾರೆ. ಆರ್.ಕುಪ್ಪುಸ್ವಾಮಿ ಮುದಲಿಯಾರ್ ಅವರು ಅನೇಕ ಕಾದಂಬರಿಗಳನ್ನು ಬರೆದು ರೆನಾಲ್ಡ್, ರಿಂಚ್ ಮುಂತಾದವರ ಕಾದಂಬರಿಗಳನ್ನು ತಮಿಳಿಗೆ ಅನುವಾದಿಸಿದ್ದಾರೆ. ಇವರ 'ರತ್ನಪುರಿ ರಗಸಿಯಂ' ಕಾದಂಬರಿಯು ಕೊನೆಯವರೆಗೂ ಆಶ್ಚರ್ಯ, ಚಕಿತತೆ, ದಿಗಿಲುಗೊಳಿಸುವ ನಿಗೂಢಗಳು, ಸಮಸ್ಯೆಗಳು ಹಾಗೂ ಅನಿರೀಕ್ಷಿತ ತಿರುವುಗಳೊಂದಿಗೆ ಕೂಡಿದೆ. 'ಕಡಳ್ ಕೊಳ್ಳೈಕ್ಕಾರನ್', 'ಮಂಜಲರೈಯನ್ ಮರ್‌ಮಂ' ಮುಂತಾದ ಕಾದಂಬರಿಗಳನ್ನು ಬರೆದಿದ್ದಾರೆ.

ವಡುವೂರ್.ಕೇ.ದುರೈಸಾಮಿ ಅಯ್ಯರ್‌ರವರ 'ಮುರುಂಗಾಪುರಿ ಮಾಯಕ್ ಕೊಲ್ಲೈ' ಪ್ರಸಿದ್ಧವಾದ ಒಂದು ಕಾದಂಬರಿ. ಮುರುಂಗಾಪುರಿಯ ಜಮೀನ್ದಾರರು ಒಬ್ಬರ ನಂತರ ಒಬ್ಬರು ಸಾಯುತ್ತಾರೆ. ಇದಕ್ಕೆ ಕಾರಣ ಯಾರಿಗೂ ತಿಳಿಯದಿದ್ದಾಗ ಚೆನ್ನೈನಿಂದ ಅಮರಸಿಂಗ್ ಎಂಬ ಪತ್ತೇದಾರಿ ನಿಪುಣನು ಬಂದು ಕೊಲೆ ಹೇಗೆ ಮತ್ತು ಏಕೆ ನಡೆದಿದೆ ಎಂಬುದನ್ನು ಪತ್ತೆ ಹಚ್ಚುವುದೇ ಕಾದಂಬರಿಯ ವಸ್ತುವಾಗಿದೆ. 'ಕುಂಭಕೋಣಂ ವಕ್ಕೀಲ್ ಅಲ್ಲದು ದಿಗಂಬರ ಸಾಮಿಯಾರ್' ಎಂಬ ಕಾದಂಬರಿಯು ವಕೀಲ ಮತ್ತು ನ್ಯಾಯಾಧೀಶನು ಕೂಡಿಮಾಡುವ ಕುತಂತ್ರಗಳು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವ ದಿಗಂಬರ ಸ್ವಾಮಿಯ ಕೆಲಸಗಳನ್ನು ಕಾದಂಬರಿ ವಿವರಿಸುತ್ತದೆ. ಇದರೊಂದಿಗೆ 'ಕಾಟ್ಟು ರಾಜ', 'ಮದನ ಕಲ್ಯಾಣಿ' ಮುಂತಾದ ಕಾದಂಬರಿಗಳು ಪ್ರಸಿದ್ಧವಾಗಿವೆ.

ಜಿ.ಆರ್.ರಂಗರಾಜು ಅವರು 'ರಾಜಾಂಬಾಳ್', 'ಚಂದ್ರಕಾಂತ', 'ಮೋಹನ ಸುಂದರಂ' ಮುಂತಾದ ಪ್ರಸಿದ್ಧ ಕಾದಂಬರಿಗಳನ್ನು ಬರೆದಿದ್ದಾರೆ. ಇವರುಗಳ ಜೊತೆ ವೈ.ಮು.ಕೋದೈ ನಾಯಾಗಿ ಅಮ್ಮಾಲ್ ಅವರು ನೂರಕ್ಕಿಂತ ಹೆಚ್ಚು ಕಾದಂಬರಿಗಳನ್ನು ಬರೆದಿದ್ದಾರೆ. 'ಜಗನ್ ಮೋಹಿನಿ' ಎಂಬ ಪತ್ರಿಕೆಯ ಮೂಲಕ ತಿಂಗಳಿಗೊಮ್ಮೆ ಕಾದಂಬರಿ ಬರೆಯುತ್ತಿದ್ದರು. 'ಕಲಾ ನಿಲಯಂ', 'ಸುದಂದಿರಪ್ ಪರವೈ', 'ಪೆನ್ ಧರ್ಮಮ್', 'ಮಧುರ ನೀದಂ', 'ಪತಂಜಲಿ' ಮುಂತಾದವು ಇವರ ಪ್ರಸಿದ್ಧ ಕಾದಂಬರಿಗಳು. ಬಹುಪಾಲು ಕಾದಂಬರಿಗಳು ಬ್ರಾಹ್ಮಣ ಕುಟುಂಬದಲ್ಲಿರುವ ಹಲವಾರು ಸಮಸ್ಯೆಗಳನ್ನು ಚಿತ್ರಿಸುತ್ತವೆ, ಆದರೆ ದಲಿತರ ಕುರಿತ ವಿವರಣೆ ಸಿಗುವುದಿಲ್ಲ.

ತಮಿಳ್‌ವಾನಣ್‌ರ 'ಆರು ಅಳಗಿಗಳ್', ದೇವನ್‌ರವರ 'ಐಸ್‌ಸ್ಟೀಸ್ ಜಗನ್ನಾಥನ್', ಪುಷ್ಪ ತಂಗದುರೈಯವರ 'ಎ.ಸಿ.ಅರೈಯಿಲ್ ಒರು ಕೊಲ್ಲೈ', ರಾಜೇಂದ್ರ ಕುಮಾರ್‌ರವರ 'ವನಕ್ಕಂ ಕೊಲ್ಲೈಗಾರ', 'ಅವಸರಂ ಒರು ಕಾದಲಿ', ಸುಜಾತರವರ 'ಕೊಲ್ಲೈ ಉದಿರ್‌ಕಾಲಂ', ಲೇಣಾ ತಮಿಳ್‌ವಾನಣ್‌ರ 'ಮೀಂಡುಂ ಸಂಕರ್‌ಲಾಲ್', 'ಕರುಗಿಯ ಕಡಿದಂ', ಪಿ.ಎಲ್.ರಾಜೇಂದ್ರನ್, ಇಂದ್ರಾ ಸೌಂದರರಾಜನ್, ಸುಭಾ ಮುಂತಾದವರು ಪತ್ತೇದಾರಿ ಕಾದಂಬರಿಗಳನ್ನು ರಚಿಸಿದ್ದಾರೆ.

ಮೂರನೆಯ ಕಾಲಘಟ್ಟದ ಕಾದಂಬರಿಗಳು (೧೯೪೦ರಿಂದ ಪ್ರಸ್ತುತ)

ಮೂರನೆಯ ಕಾಲಘಟ್ಟದ ಕಾದಂಬರಿಗಳ ಇತಿಹಾಸ ದೀರ್ಘವಾಗಿರುವುದರಿಂದ ಇದನ್ನು ಕೆಲವು ವಿಧಗಳಲ್ಲಿ ವಿಂಗಡಿಸಲಾಗಿದೆ. ಅಲ್ಲದೆ ತಮಿಳು ಕಾದಂಬರಿ ಕ್ಷೇತ್ರದಲ್ಲಿ ಈ ಬಗೆಯ ವಿಧಗಳನ್ನು ಕಾದಂಬರಿ ಪ್ರಕಾರಗಳಾಗಿ ಗುರುತಿಸುತ್ತಾರೆ.

ಸಾಮಾಜಿಕ ಕಾದಂಬರಿಗಳು

ಸಮಾಜದಲ್ಲಿ ದಿನನಿತ್ಯ ನಡೆಯುವ ಸಮಸ್ಯೆಗಳನ್ನು ಮೂಲವಾಗಿರಿಸಿಕೊಂಡು ಅದನ್ನು ಬಿಡಿಸುವ ಮತ್ತು ಪರಿಹರಿಸುವ, ಸಮಾಜವನ್ನು ಬದಲಾಯಿಸುವ ಉತ್ತಮವಾದ ಉದ್ದೇಶಕ್ಕಾಗಿ

ಬರೆದ ಕಾದಂಬರಿಗಳೇ ಸಾಮಾಜಿಕ ಕಾದಂಬರಿಗಳು. ಒಂದು ಸಮಾಜದ ಜನರ ಜೀವನ ವಿಧಾನ, ಚಟುವಟಿಕೆಗಳು, ಅವರ ಸಮಸ್ಯೆಗಳನ್ನು ವಿವರಿಸುವುದೇ ಸಾಮಾಜಿಕ ಕಾದಂಬರಿಗಳ ಮುಖ್ಯ ಉದ್ದೇಶವಾಗಿರುತ್ತದೆ. ನಾರಣ ದುರೈಕ್ಕನ್ನನ್, ವ.ರಾ.ಏಂಧನ್, ವೆಂಕಟರಮಣಿ, ಕಲ್ಕಿ, ಗೌತ್ತ ಮಂಗಲಂ, ಜಯಕಾಂತನ್, ಕೋ.ವಿ.ಮಣಿಸೇಖರನ್, ನಾ.ಪಾರ್ಥಸಾರಥಿ, ಮು.ವ.ಅನುಕ್ತಮಾ, ಇಂದುಮದಿ, ರಾಜಂ ಕೃಷ್ಣನ್, ಲಕ್ಷ್ಮೀ, ವಾಸಂತಿ, ಸಿವಶಂಕರಿ, ಅನುರಾಧ ರಮಣನ್, ಕು.ರಾಜವೇಲು, ನೀಲ ಪದ್ಮನಾಭನ್, ವನವನ್ ಮುಂತಾದವರು ಪ್ರಸಿದ್ಧ ಸಾಮಾಜಿಕ ಕಾದಂಬರಿಕಾರರಾಗಿದ್ದಾರೆ.

ಸ್ವಾತಂತ್ರ್ಯ ಪೂರ್ವ ಕಾಲವಾಗಿದ್ದರಿಂದ ಮತ್ತು ಗಾಂಧೀಜಿಯ ಚಿಂತನೆಗಳು ಸಮಾಜದಲ್ಲಿ ಪರಿಣಾಮ ಬೀರಿದ್ದರಿಂದ ಪ್ರಾರಂಭ ಕಾಲದ ಸಾಮಾಜಿಕ ಕಾದಂಬರಿಗಳಲ್ಲಿ ದೇಶಭಕ್ತಿ ಮತ್ತು ಗಾಂಧಿಯ ಚಿಂತನೆಗಳು ಪ್ರಭಾವ ಬೀರಿರುವುದನ್ನು ಕಾಣಬಹುದು. ಕೆ.ಎಸ್.ವೆಂಕಟರಮಣಿ ಅವರ 'ಮುರುಗನ್ ಓರ್ ಉಳವನ್', 'ಕಂದನ್ ಓರ್ ದೇಶಭಕ್ತನ್' ಮುಂತಾದ ಕಾದಂಬರಿಗಳು ಗ್ರಾಮೀಣ ಜನರ ಜೀವನ ವಿಧಾನ, ಅಸ್ಪೃಶ್ಯ ನಿವಾರಣೆ, ಮದ್ಯ ನಿಷೇಧ ಮತ್ತು ದೇಶಭಕ್ತಿಯನ್ನು ಆಧರಿಸಿ ಬಂದಿವೆ. ಕಲ್ಕಿಯವರ 'ಅಲೈಯೋಸೈ' ಎಂಬ ಕಾದಂಬರಿಯು ಸ್ವಾತಂತ್ರ್ಯ ಹೋರಾಟವನ್ನು ೧೯೩೦–೪೭ರ ನಡುವಿನ ಕಾಲಘಟ್ಟದಲ್ಲಿ ನಡೆದ ರಾಜಕೀಯ ಹೋರಾಟದ ಸಂದರ್ಭವನ್ನು ಸ್ವಾರಸ್ಯವಾಗಿ ವಿವರಿಸುತ್ತದೆ. ಅಖಿಲನ್ ಅವರ 'ಪೆಣ್', 'ಪುದುವೆಳ್ಳಂ', 'ಎಂಗೇ ಪೋಗಿರೋಂ' ಮುಂತಾದ ಕಾದಂಬರಿಗಳು ಗಾಂಧಿಯ ಚಿಂತನೆಗಳನ್ನು ಮೂಲವಾಗಿಸಿ ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ಚಿತ್ರಿಸುತ್ತವೆ. ಇವು ಮಾನವೀಯ ಮೌಲ್ಯಗಳನ್ನು ಒಳಗೊಂಡ ಕಾದಂಬರಿಗಳಾಗಿವೆ. ೧೯೪೨ರ ಸ್ವಾತಂತ್ರ್ಯ ಹೋರಾಟದ ಚಿತ್ರಣವನ್ನು ಆಕರವಾಗಿಸಿಕೊಂಡ ನಾರಣ ದುರೈಕನ್ನನ್ ಅವರ ಕಾದಂಬರಿ 'ತ್ಯಾಗತ್ ದಳುಂಬು'. ನಲ್ಲ ಪೆರುಮಾಳ್ ರವರ 'ಕಲ್ಲುಕ್ಕುಲ್ ಈರಂ', ರಾಜಂ ಕೃಷ್ಣನ್ ಅವರ 'ವಳೈಕ್ಕರಂ' ಕಾದಂಬರಿಗಳು ಸಹ ಸ್ವಾತಂತ್ರ್ಯ ಹೋರಾಟದ ಚಿತ್ರಣವನ್ನು ನೀಡುತ್ತವೆ.

ಚಾರಿತ್ರಿಕ ಕಾದಂಬರಿಗಳು

ಪ್ರಾಚೀನ ತಮಿಳು ಐತಿಹಾಸಿಕ ಸಂಗತಿಗಳು, ಘಟನೆಗಳನ್ನು ಆಧಾರವಾಗಿಟ್ಟುಕೊಂಡು ರಚಿಸಲ್ಪಟ್ಟ ಕಾದಂಬರಿಗಳನ್ನು ಚಾರಿತ್ರಿಕ ಕಾದಂಬರಿಗಳೆನ್ನುವರು. ೧೯೪೨ರಲ್ಲಿ ಪ್ರಕಟವಾದ ಕಲ್ಕಿಯವರ 'ಪಾರ್ತಿಬನ್ ಕನವು' ಕಾದಂಬರಿಯೇ ತಮಿಳಿನ ಮೊದಲ ಐತಿಹಾಸಿಕ ಕಾದಂಬರಿಯಾಗಿದೆ. ಇದರ ನಂತರ 'ಶಿವಗಾಮಿಯಿನ್ ಸಬದಂ', 'ಪೊನ್ನಿಯಿನ್ ಸೆಲ್ವನ್' ಕಾದಂಬರಿಗಳು ಚಾರಿತ್ರಿಕವಾಗಿ ತಮಿಳಿನಲ್ಲಿ ಪ್ರಸಿದ್ಧವಾಗಿ ಇಂದಿಗೂ ಪ್ರಶಂಸಿಸಲ್ಪಡುವ ಕಾದಂಬರಿಗಳಾಗಿವೆ. ಅಖಿಲನ್ ಅವರ 'ಮಣಿಪವಲವಂ', 'ವೇಂಗೈಯಿನ್ ಮೈಂದನ್', 'ವೆಟ್ರಿತ್ ತಿರುನಗರ್' ಮುಂತಾದ ಐತಿಹಾಸಿಕ ಕಾದಂಬರಿಗಳನ್ನು ಬರೆದಿದ್ದಾರೆ. ಸಾಂಡಿಲ್ಯನ್ ಅವರ 'ಯಮನ ರಾಣಿ', 'ಕಡಲ್ ಪುರಾ', 'ರಾಜ ಪೇರಿಗೈ', 'ರಾಜ ಮುತ್ತಿರೈ', 'ಕಣ್ಣೀಮಡಂ',

'ಮಲೈವಾಸಲ್' ಮುಂತಾದ ಕಾದಂಬರಿಗಳು ಕೋವಿ ಮಣಿಶೇಖರನ್‌ರವರ 'ಕುಟ್ರಾಲ ಕುರವಂಜಿ', 'ಅಗ್ನಿಕೋವಂ', 'ಸೆಂಬಿಯನ್ ಸಿಲ್ಪಿ' ಗುರುತಿಸಬಹುದಾದ ಕಾದಂಬರಿಗಳು. ನಾ. ಪಾರ್ಥಸಾರಥಿ ಅವರ 'ರಾಣಿ ಮಂಗಮ್ಮಾಳ್', 'ಕಪಡಪುರಂ' ಸುಜಾತಾ ಅವರ 'ರತ್ತಂ ಒರೇ ನಿರಂ', 'ಕೌಂದಳೂರ', ಮು.ಕರುನಾನಿಧಿ ಅವರ 'ರೋಮಪುರಿಪ್ ಪಾಂಡಿಯನ್', 'ತೆನ್‌ಪಾಂಡಿ ಸೀಂಗಮ್', ವಿಕ್ರಮಣಿಯವರ 'ನಂದಪುರತ್ತು ನಾಯಗಿ', ಜ್ಞಾನಿ ರಾಮನಾಥ ಅವರ 'ವೀರ ಪಾಂಡಿಯಣಿನ್ ಮಣ್ಣೈವಿ' ಮುಂತಾದ ಕೆಲವು ಕಾದಂಬರಿಗಳು ತಮಿಳಿನ ಪ್ರಮುಖ ಚಾರಿತ್ರಿಕ ಕಾದಂಬರಿಗಳಾಗಿವೆ.

ಪ್ರಾದೇಶಿಕ ಕಾದಂಬರಿಗಳು

ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶವನ್ನು ಮುಖ್ಯವಾಗಿರಿಸಿಕೊಂಡು ಅಲ್ಲಿ ವಾಸಿಸುವ ಜನರ ಜೀವನ ವಿಧಾನವನ್ನು ಮತ್ತು ಭಾಷೆಯನ್ನು ತಿಳಿಸಿಕೊಡುವ ಗುರಿಯನ್ನಿಟ್ಟುಕೊಂಡು ರಚಿತವಾದ ಕಾದಂಬರಿಗಳೇ ಪ್ರಾದೇಶಿಕ ಕಾದಂಬರಿಗಳು. ನಾಂಜಿಲ್ ನಾಡನ್‌ರ 'ತಲೈಕೀಳ್ ವಿಕಿದಂಗಳ್', ನೀಲ ಪದ್ಮನಾಬನ್‌ರ 'ಪಳ್ಳಿ ಕೊಂಡಾಪುರಂ', ಪೊಣ್ಣೀಲನ್‌ರ 'ಉರವುಗಳ್', ಸೂರ್ಯಕಾಂತನ್‌ರ 'ಮಾನಾವಾರಿ ಮಣಿದರಗಳ್', ತೋಪ್ಪಿಲ್ ಮುಗದುಮ್ ಮಿರಾನ್‌ರ 'ಒರು ಕಡಲೋರ ಗ್ರಾಮತ್ತಿನ್ ಕದೈ', 'ದುರೈ ಮುಗಂಗಂಳ್', ಸು.ಸಮುದ್ರನ್‌ರ 'ಊರುಕ್ಕುಲ್ ಒರು ಪುರಟ್ಚಿ', ಕಿ.ರಾಜನಾರಾಯಣನ್‌ರ 'ಗೋಪಲ್ಲ ಗ್ರಾಮಂ', ಆರ್. ಸನ್ಮುಖ ಸುಂದರಂರ 'ಅರುವಡೈ', 'ಸಟ್ಟಿ ಸುಟ್ಟದಡಾ', ಪೂವೈ ಆರುಮುಗಂರ 'ತಂಗಚ್ ಸೊಂಬು', ಸೋಲೈ ಸುಂದರ್ ಪೆರಮಾಳ್‌ರ 'ಸೆನ್ನೆಲ್' ಮುಂತಾದ ಕಾದಂಬರಿಗಳನ್ನು ಗುರುತಿಸಬಹುದು.

ಸ್ತ್ರೀ ಕೇಂದ್ರಿತ ಕಾದಂಬರಿಗಳು

ಸ್ತ್ರೀ ಮುಖಂಡತ್ವ, ಸ್ತ್ರೀ ಹಕ್ಕು, ಸ್ವಾತಂತ್ರ್ಯ ಮತ್ತು ಮಹಿಳೆಯ ಕೌಟುಂಬಿಕ ಸಮಸ್ಯೆಗಳನ್ನು ಕುರಿತು ಸ್ತ್ರೀವಾದಿ ದೃಷ್ಟಿಕೋನದಲ್ಲಿ ಈ ಕಾದಂಬರಿಗಳನ್ನು ನೋಡಬಹುದು. ರಾಜಂ ಕೃಷ್ಣನ್‌ರ 'ವೇರುಕ್ಕು ನೀರ್', 'ಕುರಿಂಜಿತ್ತೇನ್', 'ಸೇಟ್ರಿಲ್ ಮಣಿದರ್‌ಗಳ್', 'ಮಾನುಡತ್ತಿನ್ ಮಕರಂದ್‌ಗಳ್', ವಿಂದನ್‌ರ 'ಪಾಲುಂ ಪಾವೈಯುಂ', ಜಯಕಾಂತನ್‌ರ 'ಸುಂದರ ಕಾಂಡಂ', ಪ್ರಪಂಚನ್‌ರ 'ಆನ್‌ಗಳೋಡು ಪೆಣ್‌ಗಳುಂ', ಕಾವೇರಿಯವರ 'ಆತ್ತುಕ್ಕು ಪೋಗನುಂ' ತ್ರಿಪುರ ಸುಂದರಂರವರ 'ಪೆಣ್' ಮುಂತಾದ ಕಾದಂಬರಿಗಳು ಹೆಣ್ಣಿನ ಹಕ್ಕುಗಳಿಗಾಗಿ ಗಂಡು-ಹೆಣ್ಣು ಇಬ್ಬರ ನಡುವಿನ ಬ್ರಹ್ಮಚರ್ಯದ ವಿಚಾರ, ಸ್ತ್ರೀ ಶಿಕ್ಷಣ ಮುಂತಾದ ವಿಚಾರಗಳ ಬಗ್ಗೆ ತಿಳಿಸುತ್ತದೆ.

ತಮಿಳು ಕಾದಂಬರಿಗಳಲ್ಲಿ ದಲಿತ ಸಂವೇದನೆ

ತಮಿಳು ಕಾದಂಬರಿಗಳಲ್ಲಿನ ದಲಿತ, ದಲಿತತ್ವ ಕುರಿತು ಸಂಕ್ಷಿಪ್ತವಾಗಿ ಪರಿಶೀಲಿಸಬಹುದು. ಪ್ರಾರಂಭದ ಕಾದಂಬರಿಯಾದ 'ಪ್ರತಾಪ ಮುದಲಿಯಾರ್ ಚರಿತ್ರಂ' ನಂತರ ತಮಿಳಿನಲ್ಲಿ ಹಲವು ಕಾದಂಬರಿಗಳು ಬಂದವು. ಇವೆಲ್ಲವೂ ಮೇಲ್ಜಾತಿಯವರ ಸಮಸ್ಯೆಗಳನ್ನು ಚಿತ್ರಿಸಿದವು.

೧೮೮೮ರಲ್ಲಿ ಅ. ಮಾದವಯ್ಯನವರ 'ಪದ್ಮಾವತಿ ಚರಿತ್ರಂ', 'ತಿಲ್ಲೈ ಗೋವಿಂದನ್', 'ಮುತ್ತು ಮೀನಾಕ್ಷಿ' ಮುಂತಾದ ಕಾದಂಬರಿಗಳು ಮೊದಲ ಬಾರಿಗೆ ದಲಿತರ ಬದುಕು ಮತ್ತು ಜೀವನವನ್ನು ದಾಖಲಿಸುವ ಪ್ರಯತ್ನ ಮಾಡುತ್ತವೆ.

'ಪದ್ಮಾವತಿ ಚರಿತ್ರಂ' ಕಾದಂಬರಿಯಲ್ಲಿ ದಲಿತರು ಮತಾಂತರ ಹೊಂದುವುದನ್ನು ಹೇಳಿ ಈ ಮತಾಂತರದಿಂದ ಯಾವುದೇ ಬದಲಾವಣೆ ಆಗದೆ ಮೊದಲಿನಂತೆ ಅಸ್ಪೃಶ್ಯ ಆಚರಣೆ ಜೀವಂತವಾಗಿರುವುದನ್ನು ಚಿತ್ರಿಸುತ್ತಾರೆ. ರಾಗಿ ಮುದ್ದೆ ದಲಿತರ ನಿತ್ಯದ ಆಹಾರವಾಗಿ ಕಂಡುಬರುತ್ತದೆ. ದಲಿತರು ಸತ್ತರೆ ಹೆಣ ಹೂಳಲು ಸಹ ಮೇಲ್ಜಾತಿಯರ ರುದ್ರಭೂಮಿ ಬಳಸುವಂತಿಲ್ಲ ಎನ್ನುವ ಸಾಂಪ್ರದಾಯಿಕ ಅನಿಷ್ಟಗಳನ್ನು ಕಾದಂಬರಿ ತಿಳಿಸುತ್ತದೆ. ಪಳ್ಳರ್, ಪರೈಯರ್, ಚಕ್ಕಲಿಯರ್, ಸಾನಾರ್ ಮುಂತಾದ ಜಾತಿಯವರು ಅಸ್ಪೃಶ್ಯತೆಯ ಶೋಷಣೆ ಅನುಭವಿಸಿ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದರೆ, ಅಸ್ಪೃಶ್ಯತೆಯಿಂದ ನಿವಾರಣೆ ಹೊಂದಬಹುದೆಂದು ನಂಬಿದ್ದರು. ಆದ್ದರಿಂದ ಸಾವಿರಾರು ಸಂಖ್ಯೆ ದಲಿತರು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಲು ಪ್ರಾರಂಭಿಸುತ್ತಾರೆ ಎಂಬ ವಿಷಯವು 'ಮುತ್ತು ಮೀನಾಕ್ಷಿ' ಎಂಬ ಕಾದಂಬರಿಯಿಂದ ತಿಳಿದುಬರುತ್ತದೆ. ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿ ಗುಲಾಮ ಜೀವನದಿಂದ ಮುಕ್ತಿ ಪಡೆಯುವ ಆಸೆಯ ಸಾನಾರ್ ಜಾತಿಯ ಯುವಕನೊಬ್ಬನು ದೀಕ್ಷಿತ(ಬ್ರಾಹ್ಮನ)ನ ಎದುರಲ್ಲಿ ನಡೆದು ಬರುತ್ತಾನೆ. ಕೀಳು ಜಾತಿಯ ಅಸ್ಪೃಶ್ಯ ಜನಾಂಗದ ಯುವಕ ಎದುರಿಗೆ ಬರುವುದನ್ನು ಸಹಿಸದೆ ಕೋಪಗೊಂಡ ದೀಕ್ಷಿತನು ತನ್ನ ಕೋಪವನ್ನು ಮರವರ್ ಜಾತಿಯವರಿಂದ ಸಾನಾರ್ ಜಾತಿಯ ಯುವಕನನ್ನು ಥಳಿಸುತ್ತಾನೆ. ಶೋಷಣೆಗೊಳಗಾದ ಸಾನಾರ್ ಯುವಕನು ಕ್ರೈಸ್ತ ಪಾದ್ರಿಯ ಸಹಾಯದಿಂದ ಮೊಕದ್ದಮೆ ಹಾಕಿ ನ್ಯಾಯ ಪಡೆಯುತ್ತಾನೆ ಎಂಬ ಅಂಶವನ್ನು 'ತಿಲ್ಲೈ ಗೋವಿಂದನ್' ಕಾದಂಬರಿಯಲ್ಲಿ ಕಾಣಬಹುದು.

ವ.ರಾಮಸ್ವಾಮಿಯವರ 'ಸುಂದರಿ', 'ಚಿಣ್ಣಚ್ಚಾಂಬು', 'ವಿಜಯಂ', 'ಗೋದೈತ್ ತೀವ್ರ' ಮುಂತಾದ ಕಾದಂಬರಿಗಳು ವಿಧವಾ ವಿವಾಹ, ಜಾತಿ ವಿನಾಶ ಮೊದಲಾದ ಅಂಶಗಳನ್ನು ತಿಳಿಸುತ್ತವೆ. ೧೯೨೭ರಲ್ಲಿ ಪ್ರಕಟಗೊಂಡ ಕಾ.ಸಿ.ವೆಂಕಟರಮಣಿಯವರ 'ಮುರಗನ್ ಓರ್ ಉಳವನ್' ಕಾದಂಬರಿಯು ಮುರಗನ್ ಎಂಬ ದಲಿತ ಪಾತ್ರವನ್ನು ಸಾರಾಯಿ ಮಾರುವವನಾಗಿ, ಕಳ್ಳನಾಗಿ ಚಿತ್ರಿಸಿದ್ದಾರೆ. ಅಲ್ಲದೆ ತಪ್ಪು ದಾರಿಯಲ್ಲಿ ಹಣ ಮಾಡುವ ಪಾತ್ರವಾಗಿ ಚಿತ್ರಿಸಿದ್ದಾರೆ, ಮೇಲ್ಜಾತಿಯ ಕೇದಾರಿ, ರಾಮಚಂದ್ರನ್ ಗುಮಾಸ್ಥ ಪದವಿಯಿಂದ ತಹಶೀಲ್ದಾರ್ ಆಗಿ ಬೆಳವಣಿಗೆ ಹೊಂದಿ ಎಲ್ಲರಿಗೂ ಒಳ್ಳೆಯದನ್ನು ಮಾಡುವವನಾಗಿಯೂ ಉತ್ತಮವಾಗಿ ಜೀವಿಸುವುದನ್ನು ಕಾಣಬಹುದು. ಇವರ ಮತ್ತೊಂದು 'ದೇಶಭಕ್ತನ್ ಕಂದನ್' ಕಾದಂಬರಿಯು ದೇಶದ ಸ್ವಾತಂತ್ರ್ಯ ಹೋರಾಟವನ್ನು ಮೂಲವಾಗಿಸಿಕೊಂಡಿದ್ದು, ದಲಿತರ ಮನಸ್ಥಿತಿಯನ್ನು ಕೀಳಾಗಿಯು ಮೇಲ್ಜಾತಿಯ ಮನಸ್ಥಿತಿಗಳನ್ನು ಉತ್ತಮವಾಗಿಯೂ ಚಿತ್ರಿಸಲಾಗಿದೆ. ಅಲ್ಲದೆ ದಲಿತರು "ನಂದನ್, ಮಾರನ್, ಕಾಟ್ಟೇರಿ ಎಂಬುವವರು ಹಳೆಯ ಪೆರುಚ್ಚಾಳಿ(ಇಳಿ) ಎಂದು

ಹೇಳಲಾಗುತ್ತಿದ್ದ ಕುಲದ ಮುಖಂಡರು. ಕಳ್ಳ(ಸಾರಾಯಿ)ನ್ನು ಆನಂದವಾಗಿ ಸೇವಿಸುತ್ತಾರೆ. ಇರುಳನ್ ಮತ್ತು ಕರುಪ್ಪನ್ ಕಾವಲುಗಾರನಾದ ಅಮಾವಾಸೆಯ ಜೊತೆಗೂಡಿ ಬಂದರು. ಇದರೊಂದಿಗೆ ಜಾತ್ರೆಯಲ್ಲಿ ಹರಿಜನರು ಇದ್ದರು. ಇವರಿಗೆ ಕಳ್ಳತನವೇ ಕೆಲಸ: ಕುಡಿಯುವುದೇ ಸಂಭ್ರಮ" (ಕಾಸಿ.ವೆಂಕಟರಮಣಿ, ದೇಶಭಕ್ತ ಕಂದನ್, ಪು. ೮) ಎಂದು ದಲಿತ ಪಾತ್ರಗಳನ್ನು ಕಳ್ಳರಾಗಿ, ಕುಡುಕರಾಗಿ ಚಿತ್ರಿಸಿದ್ದಾರೆ. ಆದರೆ ಗೋವಿಂದನ್, ಪಾವಾಡೈ, ನಲ್ಲಾನ್ ಇವರು ತಮ್ಮ ಸಂಬಂಧಿಕರೊಡನೆ ಸ್ವಲ್ಪ ಗೌರವವಾಗಿ ತಲೆ ತಗ್ಗಿಸಿ ಸಾರಾಯಿ ಅಂಗಡಿ ಒಳಗೆ ಹೋಗುತ್ತಾರೆ. ಇವರು ಪಡೈಯಾಚ್ಚಿ ಕುಲವನ್ನು ಸೇರಿದವರು. ನಾಯಕರು, ಅರಸರಾಗಿದ್ದ ಕಾಲದಲ್ಲಿ ಈ ಕುಲದವರು ಸೇರಿ, ಸೈನಿಕ ವೀರರಾಗಿದ್ದು ದೊಡ್ಡ ಹೆಸರು ತೆಗೆದುಕೊಂಡಿದ್ದರು ಎಂದು ಜಾತಿಗಳನ್ನು ಪರಿಚಯಿಸುವುದನ್ನು ಕಾಣಬಹುದು. ತಲಸ್ಪರ್ಶೀಯ ಕಥಾ ಪಾತ್ರಗಳನ್ನು ಕುಡುಕರಾಗಿ ಹೆಂಡತಿಯನ್ನು ಹೊಡೆಯುವವರಾಗಿ ಕರುಪ್ಪನ್ ಪಾತ್ರದ ಮೂಲಕ ತಿಳಿಸುತ್ತಾರೆ. "ಒಂದು ರೂಪಾಯಿಯನ್ನು ಒಡೆಯದೆ ಅಂಗಡಿಗೆ ತಂದು ಸೇರಿದೆ ಅಣ್ಣಾ! ಅವಳು ಕೈಗೆ ಗಾಜಿನ ಬಳೆ ಹಾಕಿಕೊಂಡು ಅತ್ತು ಪ್ರಾರ್ಥಿಸಿದಳು. ಪ್ರಾರ್ಥಿಸಿದ ಕೈಯನ್ನು ತಿರುಗಿಸಿ ಒಡೆದುಬಿಟ್ಟೆ, ಕೆನ್ನೆ ಮೇಲೆ ಒಂದು ಏಟು ಬಿಟ್ಟೆ. ಮಗ ಇಡ್ಲಿಗೆ ಹಣ ಕೇಳಿದ. ಬಾಯಿಯಲ್ಲೇ ಒಂದು ಏಟು ಹಾಕಿದೆ. ಒಂದು ಒದೆಯ ಕೊಟ್ಟೆ. ಇಲ್ಲಿದೆ ನೋಡು ಎಲ್ಲಾ ರೂಪಾಯಿ ನಾಲ್ಕು ದಿನ ಚೆನ್ನಾಗಿ ಕುಡಿದು ಮೈಮರೆತು ಸ್ವರ್ಗಕ್ಕೆ ಹೋಗೋಣ(ಅದೇ ಪು. ೧೩) ಎಂದು ಹೆಂಡತಿಯನ್ನು ಮಗುವನ್ನು ಹಿಂಸಿಸುವ ಕಠೋರ ಪಾತ್ರವಾಗಿ ಚಿತ್ರಿಸಲಾಗಿದೆ. ಅದರ ಜೊತೆಯಲ್ಲಿ ಅವರು ಕಳ್ಳತನ ಮಾಡುವುದರಲ್ಲಿ ಉತ್ಸಾಹಿತರಾಗಿದ್ದರೆಂದು ಕಾದಂಬರಿ ತಿಳಿಸುತ್ತದೆ. "ನಂದನ್, ಮೂಕ್ಕನ್, ಕಾಟ್ಟೇರಿ, ಇರುಳನ್, ಕರುಪ್ಪನ್, ಇರುಳಪ್ಪನ್ ಮುಂತಾದವರು ಒಂದೇ ಧ್ವನಿಯಾಗಿ "ಅಪ್ಪಾ! ಇದೇ ಒಳ್ಳೆಯ ಸಮಯ ಕಳ್ಳತನ ಮಾಡಲು ಯಜಮಾನನೂ ಊರಿನಲ್ಲಿ ಇಲ್ಲ. ಕಳ್ಳು ಸಹ ಇಂದು ಜಲದಂತೆ ಸಿಕ್ಕಿದೆ, ನಮ್ಮ ಕೂಲಿ ಭಾಗ್ಯ ಬರುವಂತೆ ಕಾಣಿಸುವುದಿಲ್ಲ. ಇವತ್ತೇ ಕೆಲಸವನ್ನು ಮುಗಿಸಿಬಿಡೋಣ" (ಅದೇ ಪು. ೩೬) ಎಂದು ಚಿತ್ರಿಸಲಾಗಿದೆ.

೧೯೪೪ರಲ್ಲಿ ಪಿ.ಎಂ.ರಾಜಗೋಪಾಲನ್‌ರ 'ಚರಕ' ಕಾದಂಬರಿಯಲ್ಲಿ ದೇವಿಪುರ ಎಂಬ ಗ್ರಾಮದ ದಲಿತರ ದೇವಾಲಯ ಪ್ರವೇಶಕ್ಕೆ ಸುಂದರ ಹಾಸನ್ ಎಂಬ ಮೇಲ್ಜಾತಿಯ ವಕೀಲನು ಮುಖ್ಯಸ್ಥನಾಗಿ ಕಾರ್ಯನಿರ್ವಹಿಸಿದ್ದನ್ನು ಕಾಣಬಹುದು. ೧೯೬೨ರಲ್ಲಿ ನಿತ್ಯಾನಂದನ್‌ರ 'ಊರ್‌ವಲಂ', ೧೯೬೫ರ ಮ.ಸಿ.ಕಲ್ಯಾಣ ಸುಂದರರ್‌ರ 'ಇರುಬದು ವರುಡಂಗಳ್', ೧೯೬೭ರ ಮುಂತಾದ ಕಾದಂಬರಿಗಳು ದಲಿತರ ದೇವಸ್ಥಾನ ಪ್ರವೇಶವನ್ನು ನ್ಯಾಯವಾಗಿ ಚಿತ್ರಿಸುತ್ತವೆ. ಅದಲ್ಲದೆ ಅಸ್ಪೃಶ್ಯತೆಯ ಶೋಷಣೆಯನ್ನು ಈ ಕಾದಂಬರಿಗಳು ಖಂಡಿಸುತ್ತವೆ. ಕಲ್ಕಿಯವರ 'ತ್ಯಾಗ ಭೂಮಿ'ಯಲ್ಲಿ ಸಾಂಬುಶಾಸ್ತ್ರಿ ಎಂಬ ಪಾತ್ರ ಜಾತಿ ಸಮಾನತೆಯನ್ನು ಬಯಸುವ ಪಾತ್ರವಾಗಿ ಕಂಡುಬರುತ್ತದೆ. ೧೯೬೬ರಲ್ಲಿ ಟಿ.ಸೆಲ್ವರಾಜ್‌ರ 'ಮಲರುಂ ಸರುಗುಂ' ಕಾದಂಬರಿ ಮಾಡಸಾಮಿ, ಈಸಾಕ್, ರಂಗನ್, ಮಾರಿಯಾಯ ಮುಂತಾದ ದಲಿತ ಪಾತ್ರಗಳು

ಕಾದಂಬರಿಯಲ್ಲಿ ಪ್ರಮುಖವಾಗಿವೆ. ಇವರ 'ತೇನೀರ್', 'ಮೂಲದಣಂ', 'ತೋಳ್' ಮತ್ತು 'ಅಗ್ನಿಕುಂಡಂ' ಕಾದಂಬರಿಗಳು ಎಡಪಂಥೀಯ ಚಿಂತನೆಗಳಲ್ಲಿ ಕಾರ್ಮಿಕ ವರ್ಗವನ್ನು ಮೂಲವಾಗಿಸಿಕೊಂಡ ಕಾದಂಬರಿಗಳಾಗಿವೆ. ೧೯೬೭ರಲ್ಲಿ ಪೊಣ್ಣೀಲಿನ್‌ರ 'ಕರಿಸಲ್', ೧೯೭೫ರಲ್ಲಿ ಕು.ಚಿನ್ನಪ್ಪ ಭಾರದಿಯವರ 'ದಾಂಗಂ', ೧೯೮೫ರಲ್ಲಿ ರಾಮಸಾಮಿಯವರ 'ತೋಳರ್' ಮುಂತಾದ ಕಾದಂಬರಿಗಳು ದಲಿತರ ಆರ್ಥಿಕ ಜೀವನ ಸುಧಾರಣೆಯನ್ನು ಕುರಿತು ಚರ್ಚಿಸುತ್ತವೆ. ದಲಿತರು ಆರ್ಥಿಕವಾಗಿ ಸದೃಢರಾದರೆ ಸಾಮಾಜಿಕವಾಗಿ ಸಮಾನತೆ ಸಾಧಿಸಬಹುದೆಂಬುದು ಈ ಕಾದಂಬರಿಗಳು ತಿಳಿಸುತ್ತವೆ.

ಇವುಗಳಲ್ಲದೆ ಈಳಂ ಸಾಹಿತ್ಯದ ಲೇಖಕರಾದ ಕೆ.ಮ್ಯಾಗಿಯಲ್ ಅವರು ದಲಿತ ಚಿಂತನೆಯನ್ನು ಕುರಿತು ಹಲವು ಕಥೆ, ಕಾವ್ಯ, ಕಾದಂಬರಿಗಳನ್ನು ರಚಿಸಿದ್ದಾರೆ. 'ಪಂಚಮರ್', 'ಕಾಣಲ್', 'ತನ್ನೀರ್', 'ಗೋವಿಂದನ್', 'ಅಡಿಮೈಗಳ್' ಮುಂತಾದ ಕಾದಂಬರಿಗಳು ದಲಿತರ ಜೀವನವನ್ನು ತಿಳಿಸುತ್ತವೆ. ಆದರೆ ಡ್ಯಾನಿಯಲ್ ಶ್ರೀಲಂಕಾದ ಲೇಖಕರಾಗಿದ್ದರಿಂದ ಇವರ ಕಾದಂಬರಿಗಳನ್ನು ತಮಿಳು ದಲಿತ ಕಾದಂಬರಿಯ ಪ್ರೇರಣೆಯಾಗಿ ಪಡೆಯಲಾಯಿತು. ಆದರೆ ದಲಿತ ಕಾದಂಬರಿಗಳಲ್ಲಿ ಇವರ ಕಾದಂಬರಿಗಳನ್ನು ಸೇರಿಸುವುದಿಲ್ಲ. ೧೯೭೭ರಲ್ಲಿ ಪೂಮಣಿಯವರ 'ಪಿರಗು' ಕಾದಂಬರಿಯು ದಲಿತ ಕಾದಂಬರಿ ಆಗಿವೆ. ಚಕ್ಕಲಿಯರ್ ಜಾತಿಯ ಜೀವನ ವಿಧಾನವನ್ನು ತಿಳಿಸುತ್ತದೆ. ಆದರೆ ಹಲವು ತಮಿಳು ದಲಿತ ವಿಮರ್ಶಕರು ಮತ್ತು ವಿದ್ವಾಂಸರ ಪ್ರಕಾರ ೧೯೯೦ರ ನಂತರ ಬಂದ ಕಾದಂಬರಿಗಳನ್ನು ಮಾತ್ರ ದಲಿತ ಕಾದಂಬರಿಗಳೆಂದು ಒಪ್ಪಿಕೊಂಡಿದ್ದಾರೆ. ಶಿವಗಾಮಿಯವರ 'ಪಳಯನ ಕಳಿದಲುಂ' ಕಾದಂಬರಿಯು ದಲಿತ ಸಾಹಿತ್ಯದ ಆರಂಭಿಕ ಕಾದಂಬರಿಯಾಗಿ ಪರಿಗಣಿಸಲ್ಪಟ್ಟಿದೆ.

ತಮಿಳು ದಲಿತ ಕಾದಂಬರಿಕಾರರು

ಶಿವಕಾಮಿ ಪ: 'ಪಳಯನ ಕಳಿದಳುಂ', 'ಆನಂದಾಯಿ', 'ಕುರುಕ್ಕು ವೆಟ್ಟು' ಎಂಬ ಮೂರು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಲ್ಲಿ ತಮುಳು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಸ್ತ್ರೀವಾದಿ ಚಿಂತನೆಯು ತಮಿಳಿನಲ್ಲಿ ಪ್ರವೇಶ ಪಡೆಯುತ್ತಿರುವಾಗಲೇ ಅದರ ಕೊಂಬೆಯಾಗಿ ದಲಿತ ಸ್ತ್ರೀವಾದವನ್ನು ತಮ್ಮ ಕಾದಂಬರಿಗಳಲ್ಲಿ ದಾಖಲಿಸುತ್ತಾರೆ. ಎಲ್ಲಾ ಸ್ತ್ರೀಯರ ನೋವು ಸಮನಾಗಿ ಇರಲಾರದು ಎಂಬ ಅಂಶವನ್ನು ತಮ್ಮ ಬರಹಗಳಲ್ಲಿ ತಿಳಿಸುತ್ತಾರೆ. ದಲಿತರಿಂದಲೇ ದಲಿತರ ಮೇಲೆ ನಡೆಯುತ್ತಿರುವ ಶೋಷಣೆಯನ್ನು ಸೂಕ್ಷ್ಮವಾಗಿ ಇವರ ಕಾದಂಬರಿಗಳಲ್ಲಿ ಕಾಣಬಹುದು. ನಾಗರೀಕತೆ ಬೆಳೆದಂತೆ ಒಂದು ಗ್ರಾಮ ತನ್ನ ಸಂಪ್ರದಾಯ (ಸಂಸ್ಕೃತಿ)ವನ್ನು ಹೇಗೆ ಬದಲಾಯಿಸುತ್ತಾ ಬಂದಿದೆ ಮತ್ತು ಗ್ರಾಮದ ಸ್ತ್ರೀಯರು ಮೂರು ತಲೆಮಾರುಗಳಲ್ಲಿ ನಡೆಯುವ ಜೀವನದ ಸಂಕಷ್ಟ ಸಮಸ್ಯೆಗಳು, ಗಂಡಸು ಎಷ್ಟೇ ತಪ್ಪು ಮಾಡಿದರು ಸಮಾಜ ಅವನನ್ನು ದಂಡಿಸುವುದಿಲ್ಲ. ಆದರೆ ಹೆಂಗಸು ತಪ್ಪು ಮಾಡಿದ್ದು ದೃಢವಾದರೆ ಅವಳು ಹೆಮ್ಮೆಯಿಂದ ಬಾಳಲು ಸಾಧ್ಯವಾಗದೆ ಗಂಡನಿಗೆ ತಗ್ಗಿ ಬಗ್ಗಿ

ನಡೆಯುವವಳಾಗಿ 'ಆನಂದಾಯ' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಶಿಕ್ಷಣ ಪಡೆದಾಗಲೇ ಸ್ತ್ರೀಯರು ಪುರುಷ ಎಂಬ ಅಂಶದಿಂದ ಹೊರಬರುತ್ತಾರೆ. ಶಿಕ್ಷಣದ ಅರಿವಿನಿಂದ ಅವಳ ದೇಹ ಅವಳಿಗೆ ಬಲಹೀನವಾಗಿ ಕಾಣಿಸುವುದಿಲ್ಲ ಎಂಬ ಅಂಶವನ್ನು ಸಿವಕಾಮಿಯವರ 'ಕುರುಕ್ಕು ವೆಟ್ಟು' ಕಾದಂಬರಿ ತಿಳಿಸುತ್ತದೆ.

ಬಾಮ: ೧೯೯೪ರಲ್ಲಿ **'ಸಂಗದಿ'**, ೨೦೦೨ರಲ್ಲಿ **'ವನ್‌ಮಮ್'** ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಮಧುರೈ ಜಿಲ್ಲೆಯ ಕಂಡಪಟ್ಟಿಯಲ್ಲಿ ನಡೆದ ನೈಜ ಘಟನೆಯನ್ನು ಆಧಾರವಾಗಿಟ್ಟುಕೊಂಡು ಬರೆದ ಕಾದಂಬರಿ 'ವನ್‌ಮಮ್'. ಈ ಕಾದಂಬರಿಯಲ್ಲಿ ಹೆಚ್ಚು ಭಾಗಗಳು ದಲಿತರ ನೋವು, ಶೋಷಣೆ, ಸಂಕಟಗಳನ್ನೇ ಚಿತ್ರಿಸುತ್ತವೆ. ತಮ್ಮನ್ನು ಹಿಂದುಗಳಾಗಿ, ಕ್ರೈಸ್ತರಾಗಿ ಗುರುತಿಸಿಕೊಳ್ಳುವ ಪಳ್ಳರ್-ಪರೈಯರ್ ಎಂಬ ಎರಡು ಜಾತಿಯವರು ಹಲವು ಕಾರಣಗಳಿಗೆ ಜಗಳ ಆಡುವುದನ್ನು ಚಿತ್ರಿಸುತ್ತದೆ. ಪಳ್ಳರ್‌ಗಳು ತಮ್ಮನ್ನು ದೇವೇಂದ್ರ ಕುಳ ವೇಳಾಳರ್ ಎಂದು ಗುರುತಿಸಿಕೊಂಡು ರಾಜರ ವಂಶ ತಮ್ಮದು ಎಂದು ತಿಳಿದುಕೊಂಡು ಇದರಿಂದ ತಮ್ಮನ್ನು ದಲಿತ ಎಂದು ಕರೆಯಿಸಿಕೊಳ್ಳದೆ ಇರುವುದನ್ನು ಕಾಣಬಹುದು. ಪರೈಯರ್‌ರು ಶಿಕ್ಷಣದ ಅರಿವು, ಆರ್ಥಿಕತೆಯಲ್ಲಿ ಮುಂದುವರೆಯಬೇಕೆಂಬ ಚಿಂತನೆಯಲ್ಲಿ ನಡೆಯುವುದರಿಂದ ಹೋರಾಟದ ಗುಣ ಹೊಂದಿರುವವರಾಗಿ ಚಿತ್ರಿಸಲಾಗಿದೆ. ದಲಿತ ಸ್ತ್ರಿಯರ ಸಮಸ್ಯೆಗಳನ್ನು 'ಸಂಗದಿ' ಕಾದಂಬರಿ ವಿವರಿಸುತ್ತದೆ. ದಲಿತರು ಮನಸ್ಸು ಕೆಡದೆ ಒಗ್ಗಟ್ಟಾಗಿ ತಮ್ಮ ಬಿಡುಗಡೆಗೆ ಹೋರಾಡಬೇಕೆಂದು 'ಸಂಗದಿ' ಕಾದಂಬರಿ ತಿಳಿಸುತ್ತದೆ.

ಇಮಯಂ: 'ಕೋವೇರು ಕಳುದೈಗಳ್' (೧೯೯೪), **'ಆರುಮುಗಂ'** (೧೯೯೯), **'ಸೆಡಲ್'** (೨೦೦೬) ಮೂರು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ದಲಿತರ ಜೀವನವನ್ನು ಮುಖ್ಯವಾಗಿರಿಸಿಕೊಂಡು ಬರೆಯಲಾಗಿದೆ. ಮತ-ಧರ್ಮಗಳಿಂದ, ಜಾತೀಯತೆಗಳಿಂದ ಪುರಾಣಗಳಿಂದ, ಇತಿಹಾಸ-ಚರಿತ್ರೆ ಐತಿಹ್ಯಗಳಿಂದ, ಕಟ್ಟಲಾಗಿರುವ ತಮಿಳು ಸಾಮಾಜಿಕ ಜೀವನವನ್ನು ತಿಳಿದುಕೊಳ್ಳಲು ಇವರ 'ಸೆಡಲ್' ಕಾದಂಬರಿ ಸಹಾಯವಾಗುತ್ತದೆ. ಮೂರು ಭಾಗಗಳಲ್ಲಿ ಈ ಕಾದಂಬರಿ ಪ್ರಕಟವಾಗಿದೆ. ಮಳೆ ಬಂದಿದ್ದ ಕಾರಣದಿಂದ 'ಸೆಡಲ್' ಎಂಬ ಚಿಕ್ಕ ಹುಡುಗಿಯನ್ನು ದೇವದಾಸಿಯನ್ನಾಗಿ ಮಾಡಿ ಅವರು ಪಡುವ ನೋವು-ಸಂಕಟವನ್ನು ಈ ಕಾದಂಬರಿ ವಿವರಿಸುತ್ತದೆ. ಜೀವನವನ್ನು ಉತ್ತಮವಾಗಿ ನಿರೂಪಿಸಿಕೊಳ್ಳಲು ದಲಿತರು ಮಾನ, ಶೀಲ ಮುಂತಾದವುಗಳಲ್ಲದ ಯಾವುದಾದರೂ ಒಂದನ್ನು ಕಳೆದುಕೊಳ್ಳುವುದನ್ನು 'ಆರುಮುಗಂ' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ಸೋ.ಧರ್ಮಿನ್: 'ಈರಂ' (೧೯೯೪), **'ತೂರ್ವೈ'** (೧೯೯೬), **'ಕೂಗೈ'** (೨೦೦೫), **'ಸೂಲ್'** ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಜಾತೀಯ ಸಮಸ್ಯೆಗಳು, ಕೌಟುಂಬಿಕ ಚಿತ್ರಣ, ಕಂಪನಿಗಳ ಪ್ರಾರಂಭ ಮತ್ತು ಅಧಿಕ ಶ್ರಮವನ್ನು ದೋಚುವುದು, ನಗರ ಜೀವನದ ಮೇಲಿನ

ಮೋಹ, ಸ್ತ್ರೀಯರ ಅಂತಸ್ತು ಮುಂತಾದ ವಸ್ತು ವಿಷಯಗಳನ್ನು ಮುಖ್ಯವಾಗಿಸಿಕೊಂಡು ಇವರ ಕಾದಂಬರಿಗಳು ರಚಿತವಾಗಿವೆ.

ಶ್ರೀಧರ ಗಣೇಶನ್: 'ಉಪ್ಪುವಯಲ್' (೧೯೯೬), **'ಅವುರಿ'** (೨೦೦೬), **'ವಾಂಗಳ್'** (೨೦೦೧), **'ಸಂದಿ'** ೨೦೦೧ ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ತೂತ್ತು ಕುಡಿ ಜಿಲ್ಲೆಯ ಪ್ರಾದೇಶಿಕ ಭಾಷೆಯನ್ನು ಬಳಸಿ ಉಪ್ಪು ತಯಾರಿಸುವ ಪ್ರದೇಶದ ವ್ಯವಸ್ಥೆ, ದಲಿತರ ಜೀವನ ಕ್ರಮ, ಮೀನು ಹಿಡಿಯುವವರ ಸ್ಥಿತಿ, ದಲಿತ ಸ್ತ್ರೀ ಪಾತ್ರವು ಮೇಲ್ಜಾತಿಯವರಿಗೆ ಪ್ರತಿರೋಧ ಒಡ್ಡುವ ಸೃಜನಶೀಲತೆ ಮತ್ತು ಅವರ ಕಾರ್ಯರೂಪಗಳು ಇವರ ಕಥಾವಸ್ತುಗಳಾಗಿವೆ.

ತಮಿಳು ದಲಿತ ಕಾದಂಬರಿಗಳ ಆಶಯ

ಒಂದೊಂದು ಕಾಲಘಟ್ಟದಲ್ಲೂ ದಿಗ್ಭ್ರಮೆಗೊಳಿಸುವ ಸತ್ಯಗಳನ್ನು ಎದುರುಗೊಳ್ಳುವ ಮೇಲ್ಜಾತಿಯ ಮನಸ್ಸುಗಳು ಸಾಮಾನ್ಯವಾಗಿ ಹಿಂದೇಟು ಹಾಕುತ್ತವೆ. ಆ ಮನಸ್ಥಿತಿಗೆ ಸತ್ಯವನ್ನು ಅರ್ಥಮಾಡಿಸಲು ಸಾಹಿತ್ಯದಲ್ಲಿ ಅನುಭವದಿಂದ ಬಂದ ನಿಜಾಂಶಗಳಲ್ಲಿ ಕಥನಗಳಿಂದ ಕೂಡಿದ ಕಾದಂಬರಿಗಳಿಂದ ಮಾತ್ರ ಸಾಧ್ಯ. ಈ ರೀತಿಯ ಉದ್ದೇಶದಿಂದ ತಮಿಳು ದಲಿತ ಕಾದಂಬರಿಗಳು ಬೆಳಕಿಗೆ ಬಂದವು. ತಮಿಳು ಕಾದಂಬರಿಗಳಲ್ಲಿ ದಲಿತರ ಕುರಿತ ಜೀವನವನ್ನು ತಿಳಿಸುವ, ಚಿತ್ರಿಸುವ ಅನೇಕ ಕಾದಂಬರಿಗಳು ಬಂದಿದ್ದರೂ ದಲಿತ ಕಾದಂಬರಿಗಳೆಂದು ನೋಡುವಾಗ ಇತರೇ ಕಾದಂಬರಿಗಳಲ್ಲಿನ ದಲಿತ ಪಾತ್ರಕ್ಕೂ ದಲಿತರೇ ಬರೆದ ದಲಿತ ಪಾತ್ರಕ್ಕೂ ಹಲವು ವ್ಯತ್ಯಾಸಗಳಿವೆ. ಆದ್ದರಿಂದ ಹುಟ್ಟಿನಿಂದ ದಲಿತನಾಗಿ ತಾನು ನೋಡಿದ ಮತ್ತು ಅನುಭವಿಸಿದ ಶೋಷಣೆಗಳನ್ನು ದಾಖಲಿಸುವುದು ದಲಿತ ಕಾದಂಬರಿಗಳಾದವು. ಈ ರೀತಿಯ ಕಾದಂಬರಿಗಳು ದಲಿತರ ಜೀವನ ವಿಧಾನವನ್ನು ಅವರ ಆಡುಭಾಷೆ (ಕೊಚ್ಚೈ ಮೊಳೆ)ಯಲ್ಲಿಯೇ ಚಿತ್ರಿಸುತ್ತವೆ. ದಲಿತರು ಬೇರೆ ಜಾತಿಯವರಿಂದ ಯಾವ ರೀತಿ ಶೋಷಣೆ ಅನುಭವಿಸಿದ್ದರು ಎಂಬುದನ್ನು ತಿಳಿಸುತ್ತದೆ. ದಲಿತ ಚಳವಳಿಗಳು, ಹೋರಾಟಗಳು ಹೇಗೆ ಆರಂಭವಾದವು, ಅವರಿಗೆ ಈ ರೀತಿಯ ಚಿಂತನೆ ಹೇಗೆ ಬೆಳೆಯಿತು, ಅದರ ಸಾಂಸ್ಕೃತಿಕ ರಾಜಕಾರಣದ ಸಂದರ್ಭ ಎಲ್ಲಿಂದ ಬಂದಿತು, ಆ ಹೋರಾಟಗಳು ಹೇಗಿರಬೇಕು ಎಂಬುದನ್ನು ತಿಳಿಸಿದವು. ದಲಿತರ ಸಂವೇದನೆ, ದುಃಖಭರಿತ ಜೀವನದ ಕೇಂದ್ರವನ್ನು ಹಿಡಿದಿಡುವಿಕೆ, ಅವರನ್ನು ಒಗ್ಗಟ್ಟಾಗಿ ಒಂದುಗೂಡಿಸುವಿಕೆ ಕಾದಂಬರಿಗಳಲ್ಲಿ ಅವರಿಗೆ ಸಾಮಾಜಿಕ ನ್ಯಾಯ ಸಿಗುವುದನ್ನು ಈ ಕಾದಂಬರಿಗಳು ಚಿತ್ರಿಸಿದವು.

ಎಲ್ಲಾ ಕಾದಂಬರಿಗಳು ದಲಿತರ ಜೀವನ ಕುರಿತದ್ದೇ ಆಗಿದ್ದರೂ ಒಂದೇ ಕಥಾವಸ್ತುವನ್ನಿಟ್ಟುಕೊಂಡ ಕಾದಂಬರಿಗಳಲ್ಲಿ ಓದುಗರಿಗೆ ಈ ಕಾದಂಬರಿಗಳನ್ನು ಓದಿದಾಗ ಹಲವು ರೀತಿಯ ಚಿಂತನೆಗಳು, ಚರ್ಚೆಗಳು ಬರುವುದು ಸಾಮಾನ್ಯ. ಕಾದಂಬರಿಗಳಲ್ಲಿ ಕಂಡುಬರುವ ವಸ್ತು, ಪಾತ್ರ, ಸನ್ನಿವೇಶ, ಪಾತ್ರಗಳಿಗೆ ವಿರೋಧವಾಗಿ ನಿಲ್ಲುವ ಬೇರೆ (ಮೇಲ್ಜಾತಿ) ಪಾತ್ರಗಳು ಎಲ್ಲವೂ ಒಂದು ಕಾದಂಬರಿಯಿಂದ ಮತ್ತೊಂದು ಕಾದಂಬರಿಗೆ ಬದಲಾಗಿರುವುದನ್ನು ಕಾಣಬಹುದು. ಕೆಲವು ಪ್ರಮುಖ ದಲಿತ ಕಾದಂಬರಿಗಳನ್ನು ಈ ಕೆಳಗೆ ನೋಡಬಹುದು.

'ಪಳಯನ ಕಳಿದಲುಂ'

೧೯೮೮ರಲ್ಲಿ ಪ್ರಕಟವಾದ ಶಿವಗಾಮಿಯವರ 'ಪಳಯನ ಕಳಿದಲುಂ' ಕಾದಂಬರಿಯನ್ನು ಮೊದಲ ದಲಿತ ಕಾದಂಬರಿಯಾಗಿ ಗುರುತಿಸುತ್ತಾರೆ. ಈ ಕಾದಂಬರಿಯು ಮುಖ್ಯವಾಗಿ ದಲಿತ ಸ್ತ್ರೀ ಶೋಷಣೆಯನ್ನು ಮುಂದಿಡುತ್ತದೆ. ಅಲ್ಲದೆ ತಲೆಮಾರುಗಳ (Generation Gap) ಅಂತರವನ್ನು ವಿವರಿಸುತ್ತದೆ. ಶಿಕ್ಷಿತರಲ್ಲದ ದಲಿತರು ಮತ್ತು ಶಿಕ್ಷಣ ಪಡೆದ ನಂತರ ದಲಿತರಲ್ಲಾದ ಬದಲಾವಣೆಗಳು, ಅಂತರ್‌ಜಾತಿಯ ವಿವಾಹಗಳು ಮುಂತಾದ ವಿಷಯಗಳನ್ನೊಳಗೊಂಡಿವೆ.

ಪುಳಿಯೂರಿನ ತಂಗಂ ಎಂಬ ಕೀಳು ಜಾತಿಗೆ ಸೇರಿದ ವಿಧವೆ ಹೆಂಗಸು, ಅದೇ ಊರಿಗೆ ಸೇರಿದ ಪರಂಜ್ಯೋತಿ ಉಡ್ಯೆಯಾರ್‌ರ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದಳು. ವಯಸ್ಸಾದ ಪರಂಜ್ಯೋತಿಯು ತಂಗಂಳ ಸಧೃಡ ದೇಹದ ಮೇಲೆ ಮೋಹಗೊಂಡು ಅವಳ ಒಪ್ಪಿಗೆ ಇಲ್ಲದೆ ಕೆಡಿಸಿಬಿಡುತ್ತಾನೆ. ತಂಗಂಳು ಪರಂಜ್ಯೋತಿ ತನ್ನ ಯಜಮಾನನಾದ್ದರಿಂದ, ಬೇರೆ ದಾರಿ ತಿಳಿಯದೆ ವಿರೋಧಿಸದೆ ಸುಮ್ಮನಾಗಿ ಬಿಡುತ್ತಾಳೆ. ಪರಂಜ್ಯೋತಿಗೆ ಆಸೆ ಬಂದಾಗಲೆಲ್ಲಾ ತಂಗಂಳನ್ನು ಬಳಸಿಕೊಳ್ಳುತ್ತಾನೆ. ಒಂದು ದಿನ ಈ ವಿಷಯ ಉಡ್ಯೆಯಾರ್‌ರ ಮನೆಗೆ ತಿಳಿದು ಉಡ್ಯೆಯಾರ್, ಮಾಣಿಕ್ಯ ಉಡ್ಯೆಯಾರ್, ಮಯಿಲ್‌ವಾಗನ ಉಡ್ಯೆಯಾರ್, ಪೆರುಮಾಳ್ ಉಡ್ಯೆಯಾರ್ ಎಂಬ ನಾಲ್ಕು ಜನರು ರಾತ್ರಿಯಲ್ಲಿ ತಂಗಂಳ ಮನೆಗೆ ಹೋಗಿ ಅವಳನ್ನು ಎಳೆದು ನಡುಬೀದಿಯಲ್ಲಿ ಹೊಡೆದು ಹಾಕಿ ಅಲ್ಲಿದ್ದ ಕೆಳಜಾತಿಯವರನ್ನು ಬೆದರಿಸಿ ಹೋಗಿಬಿಡುತ್ತಾರೆ. ತಂಗಂ ಅಂದು ರಾತ್ರಿಯಲ್ಲಿ ಪಕ್ಕದೂರಾದ ಅತ್ತೂರಿನ ಕಾತ್ತಮುತ್ತುವಿನ ಮನೆಗೆ ಹೋಗಿಬಿಡುತ್ತಾಳೆ.

ಕಾತ್ತಮುತ್ತು ಕೆಳಜಾತಿಯಲ್ಲಿ ಹುಟ್ಟಿದ್ದರೂ ಅಲ್ಪ ಸ್ವಲ್ಪ ಓದಿಕೊಂಡಿದ್ದು, ಸಮಾಜವನ್ನು ಅರಿತಿದ್ದನು. ತಮ್ಮ ಜನಾಂಗದವರಿಗೆ ಅನ್ಯಾಯವಾದರೆ ಅಥವಾ ಯಾವುದೇ ಸಮಸ್ಯೆಯಾದರೂ ಬಗೆಹರಿಸುತ್ತಿದ್ದನು. ಅಲ್ಲದೆ ರಾಜಕೀಯವಾಗಿ ಹಲವು ವ್ಯಕ್ತಿಗಳನ್ನು ಪರಿಚಯದಲ್ಲಿಟ್ಟುಕೊಂಡಿದ್ದನು. ಆದ್ದರಿಂದಲೇ ತಂಗಂ ಕಾತ್ತಮುತ್ತುವಿನ ಮನೆಗೆ ಹೋಗಿದ್ದಳು. ತಂಗಂ ತನಗಾದ ಅನ್ಯಾಯ ಎಲ್ಲವನ್ನು ಬಿಡಿಸಿ ಹೇಳುತ್ತಾಳೆ. ಈ ಪ್ರಕರಣವನ್ನು ಕಾತ್ತಮುತ್ತ ಪೊಲೀಸ್ ಠಾಣೆಯಲ್ಲಿ ನಡೆದದ್ದನ್ನು ಹಾಗೆ ಬದಲಿಸಿ 'ತಂಗಂ ಕುಡಿಯಾನ್ ಬೀದಿಗೆ ಮಲ ಮಾಡಲು ಹೋದಾಗ ಪರಂಜ್ಯೋತಿ ಉಡ್ಯೆಯರ್‌ರ ಹೆಂಡತಿ ಕಮಲಂ ಅವಳನ್ನು ಏನಲೇ ಪರ್‍ಯೈಚ್ಚಿಯೇ(ಕೀಳು ಕುಲದವಲೇ)? ಕುಡಿಯನ ಬೀದಿಯ ದಾರಿಯಲ್ಲಿ ಬರ್ತೀಯಾ?' ಎಂದು ಜಾತಿ ಹೆಸರು ಸೂಚಿಸಿ ಬೈದಂತೆ ಕಮಲಳ ಜೊತೆ ಅವಳ ಸಹೋದರರು ಕೂಡಿಕೊಂಡು ತಂಗಂಳನ್ನು ಹೊಡೆದು ಕೊಲೆ ಮಾಡಲು ಪ್ರಯತ್ನಿಸಿದರೆಂದು ದೂರು ದಾಖಲಿಸುತ್ತಾನೆ.

ಪೋಲೀಸಿನವರು ಪುಲಿಯಾರ್‌ಗೆ ಹೋಗಿ ಮೊದಲು ತಂಗಂಳ ಸಂಬಂಧಿಕರು ಮತ್ತು ಇತರೆ ದಲಿತರನ್ನು ವಿಚಾರಣೆ ನಡೆಸಿದ ನಂತರ ಪರಂಜ್ಯೋತಿ ಉಡ್ಯೆಯಾರ್ ಮನೆಗೆ ಹೋಗುತ್ತಾರೆ. ಉಡ್ಯೆಯಾರ್ ಪೋಲೀಸರಿಗೆ ಲಂಚಕೊಟ್ಟು ಸಮಸ್ಯೆಗೆ ಒಂದು ಪರಿಹಾರ ಹೇಳಿ ಎಂದು ಕೇಳಿದಾಗ ಅದಕ್ಕೆ ಅವರು 'ತಂಗಂ ನಿಮ್ಮ ಮನೆಯಲ್ಲಿ ರೇಡಿಯೋವನ್ನು, ಎರಡು

ಸಾವಿರ ಹಣವನ್ನು ಕಳ್ಳತನ ಮಾಡಿದ್ದಾಳೆಂದು ದೂರು ನೀಡಿ ಅದನ್ನು ಹೇಗಾದರೂ ಅವಳ ಮನೆಯಲ್ಲಿ ರಾತ್ರೋ ರಾತ್ರಿ ಇಟ್ಟುಬಿಡಿ ಉಳಿದದ್ದು ನಂತರ ನೋಡೋಣ' ಎಂದು ಸಲಹೆ ನೀಡಿ ಹೋಗುತ್ತಾರೆ. ಹೋಗುತ್ತಿದ್ದವರಲ್ಲಿ ಒಬ್ಬ ಪೋಲೀಸು ಮಾತ್ರ ಕಾತ್ತಮುತ್ತವಿನ ಎದುರು ಹಣದೊಂದಿಗೆ ಸಿಲುಕಿಕೊಳ್ಳುತ್ತಾರೆ. ಆಗ ಕಾತ್ತಮುತ್ತ 'ಪುಲಿಯಾರ್‌ಗೆ ವಿಚಾರಣೆಗೆ ಹೋಗಿದ್ದಿರಾ?' ಎಂದು ಕೇಳಿದಾಗ ಪೋಲೀಸಿನವನು ಸಿಟ್ಟಿನಿಂದ 'ಒಡ್ಯೆಯಾರ್ ಸಾಮಾನ್ಯ ಆಳು ಅಲ್ಲ. ಅವಳು ಕಳ್ಳತನ ಮಾಡಿದ್ದಾಳೆಂದು ಪೋಲೀಸಿನಲ್ಲಿ ಕಂಪ್ಲೇಂಟ್ ಕೊಡಲು ಹೋಗುತ್ತಾರಂತೆ ಎಂದು ಹೇಳಿ ಮುನ್ನಡೆಯುತ್ತಾನೆ. ವಿಷಯ ತಿಳಿದ ಕಾತ್ತಮುತ್ತ ತಂಗಂ ಮನೆಗೆ ರಕ್ಷಣೆ ಹಾಕಿಸುತ್ತಾನೆ. ರಾಜೇಂದ್ರನ್, ಕಾತ್ತನ್, ಚಿನ್ನಸಾಮಿ ಮುಂತಾದ ಯುವಕರು ತಂಗಂ ಮನೆಯನ್ನು ಮೂರು ದಿನಗಳವರೆಗೆ ಕಾಯುತ್ತಾರೆ. ಇವುಗಳ ನಡುವೆ ಪರಂಜ್ಯೋತಿಯ ಮನುಷ್ಯರು ತಂಗಂ ಮನೆಯಲ್ಲಿ ವಸ್ತುಗಳನ್ನು ಇಡಲು ಹೋಗುತ್ತಾರೆ. ಆದರೆ ಅವರು ಸಿಕ್ಕಿ ಹಾಕಿಕೊಂಡಾಗ ಪರಂಜ್ಯೋತಿಯು, 'ಬೆಳಗ್ಗೆ ಕೆಲಸಕ್ಕೆ ಜನರನ್ನು ಕರೆತರಲು ಕಳುಹಿಸಿದ್ದ ಆಳುಗಳನ್ನು ಕೇರಿ ಜನರು ಕೂಡಿ ಹೊಡೆದಿದ್ದಾರೆ, ಕತ್ತಿಯಿಂದ ಚುಚ್ಚಿದ್ದಾರೆ' ಎಂಬ ವದಂತಿಯನ್ನು ಹಬ್ಬಿಸುತ್ತಾರೆ. ಈ ವದಂತಿಯಿಂದ ಉಡ್ಯೆಯರ್, ಮುದಲಿಯಾರ್, ರೆಡ್ಡಿಯಾರ್, ಪಡ್ಯೆಯಾಚ್ಚಿ ಮುಂತಾದ ಎಲ್ಲಾ ಮೇಲು ಜಾತಿಯವರಿಗೂ ಕೇರಿ ಜನರ ಮೇಲೆ ಕೋಪ ಬಂದು ಜಾತಿ ಕಲಹ ಆಗುವಷ್ಟು ಮುಂದುವರೆಯುತ್ತದೆ. ಇದರಿಂದ ಮೇಲ್ಜಾತಿಯವರು ಕೇರಿ ಜನರನ್ನು ಕೆಲಸಕ್ಕೆ ಕರೆಯದೆ ಊರಿನ ಚಕ್ಕಲಿಯರ್ ಹೆಂಗಸರನ್ನು ಮತ್ತು ಪಕ್ಕದೂರಿನ ಕೆಲಸಗಾರರನ್ನು ಕರೆತಂದು ಹೆಚ್ಚು ಕೂಲಿ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಾರೆ. ಇದರಿಂದ ಕೇರಿ ಮತ್ತು ಊರಿನ ನಡುವಿನ ಸಂಬಂಧ ಮತ್ತಷ್ಟು ಹದಗೆಡುತ್ತದೆ. ಮುಂದೆ ನೋಡೋಣ ಎನ್ನುತ್ತಾ ಮುಂಬರುವ ಮಾರಿ ಜಾತ್ರೆಗೆ ಕೇರಿಯ ಜನ ಸಿದ್ಧವಾಗುತ್ತಾರೆ. ಇಂತಹ ಸಮಯದಲ್ಲಿ ಕಣ್ಣಮ್ಮ ಎಂಬ ಮಂದವಾದ ಕಣ್ಣಿನ ಮುದುಕಿ ರಾತ್ರಿಯಲ್ಲಿ ಗಂಜಿ ಮಾಡಿ ಒಲೆಯಲ್ಲಿ ಬೆಂಕಿ ಸರಿಯಾಗಿ ಆರಿಸದೆ ಹೋದ ಕಾರಣ ಅದು ಎಲ್ಲಾ ಮನೆಗಳಿಗೂ ಹರಡಿಕೊಳ್ಳುತ್ತದೆ. ಕಣ್ಣಮ್ಮ ಮುದುಕಿ ತನ್ನ ಮನೆಯನ್ನು ಯಾರೋ ಸುಟ್ಟಿದ್ದಾರೆ ಎಂದು ಶಾಪ ಹಾಕುತ್ತಾಳೆ. ಎಲ್ಲರೂ ಕುಡಿಯಾನ್ ಬೀದಿಯವರೇ ಬೆಂಕಿ ಇಟ್ಟಿದ್ದಾರೆಂದು ನಂಬುತ್ತಾರೆ. ಕೊನೆಗೆ ಪೊಲೀಸ್, ತಹಶೀಲ್ದಾರ್ ಇನ್ಸ್‌ಪೆಕ್ಟರ್ ಕೇರಿಗೆ ಬರುತ್ತಾರೆ. ತಹಶೀಲ್ದಾರರು, ಕುಡಿಯಾನ್ ಬೀದಿಯವರನ್ನು ಮತ್ತು ಕೇರಿ ಜನರನ್ನು ಕರೆದು ಪೋಲೀಸರ ನಡುವೆ ಪಂಚಾಯಿತಿಯಲ್ಲಿ ವಿಚಾರಣೆ ನಡೆಯುತ್ತದೆ. ಕೊನೆಗೆ ಕುಡಿಯಾನ್ ಬೀದಿಯವರು ಮತ್ತು ತಹಶೀಲ್ದಾರರು ಸುಟ್ಟ ಮನೆಗಳಿಗೆ ಹಣ ನೀಡುವುದಾಗಿ ಒಪ್ಪಿಕೊಳ್ಳುತ್ತಾರೆ.

ಇದರ ನಂತರ ತಂಗಂಳ ಸಮಸ್ಯೆ ಆತ್ತೂರಿನ ಕಾತ್ತಮುತ್ತುವಿನ ಮುಖಂಡತ್ವದಲ್ಲಿ ಪಂಚಾಯ್ತಿ ನಡೆಯುತ್ತದೆ. ಕೊನೆಗೆ ಉಡ್ಯೆಯರ್ ಹತ್ತು ಸಾವಿರ ತಂಗಂಳಿಗೆ ಕೊಟ್ಟ ನಂತರ ಸಮಸ್ಯೆ ಕೊನೆಗೊಳ್ಳುತ್ತದೆ. ಈ ಹಣದಲ್ಲಿ ಅರ್ಧ ಹಣವನ್ನು ಕಾತ್ತಮುತ್ತ ತಂಗಂಳಿಂದ ಸಾಲವಾಗಿ ಪಡೆದುಕೊಳ್ಳುತ್ತಾನೆ. ಉಳಿದ ಹಣವನ್ನು ಕಾತ್ತಮುತ್ತುವಿನ ಬಳಿಯಲ್ಲೇ ನೀಡಿ ತನಗೆ ಮಕ್ಕಳಿಲ್ಲದ

ಕಾರಣ ತನಗೆ ಗಂಡನ ಮನೆಯವರು ಭೂಮಿ ಕೊಡಲಿಲ್ಲ. ಅದರಿಂದ ಅದಕ್ಕೂ ಕೇಸು ಹಾಕಿ ಸ್ವಲ್ಪ ಭೂಮಿ ಕೊಡಿಸುವಂತೆ ಕೇಳಿಕೊಂಡು ಕಾತ್ತಮುತ್ತುವಿನ ಮನೆಯಲ್ಲಿಯೇ ಕೆಲಸ ಮಾಡುತ್ತಾ ಇರುತ್ತಾಳೆ.

ಒಂದು ದಿನ ಕಾತ್ತಮುತ್ತುವಿನ ಇಬ್ಬರು ಹೆಂಡತಿಯರು ಕುಡಿದು, ತಂಗಂಳಿಗೂ ಹಟ ಮಾಡಿ ಕುಡಿಸಿಬಿಡುತ್ತಾರೆ. ಅಂದು ರಾತ್ರಿ ತಂಗಂ ಸ್ವಲ್ಪ ಅಮಲೇರಿ ಮೂರ್ಛೆಯಲ್ಲಿದ್ದಾಗ ಕಾತ್ತಮುತ್ತು ಅವಳನ್ನು ಕೆಡಿಸಿಬಿಡುತ್ತಾನೆ. ಕೆಲವು ದಿನಗಳಲ್ಲಿ ತಂಗಂಳಿಗೆ ಅವಳ ಗಂಡನ ಮನೆಯಿಂದ ಭೂಮಿಯು ಸಿಗುತ್ತದೆ. ಆದರೂ ಬೇರೆ ದಾರಿ ಇಲ್ಲದೆ ತಂಗಂ ಕಾತ್ತಮುತ್ತುವಿಗೆ ಇಟ್ಟುಕೊಂಡವಳಾಗುತ್ತಾಳೆ.

ಕಾತ್ತಮುತ್ತುವಿನ ಮಗಳು ಗೌರಿಯು ಪ್ರಾಥಮಿಕ ಶಿಕ್ಷಣ ಮುಗಿಸಿ ಕಾಲೇಜಿಗೆ ಸೇರುತ್ತಾಳೆ. ಗ್ರಾಮದಲ್ಲಿರುವಂತೆ ಪಟ್ಟಣದಲ್ಲಿ ಜಾತಿ ಸಮಸ್ಯೆ ಇರುವುದಿಲ್ಲ ಎಂದು ತಿಳಿಯುತ್ತಾಳೆ. ಆದರೆ ಅಲ್ಲಿಯೂ ತನ್ನ ಸ್ನೇಹಿತರಲ್ಲಿಯೂ 'ಜಾತಿ' ಸಮಸ್ಯೆ ಇರುವುದನ್ನು ತಿಳಿದು ಬೇಸರಗೊಳ್ಳುತ್ತಾಳೆ.

ಕಾತ್ತಮುತ್ತುವಿನ ಅಣ್ಣ ಕಾಳಿಮುತ್ತುವಿನ ಮಗ ಚಂದ್ರನ ಮದುವೆ ನಿಶ್ಚಯವಾಗುತ್ತದೆ. ಕಾಳಿಮುತ್ತು ಚಿಕ್ಕ ವಯಸ್ಸಿನಲ್ಲಿಯೇ ಬೇರೆ ದೇಶಕ್ಕೆ ಹೋಗಿ ಅಲ್ಲಿ ಕೂಲಿ ಕೆಲಸ ಮಾಡಿ ಅಲ್ಲಿಯೇ ಒಂದು ಹುಡುಗಿಯನ್ನು ಮದುವೆ ಆಗಿದ್ದನು, ಅವರಿಬ್ಬರ ಮಗನೇ ಚಂದ್ರ. ಚಂದ್ರನ ತಾಯಿಯ ಮರಣದ ನಂತರ ಕಾಳಿಮುತ್ತು ತನ್ನ ಸ್ವಂತ ಊರಿಗೆ ಮರಳಿ ಬರುತ್ತಾನೆ. ಕಾತ್ತಮುತ್ತ ಅಣ್ಣ ಕಾಳಿಮುತ್ತು ಮರಳಿ ಬಂದದ್ದನ್ನು ಸಹಿಸದೆ ಅವರ ಮೇಲೆ ಇಲ್ಲ ಸಲ್ಲದ ಆರೋಪವನ್ನು ಮಾಡಿ ಮನೆಬಿಟ್ಟು ಹೊರಹಾಕುತ್ತಾನೆ. ಕಾಳಿಮುತ್ತ ಪಂಚಾಯ್ತಿ ನಡೆಸಿದರೂ ಕೊನೆಗೆ ಚಿಕ್ಕ ಮನೆ ಮಾತ್ರ ಅವನಿಗೆ ಸಿಗುತ್ತದೆ. ಚಂದ್ರ ರೈಸ್‌ಮಿಲ್‌ನಲ್ಲಿ ಕೆಲಸಕ್ಕೆ ಸೇರಿ ಕಾರ್ಮಿಕರೆಲ್ಲರನ್ನು ಒಂದು ಗೂಡಿಸಿ 'ರೈಸ್‌ಮಿಲ್ ಕಾರ್ಮಿಕರ ಸಂಘ' ಒಂದನ್ನು ಆರಂಭಿಸಿ ಕಾರ್ಮಿಕರಿಗೆ ಬರೆಯಲು, ಓದಲು ಕಲಿಸಿಕೊಡುತ್ತಾನೆ. ಅಲ್ಲದೆ ಚಂದಾ ವಸೂಲಿಮಾಡಿ ದಿನ ಪತ್ರಿಕೆಗಳನ್ನು ತರಿಸಿ ಅವರಿಗೆ ಓದುವಂತೆ ಪ್ರೇರೇಪಿಸುತ್ತಾನೆ. ಇದರಿಂದ ಎಲ್ಲರ ಮೆಚ್ಚುಗೆ ಪಡೆದು ಸಂಘದ ಮುಖಂಡನಾಗುತ್ತಾನೆ. ಕಾರ್ಮಿಕರೆಲ್ಲರು ಬಿಡುವಿನ ಸಮಯದಲ್ಲಿ ಕುಡಿದು ಕಾಲಹರಣ ಮಾಡದೆ ಲೋಕ ನಡವಳಿಕೆಯ ಕುರಿತು ಯಾವುದು ಒಳ್ಳೆಯದು, ಯಾವುದು ಕೆಟ್ಟದು ಎಂಬುದನ್ನು ಮಾತಾಡುತ್ತಾರೆ. ಕಾಳಿಮುತ್ತು ಮರಣದ ನಂತರ ಚಂದ್ರನಿಗೆ ಸಂಘವೇ ಸಂಪೂರ್ಣ ಜೀವವಾಗಿ ಬಿಟ್ಟಿತು. ಕೇರಿ ಯುವಕರೆಲ್ಲರು ಚಂದ್ರನ ಒಡನಾಡಿಗಳಾಗಿದ್ದಾರೆ. ಅಲ್ಲದೆ ಕೋನಾರ್, ಪಡ್ಯೆಯಚ್ಚಿ ಜಾತಿ ಯುವಕರು ಸಹ ಹಲವರು ಚಂದ್ರನಿಗೆ ಸ್ನೇಹಿತರಾಗಿದ್ದಾರೆ. ತಂಗಂಳ ವಿವಾದದಿಂದ ದೂರವಾಗಿದ್ದ ಪುಲಿಯಾರ್‌ನ ಇನಂಗೋ ಮತ್ತು ಇಲವೂರ್‌ನ ಲಲಿತಾ, ಚಂದ್ರ ಮತ್ತು ಸಭಾಪತಿಯವರ ಸಹಾಯದಿಂದ ಮತ್ತೆ ಒಂದಾಗಿ ಅಂತರ್ ಜಾತಿಯ ವಿವಾಹ ಮಾಡಿಕೊಳ್ಳುತ್ತಾರೆ.

ಚಂದ್ರನ ಮದುವೆಗೆ ಕೇರಿ ಜನರಲ್ಲದೆ ಇತರ ಜಾತಿ ಗೆಳೆಯರೂ ಬಂದಿದ್ದರು. ಕಾತ್ತಮುತ್ತ ಜಾತಿ ಹೆಸರಿನಲ್ಲಿ ಅವರೊಂದಿಗೆ ಜಗಳ ಆರಂಭಿಸಿದರೂ ಚಂದ್ರ ನಡುವೆ ಬಂದು ಎಲ್ಲರನ್ನು ಸಮಾಧಾನ ಪಡಿಸಿ ಬಂದ ಎಲ್ಲಾ ಗೆಳೆಯರಿಗೆ ಉಪಚರಿಸಿ ಕಾತ್ತಮುತ್ತವಿಗೆ ಪಾಠ ಕಲಿಸುತ್ತಾನೆ.

ಈ ಸುದ್ದಿ ನಲ್ಲಶಿವಂ ಪಡೈಯಾಚಿ ಮನೆಯಲ್ಲಿ ನಡೆದಿದ್ದ ವಣ್ಣಿಯ ಸಂಘಕ್ಕೂ ತಿಳಿಯುತ್ತದೆ. ನಲ್ಲಶಿವಂ ಆತ್ತೂರ್ ಪ್ರೌಢ ಶಾಲೆಯಲ್ಲಿ ಗಣಿತ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ವಣ್ಣಿಯರ್ ಜಾತಿ ವಿದ್ಯಾರ್ಥಿಗಳ ಮೇಲೆ ಮಾತ್ರ ಅಕ್ಕರೆ ಇರುವವರು. ವಣ್ಣಿಯ ಯುವಕರು ಕಾರ್ಖಾನೆಯಲ್ಲಿರುವ ಸಂಘದಲ್ಲಿ ಇದ್ದರೂ ಜಾತಿ ಸಂಘಕ್ಕೆ ತಕ್ಕಂತೆ ನಡೆದುಕೊಳ್ಳಬೇಕು ಎಂಬ ಉದ್ದೇಶ ಉಳ್ಳವರಾಗಿದ್ದರು. ಅವರ ಬಳಿ ಓದಿ ದೊಡ್ಡ ಕೆಲಸದಲ್ಲಿ ಇರುವ ವಣ್ಣಿಯ ವಿದ್ಯಾರ್ಥಿಗಳ ಒಗ್ಗಟ್ಟಾಗಿಸಿ ಮೀಟಿಂಗ್ ನಡೆಸುತ್ತಾರೆ. ಆಗ ಅವರು ಹರಿಜನರು ತಮಗಿಂತ ಸಮೂಹ ಏಣಿಯಲ್ಲಿ ಕೆಳಗಿದ್ದರು. ಆದರೆ ಕೆಲಸ ಸಿಗುವುದರಲ್ಲಿ ಮೀಸಲಾತಿಯ ಕಾರಣದಿಂದ ಆರ್ಥಿಕವಾಗಿ ಒಂದು ಹೆಜ್ಜೆ ಮುಂದು ಸಾಗಿದ್ದಾರೆ ಎಂಬ ಅಂಕಿ ಅಂಶಗಳ ವಿವರಗಳನ್ನು ನೀಡುತ್ತಾರೆ. ನಲ್ಲಶಿವಂ ಹರಿಜನರು ವಣ್ಣಿಯರನ್ನು ಹಿಂದೆ ಸರಿಸಿ ಬಿಡುತ್ತಾರೆ ಎಂಬ ಅಂಶವನ್ನ ಊರಿನ ತುಂಬಾ ಹರಡುತ್ತಿದ್ದಾರೆ.

ಅಶೋಕನ್, ಪಾತರಾಜ್, ಮಣಿವೀರನ್, ಉಮಾ ಕಾಂತನ್ ಮುಂತಾದ ನಾಲ್ಕು ವಣ್ಣಿಯ ಕುಲ ಯುವಕರು ನಲ್ಲಶಿವನಿಗೆ ತಮ್ಮ ಬೆಂಬಲ ಸೂಚಿಸದೆ ಇದ್ದಾರೆ.

ಹತ್ತು ವರ್ಗಗಳಲ್ಲಿ ಹಲವು ಬದಲಾವಣೆಗಳು ನಡೆಯುತ್ತದೆ. ಜನರ ಮನಸ್ಸಿನಲ್ಲಿ ಹಲವು ಬದಲಾವಣೆಗಳು ಆಗಿವೆ. ವರದಕ್ಷಿಣೆ ಸಮಸ್ಯೆಯನ್ನು ತಿಳಿದೂ ತಿಳಿಯದೆ ಇರುವ ಸರ್ಕಾರಕ್ಕೆ ತಿಳಿಯುವಂತೆ ಮಾಡಲು ಹೆಂಗಸರು ಕಣ್ಣುಗಳನ್ನು ಕಟ್ಟಿಕೊಂಡು ಮೆರವಣಿಗೆ ಹೋಗುತ್ತಾರೆ.

ನಲ್ಲಶಿವಂ ಮನೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಕ್ಕೆ ಅಂದು ನಾಲ್ಕು ಜನರಿಂದ ಮಾತ್ರ ವಿರೋಧ ವ್ಯಕ್ತವಾಗಿತ್ತು. ಆದರೆ ಇಂದು ಅದೇ ಅತ್ತೂರಿನಲ್ಲಿ ನಲವತ್ತು ಸಾವಿರ ಧ್ವನಿಗಳು ಕೇಳಿಸುತ್ತದೆ.

ಜಗಳ ಮಾಡಿಕೊಂಡು ಬೇರೇನು ಸಾಧಿಸಲು ಆಗದ ಬಿಡಿ ಬಿಡಿಯಾಗಿದ್ದ ಜಾತಿ ಸಂಘಗಳು ಎಲ್ಲವೂ ತಲಸ್ಪರ್ಶೀಯ-ಬಡತನ ಜಾತಿಗಳು ಪ್ರಬಲವಾದ ಚಳುವಳಿಯಾಗಿ ಬದಲಾಗಿದೆ.

ಕಾತ್ತಮುತ್ತ ಈಗ ಹಲ್ಲು ಕಿತ್ತ ಹಾವಿನಂತಾಗಿದ್ದಾರೆ. ಚಲನಚಿತ್ರ ನಾಯಕನೊಬ್ಬನು ಆರಂಭಿಸಿರುವ ಪಕ್ಷದಲ್ಲಿ ಎಂ.ಎಲ್.ಎ. ಆಗುವ ಆಲೋಚನೆಯಲ್ಲಿ ಇದ್ದಾರೆ.

ಎಂ.ಎ., ಪಿಎಚ್.ಡಿ. ಮುಗಿಸಿ ತಾನು ಓದಿದ ಕಾಲೇಜಿನಲ್ಲಿಯೇ ಶಿಕ್ಷಕಿಯಾಗಿದ್ದಾಳೆ ಗೌರಿ. ತನ್ನ ತಂದೆ ತಮ್ಮ ಇಬ್ಬರು ಹೆಂಡತಿಯರಿಗೆ ನಡೆಸಿದ ಶೋಷಣೆಯಿಂದ ಮದುವೆಯ ಆಸೆಯನ್ನೇ ತೊರೆದಿದ್ದಾಳೆ. ಸ್ತ್ರೀ ಅಭಿವೃದ್ಧಿ, ಮಹಿಳಾ ಸಬಲೀಕರಣ, ತಲಸ್ಪರ್ಶೀಯ ಜನರ

ಕೀಳು ಜಾತಿಯ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೇವೆ ಮಾಡುವುದರಲ್ಲಿ ತನ್ನನ್ನು ಪರಿಪೂರ್ಣವಾಗಿ ತೊಡಗಿಸಿಕೊಂಡಿದ್ದಾಳೆ. ಇದರಿಂದ ಸಮಾಜದಲ್ಲಿ ಕ್ರಾಂತಿ ನಡೆದು ಜೀವನವನ್ನು ತಲೆಕೆಳಗಾಗಿಸುತ್ತಿದೆ ಎಂಬ ನಂಬಿಕೆಯಿಂದ ಇದ್ದಾಳೆ. ಗೌರಿ ತನ್ನ ತಂದೆಯ ಸ್ತ್ರೀ ಶೋಷಣೆಯನ್ನು ಕ್ರಮವಾಗಿ ಖಂಡಿಸುತ್ತಾಳೆ. ಅಲ್ಲದೆ ದಲಿತ ಚಳುವಳಿಗೆ ತನ್ನ ಬರಹದ ಮೂಲಕ ಪ್ರೇರಣೆ ನೀಡುತ್ತಿದ್ದಾಳೆ. ಚಂದ್ರ, ಗೌರಿ, ಶೇಖರ್, ಇನಂಗೋ, ಸಭಾಪತಿ, ಲಲಿತಾ ಮುಂತಾದ ಯುವ ಪೀಳಿಗೆಯ ಸ್ವಚ್ಛ ಮನಸ್ಸುಗಳು ಬೆಳೆಯಬೇಕೆಂದು ಕಾತ್ತಮುತ್ತು, ನಲ್ಲಶಿವಂನಂತವರು ಅಳಿಯಬೇಕೆಂದು ಕಾದಂಬರಿ ತಿಳಿಸುತ್ತದೆ. ಪಳಯನ್ ಕಳಿದಲುಂ ಎಂದರೆ ಹಳೆಯದನ್ನು ಕಳೆಯುವುದು ಎಂಬುದಾಗಿ ಅರ್ಥ ಕೊಡುತ್ತದೆ. ಈ ಕಾದಂಬರಿಯನ್ನು ತಮಿಳ್ ಸೆಲ್ವಿಯವರು ಕನ್ನಡಕ್ಕೆ 'ಸಂಕ್ರಾಂತಿ' ಎಂಬ ಶೀರ್ಷಿಕೆಯಲ್ಲಿ ಅನುವಾದಿಸಿದ್ದಾರೆ.

ಕೋವೇರು ಕಳುದೈಗಳ್

೧೯೯೪ರಲ್ಲಿ ಪ್ರಕಟಗೊಂಡ ಇಮಯಮ್‌ರ 'ಕೋವೇರು ಕಳುದೈಗಳ್' ದಲಿತರಲ್ಲಿಯೇ ದಲಿತರು ಶೋಷಣೆ ಮಾಡುವ ಕಾದಂಬರಿ. ಆರೋಗ್ಯಂ 'ಕೋವೇರು ಕಳುದೈಗಳ್' ಕಾದಂಬರಿಯ ದಲಿತ ಕಥಾ ನಾಯಕಿ. ಅವಳಿಗೆ ಬಂದೊದಗುವ ದುಃಖ ಮತ್ತು ಅಳುವಿನ ಸ್ವರವೇ 'ಕೋವೇರು ಕಳುದೈಗಳ್' ಕಾದಂಬರಿಯಲ್ಲಿ ಬರುವ ಆರೋಗ್ಯಂ ಮತ್ತು ಅವಳ ಗಂಡ ಸವುರಿ ತೀಟ್ಟುಕ್ಕುಡಿ ಎಂಬ ಗ್ರಾಮದ ಪರೈ ಅಗಸರು (ಪರೈಯರ್ ಬಟ್ಟೆ ಒಗೆಯುವ ಕೆಲಸ). ಆರೋಗ್ಯಂ ಚಿಕ್ಕ ವಯಸ್ಸಿನಲ್ಲಿದ್ದಾಗಲೇ ಸವುರಿಗೆ ಮದುವೆ ಮಾಡಿಕೊಡಲಾಗುತ್ತದೆ. ನಾಲ್ಕು ವರ್ಷಗಳ ನಂತರವೇ ಅವಳು ಋತುಮತಿ ಆಗುತ್ತಾಳೆ. ಸವುರಿಯ ತಂದೆ ತಾಯಿಯರ ಮರಣದ ನಂತರ ಮನೆಯ ಜವಾಬ್ದಾರಿ ಆರೋಗ್ಯಂ ಮೇಲೆ ಬೀಳುತ್ತದೆ. ಸವುರಿಯ ನಾಲ್ಕು ತಂಗಿಯರನ್ನು ಮದುವೆ ಮಾಡಿ ಕಳುಹಿಸುತ್ತಾಳೆ. ಇವರಲ್ಲಿ ತೆರೆಸಾ ಎಂಬುವವಳು ಮಾತ್ರ ಆರೋಗ್ಯಂಳನ್ನು ನೆನೆದುಕೊಳ್ಳುವವಳಾಗಿದ್ದಳು. ಆದರೂ 'ಮನುಷ್ಯರೇ ನಮಗೆ ದೊಡ್ಡ ಆಸ್ತಿ' ಎನ್ನುವುದು ಅವಳ ಭಾವನೆ. ತನ್ನ ಮಗ ಜೋಸೆಫ್‌ಗೆ ಸುಂದರವಾದ ಸಗಾಯಂಳನ್ನು ಯಾವುದೇ ವರದಕ್ಷಿಣೆ ಇಲ್ಲದೆ ಸೊಸೆಯಾಗಿ ಸ್ವೀಕರಿಸುತ್ತಾಳೆ.

ಸವುರಿ ಮತ್ತು ಆರೋಗ್ಯಂ ತೀಟ್ಟುಕುಡಿ ಕಾಲನಿ ಬೀದಿಯ ಜನರ ಹೊಲಸು ಬಟ್ಟೆ ಒಗೆಯುವುದರ ಜೊತೆಯಲ್ಲಿ ಸತ್ತವರಿಗೆ ಚಟ್ಟ ಕಟ್ಟುವುದು, ಸತ್ತಾಗ ಅಕ್ಕಿಯನ್ನು ಚಲ್ಲುತ್ತಾ (ವಾಯ್‌ಕರಿಸಿ) ಸಾಗುವುದು, ಸತ್ತ ಸುದ್ದಿ ತಿಳಿಸುವುದು, ಯಾರಿಗಾದರೂ ಎದೆ ಕಟ್ಟಿದ್ದರೆ ಅದಕ್ಕೆ ವೈದ್ಯ ನಡೆಸುವುದು, ಹರಿದ ಬಟ್ಟೆಗಳನ್ನು ಹೊಲಿದು ಕೊಡುವುದು, ಹೆರಿಗೆ ಮಾಡಿಸುವುದು, ಧಾನ್ಯಗಳನ್ನು ಶುದ್ಧ ಮಾಡಿ ಕೊಡುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು. ಆದರೆ ಇದೆಲ್ಲದ್ದಕ್ಕೂ ಅಲ್ಪ ಪ್ರಮಾಣದ ಕೂಲಿಯೇ ಸಿಗುತ್ತಿತ್ತು.

ಒಂದು ದಿನವೂ ಬಿಡುವು ಸಿಗದ ಕಾರಣ ಆರೋಗ್ಯಂ ಎಂದಾದರೂ ಒಂದು ದಿನ ಮೇಲನಾರಿಪ್ಪನೂರ್ ಅಂತೋನಿ ಚರ್ಚಿಗೆ ಹೋಗುವ ಸಮಯ ಸಿಗದಿದ್ದಕ್ಕೆ ಆರೋಗ್ಯಂ

ದುಃಖಿಸುತ್ತಾಳೆ. ಜೋಸೆಫ್ ಮದುವೆಯ ನಂತರದ ಕೆಲವೇ ದಿನಗಳಲ್ಲಿಯೇ ಸಗಾಯಂಳ ಜೊತೆ ಚಿನ್ನ ಸೇಲಂಗೆ ಹೋಗಿಬಿಡುತ್ತಾನೆ. ಇವರೊಂದಿಗೆ ಕುಟುಂಬದ ವರಮಾನವೂ ಕುಂಠಿತಗೊಳ್ಳುತ್ತದೆ. ಅಲ್ಲದೆ ಹೊಸದಾಗಿ ಪ್ರಾರಂಭವಾದ ಹೊಲಿಗೆ ಅಂಗಡಿ, ಬಟ್ಟೆ ಒಗೆಯುವ ಯಂತ್ರದ ಅಂಗಡಿಗಳು ತೀಟ್ಟುಕುಡಿಗೆ ಬಂದಿರುವುದರಿಂದ ಇವರ ಆದಾಯ ಕಡಿಮೆಯಾಗಿ ಬಿಡುತ್ತದೆ.

ದಿನವೂ ಊರಿನೂಟ ತರಲು, ಹೊಲಸು ಬಟ್ಟೆ ತರಲು ಆರೋಗ್ಯಂಳ ಮಗಳು ಮೇರಿ ಮತ್ತು ಅವಳ ತಮ್ಮ ಕುಡಿತನ ಬೀದಿಗೆ ಹೋಗುತ್ತಾರೆ. ಒಂದು ದಿನ ಒಬ್ಬಂಟಿಯಾಗಿ ಬಂದ ಮೇರಿಯನ್ನು ಪರೈಯರ್ ಜಾತಿಯ ಸಡೈಯನ್ ಮೋಸಗೊಳಿಸಿ ಕೆಡಿಸಿಬಿಡುತ್ತಾನೆ. ಇದನ್ನು ತಿಳಿದ ಆರೋಗ್ಯಂ ತನ್ನ ಗಂಡನಿಗೆ ತಿಳಿಸದೆ ದುಃಖಿಸುತ್ತಾಳೆ. ಕೆಲವು ತಿಂಗಳು ಕಳೆದು ಸವುರಿಯ ತಂಗಿ ತೆರೆಸಾಳ ಮಗನಾದ ದೃವಿಯರಾಸುವಿಗೆ ಜೋಸೆಫ್‌ನ ಯಾವುದೇ ಸಹಾಯ ಪಡೆಯದೆ ಕೈಯಲ್ಲಿ ಇದ್ದ ಆಹಾರ ಧಾನ್ಯಗಳನ್ನು ಮಾರಿ ಬಂದ ಹಣದಿಂದ ಮದುವೆ ಮಾಡಿಸುತ್ತಾಳೆ.

ಮೇಲನಾರಿಯಪ್ಪನೂರ್ ಸಾಮಿಯ ಚರ್ಚಿನ ಅಡಿಗೆ ಮಾಡುವವನು ಬಂದು ಪೀಟರ್‌ನ್ನು ಚೆನ್ನಾಗಿ ಓದಿಸುವುದಾಗಿ ಸಾಮಿಯು ಕರೆದು ತರುವಂತೆ ಹೇಳಿದ್ದಾರೆ ಎನ್ನುತ್ತಾನೆ. ಆದರೆ ಸವುರಿ ಆರೋಗ್ಯಂ ಇದನ್ನು ಒಪ್ಪುವುದಿಲ್ಲ. ಮಗನು ತಮ್ಮ ಮುಂದೆಯೇ ಇರಲಿ ಎಂದು ಆಸೆ ಪಡುತ್ತಾರೆ. ಆದರೆ ಕೆಲವು ದಿನಗಳಲ್ಲಿ ಪೀಟರ್, ಆರು ಮುಗಂ ಎಂಬ ಕಾಲನಿ ಬೀದಿಯ ಹುಡುಗನೊಂದಿಗೆ ಸೇರಿ ಚೆನ್ನೈಗೆ ಓಡಿ ಹೋಗಿಬಿಡುತ್ತಾನೆ.

ಆರೋಗ್ಯಂ ಅನಾಥೆಯಾಗಿಬಿಟ್ಟೆ ಎಂದು ದುಃಖಿಸುತ್ತಾಳೆ. ಸವುರಿ ಮಾತ್ರ ಆಗಾಗ್ಗೆ ಮಗನನ್ನು ನೋಡಲು ಸೇಲಂಗೆ ಹೋಗಿ ಬರುತ್ತಿದ್ದಾನೆ. ಆರೋಗ್ಯಂಳನ್ನು ಕರೆದುಕೊಂಡು ಹೋಗುತ್ತೇನೆ ಎಂದು ನೆಪಕ್ಕೆ ಮಾತ್ರ ಹೇಳುತ್ತಾನೆ, ಆದರೆ ಕರೆದೊಯ್ಯುವುದಿಲ್ಲ. ಕೆಲವು ವರ್ಷಗಳ ನಂತರ ದೃವಿಯರಾಸುವಿಗೆ ಹಾವು ಕಚ್ಚಿ ಸತ್ತು ಹೋಗುತ್ತಾನೆ. ಆಧಾರವಿಲ್ಲದ ಮೇರಿಯನ್ನು ಅವಳ ಕೈಗೂಸನ್ನು ತಮ್ಮೊಡನೆ ಕರೆತರುತ್ತಾರೆ. ಎಂದಾದರೂ ಒಂದು ದಿನ ಮೇಲನಾರಿಯಪ್ಪ ನೂರ್ ಸಾಮಿಯು ಬಂದು ತಮ್ಮ ಬಡತನಕ್ಕೆ ಸಹಾಯ ಮಾಡುತ್ತಾರೆ ಎಂಬ ನಂಬಿಕೆಯು ಇಲ್ಲದ ಕಾರಣ ಸಿಕ್ಕ ಸ್ವಲ್ಪ ಹೊಲಸು ಬಟ್ಟೆ ಗಂಟನ್ನು ತಲೆಯಲ್ಲಿ ಹೊತ್ತುಕೊಂಡು ಜೊತೆಗೆ ಮೇರಿಯ ಕೈಗೂಸಿನ ಜೊತೆ ಹೊಟ್ಟೆಪಾಡಿಗಾಗಿ ಹೇಸರುಗತ್ತೆಗಳಂತೆ ಮೂವರು ಹೋಗುತ್ತಾರೆ.

'ಕೋವೇರು ಕಳುದೈಗಳ್' ಕಾದಂಬರಿಯಲ್ಲಿ ಆರೋಗ್ಯಂಳ ಸಂಕಷ್ಟ ನಮ್ಮನ್ನು ಅತಿಯಾಗಿ ಕಾಡಿಸುತ್ತದೆ. ಹಿಂದಿನ ಸಾಮಾಜಿಕ ಚೌಕಟ್ಟಿನೊಳಗಿದ್ದ ಆರೋಗ್ಯಂಳಿಗೆ ಗುಲಾಮತನದಿಂದ ಬಿಡುಗಡೆ ಇಲ್ಲ. ಯಜಮಾನತ್ವವೂ ಗ್ರಾಮದೊಳಗೆ ನುಗ್ಗಿ ಆರೋಗ್ಯಂಳಿಗೆ ಹೆಚ್ಚು ಕಷ್ಟ

ನೀಡುತ್ತದೆ. ಆರೋಗ್ಯಂ ಅಳುತ್ತಿದ್ದಾಳೆ. ಮನುಷ್ಯನನ್ನು ಈ ರೀತಿಯಲ್ಲಿ ಹರಿದು ಹಾಕುವ ಸಾಮಾಜಿಕ ನಡವಳಿಕೆ ನಮಗೆ ಬೇಕಾಗಿಲ್ಲ. ಅರೋಗ್ಯಂಳ ಸಂಕಷ್ಟ ನಮ್ಮ ಎದೆಯನ್ನು ಸುಡುತ್ತದೆ." (ಸಣ್ಮುಗ ಸುಂದರಂ. ಸು, ದಲಿತ್ತಯಂ, ಪು. ೩೪) ಎಂದು ಸಣ್ಮುಗ ಸುಂದರಂರವರು ಕಾದಂಬರಿಯನ್ನು ಕುರಿತು ವಿಮರ್ಶಿಸಿರುವುದನ್ನು ಕಾಣಬಹುದು.

ಇಮಯಂರ 'ಕೋವೇರು ಕಳುದೈಗಳ್' ಕಾದಂಬರಿಯನ್ನು ಜಯಲಲಿತಾರವರು 'ಹೇಸರುಗತ್ತೆಗಳು' ಎಂದ ಕನ್ನಡಕ್ಕೆ ಅನುವಾದಿಸಿದ್ದಾರೆ.

ಕಳಿಸಡೈ

೨೦೦೩ ರಲ್ಲಿ ಪ್ರಕಟವಾದ ಅರಿವಳಗನ್‌ರ 'ಕಳಿಸಡೈ' ಕಾದಂಬರಿಯು ಅರುಂದಿಯರ್‌ರ ಜೀವನ ಕ್ರಮವನ್ನು, ತೋಟ್ಟಿ ಕೆಲಸದಲ್ಲಿ ಎದುರಾಗುವ ಸಮಸ್ಯೆಗಳನ್ನು ತಿಳಿಸುತ್ತದೆ. ಮುನಿಯನ್ ಎಂಬುವನು ಗ್ರಾಮ ಮುಖಂಡನ ದನಗಳನ್ನು ಮೇಯಿಸುವ ಗುಲಾಮನಾಗಿದ್ದನು, ಇವನ ಹೆಂಡತಿ ಆವೈ, ಮಗ ರಾಸಪ್ಪನ್. ರಾಸಪ್ಪ ಹೆತ್ತವರ ಬಡತನದ ಕಾರಣದಿಂದ ಪ್ರಾರಂಭಿಕ ಶಿಕ್ಷಣವನ್ನು ಪೂರೈಸಲಾಗದೆ ಗ್ರಾಮ ಮುಖಂಡನ ಮನೆಯ ಗುಲಾಮನಾಗುತ್ತಾನೆ. ಮುನಿಯನು ಮೇಲ್ಜಾತಿಯ ತೊನ್ನು ರೋಗದವನೊಂದಿಗೆ ಸ್ನೇಹದಿಂದ ಇದ್ದುದ್ದರಿಂದ ಅವನಿಗೆ ಸಹಾಯ ಮಾಡುತ್ತಾ ಮನೆಗೆ ಹೆಚ್ಚು ಬರುತ್ತಿರಲಿಲ್ಲ. ಆವೈ ಅಸ್ತಮ ರೋಗಿದಿಂದ ಬಳಲುತ್ತಾ, ಯಾರೂ ಇಲ್ಲದ ಕಾರಣ ಮಗನಿಗೆ ಬಿಸಿನೀರು ಕಾಯಿಸಿ ಕೊಡುವಂತೆ ಕೇಳುತ್ತಾಳೆ. ರಾಸಪ್ಪನು ಒಲೆಯಲ್ಲಿ ಬೆಂಕಿಗಿಂತ ಹೊಗೆ ಹೆಚ್ಚಿಸಿ ಬಿಸಿನೀರು ಮಾಡಿಕೊಡುತ್ತಾನೆ. ಪಕ್ಕದ ಮನೆಯ ಪಿಲ್ಲಿ ಮಾಯಮಂತ್ರ ಮಾಡುವ ಮುದುಕಿಯನ್ನು ಸಹಾಯಕ್ಕೆ ಕರೆತಂದನು. ಅವಳು ಉಪ್ಪು, ಮೆಣಸಿನಕಾಯಿ ಮುಂತಾದವುಗಳನ್ನು ಆವೈಯ ತಲೆಯಲ್ಲಿ ಸುತ್ತಿ, ಉರಿಯುತ್ತಿರುವ ಬೆಂಕಿಯಲ್ಲಿ ಹಾಕುತ್ತಾಳೆ. ರಾಸಪ್ಪ ಹಚ್ಚಿದ ಹೊಗೆಯಿಂದ ಮುದುಕಿ ಹಾಕಿದ ಕಾರ ಘಾಟಿನಿಂದ ಅಸ್ತಮಾ ಹೆಚ್ಚಾಗಿ ಆವೈ ಸತ್ತು ಹೋಗುತ್ತಾಳೆ. ಕಾಲ ಕಳೆದಂತೆ ರಾಸಪ್ಪನು ಊರಿನ ದನಗಳನ್ನು ಮೇಯಿಸುತ್ತಾನೆ.

ತನ್ನ ಸ್ವಂತ ಕುಟುಂಬದಿಂದ ತ್ಯಜಿಸಲ್ಪಟ್ಟು, ಊರಿನ ಹೊರಗಡೆ ತಳ್ಳಿ ಇರಿಸಿದ್ದ ಮೇಲ್ಜಾತಿ ತೊನ್ನು ರೋಗದ ಸ್ನೇಹಿತನು ಕಷ್ಟ ತಡಿಯಲಾಗದೆ, ಮುನಿಯನ ಕಾಲು ಹಿಡಿದು ಮೊರೆಯಿಟ್ಟ ಕಾರಣದಿಂದ ಮುನಿಯನು ಮರುಗಿ, ಅವರಿಗೆ ನೇಣು ಹಾಕಿಕೊಳ್ಳಲು ಸಹಾಯ ಮಾಡುತ್ತಾನೆ. ಜಾತಿಯ ಕೋಪದಲ್ಲಿ ಮುಳುಗಿದ್ದ ಮೇಲ್ಜಾತಿಯವರು, ಮುನಿಯನ್ ತೊನ್ನು ರೋಗದವನ ಆಸ್ತಿಯನ್ನು ಬರೆಯಿಸಿಕೊಂಡಿದ್ದಾನೆಂದು ಅದಕ್ಕಾಗಿ ಅವರನ್ನು ಕೊಲೆ ಮಾಡಿದ್ದಾನೆ ಎಂದು ಮುನಿಯನ್‌ನನ್ನು ಹೊಡೆದು ಸೆರೆಮನೆಗೆ ತಳ್ಳುತ್ತಾರೆ. ರಾಸಪ್ಪನನ್ನು ಕೊಲೆಗಾರನ ಮಗನೆಂದು ಹೇಳಿ ಹೊಡೆಯಲು ಮುಂದಾಗುತ್ತಾರೆ. ಅವನು ಅವರಿಂದ ತಪ್ಪಿಸಿಕೊಂಡು ಊರು ಬಿಟ್ಟು ನಗರಕ್ಕೆ ಪಲಾಯನ ಮಾಡಿ ಒಂದು ಬೀದಿಯಲ್ಲಿ ಮೂರ್ಛೆ ಹೋಗಿ ಬಿದ್ದಿರುತ್ತಾನೆ. ಮೂರ್ಛೆ

ಹೋಗಿದ್ದ ರಾಸಪ್ಪನನ್ನು ಕೊಂಡ್ಯೆಯಮ್ಮ ನೋಡಿ ಅವನನ್ನು ತನ್ನ ಮನೆಗೆ ಕರೆತರುತ್ತಾಳೆ. ತನ್ನ ತಂದೆಯ ಬಳಿ ವಿವರಿಸಿ ನಗರಾಡಳಿತದಲ್ಲಿ ತೊಟ್ಟಿ ಹುದ್ದೆಯನ್ನು ಕೊಡಿಸುತ್ತಾಳೆ. ತನ್ನ ಸೋದರ ಮಾವನಾದ ಸುಡಲ್ಯೆಯನ್ನು ಮದುವೆ ಆಗುವಂತೆ ತಾಯಿ ಒತ್ತಾಯಿಸಿದರೂ ಅದನ್ನು ತಿರಸ್ಕರಿಸಿ ಹನುಮಂತುವಾಗಿ ಬದಲಾಗಿದ್ದ ರಾಸಪ್ಪನನ್ನು ಮದುವೆ ಆಗುತ್ತಾಳೆ.

ಕೊಂಡ್ಯೆಯಮ್ಮ, ಹನುಮಂತುವಿಗೆ ಹುಟ್ಟಿದ ಮೊದಲ ಮಗುವು ತೀರಿಕೊಳ್ಳುತ್ತದೆ. ತಿಪ್ಪೆಯಲ್ಲಿ ಬಿದ್ದಿದ್ದ ಒಂದು ಹೆಣ್ಣು ಮಗುವನ್ನು ತೆಗೆದು ತಮ್ಮ ಮಗಳಾಗಿ ಸ್ವೀಕರಿಸಿ ಲಕ್ಷ್ಮೀ ಎಂದು ಹೆಸರಿಟ್ಟು ಸಾಕುತ್ತಾರೆ. ಇವರಿಗೆ ಲಕ್ಷ್ಮಿಯ ನಂತರ ಸೀನಯ್ಯ, ಆದಯ್ಯ, ಕೇಸವೇಲು, ಮಾತ್ತೈಯ್ಯ ಎಂಬ ನಾಲ್ಕು ಗಂಡು ಮಕ್ಕಳು ಹುಟ್ಟುತ್ತಾರೆ. ಮೊದಲ ಮಗ ಸೀನಯ್ಯ ತನ್ನ ಓದನ್ನು ಮುಂದುವರೆಸದೆ ಕೇರಿಯ ಪೋಕರಿಯಾಗುತ್ತಾನೆ. ಇವನಿಂದ ಮನೆಗೆ ಯಾವುದೇ ಆದಾಯವಿರಲಿಲ್ಲ. ಕೊನೆಯ ಮಗ ಮಾತ್ತೈಯ್ಯ ರೋಗಿಯಾಗಿದ್ದನು, ಆದ್ದರಿಂದ ಔಷಧಿಯ ಖರ್ಚು ಹೆಚ್ಚುತ್ತಿತ್ತು. ಹನುಮಂತು ಮಲ ತೆಗೆಯುವ, ತಿಪ್ಪೆ ಎತ್ತುವ ಕೆಲಸ ಮಾಡುತ್ತಿದ್ದರಿಂದ ಮಲದ ವಾಸನೆಯನ್ನು ತಾಳಿಕೊಳ್ಳಲಾಗದೆ ಮಧ್ಯಪಾನ ಮಾಡಲು ಆರಂಭಿಸುತ್ತಾನೆ. ಅಭ್ಯಾಸ ಹೆಚ್ಚುತ್ತಾ ಉಬ್ಬಸರೋಗ ಬರುತ್ತದೆ. ಇದರಿಂದ ಕುಟುಂಬದ ಆದಾಯ ಕುಂಠಿತಗೊಳ್ಳುತ್ತದೆ. ಜೊತೆಗೆ ಕೆಲಸ ಮಾಡುತ್ತಿದ್ದ ಭೀಮಾ ಕೊಂಪೈಯ್ಯ ಮುಂತಾದವರ ಬಳಿ ತೆಗೆದುಕೊಂಡ ಸಾಲ, ಬಡ್ಡಿಯೂ ಹೆಚ್ಚುತ್ತದೆ. ಹನುಮಂತು ಸಾಲಬಾದೆ, ಕಾಸರೋಗದ ಸಂಕಷ್ಟ, ಮಧುಪಾನದ ದಾಸ ಮುಂತಾದ ಕಾರಣಗಳಿಂದ ಕೆಲಸಕ್ಕೆ ಸರಿಯಾಗಿ ಹೋಗಲು ಆಗುವುದಿಲ್ಲ. ಸಮಯಕ್ಕೆ ಬಾರದ ಕಾರಣದ ಮೇಲೆ ಮೇಸ್ತ್ರಿಗಳು ಸರಿಯಾಗಿ ಲೆಕ್ಕ ನೀಡದೆ ಕೂಲಿಯನ್ನು ಕಡಿತಗೊಳಿಸುವುದರಲ್ಲಿ ಹೆಚ್ಚು ಆಸಕ್ತಿ ಉಳ್ಳವರಾಗಿದ್ದರು.

ಕೊಂಡ್ಯೆಯಮ್ಮಳು ರಾಸಮಾಣಿಕ್ಯಂ ಎಂಬ ಯುವಕನ ಬಳಿಯಲ್ಲಿ ಕೌಟುಂಬಿಕ ಖರ್ಚಿಗಾಗಿ ತೆಗೆದುಕೊಂಡ ಸಾಲವನ್ನು ಮರಳಿ ಕೊಡಲಾಗದೆ ಅವನ ಜೊತೆ ಲೈಂಗಿಕವಾಗಿ ಸಂಪರ್ಕವಿಟ್ಟುಕೊಳ್ಳುತ್ತಾಳೆ. ಇದನ್ನು ತಿಳಿದ ಹನುಮಂತು ಕೊಂಡ್ಯೆಯಮ್ಮಳನ್ನು ಒಡೆದು ಕಷ್ಟ ಕೊಡುವುದರೊಂದಿಗೆ ಹೆಚ್ಚು ಮಧ್ಯಪಾನಕ್ಕೆ ಬಲಿಯಾಗುತ್ತಾನೆ. ಮನಸ್ಸಿನ ಚಿಂತೆ, ಮಧುವಿನ ಅಮಲಿನಿಂದ ದೇಹದ ಆರೋಗ್ಯ ಹದಗೆಡುತ್ತದೆ, ದವಾಖಾನೆಯಲ್ಲಿ ದಾಖಲಾಗುತ್ತಾನೆ. ಆದರೆ ಕೊಂಡ್ಯೆಯಮ್ಮ ತನಗೆ ಕಷ್ಟ ಕೊಟ್ಟದ್ದನ್ನು ಮರೆತು ಹನುಮಂತುವನ್ನು ಆಸ್ಪತ್ರೆಯಲ್ಲಿ ಚೆನ್ನಾಗಿ ಆರೈಕೆ ಮಾಡುತ್ತಾಳೆ. ಹೆಂಡತಿ ಕೊಂಡ್ಯೆಯಮ್ಮಳನ್ನು ತಾನು ಕಂಡ ಮೊದಲ ದಿನದಿಂದ ಅವಳು ಮಾಡಿದ ಸಹಾಯವನ್ನು ನೆನೆಯುತ್ತಾನೆ. ತನ್ನ ಕುಟುಂಬಕ್ಕಾಗಿ ಅವಳು ಪಟ್ಟ ಶ್ರಮವನ್ನು ನೆನೆದು ಅವಳನ್ನು ನಾಯಿಗಿಂತ ಕೇವಲವಾಗಿ ಹೊಡೆದು ನೋವು ಕೊಟ್ಟಿದ್ದಕ್ಕೆ ದುಃಖ ಪಡುತ್ತಾನೆ. ಈ ಸಮಯದಲ್ಲಿ ಮನೆಗೆ ಆಸರೆಯಾಗಿ ಮಗಳು ಲಕ್ಷ್ಮಿ ಕುಟುಂಬವನ್ನು ಕಾಯುತ್ತಾಳೆ. ಇದರೊಂದಿಗೆ ಪಕ್ಕದ ಮನೆಯ ವಿಸಾಲಂ ಮುಂತಾದವರು ಹನುಮಂತುವಿನ ಕುಟುಂಬಕ್ಕೆ ಸಹಾಯ ಮಾಡುತ್ತಾರೆ.

ಹನುಮಂತು ಚಿಕ್ಕವಯಸ್ಸಿನಲ್ಲಿ ತನ್ನೊಡನೆ ಆಡಿದ ಗ್ರಾಮ ಮುಖಂಡನ ಮಗ ಕುಮಾರ್ ನಗರಾಡಳಿತದ ಕಛೇರಿಗೆ ಆಫೀಸರ್ ಆಗಿ ಬಂದು ಪರಿಚಯವಾದಾಗ ಸಮಾಧಾನ ಪಡುತ್ತಾನೆ. ಮಗ ಸೀನಯ್ಯ ತನ್ನ ತಾಯಿ ಕೊಂಡ್ಯೆಯಮ್ಮಳ ಮಾತಿನಿಂದ ಬದಲಾಗುತ್ತಾನೆ. ನಗರಾಡಳಿತ ಕಛೇರಿಯ ಅಧಿಕಾರಿ ಕುಮಾರ್‌ರ ಮೂಲಕ ಸೀನಯ್ಯನಿಗೆ ಕೆಲಸ ಸಿಗುತ್ತದೆ ಎಂದು ನಂಬುತ್ತಾನೆ ಹನುಮಂತು. ಈ ನಡುವೆ ಪಾಯಖಾನೆಯ ಬಾವಿಯ ತಡೆಯನ್ನು ನೀಗಿಸುವ ಕೆಲಸದಲ್ಲಿ ನಡೆದ ಅಪಘಾತದಲ್ಲಿ ತನ್ನ ಕಣ್ಣ ಮುಂದೆಯೇ ಸೀನಯ್ಯನು ಸಾಯುತ್ತಾನೆ. 'ತಾನು ಸತ್ತಿದ್ದರೂ ಹಣ ಬರುತ್ತಿತ್ತು ಮಗನಿಗೆ ಕೆಲಸವೂ ಸಿಕ್ಕಿರುತ್ತಿತ್ತು ಆದರೆ ಹೀಗೆ ಆಯಿತೆ' ಎಂದು ಹೇಳಿ ಮತ್ತೆ ಮಧ್ಯಪಾನ ಮಾಡಿ ಅಳುತ್ತಾ 'ಸೀನಯ್ಯ ಮಗ ಸೀನಯ್ಯ' ಎಂದು ಮತಿ ಭ್ರಾಂತಿಕನಂತೆ ಹನುಮಂತು ಹೋಗುತ್ತಾನೆ. "ಮನುಷ್ಯನ ಮಲವನ್ನು ಮನುಷ್ಯನೇ ತೆಗೆಯುವುದು ಎಂತಹ ಸಂಕಟ, ಅದರ ದುರ್ವಾಸನೆ ಅವನೊಂದಿಗೆ ಅವನ ಕುಟುಂಬದ ಹೊರಗೂ ಮನಸ್ಸಿನ ಒಳಗೂ ಹೋಗುತ್ತದೆ ಎಂಬ ಚಿತ್ರವನ್ನು ಅತಿ ಸರಳವಾಗಿ ಕಳಿಸಡ್ಯೆಯಲ್ಲಿ ವಿವರಿಸಲಾಗಿದೆ." (ರಾಮಸಾಮಿ. ಅ., ತಮಿಳ್ ದಲಿತ್ ಇಲಕ್ಕಿಯಂ, ಪು. ೧೫) ಎಂದು ರಾಮಸಾಮಿ ಈ ಕಾದಂಬರಿಗೆ ವಿಮರ್ಶೆ ಬರೆದಿರುವುದು ಸರಿಯಾಗಿ ಹೊಂದಿಕೆಯಾಗುತ್ತದೆ.

ಉಪ್ಪು ವಯಲ್

೧೯೯೫ ರಲ್ಲಿ ಪ್ರಕಟವಾದ ಶ್ರೀಧರ ಗಣೇಶನ್‌ರವರ 'ಉಪ್ಪು ವಯಲ್' ಕಾದಂಬರಿಯಲ್ಲಿ ಉಪ್ಪು ತಯಾರಿಸುವ ಸ್ಥಳದಲ್ಲಿ ಕೆಲಸ ಮಾಡುವ ಪರ‍್ಯೆಯರ್‌ನ್ನು ಕೇಂದ್ರವಾಗಿಸಿಕೊಂಡು ಕಥೆ ಹೆಣೆಯಲಾಗಿದೆ. ವಡಿವಚ್ಚಿ ಉಪ್ಪು ವಯಲ್‌ನ ನಾಯಕಿ. ಕೂಲಿ ಕೆಲಸಗಾರಳಾದ ವಡಿವಚ್ಚಿಗೆ ಉಪ್ಪಲದಲ್ಲಿ ಏರ್ಪಡುವ ಮಾಲೀಕನ ಲೈಂಗಿಕ ಕಿರುಕುಳದಿಂದ ತಪ್ಪಿಸಿಕೊಂಡು ಬಂದು ಅದನ್ನು ತನ್ನ ತಾಯಿಯ ಬಳಿ ವಿವರಿಸುತ್ತಾಳೆ. ತಾಯಿ ಮತ್ತೆ ಉಪ್ಪಲದಲ್ಲಿ ಕೆಲಸಕ್ಕೆ ಹೋಗುವುದು ಬೇಡವೆಂದು ಸೂಚಿಸುತ್ತಾಳೆ. ಎರಡು ದಿನಗಳ ನಂತರ ಗೆಳತಿ ಮಲ್ಲಿಕಾಳು ವಡಿವಚ್ಚಿ ಕೆಲಸಕ್ಕೆ ಬಾರದ ಕಾರಣವನ್ನು ತಿಳಿದು ಅವಳಿಗೆ ನಡೆದ ಅನ್ಯಾಯವನ್ನು ವಿರೋಧಿಸಬೇಕೆಂದು ನಿರ್ಣಯಿಸುತ್ತಾರೆ. ಈ ವಿಷಯ ತಿಳಿದ ವಡವಚ್ಚಿಯ ತಾಯಿ ಪೂವದಿ ಮನಸ್ಸಿಲ್ಲದೆ ಇಬ್ಬರ ಮಾತಿಗೆ ಸಮ್ಮತಿಸುತ್ತಾಳೆ. ಇಬ್ಬರೂ ಸೇರಿ ಈ ಸಮಸ್ಯೆಯನ್ನು ಕಾರ್ಮಿಕ ಸಂಘದವರೆಗೆ ತೆಗೆದುಕೊಂಡು ಹೋಗಿ ನಡೆದದ್ದನ್ನು ಹೇಳುತ್ತಾರೆ. ಅಲ್ಲಿದ್ದ ಕಾಂಮ್ರೆಡ್ ತಾತಾ ವಡಿವಚ್ಚಿಗೆ ಲೈಂಗಿಕ ಕಿರುಕುಳ ಕೊಟ್ಟ ವ್ಯಕ್ತಿ ಯಾರೆಂದು ತಿಳಿದುಕೊಳ್ಳುತ್ತಾನೆ. ಮುಂದೆ ಕೆಲವು ದಿನಗಳ ನಂತರ ಪೋಲೀಸ್ ವಿಚಾರಣೆಯಲ್ಲಿ ಮಲ್ಲಿಕಾ ಮತ್ತು ವಡಿವಚ್ಚಿ ನಡೆದದ್ದನ್ನು ವಿವರಿಸುತ್ತಾರೆ. ಕೊನೆಗೆ ಲೇಬರ್ ಕಮಿಷನ್ ಕಾರ್ಯಾಲಯಕ್ಕೆ ಹೋಗಿ ತಮ್ಮ ದೂರನ್ನು ನೀಡುತ್ತಾರೆ. ಯಾರಿಗೆ ಏನೇ ಸಮಸ್ಯೆ ಬಂದರೂ ಮುಂದೆ ನಿಲ್ಲುವ ಸಹಾಯ ಹಸ್ತ ನೀಡುತ್ತಿದ್ದುದು ಆ ಊರಿನ ಯುದ್ಧ ವೀರನೆಂದು ಪ್ರಸಿದ್ಧವಾಗಿದ್ದ ಮಧುರೈ ವೀರನ್. ಇವನು ಕಾಂಮ್ರೆಡ್ ತಾತಾರಂತೆ ಪ್ರಶಂಸೆ ಗಳಿಸಿದ್ದ. ದಲಿತರಿಗೆ ಸಹಾಯ ಮಾಡುತ್ತಿದ್ದ ಮಧುರೈ

ವೀರನನ್ನು ಮಾಲೀಕ ಸಂಚು ಹೂಡಿ ಅವನನ್ನು ಕಡಿದು ಕೊಲೆ ಮಾಡಿಸುತ್ತಾನೆ. ಮಧುರೈ ವೀರನ ಮರಣ ಕೇಳಿ ಜನರಿಗೆ ತುಂಬಿಕೊಳ್ಳಲಾಗದ ನಷ್ಟವಾಗಿ ಪರಿಣಮಿಸುತ್ತದೆ. ಇದರಿಂದ ಮತ್ತಷ್ಟು ಉದ್ವೇಗಗೊಂಡ ದಲಿತರು ಹೋರಾಟದ ತೀವ್ರತೆಯನ್ನು ಹೆಚ್ಚಿಸುತ್ತಾರೆ. ಈ ಹೋರಾಟವನ್ನು ತಡೆಯಲು ಪೋಲೀಸರು ಗುಂಡಿನ ದಾಳಿ ನಡೆಸುತ್ತಾರೆ. ಈ ದಾಳಿಯಲ್ಲಿ ಅನೇಕ ದಲಿತರೊಂದಿಗೆ ವಡಿವಚ್ಚಿಯ ತಾಯಿ ಪೂವದಿಯೂ ಕೂಡ ಸಾವನ್ನಪ್ಪುತ್ತಾಳೆ. ಈ ಹೋರಾಟದಲ್ಲಿ ವಡಿವಚ್ಚಿಯೂ ಎಲ್ಲವನ್ನು ಕಳೆದುಕೊಂಡು ಏಕಾಂಗಿಯಾಗಿ ನಿಲ್ಲುವಂತೆ ಆಗುತ್ತದೆ.

ಉಪ್ಪು ವಯಲಿನ ಕಾರ್ಮಿಕರು ವಡಿವಚ್ಚಿಯ ಸಮಸ್ಯೆಯನ್ನು ಮುನ್ನೆಲೆಯಾಗಿಟ್ಟುಕೊಂಡು ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಾರೆ. ಉಪ್ಪುವಯಲು ಮಾಲೀಕನ ವಿರುದ್ಧ ಹೋರಾಟ ನಡೆಯುತ್ತದೆ. ಆದರೆ ಮಾಲೀಕನ ಹಣ ಬಲದ ಮುಂದೆ ಇವರು ಸೋಲುತ್ತಾರೆ. ಹಣದಿಂದ ಏನನ್ನಾದರೂ ಸಾಧಿಸಬಹುದೆಂಬುದನ್ನು ಮಾಲೀಕ ನಿರೂಪಿಸುತ್ತಾನೆ. ಕಾರ್ಮಿಕರ ಜೀವನ ಮುಂದುವರೆದು ಹೋರಾಟವಾಗಿಯೇ ಇದೆ ಎಂಬುದನ್ನು ಕಾದಂಬರಿ ತಿಳಿಸುತ್ತದೆ. ಇಲ್ಲಿಯವರೆಗೆ ತನಗೆ ಆಶ್ರಯವಾಗಿದ್ದ ತನ್ನ ತಾಯಿಯ ಮರಣದ ನಂತರ ವಡಿವಚ್ಚಿಯು ತಾಯಿಯ ಜವಾಬ್ದಾರಿ ಹೊರುತ್ತಾಳೆ. ತನ್ನ ತಂಗಿ-ತಮ್ಮಂದಿರನ್ನು ತನ್ನ ಮಕ್ಕಳೆಂದು ಪರಿಗಣಿಸಿ ಅವರಿಗಾಗಿ ಬಾಳಬೇಕೆಂಬ ಪರಿಸ್ಥಿತಿ ಪ್ರಾರಂಭವಾಗುತ್ತದೆ. ಕೊನೆಗೆ ತಾನೆ ತಾಯಿಯಾಗಿ ಜವಾಬ್ದಾರಿ ಹೊರುವುದನ್ನು ಕಾದಂಬರಿ ಆರಂಭ, ಅಂತ್ಯಗಳಲ್ಲಿ ನಿರೂಪಿಸಿದ್ದಾರೆ. ಈ ಕಾದಂಬರಿಯು ವರ್ಗ ಸಂಘರ್ಷದ ಹೋರಾಟದ ಸ್ವರೂಪವನ್ನು ತಿಳಿಸುವುದರೊಂದಿಗೆ ಮಾರ್ಕ್ಸ್‌ವಾದದ ಪ್ರೇರಣೆಯಿಂದ ಕೂಡಿದೆ ಎಂದು ತಮಿಳು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ.

ತೂರ್ವೈ

೧೯೯೬ರಲ್ಲಿ ಪ್ರಕಟಗೊಂಡ ಸೋ.ಧರ್ಮನ್‌ರವರ 'ತೂರ್ವೈ' ಕಾದಂಬರಿಯು ಉರುಳೈಕುಡಿ ಗ್ರಾಮದಲ್ಲಿ ಜೀವಿಸುತ್ತಿದ್ದ ದಲಿತರು ಮತ್ತು ದಲಿತೇತರ ನಡುವಿನ ಸಂಬಂಧಗಳ ಮಾನವೀಯತೆಯ ದೃಷ್ಟಿಕೋನದ ನೆಲೆಯಲ್ಲಿ ಚಿತ್ರಿತಗೊಂಡಿದೆ. ಕೈಗಾರಿಕೀಕರಣದಿಂದಾಗಿ ಗ್ರಾಮಗಳಲ್ಲಿ ವ್ಯವಸಾಯ ಹಾಳಾಗಿ, ಸಮಾಜದಲ್ಲಿ ಅವಿಭಕ್ತ ಕುಟುಂಬಗಳು ಛಿದ್ರಗೊಂಡು ಹೊಟ್ಟೆಪಾಡಿಗಾಗಿ ಗ್ರಾಮವನ್ನು ಬಿಟ್ಟು ನಗರಕ್ಕೆ ವಲಸೆ ಹೋಗುವುದು ಮತ್ತು ವ್ಯವಸಾಯವನ್ನು ಬಿಟ್ಟು ಬೆಂಕಿಪೊಟ್ಟಣ ಮುಂತಾದ ಕಂಪನಿಗಳಲ್ಲಿ ಕೆಲಸ ಮಾಡುವ ದಲಿತರ ಹೀನ ಪರಿಸ್ಥಿತಿಯನ್ನು ಕಾದಂಬರಿ ಚಿತ್ರಿಸುತ್ತದೆ. ತಾವು ಹುಟ್ಟಿ, ಜೀವಿಸಿದ ಗ್ರಾಮದಲ್ಲಿ, ಸಮೃದ್ಧವಾಗಿ ಬೆಳೆ ಬೆಳೆದ ಭೂಮಿಯಲ್ಲಿ ತಾವೇ ನಿರಾಶ್ರಿತರಾಗಿ, ಬಾಳುವ ದಲಿತರ ದಾರುಣ ಸ್ಥಿತಿಗೆ ಕಾರಣರಾದ ರಾಜಕೀಯವಾದಿಗಳು, ಸಮೂಹ ವಿರೋಧಿಗಳು, ಅಧಿಕಾರಿಗಳು, ವ್ಯಾಪಾರಿಗಳು, ಕಾರ್ಖಾನೆಗಳ ಯಜಮಾನರು ಮುಂತಾದವರ ಕಾರ್ಯ ತಂತ್ರಗಳನ್ನು ಕಾಣಬಹುದು.

ಕಾದಂಬರಿ ಓದುವಾಗ ದಲಿತರೂ ಹೀಗೂ ಇದ್ದರೆ? ಎಂಬ ಪ್ರಶ್ನೆ ಆರಂಭವಾಗುತ್ತದೆ. ಅದೊಂದು ದಲಿತರ ಸುವರ್ಣ ಕಾಲವೆಂದೇ ಕಲ್ಪಿಸಿಕೊಳ್ಳಬಹುದು. ಹೆಚ್ಚು ದಲಿತರೇ ಕೂಡಿದ್ದ ಉಳ್ಳೈಕುಡಿ ಗ್ರಾಮ ಸಮೃದ್ಧವಾಗಿ ಬೆಳೆಯುತ್ತಿದ್ದ ವ್ಯವಸಾಯ ಭೂಮಿಯಾಗಿತ್ತು. ಅಲ್ಲದೆ ಮೇಲ್ಜಾತಿಗಳು ಮತ್ತು ದಲಿತರು ಶಾಂತಿ, ಸಮಾನತೆಯಿಂದ ಇದ್ದದ್ದನ್ನು ಕಾಣಬಹುದು. ಜಗಳಕ್ಕಾಗಿ ಕೂಲಿ ಬೆಳೆಸುವ ಅಭ್ಯಾಸ, ಹೊಸ ಶ್ರೀಮಂತ, ಎರಡು ಗ್ರಾಮಗಳ ನಡುವಿನ ಪ್ರತ್ಯೇಕ ಜಗಳ, ಮರವನ್ನು ಕಡಿದು ಬೆಂಕಿಪೊಟ್ಟಣ ಕಂಪನಿಗೆ ನೀಡಿ ಹಣ ಗಳಿಸುವವರು, ಬೇಟೆಯಾಡುವ ನರಿಕುರವರ್‌ಗಳು, ಇಲಿ ಬೇಟೆಗೆ ಹೋಗುವ ಊರಿನ ಅಗಸ, ಬಾಳೆಮೀನು ಎಂದು ನೀರಿನ ಹಾವನ್ನು ಹಿಡಿಯುವವನು, ಸಂಜೆಯ ಸಮಯದಲ್ಲಿ ಊರಿನ ಮರದಲ್ಲಿ ಜನರು ಸೇರುತ್ತಿದ್ದದ್ದು, ಎಲ್ಲರೂ ಸೇರಿ ಅನೇಕ ಕಥೆಗಳನ್ನು ಹೇಳುವುದು ಹೀಗೆ ಅನೇಕ ಕಥೆಗಳು ಓದುಗರನ್ನು ಸ್ವಾರಸ್ಯಕರ ಲೋಕಕ್ಕೆ ಕೊಂಡೊಯ್ಯುತ್ತವೆ.

ಮಾಡತ್ತಿ–ಮಿನುತ್ತಾನ್ ಕಾದಂಬರಿಯ ಪ್ರಧಾನ ಪಾತ್ರಗಳಾಗಿವೆ, ಮಿನುತ್ತಾನ್‌ಗೆ ಮಾಡತ್ತಿ ಮೊದಲ ಹೆಂಡತಿ. ಇವಳು ಕಾಲದ ಪ್ರತಿನಿಧಿಯಾಗಿ ಎಲ್ಲರಿಗೂ ಸಹಾಯ ಮಾಡುವ ಉದಾರ ಮನಸ್ಸಿನವಳು. ಮಿನುತ್ತಾನ್ ಮೊದಲು ಮೂರು ಹೆಂಡತಿಯರಿಗೆ ಮಕ್ಕಳಾಗದಿದ್ದರಿಂದ ನಾಲ್ಕನೇಯವಳಾಗಿ ಸೀನಿಯಮ್ಮಳನ್ನು ಮದುವೆ ಆಗುತ್ತಾನೆ. ಸೀನಿಯಮ್ಮಳು ಒಂದು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಮಿನುತ್ತಾನ್ ಮಾಡುತ್ತಿಯು ಆ ಮಗುವಿನ ಜಾತಕ ಬರೆಯಿಸಲು ಹುಟ್ಟಿದ ದಿನಾಂಕವನ್ನು ಬ್ರಾಹ್ಮಣನ ಬಳಿ ನೀಡುತ್ತಾರೆ. ಆ ಮಗುವಿನ ಹುಟ್ಟಿದ ರಾಶಿಯ ಪ್ರಕಾರ ದೊಡ್ಡವರಿಗೆ ಅನಾಹುತ ಇದೆ ಎಂದು ಬ್ರಾಹ್ಮಣ ಹೇಳಿ ಕಳುಹಿಸುತ್ತಾನೆ. ಚಿಂತಾಕ್ರಾಂತನಾದ ಮಿನುತ್ತಾನ್ ಮಗುವಿನ ಜಾತಕವನ್ನು ಕೆರೆಯಲ್ಲಿ ಬಿಸಾಡುತ್ತಾನೆ. ಆಗ ಮಾಡತ್ತಿ ಮಿನುತ್ತಾನ್‌ಗೆ ಧೈರ್ಯ ಹೇಳಿ ಕರೆತರುತ್ತಾಳೆ. ಮಾಡತ್ತಿ ಮಿನುತ್ತಾನ್‌ಗೆ ಮೊದಲ ಹೆಂಡತಿಯಾಗಿದ್ದಳು. ವ್ಯವಸಾಯ, ಮನೆ ಕಾರ್ಯಗಳಲ್ಲಿ ಮಿನುತ್ತಾನ್‌ಗೆ ಬೆನ್ನೆಲುಬಾಗಿ ನಿಂತಿದ್ದಳು. ಸೀನಿಯಮ್ಮಳಿಗೆ ಮಗು ಹುಟ್ಟಿದರೂ ತನ್ನ ಮಗುವಂತೆ ಪ್ರೀತಿಸುತ್ತಾಳೆ. ಮಗುವಿಗೆ ಕಿವಿ ಚುಚ್ಚಿ ಕೂದಲು ತೆಗೆಯುವಾಗ ಸೋಲಸ್ವಾಮಿಗೆ ವ್ರತ ಇರುತ್ತಾಳೆ. ತಾನು ಆಸೆಯಿಂದ ಬೆಳಸಿದ ಹಂದಿಯನ್ನು ಸೋಲಸ್ವಾಮಿಗೆ ಬಲಿಕೊಡುವಾಗ ಬೇಜಾರಾಗದೆ ದೈವನಿಂದನೆ ಆಗಿಬಿಡುವುದೆಂದು ಸುಮ್ಮನಿರುತ್ತಾಳೆ. ಅಲೆದು ಸುತ್ತಿದ್ದರಿಂದ ದಣಿವು ಆರಿಸಿಕೊಳ್ಳಲು ಕೈ–ಕಾಲು, ಮುಖ ತೊಳೆದುಕೊಂಡು ಬಂದು ಹಿಡಿಯಷ್ಟು ಗಂಜಿಯನ್ನು ಕುಡಿಯುತ್ತಾಳೆ. ನಂತರ ಕೆಲಹೊತ್ತು ಸುಮ್ಮನೆ ಕುಳಿತಿದ್ದಳು. ಮನೆಯ ಮೂಲೆಯ ನಿಲುವಿನಲ್ಲಿರುವ ಕೋಳಿ ಮೊಟ್ಟೆಯನ್ನು ರಕ್ಷಿಸಲು ತೂಗಿ ಹಾಕಿದ್ದ ಬುಟ್ಟಿಯಿಂದ ಕೋಳಿಯೊಂದು ಕೂಗಿಕೊಂಡು ಹಾರುತ್ತ ಬಂದು ಮಾಡತ್ತಿಯ ಮುಖವನ್ನು ತುಳಿದು ಹೋಯಿತು. ಆಕಾಶವನ್ನು ನೋಡುತ್ತ ಮಲಗಿದ್ದ ಮಾಡತ್ತಿ ಚೀರುತ್ತಾ ಎದ್ದು ಕುಳಿತಳು. ಅವಳ ಕೂಗಾಟವನ್ನು ಕೇಳಿ ಪೊನ್ನುತಾಯ್ ಓಡಿ ಬಂದು ಮುಖದಲ್ಲಿಟ್ಟಿದ್ದ ಕೈಯನ್ನು ತೆಗೆದಾಗ ಮಾಡತ್ತಿಯ ಎರಡೂ ಕಣ್ಣುಗಳಲ್ಲೂ ರಕ್ತ ಬರುತ್ತಿತ್ತು.

ರಕ್ತವನ್ನು ಒರೆಸಿ ನೋಡಿದಾಗ ಒಂದು ಕಣ್ಣು ಸಂಪೂರ್ಣವಾಗಿ ಹಾಳಾಗಿದ್ದು ಕಂಡಿತು. ಕೂಡಲೇ ಕಡಲೈಯಾರ್ ದೇವಸರಾಯ ವೈದ್ಯನ ಬಳಿ ಕರೆದುಕೊಂಡು ಹೋದರೆ ವೈದ್ಯರು ಮಧುರೈ, ತಾಲೈಂಗ್ ಕೊಟ್ಟೈ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು. ಆದರೆ ಮಾಡತ್ತಿ ಆಸ್ಪತ್ರೆ ಬೇಡವಾಗಿ ದೃಢವಾಗಿ ಮೂರು ತಿಂಗಳು ವ್ರತ ಕೈಗೊಂಡಳು. ಈ ವಿಷಯವನ್ನು ಕೇಳಿ ಕರುಪ್ಪೈಯ್ಯ, ವೇಲ್ತ್ ದೇವರು ಮಾಡತ್ತಿಯನ್ನು ನೋಡಲು ಹೋದರು. ಜೊತೆಗೆ ಗುರುಸಾಮಿ ತಂದಿದ್ದ ಪುಳಿಯೋಗರೆಯನ್ನು ತಿನ್ನುವಂತೆ ಹೇಳಿದಳು. ಅವರು ಉಸುಗಿನಲ್ಲಿ ಕುಳಿತು ತಿಂದು ಹೋದರು. "ಮೊದಲ ಸಲ ಮಾಡತ್ತಿಯ ಮುಂದೆ ಅವರು ಬೆಳಕಿನಲ್ಲಿ ನಡೆದರು. ಅವಳು ಕತ್ತಲಲ್ಲಿ ಇದ್ದಳು. ಇಲ್ಲಿಯವರೆಗೆ ಅವರು ಕತ್ತಲಲ್ಲಿ ಹೋಗುವುದನ್ನು ಬೆಳಕಿನಲ್ಲಿದ್ದು ನೋಡಿದ್ದಳು. ಇಂದು ಅವರು ಬೆಳಕಿನಲ್ಲಿ ಕಣ್ಮರೆಯಾಗುವುದನ್ನು ಬೆಳಕಿನಲ್ಲಿಯೇ ಇದ್ದು ನೋಡಲಾಗುತ್ತಿಲ್ಲ"(ಸೋ. ಧರ್ಮನ್, ತೂರ್ವೈ, ಪು. ೧೪೬) ಮೂರು ತಿಂಗಳ ನಂತರ ಮನೆಗೆ ಬಂದರೂ ಒಬ್ಬರಿಂದಲೇ ಹೊರಗಿನಿಂದ ಒಳ ಹೋಗಲಾಗಲಿಲ್ಲ. ಮಾಡತ್ತಿಗೆ ಒಂದು ದಿನ ಏಕಾಂತವಾಗಿ ತನ್ನ ವಯಸ್ಸು ವ್ಯತ್ಯಾಸವಿಲ್ಲದೆ ನಾಲ್ಕನೇಯವಳಾಗಿ ನಿಮ್ಮನ್ನು ಮದುವೆ ಆಗಿ ನಮಗೆ ಬೆಂಕಿ ಇಡಲು ಮಗು ಕೊಟ್ಟ ಪುಣ್ಯವಂತೆ ಅವಳನ್ನು ಬಿಟ್ಟು ಬಿಡಬಾರದು ಮಗ ಹೇಗೋ ಏನೋ ನಾಲ್ಕು ಜನರ ಮಾತು ಕೇಳಿ ನಾಳೆ ಅವಳನ್ನು ನೋಯಿಸಬಾರದು ಅದಕ್ಕೆ ನಾಳೆಯೇ ಅವಳ ಹೆಸರಿಗೆ ಗದ್ದೆ ಹೊಲಗಳನ್ನು ಬರೆದು ಬಿಡು(ಅದೇ ಪು. ೧೪೮) ಎಂದು ತನ್ನ ವಾರಗಿತ್ತಿ ಮತ್ತು ತಮ್ಮ ಮನೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಗುರುಸಾಮಿಗೂ ಭೂಮಿಯನ್ನು ಬರೆದುಕೊಡುವಂತೆ ಹೇಳುತ್ತಾಳೆ. ಹೀಗೆ ಮಾಡುತ್ತಿಯ ಉದಾರತೆಯನ್ನು ಕಾಣಬಹುದು. ಮಾಡುತ್ತಿಯ ಮರಣ ತುಂಬಿಕೊಳ್ಳಲಾರದ ನಷ್ಟವಾಗಿ ಕಾಣಿಸುತ್ತದೆ. ತನ್ನ ಕಣ್ಣೆದುರೇ ಜೀವನ ಕೈಜಾರುವುದನ್ನು ಸಂಕಷ್ಟದಿಂದ ನೋಡುತ್ತಾನೆ ಮಿನುತ್ತಾನ್. ಮಳೆ ಕಡಿಮೆಯಾಗುತ್ತದೆ ದನಗಳು ಕಣ್ಮರೆಯಾಗುತ್ತಿದ್ದವು, ಟ್ರಾಕ್ಟರ್ ಬಂದಿದೆ. ಎತ್ತಿನ ಗೊಬ್ಬರದ ಬದಲು ರಸಾಯನ ಗೊಬ್ಬರಗಳು ಹೊನ್ನನ್ನು ಬೆಳೆದ ಭೂಮಿ ಇಂದು ಕೈಗಾರಿಕೆಯಿಂದ ಬೆಂಕಿಪೊಟ್ಟಣ ಕಂಪನಿಗಳು ಗೋಣಿಚೀಲ ಕಾರ್ಖಾನೆಗಳು ಬಂದವು. ತನ್ನ ಭೂಮಿ ವೇಶ್ಯೆಯಂತ ತನ್ನ ಶೀಲವನ್ನು ಕಳೆದುಕೊಳ್ಳುತ್ತಿರುವಂತೆ ಮಿನುತ್ತಾನ್ ಭಾವಿಸುತ್ತಾನೆ. ಮಿನುತ್ತಾನ್ ಮಗ ಪೆರಿಯ ಸೂಲೈ. ಇವನು ಚಿಕ್ಕವನಾಗಿದ್ದಾಗ ಹಸಿರು ಕ್ರಾಂತಿ ಕಾಲ ಆರಂಭಿಸಿತ್ತು. ಯುವಕನಾಗಿದ್ದಾಗ ಗ್ರಾಮದಲ್ಲಿ ಯಾವುದೂ ಉಳಿದಿರಲಿಲ್ಲ. ಪರಿಸರದೊಂದಿಗೆ, ಎತ್ತಿನ ಬಂಡಿಗಳೊಂದಿಗೂ, ಭೂಮಿಯೊಡನೆ ಇದ್ದ ನಂಟು ಹಂತ ಹಂತವಾಗಿ ಒಡೆಯುತ್ತದೆ. ಪೆರಿಯ ಸೂಲೈಗೆ ತಿಳಿದಿದ್ದ ಗ್ರಾಮದ ಜೀವನ ಅವನ ಮಕ್ಕಳಿಗೆ ಯಾವುದೂ ತಿಳಿದಿರಲಿಲ್ಲ. ಅವರು ನಗರ ಯಾಂತ್ರಿಕ ಜೀವನದೊಳಗೆ ಸಿಲುಕಿಕೊಂಡಿದ್ದರು. ಹೀಗೆ ಕಾದಂಬರಿ ಎರಡು ಕಾಲಘಟ್ಟದ ಜೀವನ ಶ್ರಮವನ್ನು ಸಂಸ್ಕೃತಿ ಬದಲಾವಣೆಯನ್ನು ತಿಳಿಸುತ್ತದೆ.

ತಗಪ್ಪನ್ ಕೊಡಿ

೨೦೦೨ರಲ್ಲಿ ಪ್ರಕಟವಾದ ಅಳಗಿಯ ಪೆರಿಯವನ್‌ರ ಕಾದಂಬರಿಯ ಆರಂಭದ ದೃಶ್ಯವೇ ಅಮ್ಮಾಸಿಯ ಜೀವನವನ್ನು ಪರಿಚಯ ಮಾಡಿಬಿಡುತ್ತದೆ. ಕಾದಂಬರಿಯ ಮುಖ್ಯ ಕಥಾವಸ್ತು ಭೂ ಕಬಳಿಕೆ ಆಗಿದ್ದರಿಂದ ಕಾದಂಬರಿ ಅದರೊಳಗೆ ಸುಳಿದಾಡುತ್ತದೆ. ತಳ ಸಮುದಾಯದಲ್ಲಿ ಹುಟ್ಟಿದ ಅಮ್ಮಾಸಿ ಶಿಕ್ಷಣದ ತಿಳುವಳಿಕೆ ಇಲ್ಲದೆ ಇತರರಿಂದ ಗುಲಾಮತನಕ್ಕೆ ಸಿಲುಕಿ ಮೋಸ, ವಂಚನೆ ಅನುಭವಿಸುತ್ತಾ ಜೀವನ ನಡೆಸುತ್ತಾನೆ. ತನ್ನ ತಂದೆ ನಲ್ಲಾನಿನ ಭೂಮಿ ಕಳೆದುಕೊಂಡು ಜೀವಿಸಲು ಆಗದ ಸ್ಥಿತಿಯಲ್ಲಿ ವಲಸೆ ಹೋಗಿ ಅಲ್ಲಿ ಕೆಲಸದ ಅವಕಾಶಗಳಿಲ್ಲದೆ ಕೊನೆಯವರೆಗೆ ಅಲೆದು ಜೀವನವನ್ನು ಕಳೆದುಕೊಳ್ಳುವ ಪಾತ್ರವೇ ಅಮ್ಮಾಸಿ.

"ಒಬ್ಬ ಮನುಷ್ಯ ತನ್ನ ಬೇರುಗಳ ಕುರಿತ ಪ್ರೀತಿ ಇಲ್ಲವೆಂದರೆ ಅವನು ಹೇಗೆ ತನ್ನ ತಳಿರ ಬಗೆಗೆ ಪ್ರೀತಿ ಹೊಂದುತ್ತಾನೆ ಎಂಬ ಎಂ.ಡೇವಿಸಿಯ ಮಾತುಗಳು ನನ್ನನ್ನು ಬಹುದಿನಗಳು ಯೋಚಿಸುವಂತೆ ಮಾಡಿತು. ನಿಧಾನವಾಗಿ ನನ್ನ ಕುಟುಂಬದ ಪೂರ್ವಜರ ಕುರಿತು ತಿಳಿಯಲು ಆರಂಭಿಸಿದಾಗ ಅವರು ಸ್ವಲ್ಪ ಭೂಮಿಯನ್ನು ಹೊಂದಿದ್ದು, ಅವರ ಕಾಲದಲ್ಲಿಯೇ ಅದನ್ನು ಕಳೆದುಕೊಂಡದ್ದು ತಿಳಿಯಿತು. ಭಾರತದಲ್ಲಿ ದಲಿತರಿಗಾಗಿ ಭೂಮಿ ಇಲ್ಲ, ಆದರೆ ಅವರಿಗೆ ಭೂಮಿಯೇ ಇಲ್ಲದೆ ಇರಲಿಲ್ಲ. ಹಲವು ಕಾಲಘಟ್ಟದಲ್ಲಿ ಹಲವು ಜಾತಿಯವರಿಂದ ತಮ್ಮ ಭೂಮಿಯನ್ನು ಅವರು ಕಳೆದುಕೊಂಡಿದ್ದರು. ಅಂದು ಸರ್ಕಾರ ತಮಿಳುನಾಡಿನಲ್ಲಿ ದಲಿತರಿಗೆಂದು ಮೀಸಲಿಟ್ಟ ೧೨ ಲಕ್ಷ ಎಕರೆ ಪಂಚಮಿ ನೆಲಗಳಲ್ಲಿ ಸರಿಸುಮಾರು ಯಾವುದು ದಲಿತರಲ್ಲಿ ಇಂದು ಇಲ್ಲ. ದಲಿತರಿಗೂ ಭೂಮಿಗೂ ನಡುವಿನ ಸಂಬಂಧ, ಜೀವನ ಏನಾಗಿ ಇದ್ದಿರಬಹುದೆಂದು ನಾನು ಚಿಂತಿಸಿದ ಪ್ರಶ್ನೆಗೆ ಸಿಕ್ಕ ಚಿಕ್ಕ ಉತ್ತರವೇ ಈ ಕಾದಂಬರಿ" (ಅಳಗಿಯ ಪೆರಿಯವನ್, ತಗಪ್ಪನ್ ಕೊಡಿ, ಮುನ್ನುಡಿ, ಪು. ೬) ಎಂಬ ಲೇಖಕರ ಮಾತುಗಳು ಭೂ ಕಬಳಿಕೆ ವಿಷಯವನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಅಮ್ಮಾಸಿ ಕನಸು ಕಂಡು ಭಯದಲ್ಲಿ ಬೆಚ್ಚಿ ಬೀಳುತ್ತಾನೆ, ಆಗ "ಅಮ್ಮಾಸಿಯ ನಿದ್ದೆ ಕಳೆದು ಹೋಯ್ತು. ಅವಸರವಾಗಿ ಎದ್ದು ಕುಳಿತ. ಯಾವುದೋ ರಾವು ಎಂಬಂತೆ ಕಾಣಿಸಿತು. ಹೊರಗಡೆ ಬಂದು ನೋಡಿದ. ಊರನ್ನು ಸುತ್ತುವರೆದಿದ್ದ ತೆಂಗಿನ ಮರಗಳು ಕತ್ತಲನ್ನು ಗಾಢವಾಗಿ ಆಕ್ರಮಿಸಿತ್ತು. ಆಕಾಶ ಅವನ ನೋಟಕ್ಕೆ ಚುಕ್ಕಿಯನ್ನು ತೋರಿಸಿ ನಕ್ಕಿತು" (ಅದೇ ಪು. ೭) ಎಂದು ಕಾದಂಬರಿ ಕತ್ತಲಿನ ವರ್ಣನೆಯಲ್ಲಿ ಆರಂಭವಾಗುತ್ತದೆ. ಅಮ್ಮಾಸಿ 'ಕೂತ್ತು' (ನಟನೆ, ಕುಣಿತ) ಕಲೆಯಲ್ಲಿ ಆಸಕ್ತಿ ಹೊಂದಿದ್ದನು. 'ಕೂತ್ತು' ಕಲೆಯಲ್ಲಿ ಮೇಲ್ವರ್ಗದವರೆ ಪ್ರಬಲರಾಗಿದ್ದರು. ಅಮ್ಮಾಸಿ ಕೀಳು ಕುಲದವನಾಗಿದ್ದರಿಂದ ಅವನಿಗೆ ಆ ಕಲೆಯಲ್ಲಿ ಭಾಗಿಯಾಗುವ ಹಕ್ಕು ನಿರಾಕರಿಸಲಾಗಿತ್ತು. "ಅಮ್ಮಾಸಿಗೆ ಊರಿನಲ್ಲಿ ಕೂತ್ತು ನಡೆಯುವ ಒಂದೊಂದು ವರ್ಷವೂ ಅದರಲ್ಲಿ ವೇಷ ಹಾಕಬೇಕೆಂಬ ಆಸೆ ಇರುತ್ತಿತ್ತು" (ಅದೇ ಪು. ೧೬) ಅಮ್ಮಾಸಿಯು ಚಿಕ್ಕವನಿದ್ದಾಗಿನಿಂದಲೂ ಕೂತ್ತು ಕಲೆಯಲ್ಲಿ ಆಸಕ್ತನಾಗಿದ್ದು ತನ್ನ ಯೌವ್ವನದ ಕಾಲದಲ್ಲಿ ಕೂತ್ತಿನಲ್ಲಿ ವೇಷ ಧರಿಸಿ

ನಟಿಸುತ್ತಾನೆ. ಉತ್ತಮವಾಗಿ ನಟಿಸಿದ್ದರೂ ಅವನು ಕೀಳು ಕುಲದವನಾಗಿದ್ದರಿಂದ ಆ ಕಲೆಯಲ್ಲಿ ಅವನು ಮುಂದುವರಿಯಲಾಗಲಿಲ್ಲ.

ಮಾಡಿದ ಕೆಲಸಕ್ಕೆ ಸ್ವಲ್ಪ ಕೂಲಿ ಹೆಚ್ಚು ಕೇಳಿದ್ದರಿಂದ ಯಜಮಾನ ತಂತ್ರ ಹೂಡಿ ಸುಂಕ ಕಟ್ಟದ ಅಮ್ಮಾಸಿಯ ನೆಲಕ್ಕೆ ತನ್ನ ಹೆಸರಿನಲ್ಲಿ ಸುಂಕ ಕಟ್ಟಿ ಆ ನೆಲವನ್ನು ಅಪಹರಿಸುತ್ತಾನೆ. ಅದನ್ನು ಅಮ್ಮಾಸಿ ಪ್ರಶ್ನಿಸಿದಾಗ ಅದು ಹೇಗೆ ನನ್ನ ನೆಲಕ್ಕೆ ಸುಂಕ ಕಟ್ಟಿ ನೀವು ನಿಮ್ಮ ಹೆಸರಿಗೆ ಬರೆದುಕೊಂಡಿದ್ದೀರಾ ಎಂದು ಪ್ರಶ್ನಿಸಿದ್ದಕ್ಕೆ ನೀನು ಕಟ್ಟದ ಸುಂಕವನ್ನು ನಾನು ಕಟ್ಟಿ ನನ್ನ ಹೆಸರಿಗೆ ಬರೆದುಕೊಂಡಿದ್ದೇನೆ ಆದರೆ ನೀನು ಯಜಮಾನನಾದ ನನಗೆ ಎದುರು ಮಾತಾಡುತ್ತೀಯಾ ಎಂದು ಗದರಿಸುತ್ತಾನೆ. ಮೋಸ ಹೋದ ಅಮ್ಮಾಸಿಗೆ ಏನೂ ತೋಚದೆ ಮನೆಗೆ ಬರುತ್ತಾನೆ. ಈ ವಿಷಯವನ್ನು ಕೇಳಿ ಮನೆಯವರಿಗೆಲ್ಲಾ ದಿಗ್ಭ್ರಮೆಯಾಗುತ್ತದೆ. ಇದು ಅಮ್ಮಾಸಿಗೆ ಜೀವವೇ ಹೋಯಿತು ಎನ್ನುವಷ್ಟು ನೋವಾಗುತ್ತದೆ. ನೆಲವನ್ನು ಕಳೆದುಕೊಂಡ ನೆನಪಲ್ಲೇ ಇದ್ದ ಅವನನ್ನು ಅಪರಂಜಿ ತನ್ನ ಊರಿಗೆ ಕರೆದುಕೊಂಡು ಹೋಗುತ್ತಾಳೆ. ವಲಸೆ ಹೋದರೂ ಮತ್ತೆ ಅಲ್ಲಿ ಕೆಲಸಗಳು ಸಿಗದೆ ಮೇಲ್ಜಾತಿಯವರ ಯಾವುದೋ ಒಂದು ಮನೆಯಲ್ಲಿ ಗುಲಾಮನಾಗಿರುವ ಸ್ಥಿತಿ ಎದುರಾಗುತ್ತದೆ ಎಂದು ಕಾದಂಬರಿ ತಿಳಿಸುತ್ತದೆ. ಒಟ್ಟಾರೆ ತಮಿಳು ದಲಿತ ಕಾದಂಬರಿಗಳು ದಲಿತರ ಜೀವನ ಕ್ರಮದ ವಿಧಾನವನ್ನು ಕುರಿತು ಚಿತ್ರಿಸುತ್ತವೆ.

ಲೈಂಗಿಕ ಶೋಷಣೆ

ಮೇಲ್ಜಾತಿಯ ಗಂಡಸರು ದಲಿತ ಮಹಿಳೆಯರ ಮೇಲೆ ನಡೆಸುವ ಲೈಂಗಿಕ ಶೋಷಣೆಯನ್ನು ದಾಖಲಿಸುವುದರೊಂದಿಗೆ, ದಲಿತ ಪುರುಷರೂ ದಲಿತ ಮಹಿಳೆಯರ ಮೇಲೆ ನಡೆಸುವ ಲೈಂಗಿಕ ಶೋಷಣೆಯನ್ನು ತಮಿಳು ದಲಿತ ಕಾದಂಬರಿಗಳು ದಾಖಲಿಸುತ್ತವೆ.

ಮೇಲ್ಜಾತಿಯವರಿಂದ ನಡೆಯುವ ಲೈಂಗಿಕ ಶೋಷಣೆಯನ್ನು 'ಉಪ್ಪುವಯಲ್' ಕಾದಂಬರಿಯಲ್ಲಿ ಕಾಣಬಹುದು. ಈ ಕಾದಂಬರಿಯ ಆರಂಭದಲ್ಲಿ ಉಪ್ಪಳದಲ್ಲಿ ವಸ್ತುಗಳನ್ನು ಇಡುವ ಶೆಡ್‌ಗೆ ಕಾದಂಬರಿಯ ಕಥಾ ನಾಯಕಿಯಾದ ವಡಿವಚ್ಚಿಯು ಕೆಲಸ ಮಾಡುವ ಸ್ಥಳದಲ್ಲಿ ಒಬ್ಬಂಟಿಯಾಗಿ ಹೋದಾಗ ಉಪ್ಪಳದ ಯಜಮಾನನಿಂದ ಲೈಂಗಿಕ ಕಿರುಕುಳ ನಡೆಯುತ್ತದೆ. ಆದರೆ ವಡಿವಚ್ಚಿ ತಪ್ಪಿಸಿಕೊಂಡು ಓಡಿ ಹೊರಗೆ ಬರುತ್ತಾಳೆ. ಆಗ ಅವಳ ಯಜಮಾನ "ಚಿತ್ರಗಳಲ್ಲಿ ಬರುವ ಖಳನಾಯಕನಂತೆ ನಗುತ್ತಿದ್ದಾನೆ. ಎಲ್ಲಿಗೆ ಹೋಗುತ್ತೀಯಾ ಬಾ ಎಂದನು. ಕೆಲವು ಹಸಿರು ನೋಟುಗಳನ್ನು ತೋರಿಸಿ ಆಡಿಸಿದನು" (ಶ್ರೀಧರ ಗಣೇಶನ್, ಉಪ್ಪುವಯಲ್ ಪು. ೨೧) ಎಂದು ಹಣವನ್ನು ತೋರಿಸಿ ಲೈಂಗಿಕ ಆಸೆಗೆ ಒಳಪಡಿಸುವಂತೆ ಮಾಡುವುದು ಕಾಣಿಸುತ್ತದೆ. ಅಲ್ಲದೆ "ಇದು ಯಾರಿಗೂ ತಿಳಿಸುವುದು ಬೇಡ. ಹೊರಗಡೆ ತಿಳಿದರೆ ನಮಗೆ ಕೇವಲ" (ಮೇಲಿನದು, ಪು. ೯೪) ಎಂಬ ವಡಿವಚ್ಚಿಯ ಮಾತುಗಳಿಂದ ದಲಿತರಲ್ಲಿಯೂ ಶೀಲ, ಮಾನ ಕಾಪಾಡಬೇಕೆಂಬ ಉನ್ನತ ಸಂಸ್ಕೃತಿಯಲ್ಲಿರುವುದು ತಿಳಿದು ಬರುತ್ತದೆ.

'ಪಳಯನ ಕಳಿದಳುಂ' ಕಾದಂಬರಿಯಲ್ಲಿ ತಂಗಂ ಗಂಡನನ್ನು ಕಳೆದುಕೊಂಡು ಆಧಾರವಿಲ್ಲದೆ ಒಬ್ಬಂಟಿಯಾಗಿದ್ದಳು. ಅವಳು ಹೊಟ್ಟೆಪಾಡಿಗಾಗಿ ಪರಂಜ್ಯೋತಿ ಉಡ್ಯೆಯರ್‌ರ ತೋಟಕ್ಕೆ ಕೆಲಸಕ್ಕೆ ಹೋದಾಗ ಉಡ್ಯೆಯರ್‌ರ ಲೈಂಗಿಕ ಆಸೆಗೆ ಗುರಿಯಾಗುತ್ತಾಳೆ. ಉಡ್ಯೆಯರ್ ತನ್ನನ್ನು ಕೆಡಿಸುವಾಗ ಬೇರೆ ದಾರಿ ಇಲ್ಲದೆ ಸಮಾಧಾನವಾಗಿ ಇರುತ್ತಾಳೆ. "ಸಾಮಿ... ನಾನು ಇಷ್ಟಪಡದೇ.... ಕಾಡು ಗದ್ದೆಗೆ ಕೆಲಸಕ್ಕೆ ಹೋದಾಗ ಕಬ್ಬಿನ ಪೊದೆಯೊಳಗೆ..... ಇಟ್ಟು ಮಾಡಿಬಿಟ್ಟರು. ನಾನು ನಮಗೆ ಅನ್ನ ಕೊಡುವ ಯಜಮಾನನೆಂದು ಸುಮ್ಮನಿದ್ದು ಬಿಟ್ಟೆ" (ಪ.ಶಿವಕಾಮಿ, ಪಳಯನ ಕಳಿದಳುಂ, ಪು. ೧೨) ಎಂದು ತನ್ನ ಅಸಹಾಯಕ ಸ್ಥಿತಿಯನ್ನು ಕಾತ್ತಮುತ್ತುವಿನ ಬಳಿ ತಂಗಂ ಹೇಳುವುದನ್ನು ಕಾಣಬಹುದು.

ದಲಿತ ಪುರುಷರಿಂದ ದಲಿತ ಸ್ತ್ರೀಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ 'ಕೊವೇರು ಕಳುದೈಗಳ್' ಕಾದಂಬರಿಯಲ್ಲಿ ಕಂಡುಬರುತ್ತದೆ. ಇಲ್ಲಿ ಬರುವ ಕುಡಿತನ ಬೀದಿಯ ಪರ್ೈಯರ್ ಜಾತಿಯ ಸಡ್ಯೆಯನ್ ಎಂಬುವನೆ ಇದರ ರೂವಾರಿ. ಹೊಲಸು ಬಟ್ಟೆ ತೆಗೆಯಲು ಬಂದ ಮೇರಿಯನ್ನು ತನ್ನ ಮನೆಯೊಳಗೆ ಬಂದು ಮುಟ್ಟಿನ ಬಟ್ಟೆಗಳನ್ನು ತೆಗೆಯುವಂತೆ ತಂತ್ರದಿಂದ ಕರೆದು ಮೇರಿಯ ಒಪ್ಪಿಗೆ ಇಲ್ಲದೆ ಅವಳು ಕೂಗಿ ಅತ್ತರೂ, ಜಗಳವಾಡಿಯೂ, ಪ್ರಾರ್ಥಿಸಿದರೂ ಬಿಡದೆ ಮೇರಿಯನ್ನು ಕೆಡಿಸಿಬಿಡುತ್ತಾನೆ. ಮೇರಿ ತನಗಾದ ಈ ಅನ್ಯಾಯವನ್ನು ತನ್ನ ತಾಯಿ ಆರೋಗ್ಯಂಳಿಗೆ ತಿಳಿಸಿದಾಗ ಅವಳು ಸಡ್ಯೆಯನ್‌ನ್ನು ಎದುರಿಸಲಾಗದೆ ಹೊರಗಡೆ ಹೇಳಿ ನ್ಯಾಯ ಕೇಳಲು ಆಗದೆ ದಾರಿ ಇಲ್ಲದೆ ಚಡಪಡುತ್ತಾಳೆ. ಪರವಣ್ಣಾರ್ ಜಾತಿಯವರು ದಲಿತರಾದ ಪರ್ೈಯರ್ ಜಾತಿಯ ಶೋಷಣೆಯನ್ನು ನೋಡಿ ಸಿಡಿದೇಳದವರಾಗಿದ್ದಾರೆ. ಇದು ದಲಿತರಿಂದ ದಲಿತರಿಗಾಗುವ ಶೋಷಣೆಯನ್ನು ತಿಳಿಸುತ್ತದೆ.

'ಪಳಯನ ಕಳಿದಳುಂ' ಕಾದಂಬರಿಯಲ್ಲಿ ಕಾತ್ತಮುತ್ತು ತನಗೆ ಈಗಾಗಲೇ ಇಬ್ಬರು ಹೆಂಡತಿಯರಿದ್ದರೂ ಸಹಾಯ ಕೇಳಿ ಬಂದ ತಂಗಂಳನ್ನು ಕೆಡಿಸಿ ಅವಳನ್ನು ತನ್ನ ಲೈಂಗಿಕ ಬಯಕೆಗೆ ಬಳಸಿಕೊಳ್ಳುತ್ತಾನೆ. ತಂಗಂ ಬೇರೆ ಗತಿ ಇಲ್ಲದೆ ಕಾತ್ತಮುತ್ತುವಿಗೆ ಇಟ್ಟುಕೊಂಡವಳಾಗು ತ್ತಾಳೆ.

'ಕೋವೇರು ಕಳುದೈಗಳ್' ಕಾದಂಬರಿಯಲ್ಲಿ ಬರುವ ಅಳಗನ್‌ನ ಹೆಂಡತಿ ಕರುಪ್ಪಾಯಿ ಕಪ್ಪುಕ್ಕವುಂಡರ್ ಜೊತೆ ಲೈಂಗಿಕವಾಗಿ ಬಳಕೆಯಾಗುತ್ತಾಳೆ. ಆದರೆ ಅವಳು ಬುದ್ಧಿವಂತಳಾಗಿ ಕಪ್ಪುಕ್ಕವುಂಡರ್‌ರ ಬಳಿ ಆಸ್ತಿಯನ್ನು ಬರೆಯಿಸಿಕೊಳ್ಳುತ್ತಾಳೆ. ಇದಲ್ಲದೆ ಸವುರಿಯ ಜೊತೆಗೂ ಅವಳು ಸಂಪರ್ಕ ಇಟ್ಟುಕೊಂಡದ್ದನ್ನು ಕಾಣಬಹುದು. ಆದರೆ ಅದು ಕರುಪ್ಪಾಯಿ ಮತ್ತು ಸವುರಿ ಪರಸ್ಪರ ಒಪ್ಪಿಕೊಂಡ ಲೈಂಗಿಕ ಪ್ರಕರಣವಾಗಿದೆ. ಇದೇ ಕಾದಂಬರಿಯಲ್ಲಿ ಆರೋಗ್ಯಂಳ ಸೊಸೆ ಸಗಾಯಂ ಕುಡಿತನ ಬೀದಿಗೆ ಹೋಗಿ ರಾತ್ರಿ ತಂಗಂಳನ್ನ ತರುವುದಕ್ಕೆ ಮತ್ತು ಹೊಲಸು ಬಟ್ಟೆ ತರುವುದಕ್ಕೆ ನಿರಾಕರಿಸುತ್ತಾಳೆ. ಅದಕ್ಕೆ ಅವಳು ನೀಡುವ ಕಾರಣ "ಆಗದು, ಕಟ್ಟಿರುವ ಸೀರೆಯ ಒಳಗೆ ಏನಿದೆ ಎಂದು ಒಂದೊಂದು ಮನೆಯ ಗಂಡಸು ದಿಟ್ಟಿಸಿ ನೋಡುತ್ತಾನೆ

ಅವರ ಮನೆಗಳಲ್ಲಿ ಹೋಗಿ ಬಟ್ಟೆ ತೆಗೆಯಬೇಕಾ?" (ಇಮಯಂ, ಕೋವೇರು ಕಳುದೈಗಳ್, ಪು. ೪೪) ಎಂದು ಸಗಾಯಂ ಹೇಳುವುದರ ಮೂಲಕ, ಕುಡಿತನ ಬೀದಿಯ ಗಂಡಸರು ಹೆಣ್ಣನ್ನು ಬೋಗದ ವಸ್ತುವಾಗಿ ನೋಡುವ ಮತ್ತು ಕೀಳು ಜಾತಿಯ ಸ್ತ್ರೀಯರನ್ನು ಕೀಳಾಗಿ ಕಾಮದ ನೋಟದಿಂದ ನೋಡುವುದನ್ನು ತಿಳಿಸಿ ಹೊಲಸು ಬಟ್ಟೆ ತರುವ ಕೆಲಸವನ್ನು ವಿರೋಧಿಸುತ್ತಾಳೆ.

'ಕಳಿಸದೈ' ಕಾದಂಬರಿಯಲ್ಲಿ ತೆಗೆದುಕೊಂಡ ಸಾಲ, ಬಡ್ಡಿಯನ್ನು ಕಟ್ಟಲಾಗದೆ ಕೊಂಡೈಯಮ್ಮ ರಾಸಮಾಣಿಕ್ಯಂ ಜೊತೆ ಲೈಂಗಿಕ ಸಂಪರ್ಕ ಹೊಂದುತ್ತಾಳೆ. ದಲಿತ ಸ್ತ್ರೀಯರು ದಲಿತರಲ್ಲದ ಯುವಕರನ್ನು ಅಂತರ್ ಜಾತಿ ವಿವಾಹವಾದರೆ, ಅದನ್ನು ಸಮಾಜ ದೊಡ್ಡ ಅವಮಾನವಾಗಿ ನೋಡುತ್ತದೆ. ಈ ರೀತಿಯ ವಿವಾಹವನ್ನು ದೇವರೂ ಸಹ ಮೆಚ್ಚುವುದಿಲ್ಲ ಎಂಬ ಮಾತುಗಳು ತೊರ್ವೈ ಕಾದಂಬರಿಯಲ್ಲಿ ಕಾಣುತ್ತದೆ. "ಅಯ್ಯನೇರಿಯಲ್ಲಿ ಕಾಳಿಯಮ್ಮಲ ಮಗಳನ್ನು ಮೇಲ್ಜಾತಿ ಹುಡುಗನೊಬ್ಬನು ಕರೆದುಕೊಂಡು ಓಡಿ ಹೋಗಿದ್ದಾನಂತೆ ಕಾಲ ಬದಲಾಗಿದೆ. ಅವನು ಕರೆಯುತ್ತಿದ್ದಾನೆಂದರೆ ಈ ಹೆಂಗಸುಗೆ ಬುದ್ಧಿ ಬೇಡವೆ? ಊರು ಲೋಕ ಒಪ್ಪಬೇಕಲ್ಲವೇ? ದೇವರು ಸಹಿಸಿಕೊಳ್ಳುತ್ತಾನಾ? ಇದರ ಸಲುವಾಗಿಯೇ ಮಳೆ ಬೀಳದೆ ಕಲಿಗಾಲವಾಗಿ ಹೋಗಿದೆ. (ಸೋ.ಧರ್ಮನ್, ತೂರ್ವೈ, ಪು. ೧೭೧) ಎಂದು ಪರಂಪರೆಯ ಹೆಸರಿನಲ್ಲಿ ಮಹಿಳೆಯರಿಗೆ ಬುದ್ಧಿ ಹೇಳುವುದರ ಮೂಲಕ ಮತ್ತೆ ಮೇಲ್ಜಾತಿಯರ ಶೋಷಣೆಗೆ ದಲಿತ ಸ್ತ್ರೀಯರ ಮೇಲೆ ತಪ್ಪು ಹಾಕಿ ದಲಿತರಲ್ಲದ ಗಂಡಸನ್ನು ಸಮಾಧಾನಪಡಿಸುವಂತೆ ಈ ವಾಕ್ಯಗಳು ಕೂಡಿದೆ.

ಕೆಲವು ಸಲ ಅವರ ಅಬಲೆ ಸ್ಥಿತಿ, ಬಡತನ, ಕೀಳು ಜಾತಿಯಾಗಿದ್ದರಿಂದ ಅವರಿಂದ ತಮ್ಮ ಮೇಲೆ ನಡೆಯುವ ಶೋಷಣೆಗಳನ್ನು ವಿರೋಧಿಸಲಾಗದೆ ಇರುವ ಸ್ಥಿತಿ ಕಾದಂಬರಿಗಳಲ್ಲಿ ಕಂಡು ಬರುತ್ತದೆ.

ಈ ರೀತಿಯ ವಸ್ತು ಸ್ಥಿತಿಗಳು ಕನ್ನಡ ದಲಿತ ಕಾದಂಬರಿಗಳಲ್ಲಿಯೂ ಕಂಡು ಬರುತ್ತವೆ. 'ಮರಣ ಮಂಡಲ ಮಧ್ಯದೊಳಗೆ' ಕಾದಂಬರಿಯಲ್ಲಿ ಬರುವ ಚಂದ್ರಪ್ಪ ಮತ್ತು ಹೊಲಾರ ಸಿದ್ಧಯ್ಯ ನಡುವೆ ಸಂಬಂಧವಿದ್ದಾಗ ತಂತ್ರದಿಂದ ಸಿದ್ದಿಯನ್ನು ಚಂದ್ರಪ್ಪನಿಂದ ದೂರ ಮಾಡಲಾಗುತ್ತದೆ. 'ಕಾರ್ಯ' ಕಾದಂಬರಿಯಲ್ಲಿ ಚಂದ್ರಪ್ಪ ಮತ್ತು ಶಾಂತಗೌಡರ ಸಂಬಂಧವೂ ಒಂದು ರೀತಿಯಲ್ಲಿ ಇದೇ ತರಹದ್ದು. 'ಮಾಗಿ' ಕಾದಂಬರಿಯ ಸುಂದ್ರಿಯು ಸ್ವಾಮೇಗೌಡರ ತಂತ್ರಕ್ಕೆ ಸಿಲುಕಿ ಕೊನೆಗೆ ಎಚ್ಚರವಾದಾಗ ಬದುಕಿಗಿಂತ ಸಾವನ್ನು ಸ್ವೀಕರಿಸುತ್ತಾಳೆ. ಈ ಎಲ್ಲಾ ಪ್ರಕರಣಗಳಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಸ್ತ್ರೀಯರು ತಮ್ಮನ್ನು ಮೇಲ್ಜಾತಿಯವರಿಗೆ ಒಪ್ಪಿಸಿಕೊಂಡಿರುವುದು ತಿಳಿಯುತ್ತದೆ.

ಒಟ್ಟಾರೆ ಎರಡೂ ಭಾಷೆಯ ದಲಿತ ಕಾದಂಬರಿಗಳಲ್ಲಿ ಗಂಡು ಹೆಣ್ಣಿನ ಸಂಬಂಧ ಸಾಮಾನ್ಯವಾಗಿದೆ. ಆದರೆ ಅದು ಮೇಲ್ಜಾತಿ ಪುರುಷ ಕೆಳಜಾತಿ ಮಹಿಳೆಯರ ನಡುವೆ ಹೆಚ್ಚಾಗಿ

ಬಡತನ, ಅಸಹಾಯಕ ಸ್ಥಿತಿಯಲ್ಲಿ ತಮ್ಮನ್ನು ಒಪ್ಪಿಸಿಕೊಂಡಿರುವುದು ಕಂಡು ಬರುತ್ತದೆ. ಆದರೆ ಕನ್ನಡ ದಲಿತ ಕಾದಂಬರಿಗಳಲ್ಲಿ ಕಂಡು ಬರುವಂತೆ ಚೆನ್ನ ಕುಸುಮಾಳ ಸಂಬಂಧ ಮತ್ತು ಚೆನ್ನನ ಕೊಲೆಯಂತಹ ಸಂಗತಿಗಳು ತಮಿಳು ದಲಿತ ಕಾದಂಬರಿಗಳಲ್ಲಿ ಕಂಡು ಬರುವುದಿಲ್ಲ. ತಮಿಳಿನ ಮೇರಿಯ ಪ್ರಕರಣ ದಲಿತರಿಂದಲೇ ದಲಿತರಿಗೆ ಆಗುವ ಲೈಂಗಿಕ ಶೋಷಣೆಯಂತಹ ಪ್ರಕರಣಗಳು ಕನ್ನಡ ಕಾದಂಬರಿಗಳಲ್ಲಿ ಕಂಡು ಬರುವುದಿಲ್ಲ.

ಜಾತೀಯತೆಯಿಂದ ದಲಿತರು ಎದುರಿಸುವ ಸಂಕಷ್ಟಗಳು

'ಕಳಿಸಡೈ' ಕಾದಂಬರಿಯಲ್ಲಿ ಬರುವ ಹನುಮಂತು ಸತ್ತ ನಾಯಿಯನ್ನು ತೆಗೆದು ಹಾಕಲು ರೆಡ್ಡಿಯಾರ್ ಅಮ್ಮ ನೀಡುವ ಹತ್ತು ರೂಪಾಯಿಗಾಗಿ ಒಪ್ಪಿಕೊಳ್ಳುತ್ತಾನೆ. ಇದಕ್ಕಾಗಿ ಚಲಕಿ ಕೇಳಿದಾಗ ರೆಡ್ಡಿಯಾರ್ ಅಮ್ಮಾಳು ಹನುಮಂತುವಿನ ಕೈಯಲ್ಲಿ ಕೊಟ್ಟರೆ ಅಸ್ಪೃಶ್ಯತೆ ತಾಗುತ್ತದೆ ಎಂದು ದೂರದಿಂದ ಚಲಕಿಯನ್ನು ಬಿಸಾಕುತ್ತಾಳೆ. ಒಂದು ವೇಳೆ ಹನುಮಂತು ಅದನ್ನು ಸರಿಯಾಗಿ ಹಿಡಿಯದೆ ಇದ್ದಿದ್ದರೆ ಅದು ಅವನ ಕಾಲಿಗೆ ಬಲವಾದ ಪೆಟ್ಟು ನೀಡುತ್ತಿತ್ತೆಂದು ಲೇಖಕರು ತಿಳಿಸುತ್ತಾರೆ. ಈ ಕಾದಂಬರಿಯ ಮತ್ತೊಂದು ಸಂದರ್ಭದಲ್ಲಿ ಹನುಮಂತು ನಗರಾಡಳಿತದಲ್ಲಿ ಸ್ವಲ್ಪ ದಿನಗಳ ಕಾಲ ನಾಯಿ ಹಿಡಿಯುವ ಕೆಲಸ ಮಾಡುತ್ತಾನೆ. ಆಗ ಮುದಲಿಯಾರ್ ಮನೆಯ ನಾಯಿಯನ್ನು ಹಿಡಿದುಬಿಡುತ್ತಾರೆ. ಅದಕ್ಕಾಗಿ ಹನುಮಂತುವನ್ನು ನಗರಾಡಳಿತದ ಕೆಲಸಗಾರನೆಂದೂ ನೋಡದೆ ನಾಯಿಗಿಂತ ಕೇವಲವಾಗಿ ಹೊಡೆಯುತ್ತಾರೆ. "ಒಂದು ನಾಯಿಗಾಗಿ ಮನುಷ್ಯನನ್ನು ಹಿಡಿದು ಏಕೆ ಈ ರೀತಿ ಹೊಡೆಯುತ್ತಿದ್ದೀಯಾ ಎಂದು ಒಬ್ಬನೂ ಕೇಳಲಿಲ್ಲ. ಪ್ರೇಕ್ಷಕರಂತೆ ನೋಡಿದರಷ್ಟೆ" (ಅವರಿವಳಗನ್, ಕಳಿಸಡೈ. ಪು. ೧೨೭) ಯಾರೂ ಸಹ ಈ ಕಾರ್ಯಕ್ಕೆ ಮುದಲಿಯಾರ್‌ರ ಮೇಲೆ ಯಾವುದೇ ರೀತಿಯ ಆಕ್ಷೇಪಣೆಗಳನ್ನಾಗಲೀ, ಪ್ರತಿಭಟನೆಗಳನ್ನಾಗಲಿ ವ್ಯಕ್ತಪಡಿಸಲಿಲ್ಲ ಎಂಬುದನ್ನು ಈ ಪ್ರಕರಣ ತಿಳಿಸುತ್ತದೆ.

ಶಿಕ್ಷಣ ಎನ್ನುವುದು ದಲಿತರಿಗೆ ಸುಲಭವಾಗಿ ಸಿಗುವಂತದ್ದಾಗಿರಲಿಲ್ಲ. 'ಕಳಿಸಡೈ' ಕಾದಂಬರಿಯಲ್ಲಿ ಮುನಿಯನ್‌ನ ಮಗ ರಾಸಪ್ಪನು ಶಾಲೆಗೆ ಹೋಗುವುದನ್ನು ಅವನು ದಲಿತ ಎನ್ನುವ ಕಾರಣಕ್ಕೆ ವಿರೋಧಿಸಿದ ಯಜಮಾನ, "ಓದುವುದಕ್ಕೆ ಪಾರಂಪರಿಕವಾಗಿ ಸ್ವಲ್ಪ ಬುದ್ಧಿಯೂ ಇರಬೇಕು. ಇಲ್ಲಿಯೇ ಬಿಟ್ಟುಬಿಡು ಏನೋ ಸಮಯಕ್ಕೆ ತಕ್ಕಂತೆ ಹಸಿವಿನಿಂದ ಇರದೆ ಗಂಜಿ ಆದರು ಸಿಗುತ್ತದೆ" (ಅರಿವಳಿಗನ್, ಕಳಿಸಡೈ, ಪು. ೧೯) ಎನ್ನುತ್ತಾರೆ. ಶಾಲೆಗೆ ಹೋಗುವುದರಿಂದ ಕೆಲಸಕ್ಕೆ ಸಹಿ ಮಾಡಿದಂತೆ ಎಂಬ ಭಾವನೆ ಯಜಮಾನನಲ್ಲಿ ಆಳವಾಗಿ ಮೂಡಿತ್ತು. ಶಿಕ್ಷಣ ಪಡೆದು ಜಾಗೃತಿ ಹೊಂದಿ ಬಿಟ್ಟರೆ ತಮ್ಮ ಅಧಿಕಾರಕ್ಕೆ ಕಡಿವಾಣ ಹಾಕಿ ನಮ್ಮ ಕೆಲಸಗಳಿಗೆ ಬರುವುದಿಲ್ಲ, ಎಂಬ ಮೇಲ್ವರ್ಗದವರ ಮನಸ್ಥಿತಿಯು ದಲಿತರನ್ನು ಶಿಕ್ಷಣ ಪಡೆಯದಂತೆ ವಿರೋಧಿಸುವುದನ್ನು ನೋಡಬಹುದು.

'ಪಳಯನ ಕಳಿದುಳಂ' ಕಾದಂಬರಿಯಲ್ಲಿ ಬರುವ ಕಾತ್ತಮುತ್ತು ದಲಿತ ಜಾತಿಗೆ ಸೇರಿದ್ದು, ಆರಂಭಿಕ ಶಿಕ್ಷಣ ಮಾತ್ರ ಮಾಡಿದ್ದರೂ ಲೋಕಜ್ಞಾನ ತಿಳಿದವರಾಗಿದ್ದರು. ತನ್ನ ಜಾತಿಯವರಿಗೆ ಅನ್ಯಾಯ ಆದರೆ ಮುಂದೆ ನಿಂತು ನ್ಯಾಯ ಕೇಳುತ್ತಾರೆ. ಹೀಗಿದ್ದರೂ ಕೀಳು ಕುಲದಲ್ಲಿ ಹುಟ್ಟಿದ್ದರಿಂದ ಅಸ್ಪೃಶ್ಯತೆಯ ಅನುಭವ ಅವರನ್ನು ಸೋಂಕುವ ಸಂದರ್ಭ ಹಲವು ಸಂದರ್ಭಗಳಲ್ಲಿ ಕಾಣಬಹುದು. ತನ್ನ ಸ್ನೇಹಿತ ನಾಯಕ್ಕರ್ ಜವಳಿ ಅಂಗಡಿ ಇಟ್ಟಿದ್ದರು ಅಂಗಡಿಗೆ ಬರುವವರ ಮುಂದೆ ಕಾತ್ತಮುತ್ತುವನ್ನು ವೈಭವೀಕರಿಸಿ ಮಾತಾಡಿದರೂ ಕೆಲವೊಮ್ಮೆ "ಪಾಪ ಒಳ್ಳೆಯ ಮನುಷ್ಯ...... ಕೀಳು ಜಾತಿ..... ಮಾತಾಡುವುದನ್ನು ನೋಡಿದರೆ ಕಾಣಿಸುತ್ತಿಲ್ಲವೆ!" (ಪ.ಶಿವಕಾಮಿ, ಪಳಯನ ಕಳಿದಳುಂ ಪು. ೩೩) ಎಂದು ಹೇಳುವುದು ವ್ಯಕ್ತಿ ಬುದ್ಧಿವಂತನಾಗಿದ್ದರೂ ದಲಿತ ಜಾತಿಯಿಂದಾಗಿ ಕಾತ್ತಮುತ್ತುವು ಅಪಮಾನ ಪಡುವುದನ್ನು ಕಾದಂಬರಿಯು ಚಿತ್ರಿಸಿದೆ.

ದಲಿತ ಸಮುದಾಯಕ್ಕೆ ಸೇರಿದ ಇಳಂಗೋವನ್ನು ಪಡೈಯಾಚ್ಚಿಯಾರ್ ಸಮುದಾಯಕ್ಕೆ ಸೇರಿದ ಲಲಿತಾ ಪ್ರೀತಿಸುತ್ತಾಳೆ. ಆದರೆ ಇದನ್ನ ಅವಳ ತಾಯಿ "ನಿನಗೇನಲೇ ಹುಚ್ಚು ಹಿಡಿದಿದೆಯಾ?.... ಪರೈಯನನ್ನು ಮಾಡಿಕೊಳ್ಳಲು ಅವನು ಬೀದಿಯ ಮೂಲೆಯಲ್ಲಿ ನಿಂತು ಜನ್‌ಜನುಕ್ಕಾ... ಜನಕ್ಕು.... ಜನಕ್ಕು..... ಅಂತ ತಮಟೆ ಬಾರಿಸುತ್ತಾನೆ... ನಿನ್ನನ್ನು ನೋಡಿ ಊರೇ ಉಗುಳುತ್ತದೆ." (ಪ.ಶಿವಕಾಮಿ, ಪಳಯನ ಕಳಿದಳುಂ, ಪು. ೧೬೪) ಎಂದು ಇಳಂಗೋ ಲಲಿತಾಳಿಗೆ ತಕ್ಕ ಗಂಡನಾಗಿದ್ದರು ಅವನು ದಲಿತ ಎನ್ನುವ ಕಾರಣಕ್ಕೆ ಅವನನ್ನು ನಿರಾಕರಿಸುತ್ತಾಳೆ.

ಮರಣ ಮಂಡಲ ಮಧ್ಯದೊಳಗೆ, ಕುಸಮಬಾಲೆ, ಕಾರ್ಯ, ಹೊಲಗೇರಿಯ ರಾಜಕುಮಾರ ಕಾದಂಬರಿಗಳು, ಜಾತೀಯತೆ ಕುರಿತು ಜಾತಿ-ಜಾತಿಗಳ ನಡುವಿನ ಕಂದಕವನ್ನು ಚಿತ್ರಿಸುತ್ತವೆ. ತಮಿಳು ಕನ್ನಡ ಎರಡೂ ಭಾಷೆಯ ಕಾದಂಬರಿಗಳಲ್ಲಿ ಜಾತೀಯತೆಯನ್ನು ಒಂದು ದೊಡ್ಡ ಸಮಸ್ಯೆಯಾಗಿಯೇ ಪರಿಗಣಿಸಿರುವುದನ್ನು ಕಾಣಬಹುದು.

ದಲಿತರ ಭೂ ಕಬಳಿಕೆ

ಕಡುಬಡತನವು ದಲಿತರನ್ನು ಆವರಿಸಿರುವ ಕಾರಣದಿಂದ ಅವರು ತಮ್ಮ ಭೂಮಿಯನ್ನು ಅಲ್ಪ ಹಣಕ್ಕೊ, ಮೋಸಕ್ಕೊ ಮೇಲ್ಜಾತಿ ಮತ್ತು ಮೇಲ್ವರ್ಗದವರು ಮೋಸದಿಂದ ಕಬಳಿಸುವುದನ್ನು ದಲಿತ ಕಾದಂಬರಿಗಳು ಚಿತ್ರಿಸುತ್ತವೆ. "ಬೆಳೆಯದೆ ಬೇರು ಬಿಟ್ಟಿರದ ಕಾಡುಗಳನ್ನು ಅಲ್ಪ ದರದಲ್ಲಿ ಗುತ್ತಿಗೆ ಬಿಡಲು, ಕ್ರೈಂ ಮಾಡಿಕೊಳ್ಳಲು, ಅಡವಿಡುವುದು, ಮಾರಲೋ ಪಟ್ಟಣದಿಂದ ಬೆಂಕಿಪೊಟ್ಟಣ ಆಫೀಸ್‌ನ ಯಜಮಾನರು ಊರುಗಳಿಗೆ ಏಜೆಂಟರುಗಳನ್ನು ಕಳುಹಿಸಿ ಮಾತಾಡಿದರು. ಏಜೆಂಟುಗಳು ಊರೊಳಗೆ ಬಂದು ಬಿಟ್ಟರೆ ಸಾಕು ಸಂಸಾರಿಗಳು ಅವರನ್ನು ಸುತ್ತುವರೆದು ತಮ್ಮ ನೆಲವನ್ನು ಕಡಿಮೆ ಬೆಲೆಗೆ ಮಾರಲು, ಅಡವಿಡಲು, ಗುತ್ತಿಗೆ ಕೊಡಲು ಮುಂದಾದರು" (ಸೋ. ಧರ್ಮನ್, ತೂರ್ವೈ, ಪು. ೨೧೬) ದಲಿತರ ಭೂಮಿಯನ್ನು ಕಬಳಿಸುವ ಹಲವು

ಮೋಸದ ತಂತ್ರಗಳನ್ನು ಮೇಲ್ಜಾತಿಯವರು ನಡೆಸುವುದನ್ನು ಕಾದಂಬರಿ ವಿವರಿಸುತ್ತದೆ. ಅದರೊಂದಿಗೆ ಜೀವನ ನಡೆಸಲು ಬೆಳೆದ ಭೂಮಿಯನ್ನು ಕಳೆದುಕೊಳ್ಳುವ ಸ್ಥಿತಿಯನ್ನು ಕಾಣಬಹುದು.

ದಲಿತರ ಬಡತನದ ಕಾರಣದಿಂದ ತಾವು ಉಳುಮೆ ಮಾಡುವ ಭೂಮಿಗೂ ಕರ ಕಟ್ಟಲಾಗದ ಸ್ಥಿತಿಯನ್ನು 'ತಗಪ್ಪನ್ ಕೊಡಿ' ಕಾದಂಬರಿಯು ದಾಖಲಿಸುತ್ತದೆ. ಇದನ್ನು ಉಪಾಯವಾಗಿ ಬಳಸಿಕೊಂಡು ಮೇಲ್ಜಾತಿಯವರು ಅದನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಭೂಮಿಯನ್ನು ಅಪಹರಿಸುವ ದಾರುಣ ಸ್ಥಿತಿಯನ್ನು ಕಾದಂಬರಿ ಚಿತ್ರಿಸುತ್ತದೆ. "ಕಂದಾಯ ವಸೂಲಿಗಾರ ಈ ನೆಲಕ್ಕೆ ಹೋಗಿ ಸುಂಕ ಕೇಳಿ ಬರುತ್ತಿದ್ದಾನೆ ಎಂಬಂತಿತ್ತು ಅಮ್ಮಾಸಿಗೆ. ಬಿಳಿಗಾರ ದೊರೆ ಈ ಕಂದಾಯ ವಸೂಲಿಗಾರನನ್ನು ನೇರವಾಗಿ ಇವನ ನೆಲಕ್ಕೇ ಹೋಗು ಎಂದು ಕಳುಹಿಸುತ್ತಾನೆ? ಕಂದಾಯ ವಸೂಲಿಗಾರ ಊರೊಳಗೆ ಬರುವಾಗಲೆಲ್ಲಾ ಸುಂಕ ಕೇಳುವುದಕ್ಕಾಗಿ ಬರುತ್ತಾನೆ. ನಾಯ್ಡುಗಳು, ಕವುಂಡರ್‌ಗಳು, ಕೆಲವು ಆಚಾರಿಗಳಿಗೆ ಇರುವಂತಹ ಒಳ್ಳೆಯ ಗಟ್ಟಿ ನೆಲವೇ ಅದು? ಉಸುಗು ತುಂಬಿದ ಕೆರೆ ಭಾಗ, ಅದಕ್ಕೆ ಎರಡು ಮೂರು ರೂಪಾಯಿ ಸುಂಕ. ಕಂದಾಯ ವಸೂಲಿಗಾರ ಬಂದು ಬಿಟ್ಟಾನೆಂದರೆ ಅಮ್ಮಾಸಿ ಸಜ್ಜೆಯನ್ನೋ, ರಾಗಿಯನ್ನೋ, ತೆಂಗಿನ ಕಾಯಿಗಳನ್ನೋ ತೋರಿಸಿ ಅತ್ತು ಬಿಡುತ್ತಾನೆ" (ಅಳಗಿಯ ಪೆರಿಯವನ್, ತಗಪ್ಪನ್ ಕೊಡಿ, ಪು. ೨೪) ದಲಿತರ ಭೂಮಿ ಫಲವತ್ತತೆಯಿಂದ ಕೂಡಿರದೆ ಇದ್ದರೂ, ಅದರಿಂದ ಹೇಳಿಕೊಳ್ಳುವಂತಹ ವರಮಾನ ಸಿಗದಿದ್ದರೂ ಅದಕ್ಕೆ ಸುಂಕ ಕಟ್ಟಬೇಕಿತ್ತು. ಒಂದು ವೇಳೆ ಹಣ ಇಲ್ಲದಿದ್ದರೆ ಮನೆಯಲ್ಲಿ ಇರುತ್ತಿದ್ದ ಆಹಾರ ಧಾನ್ಯಗಳನ್ನು ಕಂದಾಯ ವಸೂಲಿಗಾರರು ದೋಚುತ್ತಿದ್ದರು ಎಂಬುದು ತಿಳಿಯುತ್ತದೆ. "ತಿರುಮಲಯ್ಯನ ಬಳಿ ಭತ್ತ ತೆಗೆದುಕೊಂಡು ಹೋಗಲು ಕಂದಾಯ ವಸೂಲಿಗಾರ ಬರುತ್ತಿದ್ದಾನೆಂದು ಅಮ್ಮಾಸಿಗೆ ತಿಳಿದಿತ್ತು. ಅಮ್ಮಾಸಿ ಕಂದಾಯ ವಸೂಲಿಗಾರನ ಬಳಿ ಮಾತಾಡದೆ ಮೌನವಾಗಿದ್ದರೂ ಬಿಡದೆ ಅವನು ಮಾತಾಡಿಸುತ್ತಿದ್ದದ್ದು ಕೆಲವು ವೇಳೆ ಅಮ್ಮಾಸಿಗೆ ಕಷ್ಟಕರವೆನಿಸುತ್ತಿದ್ದಾಗ ಏನಲೆ ಅಮ್ಮಾಸಿ ಸುಂಕವನ್ನು ಕೂಡಿಟ್ಟು ಬಿಟ್ಟೆಯಾ? ಕೇರಿಯಲ್ಲಿ ಹೆಸರು ಕಾಲಿನಲ್ಲಿ ಕೆಸರು ಎನ್ನುತ್ತಾ ಹೇಗೆ ಇದ್ದರೆ ಹೇಗೆ ಲೇ...... ನಾನು ಆಗಲೇ ನಿನಗೆ ಎಚ್ಚರಿಸಿದ್ದೇನೆ ಆಮೇಲೆ ನೀನು ನಿನ್ನ ಮೇಲೆ ಕೊರತೆ ತಿಳಿದುಕೊಳ್ಳಬಾರದು (ಅದೇ, ಪು. ೫೩) ಎಂದು ಎಚ್ಚರಿಸುತ್ತಾನೆ. ಇಂತಹ ಹೀನ ಸ್ಥಿತಿಯನ್ನು ತಿಳಿದುಕೊಂಡ ಯಜಮಾನ ತಿರುಮಲಯ್ಯನು ಅಮ್ಮಾಸಿಯಿಂದ ನೆಲವನ್ನು ಅಪಹರಿಸಿಕೊಳ್ಳುತ್ತಾನೆ. ಸ್ವಲ್ಪ ಕೂಲಿ ಹೆಚ್ಚು ಕೇಳಿ ಇವನು ನಮ್ಮನ್ನು ವಿರೋಧಿಸಿ ಮಾತಾಡುತ್ತಿದ್ದಾನೆ ಎಂದರೆ ಇವನ ಬಳಿ ನೆಲ ಇರುವುದರಿಂದಲೇ ಎದುರಿಸುತ್ತಿದ್ದಾನೆ ಎಂದು ತಂತ್ರದಿಂದ ಅವನ ನೆಲವನ್ನು ಕಬಳಿಸುತ್ತಾನೆ. ಕೊನೆಗೆ ತಿರುಮಲಯ್ಯನು ಆ ನೆಲಕ್ಕೆ ಸುಂಕ ಕಟ್ಟಿದ್ದೇನೆಂದು ಅದನ್ನು ಅಪಹರಿಸಿಕೊಳ್ಳುತ್ತಾನೆ.

"ಲೇ ಸುಮ್ಮನೆ ಮಾತು ಬಿಡು. ನಾನು ಸುಂಕ ಕಟ್ಟಿದ್ದೇನೆ. ಇದು ನನ್ನ ನೆಲ, ಹೋಗಲೇ ಇಲ್ಲಿಂದ..

ಯಜಮಾನ, ಇದು ಒಳ್ಳೆಯದಲ್ಲ, ಇದು ಹೇಗೆ ನಿನ್ನದಾಗುತ್ತದೆ? ನಮ್ಮ ಹೊಟ್ಟೆಯ ಮೇಲೆ ಹೊಡೆಯಬೇಡ..

ಲೇ ಏನಲೇ ಹೊಟ್ಟೆಗೆ ಹೊಡೆಯುವುದು ಬೇರೆ ಕಡೆ ಹೊಡೆಯುವುದು ಏನೋ ಸುಂಕ ಕಟ್ಟಿದವನ ಹಾಗೆ ಹೇಳುತ್ತೀಯಾ..

ನಾನು ಕಟ್ಟುತ್ತೇನೆ ಕಟ್ಟಲ್ಲಿ ಅದಕ್ಕೇನು ಈಗ? ನನ್ನಪ್ಪನ ಕಾಲದಿಂದಲೇ ಇದರಲ್ಲಿ ನಾವು ಊಳುತ್ತಿದ್ದೇವೆ. ಇದು ನಮ್ಮಪ್ಪನ ನೆಲ..

ನಿಮ್ಮಪ್ಪನ ನೆಲವೆಂದು ಪಟ್ಟ ಇದೆಯಾ? ನೀನು ಕಟ್ಟಲಾರದೆ ಇದ್ದ ಭೂಮಿಗೆ ನಾನು ಸುಂಕ ಕಟ್ಟಿದ್ದೇನೆ. ಸಾಲದ್ದಕ್ಕೆ ನಿನ್ನ ಮದುವೆಗೆ ನನ್ನ ಬಳಿ ತೆಗೆದುಕೊಂಡು ಹೋದ ಹಣ ಇದೆ ಅದಕ್ಕೆ ಸರಿಯಾಗಿ ಆಯಿತು." (ಅದೆ, ಪು. ೫೬) ಸುಂಕ ಕಟ್ಟಲಾಗದ ಬಡತನದ ಸ್ಥಿತಿ ಅಮ್ಮಾಸಿಯದು ಆದರೆ ಅದನ್ನೇ ಉಪಾಯವಾಗಿ ಬಳಸಿಕೊಳ್ಳುವ ಯಜಮಾನ ತನ್ನ ಹೆಸರಿನ ಮೇಲೆ ಸುಂಕ ಕಟ್ಟಿ ನೆಲವನ್ನು ಅಪಹರಿಸುತ್ತಾನೆ. ಕೊನೆಗೆ ಎಷ್ಟೇ ಹೋರಾಡಿದರೂ ಯಜಮಾನನ ತಂತ್ರವೇ ಜಯಿಸುತ್ತದೆ ಎಂದು ಕಾದಂಬರಿಯು ತಿಳಿಸುತ್ತದೆ.

ತಮಿಳು ಕಾದಂಬರಿಯಂತೆ ಕನ್ನಡದಲ್ಲೂ ದಲಿತರು ಭೂಮಿಯನ್ನು ಹೊಂದಿದ್ದರು. ಆದರೆ ಭೂ ಒಡೆತನ, ಭೂ ಕಬಳಿಕೆ ಸಮಸ್ಯೆಗಳು ಮುಖ್ಯವಾಗಿ ಚಿತ್ರಿಸಿಲ್ಲ. 'ಮಾಗಿ', 'ಒಡಲಾಳ' ಕಾದಂಬರಿಗಳು ಭೂ ಒಡೆತನದ ಕುರಿತು ಪ್ರಸ್ತಾಪಿಸುತ್ತದೆ. ಆದರೆ 'ತಗಪ್ಪನ್ ಕೊಡಿ' ಮತ್ತು 'ತೂರ್ವೈ' ಕಾದಂಬರಿಗಳಲ್ಲಿ ಬರುವಂತೆ ದಲಿತರ ಭೂ ಕಬಳಿಕೆಯ ಪ್ರಕರಣ ಗಂಭೀರವಾಗಿ ಕಂಡು ಬರುವುದಿಲ್ಲ.

ದಲಿತರ ಪಾರಂಪರಿಕ ಕುಲಕಸುಬುಗಳು

ಕೆಳವರ್ಗದ ಜನರು ಆರ್ಥಿಕವಾಗಿ ಸಬಲರಾಗಿಲ್ಲದ ಕಾರಣವಾಗಿ ಕೂಲಿಯಿಂದ ಜೀವನ ನಡೆಸುತ್ತಿದ್ದಾರೆ ಎಂದು ತಮಿಳು ದಲಿತ ಕಾದಂಬರಿಗಳು ತಿಳಿಸುತ್ತವೆ. ಆ ದಲಿತರಿಗೆ ಭೂಮಿಯಾಗಲಿ, ಮನೆಯಾಗಲಿ ಇರುವುದಿಲ್ಲ. ಹಲವರು ಕಲಿತು ಕಾರ್ಯ ನಿರ್ವಹಿಸುವ ಸ್ಥಳದಲ್ಲಿ ಜಾತಿಯನ್ನು ನೋಡಿ ದೂರ ಸರಿಸುವ ಸ್ಥಿತಿಗೆ ಗುರಿಯಾಗುತ್ತಿದ್ದಾರೆ. ಕೆಲವು ಪ್ರತ್ಯೇಕ ಕೆಲಸಗಳನ್ನು ಮಾತ್ರ ಇವರು ಮಾಡುವಂತದ್ದು ಎಂದು ವಿಭಾಗಿಸಿರುವುದನ್ನು ಕಾಣಬಹುದು. ವ್ಯವಸಾಯ ಕೂಲಿಗಳಾಗಿ, ಯಜಮಾನರ ಮನೆಗಳಲ್ಲಿ ಗುಲಾಮರಾಗಿ, ತೋಟಿಗಳಾಗಿ ಇವರು ಕೆಲಸ ಮಾಡುವುದನ್ನು ಗಮನಿಸಬಹುದು.

ನಗರಾಡಳಿತದಲ್ಲಿ ತೊಟಿ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದ ಹನುಮಂತಯ್ಯ ಮನೆ ಮನೆಗಳಿಗೆ ದಿನವೂ ಹೋಗಿ ಮಲ ಎತ್ತುವ ಕೆಲಸವನ್ನು ಮಾಡುತ್ತಾನೆ. ಸತ್ತ ನಾಯಿಯನ್ನು ತೆಗೆದು ಹೂಳುವುದರ ಜೊತೆಯಲ್ಲಿಯೇ ಅನಾಥ ಮುದುಕಿಯರನ್ನು ಹೂಳುತ್ತಾನೆ. ಇಷ್ಟು ಅವಮಾನಕರ ಕೆಲಸ ಮಾಡಿದರೂ ಕೆಲಸವನ್ನು ಬಿಡಬಾರದೆಂದು ತನ್ನ ಮಗ ಸೀನಯ್ಯನನ್ನು

ಈ ವೃತ್ತಿಯಲ್ಲಿ ಮುಂದುವರೆಯುವಂತೆ ತಿಳಿಸುತ್ತಾನೆ. ಸೀನಯ್ಯನಿಂದ ಈ ಕೆಲಸ ಮಾಡಲಾಗಲಿಲ್ಲ. ಅಧಿಕಾರಿಗಳನ್ನು ಸರ್ ಎಂದು ಕರೆಯುತ್ತಾನೆ. ಕೆಳಜಾತಿಯ ಕೆಲಸಗಾರರು ಅಧಿಕಾರಿಗಳನ್ನು 'ಸ್ವಾಮಿ' ಎಂದೇ ಕರೆಯಬೇಕು. ಅವರು ಮಾಡುವ ಕೆಲಸದಲ್ಲೂ ಮಾತಾಡುವ ರೀತಿಯಲ್ಲೂ ಅವರು ಕೆಳಮಟ್ಟದವರೆಂದೇ ತೋರಿಸಿಕೊಳ್ಳಬೇಕೆಂದು ಸಂಪ್ರದಾಯ ಇರುವುದರಿಂದ "ಏನಲೇ ಸಾರು ನೀರು ಅನ್ನಬಹುದೇ? ಸಾಮಿಯೆಂದು ಹೇಳು. ಮೇಟ್ಟು ಬೀದಿಯಲ್ಲಿ ಮಲ ತೆಗೆಯಲು ಯಾರು ಇಲ್ಲವಂತೆ ಅಲ್ಲಿಗೆ ಹೋಗು" (ಅರಿವಳಗನ್, ಕಳಿಸಡೈ, ಪು. ೨೪೩) ಪರಂಪರೆಯನ್ನು ಧಿಕ್ಕರಿಸುವ ಹೊಸ ತಲೆಮಾರಿನ ದಲಿತ ಯುವಕರನ್ನು ಇದೇ ವೃತ್ತಿಯಲ್ಲಿ ಮುಂದುವರಿಸಬೇಕೆಂದು, ಅವರು ಮೇಲ್ಜಾತಿಯವರ ಮನೆಗಳಲ್ಲಿ ಗುಲಾಮರಾಗಿದ್ದುಕೊಂಡು ಇವರ ಮಲ ಎತ್ತುವ ಕೆಲಸ ಮಾಡಬೇಕು ಎನ್ನುವ ಮೇಲ್ಜಾತಿಯರ ದಬ್ಬಾಳಿಕೆಯನ್ನು ಕಾದಂಬರಿ ವಿವರಿಸುತ್ತದೆ. ಕೆಳ ಹಂತದ ಕೂಲಿಕಾರರಿಗೆ ಯಾವುದೇ ಮರ್ಯಾದೆಯಿಲ್ಲದೆ ನಡೆಸಿಕೊಳ್ಳುವುದನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ದಲಿತ 'ಪರವಣ್ಣರ್' ಜಾತಿಗೆ ಸೇರಿದ ಬಟ್ಟೆ ಒಗೆಯುವ ಕೂಲಿ ಕೆಲಸಗಾರರ ಜೀವನ ವಿಧಾನವನ್ನು ಮಾನವೀಯತೆಯಿಂದ ಚಿತ್ರಿಸುವ ಕಾದಂಬರಿ ಇಮಯಂ 'ಕೋವೇರು ಕಳುದೈಗಳ್'. ಹೆಂಗಸರ ಹೆರಿಗೆಯಿಂದ, ಮದುವೆ, ಕಿವಿ ಚುಚ್ಚುವುದು, ಸಾವು ಮುಂತಾದ ಗ್ರಾಮದ ಎಲ್ಲಾ ಕಾರ್ಯಗಳಲ್ಲೂ ಭಾಗಿಯಾಗುವ ಆರೋಗ್ಯಂ "ಈ ವಣ್ಣಾತ್ತಿ (ಅಗಸಳು) ಮಗಳು ಇದ್ದಾಳೆ ಎನ್ನುವುದನ್ನೇ ಮರೆತುಬಿಟ್ಟಿದ್ದೀರಾ ಸ್ವಾಮಿ? ಕಲಿಸಿಕೊಳ್ಳಲು ಏನೂ ಇಲ್ಲ. ಎರಡು ಮೆಣಸಿನಕಾಯಿ ಇದ್ದರೆ ಹಾಕಿ, ಅಮ್ಮ ನಿಮ್ಮ ಪರೈಯರ್ ಮನೆಯ ವಣ್ಣಾತ್ತಿ ಮಗಳು ಬಂದಿದ್ದೇನೆ. ಈ ಮಣ್ಣಾತ್ತಿಯನ್ನು ಮರೆತು ಬಿಟ್ಟಿದ್ದೀರಾ? (ಇಮುಯಂ. ಕೋವೇರು ಕಳುದೈಗಳ್, ಪು. ೭೬) ಈ ಧ್ವನಿ ಕಾದಂಬರಿ ಪೂರ್ತಿಯಾಗಿ ಕೇಳಿ ಬಂದರೂ ಊರು ಆರೋಗ್ಯಂಳನ್ನು ನಿಧಾನವಾಗಿ ಮರೆಯುತ್ತಿರುವುದು ಕಾಣಿಸುತ್ತದೆ. ಪರೈಯರ್‌ರ ಬಟ್ಟೆಗಳನ್ನು ಒಗೆಯುವ ರಾತ್ರಿಯಲ್ಲಿ ಅವರು ಕೊಡುವ ಅನ್ನವನ್ನು ತಿನ್ನುವ ವೃತ್ತಿಯನ್ನೇ ಮಾಡುತ್ತಿದ್ದರು ಎಂದು ಕಾದಂಬರಿ ತಿಳಿಸುತ್ತದೆ. ಕಾರಣ ಪರೈವಣ್ಣಾರ್ ಜಾತಿಯವರು ದಲಿತರಾದ ಪರೈಯರ್ ಮನೆಗಳಲ್ಲಿ ಬಟ್ಟೆ ಒಗೆದು ಜೀವನ ನಿರ್ವಹಣೆ ಮಾಡಬೇಕಾಗುತ್ತದೆ. ಇದು ಪಾರಂಪರಿಕವಾಗಿ ನಡೆದುಕೊಂಡು ಬಂದಿರುವ ಕುಲಕಸುಬಾಗಿದೆ.

'ತೂರ್ವೈ' ಕಾದಂಬರಿಯಲ್ಲಿ ಪರೈವಣ್ಣಾರ್ (ಅಗಸ) ಕುಲವನ್ನು ಸೇರಿದ ಸಾತನ್ ಮನೆ ಮನೆಗೆ ಹೋಗಿ ಗಂಜಿ ತಂದು ಜೀವಿಸುವ ಅಂಶ ತಿಳಿದು ಬರುತ್ತದೆ. ಉರುಳೈಕುಡಿ ಎಂಬ ದಲಿತ ಗ್ರಾಮದಲ್ಲಿ ಸಂಪ್ರದಾಯದ ಜೊತೆಯಲ್ಲಿ ಜೀವಿಸುತ್ತಿದ್ದ ಸಾತ್ತನ್ ಅನ್ನವನ್ನು, ಮಾಂಸವನ್ನು ತೆಗೆದುಕೊಳ್ಳಲು ಬೀದಿ ಬೀದಿಯಲ್ಲಿ ಅಲೆಯುತ್ತಾನೆ. ಮಳೆ ಬರದೆ ಬಡತನ ಬಂದಾಗಲೂ, ಬಟ್ಟೆ ಒಗೆಯುವ ಕೆಲಸ ಇಲ್ಲವಾದಾಗಲೂ ನಗರಕ್ಕೆ ಹೋಗಲು ತಿರಸ್ಕರಿಸುತ್ತಾನೆ. ಗ್ರಾಮ,

ಕೆಲಸ, ಹೊಟ್ಟೆಪಾಡನ್ನು ತೀರಿಸಿಕೊಳ್ಳುವುದು ಎಂಬ ಗಡಿಗಳನ್ನು ದಾಟಿ ಹೊರಗೆ ಬರದ ಪರಿಸ್ಥಿತಿ ಇವರ ಜೀವನದ ರೀತಿಯಾಗಿ ಕಾಣಿಸುತ್ತದೆ.

'ಉಪ್ಪು ವಯಲ್' ಕಾದಂಬರಿಯಲ್ಲಿ ಉಪ್ಪಿನ ಪೆಟ್ಟಿಗೆಗಳನ್ನು ಹೊತ್ತುಕೊಂಡು ಲಾರಿಗಳಲ್ಲಿ ತುಂಬಿಸುವ, ಉಪ್ಪನ್ನು ತುಳಿಯುವುದು, ಪೆಟ್ಟಿಗೆಗಳಲ್ಲಿ ಉಪ್ಪನ್ನು ತುಂಬಿಸುವುದು ಮುಂತಾದ ಹಲವು ಕೆಲಸಗಳನ್ನ ಮಾಡುತ್ತಾರೆ. ಓಡಿ ಓಡಿ ಕೆಲಸಗಳನ್ನು ಮಾಡಿದರೂ ಇವರಿಗೆ ಸಿಗುತ್ತಿದ್ದ ಕೂಲಿ ಹತ್ತು ರೂಪಾಯಿ ಮಾತ್ರ. ಶ್ರಮಕ್ಕೆ ತಕ್ಕಂತೆ ಕೂಲಿ ಸಿಗದಿದ್ದರೂ ಅವರು "ಈ ಹಣಕ್ಕಾಗಿಯೇ ಇಷ್ಟು ಶ್ರಮ ಪಡಬೇಕು. ಈ ದುಡ್ಡು ಒಂದು ದಿನ ಸಿಗದಿದ್ದರೂ ಮನೆಯ ಗತಿ ಕಷ್ಟವೇ" (ಶ್ರೀಧರ ಗಣೇಶನ್, ಉಪ್ಪುವಯಲ್, ಪು. ೯) ಎಂದು ಹೇಳುವ ಅವರ ಮಾತುಗಳು ಅವರ ಕಡು ಬಡತನವನ್ನು ದಿನಗೂಲಿಗಳಾಗಿ ಜೀವಿಸುವ ಸಂಕಷ್ಟವನ್ನು ತಿಳಿಸುತ್ತವೆ.

ತಮಿಳು-ಕನ್ನಡ ಎರಡೂ ಕಾದಂಬರಿಗಳಲ್ಲಿ ದಲಿತರು ಚಪ್ಪಲಿ ಹೊಲಿಯುವುದು, ತಮಟೆ ಬಾರಿಸುವುದು, ಛಟ್ಟ ಕಟ್ಟುವುದು, ಹರಿದ ಬಟ್ಟೆಗಳನ್ನು ಹೊಲಿದು ಕೊಡುವುದು, ಬುಟ್ಟಿ ಹೆಣೆಯುವುದು, ಸಾವಿನ ಸುದ್ದಿ ಹೇಳುವುದು, ಮೇಲ್ಜಾತಿ ಮನೆಗಳಲ್ಲಿ ಜೀತವಿರುವುದು, ಮನೆಮನೆಗಳಲ್ಲಿ ಅನ್ನ ಬೇಡಿ ತಿನ್ನುವುದು ಮುಂತಾದ ಕಾರ್ಯಗಳನ್ನು ಮಾಡುವುದು ಚಿತ್ರಿತವಾಗಿದೆ. ತಮಿಳಿನ ಪರೈವಣ್ಣಾರ್ ಎಂಬ ಅಗಸ ವೃತ್ತಿಯಂತೆ ಕನ್ನಡದಲ್ಲಿ ಕಂಡು ಬರುವುದಿಲ್ಲ. ಇವರು ದಲಿತರಾದ ಪರೈಯರ್ ಬಟ್ಟೆಯನ್ನು ಒಗೆಯುವುದರಿಂದ ದಲಿತರಿಗಿಂತ ಕೀಳಾಗಿ ಕಾಣಿಸುತ್ತಾರೆ.

ಸಂಪ್ರದಾಯ ಮತ್ತು ಆಚಾರ ವಿಚಾರಗಳು

ದಲಿತರ ಜೀವನದಲ್ಲಿ ಪ್ರತಿನಿತ್ಯ ನಡೆಯುವ ಆಚಾರ ವಿಚಾರಗಳು, ದೈವ ನಂಬಿಕೆಗಳು, ರೀತಿ ನೀತಿಗಳು, ಜಾತ್ರೆಗಳು ಮುಂತಾದವುಗಳನ್ನು ದಲಿತ ಸಂಸ್ಕೃತಿ ಎಂದು ಕರೆಯಲಾಗುತ್ತದೆ. ಹುಟ್ಟು, ಹೆಸರಿಡುವುದು, ಕಿವಿ ಚುಚ್ಚುವುದು, ಕೂದಲು ತೆಗೆಸುವುದು, ಋತುಮತಿ ಆಗುವುದು, ಮದುವೆ ಮುಂತಾದ ಆಚಾರಗಳು ಒಂದೆಡೆಯಾದರೆ ಸಾವು, ಕಾರ್ಯ ಮುಂತಾದವುಗಳ ಕುರಿತ ಮೂಢನಂಬಿಕೆಗಳು ಎಂದು ಎರಡು ರೀತಿಯ ಅಂಶಗಳನ್ನು ದಲಿತ ಕಾದಂಬರಿಗಳಲ್ಲಿ ಕಾಣಬಹುದು. ದಲಿತ ಬರಹಗಾರರಾದ ಭಾಮಾ 'ದಲಿತ ಸಂಪ್ರದಾಯ ಎನ್ನುವುದು ಮೀರುವಿಕೆಯ ಗುರುತು' ಎನ್ನುತ್ತಾರೆ. ವಳ್ಳಿ ನಾಯಗಂ ಎಂಬುವರು 'ದಲಿತ ಸಂಪ್ರದಾಯವನ್ನು ಮುಂದುವರೆದ ಮಾನವೀಯತೆಯ ಸಂಕಲನ' ಎಂದು ತಿಳಿಸುತ್ತಾರೆ. ದಲಿತ ಸಂಪ್ರದಾಯದಲ್ಲಿ ಮಾನವೀಯತೆಯೇ ತಳಪಾಯ ಎನ್ನುವುದರಿಂದ ಉಸಿರನ್ನು ಕಾಪಾಡುವುದು, ತಮಗೆ ಹುಟ್ಟುವ ಒಂದೊಂದು ಮಗುವನ್ನು ಗಂಡು-ಹೆಣ್ಣು ಎಂಬ ಭೇದ ಭಾವಗಳಿಲ್ಲದೆ ಸಂತೋಷದಿಂದ ಸ್ವೀಕರಿಸುವುದನ್ನು ಕಾಣಬಹುದು. ದಲಿತರಲ್ಲಿ ಇರುವ ನೀತಿ, ಪ್ರೀತಿ, ಸಮಾನತೆ, ಸಹೋದರತ್ವ ಮುಂತಾದವುಗಳು ಅವರನ್ನು ಬಿಟ್ಟು ಬಿಡದೆ ಇರುವುದು ತಿಳಿಯುತ್ತದೆ. 'ತೊರ್ವೈ' ಕಾದಂಬರಿಯಲ್ಲಿ ಬರುವ

ಮಾಡತ್ತಿ ತನ್ನ ಗಂಡ ಮಿನುತ್ತಾನ್‌ನ ಬಳಿ ತಮ್ಮ ಮನೆಯಲ್ಲಿ ಕೆಲಸ ಮಾಡಿದ ಕೂಲಿಗಾರನಿಗೆ ತಮ್ಮ ನೆಲದಲ್ಲಿ ಭಾಗ ಕೊಡಬೇಕೆಂದು ಹೇಳಿದ್ದು, ಮನುಷ್ಯ ಸಂಬಂಧದ ಮುಂದುವರೆದ ಸ್ಥಿತಿಯಂತೆ ಕಾಣಿಸುತ್ತದೆ.

"ಬುದ್ಧಿ ತಿಳಿದ ದಿನದಿಂದಲೂ ನಮ್ಮ ಮನೆಯಲ್ಲಿ ನಾಯಿಯಂತೆ ದುಡಿದವನು ಗುರುಸಾಮಿ ಹುಡುಗ ಅವನಿಗೂ ಒಂದು ಮದುವೆ ಗಿದುವೆ ಮಾಡಿ ನೋಡಿಲ್ಲ. ತಾಯಿ ತಂದೆ ಇಲ್ಲದ ಹುಡುಗ ಅವನೂ ನಮ್ಮ ಮಗನೇ ವಾಗಮರತ್ತು ಪುಂಜು ನಾಲ್ಕು ಎಕರೆ ಕರುಪ್ಪುಸ್ವಾಮಿ ಗುಡಿಯ ತೋಟದಲ್ಲಿ ಅಂಟಿಕೊಂಡಿರುವ ಕೊನೆಯ ಅರ್ಧ ಎಕರೆಯನ್ನು ಆ ಹುಡುಗನ ಹೆಸರಿಗೆ ಬರಿಸಿಬಿಡು. ಪೆರಿಯ ಸೋಲೈಗೆ ಹೇಳಬೇಡ ಆಮೇಲೆ ಕೇಳುಗರ ಮಾತು ಕೇಳಿ ನಿಜಗಳ ಮಾಡಿದರೂ ಮಾಡಿಯಾನು. ಕಿವಿ–ಕಿವಿಗೆ ತಿಳಿಯುವಂತೆ ಕಾರ್ಯ ಮುಗಿಸಬೇಕು. ಕಾಲ ಕಾಲಕ್ಕೆ ಗುರುಸಾಮಿಗೆ ಒಂದು ಮದುವೆಯನ್ನು ಮಾಡಿ ಮುಗಿಸಿಬಿಡಬೇಕು" (ಸೋ. ಧರ್ಮನ್, ತೊರ್ವೈ ಪು. ೧೪೪) ಎಂಬ ಮಾತುಗಳು ಇದನ್ನು ಪ್ರಕಟಿಸುತ್ತವೆ. ತಮ್ಮನ್ನು ನಂಬಿ ಬಂದ ಒಬ್ಬರನ್ನು ತಮ್ಮ ಮಕ್ಕಳಂತೆ ತಿಳಿದು ಅವರಿಗೂ ತಮ್ಮ ಆಸ್ತಿಯಲ್ಲಿ ಭಾಗ ನೀಡಿ, ಅವರನ್ನು ತಮ್ಮ ಸರಿಸಮಾನವಾಗಿ ಜೀವಿಸುವಂತೆ ಕಾಣುವ ಮನಸ್ಸು ಇರುವವರು ಎಂಬುದು ಇದರ ಮೂಲಕ ತಿಳಿಯಬಹುದು.

ದಲಿತರು ಕಠಿಣ ಶ್ರಮದಿಂದ ಇತರೆ ಸಮೂಹದವರ ಬೆಳವಣಿಗೆಗೆ ಕಾರಣವಾಗಿ, ತಮ್ಮ ಆರ್ಥಿಕ ಸ್ಥಿತಿ ಬದಲಾಗದೆ ಕೆಳಗಿರುವುದನ್ನು ದಲಿತ ಕಾದಂಬರಿಗಳು ದಾಖಲಿಸುತ್ತವೆ.

"ಕಾಲವೆಲ್ಲಾ ನಾವು ಊರಿನವರಿಗಾಗಿ ದುಡಿದು ನಾಶವಾಗಬೇಕು. ಹುಟ್ಟಿದರೆ ಒಳ್ಳೆಯ ಜಾತಿಯಲ್ಲಿ ಹುಟ್ಟಬೇಕು. ಪಳ್ಳ ಜಾತಿಯಲ್ಲಿ ಪರೈಯರ್ ಜಾತಿಯಲ್ಲಿ ಹುಟ್ಟಿ ಹೀಗೆ ನಾಶವಾಗಬಾರದು." (ಸೋ. ಧರ್ಮನ್, ಕೂಗೈ, ಪು. ೩೦೩) ಎಂಬ ಮಾತುಗಳು ಜಾತಿ ಎಂಬ ಗುರು ತನ್ನ ಹಿಡಿದುಕೊಂಡು ಅವರ ಬಡತನವನ್ನು ಬಳಸಿಕೊಂಡು ಅವರನ್ನು ಅತೀ ಕೀಳಾದ ಕೆಲಸಗಳಿಗೆ ಬಳಸಿಕೊಳ್ಳಲಾಗುತ್ತದೆ. ಗುಲಾಮತನದ ಕೆಲಸ ಮಾಡುವುದನ್ನು ಬಿಟ್ಟು ಟೀ ಅಂಗಡಿ, ಹೋಟೆಲ್ ಮುಂತಾದ ಸ್ವಂತ ಉದ್ಯೋಗ ಮಾಡಿದರೆ ಅವರು ಅಸ್ಪೃಶ್ಯರು ಎಂಬ ಕಾರಣ ತೋರಿಸಿ ಅವರಿಂದ ವಸ್ತು ತೆಗೆದುಕೊಳ್ಳಲು ಹಿಂಜರಿಯುವುದರಿಂದ ದಲಿತರು ಸ್ವಂತ ಉದ್ಯೋಗ ಮಾಡಿ ಮುಂದುವರೆಯದ ಸ್ಥಿತಿಯಲ್ಲಿ ಇರುವುದು ಕಾಣಬಹುದು.

'ಕೋವೇರು ಕಳುದೈಗಳ್' ಕಾದಂಬರಿಯಲ್ಲಿ ಮೇಲ್ಜಾತಿ ಹೆಂಗಸು ಮೀನಾಕ್ಷಿಯ ಮಗಳು ಶಕುಂತಲಾಳಿಗೆ ಋತುಮತಿಯ ಸಂಭ್ರಮ ನಡೆಯುತ್ತದೆ. ಹೋದ ಎಂಟನೇ ದಿನ ಋತುಮತಿಯಾಗಿದ್ದಳು. ಮೀನಾಕ್ಷಿ ಮನೆಗೆ ಹೋದರೆ ಎರಡು ದಿನಕ್ಕೆ ಸಾಕಾಗುವಷ್ಟು ಅನ್ನ, ಸಾರು ಸಿಗುವುದು ಎಂದು ಯೋಚಿಸಿ ಆರೋಗ್ಯಂ ಶಕುಂತಲಾಲ ಬಟ್ಟೆಗಳನ್ನು ಮೊದಲು ಮೂರು ದಿನಗಳು ದೂಪಾಟ್ಟಿ (ಕಾಲುವೆ)ಯಲ್ಲಿ ಸ್ವಚ್ಛ ಮಾಡಿದಳು. ಹಿಂದೆಯಲ್ಲಾ ಒಂದು

ಹೆಣ್ಣಿಗೆ ಹೆರಿಗೆ ಆದರೂ, ಹೆಣ್ಣು ಋತುಮತಿಯಾದರೂ ಆರೋಗ್ಯಳಿಗೆ ಒಂದು ಹೊಸ ಸೀರೆ ಕೊಡುತ್ತಿದ್ದರು. ಆದರೆ ಈಗ ಒಳ್ಳೆಯ ಕಾರ್ಯ, ಕೆಟ್ಟ ಕಾರ್ಯಕ್ಕೂ ಹಳೆಯ ಸೀರೆ, ಊಟವನ್ನೇ ಕೊಡುತ್ತಾರೆ ಎನ್ನುವುದರ ಮೂಲಕ ಮೇಲ್ಜಾತಿಯಲ್ಲಿ ಹುಟ್ಟಿದ ಹೆಂಗಸರು ಋತುಮತಿ ಆದಾಗ ರಕ್ತ ತುಂಬಿದ ಬಟ್ಟೆಗಳನ್ನು ಒಗೆದು ಕೊಡುವ ದಲಿತ ಹೆಂಗಸಿಗೆ ಕೊಡುವ ಕೂಲಿ ಕೇವಲ ಎರಡು ದಿನದ ಮಟ್ಟಿಗಿನ ಅನ್ನ, ಸಾರು ಮತ್ತು ಒಂದು ಹಳೆಯ ಸೀರೆ ಮಾತ್ರ ಎಂಬ ಮನೋಭಾವನೆ ಇಲ್ಲಿ ಕಾಣಿಸುತ್ತದೆ. ಇಲ್ಲಿ ಲೇಖಕರು ಈ ಸ್ಥಿತಿ ಸಂಪೂರ್ಣವಾಗಿ ಬದಲಾಗಬೇಕೆಂಬ ಆಶಯ ವ್ಯಕ್ತಪಡಿಸುವುದನ್ನು ಕಾಣಬಹುದು.

"ಬ್ರಾಹ್ಮಣನ ಬಳಿ ಬರೆದು ಕೊಡಲು ಕೊಟ್ಟಿದ್ದ ಜಾತಕವನ್ನು ತೆಗೆದುಕೊಂಡು ಜಾತಕಕ್ಕೆ ಫಲವನ್ನು ಕೇಳಿ ಮೇಲೇಳುವಾಗ ಹೊತ್ತು ಇಳಿದಿತ್ತು. ಮಿನುತ್ತಾನ್ ಗಾಡಿಯಲ್ಲಿ ಮಾತಾಡದೇ ಕುಳಿತಿದ್ದ. ಅದಕ್ಕೆ ಮಾಡುತ್ತಿ ಏನು ದೊಡ್ಡ ಮನುಷ್ಯ ಏನೂ ಮಾತಾಡದೇ ಇದಿಯಾ? ಏನು ಮಾತಾಡುವುದು, ನಮ್ಮ ಗ್ರಹಚಾರ ಬಿರುಗಾಳಿ ಹೊಡೆದಂತಿದೆ. ಒಂದಕ್ಕೆ ಮೂರು ಕತ್ತೆಗಳನ್ನು ಕಟ್ಟಿ ಮೂರು ಕತ್ತೆಗಳ ಹೊಟ್ಟೆಯಲ್ಲಿ ಒಂದು ಹುಳವೂ ಕಾಣದ ಕಾರಣ ನಾಲ್ಕನೇಯದಾಗಿ ಸೀನಿಯಮ್ಮಳನ್ನು ಕಟ್ಟಿದ್ದಕ್ಕೆ ಮಗು ಹುಟ್ಟಿತು. ಮಗುವನ್ನು ಕೊಟ್ಟು ಈಗ ದೇವರು ನಮ್ಮನ್ನು ಬಲಿ ಕೇಳುತ್ತದೆ ಎಂದು ಮಗುವಿನ ಜಾತಕವನ್ನು ಕೆರೆಯಲ್ಲಿ ಬಿಸಾಡಿದ, ಅದಕ್ಕೆ ಮಾಡತ್ತಿ ಥೇ ಏನು ಮನುಷ್ಯ, ಸಾವಿಗಾಗಿ ಈ ರೀತಿ ಭಯಪಡುತ್ತಿದ್ದೀಯ, ಮನುಷ್ಯನ ಜೀವ ಹುಟ್ಟಿದ ದಿನದಂದೇ ಸಾವು ನಿಶ್ಚಯವಾಗಿರುತ್ತದೆ. ಆದರೂ ಕತ್ತೆಗಳು ಯಾವಾಗ ಸತ್ತರೇನು ಸಣ್ಣಮಗುವಿನ ಜಾತಕವನ್ನು ನಾಚಿಕೆ ಇಲ್ಲದೆ ನೀರಲ್ಲಿ ಬಿಟ್ಟು ಬಂದಿಯಲ್ಲಾ ನಿನಗೆ ಹೇಗೆ ಮನಸ್ಸು ಬಂತು" (ಸೋ.ಧರ್ಮನ್, ತೂರ್ವೈ, ಪು. ೧೭-೧೮) ದಲಿತರ ಮೂಢನಂಬಿಕೆ ಹೇಗೆ ಅವರನ್ನು ಅಜ್ಞಾನದ ಕಡೆಗೆ ಕೊಂಡೊಯ್ಯುತ್ತದೆ ಎಂಬುದನ್ನು ಮಿನುತ್ತಾನ್ ಪಾತ್ರದ ಮೂಲಕ ತಿಳಿಯಬಹುದು. ಆದರೆ ಮಾಡತ್ತಿಯಂತಹ ಪಾತ್ರ ಮೂಢನಂಬಿಕೆಯನ್ನು ಎದುರಿಸಿ ನಿಲ್ಲುವ ಮತ್ತು ಧೈರ್ಯ ಹೇಳುವ ರೀತಿ ಹುಟ್ಟಿದ ಜೀವಕ್ಕೆ ಸಾವು ಇದ್ದದ್ದೇ ಎಂಬ ಸತ್ಯ ತಿಳಿಸುತ್ತದೆ.

ಮಿನುತ್ತಾನ್ ತನ್ನ ಮಗನಿಗೆ ಕಿವಿ ಚುಚ್ಚಿ ಕೂದಲು ತೆಗೆಸಲು ನಿರ್ಧಾರ ಮಾಡುತ್ತಾನೆ. ಅದಕ್ಕಾಗಿ ಮಾಡತ್ತಿ ವ್ರತ ಇರುತ್ತಾರೆ. ಅಂದಿಗೆ ವ್ರತ ಮುಕ್ತಾಯಗೊಳ್ಳುತ್ತದೆ. ತಾನು ಆಸೆಯಿಂದ ಬೆಳೆಸಿದ ಹಂದಿ ಆನೆಯಂತೆ ಬೆಳೆದು ನಿಂತಿತ್ತು. ಮಾಡತ್ತಿ ತನ್ನ ಎಡಗೈನಿಂದ ಹಂದಿಯ ಕೂದಲನ್ನು ಹಿಡಿಯುತ್ತ ವ್ರತ ಮುಗಿಸುತ್ತಾಳೆ. ಹಂದಿಯನ್ನು ಬಲಿ ಕೊಡುವಾಗ ಮಾಡತ್ತಿ ಸ್ವಲ್ಪವೂ ವ್ಯಥೆ ಪಡಲಿಲ್ಲ. ಕಾರಣ ದೈವ ನಿಂದನೆ ಆಗಿಬಿಡುತ್ತದೆ ಎಂದು ಸುಮ್ಮನಿದ್ದಳು. ಚೊಚ್ಚಲ ಮಗುವಿಗೆ ಕೂದಲು ತೆಗೆಯುವಾಗ, ಕಿವಿ ಚುಚ್ಚುವಾಗ ಹಂದಿಯನ್ನು ಬಲಿ ಕೊಡುವ ಅಭ್ಯಾಸವಿದೆ. ಈ ಅಭ್ಯಾಸ ಇಂದಿಗೂ ಜಾನಪದದಲ್ಲಿ ಆಚರಿಸುತ್ತಿರುವುದು ಕಾಣಬಹುದೆಂದು 'ತೂರ್ವೈ' ಕಾದಂಬರಿಯಲ್ಲಿ ತಿಳಿಯಬಹುದು.

ಹುಟ್ಟು, ಸಾವು, ಮಗುವಿಗೆ ಹೆಸರಿಡುವುದು, ದೇವದಾಸಿ ಪದ್ಧತಿ, ಕಿವಿ ಚುಚ್ಚುವುದು, ತಲೆ ಕೂದಲು ತೆಗೆಯುವುದು, ಹೆಣ್ಣು ಋತುಮತಿ ಆಗುವ ಸಂದರ್ಭ, ಮೂಢ ನಂಬಿಕೆ, ದೈವ ನಂಬಿಕೆ, ಜಾತ್ರೆ ಆಚರಣೆಗಳು, ದಲಿತರಲ್ಲಿನ ಮಾನವೀಯ ಸಂಬಂಧಗಳು ಮುಂತಾದ ಆಚರಣೆಗಳನ್ನು ಎರಡೂ ಭಾಷೆಯ ಕಾದಂಬರಿಗಳು ತಿಳಿಸುತ್ತವೆ.

ದಲಿತರ ವಲಸೆ ಸಾಮಾಜಿಕ ಬಹಿಷ್ಕಾರ

ಸಾಮಾಜಿಕ ಬದಲಾವಣೆಗಾಗಿ ಗ್ರಾಮ ಬಿಟ್ಟು ನಗರಕ್ಕೆ ದಲಿತ ಕುಟುಂಬಗಳು ಪಲಾಯನ ಮಾಡಿದರೂ (ಸುಧಾರಣೆಗಾಗಿ) ಕೆಲವು ವೇಳೆ ಅವರು ತಮ್ಮದು ಎನ್ನುವ ನೆಲೆಯನ್ನು ಕಳೆದುಕೊಂಡು ಬೇರೆ ಪ್ರದೇಶಗಳಿಗೆ ವಲಸೆ ಹೋಗುವುದನ್ನು ಕೋವೇರು ಕಳುದೈಗಳ್, ಕಳಿಸಡೈ, ತೊರ್ವೈ, ತಗಪ್ಪನ್ ಕೊಡಿ ಮುಂತಾದ ಕಾದಂಬರಿಗಳು ಪ್ರಕಟಿಸುತ್ತವೆ.

"ಊರನ್ನು ಬಿಟ್ಟು ಹೋಗುವಾಗ ತಪ್ಪು ಮಾಡಿದಂತೆ ಎಂದು ಮನಸ್ಸಿನಲ್ಲಿಯೇ ಒಂದು ಮೂಲೆಯಲ್ಲಿ ಅಲೆಗಳು ಎದ್ದು ಸಮಾಧಾನವಾಗುತ್ತಿದ್ದವು. ಹೋಗುತ್ತಿರುವ ಜಾಗ ತಿಳಿದದ್ದು ಆಗಿರಲಿಲ್ಲ. ಅಪರಂಜಿಯ ತವರು ಮನೆ. ಬಾಮೈದುನರು, ಅತ್ತೆ, ಮಾವಂದಿರು ನೋಡಿಕೊಳ್ಳುತ್ತಾರೆ. ಈ ಊರನ್ನು ಬಿಟ್ಟು ಹೋದ ದೊಡ್ಡಪ್ಪನ ಕುಟುಂಬ ಒಂದು ಊರಿನಷ್ಟು ಅಲ್ಲಿದೆ." (ಅಳಗಿಯ ಪೆರಿಯವನ್, ತಗಪ್ಪನ್ ಕೊಡಿ, ಪು. ೧೨) ಅಮ್ಮಾಸಿಯ ಜೀವನದಲ್ಲಿ ಮರೆಯಲಾಗದ ಘಟನೆ ಎಂದರೆ ವನ ಭೂ ಕಬಳಿಕೆಯ ವಿಚಾರ, ಶ್ರಮ ಪಡುವ ಆರೋಗ್ಯ, ಕೂತ್ತು (ನಾಟಕದಂತಹಾ ಒಂದು ಕಲೆ) ಕಲೆಯಲ್ಲಿ ಆಸಕ್ತಿ, ಹೊಸ ವಿಚಾರವನ್ನು ತಿಳಿದು ಅರ್ಥಮಾಡಿಕೊಳ್ಳುವ ಬುದ್ಧಿವಂತಿಕೆ ಇದ್ದರೂ, ಮೇಲ್ಜಾತಿಯ ಮೋಸದ ತಂತ್ರದಿಂದ ಭೂಮಿ ಹೋದದ್ದು, ಅವನ ಕುಟುಂಬವನ್ನು ಕಂಪಿಸುತ್ತದೆ. ಜೀವಿಸಿದ ಊರಲ್ಲಿ ಭೂಮಿಯನ್ನು ಕಳೆದುಕೊಂಡು ಬಾಳಲು ಬೇರೆ ದಾರಿ ಇಲ್ಲದೆ ಬೇರೆ ಊರನ್ನು ಸೇರಿ ಅಲ್ಲಿ ಮತ್ತೆ ಬೇರೊಂದು ಮೇಲ್ಜಾತಿ ಕುಟುಂಬದ ಯಜಮಾನ್ಯಕ್ಕೆ ಗುಲಾಮರಾಗಿ ಬದುಕುವ ಪರಿಸ್ಥಿತಿಯನ್ನು ಕಾದಂಬರಿ ತಿಳಿಸುತ್ತದೆ.

'ಕೋವೇರು ಕಳುದೈಗಳ್' ಕಾದಂಬರಿಯಲ್ಲಿ ಪಲಾಯನದಿಂದ ಸುಧಾರಣೆ ಹೊಂದುವ ವಿಷಮ ಸ್ಥಿತಿಯನ್ನು ಕಾಣಬಹುದು. ಗ್ರಾಮದಲ್ಲಿ ಬಟ್ಟೆ ಒಗೆಯುವ ಅಂಗಡಿ, ಬಟ್ಟೆ ಹೊಲೆದು ಕೊಡುವ ಅಂಗಡಿ ಬಂದಿದ್ದರಿಂದ ಅಗಸರಿಗೆ ಬಟ್ಟೆ ಹೊಗೆಯುವ ಕೆಲಸ ಕಡಿಮೆಯಾಗಿ ಆರ್ಥಿಕವಾಗಿ ದುರ್ಬಲರಾಗುತ್ತಾರೆ. ಆದರೆ ಆರೋಗ್ಯಂಳ ಸೊಸೆ ಸಗಾಯಂ ತನ್ನ ಗಂಡ ಜೋಸೆಫ್‌ನನ್ನು ಕರೆದುಕೊಂಡು ಸೇಲಂಗೆ ಹೋಗಿಬಿಡುತ್ತಾಳೆ. ಸೇಲಂನಲ್ಲಿ ಜೋಸೆಫ್‌ಗೆ ಬಟ್ಟೆ ಮಡಿ ಮಾಡುವ ಅಂಗಡಿಯಲ್ಲಿ ಕೆಲಸ ಸಿಗುತ್ತದೆ. ಅಲ್ಲದೆ ಗ್ರಾಮದಲ್ಲಿ ಎಲ್ಲರ ಹೊಲಸು ಬಟ್ಟೆಗಳನ್ನು ಒಗೆದು ಅವರು ನೀಡುವ ಅಲ್ಪ ಕೂಲಿ ಮತ್ತು ರಾತ್ರಿಯ ಊಟಕ್ಕೆ ಅವರ ಮನೆಯ ಮುಂದೆ ನಿಲ್ಲುವುದು ತಪ್ಪುತ್ತದೆ. ಆದರೆ ಹಿರಿಯ ತಲೆಮಾರಿನವರು ಬೇರೆ ಊರಿಗೆ ಪಲಾಯನ ಮಾಡಲು ನಿರಾಕರಿಸುತ್ತಾರೆ. ಉದಾಸೀನವಾಗಿ ಕಾಣುವ ಊರಿನ ಜನರನ್ನು

ನಂಬಿಯೇ ಇವರು ಬಾಳಬೇಕು. ಆದರೂ ತಾವು ಬೆಳೆದಿದ್ದ ಊರು ಮತ್ತು ಕಟ್ಟುಪಾಡುಗಳನ್ನು ಮುರಿಯಲು ಅವರು ಆಸಕ್ತರಾಗದೆ ದುಃಖಪಡುವುದನ್ನು ಕಾಣಬಹುದು.

'ತೂರ್ವೈ' ಕಾದಂಬರಿಯಲ್ಲಿ ಊರುಳ್ಳೈಕುಡಿ ಗ್ರಾಮದಲ್ಲಿ ಮಳೆ ಇಲ್ಲದೆ ಸಂಸಾರಿಗಳಾಗಿ ಜೀವಿಸಿದ್ದವರು ಸತ್ತವರಂತೆ ಆಗಿದ್ದರು. ದಲಿತರ ನೆಲಗಳನ್ನು ಕೊಂಡು ಬೆಂಕಿಪೊಟ್ಟಣ ಕಂಪನಿಗೂ, ಗೋಣಿಚೀಲ ಕಂಪನಿಗಳನ್ನು ಸ್ಥಾಪಿಸಿ ಸಂಸಾರಿಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುತ್ತಾನೆ. ಎತ್ತು, ಎತ್ತಿನ ಬಂಡಿಗಳನ್ನು ಮರೆತ ಉರುಳ್ಳೈಕುಡಿಯ ಜನರು ನೆಲಗಳನ್ನು ಮಾರಿದರು. ಇದರಿಂದ ಬೇರೆ ಕೆಲಸವನ್ನು ಹುಡುಕಿಕೊಂಡು ಊರನ್ನು ಬಿಟ್ಟು ಹೋಗುವ ಸ್ಥಿತಿ ಬರುತ್ತದೆ. "ಮಿನುತ್ತಾನ್ ಎಂತಹ ಸಂಸಾರಿ. ಇಂದು ಅವರ ಹೆಸರು ಹೇಳಲೂ ಸಹ ಊರಲ್ಲಿ ಜನ ಇಲ್ಲದೆ ಬಡತನಕ್ಕಾಗಿ ದುಡಿಯಲು ಹೋದಂತೆ ಹೋಗಬೇಕಾದ ಪರಿಸ್ಥಿತಿ. ಕಾಲ ಮನುಷ್ಯನನ್ನು ಏನೆಲ್ಲಾ ಮಾಡಿಸುತ್ತೆ" (ಸೋ.ಧರ್ಮನ್, ತೂರ್ವೈ, ಪು. ೧೮೨) ಎಂದು ಪೆರಿಯ ಸೋಲೈ ದುಃಖಪಡುತ್ತಾನೆ. ಮೇಲ್ಜಾತಿಯವರ ಶೋಷಣೆ ಒಂದೆಡೆಯಾದರೆ ಸಾಮಾಜಿಕ ಬದಲಾವಣೆಗಳು, ನೈಸರ್ಗಿಕ ಅಡೆ-ತಡೆಗಳು ಸಹ ದಲಿತರನ್ನು ಕಾಡಿಸುತ್ತವೆ ಎಂಬುದನ್ನು ಇಲ್ಲಿ ತಿಳಿಯಬಹುದು.

'ಕಳಿಸಡೈ' ಕಾದಂಬರಿಯಲ್ಲಿ ಮೇಲ್ಜಾತಿ ತೊನ್ನು ರೋಗದವನ ಆತ್ಮಹತ್ಯೆಗೆ ಸಹಾಯ ಮಾಡಿದ ಮುನಿಯನ್‌ನನ್ನು ಕೊಲೆಗಾರನೆಂದು ಸೆರೆಮನೆಗೆ ಕಳುಹಿಸುತ್ತಾನೆ. ಅಲ್ಲದೆ ಅವನ ಮಗನಾದ ರಾಸಪ್ಪನನ್ನು "ಕೊಲೆಗಾರನು ಹೆತ್ತವನಿಗೆ ಮಾತ್ರ ಈ ಊರಿನಲ್ಲಿ ಏನು ಕೆಲಸ ಹೊಡೆದು ಓಡಿಸಿರಿ ಲೇ ಅವನನ್ನು" (ಅರಿವಳಗನ್, ಕಳಿಸಡೈ, ಪು. ೯೫) ಎಂದು ರಾಸಪ್ಪನನ್ನು ಊರವರು ಬಿಟ್ಟು ಓಡಿಸುವ ಮೂಲಕ ಶೋಷಣೆಯ ಮತ್ತೊಂದು ಮುಖವನ್ನು ಪರಿಚಯಿಸಿದ್ದಾರೆ.

ದಲಿತರ ಹಕ್ಕು ನಿರಾಕರಣೆಯ ಸಂದರ್ಭ

ಮೇಲ್ಜಾತಿಯವರು ಮಾತ್ರ ಚಪ್ಪಲಿ ಹಾಕಬಹುದು, ಆದರೆ ಕೆಳಜಾತಿಯವರು ಮೇಲ್ಜಾತಿಯವರ ಎದುರು ಚಪ್ಪಲಿ ಹಾಕಬಾರದೆಂಬ ನಿಯಮ 'ತಗಪ್ಪನ್ ಕೊಡಿ' ಕಾದಂಬರಿಯಲ್ಲಿ ಕಾಣಿಸುತ್ತದೆ. ಅಮ್ಮಾಸಿಯ ಊರಿಗೆ ಬಂದಿದ್ದ ಸಂಬಂಧಿಕನಾದ ಮುತ್ತುಮಾರಿ ಕಾಲಿನಲ್ಲಿ ಚಪ್ಪಲಿ ಹಾಕಿಕೊಂಡು ಬಾಯಿಯಲ್ಲಿ ಬೀಡಿ ಸೇದುತ್ತಾ ಹೋಗುವಾಗ ಅಮ್ಮಾಸಿಯ ಬಳಿ ಊರಿನ ಜನರ ಬೈಗುಳದ ಮಾತು ಹೀಗಿತ್ತು. "ಏನಲೇ ಹೊಸ ಅಭ್ಯಾಸ ಅಮ್ಮಾಸಿ, ಆಳು ಯಾರು ಊರಿಗೆ ಹೊಸಬನೇ? ನೀನು ನಮ್ಮ ಊರಿನ ಆಚಾರಗಳನ್ನು ಹೇಳುವುದಿಲ್ಲವೇ? ಲುಂಗಿಯನ್ನು ಎತ್ತಿ ಕಟ್ಟಿಕೊಂಡು ಚಪ್ಪಲಿಯನ್ನು ಕೈಯಲ್ಲಿ ಹಿಡಿಯರ್ಲೇ..... ಪೊನ್ನು ವೈದ್ದಿಯನ್‌ನ ಧ್ವನಿಯ ಕಠೋರತೆಯಲ್ಲಿ ಅಮ್ಮಾಸಿಗೆ ಅಮಲು ಇಳಿದಂತಾಗಿತ್ತು. ಮುತ್ತು ಮಾರಿ ಅವನನ್ನು ಸಿಟ್ಟಿನಿಂದ ನೋಡುತ್ತಿದ್ದ. ಲೇ ಯಾವ ಊರಲೇ ನಿಂದು? ಇವನು ಹೆಣ್ಣು ಕಟ್ಟಿಕೊಂಡು ಬಂದ ಊರಾ? ಈ ಊರಿನ ನಿಯಮ ಗೊತ್ತಲ್ಲವೇ? ರಕ್ತ ಕಕ್ಕಿ ಸತ್ತೋಗುವೆ. ಪೊನ್ನು ವೈದ್ಯನಿಂದ ದಂಡಿಸಲ್ಪಟ್ಟವರು

ಅನೇಕರು. ಊರೊಳಗೆ ಯಾರು ಬಂದರು ಅವನಿಗೆ ವಿಷಯ ಹೋಗಿಬಿಡುತ್ತೆ. ಜಾತಿ ನಿಯಮಗಳನ್ನು ಮೀರುವುದಕ್ಕೆ ಅವನು ಎಂದಿಗೂ ಬಿಡುವುದಿಲ್ಲ. ಅವರವರು ಅವರವರಂತೆ ಇದ್ದೋಗಲೇ ಬೇಕು. ಪರೈಯರ್ ಜಾತಿಯ ಜನರು ಚಪ್ಪಲಿಯನ್ನು ಕೈಯಲ್ಲಿ ಹಿಡಿದುಕೊಳ್ಳಬೇಕು. ಮುರಿದವರಿಗೆ ವಿಶೇಷವಾದ ವಿಚಾರಣೆ ನಡೆಯುತ್ತದೆ. ರಕ್ತ ಕಾರುವವರೆಗೆ ಹೊಡೆತಗಳು ಸಿಗುತ್ತದೆ." (ಅಳಗಿಯ ಪೆರಿಯವನ್, ತಗಪ್ಪನ್ ಕೊಡಿ, ಪು. ೪೬) ಎಂದು ಚಪ್ಪಲಿ ಹಾಕುವ ಹಕ್ಕನ್ನು ವಿರೋಧಿಸುವ ಮೇಲ್ಜಾತಿಯವರ ದಾರ್ಷ್ಟ್ಯವನ್ನು ನೋಡಬಹುದು. ಕಾದಂಬರಿಯಲ್ಲಿ ಅಮ್ಮಾಸಿ ಮಾತಾಡುವ ಸ್ವಾತಂತ್ರ್ಯ ಇಲ್ಲದವನಾಗಿ ಕಾಣಿಸುತ್ತಾನೆ. ನದಿಯ ಪ್ರವಾಹದಲ್ಲಿ ಸಿಕ್ಕ ಒಡವೆ (ಬಂಗಾರ)ಗಳನ್ನು ಊರಿನ ಮುಖಂಡನ ಬಳಿ ನೀಡಿ ಅದು ಬಂಗಾರವೇ ಎಂದು ಕೇಳುತ್ತಾನೆ. ಅದಲ್ಲದೆ ಅವನು ನಾಳೆ ಬಾ ನೋಡೋಣ ಎಂದು ಕಳುಹಿಸುತ್ತಾನೆ. ಮರುದಿನ ಅಮ್ಮಾಸಿ ಕೊಟ್ಟ ಒಡವೆಗಳು ಬಂಗಾರವಲ್ಲ ಎಂದು ತಿಳಿಸುತ್ತಾನೆ. ಆಗ ಅಮ್ಮಾಸಿ ತಾನು ಮೋಸಹೋದೆ ಎಂದು ಮನಸ್ಸಿನೊಳಗೆ ಚಡಪಡಿಸುತ್ತಾನೆ. ನೆಮ್ಮದಿ ಇಲ್ಲದೆ ಅಲೆಯುತ್ತಾನೆ. ಅವನ ಸ್ಥಿತಿಯು ಮಾತಾಡುವ ಹಕ್ಕಿನ ನಿರಾಕರಣೆಯಂತೆ ಕಂಡುಬರುತ್ತದೆ. ಅದನ್ನು ಕೆಳಕಂಡಂತೆ ಕಾಣಬಹುದು. "ಅವನಿಗೆ ಕಿವಿಗಳು ಮುಚ್ಚಿಕೊಂಡವು, ಕಣ್ಣುಗಳು ತುಂಬಿಕೊಂಡವು. ನಿಜವೇ ಯಜಮಾನ? ಒಡವೆಗಳಲ್ಲಿಯೇ ಹೊರಲಾಡುವವರು ನಾವು ನಮಗೆ ತಿಳಿಯದೇ? ನಿನ್ನ ಆಭರಣ ತೆಗೆದುಕೊಂಡು ನಾನು ಜೀವಿಸಬೇಕು ಅಂತ ಏನು ಇದೆ ಲೇ ಅಮ್ಮಾಸಿ?

ಆ ರೀತಿ ಹೊಳೆಯುತ್ತಿತ್ತಲ್ಲವೇ?

ಅದನ್ನೇ ಮತ್ತೆ ಮತ್ತೆ ಕೇಳುತ್ತಿದ್ದೀಯಾ?

ನಿನಗೆ ಅದು ಗೊತ್ತೇ? ಎಲ್ಲಿಯಾದರು ಕಳ್ಳತನ ಮಾಡಿ ತಂದೆಯಾ? ಯಜಮಾನ.....

ಹೋಗಿ ಕೆಲಸ ನೋಡಲೇ ಎಂದರೆ ತಿರುಗಿ ತಿರುಗಿ ಕೇಳುತ್ತಾ?" (ಅಳಗಿಯ ಪೆರಿಯವನ್, ತದಪ್ಪನ್ ಕೊಡಿ, ಪು. ೩೧) ತಳಸಮುದಾಯದವರು ಮೇಲ್ಜಾತಿಯವರ ಮಾತನ್ನು ವೇದ ವಾಕ್ಯದಂತೆ ತಿಳಿಯಬೇಕು. ಏನು ಹೇಳಿದರೂ ಅದನ್ನು ಒಪ್ಪಿಕೊಂಡು ನಡೆಯುವ ಗುಣ ಇರಬೇಕು ಎಂಬ ತಂತ್ರಗಾರಿಕೆಯನ್ನು ಹೊಂದಿದವರಾಗಿ ಮೇಲ್ಜಾತಿಯವರು ಕಂಡುಬರುತ್ತಾರೆ.

ಒಟ್ಟಾರೆ ತಮಿಳು ದಲಿತ ಕಾದಂಬರಿಗಳು ದಲಿತರ ಜೀವನ ವಿಧಾನವನ್ನು ಕುರಿತು ಚಿತ್ರಿಸುತ್ತವೆ. ಸಾಂಪ್ರದಾಯಿಕ ಕಾದಂಬರಿಗಳಂತೆ ಕಾದಂಬರಿ ಹೇಗೆ ಆರಂಭಗೊಂಡು ಹೇಗೆ ಮುಕ್ತಾಯ ಆಗಬೇಕೆಂಬ ಯಾವುದೇ ನಿಯಮಗಳು ಇಲ್ಲದಿರುವುದನ್ನು ಕಾಣಬಹುದು. ಕಾದಂಬರಿ ಆರಂಭದಲ್ಲೆ ದಲಿತರ ಜಾತಿ ಕಸುಬುಗಳನ್ನು ಪರಿಚಯಿಸುವುದನ್ನು ಮತ್ತು ಕಾದಂಬರಿಗಳ ಭಾಷೆಯು ದಲಿತರ ನೋವಿನ ಸ್ವರಗಳಾಗಿ ಆಡು ಭಾಷೆಯಲ್ಲಿಯೇ ಮೂಡಿಬಂದಿರುವುದನ್ನು ಕಾಣಬಹುದು.

* ಎರಡೂ ಭಾಷೆಗಳಲ್ಲಿ ಬಹುಪಾಲು ದಲಿತ ಮಹಿಳಾ ಪ್ರಧಾನವಾದ ಕಾದಂಬರಿಗಳನ್ನು ಕಾಣಬಹುದು.

* ದಲಿತರಿಗಿಂತ ದಲಿತ ಮಹಿಳೆಯರು ಮೇಲ್ಜಾತಿಯ ಪುರುಷ ಮತ್ತು ಮಹಿಳೆಯರಿಂದ ಹಾಗೂ ದಲಿತ ಪುರುಷರಿಂದಲೇ ಶೋಷಣೆಗೆ ಒಳಗಾಗಿರುವುದನ್ನು ಎರಡೂ ಭಾಷೆಯ ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

* ಎರಡೂ ಭಾಷೆಗಳಲ್ಲಿನ ಅಕ್ಷರ ಕಲಿತ ದಲಿತ ಪಾತ್ರ ಚಿಂತನೆಗೂ, ಅನಕ್ಷರಸ್ಥ ದಲಿತ ಪಾತ್ರ ಚಿಂತನೆಗೂ ವ್ಯತ್ಯಾಸವಿರುವುದನ್ನು ಕಾಣಬಹುದು.

* ಕೌಟುಂಬಿಕ ಚೌಕಟ್ಟಿನಲ್ಲಿಯೇ ದಲಿತ ಜೀವನ, ಬಡತನ, ಹಸಿವು, ಹೋರಾಟ, ವರ್ಗ, ಸಂಘರ್ಷವನ್ನು ಚಿತ್ರಿಸಲಾಗಿದೆ.

* ದಲಿತ ಪುರುಷರು ಕುಡುಕರಾಗಿ ಹಲವು ಹೆಣ್ಣುಗಳನ್ನು ಇಟ್ಟುಕೊಂಡವರಾಗಿ ಚಿತ್ರಿಸಲಾಗಿದೆ.

ಭಿನ್ನತೆಗಳು

* ಈಗಾಗಲೇ ಹೆಚ್ಚು ಸಂಖ್ಯೆಯ ದಲಿತರು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿರುವುದನ್ನು ಕಾಣಬಹುದು. ಆದರೆ ಕನ್ನಡ ದಲಿತ ಕಾದಂಬರಿಗಳು ಕ್ರೈಸ್ತ ಧರ್ಮವನ್ನು ಒಪ್ಪಿಕೊಂಡಿದ್ದರೂ ಹಿಂದೂ ಧರ್ಮದ ನೆಲೆಯಲ್ಲಿರುವುದನ್ನು ಕಾಣಬಹುದು.

* ಅಗಸರು ತಮಿಳಿನಲ್ಲಿ ಅತಿ ಹೆಚ್ಚು ಶೋಷಣೆಯನ್ನು ಅನುಭವಿಸಿದವರಾಗಿ ಕಂಡುಬರುತ್ತಾರೆ. ಆದರೆ ಕನ್ನಡದಲ್ಲಿ ಅಗಸರು ದಲಿತರಷ್ಟು ಶೋಷಣೆಯನ್ನು ಅನುಭವಿಸಿಲ್ಲ.

ಅಧ್ಯಾಯ: ಐದು

ಸಣ್ಣಕತೆಗಳು

ಆದಿ ಕಾಲದಿಂದಲೂ ಕತೆ ಹೇಳುವುದು, ಮತ್ತು ಕುತೂಹಲದಿಂದ ನಿರೂಪಿಸುವ ಕತೆಗಳನ್ನು ಕೇಳುವುದು ಜನಪದ ಸಮುದಾಯಗಳಲ್ಲಿ ಬಳಕೆಯಲ್ಲಿರುವುದನ್ನು ನಾವು ಕಾಣಬಹುದು. ಮೌಖಿಕವಾಗಿ 'ಒಂದಾನೊಂದು ಊರಿನಲ್ಲಿ ಒಬ್ಬ ರಾಜನಿದ್ದ' ಎಂದು ಸ್ವಾರಸ್ಯಕರವಾಗಿ ಆರಂಭವಾಗುವ ಕತೆಗಳು ಹಲವು ತಂತ್ರಗಳ ಮೂಲಕ ನಿರೂಪಿತಗೊಳ್ಳುತ್ತದೆ. ಈ ಕತೆಗಳು ಜನರ ಮನೋರಂಜನೆಗಾಗಿ ಹಾಗೂ ಕಾಲಹರಣಕ್ಕಾಗಿ ಬಳಕೆಯಲ್ಲಿದ್ದುದ್ದನ್ನು ನಾವು ಗಮನಿಸಬಹುದು. ಸಾಮಾನ್ಯ ಜನತೆಯು ಜನಪದ ಕತೆಗಳನ್ನು ಮೌಖಿಕವಾಗಿ ಕತೆಕಟ್ಟಿ ಹಾಡುವ, ಹೇಳುವ ಪರಿಪಾಠ ಬೆಳೆಸಿಕೊಂಡಿದ್ದರು. ಅವರು ಧಾರ್ಮಿಕ ನಾಯಕರುಗಳ ಕತೆ, ಸಮುದಾಯಗಳ ಸಾಂಸ್ಕೃತಿಕ ನಾಯಕರುಗಳ ಕತೆ, ರಾಜರುಗಳನ್ನು ಕುರಿತು ರಾಕ್ಷಸರನ್ನು ಕುರಿತು ಕತೆಗಳನ್ನು ಹೇಳುವುದರ ಮೂಲಕ ಸಮಾಜದಲ್ಲಿ ನೈತಿಕತೆಯನ್ನು ಬಿತ್ತುವ ಪ್ರಯತ್ನ ಮಾಡುತ್ತಿದ್ದರು. ಪಂಚತಂತ್ರದ ಕತೆಗಳು, ಬುದ್ಧನ ಜಾತಕ ಕತೆಗಳು, ಪೌರಾಣಿಕ ಕತೆಗಳು ಮೊದಲು ಮೌಖಿಕವಾಗಿದ್ದು ನಂತರ ಅವು ಬರಹದ ರೂಪಕ್ಕೆ ಬಂದಾಗ ಗ್ರಂಥಸ್ಥ ಸಾಹಿತ್ಯವಾಗಿ ಹಸ್ತಪ್ರತಿಗಳಲ್ಲಿ ದಾಖಲಾದವು. ಮುಂದೆ ಐರೋಪ್ಯರ ಸಾಹಿತ್ಯದ ಪ್ರಭಾವದಿಂದ ಗದ್ಯ ಪ್ರಕಾರ ಕಾಣಿಸಿಕೊಂಡಿತು. ಇದರಲ್ಲಿ ಸಣ್ಣಕತೆ, ಕಾದಂಬರಿ, ಆತ್ಮಕತೆ, ವಿಮರ್ಶೆಗಳು ಸಾಹಿತ್ಯವನ್ನು ಪ್ರವೇಶಿಸಿದವು. ಇದರಲ್ಲಿ ಕಾದಂಬರಿ ಮತ್ತು ಆತ್ಮಕತೆಯ ವ್ಯಾಪ್ತಿ ಮತ್ತು ವಿಸ್ತಾರತೆ ದೀರ್ಘವಾಗಿರುತ್ತದೆ. ಆದರೆ ಸಣ್ಣಕತೆಯು ನಿರ್ದಿಷ್ಟ ವ್ಯಾಪ್ತಿಯಲ್ಲಿ ತನ್ನ ಉದ್ದೇಶವನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರೂಪಿಸಬಲ್ಲದು. ಪ್ರಸ್ತುತ ಈ ಅಧ್ಯಾಯದಲ್ಲಿ ಕನ್ನಡ-ತಮಿಳಿನಲ್ಲಿ ಸಣ್ಣಕತೆ ಮತ್ತು ದಲಿತ ಸಣ್ಣಕತೆಗಳ ಕುರಿತು ಅಧ್ಯಯನ ಮಾಡುವುದು ಈ ಅಧ್ಯಾಯದ ಪ್ರಮುಖ ಉದ್ದೇಶವಾಗಿದೆ.

ತಮಿಳು ಸಣ್ಣಕತೆಗಳ ಬೆಳವಣಿಗೆಯ ಸಂಕ್ಷಿಪ್ತ ನೋಟ

ತಮಿಳು ಸಾಹಿತ್ಯದಲ್ಲಿ ಕಥಾ ಪರಂಪರೆಗೆ ದೀರ್ಘವಾದ ಇತಿಹಾಸವಿದೆ. ಐತಿಹಾಸಿಕ ಕತೆಗಳು, ನೀತಿಕತೆಗಳು, ಪುರಾಣ ಕತೆಗಳು, ತಿರುವಿಳೈಯಾಡಲ್ ಪುರಾಣ, ಪೆರಿಯ ಪುರಾಣ, ರಾಮಾಯಣ, ಮಹಾಭಾರತ, ಕಣ್ಣಗಿ ಕೋವಲನ್, ಪಂಚತಂತ್ರ, ತೆನಾಲಿ ರಾಮ ಮುಂತಾದ

ಕತೆಗಳು ಕಾವ್ಯವಾಗಿ ಮತ್ತು ಮೌಖಿಕವಾಗಿಯು ಪ್ರಚಲಿತದಲ್ಲಿತ್ತು. ಈ ಕತೆಗಳಲ್ಲಿರುವ ಪಾರಂಪರಿಕ ಅಂಶಗಳನ್ನೇ ಬಳಸಿಕೊಂಡು ತಮಿಳಿನ ಸಣ್ಣಕಥಾ ಸಾಹಿತ್ಯ ಆರಂಭವಾಯಿತು. ವಸಾಹತುಶಾಹಿಯ ಪ್ರಭಾವದಿಂದ ತಮಿಳು ಸಾಹಿತ್ಯದಲ್ಲೂ ಹಲವು ಬದಲಾವಣೆಗಳು ಸಣ್ಣಕಥಾ ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ತಮಿಳು ಕಥಾ ಪರಂಪರೆಯು ಪ್ರಾಚೀನ ಕಾಲದಿಂದಲೂ ವಿಸ್ತಾರತೆಯನ್ನು ಹೊಂದಿದೆ. ಆದರೆ ಆಧುನಿಕತೆ ಪ್ರವೇಶ ಮಾಡಿದಾಗ ಅದರ ಸ್ವರೂಪದಲ್ಲಿ ಕೆಲವೊಂದು ಬದಲಾವಣೆಗಳಾಗಿವೆ. ಆರಂಭದ ಕಾಲದಲ್ಲಿ ಧರ್ಮ, ರಾಜರು, ಸಾಂಸ್ಕೃತಿಕ ನಾಯಕರುಗಳನ್ನು ಕಥಾ ವಸ್ತುವನ್ನಾಗಿರಿಸಿಕೊಂಡ ಕತೆಗಳು ಕಂಡು ಬರುತ್ತವೆ. ಈ ಕಾಲಘಟ್ಟದಲ್ಲಿ ಮೂಡಿಬಂದ ಸಣ್ಣಕತೆಗಳಲ್ಲಿ ಅಂದಿನ ಸಾಮಾಜಿಕ ವಾಸ್ತವ ಸಂಗತಿಗಳ ವಿವರಗಳು ಹೆಚ್ಚಾಗಿ ಕಂಡುಬರುವುದಿಲ್ಲ.

ತಮಿಳು ಸಾಹಿತ್ಯದಲ್ಲಿ ಕತೆಯನ್ನು 'ಪುನೈಕದೈ' ಎಂದು ಕರೆಯುತ್ತಾರೆ. 'ಪುನೈಕದೈ' ಎಂದರೆ ಕಲ್ಪಿತ ಕತೆ, ಹೆಣೆದ ಕತೆ ಎಂಬರ್ಥವಿದೆ. ತಮಿಳುನಾಡಿನಲ್ಲಿ ಮುದ್ರಣ ಮಾಧ್ಯಮದ ಪ್ರವೇಶದ ನಂತರ ವೀರ ಮಾಮುನಿವರ್ ಬರೆದ 'ಪರಮಾರ್ಥ ಗುರುವಿನ್ ಕತೈ' ೧೮೨೨ರಲ್ಲಿ ಪ್ರಕಟವಾಯಿತು. 'ಪಾರಮಾರ್ಥ ಗುರುವಿನ್ ಕತೈ'ಯು ತಮಿಳಿನಲ್ಲಿ ಗದ್ಯ ಸಂಭಾಷಣೆಯ ಕತೆಗಳಿಗೆ ಅಡಿಗಲ್ಲಾಯಿತು. ಇದು ಸಣ್ಣಕತೆಯ ಪ್ರಕಾರಕ್ಕೆ ಸೇರಿದ ಗದ್ಯರೂಪದ ಕತೆಯಾಗಿದೆ. ಹದಿನೆಂಟನೇ ಶತಮಾನದ ಮಠಾಧಿಪತಿಗಳು ಸಾಮಾನ್ಯ ಜನತೆಗೆ ಪವಾಡದ ರೂಪದಲ್ಲಿ ಮಾಡುವ ಮೋಸವನ್ನು ಈ ಕತೆಯು ಹಾಸ್ಯ ರೂಪದಲ್ಲಿ ನಿರೂಪಿಸುತ್ತದೆ. ಹಾಸ್ಯದೊಂದಿಗೆ ಜನತೆಯಲ್ಲಿ ವೈಚಾರಿಕತೆಯನ್ನು ಮೂಡಿಸುವುದು ಇದರ ಆಶಯವಾಗಿದೆ. ನಂತರದ ಕಾಲಘಟ್ಟದಲ್ಲಿ 'ಕಥಾಮಂಜರಿ' (೧೮೨೬), 'ಈಸೋಪನ ನೀತಿಕತೆಗಳು' (೧೮೫೩), 'ಮದನ ಕಾಮರಾಜನ ಕತೆಗಳು' (೧೮೮೫), 'ಮಯಿಲ್ ರಾವಣನ ಕತೆ' (೧೮೬೮), 'ಮೂವತ್ತೆರಡು ಹೊಸ ಕತೆ' (೧೮೬೯), 'ತಮಿಳರ ಪೆರುಮಾಳ್ ಕತೆ' (೧೮೬೯), 'ವಿವೇಕ ಸಾಗರ' (೧೮೭೫), 'ಕಥಾ ಚಿಂತಾಮಣಿ' (೧೮೭೬) ಮುಂತಾದ ಕತೆಗಳು ಪ್ರಕಟವಾಗಿದ್ದವು. ಆದರೆ ಈ ಕತೆಗಳಲ್ಲಿ ಸಣ್ಣಕಥಾ ಸಾಹಿತ್ಯ ಪ್ರಕಾರಕ್ಕೆ ಹೊಂದುವ ಲಕ್ಷಣಗಳಿರಲಿಲ್ಲ ಎಂದು ಹಲವು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ತಮಿಳು ಸಣ್ಣಕತೆಯ ಆರಂಭ ಮತ್ತು ಬೆಳವಣಿಗೆಯನ್ನು ಅಧ್ಯಯನ ದೃಷ್ಟಿಯಿಂದ ತಮಿಳು ಕಥಾ ಸಾಹಿತ್ಯವನ್ನು ನಾಲ್ಕು ವಿಭಾಗಗಳಾಗಿ ವಿಗಂಡಿಸಿಕೊಳ್ಳಲಾಗಿದೆ. (ಬೇರೆ ಬೇರೆ ಸಂಶೋಧಕರು ಇನ್ನಿತರೆ ರೀತಿಯ ವಿಭಾಗ ಕ್ರಮವನ್ನು ಅವರ ಅನುಕೂಲಕ್ಕೆ ತಕ್ಕಂತೆ ಕಥಾ ಸಾಹಿತ್ಯವನ್ನು ಅಧ್ಯಯನ ಮಾಡಿದ್ದಾರೆ)

ತಮಿಳು ಸಣ್ಣಕಥಾ ಸಾಹಿತ್ಯವನ್ನು ಪ್ರಮುಖವಾಗಿ ನಾಲ್ಕು ಕಾಲಘಟ್ಟದಲ್ಲಿ ವಿಂಗಡಿಸಲಾಗಿದೆ.

೧. ಮೊದಲ ಕಾಲಘಟ್ಟ (೧೯೦೦-೧೯೨೫)

೨. ಎರಡನೇ ಕಾಲಘಟ್ಟ (೧೯೨೬-೧೯೪೫)

೩. ಮೂರನೇ ಕಾಲಘಟ್ಟ (೧೯೪೭-೧೯೭೦)

೪. ನಾಲ್ಕನೇ ಕಾಲಘಟ್ಟ (೧೯೭೧- ಪ್ರಸ್ತುತ)

೧. ಮೊದಲ ಕಾಲಘಟ್ಟ (೧೯೦೦-೧೯೨೫)

ಭಾರತಿಯಾರ್, ವ. ವೇಸು ಐಯ್ಯರ್, ಮಾದವಯ್ಯ ಮುಂತಾದವರು ತಮಿಳು ಸಣ್ಣಕತೆಯ ಪ್ರಾರಂಭ ಕಾಲದ ಲೇಖಕರಾಗಿದ್ದಾರೆ. ಮೊದಲ ಕಾಲಘಟ್ಟದ ಸಣ್ಣಕತೆಗಾರರಿಗೆ ಬಂಗಾಳಿ ಸಾಹಿತ್ಯದ ಪ್ರಮುಖ ಬರಹಗಾರರಾದ ರವೀಂದ್ರನಾಥ ಠಾಕೂರ್‌ರ ಪ್ರಭಾವದಿಂದಾಗಿ ರಾಷ್ಟ್ರೀಯ ಪ್ರಜ್ಞೆ ಮತ್ತು ದೇಶೀಯತೆಯನ್ನು ತಮ್ಮ ಸಣ್ಣಕತೆಗಳ ಕಥಾ ವಸ್ತುವನ್ನಾಗಿಸಿಕೊಂಡಿದ್ದಾರೆ. ತಮಿಳು ಸಣ್ಣಕತೆಗಾರರಾದ ಭಾರತಿಯಾರ್‌ರವರು ಠಾಕೂರ್‌ರ ಹಲವು ಕತೆಗಳನ್ನು ತಮಿಳಿಗೆ ಭಾಷಾಂತರಿಸಿರುವುದನ್ನು ಕಾಣಬಹುದು.

ಭಾರತಿಯಾರ್ ಅವರು ರಚಿಸಿದ ಪ್ರಮುಖ ಕತೆಗಳೆಂದರೆ **ಮನ್ಮಥರಾಣಿ, ಭೂಲೋಕ ರಂಭೆ, ಸ್ವರ್ಣ ಕುಮಾರಿ, ಆರರಲ್ಲಿ ಒಂದು ಭಾಗ, ರೈಲ್ವೇ ಸ್ಥಾನಂ, ಕಾಂತಾಮಣಿ, ನವತಂತ್ರ** ಮುಂತಾದ ಕತೆಗಳನ್ನು ಬರೆದಿದ್ದಾರೆ. ಆರರಲ್ಲಿ ಒಂದು ಭಾಗ ಎಂಬ ಕತೆಯಲ್ಲಿ 'ಆರರಲ್ಲಿ ಒಂದು ಭಾಗದ' ಜನರನ್ನು ಜನರು ಮುಟ್ಟಿಸಿಕೊಳ್ಳಲೂ ಆಗದ ಕೆಳಮಟ್ಟದಲ್ಲಿರುವ ಅಸ್ಪೃಶ್ಯರನ್ನು ಸೂಚಿಸುತ್ತಾ ಅವರಿಗಾದ ಅನ್ಯಾಯದ ಬಗ್ಗೆ ಇತರರೂ ತಿಳಿದುಕೊಳ್ಳಲು ಮತ್ತು ದಲಿತರ ಬಿಡುಗಡೆಗಾಗಿ ಬಯಸುವ ಸಾಮಾಜಿಕ ಕಳಕಳಿಯನ್ನು ಕತೆಗಳು ತಿಳಿಸುತ್ತವೆ. "ಒಂದು ಜಾತಿ, ಒಂದು ಜೀವ. ಭಾರತ ದೇಶದಲ್ಲಿರುವ ಮೂವತ್ತೆರಡು ಕೋಟಿ ಜನರು ಒಂದೇ ಜಾತಿ, ವರ್ಗಗಳು ಇರಬಹುದು; ವಿಭಾಗಗಳು ಇರಬಾರದು. ಬೇರೆ ಬೇರೆ ಕೆಲಸ ಮಾಡಬಹುದು. ಹುಟ್ಟಿನ ಮೂಲದಿಂದಲೇ ಮೇಲು-ಕೀಳು ಎಂಬ ಭಾವ ಇರಬಾರದು. ಮತ ಬೇರೆ ಬೇರೆ ಇರಬಹುದು. ಮತ ವಿರೋಧಗಳು ಇರಬಾರದು. ಈ ತರಹದ ಭಾವನೆಯೇ ನಮಗೆ ಸ್ವಾತಂತ್ರ್ಯದ ಅಮರತ್ವವನ್ನು ನೀಡುತ್ತದೆ. ಈ ಕೃತಿಯನ್ನು ಭಾರತ ದೇಶದಲ್ಲಿ ವ್ಯವಸಾಯ ಕೂಲಿಗಳಾಗಿ ಕೆಲಸ ಮಾಡಿ ಆಹಾರ ನೀಡಿ ರಕ್ಷಿಸುವವರಾದ ಪಳ್ಳರ್, ಪರೈಯರ್ ಮುಂತಾದ ಪರಿಶುದ್ಧ ಸಹೋದರರಿಗೆ ಅರ್ಪಿಸುತ್ತಿದ್ದೇನೆ." (ಆರಿಲ್ ಒರು ಪಂಗು, ಭಾರತಿಯಾರ್, ಪು. ೩೨) ಎಂದು ಭಾರತಿಯಾರ್ ತಮ್ಮ ಮುನ್ನುಡಿಯಲ್ಲಿ ಭಾರತದಲ್ಲಿರುವ ಬಹುಸಂಸ್ಕೃತಿಯನ್ನು ತಿಳಿಸುತ್ತಾರೆ. ಇದೊಂದು ಪ್ರೇಮ ಕತೆ. ಒಬ್ಬ ಬ್ರಾಹ್ಮಣ ಹುಡುಗ ತಾನು ಇಷ್ಟಪಡುವ ಹರಿಜನ ಹುಡುಗಿಯನ್ನು ಮದುವೆ ಆಗುವ ಪೂರ್ವದಲ್ಲಿ ಸಮಾಜದಲ್ಲಿರುವ ಹಲವು ಜಾತಿ ಸಮಸ್ಯೆಗಳನ್ನು ಗಮನಿಸಬೇಕಾಗಿದೆ ಎಂದು ಹೇಳುತ್ತಾನೆ. ತಾನು ಸದಸ್ಯನಾಗಿದ್ದ 'ದೇಶ ಬಿಡುಗಡೆ ಚಳುವಳಿ'ಯ ಮುಖ್ಯ ಅಂಶವು ದಲಿತರ ಬಿಡುಗಡೆ ಎಂದು ನಿರ್ಣಯಿಸುತ್ತಾನೆ. ಇದಕ್ಕಾಗಿ ಬಂಗಾಳಕ್ಕೆ ಹೋಗಿ ಅಲ್ಲಿದ್ದ ಕ್ರಾಂತಿಕಾರರೊಂದಿಗೆ ಸೇರಿಕೊಳ್ಳುತ್ತಾನೆ. ದಲಿತರ ಜಾತಿ ಸಮಸ್ಯೆಯನ್ನು ಈ ರೀತಿಯಾಗಿ ಭಾರತಿಯಾರ್‌ರವರು ಚಿತ್ರಿಸುತ್ತಾರೆ. ಶಿವತಂಬಿ ಎಂಬ ಸಣ್ಣಕಥಾ ಸಂಶೋಧಕರು

ಭಾರತಿಯಾರ್‌ರ ಕತೆಗಳಲ್ಲಿ ಸಣ್ಣಕಥಾ ಸಾಹಿತ್ಯಕ್ಕೆ ಹೊಂದುವ ಲಕ್ಷಣವಿಲ್ಲವೆಂದು ವಾದಿಸುವುದು ಗಮನಿಸಬೇಕಾದ ಅಂಶವಾಗಿದೆ.

ಅ. ಮಾದವಯ್ಯ ೧೯೧೦ರಲ್ಲಿ ಹಿಂದೂ ಆಂಗ್ಲ ಪತ್ರಿಕೆಯಲ್ಲಿ ವಾರಕ್ಕೆ ಒಂದು ಕತೆಯಂತೆ ೨೭ ಕತೆಗಳನ್ನು ಬರೆದರು. ನಂತರ ಈ ಕತೆಗಳನ್ನು ೧೯೧೨ರಲ್ಲಿ Kusika's short stories ಎಂಬ ಶೀರ್ಷಿಕೆಯಲ್ಲಿ ಎರಡು ಸಂಕಲನಗಳಾಗಿ ಪ್ರಕಟಪಡಿಸಲಾಯಿತು. ಹನ್ನೆರಡು ವರ್ಷಗಳ ನಂತರ ೧೯೨೪ರಲ್ಲಿ ೧೬ ಕತೆಗಳನ್ನು ಭಾಷಾಂತರಿಸಿ 'ಕುಷಿಗರ್ ಕುಟ್ಟಿಕ್ ಕತೈಗಳ್' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿದರು. ಸಾಮಾಜಿಕ ಬದಲಾವಣೆಯ ಮುಖ್ಯ ಉದ್ದೇಶದಿಂದ ಈ ಕತೆಗಳನ್ನು ಬರೆದದ್ದಾಗಿ ಅ. ಮಾದವಯ್ಯ ತಮ್ಮ ಮುನ್ನುಡಿಯಲ್ಲಿ ತಿಳಿಸಿದ್ದಾರೆ. ಆದರೆ ಕೆಲವೊಮ್ಮೆ ಇವರ ಕತೆಗಳ ಮುಕ್ತಾಯವು ಸಣ್ಣ ಕತೆಯ ಲಕ್ಷಣವನ್ನು ಬಿಟ್ಟಂತೆ ಕಾಣಿಸುತ್ತದೆ. 'ಎಟ್ಟುಚ್ ಸುರೈಕ್ಕಾಯ್' ಎಂಬ ಕತೆಯ ಕೊನೆಯಲ್ಲಿ 'ದುಃಖದಿಂದ ಕೂಡಿದ ಈ ಕತೆಯನ್ನು ಇನ್ನು ಮುಂದುವರೆಸಲು ಮನ ಒಪ್ಪುತ್ತಿಲ್ಲ. ಓದುಗರು ತಮಗಿಷ್ಟದಂತೆ ಮುಗಿಸಿಕೊಳ್ಳುವುದಕ್ಕೆ ಇಲ್ಲಿ ಬಿಡಲಾಗಿದೆ' ಎಂದು ಹೇಳಿ ಕತೆಯನ್ನು ಮುಗಿಸುವುದನ್ನು ಕಾಣಬಹುದು. ಇದು ಕಥಾ ನಿರೂಪಣಾ ತಂತ್ರವು ಓದುಗನನ್ನು ಸೆಳೆಯುವ ಪ್ರಯತ್ನವಾಗಿದೆ ಎಂದು ತಿಳಿಯಬಹುದಾಗಿದೆ.

"ವರಕನೇರಿ ವೆಂಕಟ ಸುಬ್ರಮಣ್ಯ ಅಯ್ಯರ್‌ರವರ 'ಕುಳತ್ತಂಗರೈ ಅರಸಮರಂ' ಎಂಬ ಕತೆಯೇ ತಮಿಳಿನ ಮೊದಲ ಸಣ್ಣಕತೆ ಎಂದು ಹಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅಲ್ಲದೆ ೧೯೨೭ರಲ್ಲಿ ಬಂದ ವೆಂಕಟ ಸುಬ್ರಮಣ್ಯ ಅಯ್ಯರ್ ಅವರ 'ಮಂಗೈಯರ್ ಅರಸಿಯಿನ್ ಕಾದಲ್' ಮೊದಲ ತಮಿಳು ಸಣ್ಣಕಥಾ ಸಂಕಲನ" ಎಂದು ದಂಡಾಯುದಂ ತಿಳಿಸಿದ್ದಾರೆ. (ರಾ. ದಂಡಾಯುದಂ, ತಮಿಳ್‌ಚ್ ಸಿರುಕದೈಗಳ್, ಪು. ೪೫) ಈ ಕತೆಯ ನಿರೂಪಣೆಯನ್ನು ಲೇಖಕರು ಒಂದು ಆಲದ ಮರವು ಕಥಾ ನಾಯಕಿಯ ಸೌಂದರ್ಯ, ಅವಳ ಗುಣವನ್ನು ತಿಳಿಸುವ ಮೂಲಕ ಕತೆಯನ್ನು ಓದುಗರಿಗೆ ಪರಿಚಯಿಸುತ್ತಾರೆ. ಈ ಕತೆಯು ಬ್ರಾಹ್ಮಣ ಕುಲದ ಸ್ತ್ರೀಯರ ಸ್ಥಿತಿಯನ್ನು ಅವರ ನಡವಳಿಕೆಯನ್ನು ತಿಳಿಸುತ್ತದೆ.

ಈ ಕಾಲಘಟ್ಟದಲ್ಲಿ ಪ್ರಕಟವಾದ ಸಣ್ಣಕತೆಗಳು ವೈಧವ್ಯದ ಶೋಷಣೆ, ವರದಕ್ಷಿಣೆ, ಮೂಢನಂಬಿಕೆಗಳು, ಜಾತಿ ಶೋಷಣೆ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ ಸಮಸ್ಯೆಗಳ ಕುರಿತು ಧ್ವನಿಸಿದವು. ವೆಂಕಟ ಸುಬ್ರಮಣ್ಯ ಅಯ್ಯರ್, ಭಾರತಿಯಾರ್, ಅ.ಮಾದವಯ್ಯ ಈ ಮೂವರನ್ನು ತಮಿಳು ಸಣ್ಣಕತೆಗಳ ಆರಂಭಕಾರರೆಂದು ಕರೆಯಲಾಗಿದೆ. ಇವರೊಂದಿಗೆ ರಾ.ನಾರಾಯಣದುರೈ ಕಣ್ಣನ್, ತಿ.ಜ.ರಂಗನಾಥನ್ ಮುಂತಾದವರು ಸಾಮಾಜಿಕ ದೃಷ್ಟಿಕೋನದ ಮೂಲಕ ಸಣ್ಣಕತೆಗಳನ್ನು ಬರೆದಿದ್ದಾರೆ, ವೆಂಕಟ ಸುಬ್ರಮಣ್ಯ ಅಯ್ಯರ್ ಅವರನ್ನು 'ತಮಿಳು ಸಣ್ಣಕತೆಗಳ ಪಿತಾಮಹ' ಎಂದು ಕರೆಯುತ್ತಾರೆ.

೨. ಎರಡನೇ ಕಾಲಘಟ್ಟ (೧೯೨೬-೧೯೪೫)

ಪುದುಮೈಪಿತ್ತನ್, ಕು.ಬಾ.ರಾಜಗೋಪಾಲನ್, ರಾಜಾಜಿ, ರಾ.ಕೃಷ್ಣಮೂರ್ತಿ, ಕು.ಅಳಗಿರಿ ಸ್ವಾಮಿ, ನಾ.ಪಿಚ್ಚಮೂರ್ತಿ, ಬಿ.ಎಸ್.ರಾಮಯ್ಯ, ಮೌನಿ, ಕೆ.ಎಸ್.ವೆಂಕಟರಮಣಿ, ಶಂಕರರಾಮ್, ನ.ಚಿದಂಬರ ಸುಬ್ರಮಣ್ಯಂ, ಕಿ.ರಾಮಚಂದ್ರನ್, ಟಿ.ಎಸ್.ಸೊಕ್ಕಲಿಂಗಂ ಮುಂತಾದ ಲೇಖಕರು ತಮಿಳು ಸಣ್ಣಕಥಾ ಸಾಹಿತ್ಯದ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿದರು. ಕು.ಬಾ.ರಾಜಗೋಪಾಲನ್ ಅವರು ಮನುಷ್ಯನ ಮನಸ್ಸಿನಲ್ಲಿ ಏಳುವ ಸುಖ-ದುಃಖದ ಭಾವನೆಗಳು, ನನಸಾಗದ ಕನಸುಗಳನ್ನು ತಮ್ಮ ಕತೆಗಳಲ್ಲಿ ಚಿತ್ರಿಸುತ್ತಾರೆ. ತಾವು ಹುಟ್ಟಿದ ಬ್ರಾಹ್ಮಣ ಕುಲದ ಹೆಣ್ಣು-ಗಂಡು, ಗಂಡ-ಹೆಂಡತಿಯರ ಸಂಬಂಧಗಳಲ್ಲಿ ಉದ್ಭವಿಸುವ ಲೈಂಗಿಕ ಸಮಸ್ಯೆಗಳೇ ಇವರ ಕತೆಗಳ ಕಥಾ ವಸ್ತುಗಳಾಗಿದ್ದವು. ಒಂದು ಹೆಣ್ಣಿನ ಮನಸ್ಸಿನ ಭಾವನೆಯನ್ನು ಗಂಡು ಲೇಖಕನೊಬ್ಬನು ಅತೀ ಸೂಕ್ಷ್ಮವಾಗಿ ಚಿತ್ರಿಸಲು ಸಾಧ್ಯ ಎಂಬುದನ್ನು ನಿರೂಪಿಸಿದವರು ಕು.ಬಾ.ರಾ. ಇವರ **'ವಿಡಿಯುಮಾ'**, **'ತಿರೈ'** ಮುಂತಾದ ಕತೆಗಳು ಪ್ರಮುಖವಾದವು.

ಕಲ್ಕಿ ಎಂಬ ಕಾವ್ಯನಾಮದಿಂದ ಪರಿಚಿತರಾಗಿರುವ ರಾ.ಕೃಷ್ಣಮೂರ್ತಿಯವರ ಕತೆಗಳು ಗಾಂಧಿಜಿಯ ಚಿಂತನೆಗಳನ್ನು ಹೆಚ್ಚು ಒಳಗೊಂಡಿದ್ದವು. ಸಾಮಾನ್ಯರು ತಿಳಿದುಕೊಳ್ಳುವ ಭಾಷೆಯನ್ನು ಬಳಸಿ ಜನರ ದೈನಂದಿನ ಜೀವನದ ಸಂಗತಿಗಳನ್ನು ಮುಖ್ಯ ಕಥಾವಸ್ತುವಾಗಿಸಿ ತಿಳಿಹಾಸ್ಯ ರೂಪದಲ್ಲಿ ನಿರೂಪಿಸುತ್ತಾರೆ. ಇದರೊಂದಿಗೆ ಸಾಮಾಜಿಕ ಬದಲಾವಣೆಯ ಉದ್ದೇಶ ಹೊಂದಿದ್ದ ಇವರು ಮದ್ಯಪಾನ, ಅಸ್ಪೃಶ್ಯತೆಯ ನಾಶ ಕುರಿತು ಹಲವು ಕತೆಗಳನ್ನು ಬರೆದಿದ್ದಾರೆ. **'ವಿಷ ಮಂದಿರಂ'** ಎಂಬ ಸಣ್ಣಕತೆಯು ಅಸ್ಪೃಶ್ಯತೆಯನ್ನು ನಾಶ ಮಾಡುವ ರೀತಿಯಲ್ಲಿ ಚಿತ್ರಿಸಿದ್ದಾರೆ. **'ತಿರುಡನ್ ಮಗನ್ ತಿರುಡನ್'**, **'ಒಟ್ರೈ ರೋಜಾ'**, **'ಕೇದಾರಿನ್ ತಾಯಾರ್'** ಮುಂತಾದವು ಇವರ ಪ್ರಸಿದ್ಧ ಕತೆಗಳಾಗಿವೆ.

ಸೊ.ವಿರುದಾಚಲಂರು 'ಪುದುಮೈಪಿತ್ತನ್' ಎಂಬ ಕಾವ್ಯನಾಮದಿಂದ ಸಣ್ಣಕತೆಗಳನ್ನು ಬರೆದರು. ಇವರನ್ನು **'ಸಿರುಕತೈ ಮಣ್ಣನ್'** (ಸಣ್ಣಕತೆಯ ರಾಜ) ಎಂದು ಕರೆಯಲಾಗುತ್ತದೆ. ತಮಿಳು ಸಣ್ಣಕಥಾ ನಿರೂಪಣೆಯಲ್ಲಿ ಹಲವು ಹೊಸ ಪ್ರಯೋಗಗಳನ್ನು ಕೈಗೊಂಡರು. ಆಡುವ ಭಾಷೆಯನ್ನು ಸಣ್ಣಕತೆಗಳಲ್ಲಿ ಮೊದಲ ಬಾರಿಗೆ ಬಳಸಿಕೊಂಡವರು. ವಿಭಿನ್ನ ವಸ್ತು, ತಂತ್ರ, ನಿರೂಪಣಾ ಕ್ರಮ, ಶೈಲಿಯಲ್ಲಿ ಅವರ ಕತೆಗಳು ಅನೇಕ ವಿಷಯಗಳನ್ನು ಚರ್ಚಿಸುತ್ತವೆ. ಜೀವನದ ವಾಸ್ತವವಾದದ ನೆಲೆಯನ್ನು ಇವರ ಕತೆಗಳು ತಿಳಿಸುತ್ತವೆ. ಇವರ **'ಪುದಿಯ ನಂದನ್'** ಕತೆಯು ಜಾತಿ ಸಮಸ್ಯೆ ಕುರಿತು ಪ್ರಶ್ನಿಸುತ್ತದೆ. ದಲಿತರ ಜೀವನದ ಸ್ಥಿತಿ ಮೇಲ್ವರ್ಗದ ಆಡಳಿತ, ಮತ, ಧರ್ಮಗಳ ಒಳನೋಟಗಳನ್ನು ತೆರೆದಿಡುತ್ತದೆ. ಆದನೂರಿನಲ್ಲಿ ನಡೆಯುವ ಕತೆ ಹತ್ತೊಂಬತ್ತನೇ ಶತಮಾನದ ಸ್ವಾತಂತ್ರ್ಯ ಪೂರ್ವದ ಸಾಮಾಜಿಕ ಮತ್ತು ರಾಜಕೀಯದ ಸ್ಥಿತಿಗಳು ದಲಿತರ ಜೀವನದ ಮೇಲೆ ಪ್ರಭಾವ ಬೀರುವುದನ್ನು ತಿಳಿಸುತ್ತದೆ. ಜಾತಿಯಲ್ಲಿ ಮುಳುಗಿದ್ದ ಆದನೂರಿನಲ್ಲಿ ಮೇಲ್ವರ್ಗದವನಾಗಿದ್ದು ಅಪಾರ ಆಸ್ತಿ ಹೊಂದಿದ್ದ ವಿಶ್ವನಾಥ

ಚೌದ್ರಿ, ಅವರ ಮಗ ರಾಮನಾಥ. ಪರೈ ಕೇರಿಯಲ್ಲಿ ಹೆಣದಂತಿದ್ದ ಕೀಳು ಕುಲದ ಕರುಪ್ಪನ್ (ಕುರುಡ). ಅವನ ಮಗ ಪಾವಾಡೈ ಮತ್ತು ಒಬ್ಬಳು ಮಗಳು. ರಾಮನಾಥ ಚೆನ್ನಾಗಿ ಓದಿ ಕಲೆಕ್ಟರ್ ಆಗಿ ತನ್ನ ಪದವಿಯನ್ನು ತ್ಯಜಿಸಿ ಗಾಂಧೀಜಿಯ ಉಪ್ಪು ಸತ್ಯಾಗ್ರಹದಲ್ಲಿ ಪಾಲ್ಗೊಂಡು ಸೆರೆಮನೆ ಸೇರುತ್ತಾನೆ. ಸೆರೆಮನೆಯಿಂದ ಬಂದ ನಂತರ ಹರಿಜನರ ಬಿಡುಗಡೆಯ ಚಳುವಳಿಯಲ್ಲಿ ಭಾಗಿಯಾಗುತ್ತಾನೆ. ನಂತರ ತನ್ನ ಸ್ವಗ್ರಾಮಕ್ಕೆ ಬರುತ್ತಾನೆ. ಒಂದು ದಿನ ರಾತ್ರಿ ವಿಹಾರಕ್ಕೆ ಹೋಗುತ್ತಿರುವಾಗ ಅಸ್ಪಷ್ಟ ರೂಪದ ಹುಡುಗಿಯು ಬಾವಿಯಲ್ಲಿ ಧುಮುಕುವುದನ್ನು ಕಂಡು ತಾನೂ ಬಾವಿಯಲ್ಲಿ ಹಾರುತ್ತಾನೆ. ಆಗ ಅವಳು 'ಸ್ವಾಮಿ, ಹತ್ತಿರ ಬರಬೇಡಿ, ನಾನು ಪರಚ್ಚೆ(ಕೀಳುಜಾತಿ), ಕರುಪ್ಪನ್‌ನ ಮಗಳು. ಸುಮ್ಮನೆ ಸ್ನಾನ ಮಾಡುತ್ತಿದ್ದೇನೆ' ಎಂಬ ಧ್ವನಿ ಕೇಳಿಸುತ್ತದೆ. 'ಸರಿ, ನೀನು ಆತ್ಮಹತ್ಯೆ ಮಾಡಿಕೊಳ್ಳುತ್ತೀಯಾ ಎಂದುಕೊಂಡೆ ಸರಿ ಮೇಲೆ ಏರಿ ಬಾ' ಎಂದು ಕರೆಯುತ್ತಾನೆ. ನಂತರ ರಾತ್ರಿಯ ನಿಸರ್ಗ ಅವರಿಬ್ಬರ ಕೂಡುವಿಕೆಯಲ್ಲಿ ಯಶಸ್ವಿಯಾಗುತ್ತದೆ. ಅವಳನ್ನು ಮದುವೆ ಆಗುತ್ತೇನೆ ಎಂದಾಗ ಅವಳು 'ಅದೇಗೆ ಆಗುತ್ತದೆ ಸ್ವಾಮಿ' ಎಂದು ತಿರಸ್ಕರಿಸುತ್ತಾಳೆ. ರಾಮನಾಥನು ಹುಡುಗಿಯ ತಂದೆ ಕರುಪ್ಪನಿಗೆ ಅವಳನ್ನು ಮದುವೆ ಆಗುವುದಾಗಿ ಕೇಳಿದಾಗ ಕರುಪ್ಪನು ದ್ವಂದ್ವಕ್ಕೆ ಸಿಲುಕಿಕೊಳ್ಳುತ್ತಾನೆ. ಇನ್ನು ಅವಳ ಅಣ್ಣ ಪಾವಾಡೈ. ಅವನಿಗೆ ಓದುವ ಆಸೆ ಜಾನ್ ಅಯ್ಯರ್ ಎನ್ನುವ ಕ್ರೈಸ್ತನು ಅವನನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸಿ ಜಾನ್‌ಡ್ಯಾನಿಯಲ್ ಎಂದು ಹೆಸರಿಟ್ಟು ೧೦ನೇ ತರಗತಿಯವರೆಗೆ ಓದಿಸುತ್ತಾರೆ. ಜಾನ್ ಅಯ್ಯರ್‌ರ ಮಗಳು ಮೇರಿ ಲಿಲ್ಲಿ. ಅವಳಿಗೂ ಮತ್ತು ಜಾನ್‌ಡ್ಯಾನಿಯಲ್ ನಡುವೆ ಪ್ರೀತಿ ಅಂಕುರಿಸಿರುತ್ತದೆ. ಡಾನಿಯಲ್ ಜಾನ್ ಅಯ್ಯರ್ ಬಳಿ ತನ್ನ ಪ್ರೇಮದ ವಿಷಯ ತಿಳಿಸಿದಾಗ 'ಪರೈ ಜಾತಿಯ ಕತ್ತೆ ಮನೆಬಿಟ್ಟು ತೊಲಗು' ಎಂದು ಬೈದು ಓಡಿಸುತ್ತಾನೆ. ಇದರಿಂದ ಕೋಪಗೊಂಡ ಡ್ಯಾನಿಯಲ್ ಪೆರಿಯಾರ್ ಸುಯ ಮರಿಯಾದೈ ಚಳುವಳಿಯಲ್ಲಿ ಸೇರಿಕೊಳ್ಳುತ್ತಾನೆ. ಜಾತಿ ನಾಶಕ್ಕಾಗಿ ಶ್ರಮಿಸುತ್ತಾನೆ. ತನ್ನ ತಂಗಿಯ ಮೇಲೆ ರಾಮನಾಥನಿಗಿದ್ದ ಪ್ರೀತಿ ವಿಷಯ ತಿಳಿದು ಕೋಪಗೊಂಡು ಎಲ್ಲಾ ಜಾತಿ ಶೋಷಣೆಗಳಿಗೂ ಕಾರಣ ಈ ಬ್ರಾಹ್ಮಣ ಜಾತಿಯೇ ಅವರನ್ನು ಮಟ್ಟ ಹಾಕಲೇಬೇಕೆಂದು ತೀರ್ಮಾನಿಸುತ್ತಾನೆ. ಈ ಸಮಯದಲ್ಲೇ ಗಾಂಧೀಜಿ ಆದನೂರ್‌ನಲ್ಲಿ ಐದು ನಿಮಿಷಗಳ ಕಾಲ ಉಳಿದುಕೊಳ್ಳುವಂತೆ ರಾಮನಾಥ ಏರ್ಪಾಡು ಮಾಡುತ್ತಾನೆ. ರಾಮನಾಥನ ತಂದೆ ಮತ್ತು ಬ್ರಾಹ್ಮಣರು ಗಾಂಧಿಯನ್ನು ಎದುರಿಸಿ ಪ್ರಶ್ನೆ ಕೇಳಲು ಸಿದ್ಧರಿದ್ದರು ಅದರೊಂದಿಗೆ ಸನಾತನ ಧರ್ಮದ ಮಹಿಮೆಯನ್ನು ರಾಮನಾಥನು ತಿಳಿದುಕೊಂಡು ಪರೈಯರ ಪರ ಇರುವುದನ್ನು ತಪ್ಪಿಸಬೇಕೆಂದು ಚೌದ್ರಿಯ ಉದ್ದೇಶ. ಹೀಗಿರುವಾಗ ಗಾಂಧೀಜಿಯನ್ನು ನೋಡಲು ಹೋದ ಕರುಪ್ಪನ್ ದಾರಿ ತಪ್ಪಿ ರೈಲು ಹಳಿಯ ಮೇಲೆ ನಡೆಯುತ್ತಾನೆ. ಇದನ್ನು ಮಗ ಪಾವಾಡೈ, ಅಳಿಯನಾಗಬೇಕಾದ ರಾಮನಾಥ ಇಬ್ಬರು ನೋಡುತ್ತಾರೆ. ಕರುಪ್ಪನನ್ನು ಕಾಪಾಡಲು ಧಾವಿಸಿದಾಗ ರಾಮನಾಥ ಮತ್ತು ಪಾವಾಡೈ ಇಬ್ಬರೂ ಸಾವನ್ನಪ್ಪುತ್ತಾರೆ. ಆ ಮೂವರ ರಕ್ತವು ಒಂದೇ ಬಣ್ಣವಾಗಿ ಹರಿಯುತ್ತದೆ. ಇದರಲ್ಲಿ

ಯಾರು ಹೊಸ ನಂದನು? ಎಂಬ ಪ್ರಶ್ನೆಯೊಂದಿಗೆ ಕತೆ ಮುಗಿಯುತ್ತದೆ. ಅಂತ್ಯವನ್ನು ಓದುಗರೆ ತೀರ್ಮಾನಿಸುವಂತೆ ಕತೆ ಹೆಣೆಯಲಾಗಿದೆ.

ಎಸ್.ಮಣಿಯವರು 'ಮೌನಿ' ಎಂಬ ಕಾವ್ಯನಾಮದಿಂದ ಸಣ್ಣಕತೆಗಳನ್ನು ಬರೆಯುತ್ತಾರೆ. ಇವರು ಸಾಮಾನ್ಯ ಮನುಷ್ಯನ ಮನಸ್ಸಿನಲ್ಲಿ ನಡೆಯುವ ಇಕ್ಕಟ್ಟಿನ ಪರಿಸ್ಥಿತಿಯನ್ನು ವಸ್ತುವಾಗಿಸಿಕೊಂಡ ಸಣ್ಣಕತೆಗಳನ್ನು ಕಾಣಬಹುದು. **'ಮಣಕ್ಕೋಲಂ', 'ಕಾದಲ್ ಅಲೈ ಮಾರುದಲ್', 'ಸಾವಿಲ್ ಪಿರಂದ ಸೃಷ್ಟಿ'** ಮುಂತಾದ ಕತೆಗಳು ಪ್ರಸಿದ್ಧವಾಗಿದೆ.

ಕು.ಅಳಗಿರಿಸ್ವಾಮಿ ತಿರುನೆಲ್ವೇಲಿ ಜಿಲ್ಲೆಯ ಸಿಟ್ಟೂರ್ ಪ್ರದೇಶದ ಜನರ ಜೀವನ ವಿಧಾನಗಳನ್ನು ಆಹಾರ, ವಿಚಾರಗಳನ್ನು ಕತೆಗಳಲ್ಲಿ ಚಿತ್ರಿಸಿದ್ದಾರೆ. **'ತವಪ್ಪನ್', 'ಪುದು ಉಲಗಂ', 'ಅನ್ಬಳಿಪ್ಪು'** ಮುಂತಾದವುಗಳು ಇವರ ಕಥಾ ಸಂಕಲನಗಳಾಗಿವೆ. ಬಿ.ಎಸ್.ರಾಮಯ್ಯರವರು ಸಾಮಾಜಿಕ ಸಮಸ್ಯೆಗಳನ್ನು ಕುರಿತು ತಮ್ಮ ಸಣ್ಣಕತೆಗಳಲ್ಲಿ ಚಿತ್ರಿಸುತ್ತಾರೆ. ರಾಜಾಜಿಯವರು ಗಾಂಧೀಯವರ ಚಿಂತನೆಗಳಲ್ಲಿ ಹೆಚ್ಚು ಒಲವು ಹೊಂದಿದ್ದು, ಇವರು ಕತೆಗಳಲ್ಲಿ ರಾಜಕೀಯವನ್ನು ಮಿಶ್ರಣ ಮಾಡುತ್ತಾರೆ. ನಾ.ಪಿಚ್ಚಮೂರ್ತಿ ಅವರು ಹೆಣ್ಣು-ಗಂಡಿನ ಸಂಬಂಧಗಳನ್ನು ತಿಳಿಸುತ್ತಾರೆ ಇವರ **'ಮುಳ್ಳುಂ-ರೋಜಾವುಂ', 'ಪದಿನೆಟ್ಟಾಂ ಪೆರುಕ್ಕು'** ಮುಂತಾದ ಕಥಾ ಸಂಕಲನಗಳು ಪ್ರಮುಖವಾಗಿದೆ. ಲಾ.ಸ. ರಾಮಾ ಮಿತ್ರಂರು ಮನಸ್ಸಿನ ಸಮಸ್ಯೆಗಳನ್ನು ಚಿತ್ರಿಸುತ್ತಾರೆ. ಇದರೊಂದಿಗೆ ಕು.ಶ್ರೀನಿವಾಸನ್, ತಿ.ಸ.ಸೊಕ್ಕಲಿಂಗಂ, ವರಾರವರಿಂದ ೧೯೩೩ ಸೆಪ್ಟೆಂಬರ್ ೧೭ರಂದು ಪ್ರಾರಂಭವಾದ 'ಮಣಿಕ್ಕೊಡಿ' ಎಂಬ ಪತ್ರಿಕೆಯು ಹಲವು ಸಣ್ಣಕತೆಗಳನ್ನು ಬರೆಯಲು ಪ್ರೋತ್ಸಾಹ ನೀಡಿತು.

ಒಟ್ಟಾರೆ ಈ ಕಾಲಘಟ್ಟದ ಸಣ್ಣಕತೆಗಳಲ್ಲಿ ಮನುಷ್ಯನಿಗೆ ಸಾಮಾಜಿಕ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳು ಸಾಹಿತ್ಯದಲ್ಲಿ ಪ್ರತಿಬಿಂಬವಾಗಿ ಮೂಡಿಬಂದಿವೆ. ತಮಿಳುನಾಡಿನ ರಾಜಕೀಯತೆ ಮತ್ತು ಧಾರ್ಮಿಕತೆಯು ಹೇಗೆ ಸಾಹಿತ್ಯವನ್ನು ಪ್ರಭಾವಿಸಿವೆ ಎನ್ನುವುದನ್ನು ಈ ಕಾಲ ಘಟ್ಟದ ಸಾಹಿತ್ಯದಲ್ಲಿ ನಾವು ಕಾಣಬಹುದಾಗಿದೆ. ಅದಲ್ಲದೆ ಈ ಕಾಲಘಟ್ಟದ ಸಣ್ಣಕತೆಗಳು ಬಡತನದ ಕಷ್ಟಗಳು, ಸಮುದಾಯದ ಸಮಸ್ಯೆಗಳನ್ನು ತಿಳಿದುಕೊಳ್ಳಲು ಅನುವು ಮಾಡಿಕೊಡುತ್ತವೆ. ಹೀಗೆ ಹಲವು ರೀತಿಯ ಸಾಮಾಜಿಕ ವಿಷಯಗಳು ಈ ಕಾಲದ ಸಣ್ಣಕತೆಗಳಲ್ಲಿ ಮುಖ್ಯ ಕಥಾವಸ್ತುಗಳಾಗಿದ್ದವು.

೩. ಮೂರನೇ ಕಾಲಘಟ್ಟ (೧೯೬-೧೯೭೦)

ಭಾರತ ಸ್ವಾತಂತ್ರ್ಯದ ನಂತರ ದೇಶದಲ್ಲಿ ಹಲವು ಬದಲಾವಣೆಗಳು, ನವೀನ ಯೋಜನೆಗಳು ಪ್ರಾರಂಭವಾದವು. ಮತ್ತು ಅವುಗಳ ಪರ-ವಿರೋಧಗಳು ಆರಂಭವಾಗಿ ತಮ್ಮ ಪ್ರಚಾರವನ್ನು ಮುಂದುವರಿಸಿದವು. ಈ ಸಂಗತಿಗಳು ಸಣ್ಣ ಕತೆಗಳಲ್ಲೂ ಕಾಣಿಸಿಕೊಂಡವು. ಕರಿಚ್ಚಾನ್ ಕುಂಜು, ದಿ.ಜಾನಕಿರಾಮನ್, ಎಂ.ವಿ.ವೆಂಕಟರಾಮ್, ರಾ.ಬಾಲಕೃಷ್ಣನ್, ವಿಂದನ್, ಮು.ಸಿದಂಬರ

ರಘುನಾಥನ್, ಅಖಿಲನ್, ಜಯಕಾಂತನ್, ನಾ.ಪಾರ್ಥಸಾರಥಿ, ಮು.ವರದರಾಸನಾರ್ ಮುಂತಾದವರು ಈ ಕಾಲದಲ್ಲಿ ಕತೆಗಳನ್ನು ಬರೆದರು.

ಸ್ವಾತಂತ್ರ್ಯ ಪೂರ್ವದಲ್ಲಿ ಪುದುಮೈಪಿತ್ತನ್, ಸ್ವಾತಂತ್ರ್ಯದ ನಂತರ ಜಯಕಾಂತನ್ ಎನ್ನುವಷ್ಟರ ಮಟ್ಟಿಗೆ ಜಯಕಾಂತನ್‌ರ ಕತೆಗಳು ಪ್ರಸಿದ್ಧವಾಗಿದ್ದವು. ಇವರ **'ಕಡೈಸಿ ವರೈ'** ಎಂಬ ಕತೆಯ ಕೊನೆಯಲ್ಲಿ ಮಾಣಿಕ್ಯಂ ಎಂಬ ಪಾತ್ರ ಈ ರೀತಿ ಹೇಳುತ್ತದೆ. "ಹೌದು ನಾನು ಹುಚ್ಚನೇ, ಬೀದಿ ಪೋಕರಿಯೋ, ಕುಡುಕನೇ ಆದರೆ ನಾನು ಅಪ್ಪುಣಕೌಂಡರ್‌ರ ಮಗ ಮಾದಯ್ಯ ಕೌಂಡರ್‌ರ ಮೊಮ್ಮಗ ನಾನು ಜೀವಂತವಾಗಿರುವ ತನಕ ಕೌಂಡತಿ (ಗೌಡತಿ) ಹುಡುಗಿ ಕೀಳು ಜಾತಿಯವನೊಡನೆ ಬಾಳುವುದಕ್ಕೆ ಬಿಡಲಾರೆ. ಅದರಲ್ಲಿ ಯಾವುದೇ ಬದಲಾವಣೆ ಇಲ್ಲ" (ಜಯಕಾಂತನ್, ಕಡೈಸಿ ವರೈ, ಪು. ೮) ಎಂದು ಮೇಲ್ಜಾತಿ ವ್ಯಕ್ತಿಯ ಆವೇಶಗೊಳ್ಳುವ ಮನಸ್ಥಿತಿಯನ್ನು ಪಾತ್ರಗಳ ಮೂಲಕ ಸಮಾಜದ ಸಮಸ್ಯೆಯನ್ನು ತಿಳಿಸುತ್ತದೆ. ಕೇರಿ ಜನರ ಚಿತ್ರಣವನ್ನು ಇವರ ಕತೆಗಳಲ್ಲಿ ಕಾಣಬಹುದು. **'ಉದಯಂ', 'ಒರು ಪಿಡಿ ಸೋರು', 'ಗುರುಪೀಡಂ'** ಮುಂತಾದವು ಇವರ ಪ್ರಮುಖ ಕಥಾ ಸಂಕಲನಗಳಾಗಿವೆ. ಮನಸ್ಸಿನ ಭಾವನೆಗಳಿಗೆ ಪ್ರಾಶಸ್ತ್ಯ ಕೊಟ್ಟು ಕತೆ ಬರೆದವರು ದಿ.ಜಾನಕಿರಾಮನ್. ಇವರು ಸ್ತ್ರೀ ಸಮಸ್ಯೆಯಿಂದ ಹಿಡಿದು ಮನುಷ್ಯ ಮನಸ್ಸಿನಲ್ಲಿ ನಡೆಯುವ ಭಾವವನ್ನು ಬರಹ ರೂಪದಲ್ಲಿ ಮೂಡಿಸಿದರು. **'ದೇವರ್ ಕುದಿರೈ', 'ಅಕ್ಬರ್ ಶಾಸ್ತ್ರಿ', 'ಗೋಪುರ ವಿಳಕ್ಕು'** ಮುಂತಾದವು ಇವರ ಪ್ರಮುಖ ಕತೆಗಳಾಗಿವೆ.

ಮಧ್ಯಮ ವರ್ಗದ ಜನರ ಹಲವು ನೆಲೆಗಳನ್ನು ತಮ್ಮ ಕತೆಗಳಲ್ಲಿ ಚಿತ್ರಿಸಿದವರು ಅಶೋಕ ಮಿತ್ರನ್ **'ಅಪ್ಪಾವಿನ್ ಸ್ನೇಹಿದನ್', 'ಉರಿಮೈ ವೇಟ್ಟೈ', 'ಉತ್ತರ ರಾಮಾಯಣಂ', 'ಒಂದು ಗ್ರಾಮದ ಅಧ್ಯಾಯ', 'ಕಾಲಮುಂ', 'ಐಂದು ಕುಳಂದೈಗಳುಂ', 'ವಿಮೋಚನಂ'** ಮುಂತಾದವುಗಳು ಇವರ ಪ್ರಮುಖ ಕಥಾಸಂಕಲನಗಳಾಗಿವೆ. ಅಖಿಲನ್ ಹದಿನೇಳು ಕಥಾ ಸಂಕಲನಗಳನ್ನು ಬರೆದಿದ್ದಾರೆ. ಬಡತನ, ಹೆಣ್ಣು-ಗಂಡಿನ ಸಂಬಂಧಗಳು, ವಿಧವೆಯರ ಸ್ಥಿತಿ, ವರದಕ್ಷಿಣೆಯ ಶೋಷಣೆ ಮುಂತಾದ ವಸ್ತುಗಳ ಮೇಲೆ ಕತೆ ಬರೆದಿದ್ದಾರೆ. **'ಏಳೈಪ್ ಪಿಳ್ಳೈಯಾರ್', 'ಪೆರಿಯ ಮೀನ್', 'ಕುಳಂದೈ ಸಿರಿತ್ತದು', 'ವಿಡುದಲೈ'** ಮುಂತಾದವರು ಇವರ ಪ್ರಮುಖ ಕತೆಗಳಾಗಿವೆ.

ದ್ರಾವಿಡ ಚಳುವಳಿಯ ಮೂಲಕ ಮುನ್ನಲೆಗೆ ಬಂದ ಕೆಲವು ಲೇಖಕರು ತಮ್ಮ ಕತೆಗಳಲ್ಲಿ ದ್ರಾವಿಡರ ಸಮಸ್ಯೆಗಳನ್ನು ಕೇಂದ್ರವಾಗಿಸಿಕೊಂಡು ಸಣ್ಣಕತೆಗಳನ್ನು ಬರೆದರು. ಅದರಲ್ಲಿ ಪ್ರಮುಖವಾಗಿ ಅಣ್ಣಾದುರೈ, ಮು.ಕರುಣಾನಿಧಿ, ಆಸೈತಂಬಿ, ತೆನ್ನರಸು, ಡಿ.ಕೆ. ಶ್ರೀನಿವಾಸನ್ ಮುಂತಾದವರು ದ್ರಾವಿಡ ಚಳುವಳಿಯ ನೇತಾರರು ಮತ್ತು ಕತೆಗಾರರು ಆಗಿದ್ದಾರೆ. ಇವರು ಜಾತಿ, ಮತ, ಭೇದ, ಬಡತನ, ಅಂತರ್ ಜಾತಿ ವಿವಾಹ, ವಿಧವಾ ವಿವಾಹ, ಅಸ್ಪೃಶ್ಯತೆಯ ನಾಶ ಮುಂತಾದ ಅಂಶಗಳನ್ನು ಮೂಲವಾಗಿರಿಸಿಕೊಂಡು ಕತೆಗಳನ್ನು ಬರೆದರು. **'ಸ್ವರ್ಗತ್ತಿಲ್ ನರಗಂ', 'ತಿರುಮಲೈ ಕಂಡ ದಿವ್ಯಜ್ಯೋತಿ', 'ಪಿಡಿ ಸಾಂಬಲ್'** ಮುಂತಾದ ಕತೆಗಳಲ್ಲಿ ಧರ್ಮ ಮತ್ತು ಮತಧರ್ಮದ ಮೇಲಿನ ಹುಚ್ಚು ನಂಬಿಕೆಗಳನ್ನು ಖಂಡಿಸುತ್ತಾರೆ.

ಮಾರ್ಕ್ಸ್‌ವಾದದ ಪ್ರವೇಶದಿಂದ ಈ ಕಾಲದ ಹಲವು ಲೇಖಕರು ವರ್ಗ ಸಂಘರ್ಷ ಎಂಬ ಆರ್ಥಿಕ ಸಮಸ್ಯೆಯನ್ನು ಕಥಾವಸ್ತುವಾಗಿಸಿಕೊಂಡು ಕತೆಗಳನ್ನು ಬರೆದರು. ಈ ಕಾಲಘಟ್ಟದಲ್ಲಿ ಮಹಿಳೆಯರು ಸಣ್ಣಕತೆ ಬರೆದಿರುವುದನ್ನು ಕಾಣಬಹುದು. ಕು.ಬಾ. ರಾಜಗೋಪಾಲನ್‌ರ ಸಹೋದರಿ ಕು.ಬಾ.ಪೇದು ಅಮ್ಮಾಳ್, ಪುದುಮೈ ಪಿತ್ತನ್‌ರ ಹೆಂಡತಿ ಕಮಲಾ ವಿರುದಾಳಚಳಂ, ವಿಶಾಲಾಕ್ಷಿ ಅಮ್ಮಳ್ ಮುಂತಾದ ಮಹಿಳೆಯರು ಸಣ್ಣ ಕತೆಗಳನ್ನು ಬರೆದಿದ್ದಾರೆ.

೪. ನಾಲ್ಕನೇ ಕಾಲಘಟ್ಟ ೧೯೭೧-ಪ್ರಸ್ತುತ

ಈ ಕಾಲಘಟ್ಟದ ಸಾಹಿತ್ಯದಲ್ಲಿ ಹಲವು ವಾದ, ಸಿದ್ಧಾಂತಗಳು ಪ್ರವೇಶ ಪಡೆದುಕೊಂಡವು. ನವೀನತ್ವ, ದಲಿತತ್ವ, ಮುಸ್ಲಿಂ ಸಂವೇದನೆ, ಸ್ತ್ರೀವಾದ ಮುಂತಾದ ಸಿದ್ಧಾಂತಗಳ ಪ್ರವೇಶದಿಂದ ಸಣ್ಣಕತೆಯ ವಿಸ್ತಾರತೆಯು ಹೆಚ್ಚಾಯಿತು. ಸಾ.ಕಂದಸಾಮಿ, ಇಂದಿರಾ ಪಾರ್ಥಸಾರಥಿ, ನ.ಮುತ್ತುಸಾಮಿ, ನೀಲ ಪದ್ಮನಾಭನ್, ವಣ್ಣ ನಿಲವನ್, ವಣ್ಣದಾಸನ್, ಸುಜಾತ, ನವಭಾರತಿ, ಬಾಲಕುಮಾರನ್, ರಾಜಂ ಕೃಷ್ಣನ್, ಅಂಬೈ ಮುಂತಾದವರು ಈ ಕಾಲದಲ್ಲಿ ಸಣ್ಣಕತೆಗಳನ್ನು ಬರೆದಿದ್ದಾರೆ. ಪ.ಜಯಪ್ರಕಾಶಂ, ಪ್ರಪಂಚನ್, ಕೃಷ್ಣನ್ ನಂಬಿ, ಜಯ ಮೋಹನ್, ಜಿ.ನಾಗರಾಜನ್ ಅವರು ಪ್ರಮುಖ ಸಣ್ಣಕಥಾ ಲೇಖಕರಾಗಿ ಗುರುತಿಸಿಕೊಳ್ಳುತ್ತಾರೆ. ಮುಂದೆ ಸಣ್ಣಕತೆಗಳು ದಲಿತ, ಮುಸ್ಲಿಂ ಸಂವೇದನೆಯ ಸಣ್ಣಕತೆಗಳು ಕಾಣಿಸಿಕೊಂಡವು. ಸ್ತ್ರೀವಾದ ಮತ್ತು ದಲಿತತ್ವದ ಕುರಿತ ಬರಹಗಳು ೧೯೮೦ರಲ್ಲೇ ಪ್ರಾರಂಭವಾಗಿದ್ದವು. ನಂತರ ಅದರ ವಿಸ್ತರಣೆಯನ್ನು ೧೯೯೦ರ ನಂತರ ಪಡೆದುಕೊಂಡಿತು. ಪ್ರಸ್ತುತ ಈ ಅಧ್ಯಾಯದಲ್ಲಿ ತಮಿಳು ದಲಿತ ಸಣ್ಣಕತೆಗಳ ಅಧ್ಯಯನ ಮಾಡಲಾಗುವುದು.

ದಲಿತ ಸಣ್ಣಕತೆಗಳು

ತಮಿಳು ಸಾಹಿತ್ಯದಲ್ಲಿ ಸಣ್ಣಕತೆ ಪ್ರಕಾರದಲ್ಲಿ ದಲಿತ ಸಣ್ಣಕತೆಗಳು ಎಂಬ ಸಂಪ್ರದಾಯ ಪ್ರಾರಂಭವಾಯಿತು. ಈ ಸಂಪ್ರದಾಯದಲ್ಲಿ ದಲಿತರ ಜೀವನದ ಅಂಶಗಳನ್ನು ದಲಿತರ ಸಂಸ್ಕೃತಿಗೆ ಮಹತ್ವ ನೀಡಿ ಕತೆಗಳನ್ನು ಬರೆದರು. ದಲಿತ ಲೇಖಕರು ಸಣ್ಣಕತೆಗಳಲ್ಲಿ ತಮ್ಮ ದಲಿತ ಕೇರಿಯ ಸಮಗ್ರ ಚಿತ್ರಣವನ್ನು ದಾಖಲಿಸುವ ಪ್ರಯತ್ನ ಮಾಡಿದರು. ದಲಿತರು ತಮಗಾದ ಶೋಷಣೆ, ಹಿಂಸೆ, ದಬ್ಬಾಳಿಕೆ, ಅವಮಾನ ಮುಂತಾದವುಗಳಿಂದ ಬಿಡುಗಡೆಗಾಗಿ ತಮ್ಮ ಹಕ್ಕಿಗಾಗಿ ಹೋರಾಡುವ ಸಾಧನವಾಗಿ ದಲಿತ ಸಣ್ಣಕಥಾ ಮಾಧ್ಯಮವನ್ನು ಬಳಸಿಕೊಂಡರು. ಸಮಾಜದಲ್ಲಿ ದಲಿತರನ್ನು ಮೇಲ್ಜಾತಿಯವರು ತಮ್ಮ ಸ್ವಾರ್ಥಕ್ಕಾಗಿ ದುಡಿಸಿಕೊಳ್ಳುವ, ದಲಿತರನ್ನು ಮನುಷ್ಯರಂತೆ ಕಾಣದೆ ಅವರನ್ನು ಗುಲಾಮರನ್ನಾಗಿಸಿಕೊಂಡು ಅವರ ಅಸ್ತಿತ್ವವನ್ನು ನಾಶ ಮಾಡುವ ಮನಸ್ಥಿತಿಯನ್ನು ಎಚ್ಚೆತ್ತ ದಲಿತರು ಪ್ರಶ್ನೆ ಮಾಡಿದರೆ, ಎದುರಿಸಿ ಮಾತಾಡಿದರೆ, ದಲಿತರನ್ನು ಜೀವಂತವಾಗಿ ಸುಟ್ಟು ಹಾಕಿರುವ ನೈಜ ಘಟನೆಗಳನ್ನು ದಲಿತ ಲೇಖಕರು ತಮ್ಮ ಕತೆಗಳಲ್ಲಿ ದಾಖಲಿಸುವ ಪ್ರಯತ್ನ ಮಾಡಿದರು. ಈ ರೀತಿಯಾದ ನೈಜ ಘಟನೆಗಳು ಕರ್ನಾಟಕದ

ಕೋಲಾರದ ಕಂಬಾಲಪಲ್ಲಿ, ತಮಿಳುನಾಡಿನ ಕೀಳ್‌ವೆಣ್‌ಮಣಿ, ಮೇಲವಳವು ಮುಂತಾದ ಸ್ಥಳಗಳಲ್ಲಿ ನಡೆದ ಘಟನೆಗಳು ಸಾಕ್ಷಿಯಾಗಿವೆ. ಮೇಲ್ಜಾತಿ ವರ್ತನೆಯನ್ನು ವಿರೋಧಿಸುವುದು ಮತ್ತು ನಂಜು ತುಂಬಿದ ಅವರ ಮನದಲ್ಲಿನ ಮೇಲು ಕೀಳು ಎನ್ನುವ ವಿಷದ ಗಿಡವನ್ನು ಬೇರು ಸಹಿತ ಕಿತ್ತು ಎಸೆಯುವ ಪ್ರಯತ್ನವನ್ನು ಮಾಡಿದರು. ಅವರ ಸಂಪ್ರದಾಯ, ಆಚಾರ-ವಿಚಾರಗಳ ವಿರುದ್ಧವಾಗಿ ಧ್ವನಿ ಎತ್ತಿ ದಲಿತರಲ್ಲಿ ಉತ್ಸಾಹ ತುಂಬಿಸುವಂತೆ ಬರೆಯುವುದನ್ನು ದಲಿತ ಸಣ್ಣಕತೆಗಳ ಮೂಲಕ ಕಾಣಬಹುದು. ದಲಿತ ಸಣ್ಣಕತೆಗಳು ಮೇಲ್ಜಾತಿ ಮತ್ತು ಅಧಿಕಾರ ಶಕ್ತಿಗಳ ಸಂಚುಗಳನ್ನು ಮತ್ತು ಶೋಷಣೆಗಳನ್ನು ವಿರೋಧಿಸುತ್ತವೆ. ಈ ರೀತಿಯ ಕಲಹ ರೂಪವು ದಲಿತ ಸಮುದಾಯದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಸಿಗುವವರೆಗೂ ನಡೆದುಕೊಂಡೇ ಸಾಗುತ್ತದೆ.

ದಲಿತ ಕಥಾಸಾಹಿತ್ಯದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿಯು ಶೋಷಣೆಗೆ ಒಳಪಟ್ಟ ದಲಿತರ ಬದುಕು, ಬಡತನ, ಅಜ್ಞಾನ, ಲೈಂಗಿಕ ಶೋಷಣೆಗಳು, ಸಂಕಟಗಳು, ದುಃಖ, ನೋವು, ಜೀವನದ ತುರ್ತು ಪರಿಸ್ಥಿತಿಗಳು, ಆಚರಣೆಗಳು ಸಂಪ್ರದಾಯಗಳು, ದಲಿತರ ಸಾಮಾಜಿಕ ಬದುಕಿನ ಸಂಗತಿಗಳಾದ ಪ್ರೀತಿ, ಮಮತೆ, ನಂಬಿಕೆ ಮುಂತಾದವುಗಳು ದಲಿತ ಸಣ್ಣಕತೆಗಳಲ್ಲಿ ವ್ಯಕ್ತಗೊಂಡಿವೆ. ಮೇಲ್ಜಾತಿಗಳ ದಬ್ಬಾಳಿಕೆಗಳು, ಗುಲಾಮಗಿರಿತನದ ವಿರುದ್ಧ ದಲಿತರು ಧ್ವನಿ ಎತ್ತುವ, ದಲಿತರನ್ನು ಎಚ್ಚರಿಸುವ, ಅವರಿಗೆ ದಲಿತತ್ವದ ಅರಿವು ಮೂಡಿಸುವುದರೊಂದಿಗೆ ದಲಿತ ಸಮುದಾಯಗಳ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳಗಳನ್ನು ಪ್ರತಿರೋಧಿಸುವ ಮುಂತಾದ ವಿಷಯಗಳ ಕುರಿತು ದಲಿತ ಸಣ್ಣಕತೆಗಳು ತೀಕ್ಷ್ಣವಾಗಿ ಮಾತಾಡುತ್ತವೆ. ದಲಿತರ ಜೀವನ ಅನುಭವವನ್ನು ಯಾವುದೇ ಸಾಹಿತ್ಯಿಕ ಅಲಂಕಾರಗಳಿಲ್ಲದೆ ಪ್ರಾಮಾಣಿಕವಾಗಿಯೂ, ಸ್ವಾಭಾವಿಕವಾಗಿಯೂ ನೈಜ ಭಾಷೆಯಲ್ಲಿ ದಲಿತ ಲೇಖಕರು ತಮ್ಮ ಕತೆಗಳಲ್ಲಿ ದಾಖಲಿಸುತ್ತಾರೆ. ದಲಿತರ ಜೀವನದ ವಾಸ್ತವತೆಗಳನ್ನು ದಲಿತ ಸಣ್ಣಕತೆಗಳು ಮುಖಾಮುಖಿಯಾಗಿ ಮಾತಾಡುತ್ತವೆ.

ತಮಿಳಿನ ಪ್ರಮುಖ ದಲಿತ ಸಣ್ಣಕಥಾ ಬರಹಗಾರರು

ವಿಳಿ.ಪಾ.ಇದಯವೇಂದನ್: **'ನಂದನರ್ ತೆರು'** (೧೯೯೧), **'ವದೈಪಡುಂ ವಾಳ್ವು'** (೧೯೯೪), **'ತಾಯ್‌ಮನ್'** (೧೯೯೬), **'ಸ್ನೇಹಿದನ್'** (೧೯೯೯), **'ಉಯರಿಳೈ'** (೨೦೦೦), **'ಅಮ್ಮಾವಿನ್ ನಿಳಲ್'** (೨೦೦೧), **'ಇರುಳ್ ತೀ'** (೨೦೦೩), **'ಮಲರಿಣುಂ ಮೆಲ್ಲಿದು'** (೨೦೦೪) ಒಟ್ಟು ಎಂಟು ಕಥಾಸಂಕಲನಗಳನ್ನು ಬರೆದಿದ್ದಾರೆ. ಇವರ **'ನಂದನರ್ ತೆರು'** ಪ್ರಮುಖವಾಗಿ ಕಥಾಸಂಕಲನವಾಗಿದೆ. ಕೆಳಸ್ತರದ ಜನರ ಬಡತನ, ಅಜ್ಞಾನವನ್ನು ಚಿತ್ರಿಸುತ್ತದೆ. **'ನಂದನರ್ ತೆರು'** ಎಂಬ ಕತೆಯಲ್ಲಿ ವಿದ್ಯುತ್ ದೀಪದ ಸೌಲಭ್ಯ, ಪಾಯಖಾನೆ(ಶೌಚಾಲಯ)ಗಳು, ರಸ್ತೆ ಮುಂತಾದ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಕಷ್ಟಕರವಾದ ಸ್ಥಿತಿಯಲ್ಲಿ ಜೀವಿಸುತ್ತಿದ್ದ ನಂದನರ್ ಬೀದಿಯ ಜನರು, ಸರ್ಕಾರಿ ಅಧಿಕಾರಿಗಳಲ್ಲಿ, ರಾಜಕೀಯ ವ್ಯಕ್ತಿಗಳಲ್ಲಿ ಎಷ್ಟು

ಕೇಳಿದರೂ, ಯಾವುದೇ ಕೆಲಸ ಕಾರ್ಯಗಳು ನಡೆದಿರುವುದಿಲ್ಲ. ಒಂದು ದಿನ ನಗರಸಭೆಯ ಮುಂದೆ ಅಧಿಕಾರಿಗಳು ಮತ್ತು ಸುತ್ತ ಮುತ್ತಲಿನಲ್ಲಿ ಅಧಿಕಾರಿ ಕಛೇರಿಯ ಬಾಗಿಲಿನ ಮುಂದೆ ಮತ್ತು ಎಲ್ಲಾ ಕಡೆಗೂ ಎಲ್ಲರೂ ಮುಖ ಸುಳಿದುಕೊಳ್ಳುವಂತೆ ಮಲವಿಸರ್ಜನೆ ಮಾಡುತ್ತಾರೆ, ಈ ಕತೆಯಲ್ಲಿ ದಲಿತರು ಯಾವುದೇ ಆಧಾರವಿಲ್ಲದೆ ಜೀವನ ನಡೆಸುವ ರೀತಿ ಮತ್ತು ಅವರನ್ನು ಗಮನಿಸದೆ ನಿರ್ಲಕ್ಷ್ಯ ಮಾಡುವ ಸರ್ಕಾರಗಳು, ರಾಜಕೀಯವಾದಿಗಳ ವರ್ತನೆಗಳನ್ನು ಸಹಿಸಿಕೊಂಡು ಒಂದು ದಿನ ತಿರುಗಿ ಬೀಳುವ ಹೋರಾಟದ ಗುಣವನ್ನು ಈ ಕತೆ ನಿರೂಪಿಸುತ್ತದೆ. **'ಮನುಸಂಗಡಾ'** ಕತೆಯಲ್ಲಿ ಕುರವರ್‌ಗಳ ಬೆಳವಣಿಗೆಯನ್ನು ಸಹಿಸದೆ ಜಾತಿಯ ಕಾರಣದಿಂದ ಕೀಳಾಗಿ ಮೇಲ್ಜಾತಿಯವರು ನೋಡುವುದನ್ನು ಚಿತ್ರಿಸುತ್ತದೆ.

ಪ.ಶಿವಗಾಮಿ: ೧೯೯೩ರಲ್ಲಿ ಪ್ರಕಟವಾದ **'ನಾಳುಂ ತೊಡರುಂ'** ಎಂಬ ಕಥಾ ಸಂಕಲನವು ದಲಿತರ ಸಾಮಾಜಿಕ ಬದುಕಿನ ವಾಸ್ತವತೆಯನ್ನು ಚಿತ್ರಿಸಿದೆ. ಇದರಲ್ಲಿನ ಎಲ್ಲಾ ಕತೆಗಳು ಶೋಷಿತ ದಲಿತರ ಜೀವನದ ಸಂಕಷ್ಟಗಳನ್ನು ತಿಳಿಸುವ ಪ್ರಯತ್ನ ಮಾಡಿವೆ. 'ನಾಳುಂ ತೊಡರುಂ' ಎಂಬ ಕತೆಯಲ್ಲಿ ದಲಿತರ ಆರ್ಥಿಕ ಜೀವನವನ್ನು ಕುಂಠಿತಗೊಳಿಸುವ ಜೀವನವನ್ನು ಒಡೆಯುವ ಮೇಲ್ಜಾತಿಯವರ ಬಲಾತ್ಕಾರದ ಸಂಚನ್ನು ಚಿತ್ರಿಸುತ್ತದೆ.

ಅಭಿಮಾನಿ: 'ನೋಕ್ಕಾಡು' (೧೯೯೩), **'ಪಣ್ಮೈಮುಣಿ'** (೧೯೯೮), **'ಊರ್ಚ್‌ಚೋರು'** (೨೦೦೩) ಎಂಬ ಮೂರು ಕಥಾಸಂಕಲನಗಳು ಪ್ರಕಟವಾಗಿದೆ. ಲೇಖಕರು 'ನೋಕ್ಕಾಡು' ಸಂಕಲನದ ಮುನ್ನುಡಿಯಲ್ಲಿ "ರಾಶಿಯಾಗಿರುವ ನನ್ನ ಬೆರಳುಗಳಲ್ಲಿ ಜಾತಿ ಆಚರಣೆ ರೀತಿಯ ಗಾಯಗಳು ನೋಯಿಸುತ್ತಿದೆ. ಅದರ ನೋವಿನ ಕಾರಣದಿಂದ ಎದ್ದ ಪ್ರಲಾಪವೇ ಈ ಸಂಕಲನದ ಕತೆಗಳು" ಎಂದು ಹೇಳುತ್ತಾರೆ. ದಕ್ಷಿಣ ತಮಿಳುನಾಡಿನ ನಲ್ಲೈ ಸೀಮೆಯ ಸುತ್ತಲೂ ಇರುವ ಗ್ರಾಮದ ಸ್ಥಿತಿಯನ್ನು ಅಲ್ಲಿ ಜೀವಿಸುತ್ತಿದ್ದ ದಲಿತರ ಜೀವನ ವಿಧಾನವನ್ನು ಈ ಕತೆಗಳು ಚಿತ್ರಿಸುತ್ತವೆ.

ಉಂಜೈರಾಸನ್: 'ಎಗಿರು' (೧೯೯೬) ಕಥಾ ಸಂಕಲನದ ಕತೆಗಳಲ್ಲಿ ತಂಜೈ ಜಿಲ್ಲೆಯ ಸಿಟ್ರೂರ್ ಪ್ರದೇಶದ ಸಮಾಜದಲ್ಲಿನ ಆಚಾರ-ವಿಚಾರಗಳು ಕಂಡುಬರುತ್ತವೆ. ಜಾತಿ ನಾಶಕ್ಕೆ ಪ್ರಾಮುಖ್ಯತೆ ನೀಡಿ ದಲಿತರು ಒಂದಾಗಿ, ಅರಿವಿನಿಂದ ಹೋರಾಡಬೇಕೆಂದು ತಿಳಿಸುತ್ತದೆ. ಇವರ ಭಾಷೆಯು ದಲಿತ ಎಂಬ ಭಾವನೆಯ ಒಳ ಆಳವನ್ನು ತೋರಿಸುವ ಭಾಷೆಯಾಗಿ ಕಂಡುಬರುತ್ತದೆ. ತಂಜೈ ಜಿಲ್ಲೆಯ ಮೇಲ್ಜಾತಿಯವರು ದಲಿತರ ವಿರುದ್ಧ ಬಳಸುವ ಭಾಷೆಯಲ್ಲಿರುವ ಅಧಿಕಾರ, ಆವೇಶ, ಸೊಕ್ಕು ಮುಂತಾದ ಎಲ್ಲಾ ನೆಲೆಗಳನ್ನು ಇವರ ಕತೆಗಳು ಒಳಗೊಂಡಿವೆ. ಶೋಷಣೆಗೆ ಒಳಗಾದ ದಲಿತರ ಮೇಲೇಳುವಿಕೆಯಿಂದ ಕೂಡಿದ ಅನುಭವಗಳೇ ಕತೆಗಳಾಗಿರುವುದನ್ನು ನಾವು ಗಮನಿಸಬಹುದಾಗಿದೆ.

ಬಾಮಾ: 'ಕಿಸುಂಬುಕ್ಕಾರನ್' (೧೯೯೬), **'ಒಂದು ತಾತ್ತಾವುಂ ಎರುಮೈಯುಂ'** (೨೦೦೪), **'ಕೊಂಡಾಟ್ಟಂ'** (೨೦೦೯) ಎಂಬ ಮೂರು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವರ

'ಅಣ್ಣಾಚ್ಚಿ' ಕತೆಯಲ್ಲಿ ಅಮ್ಮಸಿ ಎನ್ನುವರು ತೋಟಿ, (ಜಾಡಮಾಲಿ) ಕೆಲಸ ಮಾಡುವವರು ಒಬ್ಬರನ್ನು ಅಣ್ಣಾಚ್ಚಿ ಎಂದು ಕರೆಯುತ್ತಾನೆ. ಇದರಿಂದ ಕೋಪಗೊಂಡ ನಾಯಕನು ಪಂಚಾಯಿತಿ ಕರೆಸುತ್ತಾನೆ. ಇದರಲ್ಲಿ ಬರುವ ಪೂವದಿ ಪಾತ್ರವು ಮನುಷ್ಯರೆಂದ ಮೇಲೆ ಎಲ್ಲರೂ ಮನುಷ್ಯರೇ ಎಂದು ಹೇಳಿ ಈಗಾಗಲೇ ಇದ್ದ ಸಂಪ್ರದಾಯದ ವಿರುದ್ಧ ಪ್ರತಿರೋಧದ ಧ್ವನಿಯನ್ನು ಎತ್ತುವ ಪಾತ್ರವಾಗಿ ಕಂಡುಬರುತ್ತಾನೆ.

ಶ್ರೀಧರ್ ಗಣೇಶನ್: ಇವರು ಒಟ್ಟು ಮೂವತ್ತಾರು ಸಣ್ಣ ಕತೆಗಳನ್ನು ಬರೆದಿದ್ದಾರೆ. ಕೂಲಿ ಕಾರ್ಮಿಕರ ಮೇಲಿನ ಕಮ್ಯುನಿಸ್ಟ್ ಪ್ರಭಾವವು ಇವರ ಕತೆಗಳಲ್ಲಿ ಕಂಡುಬರುತ್ತದೆ. 'ಮೀಸೆ' ಸಣ್ಣ ಕತೆಯಲ್ಲಿ ಕೆಲಸ ಮಾಡುವ ಸಣ್ಣ ಹುಡುಗನಾಗಿದ್ದರೂ, ದೊಡ್ಡವರಾಗಿದ್ದರೂ ಮೀಸೆ ಇಟ್ಟುಕೊಳ್ಳುವುದು ಮೇಲ್ಜಾತಿಯರ ಗೌರವಕ್ಕೆ ಧಕ್ಕೆ ಬರುತ್ತದೆ ಎಂಬ ಮನೋಧರ್ಮವನ್ನು ತೋರಿಸುತ್ತದೆ. **'ಪೋ'** ಎಂಬ ಸಣ್ಣಕತೆಯಲ್ಲಿ ನಾಡಾರ್‌ರ ದೇವಸ್ಥಾನದಲ್ಲಿ ಪರ್ಯೈಯರ್‌ಗೆ ಮಾಡುತ್ತಿದ್ದ ಅವಮಾನವನ್ನು ನೋಡಿ ಜಿಗುಪ್ಸೆಗೊಂಡ ಹುಡುಗನು ಬಲಿಗಾಗಿ ತಂದ ಆಡನ್ನು ಬಿಟ್ಟು ಬಿಡುವ ಸ್ವಾತಂತ್ರ್ಯವನ್ನು ದಾಖಲಿಸುತ್ತದೆ. **'ಸಕ್ಕಿಲಿಚ್ಚಿ'** ಎಂಬ ಕತೆಯಲ್ಲಿ ಮೇಲ್ಜಾತಿ ನಾಯಕನು ಕೀಳು ಕುಲದ ಒಬ್ಬಳನ್ನು ಲೈಂಗಿಕ ತೃಪ್ತಿಗಾಗಿ ಕರೆದಾಗ ತನ್ನ ಬಡತನದ ಸ್ಥಿತಿಯನ್ನು ಮನಗಂಡು ತನ್ನ ತಂತ್ರಗಾರಿಕೆಯಿಂದ ಅವನ ಸ್ಥಳಕ್ಕೆ ಹೋಗಿ ಅವನ ಪುರುಷ ಅಂಗವನ್ನೇ ಕತ್ತರಿಸಿ ಬಿಡುತ್ತಾಳೆ. ಅಲ್ಲದೇ ಬಡತನದ ಕಾರಣದಿಂದ ದಲಿತ ಸ್ತ್ರೀಯರು ಮೇಲ್ಜಾತಿ ಪುರುಷರ ಕಾಮಕ್ಕೆ ಬಲಿಯಾಗುತ್ತಾರೆ, ಆದರೆ ಅವರಿಗೂ ಶೀಲದ ಪಾವಿತ್ರತೆ ಇರುತ್ತದೆ ಎಂಬುದನ್ನು ತಿಳಿಸುತ್ತದೆ. ಇದು ಮಹಿಳೆಯ ಪ್ರತಿರೋಧದ ಸಂಕೇತವಾಗಿ ಮೇಲ್ವರ್ಗದ ಪುರುಷ ಅಹಂಕಾರಕ್ಕೆ ಸವಾಲಾಗಿ ಕಾಣಿಸುತ್ತದೆ.

ಇಮಯಂ : ನಾಲ್ಕು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. **'ಮಣ್‌ಬಾರಂ'** (೨೦೦೪), **'ಮೀಡಿಯೋ ಮಾರಿಯಮ್ಮನ್'** (೨೦೦೪), **'ಕೊಲ್ಲೈಚ್ ಸೇವಲ್'** (೨೦೧೩), **'ಸಾವುಚ್ಚೋರು'** (೨೦೧೪) ಎಂಬ ನಾಲ್ಕು ಕಥಾಸಂಕಲನಗಳನ್ನು ಬರೆದಿದ್ದಾರೆ. **'ಮಣ್‌ಬಾರಂ'** ಕಥಾಸಂಕಲನದಲ್ಲಿ ಒಟ್ಟು ೧೭ ಕತೆಗಳು ಇವೆ. ಇದರಲ್ಲಿ **'ಉರವು'** ಎನ್ನುವ ಕತೆಯು ಪರ್ಯೈಯರ್‌ರ ಜೀವನವನ್ನು ಹೇಳುತ್ತದೆ. ಬಾಗಿಲಿಲ್ಲದ ಮನೆಯೊಳಗೆ ನುಗ್ಗಿ ಧಾನ್ಯಗಳನ್ನು ತಿಂದದ್ದರಿಂದ ಪಂಚವರ್ಣಂ ಆಡಿನ ಕಾಲನ್ನು ಮುರಿದು ಬಿಡುತ್ತಾಳೆ. ಇದರೊಂದಿಗೆ ಎದುರು ಮನೆ ಅಂಜಲೈಯನ್ನು ಬೈಯುತ್ತಾ ಜಗಳ ಪ್ರಾರಂಭವಾಗಿ ಒಬ್ಬರಿಗೊಬ್ಬರು ಕೂದಲನ್ನು ಹಿಡಿದುಕೊಂಡು ಜಗಳವಾಡುತ್ತಾರೆ. ಇದನ್ನು ತಿಳಿದ ಪಂಚವರ್ಣಂಳ ಗಂಡ ಅವಳನ್ನು ಹೊಡೆಯುತ್ತಾನೆ. ಆದರೆ ಈವರೆಗೆ ಜಗಳ ಆಡಿದ ಅಂಜಲೈ ಪಂಚವರ್ಣಂಳನ್ನು ಅವಳ ಗಂಡ ಹೊಡೆದಾಗ ಅಂಜಲೈ ಅವಳ ಆಧಾರವಾಗಿ ಮಾತಾಡುತ್ತಾಳೆ. ತನ್ನ ಮನೆಯಲ್ಲಿಯೇ ಅಡುಗೆ ಮಾಡಿ ಪಂಚವರ್ಣಂ ಮತ್ತು ಅವಳ ಮಕ್ಕಳಿಗೆ ನೀಡುತ್ತಾಳೆ. ಇದು ದಲಿತರ ಜೀವನದ ವಾಸ್ತವತೆಯನ್ನು ತಿಳಿಸುತ್ತದೆ. ದಲಿತರಲ್ಲಿ

ಜಗಳ ಮುನಿಸು ಇದ್ದರೂ ಮನಸ್ಸಿನಲ್ಲಿ ಯಾವುದನ್ನು ಇಟ್ಟುಕೊಳ್ಳದೇ ಕಷ್ಟದ ಸಮಯದಲ್ಲಿ ಒಂದಾಗುತ್ತಾರೆ, ಎಂಬುದು ಕತೆಯ ಮೂಲಕ ತಿಳಿದುಬರುತ್ತದೆ.

'ಅಳಗಿಯು ಪೆರಿಯವನ್: 'ತೀಟ್ಟು', 'ನೆರಿಕ್ಕಾಡು', 'ಕಿಳಿಯಮ್ಮಾವಿನ್ ಇಳಂ ಸಿವಪ್ಪು ಕಾಳೈ', 'ಅಳಗಿಯ ಪೆರಿಯವನ್ ಕತೈಗಳ್' ಎಂಬ ನಾಲ್ಕು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ದಲಿತರ ಸಾಮಾಜಿಕ ಸಮಸ್ಯೆ, ನೋವು, ಹೋರಾಟಗಳು, ದಲಿತ ಸ್ತ್ರೀಯರ ಸ್ಥಿತಿ, ಮಾನವೀಯತೆ ಮುಂತಾದವು ಇವರ ಮುಖ್ಯ ಕಥಾ ವಸ್ತುಗಳಾಗಿವೆ. **ಸಮಾಜದ ನೀತಿ ನಿಯಮಗಳಿಂದ ನಿರಂತರವಾಗಿ ಕಷ್ಟ, ನೋವುಗಳನ್ನೇ ಅನುಭವಿಸುತ್ತಾ ಅಸಹಾಯಕ ಜನರ ಭಾವನೆಗಳನ್ನು ಜೀವನದ ಸಂಕಷ್ಟಗಳನ್ನು ಇವರ ಎಲ್ಲಾ ಕತೆಗಳು ತಿಳಿಸುತ್ತವೆ.**

ಆದವನ್ ದೀಟ್‌ಚನ್ಯ: 'ಸೊಲ್ಲವೇ ಮುಡಿಯಾದ ಕತೈಗಳಿನ್ ಕತೈ', 'ಸಾವುಂ ಸಾವು ಸಾರ್‌ಂದ ಕುರಿಪ್ಪುಗಳುಂ', 'ನಮಪ್ಪು', 'ನಾನ್', 'ನೀಂಗಳ್ ಮಟ್ರುಂ ಸದಾಂ', 'ಇರವಾಗಿ ವಿಡುವದಾಲೇ ಸೂರಿಯನ್ ಇಲ್ಲಾಮಲ್ ಪೂಯ್‌ವಿಡುವದಿಲ್ಲೈ' ಮುಂತಾದ ಕಥಾಸಂಕಲನ ಗಳಾಗಿವೆ.

ದಲಿತ ಸಣ್ಣ ಕತೆಗಳಲ್ಲಿ ವ್ಯಕ್ತಗೊಂಡಿರುವ ದಲಿತ ಚಿಂತನೆಗಳು

ದಲಿತರ ಮೇಲಿನ ಜಾತಿ ಶೋಷಣೆ ಮತ್ತು ದಲಿತರ ಒಗ್ಗಟ್ಟು

'ಪಳ್ಳತ್ತೆರು' ಎಂಬ ಕತೆಯಲ್ಲಿ ಪಳ್ಳರ್, ಪರ್ಯೆಯರ್, ಸಕ್ಕಲಿಯರ್‌ರು ಜೀವಿಸುವ ಸ್ಥಳಗಳಲ್ಲಿ ಮೇಲ್ಜಾತಿಯವರು ಬಂದು ತೊಂದರೆ ಕೊಡುತ್ತಾರೆ. ಊರಿನ ಹೊರಗೆ, ಗಡಿಭಾಗದಲ್ಲೇ ತಗ್ಗು ಆಳವಿರುವ ಸ್ಥಳಗಳಲ್ಲೇ ದಲಿತ ಜೀವನ ಸಾಗುತ್ತದೆ. ಈ ರೀತಿಯ ತಗ್ಗುಬಿದ್ದ ಪ್ರದೇಶದಲ್ಲಿ ಸಕ್ಕಲಿಯರ್ ಜೀವಿಸುವ ಬೀದಿ ಒಂದಿತ್ತು. ಅದನ್ನು ಪಳ್ಳ ಬೀದಿ ಎಂದು ಕರೆಯಲಾಗುತ್ತಿತ್ತು. ಇದರೊಂದಿಗೆ ಊರೊಳಗೂ ಒಂದು ಕೇರಿ ಇದ್ದಿತು. ಅಲ್ಲಿಯೂ ಪರ್ಯೆಯರ್, ಸಕ್ಕಲಿಯರ್ ಇದ್ದರು. ಆದರೆ ಎರಡು ಪ್ರದೇಶದಲ್ಲಿ ಜನರು ಒಗ್ಗಟ್ಟಾಗಿರುವುದನ್ನು ಮರೆತಿದ್ದರು. ಅಲ್ಲದೆ ಕೇರಿಯಲ್ಲಿ ವಾಸಿಸುವವರು ಪಳ್ಳ ಬೀದಿಯಲ್ಲಿ ಜೀವಿಸುವವರನ್ನು ತಮಗಿಂತ ಕೀಳು ಜಾತಿ ಎಂಬಂತೆ ಕೆಳಸ್ತರದಲ್ಲಿ ಇಟ್ಟು ನಡೆಸುತ್ತಿದ್ದರು.

ಪಳ್ಳ ಬೀದಿಯ ಪಶ್ಚಿಮ ದಿಕ್ಕಿಗೆ ನ್ಯಾಷನಲ್ ಹೈವೇಗೆ ಅಂಟಿದಂತೆ ಒಂದು ಊರಿತ್ತು. ಅಲ್ಲಿ ಮೇಲ್ಜಾತಿಯವರು ಜೀವಿಸುತ್ತಿದ್ದರು. ಇಲ್ಲಿನ ಯುವಕರು ಶ್ರೀಮಂತರಾಗಿದ್ದರಿಂದ, ಸಾಕಷ್ಟು ಆಸ್ತಿ, ಹಣ ಇದ್ದುದರಿಂದ ಯಾವುದೇ ಕೆಲಸವಿಲ್ಲದೆ ಮದವೇರಿದ ಆನೆಗಳಂತೆ ಪಳ್ಳ ಬೀದಿಗೆ ಬಂದು ತೊಂದರೆ ಕೊಡುತ್ತಿದ್ದರು. ಆದರೆ ಯಾವುದೇ ಪ್ರತಿರೋಧಗಳಿಲ್ಲದೆ ಪಳ್ಳ ಬೀದಿಯ ಜನ ಅದನ್ನು ಸಹಿಸಿಕೊಳ್ಳುತ್ತಿದ್ದರು. ಪೊಲೀಸ್, ಸರ್ಕಾರ ಯಾವುದಕ್ಕೂ ದೂರು ಕೊಟ್ಟರೆ ಮೇಲ್ಜಾತಿಯವರು ಅವರನ್ನು ಹಣಬಲದಿಂದ ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದರಿಂದ ನ್ಯಾಯ ಎಂಬುವುದು ದೂರದ ಮಾತಾಗಿತ್ತು. ಆದ್ದರಿಂದ ದಲಿತರು ಬಿಡುಗಡೆಯ ಕನಸನ್ನು ಮಾತ್ರ

ಕಾಣುತ್ತಿದ್ದರು. ಹೀಗಿದ್ದಾಗ ಕದಿರ್‌ವೇಳ್ ಎಂಬ ಯುವಕನು ಕೆಲಸದ ಒತ್ತಡದಿಂದ ಬಳಲಿ ಮೈ, ದೇಹದ ನೋವನ್ನು ನಿವಾರಿಸಿಕೊಳ್ಳಲು ಕುಡಿಯಲು ಸಾರಾಯಿಯನ್ನು ತರಲು ಸಾರಾಯಿ ಅಂಗಡಿಗೆ ಹೋಗುತ್ತಾನೆ. ಹಾಸ್ಯವಾಗಿ ಮಾತಾಡುತ್ತ ಒಂದು ಚೊಂಬನ್ನು ನೀಡಿ ಐದು ರೂಪಾಯಿಗೆ ಸಾರಾಯಿಯನ್ನು ನೀಡುವಂತೆ ಕೇಳುತ್ತಾನೆ. ಅವನ ಹಾಸ್ಯತನವನ್ನು ಸಹಿಸದ ಮೇಲ್ಜಾತಿ ಯುವಕನಾದ ಇಬ್ರಾಹಿಂ ಎಂಬಾತನು ಗೇಲಿ ಮಾಡುತ್ತಿದ್ದೀಯಾ ಎಂದು ತನಗಿಂತ ವಯಸ್ಸಿನಲ್ಲಿ ಹಿರಿಯನಾಗಿದ್ದ ಕದಿರ್‌ವೇಳ್‌ನನ್ನು ಹೊಡೆದು ಬಾರಿಸುತ್ತಾನೆ. ಜಾತಿಯ ಹೆಸರಿನಲ್ಲಿ ಅವಮಾನಿಸುತ್ತಾನೆ. ಕೆಲಸದ ದಣಿವು ಹೊಡೆತದ ನೋವಿನಿಂದ ನಿರಾಶದಾಯಕವಾಗಿ ಕದಿಕ್‌ವೇಳ್ ಮರಳುತ್ತಾನೆ. ಇದರಿಂದ ಮಕ್ಕಳು ಸಹ ದಲಿತರನ್ನು ಶೋಷಣೆ ಮಾಡುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಮತ್ತೊಂದು ದಿನ ಪಳ್ಳ ಬೀದಿಯಲ್ಲಿ ನಟರಾಜನಿಗೂ ಮತ್ತು ಅವನ ಹೆಂಡತಿ ಕಮಲಾಳಿಗೂ ಸಣ್ಣ ಜಗಳ ನಡೆಯಿತು. ನಟರಾಜನು ಕಮಲಾಳನ್ನು ನಡತೆ ಗೆಟ್ಟವಳು ಎಂದು ಬೈಯುತ್ತಾ ಹೊರ ದೂಡಿದನು. ರಾತ್ರಿಯಾಗಿದ್ದರೂ ಅಡುಗೆ ಮಾಡದೆ ಸಾಲ ತರಲು ಹೊರಗೆ ಹೋಗಿ ಸಾಲ ಸಿಗದೆ ತಡವಾಗಿ ಮನೆಗೆ ಬಂದಿದ್ದು ಈ ಜಗಳಕ್ಕೆ ಕಾರಣವಾಗಿತ್ತು. ತಕರಾರಿಗಾಗಿ ಕಾದುಕುಳಿತಿದ್ದ ಮೇಲ್ಜಾತಿಯ ಒಬ್ಬ ಚಿಕ್ಕ ಹುಡುಗನು ಈ ಜಗಳದಲ್ಲಿ ಪ್ರವೇಶಿಸಿ ಇಬ್ಬರಿಗೂ ಹೊಡೆಯುತ್ತಾನೆ. ಒದೆಗಳನ್ನು ತಿಂದ ನಂತರ ಅವನ ಬಳಿಯಲ್ಲಿಯೇ ತಮ್ಮ ಕುಟುಂಬದ ಸಮಸ್ಯೆ ಹೇಳಿ ಪಂಚಾಯಿತಿ ಮಾಡಲು ಕೇಳುತ್ತಾರೆ. ಮರುದಿನ ಪಳ್ಳ ಬೀದಿಯ ಯುವಕರು ಇದನ್ನು ಕೇಳಿ ಕೋಪಗೊಂಡರು. ತಮ್ಮ ಬೀದಿಯ ಮುಖ್ಯಸ್ಥನಾದ ರಂಗಸ್ವಾಮಿಯ ಬಳಿ ಹೇಳಿದರು. ವಾಸ್ತವತೆಯನ್ನು ಮನಗಂಡ ರಂಗಸ್ವಾಮಿಯು ಮೌನವಾಗಿರುವಂತೆ ಹೇಳಿದರು. ಆದರೆ ಇದನ್ನು ಕೇಳದ ಯುವಕರು ಊರಿನ ಕೌನ್ಸಲರ್ ಸುಂದರ್ ಒಡೆಯಾರ್ ಬಳಿ ನ್ಯಾಯ ಕೇಳುತ್ತಾರೆ. ನಟರಾಜನನ್ನು ಹದಿನೈದು ಇಪ್ಪತ್ತು ದಿನ ಏಳದಂತೆ ಹೊಡೆದವನು ಒಡೈಯಾರ್‌ನ ಚಿಕ್ಕ ಮಗನಾಗಿದ್ದನು. ಆದ್ದರಿಂದ ಉಡೈಯಾರ್ ಮಗನ ಪರವಾಗಿಯೇ ಮಾತಾಡಿದ್ದರು. ನ್ಯಾಯ ಸಿಗದೆ ಸಕ್ಕಲಿಯರ್ ಗುಂಪಿನವರು ನಿರಾಶೆಯಾಗಿ ಮರಳುತ್ತಾರೆ.

ಹೀಗೆ ಮತ್ತೊಂದು ರವಿವಾರದಂದು ಕೆಲವರು ಇಸ್ಪೀಟು ಆಡುತ್ತಿದ್ದರು. ಕೆಲವರು ಪಳ್ಳಾಂಗುಳಲ್ ಆಡುತ್ತಿದ್ದರು. ಅಲ್ಲಿ ದಾಸ್ ಎಂಬುವನು ಕಂಠಪೂರ್ತಿ ಕುಡಿದು ರುಕ್ಮಣಿಯ ಮನೆಯ ದಿಬ್ಬದಲ್ಲಿ ಕುಳಿತು ಅವಳ ಶೀಲದ ಕುರಿತು ಕೀಳಾಗಿ ಮಾತಾಡುತ್ತಾನೆ. ತನ್ನ ಬಳಿ ಮಲಗಲು ಐವತ್ತು ರೂಪಾಯಿ ಪಡೆದಿದ್ದಾಳೆಂದು ಹೇಳುತ್ತಾನೆ. ಇದೆಲ್ಲಾ ಕೇಳುತ್ತಿದ್ದ ಪಳ್ಳ ಬೀದಿಯ ಯುವಕರಿಗೆ ಹಾಗೂ ಮಣಿಗೆ ಕೋಪ ಹೆಚ್ಚಾಗುತ್ತದೆ. ಜಗಳ ಬೇಡವೆಂದು ದಾಸ್‌ಗೆ ಹೇಳುತ್ತಾನೆ. ಆದರೆ ಕೇಳದ ದಾಸ್ ಕತ್ತಿಯಿಂದ ದಾಳಿ ಮಾಡಲು ಬರುತ್ತಾನೆ. ಕೊನೆಗೆ ಕತ್ತಿಯನ್ನು ಅವನಿಂದ ಮಣಿ ಪಡೆದು ಅವನನ್ನು ಹೊಡೆಯುತ್ತಾನೆ. ಅವನೊಂದಿಗೆ ಪೆರುಮಾಲ್

ಆಸಿಡ್ ಬಾಟೆಲನ್ನು ಒಡೆದು ತರುತ್ತಾನೆ. ಇವೆಲ್ಲವನ್ನು ಕಂಡು ದಾಸ್ ಮೇಲ್ಜಾತಿ ಬೀದಿಗೆ ಓಡುತ್ತಾನೆ.

"ಓಡ ಲೇ ನಾಯಿ, ಉಸಿರಿಗೆ ಭಯಪಟ್ಟವರು ನಾವಲ್ಲ ಲೇ.. ನೀವು.. ಅವನ ಧ್ವನಿ ಉಚ್ಚ ಸ್ಥಾಯಿಯಲ್ಲಿ ಘರ್ಜಿಸಿತು, ಆಸಿಡ್ ಬಾಟಲಿ ಒಡೆದಾಗ ಚಿಮ್ಮಿದ 'ಆಸಿಡ್' ಕೈಯಲ್ಲಿ ಉರಿಯಿತು ಹೆಂಗಸರು ಹತ್ತಿರ ಬಂದು ಸೀರೆಯನ್ನು ಹರಿದು ಅವನ ಕೈಗೆ ಒತ್ತಿ ಹಿಡಿದರು" (ವಿಳಿ.ಪಾ.ಇದಯವೇಂದನ್, ಪಳ್ಳತ್ ತೆರು, ದಲಿತ್ ಸಿರುಕದೈ ತೊಗುಪ್ಪು, ಪು. ೨೧) ದಲಿತರ ಸಹನೆಗೆ ಒಂದು ಮಿತಿ ಇರುತ್ತದೆ. ಅದು ಮಿತಿ ಮೀರಿದಾಗ ತಮ್ಮ ಪ್ರಾಣವನ್ನು ಲೆಕ್ಕಿಸದೆ ಮೇಲ್ಜಾತಿಯವರನ್ನು ಓಡಾಡಿಸಿಕೊಂಡು ಹೊಡೆಯುವ ಸಂದರ್ಭ ಸೃಷ್ಟಿಯಾಗುತ್ತದೆ ಎನ್ನುವ ವಿವರಗಳು ಈ ಸನ್ನಿವೇಶದಲ್ಲಿ ವ್ಯಕ್ತಗೊಂಡಿದೆ. ಆ ಕ್ಷಣದಲ್ಲಿ ಮೇಲ್ಜಾತಿಯವರು ತಮ್ಮಲ್ಲಿ ಗುಲಾಮರನ್ನಾಗಿ ಮಾಡಿ ನಡೆಸಿಕೊಳ್ಳುತ್ತಿದ್ದ ಬಗೆಯನ್ನು ಯೋಚಿಸುತ್ತಾ, ನಾವು ಆರ್ಥಿಕವಾಗಿ ಸಬಲರಾಗಿದ್ದರೆ ಮೇಲ್ಜಾತಿಯವರು ನಮ್ಮನ್ನು ಗುಲಾಮರಾಗಿ ಕಾಣುತ್ತಿರಲಿಲ್ಲ. ನಾವು ಆರ್ಥಿಕವಾಗಿ ಸಬಲರಾಗಬೇಕೆನ್ನುವ ಆಲೋಚನೆ ಮಾಡುತ್ತಾರೆ. ದಲಿತರು ಒಗ್ಗಟ್ಟಾಗಿ ಮೇಲ್ಜಾತಿ ಮೇಲ್ವರ್ಗದವರ ವಿರುದ್ಧ ಧ್ವನಿ ಎತ್ತಿದರೆ ಮೇಲ್ಜಾತಿ ಶಕ್ತಿಗಳು ಹಿಂಜರಿಯುತ್ತವೆ. ಅಧಿಕಾರ, ಶೋಷಣೆ, ಗುಲಾಮತನ ಎಂಬ ನೆಲೆ ಬದಲಾಗುತ್ತದೆ. ದಲಿತರು ಒಗ್ಗಟ್ಟಾಗಿ ಹೋರಾಡಬೇಕು ಎಂಬುದು ಈ ಕತೆಯ ಮುಖ್ಯ ಆಶಯವಾಗಿದೆ.

ದಲಿತರ ಸಹನೆಗೂ ಒಂದು ಮಿತಿ ಇರುತ್ತದೆ. ಮೇಲ್ಜಾತಿಯವರ ದಬ್ಬಾಳಿಕೆಯನ್ನು ಹಲವು ಶತಮಾನಗಳಿಂದ ಹಿರಿಯರು ಸಹಿಸಿಕೊಂಡು ಎದುರು ಮಾತಾಡದೆ ಬಂದಿದ್ದಾರೆ. ಆದರೆ ಇಂದಿನ ಎಚ್ಚೆತ್ತ, ದಲಿತ ಯುವಕರು ಹಿರಿಯರ ರೀತಿ ಮೌನವಾಗಿರದೆ ಮೇಲ್ಜಾತಿಯವರ ದಬ್ಬಾಳಿಕೆಯನ್ನು, ಶೋಷಣೆಯನ್ನು ವಿರೋಧಿಸಿ ಅವರನ್ನು ಸಮರ್ಥವಾಗಿ ಎದುರಿಸಲು ಒಂದಾಗುವ ಸಂಗತಿ ಈ 'ಪಳ್ಳತ್ತೆರು' ಕತೆಯಲ್ಲಿ ಕಾಣಬಹುದು.

ವಾಸಿಸುವ ಪ್ರದೇಶ

ಸಮಾಜದಲ್ಲಿ ಜಾತಿಯ ಕಾರಣದಿಂದ ಜನರು ವಾಸಿಸುವ ಪ್ರದೇಶವನ್ನು ನಿರ್ಧರಿಸುವುದು ಇಂದಿಗೂ ಜೀವಂತವಾಗಿದೆ. ಮೇಲ್ಜಾತಿಯವರೆಲ್ಲರೂ ಊರೊಳಗೆ ಇದ್ದರೆ, ದಲಿತರು ಮಾತ್ರ ಊರಿನ ಹೊರಗಡೆ ಇರುತ್ತಾರೆ. ಅವರಿಗೆ ಯಾವುದೇ ವಸತಿ, ಮೂಲಭೂತ ಸೌಕರ್ಯಗಳು ಲಭ್ಯವಾಗದಂತೆ ವ್ಯವಸ್ಥಿತವಾಗಿ ತಡೆಯುವ ಮೇಲ್ವರ್ಗದವರ ಮನಸ್ಥಿತಿಯು, ಊರು-ಕೇರಿ ಎಂದು ವಿಭಾಗಿಸಿರುವುದನ್ನು ಕಾಣಬಹುದು.

ಬಾಮಾ ಅವರು **'ಕೊಂಡಾಟ್ಟಂ'** ಕತೆಯಲ್ಲಿ ದಲಿತರು ವಾಸ ಮಾಡುವ ಪ್ರದೇಶದ ಕುರಿತು ಈ ರೀತಿಯಾಗಿ ಹೇಳುತ್ತಾರೆ. "ಗ್ರಾಮವನ್ನು ಎರಡಾಗಿ ಸೀಳಿ ಒಂದು ಊರಾಗಿ, ಒಂದು ಕಾಲೋನಿಯಾಗಿ ಇಟ್ಟಿದ್ದಾರೆ. ಮುಖ್ಯರಸ್ತೆಯ ಪಕ್ಕದಲ್ಲಿ ಇರುವವರೆಲ್ಲಾ ಮೇಲ್ಜಾತಿ

ಕ್ರೈಸ್ತರು. ಊರಿನ ಕೆಳಗಿರುವ ಕಾಲೋನಿಗಳಲ್ಲಿ ಇರುವವರೆಲ್ಲ ದಲಿತ ಕ್ರೈಸ್ತರು. ಊರಿನ ಕ್ರೈಸ್ತರ ಮನೆಗಳೆಲ್ಲಾ ದೇವಸ್ಥಾನದ ಪಕ್ಕದಲ್ಲಿಯೇ ಇರುತ್ತವೆ. ಶಾಲೆಗಳು ಅಲ್ಲಿಯೇ ಇರುತ್ತವೆ. ಮೂಲ ಕ್ರೈಸ್ತರು ಹತ್ತರಿಂದ ಐವತ್ತು ಕುಟುಂಬಗಳು ಇರುತ್ತವೆ. ದಲಿತ ಕ್ರೈಸ್ತರು ಮೂನ್ನೂರು ಕುಟುಂಬಗಳು ಇರುತ್ತವೆ. ಆದರೆ ದೇವಸ್ಥಾನದ ಉಸ್ತುವಾರಿ ಎಲ್ಲವೂ ಊರಿನ ಕ್ರೈಸ್ತರ ಕೈಯಲ್ಲಿಯೇ" (ಬಾಮಾ, ಕೊಂಡಾಟ್ಟಂ, ಪು. ೧೨). ದಲಿತರು ಸಾಮಾಜಿಕವಾಗಿ ಶೋಷಣೆ ಅನುಭವಿಸುವುದಲ್ಲದೆ, ಮತಾಂತರದ ಮೂಲಕವು ಮೇಲ್ವರ್ಗದ ಕ್ರೈಸ್ತರು ದಲಿತರನ್ನು ಶೋಷಣೆ ಮಾಡುವುದು, ದಲಿತರ ಇರುವಿಕೆಯನ್ನು ಅವಮಾನಿಸುವುದನ್ನು ಕಾಣಬಹುದಾಗಿದೆ.

ದಲಿತ ಕೇರಿಗಳು ನರಕ ಪ್ರತಿರೂಪದಂತಿರುತ್ತವೆ. ಇಲ್ಲಿ ಮನುಷ್ಯರಿಗಿಂತ ಹಾವು, ಹಂದಿ, ಸೊಳ್ಳೆ ಮುಂತಾದ ಪ್ರಾಣಿಗಳು ವಾಸ ಮಾಡುವ ಸ್ಥಳವಾಗಿರುತ್ತವೆ ಎನ್ನುವ ಚಿತ್ರಣವನ್ನು ವಿಳಿ.ಪಾ.ಇದಯವೇಂದನ್ ಅವರು **'ಪುದ್ಯೆಂದು ಏಳುಂ ಸುವಡುಗಳ್'** ಕತೆಯಲ್ಲಿ ಈ ರೀತಿಯಾಗಿ ವಿವರಿಸುತ್ತಾರೆ. "ಹಾವುಗಳು ಆಗಾಗ್ಗೆ ಸರ್ವ ಸಾಧಾರಣವಾಗಿ ಬರುತ್ತವೆ, ಮಳೆ ಬಂದಾಗ ಚಿಕ್ಕ ಕೊಳಗಳಲ್ಲಿ ನೀರು ಹೆಚ್ಚಾದಂತೆ ಮಳೆ ನೀರು, ಮೋರಿ ನೀರು ಕೂಡಿ ಕೊತ ಕೊತವಾಗಿ ಹೊಲಸಾಗಿ ಸೋಪಿನ ಬುರುಗಿನಂತೆ ಬಿಳಿ ಮೊಟ್ಟೆಗಳು ನೀರಿನ ಮೇಲೆ ನೀರ್ಗುಳ್ಳೆಯಾಗಿರುತ್ತದೆ. ತೇಲುವ ಕೆಸರಿನ ಮೇಲೆ ಸೊಳ್ಳೆಗಳು ಚಂಡಿನಂತೆ ಗುಂಪು ಗುಂಪಾಗಿರುತ್ತವೆ." (ವಿಳಿ.ಪಾ.ಇದಯವೇಂದನ್, ಪುದ್ಯೆಂದು ಏಳುಂ ಸುವಡುಗಳ್, ಪು. ೩೧) ಎಂದು ದಲಿತರು ವಾಸಿಸುವ ಪ್ರದೇಶದ ಹೀನ ಸ್ಥಿತಿಯನ್ನು ತಿಳಿಸುತ್ತಾರೆ. ಮೇಲ್ವರ್ಗದ ಜನತೆ ತಮ್ಮ ಪ್ರದೇಶದ ಕೊಳಚೆ ನೀರು ದಲಿತ ಕೇರಿಯಲ್ಲಿ ನಿಲ್ಲಬೇಕು. ಅವರು ಅದೇ ನೀರಿನಲ್ಲಿ ನಡೆದಾಡಿ ರೋಗ ರುಜಿನಗಳಿಂದ ನರಳಾಡಬೇಕು ಎನ್ನುವ ಮನಸ್ಥಿತಿಯಿಂದ ದಲಿತರು ವಾಸ ಮಾಡುವ ಪ್ರದೇಶಗಳು ತಗ್ಗು ಪ್ರದೇಶದಲ್ಲಿರಬೇಕು. ಅಲ್ಲದೆ ಊರಿನಲ್ಲಿ ಪೂರ್ವ ದಿಕ್ಕಿನಲ್ಲಿ ದಲಿತರು ವಾಸ ಮಾಡದಂತೆ ತಡೆದಿರುವುದನ್ನು ಹಾಗೂ ಗ್ರಾಮಗಳಲ್ಲಿ ಪಶ್ಚಿಮ ದಿಕ್ಕಿನಲ್ಲಿ ದಲಿತರ ಕೇರಿಗಳಿರುವುದನ್ನು ಗಮನಿಸಬಹುದು. 'ಪಳ್ಳತ್ತೆರು' ಕತೆಯಲ್ಲಿಯೂ ಸಹ ದಲಿತರು ವಾಸಿಸುವ ಪ್ರದೇಶದಲ್ಲಿನ ವಾಸ್ತವ ಸಂಗತಿಯನ್ನು ದಲಿತರ ಬದುಕಿನ ದಾರುಣ ಚಿತ್ರಣವನ್ನು ದಾಖಲಿಸುತ್ತದೆ.

ಸರ್ಕಾರಿ ಕಛೇರಿಗಳಲ್ಲಿನ ಶೋಷಣೆ

ಜಾತಿ ಪ್ರಮಾಣ ಪತ್ರ ಪಡೆಯಲು ಸಹ ದಲಿತರು ಎಷ್ಟು ಅವಮಾನಗಳನ್ನು ಅನುಭವಿಸಬೇಕೆಂದು ಅನ್ಬಾದವನ್ **'ಸರ್ಟಿಫಿಕೇಟ್'** ಎಂಬ ಕತೆಯಲ್ಲಿ ಕಾಣಬಹುದು. ಇರುಳಿಗರ ಸಮುದಾಯದ ಇರುಳಾಂಡಿಗೆ ಅವನ ತಾಯಿ ಜಾತಿ ಪ್ರಮಾಣ ಪತ್ರ ತರಲು ಕಚೇರಿಗೆ ಮತ್ತೊಮ್ಮೆ ಹೋಗಿ ಬರುವಂತೆ ಹೇಳುತ್ತಾಳೆ. ಆದರೆ ಈಗಾಗಲೇ ಹಲವಾರು ಬಾರಿ ಹೋಗಿ ಬಂದಿದ್ದ ಇರುಳಾಂಡಿಗೆ ಬೇಸರವಾಗಿತ್ತು. ಕೊನೆಗೆ ತಾಯಿಯ ಮಾತಿಗೆ ಬೆಲೆಕೊಟ್ಟು ಹೋಗುತ್ತಾನೆ. ಸರ್ಕಾರಿ ಕಛೇರಿಯ ಪಿವನ್‌ಗೆ ನಮಸ್ತೆ ಹೇಳಿದಾಗ ಅವನು ಇರುಳಾಂಡಿಗೆ 'ಬಾರೋ ಹಾವು, ಒಳಗೆ ಹೋಗು, ಸಾರ್‌ನ ನೋಡು' ಎಂದು ಇರುಳಿಗನಾದ ಇರುಳಾಂಡಿಯ ಕುಲಕಸುಬನ್ನು

ವ್ಯಂಗ್ಯ ಮಾಡುತ್ತಾನೆ. ಇರುಳಾಂಡಿ ಒಳಹೋಗಿ ಆಫೀಸರ್ ಬಳಿ ತನ್ನ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಕೇಳುತ್ತಾನೆ. ಆಗ ನಡೆಯುವ ಸಂಭಾಷಣೆಯನ್ನು ಲೇಖಕರು ಈ ರೀತಿಯಾಗಿ ಹೇಳುತ್ತಾರೆ "ಲೇ, ಹಾವು ಹಿಡಿಯುವ ಹುಡುಗನಲ್ಲ ನೀನು? ಹೌದು ರೀ, ನಾವು ಇರುಳಿಗರು. ಓದಿದವರಿಗೆ ಇಲ್ಲಿ ಕೆಲಸವಿಲ್ಲ; ಇದರಲ್ಲಿ ಹಾವು, ಚೇಳು ಹಿಡಿಯುವವರೆಲ್ಲಾ ಓದುವ ಆಸೆ ಪಡುತ್ತಾರೆ. ಯಾಕೆ ಸ್ವಾಮಿ ನಾವು ಓದಬಾರದೇ? ಮ್, ಓದಿ ಕಿತ್ತು ಹಾಕಿರಾ.... ಮುಖ ನೋಡು ತಾರಿನಲ್ಲಿ ಸ್ನಾನಮಾಡಿ ಬಂದವನಂತೆ ಎಂದು ಅಲ್ಲಿದ್ದ ಮಹಿಳಾ ನೌಕರಿಯ ಬಳಿ ಏನ್ರಿ, ಮೇಡಂ ಇಲ್ಲಿ ನೋಡಿ ಇವನೇ ಹಾವು ಹಿಡಿಯುವ ಹುಡುಗ" (ಅನ್ಬಾದವನ್, ಸರ್ಟಿಫಿಕೇಟ್, ಶಿವಕಾಮಿ (ಸಂ) ದಲಿತ್ ಸಿರುಕದ್ಯೆ ತೊಗುಪ್ಪು, ಪು. ೧೪೬) ಸರ್ಕಾರಿ ಕಛೇರಿಗಳಲ್ಲಿ ದಲಿತರಿಗೆ ಆಗುವ ಅವಮಾನಗಳನ್ನು ಈ ಕತೆ ತಿಳಿಸುತ್ತದೆ. ಸಂವಿಧಾನ ದತ್ತವಾಗಿ ಸಿಗಬೇಕಾದ ಸವಲತ್ತುಗಳನ್ನು ದಲಿತರಿಗೆ ನೀಡಬೇಕು ಎನ್ನುವ ಮೇಲ್ಜಾತಿ ಅಧಿಕಾರಿಗಳು ಹೇಗೆ ವರ್ತಿಸುತ್ತಾರೆ ಎನ್ನುವುದಕ್ಕೆ ಈ ಕತೆ ಸಾಕ್ಷಿಯಂತಿದೆ. ಕಛೇರಿಯ ಮೇಲಾಧಿಕಾರಿ ಇರುಳಾಂಡಿಗೆ ಕೊನೆಗೆ ಒಂದು ಹಾವನ್ನು ಹಿಡಿದು ತಗೊಂಡು ಬಾ ಆಗ ಸರ್ಟಿಫಿಕೇಟ್ ನೀಡುತ್ತೇನೆಂದು ಹೇಳಿ ಅವಸರವಾಗಿ ಹೊರ ಹೋಗುತ್ತಾನೆ.

ಕೆಲವು ದಿನಗಳ ನಂತರ ಮತ್ತೆ ಜಾತಿ ಪ್ರಮಾಣ ಪತ್ರ ಕೇಳಲು ಇರುಳಾಂಡಿಯು ಸರ್ಕಾರಿ ಕಛೇರಿಗೆ ಹೋಗುತ್ತಾನೆ. ಆ ಸಮಯದಲ್ಲೂ ಮೇಲಾಧಿಕಾರಿಯು "ನಿನಗೆ ಹಾವು ಹಿಡಿಯಲು ಬರುತ್ತದೆಯೇ ಎಂದು ಕೇಳಿದಾಗ, ಕೈಯಲ್ಲಿ ತಂದಿದ್ದ ಚೀಲದಲ್ಲಿನ ಎಲ್ಲಾ ಹಾವುಗಳನ್ನು ಹೊರ ಬಿಡುತ್ತಾನೆ. ಇಡೀ ಕಛೇರಿಯ ಸಿಬ್ಬಂದಿಯು ಹಾರಾಟ, ಚೀರಾಟ ಮಾಡತೊಡಗಿದರು. ಸೆರೆಯಲ್ಲಿದ್ದ ಹಾವುಗಳು ತಾವು ಬಿಡುಗಡೆಗೊಂಡ ಸಂತೋಷದಲ್ಲಿ ರಭಸವಾಗಿ ನುಸುಳಿ ನುಸುಳಿ ಹಾರಾಡಿ ಕಛೇರಿಯ ತುಂಬ ಕಲಹವನ್ನು ಎಬ್ಬಿಸಿದ್ದವು. ಒಂದು ಹಾವು ಮಾತ್ರ ವಕ್ರವಾಗಿ ನುಸುಳಿ ಮೇಲಾಧಿಕಾರಿಯ ಕೊಠಡಿಯೊಳಗೆ ರಭಸವಾಗಿ ರೋಷದಿಂದ ಹೋಗುತ್ತಿತ್ತು" (ಅನ್ಬಾದವನ್, ಸರ್ಟಿಫಿಕೇಟ್, ಶಿವಕಾಮಿ (ಸಂ) ದಲಿತ್ ಸಿರುಕದ್ಯೆ ತೊಗುಪ್ಪು, ಪು. ೧೪೮) ಈ ಮೂಲಕ ಇರುಳಿಗರ ಪ್ರತಿರೋಧದ ಸ್ವರೂಪವನ್ನು ನಾವು ನೋಡಬಹುದು.

ಕತೆಯು ಸರ್ಕಾರಿ ಅಧಿಕಾರಿಗಳ ವರ್ತನೆಯನ್ನು, ನಡವಳಿಕೆ, ಮನಸ್ಥಿತಿಯನ್ನು ತಿಳಿಸುತ್ತದೆ. ಅಲ್ಲದೆ ಲಂಚ ಪಡೆಯುವುದನ್ನು ವಿರೋಧಿಸುತ್ತದೆ. ಇರುಳರ ಜಾತಿಗೆ ಸೇರಿದ ವಿದ್ಯಾರ್ಥಿಗೆ ಜಾತಿ ಪ್ರಮಾಣಪತ್ರ ನೀಡದೆ ಅವನನ್ನು ಹಲವು ಬಾರಿ ಕಛೇರಿಗೆ ಓಡಾಡಿಸುತ್ತಾರೆ. ಅಲ್ಲದೇ ಇರುಳನನ್ನು ಪ್ರಶ್ನಿಸಿ, ಅವಮಾನಿಸಿ, ಲೇವಡಿ ಮಾಡುತ್ತಾರೆ. ಇರುಳಾಂಡಿ ಅಧಿಕಾರಿಗಳಿಗೆ ಬುದ್ಧಿ ಕಲಿಸಲು ಕಛೇರಿಯೊಳಗೆ ಹಾವುಗಳನ್ನು ಬಿಡುತ್ತಾನೆ, ಹಾವಿನ ಪ್ರತಿಮೆಯ ಮೂಲಕ ಸರ್ಕಾರಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡುವುದರೊಂದಿಗೆ, ಬುಡಕಟ್ಟು ಜನರ ಪ್ರತಿರೋಧವನ್ನು ತಿಳಿಸುತ್ತಾರೆ.

ಆಹಾರ ಮತ್ತು ಮನುಷ್ಯತ್ವ

ಅಗಸರು ತಮ್ಮ ಕುಲ ವೃತ್ತಿಯಿಂದ ಮೇಲ್ವರ್ಗದವರ ಮನೆಯಲ್ಲಿ ಪರಂಪರಾಗತವಾಗಿ ಆಹಾರ ನೀಡಿಸಿಕೊಳ್ಳುವ ಸಮಯದಲ್ಲಿ ಅವರನ್ನು ಹೇಗೆ ಕೀಳಾಗಿ ಕಾಣಲಾಗುತ್ತದೆ ಎಂಬುದನ್ನು ಅಭಿಮಾನಿಯವರ **'ಊರ್ಳೋರು'** ಕತೆಯು ತಿಳಿಸುತ್ತದೆ. ರಾತ್ರಿ ಊರಿನ ಮನೆ ಮನೆಗಳಿಗೆ ಹೋಗಿ ತರುವ ಊಟವೇ 'ಊರಿನೂಟ'. ಅಂದರೆ ಅಗಸರು ತಾವು ಮೇಲ್ವರ್ಗದವರ ಮನೆಯಲ್ಲಿನ ಬಟ್ಟೆಗಳನ್ನು ತೊಳೆದು ಕೊಡಬೇಕು. ಅದಕ್ಕೆ ಪ್ರತಿಯಾಗಿ ಮೇಲ್ವರ್ಗದವರು ತಮ್ಮ ಮನೆಯಲ್ಲಿ ಉಳಿದ ಅನ್ನವನ್ನು ಅಗಸರಿಗೆ ನೀಡುತ್ತಾರೆ. ಇದಕ್ಕೆ ಊರಿನೂಟ ಎಂದು ಕರೆಯುತ್ತಾರೆ. ಈ ಕತೆಯಲ್ಲಿ ಮಾಸಾನಂ ಅಗಸರ ಹಿರಿಯ ವ್ಯಕ್ತಿ. ಈತನು ಊರಿನೂಟ ನೀಡಿಸಿಕೊಳ್ಳಲು 'ಯಮ್ಮಾವ್ ಮಾಸಾನಂ' ಬಂದಿದ್ದೇನೆ ಎಂದು ಕೂಗಿದರೆ ಮನೆಯಲ್ಲಿರುವ ಹೆಂಗಸರು ಮನೆಯಲ್ಲಿರುವ ಹಳಸಿದ ಅನ್ನ ತಂದು ಮಾಸಾನಂ ಗಡಿಗೆಯೊಳಗೆ ಹಾಕುತ್ತಾರೆ. ನಂತರ ಮತ್ತೊಂದು ಮನೆಗೆ ಸಾಗಿ ಅಲ್ಲಿ ಅದೇ ಕೂಗು 'ಯಮ್ಮಾವ್ ಮಾಸಾನಂ' ಎಂದು ಕೂಗುತ್ತಾನೆ.

ಕತೆಗಾರರು ಮಾಸಾನಂ ದೇಹದ ಸ್ಥಿತಿಗತಿಯನ್ನು ಹೀಗೆ ವಿವರಿಸುತ್ತಾರೆ "ಕಡ್ಡಿಯಂತಾ ದೇಹ ತಲೆಯಲ್ಲಿ ಅರ್ಧಕರ್ಧ ಬಿಳಿ ಕೂದಲು ಸೊಂಟದಲ್ಲಿರುವ ನಾಲ್ಕುಮೊಳ ಲುಂಗಿ, ಒಗೆಯದೇ ಹೊಲಸಾಗಿ ಕಾಣುತ್ತದೆ ಅಂಗಿಯಂತೂ ಹಾಕಿದ್ದೇ ಇಲ್ಲ. ತರುಣ ವಯಸ್ಸಿನ ನಂತರ ಅದಕ್ಕೆ ಸ್ವಾತಂತ್ರ್ಯಗೊಳಿಸಲಾಯಿತು"(ಶಿವಕಾಮಿ (ಸಂ), ದಲಿತ್ ಸಿರುಕದೈ ತೊಗುಪ್ಪು, ಪು. ೧೮೩) ಅವರ ಆಕೃತಿಯನ್ನು, ಬಡತನದ ಸ್ವರೂಪವನ್ನು ಲೇಖಕರು ಚಿತ್ರಿಸುತ್ತಾರೆ. ಮಾಸಾನಂ ಎಲ್ಲಾ ಮನೆಗಳಿಗೆ ಹೋದ ಕೂಡಲೇ ಅನ್ನ ಸಿಗುವುದಿಲ್ಲ. ಕೆಲವೊಮ್ಮೆ ಕಾಯಬೇಕು. ಎಲ್ಲರ ಮನೆಯಲ್ಲೂ ಅನ್ನ ಒಂದೇ ಸಿಗಲ್ಲ. ಜೋಳ, ಗಂಜಿ, ರಾಗಿ ಮುದ್ದೆ, ರಾಗಿ ಗಂಜಿ, ಮುಂತಾದವು ಸಿಗುತ್ತದೆ. ಯಾವುದನ್ನು ಬೇಡವೆನ್ನಬಾರದು, ಅದು ಧರ್ಮವಲ್ಲ ಎಂಬುದು ಮಾಸಾನಂನ ಒಳ ಮನಸ್ಸು ಹೇಳುತ್ತದೆ.

ಮುದ್ದೆ, ಅನ್ನ, ಗಂಜಿ ಎಲ್ಲವನ್ನು ಒಂದು ಪಾತ್ರೆಯಲ್ಲಿ ಹಾಕಿ ನೀರಿನಿಂದ ಕಲಸಿ ಮೊಮ್ಮಕ್ಕಳು, ಮಗ, ಸೊಸೆ ಎಲ್ಲರಿಗೂ ಬೇರೆ ಬೇರೆ ಪಾತ್ರೆಗಳಲ್ಲಿ ಹಾಕಿ ಕೊಡುತ್ತಿದ್ದನು. ಅವರ ಕುಟುಂಬವೇ ಈ ಊರಿನೂಟವನ್ನು ನಂಬಿಕೊಂಡಿತ್ತು. ಊರಿನವರ ಎಲ್ಲಾ ಬಟ್ಟೆಗಳನ್ನು ಒಗೆದು ತಂದು ಕೊಡುತ್ತಿದ್ದ ಮಾಸಾನಂ ಅವರಿಗೆ ಮಗ ಮತ್ತು ಸೊಸೆ ಸಹಾಯ ಮಾಡುತ್ತಿದ್ದರು. ಅವರ ಮಗನು ಹಲವು ಬಾರಿ ತನ್ನ ತಂದೆಯ ಬಳಿ ಮೇಲ್ವರ್ಗದವರ ಬಿಟ್ಟಿ ಚಾಕರಿಯನ್ನು ವಿರೋಧಿಸುತ್ತಾನೆ. ಅಂತಹ ಒಂದು ಸನ್ನಿವೇಶ ಹೀಗಿದೆ "ಈ ಜೀವನವೆಲ್ಲಾ ಬೇಡಪ್ಪಾ.... ಕತ್ತೆಗಳನ್ನು ಕಟ್ಟಿಕೊಂಡು ಅಳುವುದು ಬೇರೆಯವರ ಹೊಲಸು ಬಟ್ಟೆಗಳನ್ನು ಒಗೆದು ಕೊಟ್ಟು ಅವರಿಂದ ಅನ್ನ ತಗೊಂಡು ತಿನ್ನೋದು! ಊರಿನಲ್ಲಿರುವ ಎಲ್ಲರಂತೆ ನಾವು ಕೂಲಿ ಕೆಲಸಕ್ಕೆ ಹೋಗಿ ದುಡಿದು ಕೂಲಿ ತಗ್ಗೊಂಡು ತಿನ್ನೋಣ" (ಶಿವಕಾಮಿ (ಸಂ), ದಲಿತ್ ಸಿರುಕದೈ

ತೊಗುಪ್ಪು, ಪು. ೧೮೩) ನಾವುಗಳು ಇತರೆ ಸಮುದಾಯಗಳಂತೆ ಜೀವಿಸೋಣ ಈ ಪಾರಂಪರಿಕ ಕುಲ ಕಸುಬು ಬೇಡವೆಂದು ಹಲವು ಬಾರಿ ಹೇಳುತ್ತಾನೆ. ಈ ಕೆಲಸದಿಂದ ಜೀವನ ನಡೆಯುವುದು ಕಷ್ಟವೆನ್ನುವುದು ಅವನಿಗೆ ತಿಳಿದಿತ್ತು. ದಲಿತರು ಪರಂಪರಾಗತವಾಗಿ ನಡೆಸಿಕೊಂಡು ಬಂದ ಶ್ರಮ ಸಂಸ್ಕೃತಿಯನ್ನು ಮೇಲ್ಜಾತಿಯವರು ಗೌರವಿಸದೇ ಹೋದಾಗ ದಲಿತ ಯುವಕರಲ್ಲಿ ಆ ಪರಂಪರೆಯನ್ನು ಧಿಕ್ಕರಿಸುವ ಮನಸ್ಥಿತಿಯನ್ನು ಇಲ್ಲಿ ಮಾಸಾನಂನ ಮಗನ ಪಾತ್ರದ ಮೂಲಕ ಕಾಣಬಹುದು. ಆದರೆ ಮಾಸಾನಂ ಅದನ್ನು ಒಪ್ಪಿಕೊಳ್ಳುವ ಮನಸ್ಥಿತಿಯವನಲ್ಲ. ಆ ಊರಿನ ಜನರು ಕೇವಲ ಊರಿನ ಊಟ ಮಾತ್ರ ನೀಡುತ್ತಿರಲಿಲ್ಲ ಎನ್ನುವುದು ಮಾಸಾನಂಗೆ ತಿಳಿದಿತ್ತು. ಆರು ತಿಂಗಳಿಗೆ ಒಮ್ಮೆ ಮನೆಗೆ ತಲಾ ಆರು ಪಡಿ (ಒಂದು ಅಳತೆ) ಭತ್ತ, ಐವತ್ತು ರೂಪಾಯಿಗಳನ್ನು ತೆಗೆದುಕೊಡುತ್ತಿದ್ದರು. ಕಾಲ ಬದಲಾಗುತ್ತಿದ್ದಂತೆ ಅವರು ಕೊಡುತ್ತಿದ್ದ ಕೂಲಿಯ ಅಳತೆಯೂ ಹೆಚ್ಚಾಗುತ್ತಿತ್ತು. ಆದರೂ ಆ ವರಮಾನ ಅವರ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ ಎಂದು ತಿಳಿದಿದ್ದರೂ ಮಾಸಾನಂ ವೃತ್ತಿ ಧರ್ಮ ಬಿಡಬಾರದೆಂದು ಆ ಕೆಲಸವನ್ನೇ ಮಾಡುತ್ತಿದ್ದನು.

'ಊರ್ಜೋರು ಕತೆಯಲ್ಲಿ ಒಂದು ದಿನ ಎಲ್ಲಾ ಮನೆಗಳಲ್ಲಿ ಅನ್ನ ತೆಗೆದುಕೊಂಡು ಬಂದ ಮಾಸಾನಂ ಕೊನೆಗೊಂದು ಮನೆಯಲ್ಲಿ ಅನ್ನಕ್ಕಾಗಿ 'ಅಮ್ಮಾವ್ ಮಾಸಾನಂ' ಬಂದಿದ್ದೇನೆ ಎಂದು ಕರೆಯುತ್ತಾನೆ. ಆಗ ಮೂಕ್ಕಮ್ಮಾಳು ತನ್ನ ಮಗುವಿನೊಂದಿಗೆ ಹೊರಬಂದು ಅಳುತ್ತಿದ್ದ ಮಗುವನ್ನು ಬಿಟ್ಟು ಅನ್ನ ತರಲು ಹೋದಳು. ಮಗು ತುಂಬಾ ಅಳುತ್ತಿದ್ದರಿಂದ ಮಾಸಾನಂ ಮಗುವಿಗೆ ತನ್ನ ಗಡಿಗೆಯಲ್ಲಿದ್ದ ಸ್ವಲ್ಪ ಅನ್ನವನ್ನು ತಿನ್ನಿಸಿದನು. ಮಗು ಅಳುವುದನ್ನು ನಿಲ್ಲಿಸಿತು. ಇತ್ತ ಅನ್ನ ಮಾಡಿ ಬಂದ ಮೂಕ್ಕಮ್ಮಾಳು ಮಗುವಿಗೆ ಮಾಸಾನಂ ತಿನ್ನಿಸುತ್ತಿದ್ದ ಅನ್ನವನ್ನು ನೋಡಿ ಕೋಪಗೊಂಡಳು. ಹಸಿವು ಮತ್ತು ಜಾತಿ ನಡುವೆ ಇರಬಹುದಾದ ದೊಡ್ಡ ಕಂದಕವನ್ನು ಹೀಗೆ ಪಾತ್ರಗಳ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡುತ್ತಾರೆ. "ಏನು ಕೆಲಸ ಮಾಡುತ್ತಿದ್ದೀಯಾ ನೀನು...! ದಡ್ಡತನದ ಕೆಲಸ... ಊರಿನೂಟ ತಿನ್ನುವಷ್ಟರ ಮಟ್ಟಿಗೆ ನನ್ನ ಮಗು ಗತಿಗೆಟ್ಟು ಹೋಗಿಲ್ಲ... ಈ ರೀತಿ ಇನ್ನು ಯಾವತ್ತಿಗೂ ಮಾಡಬೇಡ, ತಿಳಿಯಿತೇ?...ಹಸಿವಿನಿಂದ ಅಳುತ್ತಿದ್ದ ಮಗುವಿನ ಬಾಯಿಯಲ್ಲಿ ಎರಡು ಅಗಳು ಅನ್ನ ತಿನ್ನಿಸಿದ್ದೇ ತಪ್ಪೇನಮ್ಮಾ? ಎಂದು ಮಾಸಾನಂ ಕೇಳಿದ್ದಕ್ಕೆ ಚೆನ್ನಾಗಿಯೇ ಮಾತಾಡುತ್ತಿದ್ದಿಯಾ, ತಪ್ಪು ತಪ್ಪಲ್ಲವೆಂದು? ಶನಿ... ಇದರಿಂದಲೇ ಈ ಎಲ್ಲಾ ತೊಂದರೆ. ಸಾವು ಕೂಡ ಬರುವುದಿಲ್ಲ" (ಅದೇ ಪು. ೧೮೮) ಮಾಸಾನಂ ದಲಿತ ಎನ್ನುವ ಕಾರಣಕ್ಕೆ ತನ್ನ ಮಗನಿಗೆ ತಾನು ಊರಿನ ಊಟವನ್ನು ತಿನ್ನಿಸಿದ್ದು ಅಪರಾಧವಾಗಿತ್ತು. ಆದರೆ ಆ ಹುಡುಗನಿಗೆ ಹಸಿವು ತೀರಿತು. ಈ ಎರಡು ಸಂಗತಿಗಳಿಂದ ತಿಳಿದು ಬರುವುದೇನೆಂದರೆ ದಲಿತರು ಮೇಲ್ವರ್ಗದ ಮನೆಯಲ್ಲಿ ಊಟ ಮಾಡಬಹುದು. ಆದರೆ ಮೇಲ್ವರ್ಗದ ಹುಡುಗನಿಗೆ ದಲಿತರು ಅನ್ನ ತಿನ್ನಿಸುವಂತಿಲ್ಲ. ಕಾರಣ ದಲಿತರು ಏನೇ ಮುಟ್ಟಿದರೂ ಅದು ಮೈಲಿಗೆಯಾಗುತ್ತದೆ. ಹಾಗಾಗಿ ಇಲ್ಲಿ ಮುಟ್ಟಿಸಿಕೊಳ್ಳುವ ಪ್ರಕ್ರಿಯೆ ಮುಖ್ಯವಾಗಿದೆಯೇ ಹೊರತು ಮನುಷ್ಯತ್ವವಲ್ಲ.

ಹಸಿವು ಎನ್ನುವುದು ಜೀವವಿರುವ ಎಲ್ಲಾ ಪ್ರಾಣಿ, ಪಕ್ಷಿ, ಮನುಷ್ಯನಲ್ಲಿ ನಡೆಯುವ ಒಂದು ನೈಸರ್ಗಿಕ ಕ್ರಿಯೆ. ಜೀವನ ನಡೆಸಲು ತಿನ್ನುವ ಯಾವ ಆಹಾರವೂ ಅವಮಾನ ಹಾಗೂ ಅಪವಿತ್ರವಾಗುವುದಿಲ್ಲ. ಮಾಂಸಾಹಾರ, ಸಸ್ಯಾಹಾರ ಎರಡನ್ನು ಮನುಷ್ಯ ಸೇವಿಸುತ್ತಾನೆ. ದನಗಳನ್ನು ಕೇವಲ ಮುಸ್ಲಿಂರು ತಿನ್ನುತ್ತಾರೆ ಎಂದು ಹಿಂದುತ್ವ ವಾದಿಗಳು ತಿಳಿಸುತ್ತಾರೆ. ಆದರೆ ಕೂಲಿಕಾರ್ಮಿಕರು, ಶ್ರಮಿಕರಾದ ದಲಿತರು ದನ, ಹಂದಿಗಳನ್ನು ಸೇವಿಸುತ್ತಾರೆ. ಇದರಿಂದ ಅವರ ದೇಹಕ್ಕೂ ಸಿಗಬೇಕಾದ ಪುಷ್ಟಿ ನೀಡುತ್ತದೆ ಮತ್ತು ಅದಕ್ಕೆ ತಕ್ಕಂತೆ ಕೆಲಸವೂ ಮಾಡುತ್ತಾರೆ.

"ಅನ್ನದಲ್ಲಿ ಕುರಿ (ಮಾಂಸ) ತುಂಡುಗಳು ಹಾಕಿ ಕುದಿಸಿದರೆ ಅಪ್ಪನಿಗೆ ಹೆಚ್ಚು ಹಿಡಿಸುತ್ತದೆ. ಅಪ್ಪನಿಗೆ ಮಾತ್ರವಲ್ಲ ಅಪ್ಪನ ಹೆಸರಿನಲ್ಲಿ ಅಮ್ಮನಿಗೂ ಒಂದು ಕರಿ ತುಂಡಿನೊಂದಿಗೆ ಎಲುಬು ಸೇರಿಸಿ ಹಾಗೆಯೇ ಹಲ್ಲಿನಿಂದ ಕಡಿದು ತಿಂದಾಗಲೇ ಕರಿ ಊಟ ತಿಂದಂತೆ" (ವಿಳಿ. ಪಾ. ಇದಯವೇಂದನ್, ಪುದೈಂದು ಏಳುಂ ಸುವಡುಗಳ್, ಪು. ೫೬) ಎನ್ನುವ ಮಾತುಗಳಲ್ಲಿ ದಲಿತರ ಆಹಾರ ಸಂಸ್ಕೃತಿಯ ಭಾಗವಾಗಿರುವ ದನದ ಮಾಂಸಹಾರ ತಿನ್ನುವುದರ ಬಗ್ಗೆ ತಿಳಿಸುತ್ತಾರೆ. ವಿಳಿ.ಪಾ.ಇದಯವೇಂದನ್, 'ಸೋರು' ಕತೆಯಲ್ಲಿ ದಲಿತ ಮಹಿಳೆಯು ಕೂಡ ಮೇಲ್ಜಾತಿಯವರ ಮನೆಯಲ್ಲಿ ಕುಲ ಕಸುಬಿನಿಂದ ಜೀವನ ನಡೆಸುವುದನ್ನು ಚಿತ್ರಿಸಿದ್ದಾರೆ. "ಅವರಿವರ ಮಲ ತೆಗೆಯುವ ಬೀದಿಗಳಿಗೆ ಹೋಗುವಂತೆ ಅಮ್ಮ ಕೂಡ ಅಮಾವಾಸೆ, ಕಾರ್ತಿಕದಂದು ಮನೆ ಮನೆಗೆ ಹೋಗಿ ಅನ್ನ ತಂದು ಬಿಡುತ್ತಾಳೆ. ಅಂದು ಅಮ್ಮ ಅಕ್ಕಿ ಸಾಲ ಮಾಡಿ ತಂದು ಅಡುಗೆ ಮಾಡಲ್ಲ. ಮರುದಿನ ಸಾರನ್ನು ಮಾಡುವುದಿಲ್ಲ. ಉಳಿದ ಸಾರನ್ನು ಬಿಸಿ ಮಾಡಿ ಇಡುತ್ತಾಳೆ. ದೀಪಾವಳಿಯಂದು ಅಮ್ಮ ಬೇರೆಯವರ ಮನೆಗಳಲ್ಲಿ ಹೋಗಿ ತರುವ ಇಡ್ಲಿ ಹೂವಾಗಿ, ದೊಡ್ಡದಾಗಿ ಕೆಲವು ಗಟ್ಟಿಯಾಗಿ, ಮೃದುವಾಗಿ ವಿಧವಿಧವಾಗಿ ಇರುತ್ತದೆ. ಅಲ್ಲದೆ ಚಕ್ಕುಲಿ, ಗಾರಿಗೆ, ಸಿಹಿ ತಿನಿಸುಗಳು ವಡೆ, ಸಾರು ಮುಂತಾದವುಗಳನ್ನು ತರುತ್ತಾಳೆ"(ವಿಳಿ.ಪಾ.ಇದಯವೇಂದನ್, ಸೋರು, ಪು. ೬) ಎಂದು ಅಮಾವಾಸೆ, ಕಾರ್ತಿಕ ದಿನಗಳಲ್ಲಿ ತನ್ನ ತಾಯಿ ಕೆಲಸ ಮಾಡುವ ಮೇಲ್ಜಾತಿ ಮನೆಗಳಲ್ಲಿ ತರುವ ಆಹಾರದ ವಿವಿಧ ತಿಂಡಿ ತಿನಿಸುಗಳನ್ನು, ಅನ್ನ ಸಾಂಬರು ಮುಂತಾದ ಪದಾರ್ಥಗಳನ್ನು ತರುವ ಸಂಗತಿಯನ್ನು ಮಗುವಿನ ಮೂಲಕ ನಿರೂಪಿಸುತ್ತಾರೆ. ಈ ರೀತಿಯಾದ ಆಚರಣೆಗಳು ಇಂದಿಗೂ ದಲಿತರಲ್ಲಿ ಜೀವಂತವಾಗಿರುವುದನ್ನು ನಾವು ಕಾಣಬಹುದಾಗಿದೆ.

ದಲಿತರಿಗೆ ಸಾಮಾಜಿಕ ಗೌರವಕ್ಕಿಂತ ಸಂಘರ್ಷಮಯ ಜೀವನ ಹೋರಾಟವೇ ಮುಖ್ಯವಾಗಿರುತ್ತದೆ. ಆಹಾರ ಸಂಸ್ಕೃತಿಯು ಮನುಷ್ಯರ ಜೀವನದ ಭಾಗವಾಗಿದೆ. ಇಲ್ಲಿ ಮನೆಗಳಿಗೆ ಹೋಗಿ ಅನ್ನ ನೀಡಿಸಿಕೊಂಡು ತಿನ್ನಲು ದಲಿತರಿಗೂ ಇಷ್ಟವಿಲ್ಲದಿದ್ದರೂ ಕುಲಕಸುಬುಗಳಿಂದ ದಲಿತರ ಜೀವನ ನಿರ್ವಹಿಸುವಂತೆ ಮಾಡಿದ್ದಾರೆ. ದಲಿತರು ಮೇಲ್ಜಾತಿಯರ ಮನೆಗಳಲ್ಲಿ ಗುಲಾಮರಾಗಿಸಿ, ಆರ್ಥಿಕವಾಗಿ ಸಂಕಷ್ಟದಿಂದ ಜೀವನ ನಡೆಸುತ್ತಿರುವ ಸಂಗತಿಗಳನ್ನು ಈ ದಲಿತ ಕತೆಗಳು ನಿರೂಪಿಸುತ್ತವೆ.

ಲೈಂಗಿಕ ಶೋಷಣೆ

ಲೈಂಗಿಕ ಶೋಷಣೆಯು ತಮಿಳು ದಲಿತ ಸಣ್ಣ ಕತೆಗಳಲ್ಲಿ ಪ್ರಧಾನ ಅಂಶವಾಗಿದೆ. ದಲಿತ ಕೇರಿಯ ಹೆಣ್ಣು ಮಕ್ಕಳ ಮೇಲೆ ಮೇಲ್ಜಾತಿಯ ಪುರುಷರು ನಡೆಸುವ ಲೈಂಗಿಕ ಶೋಷಣೆ, ಲೈಂಗಿಕ ಕಿರುಕುಳ, ಅವಮಾನದಂತಹ ಪ್ರಕರಣಗಳನ್ನು ದಲಿತ ಸಣ್ಣ ಕತೆಗಳು ದಾಖಲಿಸುತ್ತವೆ. ದಲಿತ ಕತೆಗಾರರಾದ ಅಳಗಿಯ ಪೆರಿಯವನ್ ಅವರು ಈ ಸಮಾಜದಲ್ಲಿ ದಲಿತ ಮಹಿಳೆಯರು ಅನುಭವಿಸುವ ಲೈಂಗಿಕ ಶೋಷಣೆಯನ್ನು ಕಥಾ ವಸ್ತುವಾಗಿಸಿಕೊಂಡು ಕತೆಗಳನ್ನು ಬರೆದವರಲ್ಲಿ ಪ್ರಮುಖರು. ಇವರ ಪ್ರಮುಖ ಕತೆಯಾದ **'ತೀಟ್ಟು'**ವಿನಲ್ಲಿ ವಿಧಿ ಆಟಕ್ಕೆ ಬಲಿಯಾಗಿ ಮೇಲ್ಜಾತಿಯವರಿಂದ, ಪೋಲಿಸರಿಂದ, ಹಾಗೂ ವೇಶ್ಯೆ ವೃತ್ತಿಯಿಂದಾಗಿ ಲೈಂಗಿಕ ಶೋಷಣೆ, ಹಿಂಸೆ ಅನುಭವಿಸುವ ಕಾಮಾಕ್ಷಿಯ ಪಾತ್ರದ ಮೂಲಕ ದಲಿತ ಮಹಿಳೆಯರು ಈ ಸಮಾಜದಲ್ಲಿ ಅನುಭವಿಸುವ ಶೋಷಣೆಯ ವಿವಿಧ ಆಯಾಮಗಳನ್ನು ಲೇಖಕರು ತೆರೆದಿಡುವ ಪ್ರಯತ್ನ ಮಾಡುತ್ತಾರೆ.

ಪಟ್ಟಣದಲ್ಲಿ ಗಾಂಜಾ ಇತರೇ ವ್ಯಾಪಾರ ಮಾಡುತ್ತಿದ್ದ ಕುಪ್ಪು ದೂರದ ಸಂಬಂಧಿಯಾದ ತವಮಣಿಯನ್ನು ಹೇಗೋ ಒಪ್ಪಿಸಿ ತನ್ನ ಸಾಕು ಮಗನಾದ ಗೋವಿಂದನಿಗೆ ಕಾಮಾಕ್ಷಿಯನ್ನು ಮದುವೆ ಮಾಡಿಸುತ್ತಾಳೆ. ರಿಕ್ಷಾ ಓಡಿಸುತ್ತಿದ್ದರೂ, ಗೋವಿಂದನು ಕಾಮಾಕ್ಷಿಯನ್ನು ರಾಣಿಯಾಗಿಯೇ ನೋಡಿಕೊಳ್ಳುತ್ತಿದ್ದನು. ಅವನು ರಜನಿಕಾಂತನ ಅಭಿಮಾನಿಯಾಗಿದ್ದರಿಂದ ತನ್ನ ಮಗನಿಗೆ ಕಾಂತ ಎಂದು ಹೆಸರಿಟ್ಟಿದ್ದ. ಕಾಮಾಕ್ಷಿಯ ತಂದೆ-ತಾಯಿ ಮರಣದ ನಂತರ ಗ್ರಾಮದ ನಂಟು ಕಾಮಾಕ್ಷಿಯನ್ನು ಬಿಟ್ಟಿತ್ತು. ಅತ್ತೆ ಕುಪ್ಪುವಿನ ಅವ್ಯವಹಾರ ತಿಳಿದು ಗಂಡನ ಬಳಿ ಕೇಳಿದಾಗ ಸಾಲ ಇರುವುದಾಗಿ ಅದು ತೀರಿದ ಕೂಡಲೇ ಬೇರೆ ಕಡೆಗೆ ಕುಪ್ಪುವನ್ನು ಕರೆದುಕೊಂಡು ಹೋಗಿ ಜೀವಿಸೋಣ ಎಂದಿದ್ದ ಗೋವಿಂದನು ಅಪಘಾತವಾಗಿ ಮರಣ ಹೊಂದುತ್ತಾನೆ.

ಗೋವಿಂದನ ಸಾವು ಕಾಮಾಕ್ಷಿಯನ್ನು ಕತ್ತಲೆಯ ಕರಾಳ ಲೋಕಕ್ಕೆ ಕರೆದುಕೊಂಡು ಹೋಗುತ್ತದೆ. ಒಂದು ದಿನ ಆ ಊರಿನ ದಾದಾನಾದ ದಾಮು ಕಾಮಾಕ್ಷಿಯನ್ನು ಕರೆತರಲು ತನ್ನ ಆಳುಗಳನ್ನು ಕಳುಹಿಸುತ್ತಾನೆ. ಒಲ್ಲದ ಮನಸ್ಸಿನಿಂದ ಅಂಜುತ್ತಾ ದಾಮುವಿನ ಮನೆಗೆ ಸಾಗುತ್ತಾಳೆ. ಅವಳು ಮನೆಯೊಳಗೆ ಹೋದ ಕೂಡಲೇ ಅವಳನ್ನು ತನ್ನ ಕೈಗಳಿಂದ ಗಾಢವಾಗಿ ಹಿಡಿದುಕೊಳ್ಳುತ್ತಾನೆ. "ಹೆದರಬೇಡ ನನ್ನಿಂದ ಮಲಗಲು ಆಗದು ಒಮ್ಮೆ ಒಂದು ಜಗಳದಲ್ಲಿ ನನ್ನ ಕೆಳಹೊಟ್ಟೆಗೆ ಕತ್ತಿ ಹಾಕಿಬಿಟ್ಟರು. ಆದ್ದರಿಂದ ಡಾಕ್ಟರ್ ಬೇರೆಯದೆಲ್ಲಾ ಬೇಡವೆಂದಿದ್ದಾರೆ" (ಅಳಗಿಯ ಪೆರಿಯವನ್, ದಿಸೈಯೆಂಗುಂ ಸುವರ್‌ಗಳ್‌ಕೊಂಡ ಗ್ರಾಮಂ, ಪು. ೩೯) ಎಂದು ಅವಳ ಮುಖವನ್ನು ತನ್ನ ತೊಡೆಯ ಸಂದಿಯಲ್ಲಿ ಒತ್ತಿದನು. ಗಂಡನ ಸಾವಿನಿಂದ ಹೊರಬರಲು ಹೆಣಗಾಡುತ್ತಿರುವ ಕಾಮಾಕ್ಷಿಯನ್ನು ತನ್ನ ಲೈಂಗಿಕ ಸುಖಕ್ಕಾಗಿ ಬಳಸಿಕೊಳ್ಳುವ ದಾಮು ಪುರುಷನ ಅಂಗ ಚಲನೆಯು ಇಲ್ಲದಿದ್ದರೂ, ಅವನಿಗೆ ಲೈಂಗಿಕ ದಾಹ ಮಾತ್ರ ತೀರಿದಂತೆ ಕಾಣುವುದಿಲ್ಲ. ಕಾಮಾಕ್ಷಿಯ ಬಾಯಿಯ ಮೂಲಕ ತನ್ನ ಕಾಮ ದಾಹವನ್ನು ತೀರಿಸಿಕೊಳ್ಳುವ

ನೀಚ ಮನಸ್ಥಿತಿಯನ್ನು ಲೇಖಕರು ಬಿಚ್ಚಿಡುತ್ತಾರೆ. "ಗುಡಿಸಲಿಗೆ ಹೇಗೆ ಬಂದು ಸೇರಿದಳೆಂದು ಅವಳಿಗೆ ತಿಳಿದಿರಲಿಲ್ಲ. ತನ್ನ ಮಗನಾದ ಕಾಂತನನ್ನು ಬಿಟ್ಟು ಓಡಿಹೋಗಿ ವಾಂತಿ ಮಾಡಿದಳು. ಬಾಯಿಯನ್ನು ಒತ್ತಿ ಒತ್ತಿ ತೊಳೆದಳು. ಬಾಯಿಯ ಮೇಲೆ ಜೋರಾಗಿ ಹೊಡೆದುಕೊಂಡಳು. ದೇಹವೆಲ್ಲಾ ಹುಳಗಳು ಓಡಾಡಿದಂತಾಯಿತು. ಅವಮಾನ ಅಸಹಾಯಕತೆ ಅವಳನ್ನು ಕಿತ್ತು ತಿಂದವು. ಗುಡಿಸಲಿನ ಮೂಲೆಯಲ್ಲಿ ಹೆಣದಂತೆ ಬಿದ್ದು ತಲೆ ಜಜ್ಜಿಕೊಂಡು ಅತ್ತಳು. ಮಗುವೂ ಅಳುತ್ತಿತ್ತು." (ಮೇಲಿನದು, ಪು. ೩೯) ಎಲ್ಲಾದರೂ ಹೋಗಿ ಬಿಡೋಣ ಎನ್ನಿಸಿತು ಅವಳಿಗೆ, ಹಳೆಯ ನೆನಪು ಅವಳನ್ನು ಕಿತ್ತು ತಿಂದಿತು. ಲೈಂಗಿಕ ಶೋಷಣೆಯ ಭೀಕರತೆಗೆ ಈ ಸಂದರ್ಭ ಸಾಕ್ಷಿಯಂತಿದೆ. ಸ್ವಲ್ಪ ಹೆಚ್ಚು ವಯಸ್ಸಿರುವ ದಾಮು ತನ್ನ ಪುರುಷಾಂಗವನ್ನು ಕಾಮಾಕ್ಷಿಯ ಬಾಯಿಗೆ ಹಾಕಿದ ನಂತರ ಅವಳು ಪಡುವ ಹಿಂಸೆ ಯಾವ ರೀತಿಯಲ್ಲಿತ್ತು ಎಂಬುದನ್ನು ಇಲ್ಲಿ ಲೇಖಕರು ವಿವರಿಸುತ್ತಾರೆ. ಈ ಘಟನೆಯ ನಂತರ ಮೂರು ದಿನಗಳಾದರೂ ಅವಳ ಅತ್ತೆ ಕುಪ್ಪು ಕಾಣಲಿಲ್ಲ. ಪಕ್ಕದ ಮನೆಯವರಿಂದ ಅವಳು ಜೈಲಿಗೆ ಹೋಗಿರುವುದು ತಿಳಿದು ಬಂದಿತು. ಈ ವಿಚಾರಕ್ಕೆ ದಾಮ ಕಾಮಾಕ್ಷಿಯನ್ನು ಕರೆಯಿಸಿದನು, ಅವಳ ಅತ್ತೆ ಕುಪ್ಪುವನ್ನು ಬಿಡಿಸಿ ತರುವುದಾಗಿ ಹೇಳಿ ನಂತರ "ಇವರು ಕರೆದ ಕಡೆ ಹೋಗಿ ಬಂದು ಬಿಡು ನಾಳೆ ನಿನ್ನತ್ತೆಯನ್ನು ಕರೆತರುತ್ತೇನೆ. ಮಗುವು ಪಠಣಂ ಮನೆಯಲ್ಲಿಯೇ ಇದ್ದಾನೆ? ನಾನು ನೋಡಿಕೊಳ್ಳುತ್ತೇನೆ........ಹೋಗು ಮಗುವನ್ನು ನೆನೆದುಕೊಂಡು ಹೋಗು! ದೊಡ್ಡ ಮನುಷ್ಯ, ಅಧಿಕಾರದ ಪಕ್ಷ ತುಂಬಾ ಕೆಲಸಗಳು ಆಗಬೇಕಿದೆ. ಮನೆ-ಮಠವೆಲ್ಲಾ ಕೇಳಿದ್ದೇನೆ. ಮಗುವನ್ನು ನೆನೆದುಕೊಂಡು ಹೋಗು" (ಅದೇ, ಪು. ೪೪) ಈ ಸಂದರ್ಭದ ನಂತರ ಕಾಮಾಕ್ಷಿ ಸತ್ತಂತೆ ಭಾವಿಸಿದಳು. "ಮನೆಗೆ ಬಂದ ಅವಳಿಗೆ ಅವಳ ದೇಹದ ಮೇಲೆಯೇ ಕೋಪ ಬಂದಿತು. ನಾಯಿಯಂತೆ ಧಾವಿಸಿದ ಮುದುಕನ ಆವೇಶ ಮತ್ತು ಗೋವಿಂದನಿಗೆ ದ್ರೋಹ ಬಗೆದ ದುಃಖದಿಂದ ಸಾಮಾಜಿಕ ವ್ಯವಸ್ಥೆಯ ಮೇಲೆ ಕ್ರೋಧಗೊಂಡಳು" (ಅದೇ, ಪು. ೪೪) ಗಂಡ ಸತ್ತ ಮಹಿಳೆಯನ್ನು ಸಮಾಜ ನೋಡುವ ರೀತಿ, ಮತ್ತು ಸಮಾಜದಲ್ಲಿರೋ ಕ್ರೂರ ವ್ಯವಸ್ಥೆಯನ್ನು ಕಾಮಾಕ್ಷಿ ಅನುಭವಿಸಿದ ಹಿಂಸೆಯನ್ನು ಈ ರೀತಿಯಾಗಿ ವ್ಯಕ್ತಪಡಿಸುತ್ತಾಳೆ. "ಒಂದೊಂದು ಸಲವೂ ಮರದ ಕಟ್ಟಿಗೆಯಂತೆ ಮುಖ ತಿಳಿಯದ ಗಂಡಸರೊಂದಿಗೆ ಮಲಗಿ ಏಳುತ್ತಿದ್ದಾಗಲೆಲ್ಲಾ ಅವಳ ಭಾವನೆ ಹೇಳತೀರದು. ಮೂಕವಾಗಿ ಮನಸ್ಸು ಅಳುತ್ತಿತ್ತು. ಹೇಸಿಗೆಯಾಗುತ್ತಿತ್ತು. ಅವರ ಸಹಿಸಲಾಗದ ದುರ್ವಾಸನೆ ನಾತ, ಕೆಲವರ ಆವೇಶ, ಕೆಲವರ ಅಸಹ್ಯವಾದ ಆಸೆಗಳು ಮತ್ತು ದೇಹವನ್ನು ಯಾಕಾದರೂ ದೇವರು ಸೃಷ್ಟಿಸಿದನೋ? ಅದರಲ್ಲಿ ಭಾವನೆ ಏಕಿದೆ? ಇಲ್ಲಿಯವರೆಗೆ ಅವಳನ್ನು ಒಬ್ಬನೂ ಸಹ ಜೀವವಾಗಿ ಭಾವಿಸಿಲ್ಲವೇ ಬಳಕೆಯಾಗುವ ವಸ್ತು ಕಾಲಹರಣ ಸಾಧನ. ಇವರಿಗೂ ಹೆಂಡತಿಯರು ಇರುತ್ತಾರಲ್ಲವೇ? ಮತ್ತೇಕೆ ಇಲ್ಲಿಗೆ ಬರುತ್ತಾರೆ? ಬಂದವರು ಇವರು ಗಂಡಸರು, ನಾವು ಹೋದರೆ ಸೂಳೆಯರು." (ಅದೇ, ಪು. ೫೩) ಎಂದು ಕಾಮಾಕ್ಷಿಯು ಸಮಾಜವನ್ನು ಪುರುಷರನ್ನು ಪ್ರಶ್ನೆ ಮಾಡುವ ಮನೋಧೋರಣೆಯನ್ನು ತಿಳಿಸುತ್ತದೆ.

ಮತ್ತೊಂದು ದಿನ ಪೊಲೀಸ್ ರೈಡ್‌ನಲ್ಲಿ ಕೇರಿಯ ಹೆಂಗಸರ ಜೊತೆ ಕಾಮಾಕ್ಷಿಯನ್ನು ಪೊಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಲಾಯಿತು. ಇನ್ಸ್‌ಪೆಕ್ಟರ್‌ರ ಕಣ್ಣಿಗೆ ಕಾಮಾಕ್ಷಿ ಬಿದ್ದಳು. ಅವಳನ್ನು ಮತ್ತೊಂದು ಸೆಲ್‌ಗೆ ವರ್ಗಾಯಿಸಲಾಯಿತು. ಕಾಮಾಕ್ಷಿ ಬೇಡವೆಂದು ಅಂಗಲಾಚಿದರು ಅವಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಸಂಗತಿಯನ್ನು ಲೇಖಕರು ತಿಳಿಸುತ್ತಾರೆ.

"ಮಣ್ಣು ತಿನ್ನುವುದನ್ನು ಮನುಷ್ಯ ತಿಂದರೆ ಏನ ಲೇ?

ಓಡುತ್ತಿರುವ ನೀರು ಆಳಿಗೊಂದು ಕೈ! ದೊಡ್ಡ ಪತ್ನಿಯಂತೆ ಮಾತಾಡುತ್ತಿರುವೆ ಬಾಯಿಯನ್ನು ಸೀಳಿಸಿ ಬಿಡುವೆ?! ಕಾಮಾಕ್ಷಿಯ ಎರಡೂ ಕೈಗಳನ್ನು ಒಬ್ಬ ಪೊಲೀಸ್‌ನವನು ಹಿಂದೆ ಹಿಡಿದುಕೊಂಡನು. ಇನ್ಸ್‌ಪೆಕ್ಟರ್ ಅವಳ ಬಾಯಿಯಲ್ಲಿ ಗಾಂಜಾ ತುಂಬಿದ್ದ ಒಂದು ಸಿಗರೇಟನ್ನು ಇಟ್ಟು ಹತ್ತಿಸಿದನು. ಕಾಮಾಕ್ಷಿ ಒದ್ದಾಡಿದಳು.

ಕೂಡಲೇ ... ಮ್... ಎಳೆ....

ಮುಡಿ ಹಿಡಿದು ಕೆಳಗೆಳೆದನು. ಬಲವಾದ ಎಳೆತ ನುಚ್ಚಾದಳು. ತಲೆ ತಿರುಗಿತು. ಬೆನ್ನಲ್ಲಿ ಮತ್ತೊಂದು ಹೊಡೆತ ಮತ್ತೆ ಎಳೆಯುವಂತೆ ಹೇಳಿದನು. ಮೂರ್ಛೆ ಹೋದಳು ಕಾಮಾಕ್ಷಿ

ಹೇ.. ನೀನು... ಹೋಗಿ ಆಮೇಲೆ ಬಾ! ಎಂದು ಹೇಳುತ್ತಾ ಸೊಂಟದ ಬೆಲ್ಟನ್ನು ತೆಗೆದು ಪ್ಯಾಂಟನ್ನು ಬಿಚ್ಚಲು ಪ್ರಾರಂಭಿಸಿದ" (ಅದೇ ಪು. ೪೫) ದಲಿತ ಮಹಿಳೆಗೆ ಸಮಾಜ, ಸಾಮಾಜಿಕ ವ್ಯವಸ್ಥೆ ಲೈಂಗಿಕ ಶೋಷಣೆ ನೀಡಿದರೆ, ರಕ್ಷಣೆ ಮಾಡುವ ಪೋಲೀಸರು ಜನರಿಗಿಂತ ರಾಕ್ಷಸರಂತೆ ವರ್ತಿಸುವುದನ್ನ ಕಾಣಬಹುದು.

ಈ ಘಟನೆಯ ನಂತರ ಅವಳು ವೇಶ್ಯೆಯಾಗಿಯೇ ಮಾರ್ಪಡುತ್ತಾಳೆ. ಮುನಿಯಾಂಡಿಯ ಬಳಿ ಬಡ್ಡಿ ಹಣ ತೆಗೆದುಕೊಂಡಿದ್ದರಿಂದ ಅವನ ಒತ್ತಾಯದಿಂದ ಕುಡಿಯುತ್ತಾಳೆ. ಮುನಿಯಾಂಡಿಯು ಅವಳಿಗೆ ಕುಡಿಸಿ ಅದರಿಂದ ಮತ್ತೆ ಅವಳ ದೇಹವನ್ನು ಬಂಡವಾಳವನ್ನಾಗಿ ಮಾಡಿಕೊಂಡಿರುವ ಸಂಗತಿಯನ್ನು ಹೀಗೆ ಹೇಳುತ್ತಾರೆ. "ಮಾರಿಯಪ್ಪನು ಮತ್ತೆ ನಾಲ್ಕು ಜನರನ್ನು ಕರೆತಂದನು. ಇನ್ನೂ ಕತ್ತಲಾದಾಗ ಐದು ಜನರನ್ನು ಕರೆತಂದನು. ಇದರ ಮಧ್ಯೆ ಮುನಿಯಾಂಡಿ ತೆಗ್ಗಿನಲ್ಲಿ ಇಳಿದು ಕಾಮಾಕ್ಷಿಯನ್ನು ನೋಡಿದಾಗ ಅವಳ ಜಾಕೆಟ್ಟಿನ ಉಕ್ಕುಗಳು ಕಿತ್ತು ಎದೆ ಕಾಣಿಸುತ್ತಿತ್ತು. ಕತ್ತಲಲ್ಲಿ ಅವಳ ಅಲ್ಲೋಲ ಕಲ್ಲೋಲ ದೇಹದ ಸ್ಥಿತಿಯನ್ನು ನೋಡಿ ಪಾಪವೆನಿಸಿತು, ತಾನೂ ಹೋಗಬೇಕು ಎಂಬಂತಿತ್ತು." (ಅದೇ, ಪು. ೪೯) ಅಲ್ಲಿ ಮಹಿಳೆಯ ಅಸಹಾಯಕ ಸ್ಥಿತಿಯನ್ನು ಕಂಡ ಮುನಿಯಾಂಡಿಗೆ ಅವಳ ಮೇಲೆ ಪಾಪವೆನಿಸಿದರೂ ಅವಳ ದೇಹ ನೋಡುತ್ತಿದ್ದಾಗ ಅವನೂ ಅವಳನ್ನು ಭೋಗಿಸಬೇಕು ಎಂಬ ಆಸೆಯನ್ನು ಕಾಣಬಹುದು. ಪುರುಷನು ಮಹಿಳೆಯನ್ನು ಮನುಷ್ಯಳಾಗಿ ಕಾಣದೆ ಕೇವಲ ಭೋಗದ ವಸ್ತುವಾಗಿ ನೋಡುವ ದೃಷ್ಟಿಕೋನ ಚಿತ್ರಿತವಾಗಿದೆ.

ಆ ಕೇರಿಯೇ ಒಂದು ನರಕದಂತೆ ಕಾಣಿಸುತ್ತಿತ್ತು. ನೂರಕ್ಕೂ ಹೆಚ್ಚಿನ ವೇಶ್ಯೆಯರು ದೇಹವನ್ನೇ ಮಾರಿ ಜೀವಿಸುವ ಸ್ಥಿತಿ, ಒಬ್ಬೊಬ್ಬರಿಗೂ ಒಂದೊಂದು ಕರಾಳ ಕತೆ ಇರುತ್ತದೆ. ಇವೆಲ್ಲವುಗಳ ನಡುವೆ ಊರಿನ ಜಾತ್ರೆ ಬಂದಿತು. ಗಂಗೈ ಅಮರನ್‌ರ ಸಂಗೀತ ಕಛೇರಿಯೂ ಇತ್ತು. ಕಾಮಾಕ್ಷಿ ಪರ್ಥಣ್‌ನನ್ನು ಬೇಗ ಬೀಗ ಹಾಕಿಕೊಂಡು ಬರುವಂತೆ ತಿಳಿಸಿ ಜಾತ್ರೆಗೆ ಹೊರಡುತ್ತಾಳೆ. ಮಾಯಾಂಡಿ ಮತ್ತು ಅವನ ಜೊತೆಗಾರರು ಕುಡಿದ ಮತ್ತಿನಲ್ಲಿ ಪರ್ಥಣ್‌ನನ್ನು ಹೊಡೆಯುತ್ತಿದ್ದರು. ವಿಷಯ ತಿಳಿದು ಕಾಮಾಕ್ಷಿ ಓಡಿ ಬಂದು ಪರ್ಥಣ್‌ನನ್ನು ಬಿಡಿಸಿ ಮಾಯಾಂಡಿಯನ್ನು ಹೊಡೆದಳು. ಮರುದಿನ ಮಾಯಾಂಡಿ ಕಾಮಾಕ್ಷಿಯನ್ನು ಹೊಡೆದು ಹಿಂಸಿಸುತ್ತಾನೆ ಮತ್ತು ಅವಳ ಮನೆ-ಮಠವನ್ನೆಲ್ಲಾ ಕಿತ್ತು ಪಾತ್ರೆಗಳನ್ನು ಬೀದಿಗೆ ಬಿಸಾಡುತ್ತಾನೆ.

ಮನೆಯನ್ನು ಕಳೆದುಕೊಂಡು ಬಸ್‌ಸ್ಟ್ಯಾಂಡ್‌ನಲ್ಲಿ ಮಲಗುವ ಅನಿವಾರ್ಯತೆ ಎದುರಾಯಿತು. ಜೊತೆಗೆ ಕಾಂತನಿಗೆ ಜ್ವರ ಹೆಚ್ಚಾಗಿತ್ತು. ಸರ್ಕಾರಿ ದವಾಖಾನೆಯಲ್ಲಿ ತೋರಿಸಿ ಸೂಜಿ ಹಾಕಿಸಿದಳು. ಕೈಯಲ್ಲಿ ಹಣವಿರಲಿಲ್ಲ. ಮಗುವಿಗೆ ಬಿಟ್ಟು ಬಿಟ್ಟು ಜ್ವರ ಹೆಚ್ಚಾಗುತ್ತಿತ್ತು. ಹಣವಿದ್ದರೆ ಬೇರೆ ಡಾಕ್ಟರ್‌ಗೆ ತೋರಿಸಬಹುದೆಂದು ಪರ್ಥಣಂಗೆ ಹೇಳಿ ಹೊರಗೆ ಹೋದಳು. ಮಫ್ತಿಯಲ್ಲಿ ನಿಂತಿದ್ದ ಪೊಲೀಸ್‌ನ ಬಳಿ ಬರುತ್ತೀರಾ ಎಂದು ಕೇಳಿ ಜೈಲು ಸೇರುತ್ತಾಳೆ.

"ಕೆಲದಿನಗಳ ನಂತರ ಕುಪ್ಪು ಅವಳನ್ನು ನೋಡಲು ಜೈಲಿಗೆ ಹೋದಳು. ಆಗ ಕಾಮಾಕ್ಷಿ ಕುಪ್ಪುವಿನ ಬಳಿ ಮಗು ಜೋಪಾನ, ಅಮ್ಮ ಅವನಿಗಾಗಿಯೇ ನಾನಿರುವುದು ಇದೆಲ್ಲವೂ ಅವನಿಗಾಗಿಯೇ ಇನ್ನೊಮ್ಮೆ ಬಂದಾಗ ಅವನನ್ನು ಕರೆದುಕೊಂಡು ಬಾ ಅವನ ನೆನಪಾಗಿ ಇದೆ ಅಮ್ಮ ಇದನ್ನು ಕೇಳಿದ ಕುಪ್ಪು ಏನೂ ಮಾತಾಡದೇ ದುಃಖ ಭರಿತಳಾಗಿ ಹೊರಬಂದಳು." (ಅದೇ, ಪು. ೬೦) ಕೆಲವು ದಿನಗಳ ನಂತರ ಜೈಲಿನಿಂದ ಹೊರಬರುತ್ತಾಳೆ. ಬಂದ ಕೂಡಲೇ ಮಗುವನ್ನು ನೋಡಲು ಆತುರ ಪಡಿಸಿದಳು. ಹೆದರಿಕೊಳ್ಳುತ್ತಾ ಸುಂದರಿ ಮಗು ಸತ್ತಿರುವ ವಿಷಯವನ್ನು ತಿಳಿಸುತ್ತಾಳೆ. ಇಲ್ಲಿಯವರೆಗಿನ ತನ್ನ ಮಾನ, ಶೀಲ, ಎಲ್ಲವನ್ನು ಕಳೆದುಕೊಂಡರೂ ಅವಳ ಕರಾಳ ಜೀವನ ತನ್ನ ಮಗುವಿನ ಮಮತೆಗಾಗಿ ಇನ್ನು ಜೀವಂತವಾಗಿತ್ತು. ಆದರೆ ಆ ಕನಸು ಒಡೆದಾಗ ಹುಚ್ಚಿಯಾಗುತ್ತಾಳೆ. ಒಬ್ಬ ದಲಿತ ವಿಧವೆಯು ಸಮಾಜದಲ್ಲಿ ಜೀವಿಸಲು ಯಾವ ರೀತಿ ಕಷ್ಟಗಳನ್ನು ಅನುಭವಿಸುತ್ತಾಳೆ, ಆ ಕಷ್ಟಗಳನ್ನು ತಡೆದುಕೊಂಡು ಅವರು ಬದುಕುವುದು ತಮಗಾಗಿ ಅಲ್ಲದೆ ತಮ್ಮನ್ನು ಆಶ್ರಯಿಸಿರುವ ಜೀವಗಳಿಗೆ ಎಂಬುದನ್ನು ಕಾಣಬಹುದು.

ಬಡತನದ ಕಾರಣದಿಂದ ಕೆಲಸದ ಸ್ಥಳದಲ್ಲಿ ಲೈಂಗಿಕ ಶೋಷಣೆಯನ್ನು ಅನುಭವಿಸುವ ಅಮುದಾಳ ಸ್ಥಿತಿಯನ್ನು **'ದನಂ ವೀಟ್ಟು ಕಲ್ಯಾಣಂ'** ಕತೆ ವಿವರಿಸುತ್ತದೆ. ಅಮುದಾ ಎಂಬುವವಳು ಒಂದು ಕಛೇರಿಯಲ್ಲಿ ಮೇಲಾಧಿಕಾರಿಯ ಕೈಕೆಳಗೆ ಕೆಲಸ ಮಾಡುತ್ತಿದ್ದಳು. ಬಡತನದ ಕಾರಣದಿಂದಾಗಿ ಮೇಲಾಧಿಕಾರಿಯ ಹತ್ತಿರ ತನ್ನ ಸಂಬಳದಲ್ಲಿ ಐದು ರೂಪಾಯಿ ತೆಗೆದುಕೊಂಡು ಬರಲು ಹೋಗುತ್ತಾಳೆ. ಅಮುದಾ ಮೇಲಾಧಿಕಾರಿಯ ರೂಂಗೆ ಹೋಗಿ ಹಣ ಕೇಳುವಾಗ ಲೈಂಗಿಕ ಶೋಷಣೆಗೆ ಒಳಗಾಗುತ್ತಾಳೆ.

"ತಿಂಗಳ ಸಂಬಳದಲ್ಲಿ ಐದು ರೂಪಾಯಿ ಬೇಕು ಎಂದು ಅಮುದಾ ಕೇಳಿದಳು. ಅಂಗಿಯ ಜೇಬಿನಿಂದ ಹತ್ತು ರೂಪಾಯಿ ತೆಗೆದು ಅವಳಿಗೆ ಕೊಡುವಾಗ ಕೈಯನ್ನು ಹಿಡಿಯುತ್ತಾನೆ. ತಕ್ಷಣ ಅವಳು ಮೇಲಾಧಿಕಾರಿಯನ್ನು ತಲೆ ಎತ್ತಿ ಸಿಟ್ಟಿನಿಂದ ನೋಡುತ್ತಾಳೆ.

ನೀವು ಮಾಡುತ್ತಿರುವುದು ಸರಿಯಾಗಿ ಕಾಣಿಸುತ್ತಿಲ್ಲ ಎಂದರೂ ಮುಗುಳುನಗುವಿನೊಡನೆ ಮತ್ತೆ ಅವಳ ತೋಳಲ್ಲಿ ತನ್ನ ಎಡ ಕೈಯನ್ನಿಟ್ಟು ಅವಳನ್ನು ಪ್ರೀತಿಸುತ್ತಿರುವುದಾಗಿ ಹೇಳುತ್ತಾನೆ. 'ಕೆಲವರು ಆಸೆ ತೋರಿಸಿ ಯಾಮಾರಿಸುತ್ತಾರೆ' ಎಂದು ಯಾವತ್ತೋ ಒಂದು ದಿನ ವಳ್ಳಿ ಹೇಳಿದ ಮಾತು ಅವಳಿಗೆ ನೆನಪಾಗುತ್ತದೆ. ನಿಜವಾಗಿ ಇವರು ನನ್ನನ್ನು ಪ್ರೀತಿಸುತ್ತಿದ್ದಾರೆಯೇ ಎಂದು ತನ್ನನ್ನೇ ಕೇಳಿಕೊಳ್ಳುತ್ತಾಳೆ. ದೇಹ ನಡುಗಲಾರಂಭಿಸಿತು. ಸ್ವರ ನಿಂತು ಕಣ್ಣಗಳಲ್ಲಿ ಒದ್ದೆಯಾದಳು. ಅಮುದಾ ಏಕೆ ಅಳುತ್ತಿದ್ದೀಯಾ! ನೀನು ಅಳುತ್ತಿರುವ ಕಾರಣ ನನಗೆ ಗೊತ್ತು ನೀನು ನನಗೆ ಇಷ್ಟ ಆಗಿದ್ದೀಯಾ. ಅದರಿಂದಲೇ ನಿನ್ನನ್ನು ಮುಟ್ಟಿದೆ. ಚಿಂತಿಸಬೇಡ ನೀನು ಬಯಸುವ ಎಲ್ಲವನ್ನು ನಿನಗೆ ಮಾಡುವೆ" (ವಿಳಿ. ಪಾ. ಇದಯವೇಂದನ್, ದನಂ ವೀಟ್ಟು ಕಲ್ಯಾಣಂ, ಪು. ೧೧೩-೧೧೪) ಎಂದು ಆಸೆ ತೋರಿಸಿ ಅವಳ ಮೂರು ತಿಂಗಳ ಗರ್ಭಕ್ಕೆ ಕಾರಣವಾಗಿ ಊರು ಬಿಟ್ಟು ಹೋಗುತ್ತಾನೆ. ಬಡತನದ ಕಾರಣದಿಂದ ಕೆಲಸ ಮಾಡುವ ಸ್ಥಳದಲ್ಲಿ ಈ ರೀತಿಯ ಶೋಷಣೆಯನ್ನು ದಲಿತ ಸ್ತ್ರೀಯರು ಅನುಭವಿಸುವುದನ್ನು ದಲಿತ ಸಣ್ಣಕತೆಗಳು ದಾಖಲಿಸುತ್ತವೆ.

ಪ್ರೇಮ ವಿವಾಹದಿಂದಾಗುವ ಶೋಷಣೆಗಳು

ಹಿಂದೂ ಧರ್ಮದ ಜಾತಿ ವ್ಯವಸ್ಥೆಯ ಶೋಷಣೆಯ ಕರಾಳ ಮುಖವನ್ನು ಕತೆಗಳು ತಿಳಿಸುತ್ತವೆ. ತಮಿಳು ಸಣ್ಣಕತೆಗಳಲ್ಲಿ ಅಂತರ್ ಜಾತಿ ವಿವಾಹದ ಪರಿಣಾಮಗಳನ್ನು ಕೇಂದ್ರವಾಗಿರಿಸಿಕೊಂಡು ಹಲವಾರು ಕತೆಗಳು ಬಂದಿವೆ. ಈ ಕತೆಗಳಲ್ಲಿ ಮೇಲ್ವರ್ಗದ ಯುವತಿ/ ಯುವಕನು ದಲಿತ ಯುವತಿ/ಯುವಕನನ್ನು ಪ್ರೀತಿಸುವುದು, ಓಡಿ ಹೋಗುವುದು, ಅವರ ನಡುವಿನ ಸಂಬಂಧ ತಿಳಿದು ಬಂದರೆ ದಲಿತ ಮತ್ತು ಮೇಲ್ವರ್ಗದ ನಡುವೆ ನಡೆಯುವ ಸಂಘರ್ಷ, ಕೊಲೆ, ಮರ್ಯಾದೆ ಹತ್ಯೆಗಳು ದಲಿತರನ್ನು ಊರಿನಿಂದ ಸಾಮಾಜಿಕವಾಗಿ ಬಹಿಷ್ಕಾರ ಹಾಕುವ ಸಂಗತಿಗಳನ್ನು ಕಾಣಬಹುದಾಗಿದೆ. ಇಮಯಂ ಬರೆದಿರುವ **'ಸಾವು ಸೋರು'** ಕತೆಯು ದಲಿತ ಹುಡುಗನು ಮೇಲ್ವರ್ಗದ ಹುಡುಗಿ ಓಡಿ ಹೋಗಿ ಮದುವೆಯಾಗುವ ಹಾಗೂ ಅದರಿಂದಾಗುವ ತೊಂದರೆಗಳನ್ನು ತಿಳಿಸುತ್ತದೆ.

ಕತೆಯಲ್ಲಿ ಹಂಸವಳ್ಳಿ ಎಂಬ ಮೇಲ್ವರ್ಗದ ಹುಡುಗಿಯು ಮದುವೆ ಮುಂಜಿ ಕಾರ್ಯಕ್ರಮಗಳಲ್ಲಿ ಫೋಟೋ ತೆಗೆಯುವ ಕೀಳುಕುಲದವನೊಂದಿಗೆ ಓಡಿ ಹೋಗಿರುತ್ತಾಳೆ. ಅವಳನ್ನು ಹುಡುಕಿಕೊಂಡು ಬರುವ ಅವಳ ತಾಯಿ ಪೂಂಗೋದೈ ಪಾತ್ರದ ಮೂಲಕ ಕತೆಯನ್ನು ಬಿಚ್ಚಿಡುವ ನಿರೂಪಣಾ ತಂತ್ರವನ್ನು ಕತೆಗಾರರು ಬಳಸಿಕೊಂಡಿದ್ದಾರೆ.

ಪೂಂಗೋದೈ ತನ್ನ ಮಗಳನ್ನು ಹುಡುಕುತ್ತಾ ಪಟ್ಟಣಕ್ಕೆ ಬರುತ್ತಾಳೆ. ಕತೆಯ ಆರಂಭವೇ "ಮೊಣಕಾಲಿನವರೆಗೆ ಎತ್ತಿ ಕಟ್ಟಿದ ಸೀರೆ, ಬೋಳಾಗಿರುವ ತಲೆ, ಬೆವರು ಸುರಿದು ಉಪ್ಪಾಗಿದ್ದ ರವಿಕೆ, ಗಟ್ಟಿಯಾಗಿ ಬಸವಳಿದಿದ್ದ ದೇಹ, ಭಯಪಡುತ್ತಾ ನೋಡುತ್ತಿದ್ದ ಅವಳ ನೋಟ ನೋಡಿ ಯಾರಿಗಾದರು ಅವಳು ಹುಚ್ಚಿ ಇರಬಹುದೇನೋ ಎನಿಸುತ್ತಿತ್ತು." (ಸಾವುಸೋರು, ಇಮಯಂ, ಪು. ೫) ಎಂದು ಪೊಂಗೋದೈಯನ್ನು ಪರಿಚಯಿಸುತ್ತಾರೆ. ಅವಳು ಹೀಗಿರುವುದಕ್ಕೆ ಕಾರಣಗಳಿದ್ದವು. ಶಾಲಾ ಬಾಗಿಲಿನಲ್ಲಿ ನಿಂತಿದ್ದವಳನ್ನು ಕೋಪದಿಂದ ಮತ್ತು ಆಲಸ್ಯದಿಂದ ವಿಚಾರಿಸಿದ ಶಾಲೆಯ ವಾಚ್‌ಮೆನ್ ಶಾಲಾ ಆವರಣದಲ್ಲಿ ಬರಬಾರದು ಕರೆಸ್ಪಾಂಡ್ ಮೇಡಂ ತಿಳಿದರೆ ತನ್ನನ್ನೇ ಬೈಯುತ್ತಾರೆ ಎನ್ನುತ್ತಾ ಪೂಂಗೋದೈಯನ್ನು ಹೊರ ತಳ್ಳುತ್ತಾನೆ. ಪೂಂಗೋದೈ ತನ್ನ ಮಗಳು ಹಂಸವಳ್ಳಿ ಅಲ್ಲಿ ಕೆಲಸ ಮಾಡುತ್ತಿದ್ದಾಳೆಯೇ ಎಂದು ಕೇಳುತ್ತಾಳೆ. ಇಲ್ಲವೆಂದು ಓಡಿ ಹೋದ ಮಗಳನ್ನು ಶಾಲೆಯಲ್ಲಿ ಹುಡುಕಿದರೆ ಹೇಗೆ ಎಂದು ಕೊನೆಗೆ ಗರ್ಲ್ಸ್‌ಸ್ಕೂಲ್‌ಗೆ ಆಟೋದಲ್ಲಿ ಹೋಗು ಇಲ್ಲ ಎಂದರೆ ತಡವಾಗುತ್ತೆ ಎನ್ನುತ್ತಾ ಅವಳನ್ನು ತೊಲಗಿಸುವುದರಲ್ಲಿ ಅವಸರ ಪಡಿಸುತ್ತಾನೆ.

ಅಲ್ಲಿಯವರೆಗೆ ಎಂದೂ ಆಟೋ ಏರದ ಪೂಂಗೋದೈ ಒಲ್ಲದ ಮನಸ್ಸಿನಿಂದ ಆಟೋದಲ್ಲಿ ಗರ್ಲ್ಸ್ ಸ್ಕೂಲ್‌ಗೆ ಬರುತ್ತಾಳೆ. ಗೇಟು ಇಲ್ಲದ, ವಾಚ್‌ಮೆನ್ ಇಲ್ಲದಿದ್ದರಿಂದ ಒಮ್ಮೆಲೆ ಒಳ ಬಂದು ಒಂದೊಂದು ಕಿಟಕಿಯನ್ನು ನೋಡುತ್ತಿರುತ್ತಾಳೆ. ಗಂಟೆ ಹೊಡೆಯಲು ಬಂದ ಪಿವನ್ ಕಮಲ ಅವಳನ್ನು ನೋಡಿ ಒಳಗಡೆ ಬರಬಾರದೆಂದು ಹೇಳುತ್ತಾಳೆ. ತನ್ನ ಮಗಳು ಹಂಸವಳ್ಳಿಯನ್ನು ಹುಡುಕುತ್ತಾ ಬಂದಿದ್ದನ್ನು ಅವಳು ಅಲ್ಲಿ ಕೆಲಸ ಮಾಡುತ್ತಿದ್ದಾಳ ಎಂದು ಕೇಳಿದಾಗ ಆ ಹೆಸರಿನ ಯಾವ ಟೀಚರ್ ಅಲ್ಲಿ ಇಲ್ಲವೆಂದು ಪ್ಯೂನ್ ಕಮಲ ತಿಳಿಸುತ್ತಾಳೆ.

ಆದರೂ ಪೊಂಗೋದೈ ಇನ್ನೊಮ್ಮೆ ಕಮಲಳನ್ನು ವಿಚಾರಿಸಿ, ಹಂಸವಳ್ಳಿ ಹುಡುಗನೊಬ್ಬನೊಡನೆ ಓಡಿ ಹೋಗಿದ್ದನ್ನೂ ಅವಳಿಗೆ ತಿಳಿಸುತ್ತಾಳೆ. ಅದಕ್ಕೆ ೨೦೧೩ರಲ್ಲಿಯೂ ಹೀಗಿದ್ದೀಯಲ್ಲ ಓಡಿ ಹೋದವರು ತಿಳಿದ ಊರನಲ್ಲಿರುತ್ತಾರೆಯೇ ಸುಮ್ಮನೆ ಮನೆಗೆ ಹೋಗು ಎಂದಾಗ "ಅವಳಿಗೆ ಸೇರಬೇಕಾದದ್ದನ್ನು ಅವಳಿಗೆ ಸೇರಿಸಿಬಿಟ್ಟರೆ ಆಮೇಲೆ ನಾನೇಕೆ ಅವಳನ್ನು ಹುಡುಕುತ್ತೇನೆ" (ಅದೇ, ಪು. ೧೧) ಎಂದು ಪೂಂಗೋದೈ ಕಮಲಳಿಗೆ ತಿಳಿಸುತ್ತಾಳೆ. ಅದಕ್ಕೆ ಏನು ಕೊಡುತ್ತೀಯಾ ಅವಳಿಗೆ ಎಂದಾಗ "ಎರಡು ಪೌನ್ ಬಂಗಾರ, ಇಪ್ಪತ್ತು ಸಾವಿರ ಹಣ, ಆಮೇಲೆ ಅವಳು ಓದಿದ ಈ ಸರ್ಟಿಫಿಕೇಟ್‌ಗಳು, ಇದು ಇದ್ದರೆ ಎಲ್ಲಾದರೂ ಒಂದು ಸ್ಥಳದಲ್ಲಿ ಕೆಲಸ ಮಾಡಿ ಬದುಕಿಕೊಳ್ಳುತ್ತಾಳೆ ಅಲ್ವಾ?" (ಅದೇ, ಪು. ೧೧) ಎಂದು ಅವಳು ತಾನು ತಂದ ಒಂದೊಂದು ವಸ್ತುವನ್ನು ತೋರಿಸುತ್ತಾಳೆ, ಇದು ಕಮಲಾಳಿಗೆ ಆಶ್ಚರ್ಯವಾಯಿತು.

ಕಮಲಾ, ಪೂಂಗೋದೈಯ ದುಃಖ ನೋಡಿ ಮರುಗುತ್ತಾಳೆ. ವಿಷಯ ಮೊದಲೇ ನಿಮಗೆ ತಿಳಿಯದೇ ಎಂದಾಗ ಹಂಸವಳ್ಳಿ ಯಾರೊಂದಿಗೂ ಬೆರೆಯುವುದಿಲ್ಲ. ತುಂಬಾ ಒಳ್ಳೆಯ ಹುಡುಗಿ ಎಂಬುದನ್ನು ತಿಳಿಸುತ್ತಾಳೆ.

"ಹೆಣ್ಣುಮಕ್ಕಳಿಗೆ ಹಣ ಅಂತಸ್ತು ದೊಡ್ಡದಾಗಿ ಕಾಣಿಸುವುದೇ? ಬೆಳ್ಳಿ, ಚಿನ್ನ ದೊಡ್ಡದಾಗಿ ಕಾಣಿಸುವುದೆ? ನಾಲ್ಕು ಒಳ್ಳೆಯ ಮಾತುಗಳು ಮಾತ್ರವಲ್ಲವೇ ಬೆಟ್ಟದಂತೆ ಕಾಣಿಸುತ್ತದೆ ಅದನ್ನು ನಂಬಿ ಹೋಗಿಬಿಡುತ್ತಾರೆ." (ಅದೇ, ಪು. ೧೩) ಎಂದು ತನ್ನ ಮಗಳು ಮದುವೆ-ಮುಂಜಿ, ಸಾವು ಕಾರ್ಯಗಳಲ್ಲಿ ಫೋಟೋ ತೆಗೆಯುವ ಹುಡುಗನೊಂದಿಗೆ ಓಡಿಹೋಗಿದ್ದಾಳೆಂದು ಮಾರ್ಮಿಕವಾಗಿ ತಿಳಿಸುತ್ತಾಳೆ. ಅಲ್ಲದೆ ಅವನು ಕೆಲಸ ಮಾಡುತ್ತಿದ್ದ ಅಂಗಡಿಯನ್ನು ತನ್ನ ಗಂಡ, ಮಗ ಮತ್ತು ಸಂಬಂಧಿಗಳು ಸೇರಿ ಧ್ವಂಸ ಮಾಡಿ ಇದರಿಂದ ಜೈಲಿಗೆ ಹೋಗಿ ಕೊನೆಗೆ ಅಂಗಡಿಯ ಮಾಲೀಕ ಇವರ ಜಾತಿಯವರೇ ಆದ್ದರಿಂದ ಹಣ ತೆಗೆದುಕೊಂಡು ಕೇಸು ವಾಪಸ್ ಪಡೆದ ವಿಷಯವನ್ನು ತಿಳಿಸುತ್ತಾಳೆ. ಮಗಳೊಂದಿಗೆ ಹಣವೂ ಹೋದದನ್ನು ಪೂಂಗೊದೈ ತಿಳಿಸುತ್ತಾಳೆ. ಗಂಡ ತನ್ನನ್ನು ದಿನವೂ ಬೈಯುವುದನ್ನು ಮತ್ತು ಮಗನ ಮಾನಹೋಯ್ತು ಎಂದು ಪ್ರತಿದಿನ ಬ್ರಾಂಡಿ ಕುಡಿದು ಪರೋಟಾ ತಿಂದು ಅವಳನ್ನು ಅವಳ ಮಗಳನ್ನು ಬೈಯುವುದು ಕಿವಿಯಾರೆ ಕೇಳುವುದಕ್ಕೆ ಆಗದಿರುವುದನ್ನು "ನೀನು ಒಳ್ಳೆಯವಳು ಅಲ್ಲ ಅದಕ್ಕೆ ನೀನು ಹೆತ್ತದ್ದು. ದನ ತಿನ್ನುವವನೊಂದಿಗೆ, ಹಂದಿ ತಿನ್ನುವವನೊಂದಿಗೆ ಓಡಿ ಹೋಗಿದ್ದಾಳೆಂದು ಹೇಳುತ್ತಾರೆ"(ಅದೇ, ಪು. ೧೫) ಎಂದು ಹೇಳುತ್ತಾ ಅಳುತ್ತಾಳೆ. ಮಗಳು ಓಡಿ ಹೋದರೆ ತಾಯಿಯನ್ನು ಬೈಯುವುದು, ಹೊಡೆಯುವುದು ಪುರುಷ ಪ್ರಧಾನ ಸಮಾಜದ ಮಾನಸಿಕತೆಯನ್ನು ತಿಳಿಸುತ್ತದೆ. ಕತೆಗಾರರು ಮಹಿಳಾ ನೆಲೆಯಲ್ಲಿ ಈ ಕತೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದರೂ ಅದರೊಳಗಿನ ಪಿತೃ ಪ್ರಧಾನ ಸಮಾಜ ಹೇಗೆ ಮಹಿಳಾ ಶೋಷಣೆ ಮಾಡುತ್ತದೆ ಎನ್ನುವ ಸೂಕ್ಷ್ಮ ಸಂಗತಿಯನ್ನು ವಿವರಿಸಿದ್ದಾರೆ. ತನ್ನ ಜೀವನದ ದುರಂತದ ಕತೆ ಹೇಳುತ್ತಿರುವಾಗ ಕಮಲ ಹುಡುಗನು ಯಾವ ಊರು, ಜಾತಿ ಯಾವುದು ಎಂದು ಕೇಳಿದಾಗ,

"ಒಂದೇ ಜಾತಿಯವನಾಗಿದ್ದರೆ ಒಂದು ತಿಂಗಳಿನಲ್ಲಿ ಎರಡು ತಿಂಗಳಲ್ಲಿ ಸಮಾಧಾನವಾಗಿ ಹೋಗಿರಬಹುದು. ಉನ್ನತ ಜಾತಿಯವನೊಡನೆ ಹೋಗಿದ್ದರು ಸರಿ ಎಂದು ಬಿಟ್ಟಿರಬಹುದು. ಕೆಳಜಾತಿಯ ಹುಡುಗ, ಆದ್ದರಿಂದಲೇ ಊರು ಗರ್ವದಿಂದ ಓಡಾಡುತ್ತದೆ. ಕಡೀತೀವಿ, ಚುಚ್ಚುತ್ತೇವೆಂದು ಅಳೆಯುತ್ತಿದ್ದಾರೆ. ಆ ಚಾಂಡಾಳ ಹೊರ ಊರಿನವನಾಗಿದ್ದರೂ ಇಷ್ಟೊಂದು ಕಲಹ ಆಗಿರದು ಅವನ ತಾಯಿಯೂ ಸಾಯುತ್ತಿದ್ದಿಲ್ಲ." (ಅದೇ, ಪು. ೧೯) ಎಂದಾಗ ಕಮಲಾ ಅವನ ತಾಯಿ ಹೇಗೆ ಸತ್ತಳು ಎಂದು ಕೇಳಿದಾಗ

"ವಿಷಯ ತಿಳಿದ ಊರಿನವರೆಲ್ಲರೂ ಹೋಗಿ ಅವಳ ಎದೆಯನ್ನು ಕೊಯ್ದುಬಿಟ್ಟರು. ಅಂದು ರಾತ್ರಿಯೇ ಅವಳು ಹಗ್ಗ ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಇದನ್ನು ಕೇಳಿದ ಕಮಲ ಇಷ್ಟು ಕ್ರೂರವಾಗಿ ಇರುತ್ತೀರಾ ಎಂದಾಗ ಕೀಳು ಜಾತಿಯವರೊಡನೆ ಓಡಿ ಹೋದರೆ ಎದೆ ಕೊಯ್ಯುತ್ತಾರೆ. ಆಗಲೇ ಇಬ್ಬರ ಎದೆ ಕೊಯ್ದಿದ್ದಾರೆ ನನ್ನ ಮಗಳನ್ನು ಸೇರಿಸಿದರೆ ಮೂರನೆಯದು ಆಗುತ್ತದೆ.

ಹೆಂಗಸಿಗೆ ಎದೆ ಮತ್ತು ಕೂದಲು ದೊಡ್ಡದು

ಅದಕ್ಕಿಂತ ಜೀವವಲ್ಲ

ಅದಕ್ಕೆ ಅದನ್ನು ಕೊಯ್ಯುತ್ತಾರೆ" (ಅದೇ, ಪು. ೨೦-೨೧) ಎಂದು ದುಃಖಿಸುತ್ತಾಳೆ. ಮಗ ಮಾಡಿದ ತಪ್ಪಿನಿಂದ ತಾಯಿಗೆ ಶಿಕ್ಷೆ ನೀಡುವುದು ಅಮಾನವೀಯತೆಯಾದರೂ ಒಟ್ಟಿನಲ್ಲಿ ಮೇಲ್ವರ್ಗದವರಿಗೆ ದಲಿತರಿಗೆ ಶಿಕ್ಷೆಯಾಗಬೇಕು. ದಲಿತರನ್ನು ಈ ರೀತಿಯ ಸಂಗತಿಗಳಿಂದ ಹಿಡಿತದಲ್ಲಿಟ್ಟುಕೊಳ್ಳುವ ಮೇಲ್ವರ್ಗದ ಮನಸ್ಥಿತಿಯು ಎಷ್ಟು ಕ್ರೂರವಾಗಿರುತ್ತದೆ ಎನ್ನುವ ಸಂಗತಿಯನ್ನು ಕತೆಗಾರರು ತಿಳಿಸುತ್ತಾರೆ.

"ನನ್ನ ಮಗ ಒಂದು ಕೀಳು ಜಾತಿಯ ಹುಡುಗಿಯನ್ನು ಕರೆದುಕೊಂಡು ಹೋಗಿದ್ದರೂ ನನಗೆ ಇಷ್ಟೊಂದು ದುಃಖ ಬಂದಿರುವುದಿಲ್ಲ. ಅವನು ಗಂಡಸು. ಮೂಟೆ ಎತ್ತಿಯಾದರೂ ಬದುಕುತ್ತಾನೆ. ಇವಳು ಹೆಂಗಸು, ಯಾವ ಸ್ಥಳಕ್ಕೋದರೂ ಅವಳ ಸೀರೆಯೊಳಗೆ ಏನು ಇದೆ ಎಂದೇ ಲೋಕ ನೋಡುತ್ತದೆ" (ಅದೇ, ಪು. ೨೧-೨೨) ಎಂದು ತನ್ನ ಮಗಳು ಹೆಣ್ಣು ಎಂಬುದನ್ನು ತಿಳಿಸುವುದರೊಂದಿಗೆ ತಮ್ಮ ಊರಲ್ಲಿರುವ ಮಾನಂಗಾತ್ತ ಸಾಮಿ ಎಂಬ ದೇವರಿನ ಕತೆಯನ್ನು ಕಮಲಾಳಿಗೆ ಹೇಳುತ್ತಾಳೆ. ಮೇಲ್ಜಾತಿಯ ಹುಡುಗಿಯೊಬ್ಬಳು ಕೀಳು ಹುಡುಗನೊಂದಿಗೆ ಮಲಗಿದ್ದರಿಂದ ಊರು ಮರ‍್ಯಾದೆ ಹೋಗಿ ಪಂಚಾಯ್ತಿ ನಡೆಸಲಾಗಿತ್ತು. ಕೊನೆಗೆ ಅವಳನ್ನು ಸಾಯಿಸಲು ತೀರ್ಮಾನಿಸಲಾಯಿತು. ಅದಕ್ಕೆ ಅವಳು ನನ್ನನ್ನು ಯಾರೂ ಸುಡಬೇಡಿರೆಂದು ನಾನೇ ಸಾಯುತ್ತೇನೆಂದು ಇಟ್ಟಿಗೆಯ ಭಟ್ಟಿಯಲ್ಲಿ ಇಳಿದು ಜೀವ ಬಿಡುತ್ತಾಳೆ. ಇದರಿಂದ ಊರಿನ ಮಾನ ಉಳಿಸಿದಳೆಂದು ಅಲ್ಲಿಯೇ ಅವಳಿಗೊಂದು ದೇವಾಲಯ ನಿರ್ಮಿಸಲಾಯಿತು. ಜಾತಿ ಮಾನ ಕಾಪಾಡಿದ್ದರಿಂದ ಅವಳಿಗೆ ಮಾನಂಕಾತ್ತ ಸಾಮಿ ಎಂದು ಹೆಸರಿಡಲಾಯಿತು ಎಂದು ಹೇಳಿ ತನ್ನ ಮಗಳು ಮತ್ತೆಂದೂ ಆ ಊರಿಗೆ ಬಾರದಿರುವಂತೆ, ಬಂದರೆ ಅವಳ ಮಾನ ಮತ್ತು ಜೀವ ತೆಗೆಯಲು ಊರು ಕಾಯುತ್ತಿದೆಯೆಂದು ಕಮಲಾಳಿಗೆ ತಿಳಿಸುತ್ತಾಳೆ. ಅಲ್ಲದೇ ನಾಲ್ಕು ದಿನದ ಹಿಂದೆಯೇ ತನ್ನ ಮಗಳಿಗೆ ಕಾರ್ಯ ಮಾಡಿದ್ದನ್ನು ಅವಳು ಸತ್ತಿದ್ದಾಳೆಂದು ತನ್ನ ಗಂಡ ಮಗ ತನಗೆ ತಾನೇ ತಲೆ ಬೋಳಿಸಿ ಸಾವಿನ ತಮಟೆ ಬಾರಿಸಿ ಅವಳ ಬಟ್ಟೆ ಬರೆ ಎಲ್ಲವನ್ನು ತೆಗೆದುಕೊಂಡು ಸ್ಮಶಾನದಲ್ಲಿ ಸುಡಲಾಯಿತು. ಹಾಲು ಸಿಂಪಡಿಸಿ ಊರಿನವರೇ ಕಾರ್ಯ ಮಾಡಿದರು ಎಂದು ಕಮಲಾಳಿಗೆ ಹೇಳಿದಳು.

"ನಾಲ್ಕು ದಿನದ ಹಿಂದೆ ಹದಿನಾರನೆಯ ದಿನದ ಕಾರ್ಯವೂ ನಡೆಯಿತು. ನಮ್ಮ ಊರಿನ ಕೆರೆಯಲ್ಲಿ ಎಳ್ಳು ನೀರು ಬಿಟ್ಟ ಕಾರ್ಯ ನಡೆಯಿತು. ಎಂಟನೆ ದುಃಖದ ನೈವೇದ್ಯದ ಊಟ ಮತ್ತು ಕಾರ್ಯದ ಅನ್ನವನ್ನು ಕಾಗೆಗಳು ತಿಂದು ಹೋದವು. ನನ್ನ ಮಗಳ ಕರ್ಮಕಾರ್ಯದ ಅನ್ನವನ್ನು ತಾನೂ ತಿಂದವಳು ಎಂದು ಹೇಳಿಕೊಳ್ಳುತ್ತಾಳೆ. ಊರಿನ ಸುತ್ತ ಶ್ರದ್ಧಾಂಜಲಿಯ ಫೋಟೋವನ್ನು ಹಾಕಿ ಬಿಟ್ಟರು. ಎಲ್ಲಾ ಊರಿನವರು ಸೇರಿಯೇ ಎಂಟನೇ

ದುಃಖದ ಊಟ ಮಾಡಿದರು. ಕರ್ಮಕಾರ್ಯದ ಮಾಂಸದೂಟವನ್ನು ತಿಂದರು. ನಾನು ತಿಂದೆನು" (ಅದೇ, ಪು. ೨೫) ಎನ್ನುವ ಮಾತುಗಳಲ್ಲಿ ದುಃಖ ತುಂಬಿಕೊಂಡ ತಾಯಿ ತನ್ನ ಕರುಳಿನ ಕುಡಿಯ ಬಗ್ಗೆ ಹೊಂದಿರುವ ಅಪಾರ ಪ್ರೀತಿಯನ್ನು ತೆರೆದಿಡುತ್ತಾಳೆ. ಮಗಳ ಕಾರ್ಯವನ್ನು ಮಾಡಿ ಮುಗಿಸಿರುವುದು ತಿಳಿಸುತ್ತಾಳೆ. ಅಲ್ಲಿಗೆ ಶಾಲೆಯ ಸಮಯ ಮುಗಿದಿದ್ದರಿಂದ ಕಮಲಾ ಕ್ಲೋಸಿಂಗ್ ಬೆಲ್ ಹೊಡೆಯಲು ಮುಂದಾಗುತ್ತಾಳೆ. ಇತ್ತಾ ಪೂಂಗೋದೈ ಮಗಳನ್ನೇ ನೆನೆದುಕೊಳ್ಳುತ್ತಾ ಹುಚ್ಚಿಯಂತೆ ಹೊರಡುತ್ತಾಳೆ. ಅಂತರ್ ಜಾತಿ ವಿವಾಹದ ಪರಿಣಾಮವಾಗಿ ಬದುಕಿದ್ದರೂ ಮಗಳಿಗೆ ಪಿಂಡ ಇಟ್ಟು ಧಾರ್ಮಿಕ ವಿಧಿ ವಿಧಾನಗಳಿಂದ ಕಾರ್ಯ ಮಾಡುವ ಅಂಶವನ್ನು ಕತೆಗಾರರು 'ಸಾವುಸೋರು' ಕತೆಯಲ್ಲಿ ವಿವರಿಸುತ್ತಾರೆ. ಅದರೊಂದಿಗೆ ಅಂತರ್ ಜಾತಿ ವಿವಾಹದ ಪರಿಣಾಮಗಳು ಎಷ್ಟು ಭೀಕರವಾಗಿರುತ್ತವೆ ಎನ್ನುವುದನ್ನು ಕತೆಯಲ್ಲಿ ಬರುವ ಘಟನೆಗಳು ತಿಳಿಸುತ್ತವೆ.

ಉಡುಗೆ-ತೊಡುಗೆ

ಅಸ್ಪೃಶ್ಯರಾದ ಒಬ್ಬರು, ಸ್ಪೃಶ್ಯರಂತೆ ಮೇಲ್ಜಾತಿ ಗುರುತುಗಳಾದ ಯಾವುದನ್ನು ಹಾಕಿಕೊಂಡು ತಾವು ಸ್ಪೃಶ್ಯರೇ ಎಂದು ತೋರಿಸಿಕೊಳ್ಳುವುದು ಅಪರಾಧವಾಗಿತ್ತು. ಅಸ್ಪೃಶ್ಯರು ತಮ್ಮ ಕೀಳಾದ ಅಂತಸ್ತಿಗೆ ತಕ್ಕಂತೆ ನಡೆದುಕೊಳ್ಳುವುದು ಸಾಮಾನ್ಯರು ಅವರನ್ನು ತಿಳಿದು ಗುರುತಿಸಿಕೊಳ್ಳುವ ಬಗೆಯಲ್ಲಿ ಕೆಳಗಿನ ಮೇಲ್ಕೈ ಚಿಹ್ನೆಗಳನ್ನು ಹೊಂದಿರಬೇಕು.

೧. ದೇಹದ ತುಂಬಾ ಬಟ್ಟೆ ಧರಿಸಿರದೇ ಇರುವುದು.

೨. ಶುದ್ಧವಾದ ಬಟ್ಟೆಗಳನ್ನು ಧರಿಸಿರದೇ ಇರುವುದು

೩. ಮನೆಗಳಿಗೆ ಸೀಟು ಹಾಕಿಸಿರದೇ ಇರುವುದು

೪. ಬೆಳ್ಳಿ-ಬಂಗಾರ ಆಭರಣಗಳನ್ನು ಹಾಕಬಾರದೆಂಬ ನೀತಿ ನಿಯಮಗಳಿದ್ದವು.

ಈ ನಿಯಮಗಳಲ್ಲಿ ಯಾವುದನ್ನು ಮೀರಿದರೂ ಅಪರಾಧವಾಗುತ್ತದೆ ಎಂದು ಅಂಬೇಡ್ಕರ್ ತಿಳಿಸುತ್ತಾರೆ. ಸೋ.ಧರ್ಮನ್‌ರವರ **'ಮ(ಣಿ)ದಂ'** ಎಂಬ ಕತೆಯಲ್ಲಿ ಉಡುಗೆ ಅಸ್ಪೃಶ್ಯತೆಯ ಹೊರ ಆಕಾರವಾಗಿ ಇರುವುದನ್ನು ಅದನ್ನು ದಲಿತ ಕಲಹ ಸಂಸ್ಕೃತಿ ಬದಲಾಯಿಸುವುದನ್ನು ತಿಳಿಸುತ್ತದೆ.

ಕತೆಗಾರರು ದಲಿತರ ಉಡುಗೆ ತೊಡುಗೆಯಲ್ಲಿ ಸೃಜನಶೀಲತೆ ಮೆರೆಯುವುದನ್ನು ಕುರೂಸ್‌ನ ಸಂಭಾಷಣೆಯಲ್ಲಿ ಕಾಣಬಹುದು. "ಸೊಂಟಕ್ಕೆ ಸುತ್ತ ಕಟ್ಟಿದ್ದ ಕಿರುಬೆರಳಿನಷ್ಟು ದಾರ, ನಾಲ್ಕು ಮೊಳದಷ್ಟು ಇರುವ ಹತ್ತಿ ಸೀರೆಯಲ್ಲಿ ಹರಿದು ಕಟ್ಟಿದ ಹಸಿರು ಬಣ್ಣದ ಲಂಗೋಟಿ ಬಟ್ಟೆಯಷ್ಟೇ... ಈ ನಾಗರಿಕತೆಯಲ್ಲಿ ಈ ರೀತಿ ಲಂಗೋಟಿ ಕಟ್ಟಿಕೊಂಡು ಅಲೆದಾಡಲು ನಿನಗೆ ನಾಚಿಕೆ ಆಗುತ್ತಿಲ್ಲವೇ? ನೀನು ಮಾತ್ರ ಲೇ ಈ ರೀತಿ ಅಲೆಯುತ್ತಿರುವೆ?...

ನಾಚಿಕೆ ಏನು ಸ್ವಾಮಿಗಳೇ ನಾಚಿಕೆ ನನ್ನಪ್ಪನು ಪಳನಿ ಮಲೈಯ ಮುರುಗನೇ ಲಂಗೋಟಿ ಕಟ್ಟಿಕೊಂಡೇ ನಿಂತಿದ್ದಾರೆ, ನೀವು ಮುಗಿಯುತ್ತಿದ್ದೀರಿ. ನಾವು ಮುಗಿಯುತ್ತಿದ್ದೇವೆ. ಎಲ್ಲಾ ಜನರು ಮುಗಿಯುತ್ತಲೇ ಇದ್ದಾರೆ. ಯಾರಾದರೂ ಹೋಗಿ ಲುಂಗಿ ಕಟ್ಟಲು ಹೇಳುವುದು ತಾನೆ ಅಥವಾ ಮುಗಿಯುವುದಿಲ್ಲ ಎಂದು ನಿಲ್ಲಬೇಕು ತಾನೆ" (ಸೋ.ಧರ್ಮನ್ ಕದ್ಯೆಗಳ್, ಪು. ೫೧-೫೨) ಎಂದು ಕುರುಸ್ ಕಥಾಪಾತ್ರ ತಿಳಿಸುವ ಭಾಷೆಯು ದಲಿತ ಕಲಹದ ಭಾಷೆ. ಕುರುಸ್ ತನ್ನನ್ನು ದೇವರಿಗೆ ಹೋಲಿಸಿಕೊಂಡು ತಾನು ಒಬ್ಬನು ದೇವರು ಎಂದು ಹೇಳುವುದು ಸೃಜನಶೀಲತೆಯ ಪಾತ್ರವಾಗಿ ಕಾಣಿಸುತ್ತದೆ. ದಲಿತರು ಲುಂಗಿ ಕಟ್ಟಲು ತ್ಯಜಿಸುವುದಕ್ಕೆ ಹೇಳುವ ಕಾರಣ, ಮೇಲ್ಜಾತಿಯವರ ಮುಂದೆ ಲುಂಗಿಯನ್ನು ಮಡಚಿ ಕಟ್ಟಬೇಕಾಗಿರುವುದರಿಂದ ಟವಲ್ ತೆಗೆದು ಕಂಕಳಲ್ಲಿ(ಬಗಲಲ್ಲಿ) ಕೈಗಳ ನಡುವಿನಲ್ಲಿ ಮಡಚಿ ಇಟ್ಟುಕೊಳ್ಳಬೇಕಾಗಿದ್ದರಿಂದ ಲುಂಗಿ, ಟವೆಲ್‌ನ್ನು ಬಳಸದೆ ಇರುವ ಕಾರಣವನ್ನು ಹೊಸ ಹೋರಾಟ ಗುಣವನ್ನು ಕುರೂಸ್ ಪಾತ್ರದ ಮೂಲಕ ತಿಳಿಸುತ್ತಾರೆ.

'ಶುದ್ಧ' ಎಂಬುದು ದಲಿತರಿಗೆ ಇಲ್ಲ. ಶುಚಿಯಾದ ಬಟ್ಟೆಗಳನ್ನು ಧರಿಸಬಾರದೆಂಬುದನ್ನು ಜಾತಿಯ ನಿಯಮಗಳು ತಿಳಿಸುವುದನ್ನು ದಲಿತ ಸಣ್ಣಕತೆಗಳು ಧ್ವನಿಸುತ್ತವೆ. ಆ ಹೊಲಸು ಬಟ್ಟೆಗಳನ್ನು ಹಾಕಿದಾಗ ಅವಮಾನ ಪಡಿಸುವುದು ಶುಚಿಯಾದ ಬಟ್ಟೆಗಳನ್ನು ಹಾಕಿದರೆ ಸೊಕ್ಕಿನವನು ಎಂಬ ಮೇಲ್ಜಾತಿಯರ ಮಾತುಗಳನ್ನು ಕಾಣಬಹುದು. "ಎಷ್ಟು ದಿನಗಳವರೆಗೆ ಇವರ ಬೈಗುಳಗಳಿಗೆ, ಅವಮಾನಕ್ಕೆ ಗತಿಯಾಗಿ ಕಷ್ಟಪಡುವುದು... ಒಂದು ಬಿಳಿಲುಂಗಿ, ಬಿಳಿಯ ಅಂಗಿಯನ್ನು ಹಾಕಲಾಗುತ್ತಿಲ್ಲ." (ಅಭಿಮಾನಿ, ಊರ್‍ಜ್ಞೋರು, ಪು. ೧೫೬) ಉಡುಗೆಗೆ ಸಂಬಂಧಿಸಿದ ಚಿಂತನೆಯುಳ್ಳ 'ಮೀಸೈಕ್ಕಾರನ್' ಸಣ್ಣಕತೆಯಲ್ಲಿ ಮೇಲ್ಜಾತಿಯವರ ಶೋಷಣೆಗಳ ವಿರುದ್ಧ ಕಲಹ ಧ್ವನಿಯನ್ನು ತಿಳಿಸುತ್ತದೆ.

ಪ್ರತಿರೋಧ

ವೈಚಾರಿಕತೆಯನ್ನು ಬೆಳಸಿಕೊಂಡ ದಲಿತ ಲೇಖಕರು ತಮ್ಮ ಅಸ್ತಿತ್ವಕ್ಕಾಗಿ ಪ್ರಶ್ನೆ ಮಾಡದೆ ಹೋದರೆ ನಮಗಿಲ್ಲಿ ಉಳಿಗಾಲವಿಲ್ಲ ಎಂದು ಮನಗಂಡಿದ್ದರಿಂದ ಹಿಂದೂ ಧರ್ಮದ ಮೂಢನಂಬಿಕೆಗಳನ್ನು ಪ್ರತಿರೋಧಿಸುವ ಕಾರ್ಯ ಮಾಡುತ್ತಾರೆ. ಸೋ.ಧರ್ಮನ್‌ರ 'ಮನಿದಂ' ಕತೆಯಲ್ಲಿ ದಲಿತ ಪಾತ್ರವು ಮೇಲ್ವರ್ಗದವರ ಪ್ರಶ್ನೆಗೆ ಪ್ರತಿರೋಧವಾಗಿ ಉತ್ತರಿಸುವುದನ್ನು ಕಾಣಬಹುದು. "ಟೀ ಅಂಗಡಿಯಲ್ಲಿ ಟೀ ಕುಡಿಯಲು ಹೋಗುವಾಗ ಮನೆಯಿಂದ ಗ್ಲಾಸ್ ತೆಗೆದುಕೊಂಡು ಹೋಗಿ ಕುಡಿಯುತ್ತಿದ್ದೀಯಲ್ಲಾ ಲೇ ಕುರುಸು ಎಂಬ ಕಾಲಿಯಪ್ಪ ರೆಡ್ಡಿಯ ಪ್ರಶ್ನೆಗೆ ಅಲ್ಲಿರುವ ಎಲ್ಲ ಗ್ಲಾಸ್‌ಗಳು ಹೊಲಸಾಗಿ ಇದೆ ಸ್ವಾಮಿ ಎಲ್ಲಾ ಗ್ಲಾಸ್‌ಗಳಲ್ಲು ಅಂದರೆ?

ನಮಗಾಗಿ ಇಟ್ಟಿರುವ ಗ್ಲಾಸುಗಳು ನಿಮ್ಮ ಗ್ಲಾಸಿನ ಬಗ್ಗೆ ನಮಗೇಕೆ ಚಿಂತೆ

ನೀನು ಮನೆಯಿಂದ ಗ್ಲಾಸು ತೆಗೆದುಕೊಂಡು ಹೋಗಿ ಕುಡಿಯುತ್ತಿರುವುದರಿಂದಲೇ ಎಲ್ಲಾ ಜನರು ಅದೇ ರೀತಿ ಮಾಡುತ್ತಿದ್ದಾರೆ.

ಅದಕ್ಕೆ ಏನು ಸ್ವಾಮಿ ಮಾಡಬೇಕು. ನಿಮ್ಮ ಗ್ಲಾಸ್‌ಗಳಲ್ಲಿ ಕೊಡಿ ಅಂತ ಕೇಳಿದರೆ ತಪ್ಪಾಗಿ ಬಿಡುತ್ತದೆ. ಅದಕ್ಕೆ ಪ್ರತ್ಯೇಕ ಗ್ಲಾಸು ಹಾಕಬೇಡಿ ಎಂದು ಹೇಳಿದರೂ ತಪ್ಪು" (ಸೋ.ಧರ್ಮನ್, ಸೋ ಧರ್ಮನ್ ಕತೈಗಳ್, ಪು. ೫೪) ಟೀ ಅಂಗಡಿಗಳಲ್ಲಿ ದಲಿತರಿಗೆ ಪ್ರತ್ಯೇಕ ಲೋಟ ತಟ್ಟೆ ವ್ಯವಸ್ಥೆ ಮಾಡಿ ಅಸ್ಪೃಶ್ಯತೆ ಆಚರಣೆ ಮಾಡಲಾಗುತ್ತದೆ. ಅದಲ್ಲದೆ ದಲಿತರಿಗಾಗಿ ಇಟ್ಟಿರುವ ಗ್ಲಾಸುಗಳು ಸ್ವಚ್ಛವಾಗಿರದೆ ಅವು ಹೊಲಸಾಗಿ ಇರುವುದನ್ನು ಕತೆಯಲ್ಲಿ ತಿಳಿಸುತ್ತದೆ. ಅಲ್ಲದೆ ಸರ್ಕಾರ ಈಗಾಗಲೇ ಅಸ್ಪೃಶ್ಯತಾ ಆಚರಣೆಯನ್ನು ಕೈಬಿಡಬೇಕು ಎಂದು ಹೇಳಿದ್ದರೂ ಜನರು ಅದನ್ನು ಪಾಲಿಸುತ್ತಿಲ್ಲ. ದಲಿತರು ಅದನ್ನು ಪ್ರಶ್ನಿಸಿದರೆ ತಪ್ಪೆಂದು ಹೇಳಲಾಗುತ್ತದೆ. ಇದೆಲ್ಲದರ ಪರಿಣಾಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂತೆ ಕುರುಸ್ ಪಾತ್ರ ಕತೆಯಲ್ಲಿ ಹೋರಾಟದ ಧ್ವನಿಯಾಗಿ ಮೂಡಿಬಂದಿದೆ.

ಅಭಿಮಾನಿಯ ತೇರ್ ಕತೆಯಲ್ಲಿ ಇದೇ ರೀತಿ ಸಂಗತಿಗಳನ್ನು ಕಾಣಬಹುದು. "ದೇವಸ್ಥಾನ ಎಲ್ಲರಿಗೂ ಒಂದಾಗಿರುವುದು... ದೇವಸ್ಥಾನದ ತೇರಿನಲ್ಲಿ ಅವನು ಹಗ್ಗ ಹಿಡಿಯಬಾರದು... ಇವನು ಹಗ್ಗ ಹಿಡಿಯಬಾರದು ಎಂಬುದು ಬಹಳ ತಪ್ಪು... ತೇರಿನ ಹಗ್ಗ ಹಿಡಿದೆಳೆಯಲು ನಿಮಗೆ ಮಾತ್ರ ಹಕ್ಕು ಕೊಟ್ಟವರು ಯಾರು?

'ಆದಿಕಾಲದಿಂದಲೂ ಹಾಗೆಯೇ ನಡೆದುಕೊಂಡು ಬಂದಿದೆ.'

'ಆದಿಕಾಲದಿಂದಲೂ ನಮ್ಮನ್ನು ಗುಲಾಮರಾಗಿ, ಅಸ್ಪೃಶ್ಯರಾಗಿ ಮುಟ್ಟಬಾರದೆಂದು ಅಟ್ಟಿ ಓಡಿಸುತ್ತಿದ್ದೀರಿ... ನಿಮ್ಮ ಮೇಲೆ ಅಸ್ಪೃಶ್ಯ ಕೇಸು ಹಾಕಲೇ ಈಗ? ತಹಶೀಲ್ದಾರರೇ ಸಾಕ್ಷಿ.'

ನೀನು ಹಾಕು... ನಾವು ನೋಡಿಕೊಳ್ಳುತ್ತೇವೆ.

ಏನು ನೋಡುತ್ತೀಯಾ? ನಾವು ದೇವಸ್ಥಾನದಲ್ಲಿ ಪ್ರವೇಶಿಸುವುದನ್ನು ನೀನು ನೋಡುತ್ತೀಯಾ.. ನಾವು ಹಗ್ಗ ಹಿಡಿದು ತೇರೆಳೆಯುವುದನ್ನು ನೋಡುತ್ತೀಯಾ" (ಅಭಿಮನಿ, ತೇರ್, ಪುದಿಯ ಕೋಡಾಂಗಿ, ಪು. ೨೩) ಎಂದು ದಲಿತರು ಕಾನೂನನ್ನು ತಿಳಿದುಕೊಂಡು ಜ್ಞಾನದಿಂದ ಮೇಲ್ಜಾತಿಯವರಿಗೆ ಪ್ರತಿರೋಧಿಸುವುದನ್ನು ಕಾಣಬಹುದು. "ಏನ್ರಿ ಅವರೆಲ್ಲರೂ (ಮೇಲ್ಜಾತಿಯವರು) ಹೋಗಿ ಬಿಟ್ಟರಲ್ಲ... ಈಗ ನೀವು ಮಾತ್ರ ನಿಂತು ತೇರನ್ನು ಎಳೆದು ತಂದು ದೇವಸ್ಥಾನದಲ್ಲಿ ಬಿಡಬಹುದಲ್ಲವೇ? ನಡುಬೀದಿಯಲ್ಲಿ ಹೀಗೆ ತೇರನ್ನು ಬಿಟ್ಟಿರುವುದು ಚೆನ್ನಾಗಿ ಇದೆಯೇ? ಊರು, ಲೋಕ ಶಪಿಸುವುದಿಲ್ಲವೇ?

ಇಲ್ಲಾ ಅಯ್ಯಾ... ನಾವು ಮಾತ್ರ ಪ್ರತ್ಯೇಕವಾಗಿ ನಿಂತು ತೇರು ಎಳೆಯುವುದು ನಮ್ಮ ಉದ್ದೇಶವಲ್ಲ... ಎಲ್ಲರೊಡಗೂಡಿ ಒಂದಾಗಿ ನಿಂತು ಎಳೆಯುವುದೇ ನಮ್ಮ ಆಸೆ. ಅದೇ ಸರಿ? ದೇವಸ್ಥಾನಕ್ಕೆ ತೇರು ಬಂದು ನಿಂತರೂ ಸರಿ, ನಿಲ್ಲದಿದ್ದರೂ ಸರಿ ನಮಗೆ ಅದರ ಬಗ್ಗೆ ಚಿಂತೆ ಇಲ್ಲ.

ದೃಢವಾಗಿ ಧ್ವನಿಸಿತು. ಆ ಧ್ವನಿ ಅದಕ್ಕೆ ಬೆಂಬಲ ಸೂಚಿಸುವಂತೆ ಎಲ್ಲಾ ಜನರು ಹೌದು ಅಯ್ಯ ಎಂದು ಎಲ್ಲರೂ ಶಬ್ದ ಮಾಡಿ ಹೇಳಿದರು" (ಅದೇ, ಪು. ೨೪-೨೫) ಎಂಬ ಸಾಲುಗಳು ಕೇವಲ ಅಧಿಕಾರ, ಅವಕಾಶ ತಮ್ಮದಾಗಿಸಿಕೊಳ್ಳುವುದು ಅಷ್ಟೇ ಎಂದು ಇರದೇ ಎಲ್ಲರೂ ಸಮಾನರು ಎಂಬ ಸಮತ್ವವನ್ನು ಬಿಂಬಿಸುತ್ತದೆ.

'ತಡಿಕ್ಕಂಬು' ಸಣ್ಣಕತೆಯಲ್ಲಿ ವೀರಮ್ಮಾಳ್ ಎಂಬ ದಲಿತ ಮಹಿಳೆಗೂ, ಬರಮಕೌಂಡರ್ ಎಂಬುವವರ ನಡುವೆ ತರಕಾರಿ ಅಂಗಡಿ ಇಡುವುದರಲ್ಲಿ ಜಗಳ ಆರಂಭವಾಗುತ್ತದೆ. ಈ ಜಗಳದಲ್ಲಿ ಜಾತಿ ಹೆಸರು ಹೇಳಿ ಬಯ್ಯುವುದು, ಮಾತಾಡುವುದನ್ನು ಕತೆ ತಿಳಿಸುತ್ತದೆ. "ಏನಲೇ ಸಣ್ಣ ನಾಯಿ, ನಾನು ಹೆಂಗಸು, ಅವಳು-ಇವಳು ಅಂತ ಮಾತಾಡ್ತಿದಿಯಾ, ಇಲ್ಲಿವರೆಗೆ ನಾಲ್ಕು ಮನುಷ್ಯರಂತೆ ಸಲಿಗೆಯಿಂದ ಇದ್ದೆವು ಅವರು ಏನು ತಿಳಿದುಕೊಳ್ಳುತ್ತಾರೋ ಅಂತ ಸುಮ್ಮನಿದ್ದೆ ಏನು ಸೊಕ್ಕು ಹೆಚ್ಚಾಗಿ ಅಲೆಯುತ್ತಿದ್ದಿಯಾ" (ಸೋ.ವೇದ.ಸ್ವಾಮಿನಾದನ್, ತಡಿಕ್ಕಂಬು, ಪುದಿಯ ಕೋಡಾಂಗಿ, ಪು. ೪೭) ಎಂದು ವೀರಮ್ಮಾಳ್ ಮಾತಾಡುವುದರ ಮೂಲಕ ತಲಸ್ಪರ್ಶೀಯರು ಜಾಗೃತಿ, ಎಚ್ಚರಿಕೆ ಪಡೆದು ಬಿಟ್ಟರೆ ವೀರತ್ವ, ವಿವೇಕದಿಂದ ಸಮಸ್ಯೆಯನ್ನು ಎದುರಿಸುವುದನ್ನು ತಿಳಿಸುತ್ತದೆ. "ಒಬ್ಬ ಪರ್ರೈಯವಳಿಗೆ ಇಷ್ಟು ಸೊಕ್ಕು ಇದ್ದರೆ ನಾನು ಕವುಂಡರ್ ಕಣಯ್ಯ ನನಗೆ ಎಷ್ಟು ಇರುತ್ತದೆ" (ಅದೇ, ಪು. ೪೮) ಎಂಬ ಬರಮಕೌಂಡರ್‌ನ ಮಾತುಗಳು ಜಾತೀಯ ಮೇಲಿನ ಅಧಿಕಾರದ ದರ್ಪವನ್ನು ತಿಳಿಸುತ್ತದೆ. ಕೊನೆಗೆ ಪೋಲೀಸರು ಬಂದು ಮಾತಾಡುವಾಗ ಅಂಬೇಡ್ಕರ್ ಚಿಂತನೆ ಒಳಹೊಕ್ಕು ನ್ಯಾಯವಾದ ತೀರ್ಪು ಸಿಗುವುದನ್ನು ಕಾಣಬಹುದು.

ಶಿಕ್ಷಣ

ಶಿಕ್ಷಣ ಪಡೆದು ಸ್ವಾತಂತ್ರ್ಯ ಹೊಂದಬಹುದೆಂದು ದಲಿತ ಸಣ್ಣ ಕತೆಗಳು ತಿಳಿಸುತ್ತವೆ. ಮೇಲ್ಜಾತಿಯವರು ದಲಿತರನ್ನು ಅವಮಾನಿಸಿದ್ದನ್ನು ಅದನ್ನು ಎದುರಿಸಿ ಹೋರಾಟ ನಡೆಸುವುದನ್ನು ದಲಿತ ಸಣ್ಣಕತೆಗಳು ದಾಖಲಿಸುತ್ತವೆ.

ಬಾಮರವರ 'ಕೊಂಡಾಟ್ಟಮ್' ಕತೆಯಲ್ಲಿ ದಲಿತ ವಿದ್ಯಾರ್ಥಿಗೆ ಎದುರಾಗುವ ಸಮಸ್ಯೆಗಳನ್ನು ಕುರಿತು ವಿವರಿಸುತ್ತದೆ. ಕಾಟ್ಟುಪ್ಪಟ್ಟಿ ಗ್ರಾಮದಲ್ಲಿ ಹತ್ತನೆಯ ತರಗತಿಯಲ್ಲಿ ಉತ್ತಮವಾದ ಅಂಕ ಗಳಿಸಿ ಶಿಕ್ಷಣ ಮುಂದುವರೆಸಲು ಇಚ್ಛಿಸುತ್ತಾನೆ. ಅವನ ತಂದೆ ಹತ್ತಿರ ಯಾವುದೇ ಶಾಲೆಗಳು ಇಲ್ಲದ್ದರಿಂದ ಮತ್ತು ಆರ್ಥಿಕವಾಗಿ ದುರ್ಬಲರಿದ್ದದ್ದರಿಂದ ಮುಂದಿನ ಶಿಕ್ಷಣ ಬೇಡವೆಂದು ಹೇಳುತ್ತಾನೆ. ಆದರೆ ಮರುದಮುತ್ತು ಮತ್ತು ಅವನ ತಾಯಿಯ ಪ್ರಯತ್ನದಿಂದ ಚೆನ್ನಾಗಿ ಓದುವ ದಲಿತ ವಿದ್ಯಾರ್ಥಿಗಳು ಅಂಬೇಡ್ಕರ್ ಸಂಘದ ಸಹಾಯ ಹಸ್ತದಿಂದ ಓದು ಮುಂದುವರೆಸುತ್ತಾನೆ. ಶಾಲೆಯಲ್ಲಿ ಅನೇಕ ಕಷ್ಟಗಳನ್ನು ಅನುಭವಿಸುತ್ತಾನೆ. ತನ್ನನ್ನು ದಲಿತ ಎನ್ನುವ ಕಾರಣಕ್ಕೆ ಒಂದು ಹುಳುವಿನಂತೆ ಈ ಶಿಕ್ಷಕರು ನೋಡುತ್ತಿದ್ದಾರೆ ಎಂಬ ಚಿಂತನೆ

ಅವನಲ್ಲಿ ಬಂದಾಗ ಅವನಲ್ಲಿ ಆಕ್ರೋಶ ಉಕ್ಕುತ್ತದೆ. ಅದರಲ್ಲೂ ಮರುದಮುತ್ತುವಿನ ವಿಜಯಕ್ಕೆ ನಾನೇ ಕಾರಣವೆಂದು ಹೇಳಿದ್ದ ಗಣಿತ ಶಿಕ್ಷಕನ ಕೆಲಸಕ್ಕೆ ಜಾರದ ಕೆಲಸಗಳಿಂದ "ನೋಡುವ ಎಲ್ಲರಿಗೂ ಅವರಿಂದಲೇ ಓದುತ್ತಿದ್ದಾನೆ ಎಂಬುದಾಗಿಯೂ, ಒಬ್ಬ ಎಸ್.ಸಿ. ಹುಡುಗನನ್ನು ಚೆನ್ನಾಗಿ ಓದಿಸಿ ಬಿಟ್ಟಂತೆ ಎಂದು ಅವರು ಹೇಳಿಕೊಂಡು ಅಲೆಯುವುದನ್ನು ಸುಳ್ಳಾಗಿಸಬೇಕು ಎಂದು ಯೋಚಿಸುತ್ತಾನೆ. ಅಂಬೇಡ್ಕರ್ ಹೇಳಿದಂತೆ ಹೋರಾಟ ನಡೆಸಬೇಕೆಂದು ನಿಶ್ಚಯಿಸುತ್ತಾನೆ." (ಬಾಮಾ, ಕೊಂಡಾಟ್ಟಂ, ಪು. ೧೫೧) ಹನ್ನೆರಡನೆಯ ತರಗತಿಯ ಗಣಿತ ಪರೀಕ್ಷೆಯಲ್ಲಿ ಬೇಕಂತಲೇ ಸೋಲನ್ನು ತಂದು ಗಣಿತ ಶಿಕ್ಷಕನಿಗೆ ಅವಮಾನ ಮಾಡುತ್ತಾನೆ. ದಲಿತ ವಿದ್ಯಾರ್ಥಿ ಮರುದಮುತ್ತು ಮೇಲ್ಜಾತಿಯರ ಸುಳ್ಳಿನ ಮುಖವನ್ನು ಕಳಚಲು ಚೆನ್ನಾಗಿ ಓದಿ ಶಿಕ್ಷಕ ಸುಬ್ರಮಣಿ ತೆಗೆದುಕೊಂಡ ಗಣಿತ ಪಾಠವನ್ನು ಬಿಟ್ಟು ಬೇರೆ ಎಲ್ಲಾ ಪಾಠಗಳಲ್ಲೂ ಅಧಿಕ ಅಂಕಗಳನ್ನು ಗಳಿಸುತ್ತಾನೆ. ಶಾಲೆಯ ಪರೀಕ್ಷೆಯ ಫಲಿತಾಂಶ ಕಡಿಮೆ ಆಗಿದ್ದರಿಂದ ಗಣಿತ ಶಿಕ್ಷಕ ಸುಬ್ರಮಣಿಯನ್ನು ಆಡಳಿತ ವ್ಯವಸ್ಥೆ ಖಂಡಿಸುತ್ತದೆ. ಇದರಿಂದ ಮರುದಮುತ್ತ ಸಂತೋಷಿಸುತ್ತಾನೆ. ತಾನು ಚಿಂತಿಸಿದಂತೆ ಗಣಿತ ಪಾಠವನ್ನು ಸರಿಯಾಗಿ ಮಾಡುವೆ ತನ್ನ ಸಮುದಾಯವನ್ನು ತುಚ್ಛವಾಗಿ ನೋಡಿದ ಗಣಿತ ಶಿಕ್ಷಕರ ಮೇಲೆ ಸಿಟ್ಟನ್ನು ತೀರಿಸಿಕೊಳ್ಳುತ್ತಾನೆ.

ಕೇರಿ ಮಕ್ಕಳು ಅಸಹ್ಯವಾದವರು, ದಡ್ಡರು, ಕಪ್ಪಗೆ, ಅಶುದ್ಧವಾಗಿ ಇರುತ್ತಾರೆ ಎಂಬುದು ಮೇಲ್ಜಾತಿಯರ ವ್ಯಾಖ್ಯಾನಗಳು. ಆದರೆ ಅದನ್ನು ತಲೆಕೆಳಗಾಗುವಂತೆ ಮಾಡುತ್ತಾನೆ. ಅವರು ಶುದ್ಧವಾಗಿದ್ದರೂ, ಶೈಕ್ಷಣಿಕವಾಗಿ ಬೆಳವಣಿಗೆ ಹೊಂದಿದರೂ ಅವನ್ನು ಮೇಲ್ಜಾತಿಯವರಿಂದ ಜೀರ್ಣಿಸಿಕೊಳ್ಳಲಾಗದ ಪರಿಸ್ಥಿತಿಯನ್ನು ಕಾಣಬಹುದು.

"ಅವರೆಲ್ಲರೂ ವೆಲ್ಲಾಲರ್ ಕುಲವನ್ನು ಸೇರಿದ ಮಕ್ಕಳು. ನಂತರ ದಾನುಮಲ್ಲೈಯನು ಪುದೂರಿನಿಂದ ಬಂದ ವಿದ್ಯಾರ್ಥಿಗಳು ಹೇಳಿದರು. ಅವರಲ್ಲಿ ಹಲವರು ಎ ಬಿ ಸಿ ಡಿ ಯನ್ನು ಸಂಪೂರ್ಣವಾಗಿ ಹೇಳಲು ಆಗದೆ ಕಣ್‌ಕಣ್ಣು ಬಿಡುತ್ತಿದ್ದರೆ ಕೇರಿಯನ್ನು ಸೇರಿದ ವಿದ್ಯಾರ್ಥಿಗಳು ಎಲ್ಲರೂ ಒಂದು ಅಕ್ಷರವನ್ನು ಬಿಡದೆ ಟಾನ್‌ಟಾನ್ ಎಂದು ಹೇಳಿ ಮುಗಿಸಿದರು. ಅದನ್ನು ಕೇಳಿದ ಶಿಕ್ಷಕರು ಶಿಲೆಯಂತೆ ನಿಂತುಕೊಂಡಿದ್ದರು.

ಅಂದು ಸೆಲ್ಲಮ್ಮೈಯನ್ನು ಬಿಟ್ಟು ಕೇರಿಯಲ್ಲಿ ಇದ್ದ ವಿದ್ಯಾರ್ಥಿಗಳು ಎಲ್ಲರು ಇನ್ಸ್‌ಪೆಕ್ಟರ್‌ರ ಪ್ರಶ್ನೆಗಳಿಗೆ ಟಾನ್ ಟಾನ್... ಎಂದು ಉತ್ತರ ನೀಡಿದ್ದನ್ನು ನೋಡಿ ಷಣ್ಮುಗಂ ಪಿಳ್ಳೈ ಶಿಕ್ಷಕರು ಆಶ್ಚರ್ಯಚಕಿತರಾದರು." (ಬಾಮಾ, ಕೊಂಡಾಟ್ಟಂ, ಪು. ೧೪೮) ಇದು ಹಲವು ಮೇಲ್ಜಾತಿಯನ್ನು ಸೇರಿದ ವಿದ್ಯಾರ್ಥಿಗಳಿಗೆ ಹೊಟ್ಟೆಕಿಚ್ಚು ಎಬ್ಬಿಸಿತು. ಅದಲ್ಲದೆ ಆ ವರ್ಷ ನಡೆದ ಅರ್ಧವಾರ್ಷಿಕ ಪರೀಕ್ಷೆಯಲ್ಲಿ ಎಲ್ಲಾ ಪರೀಕ್ಷೆಗಳಲ್ಲೂ ಅಧಿಕ ಅಂಕಗಳನ್ನು ತೆಗೆದುಕೊಂಡು ವೇಲಪ್ಪನು ಮೊದಲ ದರ್ಜೆಗೆ ಬೆಳೆದುಬಿಟ್ಟನು. ದಲಿತ ವಿದ್ಯಾರ್ಥಿಗಳು ಉನ್ನತ ಸ್ಥಾನ ಏರಿರುವುದನ್ನು ಸಹಿಸದ ಮೇಲ್ಜಾತಿ ವಿದ್ಯಾರ್ಥಿಗಳಲ್ಲಿ ಕೋಪ, ಸಿಟ್ಟು ತರಿಸುವುದನ್ನು ಕಾಣಬಹುದು.

"ಜಾತಿಯ ಅಸಮಾನತೆಗಳಲ್ಲಿ ಪಕ್ಕದ ಊರಿನ ಯುವಕರು ಧೈರ್ಯವಾಗಿ ನಿಂತು ಮುಗಿಸಿದ್ದು, ಅಂದಿನಿಂದ ಇಂದಿನ ತನಕ ಆ ಊರಿನ ಯುವಕರು ತಲೆ ಎತ್ತಿ ಸ್ವ ಮರ್ಯಾದೆಯಿಂದ ಇರುವುದನ್ನು ಈ ಯುವಕರಿಗೆ ತೆಗೆದು ಹೇಳಿ... ನೀವೆಲ್ಲಾ ಓದಿ, ಓದು ನಮ್ಮ ಮೇಲೆ ಹೊರಿಸಲ್ಪಟ್ಟಿರುವ ಸಂಕಟಗಳನ್ನು, ಗುಲಾಮಗಿರಿಯನ್ನು ಹೊಡೆದುಹಾಕಲು ಸಹಾಯವಾಗುತ್ತದೆ." ಎಂದು 'ತುಣಿವು' ಎಂಬ ಸಣ್ಣಕತೆಯು ದಾಖಲಿಸುತ್ತದೆ. ದಲಿತರ ಬಿಡುಗಡೆಗೆ ಶಿಕ್ಷಣ ಅಗತ್ಯ ಎಂಬುದನ್ನು ಪ್ರಬಲವಾಗಿ ವಾದಿಸುತ್ತವೆ.

ಶಿಕ್ಷಣ ಎಲ್ಲರಿಗೂ ತಿಳುವಳಿಕೆ, ಬೆಳವಣಿಗೆ, ಆರ್ಥಿಕವಾಗಿ ಸಹಾಯಕವಾಗುತ್ತದೆ. ಆದರೆ ದಲಿತರಿಗೆ ಶಿಕ್ಷಣವು ಆರ್ಥಿಕ ಪ್ರಗತಿಗೆ ಮತ್ತು ಬಿಡುಗಡೆಯ ಆಧಾರವಾಗಿದೆ. ಜಾತಿಯ ಅಸಮಾನತೆಯ ವಿರುದ್ಧ ಹೋರಾಡಿ, ತಲೆ ಎತ್ತಿ ಜೀವಿಸುವುದಕ್ಕೆ ಶಿಕ್ಷಣ ಸಹಾಯವಾಗುತ್ತದೆ. ದಲಿತರ ಮೇಲೆ ರೂಪಿಸಲಾಗಿರುವ ಗುಲಾಮತನವನ್ನು ಬಿಡಿಸುವ ಆಯಾಮವಾಗಿ ಶಿಕ್ಷಣ ದೊರೆಯಬೇಕೆಂದು ದಲಿತ ಸಣ್ಣಕತೆಗಳು ತಿಳಿಸುತ್ತವೆ.

ಮೀಸಲಾತಿ

"ಜಾತಿ ನಾಶವಾಗಬೇಕು... ಮೀಸಲಾತಿ ಇರಬಾರದು.. ಎಲ್ಲರಿಗೂ ಉದ್ಯೋಗಾವಕಾಶಗಳು ಬರಬೇಕು... ಆಲ್ ವುಡ್ ಗೆಟ್ ಅಪಾಯಿಂಟ್‌ಮೆಂಟ್ ಥಟ್ಸ್ ಆಲ್.

ಮೀಸಲಾತಿ ತೆಗೆದುಬಿಟ್ಟರೆ ಜಾತಿ ಅಳಿದುಬಿಡುತ್ತದೆಯೇ?

ಡೆಫನೆಟ್ಲಿ

ಅಪ್ಪ ಹೆಸರು

ವೇಣುಗೋಪಾಲ್ ನಾಯುಡು

ನಿಮ್ಮ ಅಪ್ಪನ ಹೆಸರಿನ ಹಿಂದೆಯೇ ಜಾತಿಯನ್ನು ಇಟ್ಟಿದ್ದೀರಲ್ಲಾ... ಅದು ನಾಶವಾಗುವುದು ಬೇಡವೇ? ನಂತರ ಹೇಗೆ ಜಾತಿ ಅಳಿಸಿ ಬಿಡುತ್ತೀರಿ? ಇದು ಪ್ರಶ್ನೆಯೇ... ತಪ್ಪು ಅಲ್ಲ" ಎನ್ನುವುದರ ಮೂಲಕ ದಲಿತರ ಮೀಸಲಾತಿಯನ್ನು ವಿರೋಧಿಸುವ ಮೇಲ್ಜಾತಿಯ ಚಿಂತನೆಗೆ ಉತ್ತರ ನೀಡುವುದಾಗಿ 'ಮುರಣ್' ಸಣ್ಣಕತೆ ವಿವರಿಸುತ್ತದೆ.

ಉದ್ಯೋಗ

ಯಾವುದೇ ಮುನ್ನೆಚ್ಚರಿಕೆ ಕ್ರಮ ಇಲ್ಲದೆ ಸೆಪ್ಟಿಕ್ ಟ್ಯಾಂಕ್‌ನಲ್ಲಿ ಕೆಲಸ ಮಾಡುವ ದಲಿತರು ಹಲವು ಚರ್ಮ ರೋಗಗಳಿಗೆ ತುತ್ತಾಗುತ್ತಾರೆ. ಅಲ್ಲದೆ ಯಾವುದೇ ಮುನ್ನೆಚ್ಚರಿಕೆ ಕ್ರಮ ಇರದೆ ಸಾವು ಸಂಭವಿಸಬಹುದೆಂದು ದಲಿತ ಕತೆಗಳು ತಿಳಿಸುತ್ತವೆ.

"ದಪ್ಪದ ಹಗ್ಗವೊಂದನ್ನು ತೆಗೆದು ಸೆಪ್ಟಿಕ್ ಟ್ಯಾಂಕ್‌ನ ಸುತ್ತ ಬಿಗಿಯಾಗಿ ಕಟ್ಟಿದರು. ಕೈಯಲ್ಲಿ ಒಂದು ಚೆಲಿಕೆಯೊಂದಿಗೆ ಮೊದಲು ಚಿನ್ನಸಾಮಿ ಅಜ್ಜ ತೊಟ್ಟಿಯಲ್ಲಿ ಇಳಿಯುವುದನ್ನು

ತಿರುನಾವುಕ್ಕರಸು ನೋಡಿದನು. ಕೆಲವು ನಿಮಿಷದ ನಂತರ ಕಾಟ್ಟವರಾಯನ್ ಹಗ್ಗ ಹಿಡಿದುಕೊಂಡು ತೊಟ್ಟಿಯೊಳಗೆ ಇಳಿದನು. ಸ್ವಲ್ಪ ಸಮಯದಲ್ಲೇ ಅಪ್ಪನ ಸ್ನೇಹಿತರಿಂದ ಶಬ್ದ ಬಂದಿತು. ಅವರಿಬ್ಬರೂ ತೊಟ್ಟಿಯಲ್ಲಿ ಬಗ್ಗಿಕೊಂಡು ಅರಚುತ್ತಾ ಇಳಿಯುವುದನ್ನು ತಿರುನಾವುಕ್ಕರಸು ನೋಡುತ್ತಿದ್ದ. ಅಲ್ಲಿ ಏನು ನಡೆಯುತ್ತಿದೆ ಎಂದು ಅವನಿಗೆ ತಿಳಿಯಲಿಲ್ಲ. ತೊಟ್ಟಿಯ ಪಕ್ಕದಲ್ಲಿ ನಿಂತು ಕೆಲಸ ಮಾಡಿಸುತ್ತಿದ್ದ ಆಳು ಅರಚುತ್ತು ಯಜಮಾನನ ಕಾಣಲು ಓಡಿದ. ಓಡಿದ ವೇಗದಲ್ಲಿಯೇ ಕೆಲವು ಕೆಲಸಗಾರರ ಜೊತೆ ತೊಟ್ಟಿಯ ಪಕ್ಕದಲ್ಲಿ ಓಡಿ ಬಂದನು... ಅಪಾಯದ ಗಂಟೆ ಭಾರಿಸಿಕೊಂಡು ಅಲ್ಲಿ ಅಗ್ನಿಶಾಮಕ ದಳದ ಗಾಡಿಯೊಂದು ಬಂದಿತು. ಸುದ್ದಿ ತಿಳಿದ ಪವಳಮುಂ, ದುರ್ಗಾ ಊರಿನ ಜನ ಬಂದರು... ಅಗ್ನಿಶಾಮಕದಳದ ವೀರರು ಎಲ್ಲರನ್ನು ಸರಿಸಿ ಮುಖಕ್ಕೆ ಮಾಸ್ಕ್ ಧರಿಸಿಕೊಂಡು ತೊಟ್ಟಿಯಲ್ಲಿ ಇಳಿದು ಒಳಗೆ ಇದ್ದವರನ್ನು ಒಬ್ಬೊಬ್ಬರನ್ನಾಗಿ ಎತ್ತಿ ತೊಟ್ಟಿಯ ಪಕ್ಕದಲ್ಲಿ ಸಾಲಾಗಿ ಹಾಕಿದರು. ಗಡಸಾದ ಆ ನಾಲ್ಕು ದೇಹಗಳು ಕಂಪನವಿಲ್ಲದೆ ಮರದ ಕೊರಡುಗಳಾಗಿದ್ದವು." (ಅಳಗಿಯ ಪೆರಿಯವನ್, ದಿಸೈಯುಂಗುಂ ಗುವರ್‌ಗಳ್ ಕೊಂಡ ಗ್ರಾಮಂ, ಪು. ೨೫) ಈ ರೀತಿ ನಿತ್ಯ ಪೌರಕಾರ್ಮಿಕರು ಶೌಚ ಗುಂಡಿಯಲ್ಲಿ ಸಾಯುವುದನ್ನು ನಾವು ಇಂದಿಗೂ ಕಾಣಬಹುದಾಗಿದೆ.

'ಅಂದಿ' ಕತೆಯಲ್ಲಿಯೂ ಸಹ ಒಬ್ಬ ವಯಸ್ಸಾದ ಮುದುಕಿಯು ಯಾರ ಸಹಾಯ ಹಸ್ತ ಬೇಡದೆ ತನ್ನ ಸ್ವಂತ ದುಡಿಮೆಯಲ್ಲಿ ಜೀವಿಸಿ ಸಾಯುತ್ತಾಳೆ. ದುಡಿದು ಅಭ್ಯಾಸವಿರುವ ದಲಿತ ಸಮುದಾಯದವರು ಗ್ರಾಮದ ಜೀವನವನ್ನು ಒಪ್ಪಿಕೊಂಡ ಅವರ ಮನಸ್ಸು ನಗರವನ್ನು ಬಯಸದೆ ಅವರಿಂದ ದುಡಿಯದೆ ಜೀವನ ನಡೆಸಲು ಆಗದು ಎಂಬ ಸತ್ಯವನ್ನು ಬಾಮರವರ 'ಅಂದಿ' ಕತೆ ತಿಳಿಸುತ್ತದೆ.

ಸೀರೆ ಎತ್ತಿ ಸೊಂಟದಲ್ಲಿ ಮಡಿಚಿಕೊಂಡು ಮಲ ಬಂಡಿಯನ್ನು ಬೀದಿಯಲ್ಲಿ ನಿಲ್ಲಿಸಿ ಮನೆ ಮನೆಗಳಿಗೆ ತಕ್ಕಂತೆ ಚೌಟಿನಲ್ಲಿ ಕಕ್ಕಸಿನ ಮಲ ತೆಗೆಯಲು ಹೋಗುತ್ತಾಳೆ. ಒಂದೆರಡು ಮನೆಯಾಗಿದ್ದರೆ ಚಿಕ್ಕ ಪಾತ್ರೆ, ಐದಾರು ಮನೆಗಳಿದ್ದರೆ ದೊಡ್ಡ ಪಾತ್ರೆ. ಮನೆ ಮನೆಯಲ್ಲಿ ಬಳಿದು ತಂದು ಮಲ ಬಂಡಿಯಲ್ಲಿ ಹಾಕುತ್ತಾಳೆ. ಚಳಿಯೋ, ಗಾಳಿಯೋ, ಮಳೆಯೋ, ಬಿಸಿಲೋ ಚಿಟ್ಟೆಯಂತೆ ಹಾರುತ್ತಾಳೆ ಎಂದು ಮನೆ ಮನೆ ಹೋಗಿ ಮಲ ಕುಣಿಗಳಲ್ಲಿ ಕುಂತಿದ್ದ ಮಲಗಳನ್ನು ಚೌಟಿನಿಂದ ಬಳಿದು ಪಾತ್ರೆಯಲ್ಲಿ ತುಂಬಿಸುವುದನ್ನು 'ಸೋರು' ಕತೆಯಲ್ಲಿ ಕಾಣಬಹುದು.

"ಪಾತ್ರೆ ಕೆಳ ಹಾಕಿದ ಕೈಯಿಂದಲೇ ಸೊಂಟದಲ್ಲಿದ್ದ ಎಲೆ ಅಡಿಕೆ ಚೀಲವನ್ನು ತೆಗೆದಳು. ಒಂದು ಅಡಿಕೆಯನ್ನು ಕಡಿದಳು. ಅರ್ಧ ಎಲೆಯನ್ನು ಹರಿದು ಸ್ವಲ್ಪ ಸುಣ್ಣ ಹಚ್ಚಿ ಬಾಯಲ್ಲಿ ತುರಿಸಿದಳೆಂದು" (ವಿಳಿ.ಪಾ.ಇದಯವೇಂದನ್, ಸೋರು, ಪು. ೪) ಮನೆ ಮನೆಗೆ ಮಲ ತೆಗೆಯಲು ಹೋಗುವ ಭಾಗ್ಯಳಿಗೆ ದೇಹದ ತುಂಬಾ ಬೆವರು ಕಟ್ಟಿದಾಗ ಸ್ವಲ್ಪ ಸುಧಾರಿಸಿಕೊಳ್ಳಲು ಎಲೆ-ಅಡಿಕೆ ಹಾಕಿಕೊಳ್ಳುವುದನ್ನು ನೋಡಬಹುದು.

ಹಬ್ಬ-ಹರಿದಿನಗಳಲ್ಲಿ ಭಾಗ್ಯಳು ಮೇಲ್ಜಾತಿಯವರ ಮನೆಯಲ್ಲಿ ಆಹಾರ ಕೇಳುವಾಗ ಅಲ್ಲಿನ ಮೇಲ್ಜಾತಿ ಹೆಂಗಸೊಬ್ಬಳು "ಕೊಡದಿದ್ದರೆ ಏನಲೇ ಮಾಡುತ್ತೀ? ನಾಲ್ಕು ದಿನ ಮಲ ತೆಗೆಯಲು ಬರುವುದಿಲ್ಲ. ಒಣಗಿ ಬಿಡುತ್ತೆ ಅಂತ ನೋಡ್ತೀಯಾ; ನಮ್ಮ ಮನೆಯವರು ಯಾರು ತಿಳಿಯದೆ ಅಧಿಕಾರಿಗಳ ಬಳಿ ಹೇಳಿ ನಿನ್ನ ಕೆಲಸಕ್ಕೆ ಚ್ಯುತಿ ತಂದುಬಿಡುತ್ತೇನೆ ಎಚ್ಚರಿಕೆ" (ಮೇಲಿನದು, ಪು. ೭) ಎಂದು ಕೀಳು ಉದ್ಯೋಗವನ್ನು ಗುರಿ ಮಾಡಿ ಅವರನ್ನು ಹೆದರಿಸುವುದು ಕಾಣಬಹುದು.

ಇವುಗಳಲ್ಲದೆ ತಮಟೆ ಬಾರಿಸುವುದು, ಸಾವಿನ ಸುದ್ದಿ ತಿಳಿಸುವುದು, ಬಟ್ಟೆ ಒಗೆಯುವುದು, ಕಾರ್ಖಾನೆಗಳಲ್ಲಿ ಕೆಲಸ ಮಾಡುವುದು, ವ್ಯವಸಾಯ, ಕೂಲಿ ಕೆಲಸಗಾರರು ಮುಂತಾದವರ ಅಸಹಾಯಕ ಸ್ಥಿತಿಯನ್ನು ದಲಿತ ಸಣ್ಣಕತೆಗಳು ದಾಖಲಿಸುತ್ತದೆ.

ಒಟ್ಟಾರೆ ದಲಿತರು ಬಿಡುಗಡೆ ಹೊಂದಿದರೆ ಮಾತ್ರ ಸಮಾಜ ಮುಂದುವರೆಯುವುದಿಲ್ಲ. ದಲಿತ ಬಿಡುಗಡೆಯ ಜೊತೆಗೆ ದಲಿತ ಸ್ತ್ರೀಯರೂ ದಾಸ್ಯದಿಂದ ಮುಕ್ತಿ ಹೊಂದಿ ಪ್ರಗತಿ ಸಾಧಿಸಬೇಕು. ಶಿಕ್ಷಣ ಪಡೆದು ಉನ್ನತ ಪದವಿಗಳನ್ನು ಗಳಿಸಬೇಕು ಎಂಬುದನ್ನು ದಲಿತ ಸಣ್ಣ ಕತೆಗಳು ತಿಳಿಸುತ್ತವೆ.

ದಲಿತರು ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಚಹರೆಗಳನ್ನು ಕಳೆದುಕೊಂಡು, ಬೇಡದ ಕಸವನ್ನು ದೂರ ಎಸೆಯುವಂತೆ ಊರಿನ ಹೊರಗೆ ಜೀವಿಸುತ್ತಿದ್ದಾರೆ. ದಲಿತರು ಕಳೆದುಕೊಂಡ ಗುರುತನ್ನು ಮರಳಿ ಪಡೆಯುವ ಪ್ರಯತ್ನಕ್ಕೆ ದಲಿತ ಸಣ್ಣಕತೆಗಳು ಸಹಾಯ ಮಾಡುತ್ತವೆ. ಮೇಲ್ಜಾತಿಯವರ ಅವಮಾನ, ಅಸ್ಪೃಶ್ಯತೆ, ಮೈಲಿಗೆ ಎಂಬ ಚಿಂತನೆಯಿಂದ ತುಳಿಯುತ್ತಿದ್ದುದ್ದನ್ನೇ ಬಹಿರಂಗವಾಗಿ ಪ್ರಕಟಿಸುವುದನ್ನು ಒಂದು ರೀತಿಯ ಹೋರಾಟವಾಗಿ ದಲಿತ ಸಣ್ಣಕತೆಗಳು ನಿರೂಪಿಸುತ್ತವೆ. ದಲಿತರ ಸಂಸ್ಕೃತಿಯನ್ನು ಸ್ಥಾಪಿಸಲು ಹಲವು ಕಲಹದ ಕಾರ್ಯಗಳ ಮೂಲಕ ಪ್ರಧಾನ ಸಂಸ್ಕೃತಿಯ ವಿರುದ್ಧವಾಗಿ ದಲಿತರು ಕಾರ್ಯ ನಿರ್ವಹಿಸುವುದನ್ನು ಇಲ್ಲಿನ ದಲಿತ ಸಣ್ಣಕತೆಗಳು ಪ್ರತಿಫಲಿಸುತ್ತವೆ.

ಬಡತನದಿಂದ ಜೀವಿಸುತ್ತಿರುವ ದಲಿತರಿಗೆ ಕಷ್ಟಗಳಿಂದ ಸಂಪೂರ್ಣ ಬಿಡುಗಡೆ ಕಾಣದಿರುವುದನ್ನು ನಾವು ಗಮನಿಸಬಹುದು. ಅವರು ತಿನ್ನುವ ಆಹಾರ, ಅವರು ಹಾಕಿಕೊಳ್ಳುವ ಉಡುಗೆ, ಅವರು ಜೀವಿಸುವ ಪ್ರದೇಶ, ಮೂಲಭೂತ ಸೌಕರ್ಯದ ಜೊತೆ ಶಿಕ್ಷಣದ ಕೊರತೆ ಇವುಗಳಿಂದ ದಲಿತರು ಇಂದಿಗೂ ಪ್ರಗತಿ ಕಂಡಿಲ್ಲ. ಇದನ್ನು ಸಣ್ಣಕತೆಗಳು ದಾಖಲಿಸುತ್ತ ದಲಿತರಲ್ಲಿ ಜಾಗೃತಿ ಮೂಡಿಸಿ ಈ ಸ್ಥಿತಿ ಬದಲಾಗಬೇಕೆಂದು ಪ್ರಯತ್ನಿಸುತ್ತದೆ.

ದಲಿತರಲ್ಲಿರುವ ಜಾತಿ ಶೋಷಣೆಯನ್ನು ತಿಳಿಸುತ್ತಾ ಮೊದಲು ದಲಿತರು ಒಗ್ಗಟ್ಟಾಗಿ ಮೇಲ್ಜಾತಿ ಸಮುದಾಯ, ಮೇಲಾಧಿಕಾರದ ವಿರುದ್ಧ ಹೋರಾಡಬೇಕೆಂದು ತಿಳಿಸುತ್ತದೆ. ಅದರೊಂದಿಗೆ ದಲಿತ ಸ್ತ್ರೀಯರು ಲೈಂಗಿಕವಾಗಿ ಮೇಲ್ಜಾತಿಯವರಿಗೆ ಆಹಾರವಾಗುವುದನ್ನು ದಲಿತ ಸಣ್ಣಕತೆಗಳು ಪ್ರಬಲವಾಗಿ ಖಂಡಿಸುತ್ತವೆ. ಯಾವುದೇ ಆಸರೆ ಇಲ್ಲದ ದಲಿತ ಸ್ತ್ರೀಯರು ಹೇಗೆ ಸಂಪೂರ್ಣ ಅವನತಿಯನ್ನು ಹೊಂದುತ್ತಾರೆ ಎಂಬುದನ್ನು ದಲಿತ ಸಣ್ಣಕತೆಗಳು ದಾಖಲಿಸುತ್ತವೆ.

ಅಧ್ಯಾಯ: ಆರು

ನಾಟಕಗಳು

ಮನುಷ್ಯನು ನಾಗರಿಕನಾಗಿ ಬದಲಾದಾಗಿನಿಂದಲೂ ನಾಟಕ ಎಂಬ ಪ್ರಕ್ರಿಯೆ ಆರಂಭವಾಗಿದೆ ಎಂದು ಹೇಳಬಹುದು. ಅಂದರೆ ವ್ಯಕ್ತಿ ನಿರ್ದಿಷ್ಟವಾದ ಒಂದು ಪರಿಸರದಲ್ಲಿ ಕೆಲವು ನೀತಿ ನಿಯಮಗಳಿಗೆ ಅನುಸಾರವಾಗಿ ನಡೆದುಕೊಳ್ಳುತ್ತಾನೆ. ಮತ್ತು ತನ್ನ ನೈಜ ವರ್ತನೆಗೆ ಅದು ವಿಭಿನ್ನವಾಗಿರುತ್ತದೆ. ಈ ರೀತಿಯ ನಟನೆಯು ಮುಂದೆ ನಾಟಕ ಪ್ರಕಾರವಾಗಿ ರೂಪುಗೊಂಡಿರಬಹುದು. ನಾಟಕ ಎಂಬ ಪ್ರದರ್ಶನ ಕಲೆಯು ಮೊದಲು ಮನರಂಜನೆಗಾಗಿ ಹುಟ್ಟಿಕೊಂಡಿತು. ನಂತರದಲ್ಲಿ ಇದೊಂದು ಗಂಭೀರ ಪ್ರಕಾರವಾಗಿ ಮಾರ್ಪಟ್ಟಿತು. ಕೆಲವೊಮ್ಮೆ ನಾಟಕವು ಪ್ರಚಾರ ಮಾಧ್ಯಮವಾಗಿಯೂ ಕಾರ್ಯ ನಿರ್ವಹಿಸುತ್ತದೆ. ಅಲ್ಲದೆ ಸಮಾಜದಲ್ಲಿನ ಅಂಕು-ಡೊಂಕುಗಳು ಜನರಿಗೆ ಬೇಕಾದ ಸಮಾನತೆ ಮುಂತಾದ ಅಂಶಗಳು ನಾಟಕಗಳಲ್ಲಿ ಪ್ರದರ್ಶಿತವಾಗುತ್ತವೆ. ಪ್ರದರ್ಶನಗೊಂಡ ನಾಟಕಗಳೆಲ್ಲವೂ ಪುಸ್ತಕ ರೂಪದಲ್ಲಿ ಅಚ್ಚಾಗುವುದಿಲ್ಲ. ಅಂತೆಯೇ ಪ್ರಕಟಗೊಂಡ ಎಲ್ಲಾ ನಾಟಕ ಕೃತಿಗಳು ಪ್ರದರ್ಶನಗೊಂಡಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕಾಗುತ್ತದೆ.

ನಾಟಕ ಕೃತಿಯು ಕೇವಲ ಒಂದು ಕೃತಿಯಾಗಿರದೆ, ಆ ಕೃತಿ ರಚನೆಯಾದ ಕಾಲದಲ್ಲಿ ಪ್ರಚಲಿತದಲ್ಲಿದ್ದ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳ ಜೊತೆ ಸಂಸ್ಕೃತಿಯ ಆಚರಣೆಗಳ ವಿಚಾರಗಳನ್ನು ಒಳಗೊಂಡಿರುತ್ತದೆ. ಕವಿತೆ, ಕಾದಂಬರಿ, ಸಣ್ಣಕಥೆ ಮುಂತಾದ ಸಾಹಿತ್ಯ ಪ್ರಕಾರಗಳು ಕೃತಿಗಳಾಗಿ ಮಾತ್ರ ಅಕ್ಷರ ರೂಪದಲ್ಲಿ ವಸ್ತು ವಿಷಯಗಳನ್ನು ತಿಳಿಸುತ್ತವೆ. ಆದರೆ ನಾಟಕವು ಕೃತಿಯಾಗಿ ವಸ್ತು ವಿಷಯಗಳನ್ನು ತಿಳಿಸುವುದರೊಂದಿಗೆ ಅದು ಪ್ರದರ್ಶನವಾದಾಗ ಹಲವು ರೀತಿ ಹೊಸ ಪರಿಣಾಮ/ಪ್ರಯೋಗಗಳನ್ನು ಹೊಂದುತ್ತದೆ. ನಾಟಕ ಕೃತಿಯಲ್ಲಿ ಗೌಣವಾಗಿದ್ದ ಹಲವು ಸಂಗತಿಗಳು ಪ್ರದರ್ಶನಗೊಂಡಾಗ ಸೂಕ್ಷ್ಮ ಸಂಗತಿಗಳ ಮೇಲೂ ಬೆಳಕು ಚೆಲ್ಲುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ-ತಮಿಳಿನಲ್ಲಿ ನಾಟಕ ಕೃತಿಯು ಪ್ರಕಟಗೊಂಡು, ಪ್ರದರ್ಶನಗೊಂಡ ದಲಿತ ನಾಟಕಗಳ ಅಧ್ಯಯನವನ್ನು ಮಾಡುವುದು ಇಲ್ಲಿಯ ಉದ್ದೇಶವಾಗಿದೆ. ಕನ್ನಡ-ತಮಿಳು ನಾಟಕಗಳಲ್ಲಿ ದಲಿತ ನಾಟಕಗಳ ಮೂಲಕ ಪ್ರಕಟ ಮತ್ತು ಪ್ರದರ್ಶನಗೊಂಡ

ಸಾಹಿತ್ಯ ರಂಗಕೃತಿಗಳಲ್ಲಿ ಸಾಂಸ್ಕೃತಿಕ ಅಂಶಗಳನ್ನು ಅಧ್ಯಯನ ಮಾಡುವುದು ಇಲ್ಲಿನ ಉದ್ದೇಶವಾಗಿದೆ.

ಕನ್ನಡದಲ್ಲಿ ದಲಿತ ನಾಟಕಗಳು

ನಾಟಕ ಎಂಬ ಪ್ರದರ್ಶನ ಕಲೆಯು ಮನುಷ್ಯನ ಮತ, ಜಾತಿ, ವರ್ಣ, ಕಸುಬುಗಳನ್ನು ಪ್ರಕಟಿಸುತ್ತದೆ. ಸಮಾಜದ ಬದಲಾವಣೆಗೆ ತಕ್ಕಂತೆ ಕಲೆ ಮತ್ತು ಸಾಹಿತ್ಯವು ಹೊಸ ಚಿಂತನೆಯನ್ನು ಪ್ರಯೋಗಗಳ ಮೂಲಕ ವ್ಯಕ್ತಪಡಿಸಿರುವುದನ್ನು ಆಧುನಿಕ ರಂಗ ಪ್ರಯೋಗಗಳ ಮೂಲಕ ಕಾಣಬಹುದು. ಸಮಾಜದಲ್ಲಿ ಮೇಲು-ಕೀಳು ಎಂಬ ಅಂಶ ಇರುವುದರಿಂದ ಹಲವು ರೀತಿಯ ಏರುಪೇರುಗಳು, ಶ್ರೇಣೀಕರಣಗಳು ಸೃಷ್ಟಿಯಾಗಿವೆ. ಅದರಲ್ಲಿ ಬ್ರಾಹ್ಮಣ-ಶೂದ್ರ, ಗಂಡು-ಹೆಣ್ಣು ಸ್ಪೃಶ್ಯರು-ಅಸ್ಪೃಶ್ಯರು, ಪ್ರಧಾನ-ಅಧೀನ ಎಂಬ ವಿರೋಧಗಳು ಸೃಷ್ಟಿಯಾಗಿವೆ. ಹೀಗೆ ಹಲವು ರೀತಿಯಲ್ಲಿ ಮೇಲು-ಕೀಳು ಎಂಬ ವಿಭಾಗಿಸಿರುವ ಸ್ಥಳದಲ್ಲಿ ಸಮಾನತೆ ಅಂಶವನ್ನು ಪ್ರಬಲವಾಗಿ ಪ್ರಕಟಿಸುವ ಕಲಾ ಮಾಧ್ಯಮವಾಗಿ ನಾಟಕ ಸಾಹಿತ್ಯವು ರೂಪುಗೊಂಡಿದೆ.

ಭಾರತದಲ್ಲಿ ನಾಟಕ ಸಾಹಿತ್ಯದ ಇತಿಹಾಸವನ್ನು ಗಮನಿಸಿದಾಗ ಅದು ಭರತನ 'ನಾಟ್ಯ ಶಾಸ್ತ್ರ' ಮತ್ತು ಕಾಳಿದಾಸನ ಕೃತಿಗಳಿಂದ ಆರಂಭವಾಗಿರುವುದು ತಿಳಿದು ಬರುತ್ತದೆ. ಆದರೆ ಕನ್ನಡದಲ್ಲಿ ದಲಿತ ರಂಗಭೂಮಿ ಎಂದು ಗುರುತಿಸುವುದಾದರೆ ಅದು ಜಾನಪದ ರಂಗಭೂಮಿ ಎಂದೇ ಹೇಳಬೇಕು. ಜಾನಪದ ರಂಗಭೂಮಿಯಲ್ಲಿಯೇ ದಲಿತ ಸಂವೇದನೆಯನ್ನು ಹುಡುಕುವ ಪ್ರಯತ್ನವನ್ನು ಹಲವು ವಿದ್ವಾಂಸರುಗಳು ಸಂಶೋಧನೆಗಳಲ್ಲಿ ನಡೆಸಿರುವುದು ಕಾಣಬಹುದು. ನಂತರದಲ್ಲಿ ದಲಿತ ನಾಟಕ ಹೆಚ್ಚು ಪ್ರಚಾರ ಪಡೆದದ್ದು ಬೀದಿ ನಾಟಕಗಳ ಮೂಲಕ. "ಬೀದಿ ನಾಟಕ ಅತ್ಯಂತ ಪ್ರಭಾವಿ ಮಾಧ್ಯಮ, ದಲಿತ-ಬಂಡಾಯದವರು ಈ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಂಡರು ಸಾಮಾಜಿಕ ರಾಜಕೀಯ ಸಮಸ್ಯೆಗಳ ವಿಶ್ಲೇಷಣೆ ಮತ್ತು ಸಮಸ್ಯೆಗಳನ್ನು ಪರಿಚಯಿಸುವ ಹಾಗೂ ಪರಿಹಾರ ಮಾರ್ಗಗಳನ್ನು ಹುಡುಕುವ ಮತ್ತು ಜನ ಸಾಮಾನ್ಯರಿಗೆ ತಿಳಿಸಿಕೊಡುವ ಕೆಲಸವನ್ನು ಮಾಡಿದರು. ಹೀಗಾಗಿ ಈ ಮಾಧ್ಯಮ ಸಾಮಾನ್ಯ ಜನತೆಗೆ ತೀರಾ ಹತ್ತಿರವಾಯಿತು. ರಂಗಮಂಟಪವನ್ನು ಬಿಟ್ಟು ಬೀದಿಗಿಳಿದದ್ದೇ ಒಂದು ಮಹತ್ವದ ಬದಲಾವಣೆಯಾಗಿತ್ತು. ಸಮಸ್ಯೆಯ ಅರಿವು ಅಥವಾ ಸಾಮಾಜಿಕ ಪ್ರಜ್ಞೆಯನ್ನು ಬಿತ್ತುವಲ್ಲಿ ಈ ಮಾಧ್ಯಮದ ಪಾತ್ರ ಹಿರಿದು" (ಅರವಿಂದ ಮಾಲಗತ್ತಿ, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಪು. ೩೭೨-೭೩) ಎಂದು ವಿವರಿಸುವುದನ್ನು ಹೇಳಿದ್ದಾರೆ.

ಕನ್ನಡ ದಲಿತ ನಾಟಕಗಳು ಹೆಚ್ಚು ಬೀದಿನಾಟಕಗಳನ್ನೇ ಅವಲಂಬಿಸಿದ್ದವು. "ಆರಂಭದಲ್ಲಿ ದಲಿತ ಚಳುವಳಿಗೆ ಬೀದಿ ನಾಟಕ ಬೆನ್ನೆಲುಬಿನಂತೆ ಕೆಲಸ ಮಾಡಿ ಜನತೆಯನ್ನು ಬಡಿದೆಬ್ಬಿಸಲು ಕಾರಣವಾಯಿತು. ಬೀದಿ ನಾಟಕಗಳಿಗಿಂತ ಬೀದಿ ಹಾಡುಗಳು ಅಥವಾ ಹೋರಾಟದ ಹಾಡುಗಳು ಹೆಚ್ಚು ಜನಪ್ರಿಯತೆಯನ್ನು ಗಳಿಸಿದ್ದವು. ದಲಿತ ಜಾಥಾಗಳಲ್ಲಿ ಕಾಲ್ನಡಿಗೆ ಜಾಥಾ, ಭೀಮ್

ಮಾರ್ಚ್, ಅಂಬೇಡ್ಕರ್ ಜ್ಯೋತಿ, ಇಂಥದೆಲ್ಲ ಬೀದಿನಾಟಕಗಳು ಹಾಗೂ ಹೋರಾಟದ ಹಾಡುಗಳೇ ಜೀವಾಳದಂತೆ ಕೆಲಸವನ್ನು ಮಾಡಿವೆ" (ದಲಿತ ಸಾಹಿತ್ಯ, ಅರವಿಂದ ಮಾಲಗತ್ತಿ, ಪು. ೨೫೨) ಎಂಬುದಾಗಿ ಮಾಲಗತ್ತಿಯವರು ತಿಳಿಸುತ್ತಾರೆ. ಕನ್ನಡ ದಲಿತ ನಾಟಕಗಳ ಚಿಂತನೆ ಕುರಿತ ಚರ್ಚೆಗಳು ಈಗಾಗಲೇ ಸಾಹಿತ್ಯದಲ್ಲಿ ನಡೆದಿವೆ. ಸಿದ್ಧಲಿಂಗಯ್ಯನವರ 'ಏಕಲವ್ಯ', 'ನೆಲಸಮ', 'ಪಂಚಮ', ಮಾಲಗತ್ತಿಯವರ 'ಸಮುದ್ರದೊಳಗಣ ಉಪ್ಪು', 'ಮಹಾಮಸ್ತಕಾಭಿಷೇಕ', ಎಂ.ಸಿ.ರಾಮುರವರ 'ದಲಿತನ ಮತಾಂತರ ಪ್ರಸಂಗ', ಎಲ್ ಹನುಮಂತಯ್ಯನವರ 'ಅಂಬೇಡ್ಕರ', ಕೆ.ಎಚ್.ಪ್ರಭುರವರ 'ಹೊಲೆಯ ಬಂದ ಹೊಲೆಯ' ಮುಂತಾದ ಹಲವು ನಾಟಕಗಳು ಕನ್ನಡದಲ್ಲಿ ಪ್ರಕಟಗೊಂಡಿದೆ. ಅದಲ್ಲದೆ 'ಒಡಲಾಳ', 'ಮಾರಿಕೊಂಡವರು ಮುಂತಾದ ಕಥನಗಳು ರೂಪಾಂತರವಾಗಿ ನಾಟಕಗಳಾಗಿ ಪ್ರಸಿದ್ಧಿ ಪಡೆದಿವೆ. 'ಬೆಲ್ಚಿ', 'ಪಂಚಮ', 'ನೆಲೆಸಮ' ನಾಟಕಗಳು ಬೀದಿ ನಾಟಕಗಳಾಗಿ ಹಲವೆಡೆ ಪ್ರದರ್ಶನಗೊಂಡಿವೆ.

ಸಿದ್ಧಲಿಂಗಯ್ಯನವರು 'ಏಕಲವ್ಯ', 'ಪಂಚಮ', 'ನೆಲಸಮ' ಎಂಬ ಮೂರು ನಾಟಕಗಳನ್ನು ರಚಿಸಿದ್ದಾರೆ. ಪೌರಾಣಿಕ ವಸ್ತು ವಿಷಯವನ್ನು ತೆಗೆದುಕೊಂಡು ರಚಿಸಿದ ನಾಟಕ 'ಏಕಲವ್ಯ'. ಗುರು ಇಲ್ಲದೆ ಶ್ರದ್ಧೆಯಿಂದ ವಿದ್ಯೆ ಕಲಿತ ಏಕಲವ್ಯ ತನ್ನ ಮಾನಸಿಕ ಗುರುವಾದ ದ್ರೋಣರು ಗುರುದಕ್ಷಿಣೆಯಾಗಿ ಏಕಲವ್ಯನ ಹೆಬ್ಬೆರಳನ್ನು ಕೇಳಿದ ಕೂಡಲೇ ಕತ್ತರಿಸಿಕೊಡುತ್ತಾನೆ. ಇದು ಪೌರಾಣಿಕ ಕಥೆ. ಆದರೆ ಸಿದ್ಧಲಿಂಗಯ್ಯನವರು ಕೆಲವು ಮಾರ್ಪಾಡನ್ನು ಮಾಡಿಕೊಳ್ಳುತ್ತಾರೆ. ಶಬ್ದವೇಧಿ ವಿದ್ಯೆ ಕಲಿತ ಏಕಲವ್ಯನು ಗುರು ದಕ್ಷಿಣೆಯಾಗಿ ಹೆಬ್ಬೆರಳನ್ನು ಕತ್ತರಿಸಿಕೊಟ್ಟ ನಂತರವೂ ತನ್ನ ಇನ್ನೊಂದು ಕೈಯಿಂದ ಬಿಲ್ವಿದ್ಯೆಯನ್ನು ಪ್ರದರ್ಶಿಸಲು ಆರಂಭಿಸುತ್ತಾನೆ. ನಾಟಕವು ಶೋಷಿತ ಜನ ಸಮುದಾಯದ ಪ್ರಜ್ಞಾ ಪೂರ್ವಕವಾದ ಪ್ರತಿಭಟನೆಯ ಧೋರಣೆಯನ್ನು ತೋರುತ್ತದೆ. 'ಪಂಚಮ' ಹಿಂದೂ ಜಾತಿ ವ್ಯವಸ್ಥೆಯಲ್ಲಿ ನಾಲ್ಕು ವರ್ಣಗಳನ್ನು ಹೊರತುಪಡಿಸಿ ಅಸ್ಪೃಶ್ಯರಾಗಿರುವವರು ದಲಿತರು. ಆದ್ದರಿಂದ ಇವರನ್ನು ಈ ಮೇಲಿನ ನಾಲ್ಕು ವರ್ಣಗಳಿಗಿಂತ ಕೀಳಾಗಿ ಕಾಣುತ್ತ ಪಂಚಮರು ಎನ್ನಲಾಗಿದೆ. ಅಲ್ಲದೆ ಉದ್ಯೋಗಕ್ಕಾಗಿ ಬಂದು ಮೌಖಿಕ ಪರೀಕ್ಷೆ ಎದುರಿಸುವ ಐದು ದಲಿತ ಯುವಕರನ್ನು ಪ್ರತಿನಿಧಿಸುತ್ತದೆ.

ಮಾಲಗತ್ತಿಯವರ 'ಮಹಾಮಸ್ತಾಭಿಸೇಕ' ನಾಟಕದಲ್ಲಿ ಸಮಾಜದಲ್ಲಿರುವ ಅಸಮಾನತೆ, ಭ್ರಷ್ಟತೆ, ಜಾತೀಯತೆ, ಹಿಂಸಾಚಾರಗಳು ಮುಂತಾದ ಅಂಶಗಳನ್ನು ಕಾಣುತ್ತೇವೆ. 'ಸಮುದ್ರದೊಳಗಣ ಉಪ್ಪು' ನಾಟಕವು ದಲಿತರಿಗೆ ನೀಡುವ ಮೀಸಲಾತಿಯನ್ನು ಕುರಿತು ತಿಳಿಸುತ್ತದೆ. ಎಲ್.ಹನುಮಂತಯ್ಯ ರವರ 'ಅಂಬೇಡ್ಕರ್' ನಾಟಕವು ಅಂಬೇಡ್ಕರ್ ಜೀವನ ಚರಿತ್ರೆಯನ್ನು ಆಧರಿಸಿದ ಚಾರಿತ್ರಿಕ ನಾಟಕವಾಗಿದೆ. ಅಂಬೇಡ್ಕರ್ ದಲಿತರಿಗಾಗಿ ನಡೆಸಿದ ಹೋರಾಟಗಳನ್ನು ವಿವರಿಸುತ್ತದೆ. ಎಂ.ಸಿ.ರಾಮು ಅವರ 'ದಲಿತನ ಮತಾಂತರ ಪ್ರಸಂಗ' ನಾಟಕವು ದಲಿತರು ಮತಾಂತರಗೊಂಡ ನಂತರ ಅವನು ಜೀವನದಲ್ಲಿ ಎದುರಿಸುವ ಸಮಸ್ಯೆಗಳನ್ನು ಕುರಿತು ಬೆಳಕು ಚೆಲ್ಲುತ್ತದೆ.

ತಮಿಳಿನಲ್ಲಿ ದಲಿತ ನಾಟಕಗಳು

ತಮಿಳಿನಲ್ಲಿ ನಾಟಕಗಳ ಉದಯವನ್ನು ನೋಡಿದಾಗ ನಾಟಕ ಕಲೆ ಪ್ರಾಚೀನವಾದ ಇತಿಹಾಸವನ್ನು ಹೊಂದಿದೆ. ಸಂಗಂ ಸಾಹಿತ್ಯದಿಂದಲೂ ನಾಟಕದ ಪ್ರಾಚೀನತೆಯನ್ನು ತಮಿಳು ವಿದ್ವಾಂಸರು ಗುರುತಿಸುತ್ತಾರೆ, 'ಶಿಲಪ್ಪಾದಿಗಾರಂ', 'ಮಣಿಮೇಗಲೈ' ಮುಂತಾದ ಕಾವ್ಯಗಳು ಸಹ ನಾಟಕಗಳಾಗಿ ಪ್ರಸಿದ್ಧಿ ಪಡೆದಿದ್ದವು ಎಂದು ತಿಳಿಸುತ್ತಾರೆ. ಇದು ಒಂದು ಕಡೆಯಾದರೆ ಮತ್ತೊಂದು ಕಡೆ ಜನಪದರನ್ನು ರಂಜಿಸಲು ಹಲವು ಬಗೆಯ 'ಕೂತ್ತು' (ಒಂದು ರೀತಿಯ ನಟನೆ, ನರ್ತನೆ)ಗಳು ಕಂಡು ಬರುತ್ತವೆ. ಈ 'ಕೂತ್ತು' ಮುಂದೆ ಜಾನಪದ ನಾಟಕವಾಗಿ ಪ್ರಸಿದ್ಧಿ ಪಡೆದಿರಬಹುದು.

ಪ್ರಾಚೀನ ತಮಿಳಿನಲ್ಲಿದ್ದ ನಾಟಕಗಳು

ಹಲವು ಬಗೆಯ ಕೂತ್ತುಗಳು

ಮರಪಾಪ್ಪಾವೈ ಕೂತ್ತು (ಮರದ ಗೊಂಬೆಯ ನರ್ತನ)

ಮರದ ತುಂಡುಗಳಿಂದ ಗೊಂಬೆಗಳನ್ನು ತಯಾರಿಸಿ ಅವುಗಳನ್ನು ನಟಿಸುವಂತೆ ಮಾಡಿ ಅದರ ಮೂಲಕ ಕಥೆ ಹೇಳಿಸುವುದನ್ನು ಮರಪಾಪ್ಪಾವೈ ಕೂತ್ತು ಎನ್ನುತ್ತಾರೆ. ಸಾಮಾನ್ಯವಾಗಿ 'ನುಗ್ಗೆ ಮರ'ವನ್ನು ಈ ಗೊಂಬೆ ತಯಾರಿಕೆಯಲ್ಲಿ ಬಳಸುತ್ತಾರೆ. ೧.೫ ಅಡಿಯಿಂದ ೩ ಅಡಿಯವರೆಗೆ ಎತ್ತರವಿದ್ದು ೩ ರಿಂದ ೧೦ ಕೆ.ಜಿ. ಯವರೆಗೆ ಈ ಗೊಂಬೆಗಳ ತೂಕ ಇರುತ್ತದೆ. ಮುಂದೆ ಮಣ್ಣಿನಿಂದಲೂ, ಬಟ್ಟೆಯ ಮೂಲಕ ಗೊಂಬೆಗಳನ್ನು ಮಾಡಿ ಅದಕ್ಕೆ ಸಣ್ಣ ಹಗ್ಗ ಕಟ್ಟಿ ಕಾಣದಂತೆ ಮರೆಯಲ್ಲಿದ್ದು ಅತ್ಯಂತ ಸಾಮರ್ಥ್ಯದಿಂದ ಆ ಗೊಂಬೆಗಳನ್ನು ಆಡಿಸಲಾಗುತ್ತದೆ. ಇದಕ್ಕೆ **'ಬೊಮ್ಮಲಾಟ್ಟಂ'** ಎಂದು ಸಹ ಕರೆಯುತ್ತಾರೆ.

ತೋಲ್‌ಪಾವೈಕ್ ಕೂತ್ತು (ತೊಗಲು ಗೊಂಬೆ ಆಟ)

ಚರ್ಮದಿಂದ ಗೊಂಬೆಗಳನ್ನು ತಯಾರಿಸಿ ಆಡಿಸುವುದು ತೊಗಲು ಗೊಂಬೆ ಆಟ. ನಂತರ ಪ್ರೇಕ್ಷಕರ ಮುಂದೆ ಒಂದು ಬಿಳಿಯಾದ ವಸ್ತ್ರವನ್ನು (ಪರದೆ) ಹಾಕಿ ಆ ಪರದೆಯ ಹಿಂದೆ ಒಂದು ದೀಪವನ್ನಿಟ್ಟು ಅದರ ಬೆಳಕಿನಲ್ಲಿ ಕಾಗದದಿಂದ, ಅಟ್ಟೆಗಳಿಂದ ಮಾಡಿದ ಗೊಂಬೆಗಳನ್ನು ಆಡಿಸಲಾಯಿತು. ಇದಕ್ಕೆ ನಿಳಲ್ ಪಾವೈ ಕೂತ್ತು (ನೆರಳು ಗೊಂಬೆ ಆಟ) ಎನ್ನುತ್ತಾರೆ. ಈ ರೀತಿಯಾಗಿ ಗೊಂಬೆಗಳು ಇದ್ದ ಸ್ಥಳದಲ್ಲಿ ಮನುಷ್ಯನು ಬಂದನು. ಅವನಿಗೆ ಬಣ್ಣ ಹಚ್ಚಿ ಆಡಿಸುವ ಆಲೋಚನೆ ಬಂದಿತು. ಮುಂದೆ ಅದುವೆ ನಾಟಕವಾಗಿ ಪರಿಣಮಿಸಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ನಾಟಕ ಎಂಬ ಕಲೆ ತಮಿಳು ಪ್ರದೇಶದಲ್ಲಿ ಈಗಾಗಲೇ ಇತ್ತು, ಆದರೆ ಅದು ಕಾಲಕ್ಕೆ ತಕ್ಕಂತೆ ತನ್ನ ಚೌಕಟ್ಟಿನೊಳಗೆ ಇದ್ದಿತು. ಇದರ ನಂತರ ತಮಿಳು ನಾಟಕ ಚರಿತ್ರೆಯನ್ನು ಅವಲೋಕಿಸಿದಾಗ ಹದಿನಾರು, ಹದಿನೇಳು, ಹದಿನೆಂಟನೆಯ ಶತಮಾನಗಳು ಅಕ್ಷರ ರೂಪದಲ್ಲಿ ದಾಖಲಾಗಿರುವುದು ಕಂಡು ಬರುತ್ತದೆ.

ಜಾನಪದ ಕಲೆಗಳಾದ ಪಳ್ಳು, ನೊಂಡಿ, ಕುಳುವ, ಕೀರ್ತನೈ ಮುಂತಾದವುಗಳು ನಾಟಕ ಪ್ರಕಾರಗಳಾಗಿ ಜನಸಾಮಾನ್ಯರ ಮನರಂಜನೆಯ ಭಾಗಗಳಾಗಿದ್ದವು.

ಪಳ್ಳು ನಾಟಕಗಳು: ರಾಜರನ್ನು ವೈಭವೀಕರಿಸಿ ಹಾಡುತ್ತಿದ್ದ ಸ್ಥಿತಿ ಬದಲಾಗಿ, ಜನ ಸಾಮಾನ್ಯರನ್ನು ಕುರಿತು ಹಾಡಲಾಯಿತು. ರಂಗ ಪ್ರದರ್ಶನ ಮತ್ತು ಕೃತಿಯ ರೂಪದಲ್ಲಿ ಕಾಣಿಸಿಕೊಂಡ ಮೊದಲ ನಾಟಕ ಪಳ್ಳು ನಾಟಕಗಳಾಗಿವೆ. ಹದಿನಾರನೆಯ ಶತಮಾನದಲ್ಲಿ ಪ್ರಚಲಿತದಲ್ಲಿದ್ದ ನಾಟಕ ಪ್ರಕಾರ. ಪಳ್ಳು ಎಂದರೆ ಪಳ್ಳರ್ ಜಾತಿಯ ಜನರ ಜೀವನದ ರೀತಿ-ನೀತಿಗಳನ್ನು ಕಥಾ ರೂಪದಲ್ಲಿ ತಿಳಿಸುವ ನಾಟಕ ಸಾಹಿತ್ಯವಾಗಿದೆ. ರಾಜರು, ದೇವರನ್ನು ಬಿಟ್ಟು ಸಮಾಜದ ಕೆಳ ಮಟ್ಟದ ಜನರನ್ನು ಪ್ರಧಾನ ಪಾತ್ರವಾಗಿ ಬದಲಾಯಿಸುವುದು ಆಶ್ಚರ್ಯದ ಸಂಗತಿಯಾಗಿದೆ. ಸಾಮಾನ್ಯವಾಗಿ ಪಳ್ಳು ನಾಟಕಗಳಲ್ಲಿ ಒಬ್ಬ ಪಳ್ಳನಿಗೆ ಇಬ್ಬರು ಹೆಂಡತಿಯರು ಇರುತ್ತಾರೆ. ಜಮೀನುದಾರನು ಪಳ್ಳರ ಬೀದಿಗೆ ಬಂದಾಗ ಪಳ್ಳನ ಹಿರಿಯ ಹೆಂಡತಿಯು ತನ್ನ ಗಂಡ ಕಿರಿಯ ಹೆಂಡತಿಯ ಸೌಂದರ್ಯದಲ್ಲಿ ಮೋಹಗೊಂಡು ತನ್ನನ್ನು ಕಡೆಗಣಿಸಿ ವ್ಯವಸಾಯವನ್ನು ಮಾಡುತ್ತಿಲ್ಲವೆಂದು ಹೇಳುತ್ತಾಳೆ. ಆಗ ಜಮೀನುದಾರನು ಪಳ್ಳನಿಗೆ ಎಚ್ಚರಿಸಿ ವ್ಯವಸಾಯ ಮಾಡುವಂತೆ ಸೂಚಿಸುತ್ತಾನೆ. ಆದರೆ ಪಳ್ಳನು ಜಮೀನುದಾರನ ಎದುರು ಸರಿ ಎಂದು ಮತ್ತೆ ತನ್ನ ಕಿರಿಯ ಹೆಂಡತಿಯ ಬಳಿಯಲ್ಲೇ ಇರುತ್ತಾನೆ. ಇದನ್ನು ತಿಳಿದ ಜಮೀನುದಾರನು ಕೊನೆಗೆ ಪಳ್ಳನನ್ನು ಕಟ್ಟಿ ಹಾಕಿ ಹೊಡೆಯುತ್ತಾನೆ. ಆಗ ಪಳ್ಳನ ಹಿರಿಯ ಹೆಂಡತಿ ಪಳ್ಳಿಯು ಹೊಡೆಯಬೇಡಿ ಎಂದು ಮೊರೆ ಇಡುತ್ತಾಳೆ. ನಂತರ ಜಮೀನುದಾರನು ಪಳ್ಳನನ್ನು ಬಿಡುಗಡೆಗೊಳಿಸುತ್ತಾನೆ. ನಂತರ ಪಳ್ಳನು ಮತ್ತು ಅವನ ಇಬ್ಬರು ಹೆಂಡತಿಯರು ಕೂಡಿ ವ್ಯವಸಾಯ ಮಾಡುತ್ತಾರೆ. ವ್ಯವಸಾಯ ಮಾಡಿದ ಧಾನ್ಯಗಳನ್ನು ಹಂಚಿಕೊಳ್ಳುವಾಗ ಮತ್ತೆ ಇವರಲ್ಲಿ ಕಲಹ ಪ್ರಾರಂಭವಾಗುತ್ತದೆ. ಕೇವಲವಾಗಿ ಭಾಷೆ ಬಳಸಿ ಜಗಳವಾಡುತ್ತಾರೆಂದು ಚಿತ್ರಿತವಾಗಿದೆ. ಈ ಜಗಳ ಶೈವ, ವೈಷ್ಣವ ದೇವರುಗಳ ಪರವಾಗಿ ಅವರವರು ವಿರೋಧಿಸುತ್ತಾರೆ. ಜಮೀನುದಾರನು ಪ್ರವೇಶಿಸಿ ಇಬ್ಬರನ್ನು ಸಮಾಧಾನ ಪಡಿಸುತ್ತಾನೆ. ಕೊನೆಗೆ ಎಲ್ಲರೂ ಒಗ್ಗಟ್ಟಾಗಿ ಜೀವಿಸುತ್ತಾರೆಂದು ನಾಟಕ ಕೊನೆಗೊಳ್ಳುತ್ತದೆ.

ಇದರಿಂದ ಇವರನ್ನು ಕೀಳಾಗಿ ಚಿತ್ರಿಸಿ, ದೇವಸ್ಥಾನಗಳಿಗೆ ಪ್ರವೇಶಿಸದಂತೆ ಬಣ್ಣ ಅಥವಾ ಚಂದದ ಬಟ್ಟೆಯನ್ನು ಧರಿಸದಂತೆ ಮೇಲ್ಜಾತಿ ಸಂಚುಗಳು ಕೆಲಸ ಮಾಡಿರುವುದನ್ನು ಈ ನಾಟಕಗಳ ಮೂಲಕ ತಿಳಿದುಕೊಳ್ಳಬಹುದು.

ಕೊರವಂಜಿ ನಾಟಕಗಳು: ಕಾಡು-ಬೆಟ್ಟಗಳಲ್ಲಿ ಜೀವಿಸುವ ಬುಡಕಟ್ಟಿನವರಾದ ಕುರವರ್ ಜನಾಂಗದ ಕಥಾ ಪಾತ್ರಗಳಾಗಿ ರಚಿತವಾದ, ಹದಿನೇಳನೆಯ ಶತಮಾನದಲ್ಲಿ ಆರಂಭವಾದ ನಾಟಕವಾಗಿದೆ. ಇದನ್ನು 'ಕುರತ್ತಿ ಪಾಟ್ಟು' ಎಂದೂ ಸಹ ಕರೆಯುತ್ತಾರೆ. ವಂಜಿ ಎಂದರೆ ಹೆಣ್ಣು ಎಂದು ಅರ್ಥ. ಕುರಿ ಎಂದರೆ ಕಣಿ ಎಂದು ಅರ್ಥ. ಕಣಿ ಹೇಳುವ ಕುರವರ್ ಮಹಿಳೆಯೇ ಕುರವಂಜಿ. ಪ್ರಿಯಕರನ ನೆನಪಿನಲ್ಲಿ ತನ್ನನ್ನೇ ಮರೆತು ಪರಿತಪಿಸುವ ನಾಯಕಿಯ

ಕೈಯಲ್ಲಿ ತನ್ನ ಮಾಂತ್ರಿಕ ಕೋಲನ್ನು ಆಡಿಸಿ ಕಣಿ ಹೇಳುತ್ತಾಳೆ ಕುರತ್ತಿ. ಶೀಘ್ರದಲ್ಲಿ ನಾಯಕಿಯು ಬಯಸಿದ ಪ್ರಿಯಕರ ಬರುವನೆಂದು ತಿಳಿಸುತ್ತಾಳೆ. ಕುರತ್ತಿಯ ಗಂಡನು ಕುರತ್ತಿಯನ್ನು ಭೇಟಿಯಾಗುವುದು, ಅವರ ಸಂಭಾಷಣೆ, ಹಾಸ್ಯಗಳು ಸಾಮಾನ್ಯ ಜನರ ಮಾತಿನಂತಿರುತ್ತದೆ. ಈ ನಾಟಕವು ಸಂಗೀತ, ಸಂಭಾಷಣೆಗಳ ಮೂಲಕ ಇಂದಿಗೂ ಪ್ರಚಲಿತದಲ್ಲಿದೆ.

"ಕುರವನ್‌ನನ್ನು ಪ್ರವೇಶ ಪಡಿಸಿದಾಗಲೂ ಕುರವನ್ ಪಾತ್ರವೂ ಮಾತಾಡುವಂತೆ ಮಾಡುವಾಗಲೂ ಕೀಳಾಗಿ ಚಿತ್ರಿಸುವುದನ್ನು ಕಾಣಬಹುದು. ಕೆಳವರ್ಗದ ಜನರು ಈ ರೀತಿಯ ನಾಟಕಗಳಲ್ಲಿ ಸ್ಥಾನ ಪಡೆದರು. ದೇವರನ್ನು ರಾಜರನ್ನೋ ಉದಾರವಾಗಿ ಚಿತ್ರಿಸಲು ಈ ಪಾತ್ರಗಳನ್ನು ಬಳಸಿಕೊಳ್ಳುವುದರಲ್ಲಿ ಮೇಲ್ಜಾತಿ ಲೇಖಕರು ದಲಿತ ಜನರು ವಕ್ರ ಗುಣವುಳ್ಳವರೆಂಬಂತೆ ಹೇಳದೆ ಹೇಳಿ ತಮ್ಮ ಅಸ್ಪೃಶ್ಯತಾ ಗುಣವನ್ನು ತಮ್ಮ ಬರಹಗಳಲ್ಲಿ ಕಾಣಿಸಿರುವುದನ್ನು ಕಾಣಬಹುದು" (ಕೆ.ಎ. ಗುಣಶೇಖರನ್, ದಲಿತ್ತಿಯಂ ಅರಂಗಿಯಲುಂ ಅರಸಿಯಲುಂ, ಪು. ೨೮೯)

ನೊಂಡಿ ನಾಟಕಗಳು (ಕುಂಟ ನಾಟಕಗಳು): ಹದಿನೇಳನೆಯ ಶತಮಾನದಲ್ಲಿ ಪ್ರಚಲಿತದಲ್ಲಿದ್ದ ನಾಟಕ ಪ್ರಕಾರ. ಸಾಮಾನ್ಯ ಜನತೆಗಾಗಿ ಬರೆದ ಈ ನಾಟಕಗಳಲ್ಲಿ ಹೆಚ್ಚು ಆಡು ಮಾತಿನ ಬಳಕೆ ಕಂಡು ಬರುತ್ತದೆ. ಇದು ತಮಿಳು ನಾಟಕ ಸಾಹಿತ್ಯದಲ್ಲೇ ಗುರುತಿಸಲಾಗುವ ಬದಲಾವಣೆಯಾಗಿದೆ. ಕಥಾ ನಾಯಕನು ತನ್ನ ಕಥೆಯನ್ನು ನೆನಪು ಮಾಡಿಕೊಳ್ಳುವಂತೆ ನಾಟಕ ಆರಂಭವಾಗುತ್ತದೆ. ಬಾಲ್ಯದಲ್ಲಿ ತಂದೆ-ತಾಯಿಯರ ಬಳಿ ಬೆಳೆಯುತ್ತಾನೆ. ನಂತರ ಆ ಜೀವನ ಇಷ್ಟವಾಗದೆ ಮನೆ ಬಿಟ್ಟು ಹೊರಬರುತ್ತಾನೆ. ಮನೆಯಿಂದ ತಂದ ವಸ್ತು, ಹಣದಿಂದ ಸಂತೋಷ ಮತ್ತು ಉಲ್ಲಾಸದ ಜೀವನವನ್ನು ನಡೆಸುತ್ತಾನೆ. ಕೆಲವು ದಿನಗಳಲ್ಲೇ ತಂದ ವಸ್ತುಗಳನ್ನು ಕಳೆದುಕೊಂಡು ಕಳ್ಳತನ ಮಾಡಲು ಆರಂಭಿಸುತ್ತಾನೆ. ವಧುವಿಗೂ, ದಾಸಿಯರಿಗೂ ದಾಸನಾಗಿ ಎಲ್ಲವನ್ನು ಕಳೆದುಕೊಳ್ಳುತ್ತಾನೆ. ದಾಸಿಯರು ತನ್ನನ್ನು ಹೊಡೆದು ಓಡಿಸಿದಾಗ, ಮತ್ತಷ್ಟು ಕೆಟ್ಟ ದಾರಿಯಲ್ಲಿ ಹೋಗುತ್ತಾನೆ. ಹೀಗಿದ್ದಾಗ ಕುದುರೆಯೊಂದನ್ನು ಕಳ್ಳತನ ಮಾಡಲು ಹೋದಾಗ ಸಿಕ್ಕಿಬೀಳುತ್ತಾನೆ. ಕಾರಣ ಕೈ, ಕಾಲುಗಳನ್ನು ಕತ್ತರಿಸಲಾಗುತ್ತದೆ. ಕೊನೆಗೆ ಎಲ್ಲಾ ತಪ್ಪುಗಳನ್ನು ನೆನೆದು ಪರಿತಪಿಸಿ ದೇವರ ಮೊರೆ ಹೋಗುತ್ತಾನೆ. ದೇವರ ಕರುಣೆಯಿಂದ ಕಳೆದುಕೊಂಡ ಕಾಲುಗಳನ್ನು ಮರಳಿ ಪಡೆದು, ಕೊನೆಯವರೆಗೂ ಒಳ್ಳೆಯವನಾಗಿ ಜೀವಿಸುತ್ತಾನೆ. ಇದು ನಾಟಕದ ಕಥೆ. ಆ ಕಾಲದಲ್ಲಿ ವ್ಯಭಿಚಾರ, ಕಳ್ಳತನ, ಮೋಸ ಮುಂತಾದವುಗಳು ಸಮಾಜದಲ್ಲಿ ಕೆಟ್ಟ ಕಾರ್ಯವೆಂದು ನೊಂಡಿ ನಾಟಕಗಳು ತಿಳಿಸುತ್ತವೆ.

ಕುಳುವ ನಾಟಕಗಳು: ಕುಳುವ ನಾಟಕವು ಸಹ ಬುಡಕಟ್ಟು ಜನಾಂಗದವರಾದ 'ಕುರವರ್' ಕುರಿತು ಚಿತ್ರಿಸುತ್ತವೆ. ಕುಳುವ ನಾಟಕದ ಪ್ರಧಾನ ಪಾತ್ರ 'ಕುರವನ್'. ಇವನನ್ನು 'ಸಿಂಗನ್' ಎಂದು ಕರೆಯಲಾಗುತ್ತದೆ. ಈ ನಾಟಕದಲ್ಲಿ ಸಿಂಗನು ಮತ್ತು ಅವನ ಮಿತ್ರನು ಬೇಟೆ ಆಡುವ ಸನ್ನಿವೇಶವು ಚಿತ್ರಿತವಾಗಿರುತ್ತದೆ. ಅಲ್ಲದೆ ಸಿಂಗನು ತನ್ನ ಒಡೆಯನನ್ನು ಕುರಿತು ಹೆಮ್ಮೆಯಿಂದ ಹೊಗಳುವುದು, ತಾನು ಅವರಿಗೆ ಗುಲಾಮ ಎಂದು ತಿಳಿದುಕೊಳ್ಳುವುದು ಕಂಡುಬರುತ್ತದೆ.

ತಮ್ಮನ್ನು ತಾವೇ ಕೀಳಾಗಿ ಕರೆಯಿಸಿಕೊಳ್ಳುವ ತಂತ್ರಗಾರಿಕೆಯನ್ನು ಮೇಲ್ಜಾತಿಕಾರರು ಚಿತ್ರಿಸುತ್ತಾರೆ. ಹಾಡುಗಳ ಮಧ್ಯ ಬರುವ ಸಂಭಾಷಣೆಯು ಸಾಮಾನ್ಯ ಜನರ ಆಡು ಭಾಷೆಯನ್ನು ಬಳಸಲಾಗಿದೆ.

ಕೀರ್ತನೈ ನಾಟಕಗಳು: ಹದಿನೇಳನೆಯ ಶತಮಾನದಲ್ಲಿ ಆರಂಭವಾದ ನಾಟಕ ಪ್ರಕಾರ. ಕೀರ್ತನೈ ನಾಟಕದಲ್ಲಿ ಎರಡು ಪ್ರಕಾರಗಳಿವೆ. ಒಂದು 'ರಾಮ ನಾಟಕ ಕೀರ್ತನೆ', ಮತ್ತೊಂದು 'ನಂದನಾರ್ ಚಾರಿತ್ರಿಕ ಕೀರ್ತನೆ'. ರಾಮ ನಾಟಕ ಕೀರ್ತನೆಯಲ್ಲಿ ರಾಮಾಯಣವನ್ನು ಭಾಷಾಂತರಿಸಿ ಬರೆದ ನಾಟಕಗಳಾಗಿವೆ.

'ಪೆರಿಯ ಪುರಾಣಂ'ದಲ್ಲಿ ಬರುವ 'ತಿರುನಾಳೈ ಪೋವಾರ್'ರ ಪುರಾಣ ಕಥೆಯನ್ನೇ ಈ ನಾಟಕ ತಿಳಿಸುತ್ತದೆ. ಕೀಳು ಕುಲದಲ್ಲಿ ಹುಟ್ಟಿದ ನಂದನ್‌ನು ಮೇಲ್ಜಾತಿಯವರಿಗೆ ಗುಲಾಮನಾಗಿ, ಶಿವಭಕ್ತನಾಗಿದ್ದು ಮೇಲ್ಜಾತಿಯವರು ಪೂಜಿಸುವ ಶಿವನನ್ನು ಪೂಜಿಸುತ್ತಾನೆ. ಮತ್ತು ತಮ್ಮ ಕೇರಿಯ ಎಲ್ಲಾ ಜನರಲ್ಲಿ ಶಿವನ ಹಿರಿಮೆಯನ್ನು ಹೇಳಿ ಅವರನ್ನು ಯೋಗ್ಯವಾಗಿ ನಡೆದುಕೊಳ್ಳುವುದಕ್ಕೆ ಪ್ರೇರಣೆಯಾಗುತ್ತಾನೆ. ಇದು ಮೇಲ್ಜಾತಿಯವರನ್ನು ಕೆರಳಿಸುತ್ತದೆ. ತಿಲ್ಲೈಗೆ ಹೋಗಿ ಶಿವನನ್ನು ದರ್ಶಿಸುವುದೇ ನಂದನ್‌ನ ಕೊನೆಯ ಆಸೆಯಾಗಿತ್ತು. ತನ್ನ ಯಜಮಾನ ಜಮೀನುದಾರನ ಮನೆಯಲ್ಲಿ, ಹೊಲದಲ್ಲಿ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸಿ ತಿಲ್ಲೈಗೆ ಹೋಗಲು ಅನುಮತಿ ಪಡೆಯುತ್ತಾನೆ. ಆದರೆ ಮೇಲ್ಜಾತಿಯವರು ಇದನ್ನು ಸಹಿಸದೆ ಎಲ್ಲರೂ ಕೂಡಿ ನಂದನ್‌ನ ಬಳಿ ಬಂದು 'ಬೆಂಕಿಯಲ್ಲಿ ಒಮ್ಮೆ ಬಿದ್ದು ಎದ್ದು ತನ್ನನ್ನು ದರ್ಶಿಸುವಂತೆ ಶಿವನು ನಮ್ಮ ಕನಸಿನಲ್ಲಿ ಹೇಳಿದ್ದಾನೆ' ಎಂದು ಹೇಳುತ್ತಾರೆ. ನಂದನ್ ಅವರ ಮಾತಿನಂತೆ ಬೆಂಕಿಯಲ್ಲಿ ನಡೆಯುತ್ತಾನೆ. ನಂದನ್‌ನು ಶಿವನ ದರ್ಶನ ಪಡೆದನು ಎಂದು ನಾಟಕ ಮುಗಿಯುತ್ತದೆ. ಮೇಲ್ಜಾತಿಯರ ಸಂಚುಗಳನ್ನು ಸಾಮಾಜಿಕ ಶೋಷಣೆಯನ್ನು ಈ ನಾಟಕದಲ್ಲಿ ಕಾಣಬಹುದು.

ವಿಲಾಸ ನಾಟಕಗಳು: ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಚಲಿತದಲ್ಲಿದ್ದ ವಿಲಾಸ ನಾಟಕಗಳು ಮುಖ್ಯವಾಗಿ ನಾಯಕಿ ಅಥವಾ ನಾಯಕನ ಹೆಮ್ಮೆಯನ್ನು ವೈಭವೀಕರಿಸಿ ಮಾತಾಡುತ್ತವೆ. 'ಹರಿಶ್ಚಂದ್ರ ವಿಲಾಸಂ', 'ಮೋಗನಾಂಗಿ ವಿಲಾಸಂ' ಮುಂತಾದ ನಾಟಕಗಳು ಇದಕ್ಕೆ ಉದಾಹರಣೆಯಾಗಿವೆ. ೧೮೫೭ರಲ್ಲಿ ಕಾಶಿ ವಿಶ್ವನಾಥ ಮೊದಲಿಯಾರ್‌ರವರು ನಿರ್ದೇಶಿಸಿದ 'ಡಂಬಾಚಾರಿ ವಿಲಾಸಂ' ನಾಟಕವು ಪ್ರದರ್ಶನಗೊಂಡ ಪ್ರಸಿದ್ಧ ನಾಟಕವಾಗಿದೆ. ನಾಟಕದ ತಂತ್ರದೊಂದಿಗೆ ಸಾಮಾಜಿಕ ಬದಲಾವಣೆಯ ಅಂಶಗಳನ್ನು ಈ ನಾಟಕ ಒಳಗೊಂಡಿದೆ.

ಚಾರಿತ್ರಿಕ ಪುರಾಣ ನಾಟಕಗಳು: ಪಾರ್ಸಿ ಮತ್ತು ಮರಾಠಿ ನಾಟಕಗಳ ಪ್ರೇರಣೆಯಿಂದ ಹತ್ತೊಂಬತ್ತನೆಯ ಶತಮಾನದಲ್ಲಿ ತಮಿಳಿನಲ್ಲಿ ಪುರಾಣ ಮತ್ತು ಚಾರಿತ್ರಿಕ ವಿಷಯಗಳನ್ನು ವಸ್ತುವಾಗಿಟ್ಟುಕೊಂಡ ನಾಟಕಗಳು ಪ್ರಾರಂಭವಾದವು. ನಂತರ ಆಂಗ್ಲರ ಪ್ರಭಾವದಿಂದ ಮಧ್ಯಮ ವರ್ಗದ ಧ್ವನಿಯಾಗಿ ವೃತ್ತಿ ರಂಗಭೂಮಿ ಬೆಳೆಯಿತು.

ಹರಿಶ್ಚಂದ್ರ ನಾಟಕಗಳು: ಒಮ್ಮೆ ಒಬ್ಬ ಕ್ಷತ್ರೀಯ ವಶಿಷ್ಠರ ಬಳಿ ಹೋಗಿ ಮನುಷ್ಯ ಈ ದೇಹದಿಂದಲೇ ಸ್ವರ್ಗಕ್ಕೆ ಹೋಗಬಹುದೇ? ಎಂದು ಕೇಳುತ್ತಾನೆ, ಅದಕ್ಕೆ ವಶಿಷ್ಠರು ಆಗುವುದಿಲ್ಲ ಎನ್ನುತ್ತಾರೆ. ನಂತರ ವಿಶ್ವಾಮಿತ್ರನ ಬಳಿ ಹೋಗಿ ಕೇಳುತ್ತಾನೆ. ಅದಕ್ಕೆ ವಿಶ್ವಾಮಿತ್ರ ವಶಿಷ್ಠರ ಮೇಲಿದ್ದ ಕೋಪದಲ್ಲಿ ಕ್ಷತ್ರಿಯನನ್ನು ಸ್ವರ್ಗಕ್ಕೆ ಕಳುಹಿಸುತ್ತಾನೆ. ಕ್ಷತ್ರಿಯ ಸ್ವರ್ಗಕ್ಕೆ ಹೋಗುತ್ತಿರುವಾಗ ವಶಿಷ್ಠರು ಕಂಡು ಅವನನ್ನು ತಡೆಯುವಲ್ಲಿ ಸಕಲ ಪ್ರಯತ್ನಗಳು ವಿಫಲವಾಗುತ್ತದೆ. ಕೊನೆಗೆ 'ನೀ ಪ್ರಲೈಯನಾಗಕ್ ಕಡವದು' (ನೀನು ಅಸ್ಪೃಶ್ಯ) ಎಂದು ಹೇಳುತ್ತಾನೆ ಆಗ ಅವನು ಅಲ್ಲೇ ನಿಲ್ಲುತ್ತಾನೆ. ವಿಶ್ವಾಮಿತ್ರ ತನ್ನ ಶಕ್ತಿಗಳನ್ನೆಲ್ಲಾ ಬಳಸಿದರೂ ಅವನು ಸ್ವರ್ಗಕ್ಕೆ ಹೋಗಬಹುದು. ಆದರೆ ಒಬ್ಬ ಅಸ್ಪೃಶ್ಯ ಹೋಗಲಾಗುವುದಿಲ್ಲ. ಒಟ್ಟಾರೆ ಯಾರು ಬೇಕಾದರೂ ಸ್ವರ್ಗಕ್ಕೆ ಹೋಗಲಾಗುವುದಿಲ್ಲ ಎಂಬುದನ್ನು ಈ ನಾಟಕ ತಿಳಿಸುತ್ತದೆ.

ಹರಿಶ್ಚಂದ್ರನು ಹೇಳುವಾಗ "ಆದಿಯಲುಂ ಪರೈಯನಲ್ಲ ಜಾದಿಯಿಲುಂ ಪರೈಯನಲ್ಲ ಪಾದಿಯಲ್ಲೇ ಪರೈಯನಾನೇನೆ" (ಆದಿಯಲ್ಲೂ ಪರೈಯನಲ್ಲ ಜಾತಿಯಲ್ಲೂ ಪರೈಯನಲ್ಲ ಅರ್ಧದಲ್ಲೇ ಪರೈಯನಾದೆನು) ಎಂಬ ಮಾತುಗಳು ಒಂದು ಸಮೂಹವನ್ನು ಕೀಳಾಗಿ ಕಾಣುವ ಈ ರೀತಿಯ ಕಥೆಗಳ ನಾಟಕಗಳನ್ನು ಕಾಣಬಹುದು.

ದೇವರ ಕುಲದ ಆರ್.ವಿ.ಉಡೈಯಪ್ಪ ದೇವರ್ ಹರಿಶ್ಚಂದ್ರ ನಾಟಕದ 'ಆದಿಯಲುಂ ಪರೈಯನಲ್ಲ' ಎಂಬ ಹಾಡು ಹಾಡಿದಾಗ ಪರೈಯರ್‌ರು ವಿರೋಧ ಮಾಡಿದ್ದರಿಂದ ಅವರನ್ನು ಬಂಧಿಸಲಾಯಿತು. ಮುಂದೆ ಹಾಡು "ಆದಿಯಲ್ಲೂ ಗುಲಾಮನಲ್ಲ, ಜಾತಿಯಲ್ಲೂ ಗುಲಾಮನಲ್ಲ, ನಡುವಿನಲ್ಲಿ ಗುಲಾಮನಾದನೇ ಏನು ಮಾಡುವುದು" ಎಂದು ಹಾಡಲಾಯಿತು.

ವಳ್ಳಿ ತಿರುಮಣಂ (ವಳ್ಳಿಯ ಮದುವೆ): ಸಂಕರ್ ದಾಸ್ ಸ್ವಾಮಿಯ 'ವಳ್ಳಿ ತಿರುಮಣಂ' ನಾಟಕದಲ್ಲಿ ವಳ್ಳಿ ಕುರವರ್ ಸಮುದಾಯವನ್ನು ಸೇರಿದವಳಾಗಿದ್ದರೂ, ಹೆಣ್ಣಿನ ಜಾಗೃತಿಯ ಧ್ವನಿಯಾಗಿ ಗಂಡಿನ ಮೇಲಧಿಕಾರಕ್ಕೆ ವಿರುದ್ಧವಾಗಿಯೂ, ಮೇಲ್ಜಾತಿಯ ವಿರುದ್ಧದ ಪ್ರತಿಭಟನಾ ಧ್ವನಿಯಾಗಿಯೂ, ವಳ್ಳಿ ಪಾತ್ರವನ್ನು ನೋಡಬಹುದು.

ಆಧುನಿಕ ನಾಟಕ ಸಾಹಿತ್ಯ

ನಾಟಕ ಸಾಹಿತ್ಯ ಚರಿತ್ರೆ ತಮಿಳಿನಲ್ಲಿ ಅತೀ ಪ್ರಾಚೀನವಾದದ್ದು ಎಂದು ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನಾಟಕ ಎಂಬ ಪದದ ಅರ್ಥವನ್ನು ತಮಿಳು ಸಾಹಿತ್ಯದಲ್ಲಿ 'ನಾಡಗಂ' (ನಾಡು+ಅಗಂ) 'ನಾಡಿನ ಅಂತರಂಗ', 'ನಾಡಿನ ವಿಷಯ' ಎಂಬುದಾಗಿ ಅರ್ಥೈಸಲಾಗಿದೆ. ನಾಟ್ಯ, ನೃತ್ಯ, ಹರಟೆ ಮುಂತಾದ ಪದಗಳನ್ನು ನಾಟಕಕ್ಕೆ ಬಳಸುತ್ತಾರೆ. ಉಳಿದಂತೆ ಕನ್ನಡ ನಾಟಕ ಸಾಹಿತ್ಯ ಚರಿತ್ರೆಯಂತೆ ತಮಿಳಿನಲ್ಲಿ ೧೯ನೇ ಶತಮಾನದಲ್ಲಿ ನಾಟಕ ಬೆಳವಣಿಗೆ ಆಯಿತು. ಪ್ರಾರಂಭದಲ್ಲಿ ಉತ್ತರ ಭಾರತೀಯ ಭಾಷೆಗಳ ಭಾಷಾಂತರಗಳಿಂದ ನಾಟಕ ತಮಿಳಿಗೆ ಪರಿಚಿತವಾಯಿತು. ಅಂದರೆ ಪ್ರಾಚೀನ ಕಾಲದಲ್ಲಿ ನಾಟಕ ಪ್ರಕಾರ ಇರಲಿಲ್ಲ ಎಂದು ಅರ್ಥವಲ್ಲ, ನಾಟಕವು ಈಗಿನ ರಂಗಭೂಮಿಯ ಸ್ವರೂಪತೆಯನ್ನು ಪಡೆದಿರಲಿಲ್ಲ.

“ಪ್ರತ್ಯಕ್ಷವಾಗಿ ಕಾಣುವ ಒಂದು ಸುಂದರವಾದ ದೃಶ್ಯವನ್ನು ಚಿತ್ರಪಟದಲ್ಲಿ ನೋಡುವಾಗ, ಪ್ರತಿದಿನ ನೋಡುವ ನಮ್ಮ ಮನೆಯ ಮಗುವನ್ನು ಚಿತ್ರಪಟದಲ್ಲಿ ನೋಡಿದಾಗ, ನಿಜವಾದ ಹಣ್ಣುಗಳನ್ನು ನೋಡುವುದಕ್ಕಿಂತ ಹಣ್ಣಿನಂತೆ ತಯಾರಾದ ಕೃತಕ ರೂಪವನ್ನು ನೋಡಿದಾಗ ನಮಗೆ ಒಂದು ರೀತಿಯ ಪ್ರತ್ಯೇಕ ಸುಖ, ಆನಂದ ಏಕೆ ಆಗುತ್ತದೆ? ಈ ಭಾವನೆಗೆ ಕಾರಣವೇನು? ಅದೇ ಕಾರಣಕ್ಕಾಗಿ ನಾಟಕವೂ ಹುಟ್ಟಿರಬೇಕು” (ಅವ್ವೈ ಡಿ.ಕೆ. ಶಣ್ಮುಗಂ, ನಾಡಗಕ್ ಕಲೈ, ಪು. ೧೧) ಎಂದು ನಾಟಕ ನಟರು, ವಿದ್ವಾಂಸರು ಆದ ಶಣ್ಮುಗಂರು ಅಭಿಪ್ರಾಯ ಪಡುತ್ತಾರೆ.

ಪಮ್ಮಲ್ ಸಂಬಂಧ ಮೊದಲಿಯಾರ್‌ರು ೧೮೯೧ರಲ್ಲಿ ಸುಗುಣ ವಿಳಾಸ ಸಭೆಯ ಮೂಲಕ ಈವರೆಗಿದ್ದ ರಾಮಾಯಣ, ಮಹಾಭಾರತ ಮುಂತಾದ ಪ್ರಾಚೀನ ಸಂಪ್ರದಾಯದ ಕಥಾರೂಪಗಳನ್ನು ನಾಟಕಗಳಲ್ಲಿ ಪ್ರಯೋಗಿಸಿದರು. ಮೊದಲಿಯಾರ್ ಈ ಸಂಪ್ರದಾಯ ಚೌಕಟ್ಟಿನಿಂದ ಹೊರ ಬಂದು “ಲೀಲಾವತಿ–ಸುಲೋಚನ” ಎಂಬ ನಾಟಕವನ್ನು ಸಂಪೂರ್ಣವಾಗಿ ಉರೈನಡೈ (ವಚನದಲ್ಲಿ) ೧೮೯೧ರಲ್ಲಿ ಪ್ರಕಟಿಸಿದರು. ಯಾವುದೇ ಹಳೆಯ ಕೀರ್ತನೆಗಳನ್ನು ಈ ನಾಟಕದಲ್ಲಿ ಉಪಯೋಗಿಸಲಿಲ್ಲ. ಮೊದಲಿಯಾರ್‌ರ ನಾಟಕಗಳು ಪೆರಿಯಾರ್ ಸುಯ ಮರಿಯಾದೈ ಚಳುವಳಿ ಮತ್ತು ದ್ರಾವಿಡ ಚಳುವಳಿಗಳ ನಾಟಕಗಳಿಗೆ ಪ್ರೇರಣೆಯಾಗಿದ್ದಿತು.

ಇದರ ಪ್ರಭಾವ ಕೇವಲ ನಾಟಕ ರಂಗದಲ್ಲಿ ಮಾತ್ರವಲ್ಲದೆ ಸಾಹಿತ್ಯ ರಂಗದಲ್ಲೂ ಕಾಣಿಸಿಕೊಂಡಿತು. ಕವಿತೆ ಸಣ್ಣಕಥೆಗಳಲ್ಲೂ ದ್ರಾವಿಡ ಚಳುವಳಿ ಮತ್ತು ಅದರ ಪ್ರಭಾವ ಬೀರಿತು. ಸ್ವಾತಂತ್ರ್ಯದ ನಂತರ ತಮಿಳು ನಾಡಿನ ದ್ರಾವಿಡ ಚಳುವಳಿಯ ದಿಕ್ಕು ಬದಲಾಯಿತು. ಸಾಮಾಜಿಕ ಜೀವನ ವಿಧಾನದಲ್ಲಿ ಎಂದಿನಂತೆ ಬದಲಾಗದ ಸಾಮಾಜಿಕ ವಾತಾವರಣವೇ ಕಾಣಿಸಿಕೊಂಡಿತು. ಕೆ.ಬಾಲಚಂದರ್, ಜಾನಕಿರಾಮನ್ ಮುಂತಾದ ನಾಟಕಕಾರರು ನಾಟಕ ರಂಗದಲ್ಲಿ ಹೊಸ ಬದಲಾವಣೆ ತಂದರು ಆದರೆ ಅದು ಮಧ್ಯಮ (ದ್ರಾವಿಡ ಮುನ್ನೇಟು ಕಳಗಂ) ರಾಜಕೀಯದಲ್ಲಿ ವಿಲೀನಗೊಂಡರು. ಅಣ್ಣಾದೊರೈ, ಮು.ಕರುಣಾನಿಧಿ, ಎಂ.ಜಿ. ರಾಮಚಂದ್ರನ್ ಮುಂತಾದವರು ನಾಟಕಗಳಿಗಿಂತ ಚಲನಚಿತ್ರಗಳಲ್ಲಿ ಹೆಸರು ಮಾಡಿದರು. ಅಂದಿನ ತಮಿಳು ಭಾಷಾ ಪರಿಸ್ಥಿತಿಯನ್ನು ಅರಿತುಕೊಂಡ ಡಿ.ಎಂ.ಕೆ ಪಕ್ಷವು ಹಿಂದಿ ಭಾಷಾ ವಿರೋಧಿ ಸಮಿತಿಯ ಪರವಾಗಿ ತಮಿಳರ ತಮಿಳು ಭಾಷೆಯ ಪ್ರಶಂಸೆ ಪಡೆದುಕೊಂಡಿತು. ನಂತರ ದ್ರಾವಿಡ ಚಳುವಳಿ ನಾಟಕವನ್ನು ಗಂಭೀರ ಮಾಧ್ಯಮವನ್ನಾಗಿ ಪರಿಗಣಿಸಲಿಲ್ಲ. ಇದರ ನಂತರ ತಮಿಳು ಸಾಹಿತ್ಯ ಕ್ಷೇತ್ರದಲ್ಲೂ ನವೀನತೆಯ ಗಾಳಿ ಬೀಸಿತು. ಇದು ನಾಟಕ ರಂಗದಲ್ಲೂ ಪಸರಿಸಿತು. ೧೯೭೭ರಲ್ಲಿ ‘ಗಾಂಧಿಗ್ರಾಮ ಪಳ್‌ಗಳೈ ಕಳಗಂ ಮಟ್ರುಂ ಕಲಾಚ್ಚಾರ ಮೈಯಂ’ ಎರಡರ ಸಹಯೋಗದಲ್ಲಿ ನಡೆದ ನಾಟಕ ಅಭ್ಯಾಸವೇ ತಮಿಳಿನಲ್ಲಿ ನವೀನ ನಾಟಕಗಳ ಉದಯಕ್ಕೆ ಕಾರಣವಾಯಿತು. (ನ ತೇವೆ, ಇಲಕ್ಕಿಯಂ ಆಯ್‌ವುಂ ಅಣುಗುಮುರೈಗಳುಂ, ಪು. ೧೮೮) ಇದರ ನಂತರ ಹಲವು ನಾಟಕ ಅಭ್ಯಾಸದ ಕುರಿತು

ಹಲವು ಶಿಬಿರಗಳು, ಕಾರ್ಯಾಗಾರಗಳು ನಡೆದವು. ತರಬೇತಿಗಳಲ್ಲಿ ಕೇವಲ ತಮಿಳು ನಾಟಕ ಮಾತ್ರವಲ್ಲದೆ ವಿಜಯ್ ತೆಂಡೂಲ್ಕರ್, ಗಿರೀಶ್ ಕಾರ್ನಾಡ್, ಬಾದಲ್ ಸರ್ಕಾರ್, ಶಿವರಾಮ ಕಾರಂತ್, ಸಂಕರಪ್ಪಿಳ್ಳೈ ಮುಂತಾದವರ ನಾಟಕಗಳನ್ನು ಅಭ್ಯಾಸ ಮಾಡಲಾಯಿತು. ಒಟ್ಟಾರೆ ಇವೆಲ್ಲವುಗಳ ಪ್ರೇರಣೆಯಿಂದ ತಮಿಳಿನಲ್ಲಿ ನವೀನ ನಾಟಕಗಳು ಕಾಣಿಸಿಕೊಂಡಿತು. ನವೀನತೆಯ ಒಳಗೆ ದಲಿತ ನಾಟಕಗಳನ್ನು ಕುರಿತು ಅಧ್ಯಯನ ಮಾಡುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಸಾಮಾಜಿಕ ಬದಲಾವಣೆಯ ನಾಟಕಗಳು

"ದೇಶೀಯ ನಾಟಕ ಚಳುವಳಿ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಕಾರ್ಯ ನಿರ್ವಹಿಸಿದಂತೆ ಐವತ್ತು, ಅರವತ್ತರಲ್ಲಿ ದ್ರಾವಿಡ ಚಳುವಳಿಕಾರರ ಕೈಯಲ್ಲಿ ನಾಟಕಗಳು ಓಡಾಡಿದವು. ಈ ಕಾಲಘಟ್ಟದಲ್ಲಿ ದ್ರಾವಿಡ ಚಳುವಳಿಯ ಪ್ರವೇಶ ನಾಟಕ ಕ್ಷೇತ್ರದಲ್ಲಿ ಹಿರಿದಾಗಿ ಕಂಡುಬಂದಿತು. ಸಾಮಾಜಿಕ ಬದಲಾವಣೆ, ಮೂಢನಂಬಿಕೆಯ ವಿರೋಧತ್ವ, ಬ್ರಾಹ್ಮಣ ವಿರೋಧತ್ವ ಮುಂತಾದವು ಅದರ ಪ್ರಮುಖ ವ್ಯಾಖ್ಯಾನಗಳಾಗಿದ್ದವು. ಸಂಭಾಷಣೆಗಳಲ್ಲಿ ತಮಿಳು ಭಾಷೆಯ ರೀತಿ ಒಂದು ಹೊಸ ಚೈತನ್ಯ ಚಲಿಸಿತು. ವೇದ ಮತದ ತಮಿಳು ಸಮೂಹದ ಮೇಲಿನ ವಿಮರ್ಶೆಗಳನ್ನು ಹೇಳುವ ಎಂ.ಆರ್.ರಾಧ ಅವರ ನಾಟಕಗಳು ಈ ಕಾಲದಲ್ಲಿ ಪ್ರತ್ಯೇಕ ಗಮನವನ್ನು ಹೊಂದಿದವು. ಎಸ್.ಎಸ್.ಕೆ. ಡಿ.ಕೆ ಮಧುರಂ, ಸಿ.ಬಿ.ಸಿಟ್ರರಸು, ಎ.ಬಿ.ಐ ಆಸೈತಂಬಿ, ತಿರುವಾರೂರ್ ತಂಗರಾಸು ಮುಂತಾದವರು ದ್ರಾವಿಡ ಚಳುವಳಿಯ ಮುಖ್ಯ ಲೇಖಕರರಾಗಿದ್ದರು"(ಬಾಲಕುಮಾರ್, ಉಲಗ ನಾಡಗ ಅರಂಗು, ಪು. ೧೮೨)

ಚಲನಚಿತ್ರಗಳಲ್ಲಿ ಯಶಸ್ಸು ಕಂಡ ನಟರು ದ್ರಾವಿಡ ಚಳುವಳಿಯ ಪ್ರಭಾವದಿಂದ ತಮಿಳು ನಾಟಕಗಳಲ್ಲಿ ನಟಿಸಿದ್ದವರೇ ಆಗಿದ್ದರು. ಭಕ್ತಿಯನ್ನು ಹೆಚ್ಚಿಸುವ ಮತ್ತು ಮನೋರಂಜನೆಗಾಗಿ ಮಾತ್ರ ಇದ್ದ ನಾಟಕದ ಸ್ಥಿತಿಯನ್ನು ಬದಲಾಯಿಸಿ ಸಾಮಾಜಿಕ ಒಳತಿಗಾಗಿ ವ್ಯಾಖ್ಯಾನಗಳನ್ನು ನಾಟಕಗಳ ಮೂಲಕ ತಿಳಿಸಲು ನಟರು ಉತ್ಸುಕರಾದರು. ಎನ್.ಎಸ್.ಕ್ರಿಷ್ಣನ್, ಎಂ.ಜಿ. ರಾಮಚಂದ್ರನ್, ಎಸ್.ಎಸ್.ರಾಜೇಂದ್ರನ್, ಕೆ.ಆರ್.ರಾಮರಾಮ, ಶಿವಾಜಿ ಗಣೇಶನ್, ಎಂ.ಆರ್.ರಾಧಾ, ಕೆ.ಎ.ತಂಗವೇಲು ಮುಂತಾದವರು ಪ್ರತ್ಯೇಕ ಗುಂಪುಗಳಾಗಿ ನಾಟಕಗಳನ್ನು ಪ್ರದರ್ಶನ ಮಾಡಿದರು. ಇವರ ನಾಟಕಗಳಿಗೆ ಜನಸಮೂಹವು ಹೆಚ್ಚು ಆಸಕ್ತಿ ವಹಿಸಿತು. ಈಗ ಸಮಾಜದ ಬದಲಾವಣೆಗೆ ನಾಟಕಗಳಿಗೆ ಒಳ್ಳೆಯ ಅವಕಾಶ ಇದೆ ಎಂಬುದು ಸ್ನೇಹಿತ ಅಣ್ಣಾದುರೈ ನಡೆಸುವ ಚಂದ್ರೋದಯ ಎಂಬ ನಾಟಕಕ್ಕೆ ಈರೋಡಿನಲ್ಲಿ ರೂ. ೪೦೦ಗಳಂತೆ ಒಂದು ನಾಟಕಕ್ಕೆ ವಸೂಲಾಗುವುದರ ಮೂಲಕ ತಿಳಿಯದೇ? ಸ್ನೇಹಿತ, ಹಾಸ್ಯ ಕಲಾ ಅರಸ ಎನ್.ಎಸ್. ಕ್ರಿಷ್ಣನ್ ಅವರು ನಡೆಸುವ ಸಾಮಾಜಿಕ ಬದಲಾವಣೆ ಕಲಾರಂಗದಲ್ಲಿ ನಂದನಾರ್ ಚರಿತ್ರೆಗೆ ಕೊಟ್ಟೈಯಾರ್‌ನಲ್ಲಿ ಸೇರಿ ಹದಿನಾರು ಸಾವಿರ ಜನರ ಬೆಂಬಲ ನೀಡಿದ್ದನ್ನು ನೋಡಿದ ನಂತರ ಸಾಮಾಜಿಕ ಬದಲಾವಣೆ ನಾಟಕಗಳಿಗೆ ಜನರು ಒಳ್ಳೆಯ ಬೆಂಬಲ ನೀಡುತ್ತಿದ್ದಾರೆ"

ಎಂಬುದು ತಿಳಿಯುತ್ತದೆ. ಎಸ್.ಆರ್. ಸುಬ್ರಮಣ್ಯಂ ಸಾಮಾಜಿಕ ಬದಲಾವಣೆಯ ನಾಟಕಗಳು, ತಮಿಳು ನಾಟಕ ಮಲರ್ ಪು. ೧೬) ಇದರ ಪರಿಣಾಮ ದ್ರಾವಿಡ ಚಳುವಳಿಯ ನಾಟಕಗಳು ಸಮಾಜವನ್ನು ಬದಲಾಯಿಸಲು ಒಂದು ಜಾಹೀರಾತಿನ ಹಿಡಿಯಾಗಿ ಬಳಸಿಕೊಂಡಿದೆ ಎಂದು ತಿಳಿಯಬಹುದು.

ಜಾತಿಭೇದ ನಾಶ, ಅಸ್ಪೃಶ್ಯತೆ ನಾಶ, ಪ್ರೇಮ ವಿವಾಹ, ಅಂತರ್ ಜಾತಿಯ ವಿವಾಹ, ವಿಧವಾ ವಿವಾಹ ಮುಂತಾದ ಚಿಂತನೆಗಳು ಸಿ.ಎನ್.ಅಣ್ಣಾದೊರೈರವರ ನಾಟಕಗಳು ಕಲೈಜರ ಮು.ಕರುಣಾನಿಧಿಯವರ ನಾಟಕಗಳು ಕೂಡಿದ್ದರು.

ಸ್ವಾತಂತ್ರ್ಯ ಹೋರಾಟ ಕಾಲದ ನಾಟಕಗಳು

ತೆ.ಪೊ.ಕ್ರಿಷ್ಣಸ್ವಾಮಿ ಪಾವಲರ್ ೧೯೬೦ರಲ್ಲಿ 'ಹರಿಜನ' ಎಂಬ ನಾಟಕವನ್ನು ಜಾತಿಯ ಅಸ್ಪೃಶ್ಯತೆಯ ನಾಶದ ಉದ್ದೇಶವನ್ನಿಟ್ಟುಕೊಂಡು ಬರೆದರು. ಇದರ ನಂತರ ೧೯೨೦ರಲ್ಲಿ 'ಕದರಿನ್ ವೆಟ್ರಿ' ಎಂಬ ನಾಟಕವು ತಮಿಳುನಾಡಿನ ಮೊದಲ ದೇಶಿಯ ಸಮುದಾಯ ನಾಟಕವಾಗಿದೆ. ವೀರ ಪಾಂಡಿ ಕಟ್ಟ ಬೊಮ್ಮನ್‌ರ ನಾಟಕದಲ್ಲಿ ಅವರು ದೇವರ್‌ಜಾತಿ ಆಗಿದ್ದರಿಂದ ಆ ಜಾತಿಯವರು ಕಟ್ಟಬೊಮ್ಮನರ ವೀರತ್ವವನ್ನು ವಿವರಿಸಿದರು. ದಕ್ಷಿಣ ಭಾಗದ ಜಿಲ್ಲೆಗಳ ಜಾತಿಯ ಕಲಹಗಳ ನಂತರವೂ ಕಟ್ಟಬೊಮ್ಮನ್ ನಾಟಕದಲ್ಲಿ ಸುಂದರಲಿಂಗಂ ಎನ್ನುವ ಪಾತ್ರವು ಒಂದು ಕೆಳಜಾತಿಗೆ ಸೇರಿದ ಪಾತ್ರವನ್ನು ಪರಿಚಯುಸುತ್ತವೆ. ಕಟಬೊಮ್ಮನಿಗಾಗಿ ಬಿಳಿಯರು(ಆಂಗ್ಲರು) ವಾಸವಿದ್ದ ಸ್ಥಳಕ್ಕೆ ಹೋಗಿ ತನ್ನ ಪ್ರಾಣವನ್ನು ನೀಡಿದ ಕುರಿತು ಮತ್ತು ನಾಡಿನ ಬಗೆಗೆ ಅರಸರ ಮೇಲೆ ಇಟ್ಟಿದ್ದ ವಿಶ್ವಾಸದ ಕುರಿತು ವಿವರವಾಗಿ ಮಾತಾಡುವುದನ್ನು ಕಾಣಬಹುದಾಗಿದೆ(ಗುಣಶೇಖರನ್ ಕೆ.ಎ., ಇಂಡ್ರೈಯ ತಮಿಳ್ ನಾಡಗಚ್ ಸೂಳಲ್, ಪು. ೬೦).

ಕ್ರೈಸ್ತ ಧರ್ಮದ ಬದಲಾವಣೆಯ ನಾಟಕಗಳು

'ವಾಚ್ಚಾಪ್ಪು' ನಾಟಕ ಎಂಬುದು ಕ್ರೈಸ್ತರು ನಡೆಸುತ್ತಿದ್ದ ಒಂದು ಕಲಾ ಪ್ರಕಾರವಾಗಿತ್ತು. ಇದರ ನಂತರ 'ಪರೈಚ್ಚಿ ಕಥೈ' ಎಂಬ ಕಲೆ ನಡೆಯುತ್ತಿತ್ತು ಎಂದು ಗುಣಶೇಖರನ್‌ರು ತಿಳಿಸುತ್ತಾರೆ. ಅಲ್ಲದೆ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ ದಲಿತ ಕ್ರೈಸ್ತರಿಗೆ ಜಾತಿಯ ಬಿಡುಗಡೆಯನ್ನು ಸಾಧಿಸುವ ಹಲವು ನಾಟಕಗಳನ್ನು ಬರೆಯಲಾಯಿತು.

ದಲಿತರಲ್ಲದ ಲೇಖಕರೂ ದಲಿತತ್ವದ ನೆಲೆಯಿಂದ ಜಾತಿಯ ಶೋಷಣೆಗಳನ್ನು ವಿವರಿಸುವ ಹಲವು ನಾಟಕಗಳನ್ನು ಕನ್ನಡ, ಮರಾಠಿ, ತೆಲುಗು ಭಾಷೆಗಳಲ್ಲಿ ಬರೆದಿದ್ದಾರೆ. ಆದರೆ ತಮಿಳಿನಲ್ಲಿ ಇಂದಿರಾ ಪಾರ್ಥಸಾರಥಿಯವರ 'ನಂವನ್ ಕದೈ' ನಾಟಕವೊಂದನ್ನು ಬಿಟ್ಟು ಬೇರೆ ನಾಟಕಗಳು ಗಂಭೀರವಾಗಿ ಜಾತಿ ಸಮಸ್ಯೆಯನ್ನು ಮಾತಾಡುವುದಿಲ್ಲ ಎಂಬುದು

ತಮಿಳಿನ ಹಲವು ನಾಟಕ ವಿದ್ವಾಂಸರ ಅಭಿಪ್ರಾಯವಾಗಿದೆ. ಕೆ.ಎ.ಗುಣಶೇಖರನ್ ಅವರ ಬಲಿ ಆಡುಗಳ ನಾಟಕವೇ ಮೊದಲ ದಲಿತ ನಾಟಕವೆಂದು ಹಲವರು ಅಭಿಪ್ರಾಯಪಡುತ್ತಾರೆ.

ಸಮಾಜ ಬದಲಾವಣೆಗೆ ತಕ್ಕಂತೆ ಕಲೆ-ಸಾಹಿತ್ಯದಲ್ಲಿ ಬದಲಾವಣೆ ಆಗುತ್ತದೆ. ಸಮಾಜದ ಏರಿಳಿತಗಳು ಅದರ ರೂಪ, ವಸ್ತು, ಸ್ಪಷ್ಟತೆ ಮುಂತಾದವುಗಳು ಬೇರೆಯಾಗುತ್ತದೆ. ಸ್ತ್ರೀಯರು, ತಳ್ಳಲ್ಪಟ್ಟವರು, ಮಂಗಳ ಮುಖಿಗಳು, ಮಕ್ಕಳು ಮುಂತಾದವರನ್ನು ಹಲವಾರು ರೀತಿಯಲ್ಲಿ ದೂರ ಇರಿಸುವುದರಿಂದ ಅವರ ಜೀವನದ ಸಮಸ್ಯೆಗಳನ್ನು ಪ್ರಕಟಿಸುವ ಬಗೆಯಲ್ಲಿ ಸ್ತ್ರೀಯರ ರಂಗಸ್ಥಳ, ದಲಿತ ರಂಗಸ್ಥಳ, ಮಂಗಳಮುಖಿಯರ ರಂಗಸ್ಥಳ, ಸಣ್ಣ ಮಕ್ಕಳ ರಂಗಸ್ಥಳ ಮುಂತಾದವು ಉದ್ಭವವಾಗುತ್ತವೆ.

ದಲಿತ ರಂಗಸ್ಥಳ

"ದಲಿತ ರಂಗಸ್ಥಳ ಎಂಬುದು ಒಂದು ಆಯುಧವಿದ್ದಂತೆ. ಮೇಲ್ಜಾತಿ ಅಧಿಕಾರ, ಬಣ್ಣ, ಮತ, ದೇಶೀಯತೆ, ವರ್ಗ, ಮುಂತಾದ ಯಾವುದೇ ರೂಪದಲ್ಲಿದ್ದರೂ ಅದಕ್ಕೆ ಪ್ರತಿರೋಧವಾಗಿ ಕಲಹದ ಮನೋಭಾವನೆಯನ್ನು ನೀಡಲು ಪ್ರಯತ್ನಿಸುವ ಒಂದು ಪ್ರಯೋಗಾತ್ಮಕ ಆಯುಧ" (ಕ. ಪಂಚಾಂಗಂ, ಉಳ್ಳೈಪ್ಪವರ್ ಆಯುದಂ, ಜನವರಿ ೩:೨೦೦೬) ಎಂಬುದಾಗಿ ದಲಿತ ರಂಗಸ್ಥಳದ ಕುರಿತು ವಿವರಿಸುತ್ತಾರೆ. ದಲಿತ ರಂಗಸ್ಥಳವು ಜಾತಿ ನಾಶದ ತತ್ವವನ್ನು ಮುಂದುವರಿಸಿಕೊಂಡು ಸಮಾನತೆಯ ತತ್ವವನ್ನು ಒಳಗಿರಿಸಿಕೊಂಡು ಮೇಲ್ಜಾತಿ ಅಧಿಕಾರದ ವಿರುದ್ಧ ಹೋರಾಡಿ ಜಾತಿ ಮುಷ್ಟಿಯಿಂದ ಬಿಡುಗಡೆ ಹೊಂದುವ ಒಂದು ರಂಗಸ್ಥಳ.

ದಲಿತ ರಂಗಸ್ಥಳದ ಉದ್ದೇಶಗಳು

* ಏಕಾಂಗಿಯಾಗಿಯೂ, ಒಗ್ಗಟ್ಟಾಗಿಯೂ ದೇಶದ ಬಿಡುಗಡೆಯಲ್ಲಿ ಭಾಗಿಯಾಗುವುದು.
* ಕಳೆದುಕೊಂಡ ಮನುಷ್ಯ ಹಕ್ಕುಗಳನ್ನು ಹಿಂದಿರುಗಿ ಪಡೆದು ಕಳೆಯದಂತೆ ಗಮನ ವಹಿಸುವುದು.
* ನಾವು ಎಂಬ ಭಾವನೆಯಲ್ಲಿ ಸಮಾಜ ಮತ್ತು ಸಂಪ್ರದಾಯ ಬದಲಾವಣೆಯಲ್ಲಿ ಮುನ್ನುಗಿ ಹೋರಾಡುವುದು.
* ಕಾರ್ಯರೂಪ, ಕಾರ್ಯರೂಪದ ಚಳುವಳಿ ಮೂಲಕ ಹೊಸ ಸಂಸ್ಕೃತಿ ಚಿಂತನೆಯನ್ನು ಕಾರ್ಯನಿರ್ವಹಿಸುವಂತೆ ಮಾಡುವುದು.

ದಲಿತ ರಂಗಸ್ಥಳವು ಇತರೆ ನಾಟಕಗಳಲ್ಲಿ ಕಂಡುಬರುವ ಪುರಾಣ ಕಥೆಗಳು, ಹಾಸ್ಯ, ಕಾಲಹರಣ, ಆರ್ಥಿಕ ಉದ್ದೇಶ, ಜಾತಿಯ ಭದ್ರತೆ ಮುಂತಾದವುಗಳಿಂದ ಭಿನ್ನವಾಗಿದೆ. ಮುಖ್ಯವಾಗಿ ದಲಿತರ ಬಿಡುಗಡೆ, ಜಾತಿಯ ಶೋಷಣೆಗಳಿಗೆ ಬೆನ್ನೆಲುಬಾಗಿರುವ ಗುಣವನ್ನು ಗುರುತಿಸುತ್ತದೆ. ಜಾತಿ ಇಲ್ಲದ ಸಮಾಜದ ರಚನೆಗೆ ದಲಿತ ರಂಗಸ್ಥಳ ಕಾರ್ಯನಿರ್ವಹಿಸುತ್ತದೆ.

ಮಧುರೈಯಲ್ಲಿರುವ ದಲಿತ ಆಧಾರ ಮೈಯಂಚಿನಲ್ಲಿ ಇದ್ದವರು ೧೯೯೬ ಡಿಸೆಂಬರ್ ೬ರಂದು ನಡೆಸಿದ ಮೂರನೇ ದಲಿತ ಕಲಾ ಹಬ್ಬದಲ್ಲಿ ದಲಿತರ ಸಾಂಪ್ರದಾಯಿಕ ಕಲೆಗಳಾದ 'ಪರೈಯಾಟ್ಟಂ' ಮುಂತಾದವುಗಳಿಂದ ಬದಲಾಗಿ ದಲಿತ ರಂಗಸ್ಥಳ ಎಂಬ ಪ್ರತ್ಯೇಕ ನಾಟಕ ಪ್ರಕಾರವನ್ನು ಆರಂಭಿಸಿದರು. ದಲಿತ ಕಲಾ ಹಬ್ಬದಲ್ಲಿ ಚಂದಾ ವಸೂಲಿ ಮಾಡಿ, ತೊಂಡು ನಿರುವನಂ ನದಿಯನ್ನು, ವಿಶ್ವವಿದ್ಯಾಲಯಗಳ ನಿಧಿ ಸಹಾಯ, ರಾಷ್ಟ್ರೀಯ ನಾಟಕ ಶಾಲೆಯ ಸಹಾಯ ನಿಧಿ ಹೀಗೆ ಹಲವು ಇನ್ನಿತರೆ ಸಂಘ-ಸಂಸ್ಥೆಗಳ ಸಹಾಯ ನಿಧಿಯಿಂದ ಹಲವು ನಾಟಕಗಳನ್ನು ಪ್ರದರ್ಶನ ಮಾಡಲಾಯಿತು(ಕು. ಚಿನ್ನಪ್ಪನ್, ತಮಿಳರ್ ದಲಿತ್ ನಾಡಗಂಗಳ್, ಪು. ೯೦)

"ದಲಿತರ ಸಮೂಹದ ಎಚ್ಚರಿಕೆಯಿಂದ ತನ್ನ ಸಂಪೂರ್ಣ ಗುರುತಿನೊಂದಿಗೆ ಪ್ರಕಟವಾಗುವ ರಂಗಸ್ಥಳವಾಗಿ ದಲಿತ ರಂಗಸ್ಥಳವು ಬಿಡುಗಡೆಯನ್ನು ಪಡೆಯುವ ಆಯುಧಗಳನ್ನು ಒಳಗಿರಿಸಿಕೊಂಡು ಪ್ರಕಟವಾಗಬೇಕು ಎಂಬ ಉದ್ದೇಶದಿಂದ ದಲಿತ ರಂಗಸ್ಥಳ ಎಂದು ಗುರುತಿನೊಂದಿಗೆ ಈ ಕಲಾ ಹಬ್ಬ ಆರಂಭವಾಯಿತು" (ಪ. ಮೋಹನ್ ಲಾರ್‌ಡಿರ್, ಕಲಗಮೊಳಿ, ಪು. ೩೧) ಎಂದು ಪ. ಮೋಹನ್‌ರವರು ತಿಳಿಸುತ್ತಾರೆ.

ರಂಗಸ್ಥಳದ ಕಾರ್ಯ ವಿಧಾನ

೧. ಹೊಸ ಆಕಾರ

೨. ಹೋರಾಟ ಚಿಂತನೆಯುಳ್ಳ ಕಲಾ ರೂಪಗಳು

೩. ಹೊಸ ಗುರಿಗಳು

೪. ಸ್ವ ಸೌಂದರ್ಯ ಪ್ರಜ್ಞೆ

೫. ಹಕ್ಕು ಪಡೆಯುವ ಚರಿತ್ರೆ

೬. ತಮ್ಮ ಅನುಭವಗಳನ್ನು ಸಂಕಲ್ಪಿಸಿ ಅದರ ಮೂಲಕ ಬಿಡುಗಡೆಯ ದಾರಿಯನ್ನಾಗಿಸುವುದು

೭. ಹಳಮೆಯನ್ನು ಕಾವ್ಯಗಳನ್ನು ಮರು ಓದಿಗೆ ಒಳಪಡಿಸುವುದು

೮. ಬರಹಗಳಲ್ಲೂ ಕಾರ್ಯಗಳಲ್ಲೂ ಎದುರುತ್ತರದ ಭಾವ

ವೆಳಿ (Space) ವೇದಿಕೆ: ಅಸ್ಪೃಶ್ಯರೆಂದು ದೂರ ತಳ್ಳಲ್ಪಟ್ಟವರು ತಮ್ಮ ಬಿಡುಗಡೆಗಾಗಿ ಹೊರಗಡೆ ಬಂದು ಕಾರ್ಯ ನಿರ್ವಹಿಸುವುದಕ್ಕೆ, ತಮ್ಮ ಸಮಸ್ಯೆಗಳನ್ನು ಪ್ರಕಟಿಸಲು, ತಮ್ಮ ಭಾಷೆಯನ್ನು ಮುಚ್ಚು ಮರೆ ಇಲ್ಲದೆ ಮಾತಾಡಲು, ದಲಿತ ರಂಗಸ್ಥಳದ ವೇದಿಕೆ ಬೇಕಾಗಿದೆ. ದಲಿತ ರಂಗಕಾರರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಸಂಗೀತ ವಾದ್ಯಗಳನ್ನು ಇಲ್ಲಿ ಸ್ವತಂತ್ರ್ಯವಾಗಿ ಬಳಸಲಾಗುತ್ತದೆ.

ಪಣುವಲ್ (ಕೃತಿ): ದಲಿತ ನಾಟಕಕಾರರು ತಾವು ಅನುಭವಿಸಿದ ಅಸ್ಪೃಶ್ಯತೆಯ ಶೋಷಣೆಯನ್ನು ದಾಖಲಿಸಿ ಅದನ್ನು ಕಿತ್ತು ಎಸೆಯುವ ರೀತಿಯಲ್ಲಿ ದಲಿತ ನಾಟಕದ ಕೃತಿ ಕೂಡಿರುತ್ತದೆ. ಮೇಲ್ಜಾತಿ ನಾಟಕಕಾರರು ಜಾತಿಯನ್ನು ಕಾಪಾಡುವಂತೆ ಅವರ ಕೃತಿಗಳಿದ್ದರೆ ಅದಕ್ಕೆ ವಿರುದ್ಧವಾಗಿ ದಲಿತ ನಾಟಕ ಕೃತಿಗಳು ಇರುತ್ತವೆ.

ಮುತ್ತುರವರು ನಾಟಕ ಕೃತಿಯ ರಂಗ ಪ್ರಯೋಗ ಕುರಿತು "ದಲಿತ ರಂಗ ಪ್ರಯೋಗದಲ್ಲಿ ನಡೆಯುವ ನಾಟಕವನ್ನು ನೋಡುಗರು ನಾಟಕ ವೀಕ್ಷಿಸಿ ಹೋಗಲು ಆಗದು. ಇಲ್ಲಿ ಎಲ್ಲದರ ವಿಮರ್ಶೆ ಮಾಡಲು ಮುಕ್ತವಾಗಿ ಅವಕಾಶವಿರುತ್ತದೆ. ನಾಟಕ ಮುಕ್ತಾಯದ ಸ್ಥಳದಲ್ಲಿ ವೀಕ್ಷಕರ ಚಿಂತನೆಯನ್ನು ಸ್ಪರ್ಶಿಸಲಾಗುತ್ತದೆ. ಇದರಿಂದ ದಲಿತ ರಂಗಸ್ಥಳದಲ್ಲಿನ ವಿಷಯಗಳನ್ನು ಮತ್ತು ವಿರೋಧವನ್ನು ವೀಕ್ಷಕರು ತಿಳಿದುಕೊಳ್ಳುತ್ತಾರೆ. ಆದ್ದರಿಂದ ದಲಿತ ನಾಟಕ ಕೃತಿಯನ್ನು ಬರೆಯುವಾಗ ದಲಿತ ರಾಜಕೀಯ, ದಲಿತ ಸೌಂದರ್ಯ, ದಲಿತ ಸಂಸ್ಕೃತಿ, ದಲಿತ ಬಿಡುಗಡೆ, ದಲಿತ ಸ್ತ್ರೀವಾದ ಮುಂತಾದವುಗಳ ಮೇಲಿನ ಚಿಂತನೆಯಿಂದ ಪ್ರಕಟವಾಗುತ್ತದೆ" (ಕೆ. ಎಸ್ ಮುತ್ತು, ದಲಿತ್ ಮುರಸು, ೨೦೦೪, ಪು. ೫೬)

ಭಾಷೆ: ಭಾಷೆಯು ಒಂದು ಸಮಾಜದ ಧ್ವನಿಯಾಗಿದೆ. ನಾಟಕಗಳಲ್ಲಿನ ಭಾಷೆಯು ನಾಟಕಕಾರರ ಸಮಾಜದ (ಜಾತಿ) ಸಂಸ್ಕೃತಿ, ಅಧಿಕಾರ ಮತ್ತು ರಾಜಕೀಯವನ್ನು ಪ್ರಕಟಿಸುತ್ತದೆ. ದಲಿತ ರಂಗಸ್ಥಳಕ್ಕೆ ಭಾಷೆ ಅವಶ್ಯಕವಾದ ಒಂದು ಅಂಶ. ದಲಿತ ರಂಗಸ್ಥಳವು ದುಡಿಯುವ ಜನರ ಸಂಸ್ಕೃತಿಯ ಭಾಷೆಯನ್ನು ಎತ್ತಿ ಹಿಡಿಯುತ್ತದೆ. ದಲಿತ ಭಾಷೆಯನ್ನು 'ಕೋಚ್ಚೈ ಮೊಳಿ (ಕೆಸರಿನ ಭಾಷೆ) ಎಂದು ಈ ವರೆಗೆ ಮೇಲ್ಜಾತಿಯವರು ದೂರ ಸರಿಸಿದ್ದ ಭಾಷೆಯನ್ನು ಇಲ್ಲಿ ಬಳಸಲಾಗುತ್ತದೆ.

ದೇಹದ ಭಾಷೆ: ದಲಿತ ರಂಗಸ್ಥಳ ದೇಹದ ಭಾಷೆಯ ಮೂಲಕ ವಿಚಾರಗಳನ್ನು ಪ್ರಕಟಿಸುತ್ತದೆ. ದೇಹ ಭಾಷೆಯನ್ನು ಕುರಿತು ಅತೀ ಸೂಕ್ಷ್ಮವಾಗಿ ಬಳಸಿಕೊಂಡ ದಲಿತ ರಂಗಸ್ಥಳದ ಪ್ರಯೋಗವಾಗಿ ಕೆ.ಎ.ಗುಣಶೇಖರನ್‌ರ 'ಬಲಿ ಆಡುಗಳ್' ನಾಟಕವು ನಿರೂಪಿಸುತ್ತದೆ. "ದಲಿತನ ಕೈಯಲ್ಲಿ ತಮಟೆ ಇದ್ದರೆ, ಬ್ರಾಹ್ಮಣನ ದೇಹದಲ್ಲಿ ಜನಿವಾರ ಇರುತ್ತದೆ. ದಲಿತನ ಸೊಂಟದ ಬಟ್ಟೆ ಲಂಗೋಟಿಯಾಗಿದ್ದರೆ, ಬ್ರಾಹ್ಮಣನ ಸೊಂಟದಲ್ಲಿ ಅರಿಸಿನದ ಬಟ್ಟೆ, ಕೆಂಪು ಆಕಾರದಲ್ಲಿದ್ದ ಬ್ರಾಹ್ಮಣನು ಕೈ ಬೀಸಿ, ಕಾಲು ಬೀಸಿಕೊಂಡು ಬರುತ್ತಿದ್ದಾನೆ. ಕಪ್ಪು ಆಕಾರದಲ್ಲಿ ದಲಿತನು ದೇಹದ ತುಂಬಾ ಹಗ್ಗಗಳಿಂದ ಕಟ್ಟಿದವನಂತೆ ಟೊಳ್ಳಾಗಿದ್ದಾನೆ. ಬ್ರಾಹ್ಮಣನ ಕ್ರೂರ ನಗು ಕೇಳಿಸುತ್ತದೆ. ದಲಿತರ ಹೀನ ಧ್ವನಿ ಅಳುತ್ತಿದೆ. ಬ್ರಾಹ್ಮಣರು ವೇದಿಕೆಯಲ್ಲಿ ತಲೆ ಎತ್ತಿ ನಿಲ್ಲುತ್ತಾರೆ. ದಲಿತರು ತಲೆ ತಗ್ಗಿಸಿ ಮಂಡಿಹಾಕಿ ಕುಳಿತಿರುತ್ತಾರೆ. ದಲಿತರು ದನ ಆಡುಗಳಂತೆ ಬಗ್ಗಿ ನಡೆದು ಬರುವಾಗ, ಜನಿವಾರ ಹಾಕಿದವರು ದಲಿತರನ್ನು ಚಾಟಿಯಿಂದ ಹೊಡೆಯುವಂತೆ ಕಾಣಿಸುತ್ತಾರೆ" (ಕ. ಪಂಚಾಂಗಂ, ಉಳೈಪ್ಪವರ್ ಆಯುದಂ, ಪು. ೬, ೨೦೦೬) ಹೀಗೆ

ದೇಹದ ಭಾಷೆ ದಲಿತರ ಮೇಲೆ ಮೇಲ್ಜಾತಿಯವರು ನಡೆಸುತ್ತಿದ್ದ ಶೋಷಣೆಗಳು ವೀಕ್ಷಕರಿಗೆ ತಿಳಿಯುತ್ತದೆ.

ಸಂಗೀತ: ದಲಿತರ ಜೀವನವು ಹಾಡು, ಕುಣಿತದೊಂದಿಗೆ ಸಾಗುತ್ತದೆ. ಇವರ ಹುಟ್ಟಿನಿಂದ ಸಾವಿನವರೆಗೂ ಸಂಗೀತ ಮುಖ್ಯ ಸ್ಥಾನ ಪಡೆಯುತ್ತದೆ. ಗುಲಾಮಗಿರಿಯ ಸಂಕೇತವಾದ ಪರ್ರೈ (ತಮಟೆ)ಯು ದಲಿತ ನಾಟಕಗಳಲ್ಲಿ ವೀರತ್ವ, ಕೋಪದ, ಜಾಗೃತಿಯ ಸಂಕೇತವಾಗಿ ಬಳಕೆಯಾಗುತ್ತದೆ. ಪಾತ್ರಗಳ ಗುಣಗಳನ್ನು ಮಾನಸಿಕ ಸ್ಥಿತಿಯನ್ನು ವೀಕ್ಷಕರಿಗೆ ತಲುಪಿಸಲು ದಲಿತರ ಸಾಂಪ್ರದಾಯಿಕ ದಲಿತ ಸಂಗೀತ ಬಳಕೆಯಾಗುತ್ತದೆ. ಗುಣಶೇಖರನ್‌ರು ದಲಿತ ಸಂಗೀತಕ್ಕೆ "ದಲಿತ ಸಂಗೀತವು ದಲಿತ ಕಲೆಯ ಪ್ರಕಾರದಿಂದ ಪ್ರಕಟವಾಗುವ ಒಂದು ಪ್ರಕಾರ. ದಲಿತರ ಜೀವನ ಕ್ರಮವನ್ನು ಭವಿಷ್ಯವನ್ನು ನಂಬಿಕೆಯನ್ನು ಪ್ರತಿಫಲಿಸುತ್ತದೆ. ದಲಿತ ರಂಗಸ್ಥಳದ ದಲಿತ ಸಂಗೀತವು, ಮೂಳಿ ಪರ್ರೈಚ್ಚಿ ಕಥೆ, ರಾಸಾ ರಾಣಿ ಆಟ, ಪರ್ರೈ ಆಟ, ಕುರವನ್ ಕುರತ್ತಿ ಆಟ, ಗರಗಾಟ್ಟಂ, ನೈಯಾಂಡಿ ಮೇಲೆಂ ಮುಂತಾದ ಕಲಾ ಪ್ರಕಾರಗಳು ದಲಿತರಲ್ಲಿ ಕಂಡು ಬರುತ್ತದೆ" (ಕೆ.ಎ.ಗುಣಶೇಖರನ್, ದಲಿತ ಅರಂಗವಿಯಲ್, ಪು. ೫೨)

ಸೌಂದರ್ಯ: ದಲಿತ ರಂಗಸ್ಥಳವು ನೈಜ ಘಟನೆಗಳನ್ನು, ಚಾರಿತ್ರಿಕ ಅಂಶಗಳನ್ನು ಸಾಂಸ್ಕೃತಿಕ ಅಂಶಗಳನ್ನು ಪ್ರಾಮಾಣಿಕವಾಗಿ ಪರಿಶೀಲಿಸಿ ಸತ್ಯಾಂಶವನ್ನು ದಲಿತ ಸೌಂದರ್ಯದೊಂದಿಗೆ ಪ್ರಕಟಿಸುತ್ತದೆ.

ದಲಿತ ನಾಟಕಗಳು

ನಾಟಕ ಎಂಬ ಪ್ರಕಾರವು ಮೇಲ್ಜಾತಿಯವರಿಂದ ಬರೆದು, ಓದಿ, ನಟಿಸುತ್ತಿದ್ದರಿಂದ ಅವರ ಜೀವನ ಕುರಿತ ಅಂಶಗಳನ್ನು ವಸ್ತುಗಳನ್ನಾಗಿ ಮಾಡಿಕೊಂಡು ಅದರ ಮೂಲಕ ಮೇಲ್ಜಾತಿಯವರ ವರ್ಣಭೇದವನ್ನು ಕಾಪಾಡಿಕೊಂಡಿದ್ದರು. ಮೇಲು-ಕೀಳು ಎಂಬ ಸ್ಥಿತಿ ಇದರಿಂದ ಬಲಗೊಂಡಿತ್ತು. ಸಾಂಪ್ರದಾಯಿಕ ನಾಟಕಗಳು ಹೆಚ್ಚಾಗಿ ಪುರಾಣ, ಮತ, ಧರ್ಮ ಪರಿಪಾಲನೆಯ ವಿಷಯಗಳನ್ನೇ ಹೆಚ್ಚಾಗಿ ಕಾಣಿಸಿಕೊಂಡಿತು. ಇವುಗಳಿಗೆ ಬದಲಾಗಿ ದಲಿತ ಜನರ ಸಮಸ್ಯೆಗಳನ್ನು ಪ್ರಕಟಿಸುವುದಕ್ಕಾಗಿ ದಲಿತ ನಾಟಕಗಳ ರಚನೆ ಆರಂಭವಾಯಿತು.

"ನಾಟಕಗಳಿಗೆ ಸಂಬಂಧಿಸಿದಂತೆ 'ನಿಜ ನಾಟಕ ಚಳುವಳಿ' ಎಂಬ ನಾಟಕವೆ ಮೊದಲ ದಲಿತ ನಾಟಕವಾಗಿದೆ. 'ನ್ಯಾಯಂಗಳ್' ನಾಟಕವನ್ನು ಬಿಟ್ಟರೆ ೧೯೯೨ರ ವರೆಗೆ ದಲಿತರ ಸಮಸ್ಯೆಯನ್ನು ಪ್ರಕಟಿಸುವ ನಾಟಕಗಳು ಕಂಡು ಬರುವುದಿಲ್ಲ. 'ನಂದನ್ ಕದೈ' ಎಂಬ ಪಾರ್ಥ ಸಾರಥಿಯವರ ನಾಟಕ ಪ್ರಕಟವಾಗಿದ್ದರೂ ಉತ್ಕೃಷ್ಟವಾದ ಯಾವುದೇ ಬದಲಾವಣೆಯು ನಾಟಕದಲ್ಲಿ ಇಲ್ಲವೆಂದೇ ಹೇಳಬೇಕು. ರಂಗಕ್ಕೆ ತಕ್ಕಂತೆ ನಂದನ್‌ನು ಬೆಂಕಿಯಲ್ಲಿ ಸುಟ್ಟು ಜ್ಯೋತಿಯಲ್ಲಿ ಲೀನವಾಗುವಂತಿದೆ. ನಂದನಿಗಾಗಿ, ನಂದನ್‌ನ ಸಾವಿನ ನಂತರ ಅವನ ಪರ ಧ್ವನಿಗಳು ಕೇಳಿಸಿದರೂ ಅದು ಒಂದು ರೀತಿಯ ಭ್ರಮೆಯನ್ನು ತರಿಸುತ್ತದೆ. ಇದು ವಾಸ್ತವವಾಗಿ

ದಲಿತರ ಮರಣಕ್ಕೆ ಕೈ ಜೋಡಿಸುವಂತಿದೆ. ನಂದನ್ ಸಾವಿಗಿಂತ ನಂದನ್‌ನು ಬದುಕಿರುವಾಗ ಅವನಿಗಾಗಿ ಏಳುವ ಧ್ವನಿಯ ದಲಿತ ರಾಜಕೀಯಕ್ಕೆ ದಲಿತ ರಂಗಸ್ಥಳಕ್ಕೆ ಹೊಂದಿಕೆಯಾಗಿ ಇರಲು ಸಾಧ್ಯ. ಅದಲ್ಲದೆ ನಾಟಕದ ಮುಕ್ತಾಯಗಳು ದಲಿತರ ಹೋರಾಟವನ್ನು ಸ್ಥಗಿತಗೊಳಿಸುವಂತೆ ಇದೆ" (ಮು. ಜೀವಾ, ದಲಿತ ನಾಟಗಂಗಳುಂ ತಮಿಳ್ ಅರಂಗವಿಯಲುಂ, ಪು. ೬) ಎಂದು ಈವರೆಗಿದ್ದ ನಾಟಕದಲ್ಲಿ ದಲಿತರ ಕುರಿತು ಉಲ್ಲೇಖವಿದ್ದರೂ ಅದರಲ್ಲಿ ಹಲವು ಸಮಸ್ಯೆ ಇದ್ದದ್ದನ್ನು ತಿಳಿಸುತ್ತಾರೆ.

ಕೆ.ಎ.ಗುಣಶೇಖರ್ ಅವರ 'ಬಲಿ ಆಡುಗಳು', 'ತೊಡು', 'ಅರಿಗುರಿ', 'ಪಾರೈಯೈಡ್ ಪಿಳಂದು ಕೊಂಡು', ಮು.ಜೀವಾರವರ 'ಚೇರಿಯನ್ ತಾಲಾಟ್ಟು', ಪ್ರತಿಭಾ ಜಯ ಚಂದ್ರನ್ ಅವರ 'ಕೋಪ್ಪು', 'ಅರಿವೊಳಿ ಚಳುವಳಿಯ ಏಕಲವ್ಯನಿನ್ ಪೆರುವಿರಲ್' ಮುಂತಾದವು ದಲಿತ ನಾಟಕಗಳಾಗಿವೆ.

ದಲಿತ ನಾಟಕಕಾರರು

ತಮಿಳು ದಲಿತ ನಾಟಕಕಾರರ ಸಂಖ್ಯೆ ಕಡಿಮೆ ಅದರಲ್ಲೂ ಕೃತಿ ರಚನೆ, ರಂಗ ಪ್ರಯೋಗದಲ್ಲಿ ಕಂಡು ಬರುವ ಮುಖ್ಯವಾದವರು ಇಬ್ಬರೆ **ಕರು ಅಳ ಗುಣಶೇಖರನ್** ಮತ್ತು **ಮು.ಜೀವಾ.**

ಕರು ಅಳ ಗುಣಶೇಖರನ್‌ರವರು ಸಂಪ್ರದಾಯ, ಪೌರಾಣಿಕ ವಸ್ತುವನ್ನು ತೆಗೆದು ನಾಟಕ ರಚಿಸುತ್ತಾರೆ. ಅಲ್ಲದೆ ತಮಿಳು ಪ್ರಸಿದ್ಧ ನಾಟಕಕಾರರಾದ ಶಂಕರ್‌ದಾಸ್ ಸ್ವಾಮಿಯವರ ಪ್ರಭಾವ ಇರುವುದನ್ನು ಕಾಣಬಹುದು. ಪುರಾಣ, ಇತಿಹಾಸ ಕಥೆಗಳನ್ನು ನವೀನ ನಾಟಕಕ್ಕೆ ಜೋಡಿಸಿ ಅದನ್ನು ಪ್ರಯೋಗಪಡಿಸುವಲ್ಲಿ ಹೆಚ್ಚು ಆಸಕ್ತಿ ಹೊಂದಿರುವುದನ್ನು ಕಾಣಬಹುದು. ಹರಿಶ್ಚಂದ್ರ–ಚಂದ್ರಮತಿಯ ಜೀವವನ್ನು ತಿಳಿಸುವ 'ಸತ್ತಿಯ ಸೋದನೈ' ಅರ್ಜುನ–ಪವಳಕ್ಕೊಡಿ ಜೀವನವನ್ನು ತಿಳಿಸುವ 'ಪವಳಕ್ಕೊಡಿ ಅಲ್ಲದು ಕುಡುಂಬ ವಳಕ್ಕು' ಮುಂತಾದ ನಾಟಕಗಳು ಸೂಚಿಸಬಹುದು. 'ಬಲಿ ಆಡುಗಳ್' ನಾಟಕವು ಮೊದಲ ದಲಿತ ನಾಟಕವಾಗಿದೆ.

ಸುಳ್ಳು ಹೇಳದ ಹರಿಶ್ಚಂದ್ರನನ್ನು ವಿಜೃಂಭಿಸುವ ಸಂಪ್ರದಾಯವಾದಿಗಳಿಗೆ ಅವನ ಕೆಲಸಗಳಿಗೆ ಪ್ರಶ್ನೆಯನ್ನು ಮಾಡುವಂತೆ 'ಸತ್ತಿಯ ಸೋದನೈ' ಪ್ರಯೋಗಗೊಂಡಿದೆ. ಹರಿಶ್ಚಂದ್ರ ತನ್ನ ಆಸ್ತಿ, ಅಧಿಕಾರ, ಹೆಂಡತಿ–ಮಗ ಎಲ್ಲವನ್ನು ಕಳೆದುಕೊಂಡಾಗಲು ಸುಳ್ಳು ನುಡಿಯಲಿಲ್ಲ. ಮಗನು ಸತ್ತಾಗಲೂ ತನ್ನ ಧ್ಯೇಯವನ್ನು ಬಿಡದೆ ಸತ್ಯವಂತನಾಗುತ್ತಾನೆ. ಮೂಕಳಾಗಿ ಚಿತ್ರಿತವಾಗಿರುವ ಚಂದ್ರಮತಿ ತನ್ನ ಹಕ್ಕಿಗಾಗಿ ತನ್ನ ಕರ್ತವ್ಯದ ಮೂಲಕ ಪ್ರಶ್ನೆ ಮಾಡುತ್ತಾಳೆ. ಸ್ತ್ರೀ ಸಂವೇದನೆ, ಸ್ತ್ರೀ ವಿಮೋಚನೆ (ಬಿಡುಗಡೆ)ಯನ್ನು ನಾಟಕ ಗಂಭೀರವಾಗಿ ಪರಿಗಣಿಸುತ್ತದೆ.

ತಮಿಳು ದಲಿತ ನಾಟಕ ಮತ್ತು ಆಶಯಗಳು

ಬಲಿ ಆಡುಗಳ್ (ಬಲಿ ಆಡುಗಳು): ಕೆ.ಎ.ಗುಣಶೇಖರನ್‌ರ ೧೯೯೯ರಲ್ಲಿ ಪ್ರಕಟವಾದ 'ಬಲಿ ಆಡುಗಳ್' ನಾಟಕವು ಒಂದು ಶಿಲಾಶಾಸನ ಸಂಗತಿಯನ್ನು ತೆಗೆದುಕೊಂಡು ರಚಿತವಾದ

ನಾಟಕವಾಗಿದೆ. ದಲಿತರನ್ನು ನರಬಲಿ ನೀಡುವುದನ್ನು ವಸ್ತುವಾಗಿಸಿಕೊಂಡಿದೆ. ಊರಿನಲ್ಲಿ ಯಾವುದೇ ಅಪಶಕುನ ನಡೆದರೂ ಅದಕ್ಕೆ ದಲಿತರೇ ಕಾರಣವೆಂದು ಹೇಳುವ ಪರಿಪಾಠವನ್ನು ಇಲ್ಲಿ ಕಾಣಬಹುದು. ರಸ್ತೆಯಲ್ಲಿ ಒಡೆದು ನಿಂತ ತೇರಿಗಾಗಿ ದೈವ ನಿಂದನೆ ಆಗುವುದು ಎಂಬ ಕಾರಣಕ್ಕೆ ಯಾರಾದರು ದಲಿತರ ನರಬಲಿ ನೀಡುವುದಾಗಿ ತೀರ್ಮಾನಿಸಲಾಗುತ್ತದೆ. ಕೊನೆಗೆ ಉಡುಮನ್ ಅದಕ್ಕೆ ಆಯ್ಕೆ ಆಗುತ್ತಾನೆ. ಆದರೆ ಅವನು ತನ್ನ ಹೆಂಡತಿಯನ್ನು ನರಬಲಿ ನೀಡುವಂತೆ ಕೇಳಿಕೊಳ್ಳುತ್ತಾನೆ. ಅಬಲೆಯಾದ ಸ್ತ್ರೀಯ ನರಬಲಿ ನಡೆಯುತ್ತದೆ.

ಪಿಣಂ ತಿನ್ನುಂ ಶಾಸ್ತಿರಂಗಳ್ (ಹೆಣವನ್ನು ತಿನ್ನುವ ಶಾಸ್ತ್ರಗಳು): ಅನ್ಬಾದವನ್‌ರ ೨೦೦೧ರಲ್ಲಿ ಪ್ರಕಟವಾದ 'ಪಿಣಂ ತಿನ್ನುಂ ಶಾಸ್ತಿರಂಗಳ್' ನಾಟಕವು ಅಸ್ಪೃಶ್ಯತೆಯನ್ನು ಮುಖ್ಯ ಕಥಾವಸ್ತುವನ್ನಾಗಿಸಿಕೊಂಡಿದೆ. ಚೋಳರ ಆಳ್ವಿಕೆಯಲ್ಲಿ ಕುಲೋತ್ತುಂಗ ಚೋಳನು ವಿಹಾರಕ್ಕೆ ಹೋದಾಗ ಅವನ ರಥ ತುಳಿದು ದಲಿತನ ಸಾವಾಗುತ್ತದೆ. ಇದಕ್ಕೆ ನ್ಯಾಯ ಕೇಳಲು ಬಂದ ಅವನ ತಂದೆ ದಲಿತನಾಗಿದ್ದರಿಂದ ಆಸ್ಥಾನ ಮಲೀನವಾಯಿತೆಂದು ಅವನನ್ನು ಹೊರದೂಡುತ್ತಾರೆ. ಚೋಳರ ಕಾಲದಲ್ಲಿ ದಲಿತರಿಗೆ ನ್ಯಾಯ ಹೇಗೆ ಕಿತ್ತುಕೊಳ್ಳಲಾಯಿತು ಎಂಬುದನ್ನು ನಾಟಕ ವಿವರಿಸುತ್ತದೆ.

ಏಕಲೈವಿ: ಭಾರದಿ ಪ್ರಭುರವರ ೨೦೦೩ರಲ್ಲಿ ಪ್ರಕಟವಾದ 'ಏಕಲೈವಿ' ನಾಟಕವು ಬೌದ್ಧ ಧರ್ಮವನ್ನು ಸ್ವೀಕರಿಸುವಿಕೆ, ಹಿಂದುತ್ವದ ತಿರಸ್ಕಾರ, ಹಿಂದುತ್ವದ ವಿರೋಧ, 'ಹಿಂದೂ ಧರ್ಮದಲ್ಲಿದ್ದುಕೊಂಡು ಯಾವುದೇ ಒಳ್ಳೆಯ ಸುಧಾರಣೆ ಆಗುವುದಿಲ್ಲ, ತಾಯಿ ಮಾರ್ಗವಾದ ಬೌದ್ಧಧರ್ಮಕ್ಕೆ ತಿರುಗಿರಿ' ಎಂದು ಈ ನಾಟಕ ತಿಳಿಸುತ್ತದೆ.

'ನಾಟ್ಯ ವಿದ್ಯ ಪರಿಣಿತಳಾದ ಏಕಲೈವಿ ಬ್ರಾಹ್ಮಣ ಹುಡುಗಿ ಎಂದು ಎಲ್ಲರೂ ತಿಳಿದಿದ್ದಾಗ ಅವಳು ಬ್ರಾಹ್ಮಣಳಲ್ಲ, ಪಂಚಮರ ಹುಡುಗಿ ಎಂದು ತಿಳಿದ ಪುರೋಹಿತ ಒಬ್ಬನು ಅವಳನ್ನು ತನಗೆ ಇಷ್ಟವಾದಂತೆ ನಡೆದುಕೊಳ್ಳಬೇಕೆಂದು ಹೆದರಿಸಿದಾಗ ದುಡಿಯುವ ಜನರಿಗಿಂತ ನಿಮ್ಮ ನಾಟ್ಯ ಹೆಚ್ಚಾದದ್ದು ಅಲ್ಲವೆಂದು ತಿರಸ್ಕರಿಸುವುದೆ' ಈ ನಾಟಕದ ಪ್ರಧಾನ ಅಂಶವಾಗಿದೆ.

ಕರುಪ್ಪು ಅರಂಗಂ (ಕಪ್ಪು ರಂಗ): ಸುಬ್ಬಯ್ಯರವರ ೨೦೦೩ ರಲ್ಲಿ ಪ್ರಕಟವಾದ ಕರುಪ್ಪು ಅರಂಗಂ ನಾಟಕವು ಹುಟ್ಟಿದ ಮಗುವಿಗೂ ಎದೆ ಹಾಲು ನೀಡಲಾಗದಂತಹ ಬಡತನ, ಕೆಲಸಕ್ಕೆ ಹೋದ ಸ್ಥಳದಲ್ಲಿ ಮಗುವನ್ನು ಯಾಕೆ ಕೆಲಸಕ್ಕೆ ಕರೆತಂದೆ ಎಂಬ ಸಾವುಕಾರರ ಕಷ್ಟಕರ ಮಾತುಗಳು, ಶಾಲೆಗೆ ಮಕ್ಕಳನ್ನು ಸೇರಿಸಲು ಹೋದಾಗ ಅಲ್ಲಿ ಮೇಲ್ಜಾತಿ ಶಿಕ್ಷಕರು ಜಾತಿಯನ್ನು ಹೇಳಿ ಅವಮಾನಿಸುವುದನ್ನು, ಶಾಲೆಯಲ್ಲಿ ಓದುವಾಗ ದಲಿತ ಮಕ್ಕಳನ್ನು ಹೆತ್ತವರ ಕೆಲಸವನ್ನು ಹೇಳಿ ಕೇವಲಪಡಿಸುವುದನ್ನು ಈ ನಾಟಕ ತಿಳಿಸುತ್ತದೆ.

ಇರಾಮೈಯಾವಿನ್ ಗುಡಿಸೈ (ರಾಮಯ್ಯನ ಗುಡಿಸಲು): ಮುಗಿಲ್‌ರವರ ೧೯೯೨ ರಲ್ಲಿ ಪ್ರಕಟವಾದ 'ಇರಾಮೈಯಾವಿನ್ ಗುಡಿಸೈ' ನಾಟಕವು ವೆಣ್‌ಮಣಿ ಗ್ರಾಮದಲ್ಲಿ ನಡೆದ ದಲಿತರನ್ನು

ಜೀವಂತವಾಗಿ ಸುಟ್ಟ ಪ್ರಕರಣವನ್ನು ವಸ್ತುವಾಗಿಟ್ಟು ಬರೆದ ನಾಟಕವಾಗಿದೆ. "೧೯೬೮.೧೨.೨೫ ಇದೇ ದಿನ ದಕ್ಷಿಣ ತಂಜೈಯ ವೆಣ್‌ಮಣಿ ಗ್ರಾಮದ, ಅನಾಗರಿಕತೆಗೆ ಗುರುತಾದ ದಿನ. ಜಮೀನುದಾರರ ಶೋಷಣೆಗಳಿಗೆ ವಿರೋಧಿಸಿದವರನ್ನು ಕೊಲೆ ಮಾಡಿದ ದಿನ. ಇಪ್ಪತ್ತು ಹೆಂಗಸರು, ಹತ್ತೊಂಬತ್ತು ಮಕ್ಕಳು, ಐದು ಗಂಡಸರು ಯಜಮಾನರ ಬೆಂಕಿಯ ಶಾಖದಲ್ಲಿ ಬೆಂದ ದಿನ. ಜಮೀನುದಾರರ ಚಾಟಿ ಏಟು, ಮರದಲ್ಲಿ ಕಟ್ಟಿ ವ್ಯವಸಾಯಿ ಗುಲಾಮನ ಬಾಯಿಯಲ್ಲಿ ಶಗಣಿ ನೀರನ್ನು ಹಾಕಿದ್ದು ಇದೆಲ್ಲವನ್ನು ಸೇರಿದ ಭೂಮಿ ತಂಜೈ. ಇದನ್ನೇ 'ಇರಾಮೈಯಾವಿನ್ ಗುಡಿಸೈ' ನಾಟಕ ತಿಳಿಸುತ್ತದೆ" ಎಂದು ಆರಂಭದಲ್ಲಿ ನಾಟಕದ ಆಶಯವನ್ನು ನಾಟಕಕಾರರೇ ಪರಿಚಯಿಸುವ ತಂತ್ರವನ್ನು ನೋಡಬಹುದು.

ಕೋಪ್ಪು (ಬುಡಕಟ್ಟು ನಾಯಕನ ಕಿರೀಟ): ಪ್ರತಿಭಾ ಜಯಚಂದ್ರನ್‌ರವರ ೨೦೦೨ರಲ್ಲಿ ಪ್ರಕಟವಾದ 'ಕೋಪ್ಪು' ನಾಟಕವು ಮಕ್ಕಳನ್ನು ಓದಿಸಲು ಜಾತಿ ಪ್ರಮಾಣ ಪತ್ರ ಕೇಳುವ ಬುಡಕಟ್ಟು ಜನಾಂಗ ಸ್ಥಿತಿಯನ್ನು ತಿಳಿಸುತ್ತದೆ. ಎರಡು ದಿನಗಳಲ್ಲಿ ಪ್ರಮಾಣ ಪತ್ರ ನೀಡಬೇಕಾದ ಇಕ್ಕಟ್ಟಾದ ಪರಿಸ್ಥಿತಿಯಲ್ಲಿ ಲಂಚ ಕೊಟ್ಟರೆ ಮಾತ್ರ ಪ್ರಮಾಣ ಪತ್ರ ನೀಡುವುದಾಗಿ ಹೇಳುವ ಅಧಿಕಾರಿಗಳು ಇದಕ್ಕಾಗಿ ಕೋಪಿಸಿಕೊಂಡ ಬುಡಕಟ್ಟಿನವರನ್ನು ಕತ್ತು ಹಿಡಿದು ಹೊರದೂಡಿ ಜಾತಿಯನ್ನು ಹೇಳಿ ಅವಮಾನಪಡಿಸುವ ಮೂಲಕ ನಾಟಕ ಕೊನೆಗೊಳ್ಳುತ್ತದೆ.

ಸೇರಿಯಿನ್ ತಾಲಾಟ್ಟು (ಕೇರಿಯ ಲಾಲಿಹಾಡು): ಮು.ಜೀವಾರವರ ೧೯೯೭ರಲ್ಲಿ ಪ್ರಕಟವಾದ 'ಸೇರಿಯಿನ್ ತಾಲಾಟ್ಟು' ನಾಟಕವು ಆಪ್‌ಸ್ಟಿಟ್ ಸಂಸ್ಥೆಯಿಂದ ಪ್ರದರ್ಶನಗೊಂಡಿತು. ಊರಿನೋಟ, ಊರನ್ನು ಕಾಯುವುದು ನಾಟಕದ ಮುಖ್ಯ ಕಥಾ ವಸ್ತುವಾಗಿದೆ. ಹಬ್ಬ ಹರಿದಿನಗಳಲ್ಲಿ ಊರಿನ ಬೀದಿಗಳಲ್ಲಿ ಊಟ(ಅನ್ನ) ತರಲು ಗಡಿಗೆಯನ್ನು ತೆಗೆದುಕೊಂಡು ಹೋಗುವ ಕೇರಿ ಜನರು, ಅನ್ನ ತೆಗೆದುಕೊಳ್ಳುವುದರಲ್ಲಿ ಒಬ್ಬರಿಗೊಬ್ಬರು ನಾ ಮುಂದು ತಾ ಮುಂದು ಎಂದು ಹೋಗಿ ಒದೆ ಬಿದ್ದು ರಕ್ತ ಹರಿದು ಗಾಯ ಮಾಡಿಕೊಳ್ಳುವ ಮಕ್ಕಳು, ವಯಸ್ಸಾದ ದಲಿತ ಸ್ತ್ರೀಯರ ನೋವು, ಊರನ್ನು ಕಾಯುವವರ ಸಂಕಟಗಳನ್ನು ನಾಟಕ ವಿವರಿಸುತ್ತದೆ.

ಪವಳಕ್ಕೂಡಿ ಅಲ್ಲದು ಕುಡುಂಬ ವಳಕ್ಕು (ಪವಳಕ್ಕೂಡಿ ಅಥವಾ ಕೌಟುಂಬಿಕ ಕೇಸು): ಕರು ಅಳ ಗುಣಶೇಖರನ್‌ರ ೨೦೦೧ರಲ್ಲಿ ಪ್ರಕಟವಾದ 'ಪವಳಕ್ಕೂಡಿ ಅಲ್ಲದು ಕುಡುಂಬ ವಳಕ್ಕು' ಎಂಬ ನಾಟಕವು ಆರು ಸ್ತ್ರೀಯರನ್ನು ಮದುವೆ ಆದ ಅರ್ಜುನನನ್ನು ಅದಕ್ಕೆ ಸಹಾಯ ಮಾಡಿದ ಕೃಷ್ಣನನ್ನು ವಿಮರ್ಶಿಸುವ ಹಾಗೆ ನಿರೂಪಿತಗೊಂಡಿದೆ. ಪುರಾಣ ಕಥೆಗಳನ್ನು ನಾಟಕವಾಗಿಸುವಾಗ ಮಾಡುವ ಅದರ ಪಾವಿತ್ರ್ಯತೆಯನ್ನು ಕಾಪಾಡಬೇಕು ಎಂಬ ತತ್ವವನ್ನು ಇಲ್ಲಿ ವಿರೋಧಿಸಿರುವುದನ್ನು ಕಾಣಬಹುದು. ಇದನ್ನು ಅವರು ತಮ್ಮ ಮುನ್ನುಡಿಯಲ್ಲಿ ತಿಳಿಸುವಂತೆ "ಪವಳಕ್ಕೊಡಿ ನಾಟಕದಲ್ಲಿ ಶಂಕರ್‌ದಾಸ್ ಸ್ವಾಮಿಗಳು ಮತದ ಒತ್ತಡಕ್ಕೆ ಸಿಲುಕಿ ದೇವರ ಪಾತ್ರಗಳಾಗಿ ಭಾವಿಸಿ ಬರೆದಿರುವುದು ಪ್ರಸ್ತುತ ಕಾಲದ ದೃಷ್ಟಿಕೋನದಲ್ಲಿ ಓದಿದಾಗ ಕೋಪವನ್ನು ತರಿಸುತ್ತದೆ. ಇದನ್ನು ಬೇರೆ ರೀತಿಯ ನಾಟಕವಾಗಿ ಮಾಡಬೇಕೆಂದು ನಿರ್ಧಾರ ಮಾಡಿ"

(ಕೆ.ಎ.ಗುಣಶೇಖರನ್, ಪವಳಕ್ಕೂಡಿ ಅಲ್ಲಿದು ಕುಡುಂಬ ವಳಕ್ಕು, ಮುನ್ನುಡಿ) ಎಂದು ದಾಖಲಿಸುತ್ತಾರೆ.

ದಲಿತರ ನರಬಲಿ ನೀಡುವಿಕೆ

ಆರಂಭದಲ್ಲಿ ಮುಲ್ಕ್‌ರಾಜ್ ಆನಂದ್ ಮತ್ತು ಅಂಬೇಡ್ಕರ್‌ರ ಸಂಭಾಷಣೆಯ ಮೂಲಕ ನಾಟಕ ಆರಂಭಗೊಳ್ಳುತ್ತದೆ. ಬರಹಗಾರರಾದ ಮುಲ್ಕ್‌ರಾಜ್ ಆನಂದ್ ಮತ್ತು ಅಂಬೇಡ್ಕರ್‌ಗೆ ನಮಸ್ಕಾರ ಎಂದಾಗ ಅಂಬೇಡ್ಕರ್ ನಮಸ್ಕಾರಕ್ಕಿಂತ ನಾನು 'ಓಂ ಮಣಿ ಪದ್ಮಯೇ' ಎನ್ನುವುದನ್ನೇ ಇಷ್ಟಪಡುತ್ತೇನೆಂದು ಹೇಳುತ್ತಾರೆ. ನಾನು ನಿಮ್ಮ ಮುಂದೆ ತಲೆಬಾಗುತ್ತಿದ್ದೇನೆ ಎನ್ನುವ ಅರ್ಥವನ್ನು ನಮಸ್ಕಾರ ಪದಕೊಟ್ಟರೆ 'ಓಂ ಮಣಿ ವಹ್ಮಾಯೇ' 'ತಾವರೆಗಳು ಅರಳಿ ಏಳಲಿ' ಎನ್ನುವ ಅರ್ಥ ನೀಡುತ್ತದೆ ಎನ್ನುತ್ತಾರೆ. ಮುಂದುವರೆದು ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣ ಮತ್ತು ಶಿಕ್ಷಕರಿಗೆ ದಿನವೂ ಹೊಸ ಪ್ರಶ್ನೆಯನ್ನು ಯುವಕರು ಕೇಳುವಂತೆ ಪ್ರೇರೇಪಿಸಬೇಕು ಎಂದು ಸಂಭಾಷಣೆ ಮುಂದುವರಿಯುತ್ತಿದ್ದಾಗ ರಂಗದಲ್ಲಿ ಒಂದು ತೇರು ಪ್ರವೇಶ ಆಗುತ್ತದೆ.

"ನಾಲ್ಕು ವರ್ಗ ಜಾತಿಯಲ್ಲಿ ನಾವು

ಮನುಜರಾಗಿಲ್ಲ

ನಾಯಿಗಿಂತ ಕೇಡಾದೆವು ಜೀವನ

ನಮಗೆ ಇಲ್ಲ"

ಎಂಬ ಹಾಡು ಹಾಡುತ್ತಾ ತಮಟೆ ಬಾರಿಸಿಕೊಂಡು ಬರುವ ದೃಶ್ಯ ಕಂಡು ಬರುತ್ತದೆ.

"ನಮ್ಮ ಊರು ಅಮ್ಮನ ತೇರು ಈ ವರ್ಷ ಓಡದೇ, ಚಕ್ರ ಒಡೆದು ಹೋದದು ಊರಿನಲ್ಲಿ ಎಲ್ಲಾ ಜನರಿಗೂ ತಿಳಿದದ್ದೇ. ಏಕೆ ಆ ರೀತಿ ಚಕ್ರದೊಡನೆ ತೇರು ಒಡೆಯಿತೆಂದು ಮಾತಾಡಲು, ತೇರಿನ ಚಕ್ರ ಮಾಡಿ ಮತ್ತೆ ಅಂಟಿಸಲು ಏನು ಸಂಪ್ರದಾಯ ವಿಧಿ ವಿಧಾನ ಮಾಡಬೇಕೆಂದು ಮಾತಾಡಲು ನಮ್ಮ ಊರು ದೇವಸ್ಥಾನದ ಬಾಗಿಲಲ್ಲಿ ಸಭೆ ನಡೆಸಲಾಗುವುದು ಎಲ್ಲರೂ ಬಂದು ಸೇರಬೇಕು(ಬಲಿ ಆಡುಗಲ್, ಕೆ.ಎ.ಗುಣಶೇಖರನ್, ನಿರಪ್ಪಿರಿಗ್ಯೆ, ಪು. ೯೪) ಎಂದು ಒಬ್ಬ ತಮಟೆ ಬಾರಿಸುತ್ತಾನೆ. ಸಭೆ ಸೇರಿದ ಎಲ್ಲರು ಚಕ್ರ ಏಕೆ ಒಡೆಯಿತು ಎಂದು ತಮ್ಮ ತಮ್ಮ ಅಭಿಪ್ರಾಯ ತಿಳಿಸುತ್ತಾರೆ. ಕೊನೆಗೆ ನಾಯಕನಿಗೆ ತಮ್ಮ ಅಭಿಪ್ರಾಯ ತಿಳಿಸಲು ಬಿಡುತ್ತಾನೆ. ಕೊನೆಗೆ ನಾಯಕನು (ಬ್ರಾಹ್ಮಣ)

"ಚಿಕ್ಕ ತಪ್ಪಾಗಿದ್ದರೆ ನಿಂಬೆ ಹಣ್ಣನ್ನು ಕತ್ತರಿಸಿ ಬಲಿ ನೀಡಿದ್ದರೆ ಮೈಲಿಗೆ ಹೋಗಿ ಬಿಡುತ್ತಿತ್ತು. ಆದರೆ ಊರಿನ ಸಣ್ಣ ಜಾತಿಯವರು ಮಾಡಿದ ದೊಡ್ಡ ತಪ್ಪು ಆಗಿದೆ. ಆದ್ದರಿಂದಲೇ ಇಷ್ಟು ದೊಡ್ಡ ಸಂಕಟ ವೇದಗಳಲ್ಲಿ ನೋಡಿದಾಗ ಅತೀ ಬುದ್ಧಿವಂತಿಕೆಯಿಂದ ಕೆಲವು ಬಲಿಗಳನ್ನು ದೊಡ್ಡವರು ಮಾಡಿದ್ದಾರೆ. ಏಕಲವ್ಯನು ಸಣ್ಣ ಜಾತಿಯವನು, ಬಿಲ್ವಿದ್ಯೆಕಾರ,

ಅವನಂತ ಮನುಷ್ಯ ದೊಡ್ಡವರಾಗಿಬಿಟ್ಟರೆ ಲೋಕದ ಗತಿ ಏನಾಗುತ್ತದೆ ಎಂದು ಯೋಚಿಸಿ ಅವನ ಹೆಬ್ಬೆರಳನ್ನು ಕತ್ತರಿಸಲಾಯಿತು"(ಅದೇ ಪು. ೯೫) ಎಂದಾಗ ಅಲ್ಲಿದ್ದವರು ಹೆಬ್ಬೆರಳನ್ನು ಮಾತ್ರವಲ್ಲವೇ ಕತ್ತರಿಸಿದರಾಯಿತು ಎಂಬ ಪ್ರಶ್ನೆಗಳಿಗೆ ಮತ್ತೆ ಆ ಮುಖ್ಯಸ್ಥನು ಆ ಹೆಬ್ಬೆರಳಿನಲ್ಲೇ ಅವನ ಪ್ರಾಣ ಇದ್ದಿತೆಂದು ಉತ್ತರಿಸುತ್ತಾನೆ. ಇದರ ನಂತರ ಅವನಿಗೆ ದೇವರು ಮೈಮೇಲೆ ಬಂದಂತೆ ಆಡಿ ನರಬಲಿ ಕೇಳುತ್ತಾನೆ. ಇಂದಿನಿಂದ ಎಂಟು ದಿನದೊಳಗೆ ಬಲಿ ನೀಡಬೇಕೆಂದು ದೇವರು ಮೈ ಮೇಲೆ ಬಂದ ಮನುಷ್ಯ ನುಡಿಯುತ್ತಾನೆ.

ಇದರ ನಂತರ ಪರೈಯರ್ ಬೀದಿಯಲ್ಲಿ ಒಂದು ಸಭೆ ನಡೆಯುತ್ತದೆ, ಅಲ್ಲಿ ಉಡುಮನ್ ಮತ್ತಿತರರು ಇದ್ದಾರೆ. ಅದರಲ್ಲಿ ಚಿನ್ನಾಂಡಿಯು ಬಲಿ ಕೊಡಲು ಮೇಲ್ಜಾತಿಯವರು ಸೂಚಿಸಿರುವುದನ್ನು ಕೇಳಿ ಚಿನ್ನಾಂಡಿಯ ಹೆಂಡತಿ ದುಃಖಿಸುತ್ತಾಳೆ. ಇದಕ್ಕೆ ಚಿನ್ನಾಂಡಿ

"ಇವತ್ತು ನನ್ನನ್ನು ಗುರಿ ಇಟ್ಟವರು ನಾಳೆ ನಿಮ್ಮನ್ನು ಗುರಿ ಇಡುವುದಿಲ್ಲ ಎನ್ನುವುದಕ್ಕೆ ಏನು ನಿಶ್ಚಯ? ನಾವೆಲ್ಲರೂ ಒಂದಾಗಿ ಮೇಲ್ಜಾತಿಯು ಹೀಗೆ ಪರೈಯರ್‌ರನ್ನು ಬಲಿ ನೀಡಲು ತೀರ್ಮಾನಿಸಲು ತಪ್ಪೆಂದು ಹೇಳೋಣ ಬನ್ನಿ" (ಅದೇ ಪು. ೯೮) ಎಂದು ಹೇಳುತ್ತಾನೆ. ಕೊನೆಗೆ ಚಿನ್ನಾಂಡಿ ಮತ್ತು ಅವನ ಹೆಂಡತಿ ಅಂದಿನ ರಾತ್ರಿ ತಪ್ಪಿಸಿಕೊಂಡು ಹೋಗುತ್ತಾರೆ. ಅವರಿಗೆ ಮಂಗಳಮುಖಿಯರೊಬ್ಬರು ಸಹಾಯ ಮಾಡುತ್ತಾರೆ. ನಂತರ ಉಡುಮನ್‌ನನ್ನು ಬಲಿಕೊಡಲು ನಿರ್ಧರಿಸಲಾಗುತ್ತದೆ. ಅವನನ್ನು ಬಲಿ ಕೊಡುವಾಗ ಉಡುಮನ್ ತನ್ನ ಹೆಂಡತಿಯನ್ನು ಬಲಿ ಕೊಡುವಂತೆ ಕೇಳಿಕೊಳ್ಳುತ್ತಾನೆ. ಇದಕ್ಕೆ ಮಂಗಳಮುಖಿಯೊಬ್ಬರು, 'ಗಂಡಸರೆಲ್ಲಾ ಸೇರಿ ಒಬ್ಬ ಮಹಿಳೆಯನ್ನು ಬಲಿ ಕೊಡಲು ನೋಡುತ್ತಿದ್ದೀರಲ್ಲಾ ಹೆಂಗಸರು ಏನು ಪಾಪ ಮಾಡಿದ್ದಾರೆ. ಪರೈಯರ್ ಜಾತಿಗಿಂತ ಕೀಳಾದ ಜಾತಿಯೇ ಈ ಹೆಣ್ಣು ಜಾತಿ. ಹೆಂಗಸರನ್ನು ಈ ರೀತಿ ಕಿತ್ತು ಬಿಸಾಡುವ ಸೊಪ್ಪಿನಂತೆ ನೆಡೆಸಿಕೊಂಡಿರಿ ಹೆಣ್ಣಿನ ಪಾಪ ಸುಮ್ಮನೆ ಬಿಡದು"(ಅದೇ ಪು. ೧೦೦) ಎಂದು ಪ್ರಾರ್ಥಿಸುತ್ತಾಳೆ.

'ಯಾವ ರೀತಿಯಲ್ಲಿ ಪಾಪಿಗಳೇ

ಹೆಂಗಸರು ಯಾವ ಬಲೆಯಲ್ಲಿ ಪಾಪಿಗಳೇ

ಎಂದೂ ಬಲಿ ಆಡುಗಳು

ಎಲ್ಲಿಯೂ ಬಲಿ ಆಡುಗಳು'

ಕೊನೆಗೆ ಉಡುಮನ ಹೆಂಡತಿ "ಆಗಲ್ಲ ನಾನು ಸಾಯಲ್ಲ ಅಮ್ಮನ ದೇವಸ್ಥಾನಕ್ಕೆ ನಾವು ಪ್ರವೇಶಿಸಬಹುದೇ! ಕಾಲ ಕಾಲದಿಂದಲೂ ನಿಮಗೆ ಗುಲಾಮರಾಗಿರುವ ನಮ್ಮ ಜಾತಿಯಲ್ಲಿ ಮಾತ್ರ ನಿಮ್ಮ ದೇವರು ಬಲಿ ಕೇಳುತ್ತದೆಯೇ? ನನಗೆ ಯಾವ ದೇವರೂ ಬೇಡ ನಾನು ದೇವರಾಗುವುದೂ ಬೇಡ? ಅಮ್ಮನಿಗೆ ನಿಮ್ಮ ಜೀವನವೆಂದರೆ ಕಹಿಯಾಗುತ್ತಿದೆಯೇ ನಿಮ್ಮ ಹೆಂಡತಿಯರ ಜೀವವೆಂದರೆ ಕಹಿಯಾಗುತ್ತದೆಯೇ? ಸ್ವಾಮಿ ಬಲಿ ಕೇಳುತ್ತದೆಯೇ? ಅಥವಾ

ಆಸಾಮಿ ಬಲಿ ಕೇಳುತ್ತದೆಯೇ? (ಅದೇ ಪು. ೧೦೦-೧೦೧) ಎಂದು ವಿರೋಧಿಸುತ್ತಾಳೆ. ಕೊನೆಗೆ ಹೆಂಗಸರೆಲ್ಲಾ ಸೇರಿ ಹೆಂಗಸರು ಬಲಿ ಆಡುಗಳ ಎಂದು ಹಾಡು ಮುಂದುವರೆಸುತ್ತಾರೆ.

"ತಾಳಿಗಳು ನಮ್ಮ ಬೇಲಿಗಳು-ಯಾವ

ಜಾತಿಯಲ್ಲೂ ಹೆಂಗಸರು ಗುಲಾಮರು

ಕೌಟುಂಬಿಕ ಹೊರೆಯ -ಹೆಂಗಸರು

ಕೂಲಿ ಇಲ್ಲದ ಗುಲಾಮರು

ದೇವಾಲಯದಲ್ಲಿ ಹೆಣ್ಣು ದೇವತೆಗಳು

ತಿಪ್ಪೆಯಲ್ಲಿ ಹೆಣ್ಣು ಮಗುಗಳು" (ಅದೇ ಪು. ೧೦೧) ಎಂದು ಹೆಣ್ಣಿನ ಅಸಹಾಯ ಸ್ಥಿತಿಯನ್ನು ಹೇಳುತ್ತಾರೆ. ಮೊದಲಿನಂತೆ ಮುಲ್ಕರಾಜ್ ಆನಂದ ಮತ್ತು ಅಂಬೇಡ್ಕರ್‌ರ ಸಂಭಾಷಣೆ ಮುಂದುವರೆಯುತ್ತದೆ.

ಆನಂದ್: ದೂರ ಸರಿಸಿ ಶೋಷಿತ ಜನರಿಗೆ ನೀವು ಹೇಳುವ ಸಂಗತಿ ಏನು?

ಅಂಬೇಡ್ಕರ್: ಅಸ್ಪೃಶ್ಯತೆಯ ಶೋಷಣೆ ಅನುಭವಿಸುತ್ತಿರುವ ಈ ಜನರಿಗೆ ತಿಳಿಸುವುದು ಒಂದೇ "ಸಿಂಹವಾಗಿರಿ ಹಿಂದೂಗಳು ತಮಗೆ ಅಧಿಕಾರ ಬೇಕು ಎನ್ನುವುದಕ್ಕಾಗಿ ದೇವರಿಗೆ ಆಡುಗಳನ್ನು ಮಾತ್ರ ಬಲಿ ನೀಡುತ್ತಾರೆ. ಸಿಂಹಗಳನ್ನು ಅಲ್ಲ" (ಅದೇ ಪು. ೧೦೧) ಎನ್ನುವ ಮೂಲಕ ನಾಟಕ ಕೊನೆಗೊಳ್ಳುತ್ತದೆ.

ಬೌದ್ಧ ಧರ್ಮವನ್ನು ಸ್ವೀಕರಿಸುವಿಕೆ: "ನಮ್ಮ ಜೀವನ ನಮ್ಮ ಕೈಯಲ್ಲಿವೆ. ಹಿಂದೂ ಧರ್ಮದ ಕೈಯಲ್ಲಿ ಇಲ್ಲವೆಂದು ಯುದ್ಧರಂಗದ ವೀರರಿಗೆ ತಿಳಿಸಿ ಅವರನ್ನು ಮತಾಂತರ ಆಗಲು ಏಕಲೈವಿ ಪ್ರೇರೇಪಿಸುತ್ತಾಳೆ. ಶೋಷಿತ ಜನರು ಬೌದ್ಧವನ್ನು ಸ್ವೀಕರಿಸುವುದೇ ದಲಿತರ ಬಿಡುಗಡೆಗೆ ದಾರಿ ಎಂದು ಏಕಲೈವಿ ಯೋಧರೊಂದಿಗೆ ಬುದ್ಧ ಭಿಕ್ಷುವಿನ ಎದುರು ನಾವು ಹಿಂದೂಗಳಾಗಿ ಹುಟ್ಟಿದ್ದೇವೆ ಆದರೆ ಹಿಂದೂಗಳಾಗಿ ಸಾಯುವುದಿಲ್ಲ ಎಂದು ದೃಢ ನಿರ್ಧಾರ ಮಾಡುತ್ತಾಳೆ." ಮತಾಂತರದಿಂದ ಬಿಡುಗಡೆ ಸಾಧ್ಯವಿಲ್ಲ ಎಂದಾಗ ನಮ್ಮ ಶತೃಗಳು ಏಕೆ ಅದನ್ನು ತಡೆಯುತ್ತಾರೆ ಎಂಬುದನ್ನು ಅರಿತುಕೊಂಡಾಗ ಮತಾಂತರದ ಅವಶ್ಯಕತೆ ತಿಳಿದು ಬರುತ್ತದೆ.

ದೇವಸ್ಥಾನ ಪ್ರವೇಶಕ್ಕೆ ಅಡ್ಡಿ: ದಲಿತರು ಹಿಂದೂಗಳಲ್ಲ ಒಂದು ವೇಳೆ ಹಿಂದುವಾಗಿದ್ದರೆ ಬ್ರಾಹ್ಮಣರು ಪೂಜಿಸುವ ದೇವರನ್ನು ಮುಗಿಯುವುದನ್ನು ಬಿಟ್ಟು ಬೇರೆ ದೇವರನ್ನು ಏಕೆ ಪೂಜಿಸಿ ಎನ್ನುತ್ತಾರೆ? ಹಾಗಾದರೆ ಸಂಚುಗಾರಿಕೆಯಿಂದಲೇ ದಲಿತರನ್ನು ಹಿಂದೂ ಮತದಲ್ಲಿ ಹಾಕಲಾಗಿದೆ ಎಂಬ ಪ್ರಶ್ನೆಗೆ ಉತ್ತರ ಸಿಗುವಂತೆ ಏಕಲೈವಿ ನಾಟಕ ಸಂಭಾಷಣೆಗಳಿಂದ ಕೂಡಿದೆ.

ದಲಿತ: "ನೀವು ಇಲ್ಲದಿದ್ದಾಗ ದೇವಸ್ಥಾನಕ್ಕೆ ಬಂದು ಪೂಜೆ ಮಾಡಬಹುದೇ ಸ್ವಾಮಿ?"

ಬ್ರಾಹ್ಮಣ: ಲೇ ಅದಕ್ಕೆಲ್ಲಾ ನೀನು ಆಸೆ ಪಡಬಾರದುಲೇ ಬೇಕಾದರೆ ಬೆನ್ನಲ್ಲಿ ಕೊಕ್ಕೆ ಹಾಕಿಕೊಂಡು ಅಮ್ಮನಿಗೆ ಮಾರುತಿ ಕಾರು ಎಳೆಯಿರಿ; ಕೈಲಾದರೆ ದೊಡ್ಡ ಲಾರಿಯನ್ನು ಎಳೆಯಿರಿ; ದೇಹದ ತುಂಬಾ ನಿಂಬೆ ಹಣ್ಣನ್ನು ಚುಚ್ಚಿಕೊಂಡು ಆಕಾಶದಲ್ಲಿ ದೀಪಾರಾಧನೆ ಮಾಡಬಹುದು; ಬಾಯಿಯಲ್ಲಿ ಈ ಕಡೆಯಿಂದ ಆ ಕಡೆಯವರೆಗೆ ಹತ್ತು ಅಡಿ ಶೂಲ ಚುಚ್ಚಿಕೊಂಡು ಟ್ರಾಫಿಕ್‌ಜಾಂ ಮಾಡಬಹುದು; ಬೆಂಕಿಯನ್ನು ಹೂವಂತೆ ತೆಗೆದುಕೊಂಡು ನಡೆಯಬಹುದು. ಆಗಲೇ 'ಅಮ್ಮನ ಅನುಗ್ರಹ ನನ್ನ ಮೂಲಕ ನಿಮಗೆ ಬಂದು ಸೇರುತ್ತೆಲೇ' (ಏಕಲೈವಿ ಪು. ೧೧) ದಲಿತರು ದೇವಸ್ಥಾನಕ್ಕೆ ಪ್ರವೇಶವಿಲ್ಲದಿರುವುದನ್ನು ಈ ಸಂಭಾಷಣೆ ತಿಳಿಸುತ್ತದೆ. ಒಂದು ದೇವರ ದರ್ಶನ ಪಡೆಯಬೇಕಾದರೂ ಅವರು ದೇಹ ದಂಡನೆ ಮಾಡಬೇಕು, ಆಗಲೂ ಅದು ಪೂಜಾರಿಯ ಮೂಲಕವೇ ದೇವರನ್ನು ಸೇರುತ್ತದೆ ಎಂಬ ಮಾತನ್ನು ತಿಳಿಯಬಹುದು. ಇಂದಿಗೂ ತಮಿಳು ದಲಿತ ಜನರು ಮಾರಿಯಮ್ಮ, ಮುರುಗನ್ ಮುಂತಾದ ದೇವರ ಆಚರಣೆಯಲ್ಲಿ ಈ ರೀತಿ ಮಾಡುವುದನ್ನು ಕಾಣುತ್ತೇವೆ.

ಕ್ರೈಸ್ತ ಧರ್ಮದಲ್ಲಿನ ಅಸ್ಪೃಶ್ಯತೆ: "ಕ್ರೈಸ್ತರಿಗೆ ಎರಡು ದೇವರುಗಳು ಮತವನ್ನು ಕಾಪಾಡಲು ಏಸುವನ್ನು ಪ್ರಾರ್ಥಿಸುತ್ತಾರೆ, ಜಾತಿಯನ್ನು ಕಾಪಾಡಲು ಮನುವನ್ನು ಪೂಜಿಸುತ್ತಾರೆ." (ಅದೇ, ಪು. ೪೮) ಎಂದು ಕ್ರೈಸ್ತರಲ್ಲಿ ನಡೆಯುವ ಅಸ್ಪೃಶ್ಯತೆಯ ಕುರಿತು ಮಾತಾಡಲಾಗುತ್ತದೆ.

ಹಿಂದುತ್ವದ ಸಂಚು: ಒಂದು ಮತದ ಸಂಚುಗಳಿಗೆ ದಲಿತರೇ ಬಲಿಯಾಗುತ್ತಾರೆ ಎಂಬ ಸ್ಥಿತಿಯಲ್ಲಿ ಬ್ರಾಹ್ಮಣರ ಸಂಚನ್ನು ಪ್ರಕಟಿಸುವಂತಿದೆ ದಲಿತ ನಾಟಕಗಳ ಸಂಭಾಷಣೆಗಳು "ಇಂದು ಸತ್ತ ದನದ ಚರ್ಮವನ್ನು ಸುಲಿದದ್ದಕ್ಕಾಗಿ ದಲಿತರನ್ನು ಹಿಂದೂ ಧರ್ಮದಂತೆ ಕಲ್ಲಿನಲ್ಲಿ ಹೊಡೆದು ಕೊಂದವರೆ ಅಂದು ಯಜ್ಞಗಳಿಗಾಗಿ ದನಗಳನ್ನು, ಕುದುರೆಗಳ ಚರ್ಮ ಸುಲಿದು ಬೆಂಕಿಯಲ್ಲಿಟ್ಟು ಉಸಿರುಗಟ್ಟಿಸಿದರು. ವರ್ಣಾಶ್ರಮ ವಕ್ರಗಳೆಲ್ಲಾ ಹಿಂದೂ ಧರ್ಮ ಎಂದು ಜನರ ಉಸಿರುಕಟ್ಟಿಸಿದರು. ಮಾನವೀಯತೆ ಮರೆತ ಅದು ಮತವೇ ಅಲ್ಲ. ವರ್ಣಾಶ್ರಮ ಹೇಳಿದರೆ ಅದು ದೇವರೇ ಅಲ್ಲ" (ಅದೇ, ಪು. ೨೩) ಎಂದು ಹಿಂದುತ್ವವನ್ನು ವಿಮರ್ಶಿಸುತ್ತದೆ.

ಮನುಧರ್ಮದ ನಿಜವಾದ ಮುಖವನ್ನು ಪರಿಚಯಿಸುವಂತೆ ಈ ಕೆಳಗಿನ ಸಂಭಾಷಣೆಗಳು ಕೂಡಿವೆ. "ಅರಸ ಅಧಿಕಾರ ಇರುವಾಗ ನಿನ್ನ ಆಕ್ರೋಶ ಏನು ಮಾಡುತ್ತದೆ. ಪಂಚಮ ಜಾತಿ ನಾಯಿ! ನನ್ನ ಜಾತಿ ಯಾವುದೆಂದು ತಿಳಿದೂ ಎದುರಾಗಿಯ... ಯಾವುದೇ ವಿದ್ಯೆಯಿಲ್ಲದೆ ನಮ್ಮನ್ನು ಎದುರಿಸಿದ ಏಕಲೈವನ್‌ನ ಹೆಬ್ಬರಳನ್ನು ಕಡೆದು ಕಾಣಿಕೆ ಎಂದು ನಂಬಿಸಿದೆವು. ಶಾಸ್ತ್ರವನ್ನು ಗೌರವಿಸದೇ ನಮ್ಮ ಸಮ್ಮತಿ ಪಡೆಯದೆ ತಪ್ಪೊವಿದ್ಯೆ ಪಡೆದನು ಸಂಬುಕನ್.... ಅವನ ಶರೀರವನ್ನು ತೋರಿಸಿದೆವು. ದೇವರು ಸ್ವರ್ಗ ಕೊಟ್ಟರೆಂದು ಕಥೆ ಕಟ್ಟಿಸಿದೆವು. ಪರಕುಲದ ನಾಯಿಗೆ ಮೇಲ್ಜಾತಿ ದೇವರು ಕೇಳುತ್ತದೆಯೇ? ಅದಕ್ಕೆ ಆಸೆಪಟ್ಟು ನಂದವನ್ನು ಬೆಂಕಿಯಲ್ಲಿ

ತಳ್ಳಿ ದೇವರಾಗಿಸಿದ್ದು ನಾವಲ್ಲವೆ? ಬ್ರಾಹ್ಮಣನನ್ನು ವಿರೋಧಿಸಿದವು ಬದುಕಿದ್ದಾಗ ಚರಿತ್ರೆಯೇ ಇಲ್ಲ ಎಂದು ಏಕಲೈವಿಯನ್ನು ಹೆದರಿಸುತ್ತಾನೆ" (ಅದೇ, ಪು. ೪). ಮೇಲ್ಜಾತಿಯವರು ಮೇಲು ವರ್ಗದವರು ಜೀವಿಸುವುದಕ್ಕೆ ಮನುಧರ್ಮ ಬರೆದಿರುವಂತೆ ಈ ನಾಟಕ ತಿಳಿಸುತ್ತದೆ.

"ನೀನು ಹೇಳುವ ವೇದ, ಶಾಸ್ತ್ರ ಯಾವುದೇ ಆಗಿದ್ದರೂ ಅದಕ್ಕಿಂತ ನಮ್ಮ ಕೇರಿಯ ಮನೆಯ ಅಂಗಳದಲ್ಲಿರುವ ಕಸಬರಿಗೆ ಎಷ್ಟೋ ಶ್ರೇಷ್ಠ ಹೋಗಲೇ ಹೋಗು, ಆಡುವುದು ಕುಣಿಯುವುದು ನಮಗೆ ಕಸುಬು. ಕೊಯ್ಲು ಮಾಡುವಾಗ ಬೋರಾದಾಗ ಕಲೆಗಳನ್ನು ಕಲಿತವರು ನಾವು. ನಾವು ಕಷ್ಟಪಟ್ಟು ಕಂಡುಕೊಂಡ ಕಲೆಗಳನ್ನು ನಿನಗೆ ತೋರಿಸಲು, ರೂಢಿಸಲು ಉಪಯೋಗಿಸುತ್ತಿದ್ದೀಯಾ! ಸಾಧಾರಣ ಜನರನ್ನು ನಾಲ್ಕು ವರ್ಗಗಳಾಗಿ ವಿಭಾಗಿಸಿಬಿಟ್ಟಿರಾ. ದುಡಿಯದೇ ವೇದ ಹೇಳಿಕೊಳ್ಳುತ್ತಿರುವನು ಮೇಲ್ಜಾತಿ. ಸೂರ್ಯನ ಬೆಂಕಿಯಲ್ಲಿ ದುಡಿದು ಕಪ್ಪಾದವನು ಕೀಳುಜಾತಿ ತಿಳಿದಿದೆಯೇ ನಿಮಗೆ? ಕಸುಬಿಗಾಗಿ ಹುಟ್ಟಿದವರನ್ನು ಜಾತಿಗಳಾಗಿ ವಿಭಾಗಿಸಿದಿರಿ" (ಅದೇ, ಪು. ೧೮) ಎಂಬ ಸಂಚನ್ನು ಹೊರ ಹಾಕುತ್ತದೆ.

"ಬ್ರಾಹ್ಮಣ: ನಿನ್ನಂತೆ ಅರ್ಧ ಮನುಷ್ಯರೆಲ್ಲ ದೇವಸ್ಥಾನದಲ್ಲಿ ಪ್ರವೇಶಿಸಿದರೆ ಅಮ್ಮನೇ ದೇವಸ್ಥಾನದಲ್ಲಿ ಪ್ರವೇಶಿಸುವುದಿಲ್ಲ" (ಅದೇ, ಪು. ೩೩) ದಲಿತರು ದೇವಸ್ಥಾನಗಳಿಗೆ ಹೋದರೆ ದೇವಾಲಯದಲ್ಲಿರುವ ದೇವರೇ ಅವರನ್ನು ಪ್ರವೇಶಿಸುವುದಿಲ್ಲ ಮತ್ತು ಹೊರ ಬಂದುಬಿಡುತ್ತಾಳೆಂದು ದೇವಸ್ಥಾನದಲ್ಲಿ ಪ್ರವೇಶಿಸದಂತೆ ಮೇಲ್ಜಾತಿಯರ ಸಂಚುಗಾರಿಕೆಯನ್ನು ನಾಟಕ ತೋರಿಸುತ್ತದೆ.

ಮತಾಂತರ: "ಮನುಷ್ಯನ ಜೀವನವನ್ನೇ ಛಿದ್ರಗೊಳಿಸಿದ ವೇದ ಶಾಸ್ತ್ರಗಳ ವಿರುದ್ಧದ ಧ್ವನಿ ನೀಡಿದವರು ಬುದ್ಧರು. ಇವರು ದಲಿತರ ಪ್ರಧಾನ ಅವಶ್ಯಕತೆಗಳಿಗಾಗಿ ತಡೆಯುಂಟು ಮಾಡಿದರೆ, ಹಕ್ಕುಗಳನ್ನು ನೀಡದೆ ತಿರಸ್ಕರಿಸಿದರೆ, ಆಯುಧಗಳನ್ನು ಬಳಸುವಂತೆ ಹೇಳಿದವರು. ಲೋಕದ ಮೊಟ್ಟಮೊದಲ ಸಾಮಾನ್ಯ ಸಂಪತ್ತಿನ ಕುರಿತು ಹೇಳಿ ಕ್ರಾಂತಿ ಮಾಡಿದ್ದು ಬೌದ್ಧಧರ್ಮ. ದುಃಖಗಳನ್ನು ತೋರಿಸಿ ಸುಖದ ದಾರಿ ತೋರಿಸುವುದು ಬೌದ್ಧ ಧರ್ಮ" (ಅದೇ, ಪು. ೨೪–೨೫) ನೀವು ಚಿಂತನೆ ಆರಂಭಿಸಿ ಬಿಟ್ಟರೆ ಇನ್ನು ಮುಂದೆ ಯಾರನ್ನು ಗುಲಾಮರನ್ನಾಗಿಸಲು ಆಗುವುದಿಲ್ಲ ಎಂಬ ಅಂಶವನ್ನು ಈ ನಾಟಕ ತಿಳಿಸುತ್ತದೆ.

"ನಾನು ಒಬ್ಬ ಹಿಂದುವಾಗಿ ಹುಟ್ಟಿಬಿಟ್ಟಿದ್ದೇನೆ ಅದು ಒಂದು ವಿಪತ್ತು. ಅದನ್ನು ತಡೆಯುವ ಅವಕಾಶ ನನ್ನ ಕೈಯಲ್ಲಿ ಇಲ್ಲ. ಆದರೆ ನಾನು ಒಬ್ಬ ಹಿಂದುವಾಗಿ ಸಾಯುವುದಿಲ್ಲ. ಅದನ್ನು ನಾನು ಪರಿಪೂರ್ಣವಾಗಿ ಹೇಳುತ್ತಿದ್ದೇನೆ. ನೀವು ಹಿಂದೂ ಮತವನ್ನು ಬಿಟ್ಟು ಹೊರ ಬನ್ನಿ" (ಅದೇ, ಪು. ೪೫) ಎಂದು ತನ್ನೊಡನೆ ೫ ಲಕ್ಷ ಜನರನ್ನು ಬೌದ್ಧ ಧರ್ಮಕ್ಕೆ ಮತಾಂತರ ಮಾಡಿಸಿದ್ದರು.

"ದಲಿತರ ಬಿಡುಗಡೆಯೇ ನನ್ನ ತಾರಕಮಂತ್ರ, ಸರ್ಕಾರ, ಅಧಿಕಾರ ಇಂದು ನಿನ್ನ ಕೈಯಲ್ಲಿ ಇರಬಹುದು. ಆ ಅಧಿಕಾರ ಆಡಳಿತವು ನಮ್ಮ ಕೈಗೆ ಬದಲಾಗುತ್ತದೆ. ಆ ದಿನ

ಬಹುದೂರವಿಲ್ಲ. ನಾವು ತಲೆ ಎತ್ತುವ ತಲೆಮಾರುಗಳು. ನನ್ನ ಅಜ್ಜನಿಗೆ ಹಾಕಿದ ನಾಮವನ್ನು ನಮಗೆ ಹಾಕಿಸಲು ನಾವು ಅನುಮತಿಸುವುದಿಲ್ಲ. ಅಸ್ಪೃಶ್ಯತೆಯನ್ನು ನಾಶಮಾಡುತ್ತೇವೆ. ಎಲ್ಲಾ ತಳ್ಳಲ್ಪಟ್ಟ ಜನರು ಒಂದಾಗುತ್ತೇವೆ. ಎಲ್ಲಾ ಶಾಖೆಗಳಲ್ಲಿ ಮೀಸಲಾತಿ ಪಡೆಯುತ್ತೇವೆ. ಜಾತಿ ಇಲ್ಲದ ಸಮಾನವಾದ ಸಮಾಜವನ್ನು ನಿರ್ಮಿಸುತ್ತೇವೆ. ಬ್ರಾಹ್ಮಣ ವರ್ಣಾಶ್ರಮ ಧರ್ಮವನ್ನು ನಾಶಮಾಡುತ್ತೇವೆ." (ಅದೇ, ಪು. ೪೬) ಎಂದು ಏಕಲೈವಿ ನಾಟಕದಲ್ಲಿ ಪುದಿಯ ಏಕಲೈವಿ ಹೇಳುವುದರ ಮೂಲಕ ದಲಿತ ಒಗ್ಗಟ್ಟನ್ನು ತಿಳಿಯಬಹುದು.

ದಲಿತ ಚರಿತ್ರೆ: "ಜಾತಿಯೇ ಇಲ್ಲದ ನನ್ನನ್ನು ಕೀಳು ಜಾತಿ ಎಂದು ಹೇಳುತ್ತಿದ್ದೀರಿ? ನನ್ನ ಚರಿತ್ರೆ ತಿಳಿದಿದೆಯೇ ನಿಮಗೆ? ಚರಿತ್ರೆ ಹೊಂದಿರುವ ಕಲಹ ಪರ್ರೈಯರ್‌ಗಳು ರಂಗಭೂಮಿಯಲ್ಲಿ ಪ್ರಸಿದ್ಧವಾದ ಮಹತ್ವ ಹೊಂದಿದ ಮದುರೈ ವೀರರು ನಾವು. ಮಲ್ಲಯುದ್ಧಕ್ಕೆ ಹೆದರದ ಮಹಾವೀರರು. ಮಾನವನ್ನು ಕಾಯುವ ಅರಸರು(ಅದೇ, ಪು. ೧೯) ಮುಂದುವರೆದು

"ನಾನು ಯಾರು ತಿಳಿದಿದೆಯೇ? ಊರಿನ ನಡುವೆ ಕೋಟೆ ಕಟ್ಟಿಕೊಂಡು ಜೀವಿಸಿದವನು, ಒಬ್ಬ ನಂದನು ಸೀಮೆಯನ್ನು ಆಳಿದನೆಂದು ನಿನ್ನ ಅಜ್ಜ ಹೇಳಲಿಲ್ಲವೇ, ಎಂದು ಒಬ್ಬ ದಲಿತ ಹೇಳಲು ಕ್ಷತ್ರಿಯನು ಲೇ ನೀನು ಎಂತಾ ಚರಿತ್ರೆ ಹೇಳಿದರೂ ವರ್ಣಾಶ್ರಮದಂತೆ ನೀನು ಕೀಳು ಜಾತಿಯವನು ಎನ್ನುತ್ತಾನೆ. ಬೇರೊಬ್ಬರು ವೇಷ ಧರಿಸಿದ ಬ್ರಾಹ್ಮಣರ ಸಂಚನ್ನು ಅರಿತ ಬೌದ್ಧರ ಅರಸ ನಂದನ್ ಅವರನ್ನು ನಾಡನ್ನೆ ಬಿಟ್ಟು ಓಡಿಸಿದರು. ಅವನನ್ನು ಸಂಚುಗಾರಿಕೆಯಿಂದ ಸಿದಂಬರದಲ್ಲಿ ಕೊಂದು ನಾಯನ್ಮಾರುಗಳಾಗಿಸಿ ಬಿಟ್ಟರು" (ಅದೇ, ಪು. ೨೩) ಎಂದು ಮರೆಮಾಚಿದ ಚರಿತ್ರೆಯನ್ನು ನಾಟಕ ತಿಳಿಸುತ್ತದೆ.

ಕೂಲಿ ವ್ಯವಸಾಯಕಾರರ ಸ್ಥಿತಿ: "ಲೋಕದ ಶ್ರಮವರ್ಗದವರೇ! ಒಂದಾಗಿ ಎಂದು ಘೋಷಣೆ ಮಾಡಿ ಕೂಲಿ ಕೇಳಿ ಹೋರಾಡಿದೆವು. ವರ್ಗ ಯುದ್ಧದಲ್ಲಿ ಊರು-ಕೇರಿಯನ್ನು ಮರೆತೆವು. ಆದರೆ ಅವರು ಮರೆಯಲಿಲ್ಲ ನಾವು ೪೪ ಜನ ಮೇಲ್ಜಾತಿಯವರು ನಡೆಸಿದ 'ವೆಣ್‌ಮಣಿ ಯಾಗ'ದಲ್ಲಿ ಕುದುರೆಗಳಾದೆವು (ಅದೇ, ಪು. ೧೮) ಎಂದು ತಿಳಿಸುವುದನ್ನು ಕಾಣಬಹುದು.

ಶಿಕ್ಷಣ ಪಡೆಯುವ ಹಕ್ಕಿನ ತಡೆ: "ಏನು ಮುನಿಯಾ ನಿನ್ನ ಹಾಗೆ ಕೇರಿಯಲ್ಲಿರುವ ಒಬ್ಬೊಬ್ಬರೂ ಅವರ ಮಕ್ಕಳನ್ನು ಶಾಲೆಯಲ್ಲಿ ಓದಿಸಿದರೆ ನಮ್ಮ ದನ, ಕರು, ಆಡುಗಳನ್ನು ಮೇಯಿಸುವವರು ಯಾರುಲೇ? ಶಗಣಿ ಬಳಿಯುವವರು, ತಿಪ್ಪೆ ಎತ್ತುವುದು ಈ ರೀತಿಯ ಕೆಲಸಗಳನ್ನು ನಿಮ್ಮ ಮಕ್ಕಳೇ ಮಾಡಬೇಕು. ಚಿಕ್ಕ ಹುಡುಗರನ್ನು ಓದಿಸಿಬಿಟ್ಟರೆ ನಿನ್ನ ಹಾಗೆ ವಯಸ್ಸಿನಲ್ಲಿ ನೆಲದಲ್ಲಿ ಉಳಿಮೆ ಮಾಡುವುದು, ಗದ್ದೆ ಕೊಯ್ಯುವುದು, ನೀರು ಬಿಡುವುದು, ಕಾವಲು ಕಾಯುವುದು, ಹೊಲಗದ್ದೆಗಳ ಅಂಚು ಕಡಿಯುವುದು, ನಾಟಿ ಮಾಡುವುದು, ಕುಯ್ಲು ಮಾಡುವುದು, ಹಾರಿಸುವುದು, ಗಾಡಿ(ಎತ್ತಿನ ಬಂಡಿ) ಓಡಿಸುವುದು. ಈ ರೀತಿಯ

ಕೆಲಸಗಳನ್ನು ಮಾಡಲು ಆಳು ಇಲ್ಲದೆ ಹೋಗಿಬಿಡುತ್ತೆ, ಸತ್ತ ಮನೆಗಳಿಗೆ ಕಾರ್ಯ ಹೇಳುವುದು ಹೆಣ ಹೂಳಲು ಕುಣಿ ತೆಗೆಯುವುದು ಇದಕ್ಕೆಲ್ಲಾ ನೀವು ಇಲ್ಲದಿದ್ದರೆ ನಾವು ಎಲ್ಲಿಗೆ ಹೋಗಿ ಆಳನ್ನು ಹುಡುಕುವುದು. ಮುನಿಯಾ ದೇವರು ಮೇಲು-ಕೀಳೆಂದು ತಿಳಿಯದೇ ಸೃಷ್ಟಿಸಿದನೆ? ನಿನ್ನ ಮಗ ನನ್ನ ಮನೆಯಲ್ಲಿ ಆಡು, ದನ ಮೇಯಿಸಲು ಕಳುಹಿಸು? ಇತರರಿಗಿಂತ ರೂಪಾಯಿ ಸೇರಿಸಿ ಕೊಡುತ್ತೇನೆ" (ಪು. ೧೦೮) ಎಂದು ಬೆನ್ನ ನಾಯಿ ಕಾಂಡರ್ ಶಿಕ್ಷಣ ಪಡೆಯದಿರುವ ಹಕ್ಕಿನ ವಿರುದ್ಧವಾಗಿ ಮಾತಾಡುವುದನ್ನು ಕಾಣಬಹುದು.

"ಕಲೆಕ್ಟರ್ ಕೆಲಸ ಕಾದಿದೆಯೇ ಆಡು, ದನ ಮೇಯಿಸಿದರೆ ನಾಲ್ಕು ಹಣವಾದರು ನೋಡಬಹುದು. ಹೊಟ್ಟೆಯನ್ನು ಬೆಳೆಸಬಹುದು. ಮತಿಗೆಟ್ಟ ಹುಡುಗರು ಓದಲು ಹೋಗುತ್ತಾರಂತೆ (ಪು. ೧೦೦) ಎಂದು ಮೇಲ್ಜಾತಿಯವರು ಮಾತಾಡುವುದನ್ನು ನೋಡಬಹುದು.

ಶಾಲೆಗಳಲ್ಲಿನ ಜಾತಿಯ ಶೋಷಣೆ: "ಕಾಲನಿ ಆಳುಗಳಾಗಿದ್ದವರು ಒಂದು ಕಡೆ ನಿಲ್ಲಿ ನೀವೆಲ್ಲಾ ಹಿಂದಿನಂತೆ ಅಲ್ಲ. ನೀವು ಹೆಚ್ಚು ಮಾತಾಡುವುದನ್ನು ಕಲಿತುಕೊಂಡಿದ್ದೀರಿ ನಿಮಗೆ ಪಕ್ಷ, ಸಂಘ ಮುಖಂಡ ಅಂತ ತುಂಬಾ ಜನ ಇದ್ದಾರೆ" (ಕರುಪ್ಪು ಅರಂಗಂ ಪು. ೧೦) ಎಂದು ಅವಮಾನಿಸಿ ಮಾತಾಡುವುದನ್ನು ಕಾಣಬಹುದು.

"ಅಯ್ಯ ನಮ್ಮ ಜಾತಿ ಮಕ್ಕಳಿಗೆ ಸರ್ಕಾರ ಉಚಿತವಾಗಿ ಪುಸ್ತಕ ನೀಡುವುದಾಗಿ ಹೇಳಿದರು ಅದು ನಿಜವೇ?" (ಪು. ೧೧) ಎಂದು ಕೇಳಿದಾಗ ಶಿಕ್ಷಕರು ಅವಮಾನಿಸಿ ಮಾತಾಡುತ್ತಾರೆ.

"ಹೆಣ್ಣು ಮಕ್ಕಳಿಗೆ ಕಾಳಿಯಮ್ಮ, ಮುನಿಯಮ್ಮ ಎಂದು ಕಾಲನಿ ಜನರು ಹೆಸರಿಡುವುದನ್ನು ನೋಡು: ಲೇ ಯಾರ ಯಾರಾದರೂ ದನ, ಆಡು ಮೇಯಿಸಲು ಹೋದರೆ ಹೊಟ್ಟೆ ತುಂಬ ಊಟ ಸಿಗುತ್ತದೆ. ಇಲ್ಲ ಶಗಣಿ ಎತ್ತಿದರೆ ಹಣ ಸಿಗುತ್ತದೆ. ಇಲ್ಲಿ ದೊಡ್ಡ ಮನೆಯ ಮಕ್ಕಳು ಬಂದು ಓದುತ್ತಿದ್ದಾರೆ ನೀವೆಲ್ಲಾ ಕೇರಿಗಳಲ್ಲಿ ಬೆತ್ತಲೆಯಾಗಿ ತಿರುಗುತಿದ್ದ ಹುಡುಗರು, ಶಾಲೆಗೆ ಬರುವಾಗ ಒಳ್ಳೆಯ ಅಂಗಿ ಚಡ್ಡಿ ಹಾಕಿಕೊಂಡು ಬರಬೇಕು ಈ ಕೇರಿ ಮಕ್ಕಳು ಇವೆ ತಲೆಯಲ್ಲಿ ಎಣ್ಣೆಯಿಲ್ಲದೆ, ನೋಟ್‌ಪುಸ್ತಕ ಇಲ್ಲದೆ ಚ್‌ಚೀ...... ಬದಲಾಯಿಸೋಕೆ ಆಗದ ಜನ್ಮಗಳು" ಎಂದು ಹೇಳುತ್ತಾರೆ(ಪು. ೧೨).

"ಶಾಲೆಯಲ್ಲಿ ಓದುವುದನ್ನು ಬಿಡಿಸಿ ಇತರೆ ಕೆಲಸಗಳಲ್ಲಿ ಕೇರಿ ಮಕ್ಕಳನ್ನು ಬಳಸಿಕೊಳ್ಳುತ್ತಾರೆ ಎನ್ನುವುದನ್ನು ಕಾಳಿಯಮ್ಮ ಕಸಬರಕೆ ತೆಗೆದುಕೊಂಡು ಕೊಠಡಿಯನ್ನು ಗುಡಿಸಿ ಶುದ್ಧಮಾಡು, ಗೋವಿಂದಮ್ಮ, ಕ್ಯಾನ್ ತಗೊಂಡು ಹೋಗಿ ನೀರು ತಗೊಂಡು ಬಾ, ಸೇವರನ್, ಸೋಲಮೃತ ಇಬ್ಬರೂ ಹೋಗಿ ಮಧ್ಯಾಹ್ನದ ಊಟಕ್ಕೆ ಕಟ್ಟಿಗೆ ಹಾರಿಸಿ ತನ್ನಿ. ವಾವಾಡ್ಯೆ ಅಂಗಡಿಗೆ ಹೋಗಿ ಒಂದು ಪಾಕೆಟ್ ಸಿಗರೇಟ್ ತಗೊಂಡು ಬಾ ಹಾಗೆ ಸಾರಾಯಿ ಅಂಗಡಿ ತೆಗೆದಿದೆಯೇ ಎಂದು ನೋಡಿ ಬಾ" (ಪು. ೧೨-೧೬) ಎಂದು ಶಿಕ್ಷಕರು ಹೇಳುವುದರ ಮೂಲಕ ತಿಳಿಯಬಹುದು.

ಪೊಲೀಸ್ ಇಲಾಖೆಯಲ್ಲಿ ಜಾತೀಯತೆ: ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವವರ ಅಂಗಿ ಮಾತ್ರ ಬದಲಾಗಿರುತ್ತದೆ ಎನ್ನುವಷ್ಟರ ಮಟ್ಟಿಗೆ ಜಾತಿಯ ಮೇಲಾಧಿಕಾರವನ್ನು ಸಾಧಿಸುತ್ತಾರೆ.

"ಏ.... ಅವರ ಜಾತಿಯವರು ಮಂತ್ರಿಯಾಗಿದ್ದಾರೆ. ಅವರ ಅಳಿಯ ಪೊಲೀಸ್ ಆಫೀಸರ್ ಅಧಿಕಾರ ಎಲ್ಲವೂ ಅವರ ಕಡೆಗೆ. ಇದೆಲ್ಲಾ ನಡೆಯುವ ಕತೆಯೇ...." ಎಂದು ಮಣ್ಣಾಂಗಟ್ಟಿ ಹೇಳುತ್ತಾರೆ.

"ನಾಲ್ಕು ತಿಂಗಳ ಹಿಂದೆ ಚಿನ್ನಸ್ವಾಮಿ ಕೌಂಡರ್ ಪರೈ ಹುಡುಗ ಅಂತ ಜಾತಿಯನ್ನು ಹೇಳಿ ಒಡೆದುದರಿಂದ ನಗರಕ್ಕೆ ಹೋಗಿ ಅಸ್ಪೃಶ್ಯತಾ ನಾಶ ಅಧಿಕಾರಿಯ ಬಳಿ ಬಿನ್ನಪ ಕೊಟ್ಟಿದ್ದೇವೆ. ಯಾವ ನಿಯಮ ತೆಗೆದುಕೊಂಡಿಲ್ಲಾ ತೆಗೆದುಕೊಳ್ಳೊದಕ್ಕೆ ಕಾರಣವೇನು ಗೊತ್ತೇ? ಆ ಅಧಿಕಾರಿಯು ಒಂದು ಕೌಂಡರ್ ಜಾತಿಯಂತೆ ಟಿ.ಎಸ್.ಪಿ. ಮುದಲಿಯಾರ್ ಕಲೆಕ್ಟರ್ ಉಡೈಯಾರ್, ಜಡ್ಜ್ ಅಯ್ಯರ್ ಹೀಗೆ ಆಡಳಿತ ಇದ್ದರೆ ನಮಗೆ ಹೇಗೆ ನೀತಿ ಸಿಗುತ್ತದೆ" (ಪು. ೧೧೫) ಇದಕ್ಕೆ ಈ ನಾಟಕದಲ್ಲಿ ಬರುವ ಸಂಭಾಷಣೆಗಳೇ ಸಾಕ್ಷಿಯಾಗಿವೆ.

ಊರಿನ ಆಸ್ತಿಗೆ ಹೋರಾಟ: ಒಂದು ದಲಿತರ ಕೆರೆಯನ್ನು ಹರಾಜಿಗೆ ಬಿಟ್ಟು ಊರಿನ ಹುಡುಗರೇ ತೆಗೆದುಕೊಳ್ಳುತ್ತಾರೆ. ಕೇರಿಗೆ ಏನೂ ಕೊಡುವುದಿಲ್ಲ. ಇದರಲ್ಲಿ ಮನೆಗೊಬ್ಬರು ಸಭೆಗೆ ಬರಬೇಕು ಎಂದು ಉಗ್ರವಾಗಿ ಮಾತಾಡುತ್ತಾರೆ. ಆಗ ಮುನಿಯಮ್ಮ "ಏನಯ್ಯ ನಾವೇ ಜಾತಿಯಲ್ಲಿ ಕೀಳಿನವರು, ನಮಗೆ ಹೇಗೆ ಊರಿನ ಆದಾಯದಲ್ಲಿ ಪಾಲುಕೊಡುತ್ತಾರೆ, ಕಾಲಕಾಲವೆಲ್ಲಾ ಮೇಲ್ಜಾತಿಕಾರರಿಗೆ ದುಡಿದುಕೊಡುವುದೇ ನಮ್ಮ ಹಣೆಯಬರಹ" (ಪು. ೯೯) ಎಂದು ದುಃಖಿಸುತ್ತಾಳೆ.

ಕೀಳು ಮನೋಭಾವನೆಯನ್ನು ಒಪ್ಪಿಕೊಂಡಿರುವುದು: "ಹೆಣ್ಣು ಮಗು ಹುಟ್ಟಿದರೆ ಕಳೆ ಕಿತ್ತುವ(ವ್ಯವಸಾಯ) ಕೂಲಿ ಕೆಲಸ ಮಾಡಿ ಬದುಕುತ್ತದೆ. ಗಂಡು ಮಗು ಹುಟ್ಟಿದರೆ ನಾವು ಮಾಡುವ ಕೆಲಸವನ್ನೆ ಅವರೂ ಮಾಡುತ್ತಾರೆ. ಆಡು, ದನ ಮೇಯಿಸುತ್ತಾರೆ. ಜಮೀನುದಾರರ ಒತ್ತೆಯಾಳುಗಳಾಗಿ ಬದುಕುತ್ತಾರೆ. ಮಾರಿಯಮ್ಮ ನಮ್ಮ ತಲೆಯಲ್ಲಿ ಬರೆದ ಹಣೆಬರಹವೇ" (ಅದೇ ಪು. ೧೦೧) ಗುಲಾಮಗಿರಿಯನ್ನು ಒಪ್ಪಿಕೊಂಡ ಮನಸ್ಥಿತಿಗಳನ್ನು ತಿಳಿಸುತ್ತದೆ.

ಕೇರಿ ಹೆಣ್ಣುಮಕ್ಕಳ ಸಂಕಟಗಳು: ಎಲ್ಲಾ ಪ್ರದೇಶಗಳಲ್ಲಿರುವ ಸ್ತ್ರೀಯರ ಸಮಸ್ಯೆಗಳು ಒಂದೇ ತರನಾಗಿ ಇರುವುದಿಲ್ಲಾ. ಅವರ ಬಯಕೆಗಳು, ಸಮಸ್ಯೆಗಳು ಬೇರೆ ಬೇರೆಯಾಗಿರುತ್ತವೆ. ಇದನ್ನು ದಲಿತ ನಾಟಕಗಳು ದಾಖಲಿಸುತ್ತವೆ.

ಮುತ್ತಮ್ಮ: ಏ ಮುನಿಯಮ್ಮ ಏನಮ್ಮ ಹೇಳುತ್ತಿದ್ದೀಯಾ, ಹೆರಿಗೆ ಹೀಗೋ, ಹಾಗೋ ಅಂತ ಇದ್ದಿಯಾ ಕುಳಿತುಕೊಳ್ಳಲು ಆಗದೇ ನಿಂತೇ ಮಾತಾಡುತ್ತಿದ್ದೀಯಾ, ಈ ಸಮಯದಲ್ಲಿ ನನ್ನೊಂದಿಗೆ ಬಂದು ನಿನ್ನಿಂದ ಬಗ್ಗಿ ನಾಟಿ ಮಾಡಲು ಆಗುತ್ತದೆಯೇ.

ಮುನಿಯಮ್ಮ: ಅಕ್ಕಾ ಕಷ್ಟ ಅಂತ ನೋಡಿದ್ರೆ ಒಲೆ ಉರಿಯಲ್ಲ, ನಾನು ಉಪವಾಸವಿದ್ದು, ಅಭ್ಯಾಸವಾದವಳು, ಹೊಟ್ಟೆಯಲ್ಲಿರುವ ಮಗುವಿಗೆ ಆಹಾರ ಬೇಕಲ್ಲವೇ, ಕೆಲಸಕ್ಕೆ ಹೋದ ಮನುಷ್ಯ ಹಸಿದ ಹೊಟ್ಟೆಯಿಂದ ಮನೆಗೆ ಬರುತ್ತಾನೆ, ಬಳಿದು ತೆಗೆದರೂ ಗಡಿಗೆಯಲ್ಲಿ ಏನೂ ಇಲ್ಲ, ನಮ್ಮಂತಹ ಬಡವರಿಗೆಲ್ಲಾ ಓಡಿದರೆ ನೀರು, ಇಲ್ಲವಾದರೆ ಉಪವಾಸ ನಾನು ಹೇಳಿಯೇ ನೀನು ತಿಳಿದುಕೊಳ್ಳಬೇಕಾ.

ಮುತ್ತಮ್ಮ: ಮುನಿಯಮ್ಮ ನಿನ್ನ ಸ್ಥಿತಿ ನನಗೆ ತಿಳಿಯುತ್ತದೆ. ಮೊಣಕಾಲುವರೆಗೂ ಇಳಿದು ಬಗ್ಗಿ ನಾಟಿ ಇಡುವಾಗ ತುಂಬಾ ಕಷ್ಟಪಡುತ್ತೀಯಮ್ಮ, ಕಾಲನ್ನು ಎತ್ತಿ ಹಿಂದೆ ಇಡುತ್ತಾ ನಾಟಿಮಾಡುವಾಗ ತುಂಬು ಗರ್ಭಿಣಿಯಾದ ನಿನಗೆ ಮೇಲುಸಿರು ಕೆಳಗುಸಿರು ಆಗುತ್ತದೆ. ಆ ಪಾಪವನ್ನು ನಾನು ಹೊರಬೇಕೆ(ಕರುಪ್ಪು ಅರಂಗಂ, ಪು. ೩೯).

ಮುನಿಯಮ್ಮ: ಮುತ್ತಮ್ಮ ಅಕ್ಕ ನಿನ್ನ ಮಾತು ಮೀರಿಬಂದದ್ದು ತಪ್ಪಾಗಿದೆ ಅಕ್ಕಾ ಹೊಟ್ಟೆ ನೋವಾಗುತ್ತಿದೆ.

ಮುತ್ತಮ್ಮ: ಮುನಿಯಮ್ಮ ಮೇಲೆ ಏರು ಹೊಟ್ಟೆಯಲ್ಲಿ ಇರುವ ಮಗುವು ನೆಲದಲ್ಲಿ ಬೀಳುವುದಕ್ಕಿಂತ ಮೊದಲು ಮನೆಗೆ ಹೋಗಿ ಸೇರಬೇಕು(ಅದೇ, ಪು. ೩೯)

ಈ ಮೇಲಿನ ಸಂಭಾಷಣೆಯಿಂದ ಕೇರಿಯ ಗರ್ಭಿಣಿ ಸ್ತ್ರೀಯರು ಕಷ್ಟಪಡುವುದನ್ನು ಅವರ ಸಂಭಾಷಣೆಯ ಮೂಲಕ ತಿಳಿಯಬಹುದು.

ಮೀಸಲಾತಿ: ಜಾತಿ ಪ್ರಮಾಣ ಪತ್ರ ಪಡೆಯಲು ದಲಿತರು ಅವಮಾನಕ್ಕೊಳಗಾಗ ಬೇಕಾಗಿರುವುದನ್ನು 'ಕೋಪ್ಪು' ನಾಟಕ ತಿಳಿಸುತ್ತದೆ.

"ಮಾರಿಯಮ್ಮ ಕಣ್ಣಿಯಮ್ಮ

ಮಲೆನಾಡು ಇರುಳರು

ಪಟ್ಟ ಪಾಡು ಸ್ವಲ್ಪವೇ

ಕಾಡು ಮೇಲೆಯೇ ಜೀವನ ಎಂದು ಕಾಲವೆಲ್ಲ ಜೀವಿಸಿದವರಿಗೆ

ನಾಡು ನಗರ ಜನರಿಂದ

ರಕ್ಷಣೆ ಇಲ್ಲವೇ

(ಕೋಪ್ಪು, ಪ್ರತಿಭಾ ಜಯಚಂದ್ರನ್, ಪು. ೬)

ಹಾಡಿನ ನಂತರ ಕಛೇರಿಯಲ್ಲಿ ಮಯಾನ್ ಜಾತಿ ಪ್ರಮಾಣ ಪತ್ರ ತರಲು ಹೋಗುತ್ತಾನೆ. ಕಛೇರಿಯಲ್ಲಿ ಸುಲಭವಾಗಿ ಕಾರ್ಯ ಆಗದಿರುವುದು ತಿಳಿದು ಪ್ಯೂನ್ ಕೇಳಿದಂತೆ ೫ ನೂರು

ರೂಪಾಯಿಗಳನ್ನು ಕೊಟ್ಟು ಸಹಿಮಾಡುತ್ತಾನೆ. ಮತ್ತು ತನಗಿಂತ ಇಬ್ಬರು ಹಿರಿಯ ಅಧಿಕಾರಿಗಳ ಸಹಿ ಬೇಕೆಂದು ಹೇಳಿ ಕಳುಹಿಸಲಾಗುತ್ತದೆ.

ಮೂರನೇ ಅಂತರದಲ್ಲಿ ಮಾಯನ್ ಮತ್ತು ಮನುಸಾಮಿಯವರು ತಮ್ಮ ಆರ್ಥಿಕ ವಿಚಾರಗಳನ್ನು ಮಾತಾಡಿಕೊಳ್ಳುವುದು ಕಂಡು ಬರುತ್ತದೆ.

ಮಾಯನ್: ನನ್ನ ಮಗನನ್ನು ಇಂಜಿನಿಯರ್ ಓದಿಸಲು ನೋಡುತ್ತಿದ್ದೇನೆ ಒಳ್ಳೆಯ ಅಂಕ ಗಳಿಸಿದ್ದಾನೆ ಜಾತಿ ಪ್ರಮಾಣ ಪತ್ರ ನೀಡಿದರೆ ಮಾತ್ರ ಉಚಿತ ಸೀಟು ಸಿಗುತ್ತದೆ. ಆದ್ದರಿಂದ ಜಾತಿ ಪ್ರಮಾಣ ಪತ್ರ ಬೇಕಾಗಿದೆ ಅದು ಇದ್ದರೆ ಮಾತ್ರ ಒಳಗೋಗಲು ಸಾಧ್ಯ (ಪು. ೮-೯)

ಮುನಿಯಮ್ಮ: ಕಾಲರ್‌ಶಿಪ್ ಬೇಗ ಸಿಗುತ್ತದೆ ಎಂಬ ನಂಬಿಕೆಯಲ್ಲಿ ಸಾಲ ತೆಗೆದು ಮಗನನ್ನು ಕಾಲೇಜಿನಲ್ಲಿ ಸೇರಿಸಿದೆ ಕಾಲರ್‌ಶಿಪ್ ಒಂದು ವರ್ಷದ ನಂತರ ಬಂದಿತು. ತೆಗೆದ ಸಾಲಕ್ಕೆ ಬಡ್ಡಿ ಕಟ್ಟುವುದಕ್ಕೆ ಸರಿಯಾಯ್ತು.

ಮಾಯನ್: ಏನು ಮಾಡುವುದು? ನಮಗಾಗಿ ಏನು ಎಂತ ಎಂದು ಕೇಳಲು ಯಾರಿದ್ದಾರೆ? ನಾವೇ ಹೋಗಿ ಕೇಳಬೇಕು(ಪು. ೯). ಕಾಲರ್‌ಶಿಪ್ ನಂಬಿಕೊಂಡು ಎಷ್ಟು ದಲಿತ ವಿದ್ಯಾರ್ಥಿಗಳು ತಮ್ಮ ಓದನ್ನು ಮುಂದುವರೆಸುತ್ತಿದ್ದಾರೆ. ಮತ್ತು ಅದು ಸರಿಯಾದ ಸಮಯಕ್ಕೆ ಸಿಗದಿದ್ದಾಗ ಇಕ್ಕಟ್ಟಿನ ಪರಿಸ್ಥಿತಿಗೆ ಒಳಗಾಗುತ್ತಾರೆ ಎಂಬುದನ್ನು ಅರಿಯಬಹುದು.

ಮಾಯನ್ ಕೆಲ ದಿನಗಳ ನಂತರ ಜಾತಿ ಪ್ರಮಾಣ ಪತ್ರ ತರಲು ಆರ್.ಟಿ.ಓ ಕಛೇರಿಗೆ ತೆರಳುತ್ತಾನೆ. ಅದು ಸಹ ಆರ್.ಟಿ.ಓ ಬೇರೆ ಕ್ಯಾಂಪಿಗೆ ಹೋಗಿರುವಂತೆ ಪ್ಯೂನ್ ಹೇಳುತ್ತಾನೆ "ಮಾಯನ್ ಪ್ಯೂನ್ ಜೊತೆಗೆ ಮಾತಾಡುತ್ತಿರುವಾಗ ಇಬ್ಬರು ಮೂವರು ಬಂದು ಆರ್.ಟಿ.ಓ.ನನ್ನು ಭೇಟಿ ಮಾಡಿ ಹೋಗುತ್ತಾರೆ. ಇದನ್ನು ಗಮನಿಸಿದ ಮಾಯಿನ್ ಒಳಗಿದ್ದುಕೊಂಡೇ ಇಲ್ಲ ಎನ್ನುತ್ತಿದ್ದೀರಲ್ಲ ಎಂದು ಕೇಳುತ್ತಾನೆ ಅದಕ್ಕೆ ಪ್ಯೂನ್

ಪ್ಯೂನ್: ಏ ಇದು ಆರ್.ಟಿ.ಓ. ಕಛೇರಿ ಇಲ್ಲಿ ನಿಂತು ಗಲಾಟೆ ಮಾಡಿದರೆ ಪೊಲೀಸರಿಗೆ ಹಿಡಿದುಕೊಡುತ್ತೇನೆ.

ಮಾಯನ್: ಕರೆ ನಿನ್ನ ಪೊಲೀಸರನ್ನು ೧೦ ಜನರನ್ನು ಕರೆದು ನ್ಯಾಯ ಕೇಳೋಣ ಏನು ಹೇಳುತ್ತಾರೆಂದು(ಪು. ೧೦).

ಈ ಗಲಾಟೆಯನ್ನು ಕೇಳಿ ಅಧಿಕಾರಿ ಮಾಯನ್‌ನನ್ನು ಒಳಗೆ ಕರೆಸುತ್ತಾನೆ. ಏನು ವಿಷಯ ಎಂದು ಕೇಳಿದಾಗ-

ಮಾಯನ್: ನನ್ನ ಮಗ ಇಂಜಿನಿಯರ್ ಓದುವುದಕ್ಕೆ ಜಾತಿ ಪ್ರಮಾಣ ಪತ್ರ ಬೇಕು ನೀವೇ ಕೊಡಬೇಕು.

ಆರ್.ಟಿ.ಓ: ನಿನ್ನನ್ನು ನೋಡಿದರೆ.... ಹಾವು ಹಿಡಿಯುವವನ ಹಾಗೆ ಕಾಣಿಸುತ್ತಿಲ್ಲ ಚೆನ್ನಾಗಿ ಡಿಸೆಂಟ್ ಆಗಿ ಇದಿಯ ನೀನು ಇರುಳ ಎಂದು ನನ್ನಿಂದ ನಂಬಲು ಆಗುತ್ತಿಲ್ಲ.

ಮಾಯಿನ್: ಅಯ್ಯಾ ನಾವು ಇರುಳರು

ಆರ್.ಟಿ.ಓ.: ನಿನ್ನ ಮಾತನ್ನು ಹೇಗೆ ನಂಬುವುದು.

ಮಾಯಿನ್: ನಮ್ಮ ಊರಿಗೆ ಬನ್ನಿ ನಮ್ಮ ಮನೆ ಮಠ ನೋಡಿ ನಾನು ಇರುಳನೆಂದು ತಿಳಿದು ಸರ್ಟಿಫಿಕೇಟ್ ಕೊಡಿ

ಆರ್.ಟಿ.ಓ: ಬರುವ ತಿಂಗಳು ನಿಮ್ಮ ಊರಿನಲ್ಲಿ ಕ್ಯಾಂಪ್ ಹಾಕುತ್ತೇನೆ ಆಗ ಬಂದು ವೆರಿಫೈ ಮಾಡಿ ಸರ್ಟಿಫಿಕೇಟ್ ನೀಡುತ್ತೇನೆ(ಪು. ೧೦-೧೧) ಎಂದು ಅವನನ್ನು ಹೊರಹಾಕುತ್ತಾನೆ. ಪ್ಯೂನ್ ಅವನ ಕತ್ತನ್ನು ಹಿಡಿದು ನೂಕುತ್ತಾನೆ. ಆಗ ಮಾಯನ್ ಕೆಳಗೆ ಬೀಳುತ್ತಾನೆ ಇದನ್ನು ನೋಡಿ ಅಲ್ಲಿದ್ದ ಒಬ್ಬರು

ಒಬ್ಬ: ಹೌದಲ್ಲ ಏನೋ ಇವನು ಇಟ್ಟ ಆಳಿನಂತೆ ಕೇಳಿದ ಕೂಡಲೆ ಕೊಡಲು ಇವರೇನು ಕೊಟ್ಟಿ ಇದ್ದಿದ್ದಾರು.... (ಪು. ೧೧) ಎಂದು ಒಳಗೆ ನಡೆದಿದ್ದನ್ನು ತಿಳಿಯದೇ ಮಾಯಿನ್‌ನದ್ದೇ ತಪ್ಪೆನ್ನುವಂತೆ ಮಾತಾಡಿಕೊಳ್ಳುತ್ತಾರೆ. ಕೊನೆಗೆ,

> "ಬರುತ್ತಾರೆ ಬರುತ್ತಾರೆ
> ಇರುಳಿಗರು ಬರುತ್ತಾರೆ
> ನೀತಿ ಕೇಳಲು ನ್ಯಾಯ ಕೇಳಲು
> ಬೀದಿಗಿಳಿದು ಬರುತ್ತಾರೆ" (ಪು. ೧೧)
> ಎಂದು ಆಕ್ರೋಶವಾಗಿ ಹಾಡಿಕೊಂಡು ಬರುತ್ತಾರೆ.

ಅಸ್ಪೃಶ್ಯತೆ: ಒಬ್ಬ ದಲಿತ ಆಸ್ಥಾನಕ್ಕೆ ಬಂದು "ಯುವರಾಜರು ರಾತ್ರಿ ತೇರಿನಲ್ಲಿ ನಮ್ಮೂರಿನ ಕಡೆಗೆ ಬರುತ್ತಿದ್ದಾಗ ನನ್ನ ಮಗನ ಮೇಲೆ ತೇರು ಏರಿದ್ದರಿಂದ ಸತ್ತೋಗಿದ್ದಾನೆ ಎಂದು ದಲಿತ ಕೂಲಿ ಕೆಲಸಗಾರ ಹೇಳುತ್ತಾನೆ. ಇದನ್ನು ಗಮನಿಸಿದ ಬ್ರಾಹ್ಮಣ ರಾಜಗುರು ಇವನನ್ನು ನೋಡಿದರೆ ಕೀಳು ಜಾತಿಯವನ ಹಾಗೆ ಕಾಣಿಸುತ್ತಿದೆ. ಆದ್ದರಿಂದ ಇವನು ಮುಟ್ಟಿದ ತೇರನ್ನು ಪವಿತ್ರ ನೀರಿನಿಂದ ತೊಳೆಯಬೇಕು. ಪವಿತ್ರ ಪೂಜೆ ಮಾಡಿಸಿ ನಂತರವೇ ಯುವರಾಜರು ಆ ತೇರನ್ನು ಏರಬೇಕು ಅದಲ್ಲದೆ ಇವನು ರಾಜಸಭೆ ತುಳಿದಿದ್ದರಿಂದ ಇದೆಲ್ಲವನ್ನು ಪವಿತ್ರ ನೀರನ್ನು ಹಾಕಿ ಶುಚಿಗೊಳಿಸಲೇಬೇಕು" (ಅನ್ಬಾದವನ್, ಪಿಣಂ ತಿನ್ನುಂ ಸಾತ್ತಿರಂಗಳ್, ಪು. ೩೧) ಎಂದು ಹೇಳುತ್ತಾನೆ.

ಪುರಾಣ ಕಥೆಗಳ ಮರು ಓದಿಗೆ ಒಳಪಡಿಸಿ ಹಲವು ನಾಟಕಗಳನ್ನು ದಲಿತ ಲೇಖಕರು ವಿಮರ್ಶಿಸುತ್ತಾರೆ. ಸ್ತ್ರೀವಾದದ ನೆಲೆಯಿಂದ ದಲಿತರ ಆವೇಶದ ಧ್ವನಿಯಾಗಿ ಈ ನಾಟಕ

ಪ್ರಚೋದಿಸುತ್ತವೆ. 'ಪವಳಕ್ಕೂಡಿ ಅಲ್ಲದೆ ಕುಡುಂಬ ವಳಕ್ಕು' ಎಂಬ ಈ ನಾಟಕ ಒಂದು ಪುರಾಣ ಕಥೆಯ ಜೊತೆಗೆ ಮತ್ತೊಂದು ಕೌಟುಂಬಿಕ ಕಥೆಯಾಗಿ ಬಿಡಿಸಿ ನಡೆಯುವ ರೀತಿಯಲ್ಲಿ ನಾಟಕ ನಿರ್ಮಿತವಾಗಿದೆ. 'ಸ್ತ್ರೀವಾದಿ ಹಿನ್ನೆಲೆಯಿಂದ ನಾಟಕ ಬರೆಯಲು ಆರಂಭಿಸಿದ್ದೇನೆ ಎಂದು ಲೇಖಕರು ತಿಳಿಸುತ್ತಾರೆ. ಜಾನಪದ ಕಲೆಗಳಾದ ಕರಗಾಟ್ಟಂ, ಕುರವನ್ ಕುರತ್ತಿ ಆಟ್ಟಂ, ರಾಜಾರಾಣಿ ಆಟ್ಟಂ ಮುಂತಾದ ಕಲಾರೂಪಗಳಾದ ಸ್ತ್ರೀ ಕಲಾವಿದರನ್ನು ಹಲವು ಸಹ ಪುರುಷ ಕಲಾವಿದರಗಿಂತ ಎರಡನೇ ದರ್ಜೆಗಳಾಗಿ, ಕೆಲವು ವೇಳೆ ಗಂಡಂದಿರಿಂದ ಕೈಬಿಟ್ಟಿರುವುದನ್ನು ನನ್ನ ಕಲಾ ಅನುಭವಗಳಲ್ಲಿ ಕಂಡಿದ್ದೇನೆ. ಇದನ್ನು ಹಾಡಿನ ಕಚೇರಿಗಳಲ್ಲಿ, ಸಿನಿಮಾ ಹಾಡು ಹಾಡುವ, ಕಚೇರಿಗಳಲ್ಲಿ ಮಹಿಳಾ ಉದ್ಯೋಗ ಕಲಾವಿದರು ಅನುಭವಿಸುತ್ತಿದ್ದಾರೆ. ಮಹಿಳೆಯರು ಸಿನಿಮಾ ಮತ್ತು ನಾಟಕ ಕಂಪನಿಗಳಲ್ಲಿ ಲೈಂಗಿಕ ಶೋಷಣೆಗೆ ಒಳಗಾಗುವುದನ್ನು ಪತ್ರಿಕೆಗಳಲ್ಲಿ ಕಾಣಬಹುದು.

ತಮಿಳು ದಲಿತ ನಾಟಕಗಳ ಮಿತಿ

- ದಲಿತ ನಾಟಕಗಳು ಪರೈಯರ್, ಪಳ್ಳರ್ ಸಮುದಾಯಗಳ ಸಮಸ್ಯೆಗಳನ್ನು ಮಾತಾಡಿದಷ್ಟು ಅರುಂದಿಯರ್ ವಣ್ಣಾರ್ ಜಾತಿಯ ಸಮಸ್ಯೆಗಳನ್ನು ಹೆಚ್ಚಾಗಿ ದಾಖಲಿಸಿಲ್ಲ.
- ಸಾಮಾನ್ಯವಾಗಿ ದಲಿತ ನಾಟಕಗಳಲ್ಲಿ ದಲಿತ ಕ್ರೈಸ್ತರ ಸಮಸ್ಯೆಗಳನ್ನು ಹೆಚ್ಚಾಗಿ ದಾಖಲಿಸಿಲ್ಲ.
- ದಲಿತ ನಾಟಕಕಾರರು ಹೆಚ್ಚು ಆಧುನಿಕ ನಾಟಕ ತಂತ್ರವನ್ನೇ ಪ್ರಯೋಗಿಸುವುದರಿಂದ ಸಾಂಪ್ರದಾಯಿಕ ನಾಟಕವಾಗಿಯೇ ಕಾಣಿಸುತ್ತದೆ.
- ದಲಿತರಿಂದ ಬಿಡಿಸಲಾಗದ ಕೊಂಡಿಯಂತಿರುವ ಸಂಗೀತ, ಹಾಡುಗಳನ್ನು ಹೆಚ್ಚಾಗಿ ಬಳಸಲಾಗಿಲ್ಲ. ತಮಟೆ, ಡೋಲು, ನಾದಸ್ವರ, ಊದುವ ಕೊಂಬು ಮುಂತಾದ ಸಂಗೀತ ವಾದ್ಯಗಳನ್ನು ದಲಿತ ನಾಟಕಗಳು ಹೆಚ್ಚಾಗಿ ಬಳಸಿಕೊಳ್ಳದ್ದನ್ನು ಕಾಣಬಹುದು.
- ದಲಿತ ಸಾಹಿತ್ಯ ಪ್ರಕಾರಗಳಾದ ಕಾದಂಬರಿ, ಕವಿತೆ, ಸಣ್ಣಕಥೆ ಮುಂತಾದವುಗಳಿಗಿಂತ ದಲಿತ ನಾಟಕ ಪ್ರಕಾರವು ದಲಿತ ಬಿಡುಗಡೆಯ ಚಿಂತನೆಯನ್ನು ಬೇಗ ದಲಿತರಿಗೆ ತಲುಪಿಸುತ್ತದೆ. ಅಲ್ಲದೆ ಆ ಮಾಧ್ಯಮದಿಂದ ಶಿಕ್ಷಿತರಲ್ಲದವರೂ ದಲಿತ ಬಿಡುಗಡೆಯ ಎಚ್ಚರಿಕೆಯನ್ನು ಪಡೆಯುವುದಕ್ಕೆ ಸಾಧ್ಯ. ಆದರೆ ದಲಿತ ನಾಟಕಗಳು ಇದರಲ್ಲಿ ಯಶಸ್ವಿ ಆಗಿಲ್ಲ.

ತೌಲನಿಕ ಅಂಶಗಳು

- ಕನ್ನಡ-ತಮಿಳಿನಲ್ಲಿ ದಲಿತ ನಾಟಕಗಳು ಸಾಹಿತ್ಯದ ಇತರೆ ಪ್ರಕಾರಗಳಾದ ಆತ್ಮಕಥೆ, ಕಾದಂಬರಿ, ಕಾವ್ಯಗಳಲ್ಲಿ ಪ್ರಕಟವಾದಷ್ಟು ನಾಟಕಗಳಲ್ಲಿ ಹೆಚ್ಚು ದಲಿತ ಸಂವೇದನೆಗಳು ಪ್ರಕಟವಾಗಿಲ್ಲ.

- ಪೌರಾಣಿಕ ವಸ್ತು ವಿಷಯಗಳ ಮೇಲಿನ ವಿಮರ್ಶೆ ಕಂಡು ಬಂದರೂ ಅದು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಕನ್ನಡದ ಸಿದ್ಧಲಿಂಗಯ್ಯನವರ 'ಏಕಲವ್ಯ', ತಮಿಳಿನಲ್ಲಿ ಕೆ.ಎ.ಗುಣಶೇಖರನ್‌ರ 'ಪವಳಕ್ಕೊಡಿ ಅಲ್ಲಿದು ಕುಡುಂಬ ವಳಕ್ಕು' ನಂತಹ ನಾಟಕಗಳಲ್ಲಿ ದಲಿತರ ಪರವಾಗಿರುವ ಪ್ರಯತ್ನಗಳಾಗಿವೆ.
- ದಲಿತ ಸ್ತ್ರೀ ಸಂವೇದನೆಯನ್ನು ಕನ್ನಡಕ್ಕಿಂತ ಹೆಚ್ಚು ತಮಿಳಿನ ದಲಿತ ನಾಟಕದಲ್ಲಿ ದಾಖಲಾಗಿರುವುದನ್ನು ಗಮನಿಸಬಹುದು.
- ಮತಾಂತರ ಕುರಿತು ಎರಡು ಭಾಷೆಯ ನಾಟಕಗಳು ಪ್ರಸ್ಥಾಪಿಸುತ್ತವೆ. ತಮಿಳಿನ 'ಏಕಲೈವಿ' ಕನ್ನಡದ 'ದಲಿತನ ಮತಾಂತರ ಪ್ರಸಂಗ' ನಾಟಕಗಳನ್ನು ಗುರುತಿಸಬಹುದು.
- ದಲಿತ ನಾಟಕಗಳಲ್ಲಿ ರಂಗ ಪ್ರದರ್ಶನ ನಾಟಕಗಳು ಹೆಚ್ಚಾಗಿವೆ. ಆದರೆ ಅವು ಪಠ್ಯದ(ಮುದ್ರಣ) ರೂಪದಲ್ಲಿ ಇಲ್ಲ. ಹಾಗಾಗಿ ಎರಡು ಭಾಷೆಯಲ್ಲಿ ರಂಗಪ್ರದರ್ಶನ ನಾಟಕಗಳಲ್ಲಿ ಹೆಚ್ಚಾಗಿ ದಲಿತ ಸಂವೇದನೆ ಕಂಡು ಬರುತ್ತದೆ.
- ಅಂಬೇಡ್ಕರ್ ಕುರಿತು ಎರಡೂ ಭಾಷೆಯ ನಾಟಕಗಳು ದಾಖಲಿಸುತ್ತವೆ. 'ಬಲಿ ಆಡುಗಳ್' ನಾಟಕದಲ್ಲಿ ಅಂಬೇಡ್ಕರ್‌ರ ಮಾತುಗಳನ್ನು ನೇರವಾಗಿ ಬಳಸಿಕೊಂಡಿರುವುದನ್ನು ಕಾಣಬಹುದು. ಎಲ್.ಹನುಮಂತಯ್ಯರವರ 'ಅಂಬೇಡ್ಕರ್' ನಾಟಕವು ಅಂಬೇಡ್ಕರ್‌ರವರನ್ನು ಕುರಿತು ಚಿತ್ರಿಸುತ್ತದೆ.

ಕಲೆಯು ಮನುಷ್ಯನಿಗೆ ಶಕ್ತಿ ಮತ್ತು ಯುಕ್ತಿಯನ್ನು ಪ್ರಚೋದಿಸುತ್ತದೆ. ಈ ಕಲೆಯಲ್ಲಿ ನಾಟಕವು ಒಂದು. ನಾಟಕದ ಆರಂಭವು ಭಾರತದಲ್ಲಿ ಭರತನ ನಾಟ್ಯಶಾಸ್ತ್ರದಿಂದ ಆರಂಭವಾಗುತ್ತದೆ. ತಮಿಳಿನಲ್ಲಿ ನಾಟಕವು ಹಲವು ಬಗೆಯ (ನಿಳಲ್ ಪಾವೈಕೂತ್ತು, ಮರಪ್ಪಾವೈ ಕೂತ್ತು) ಕೂತ್ತು ಕಲೆಯ ಮುಂದುವರಿಕೆಯಾಗಿ ನಾಟಕ ಆರಂಭವಾಯಿತು. ಜಾನಪದ ಸಾಹಿತ್ಯದಿಂದ ೧೬-೧೭ನೇ ಶತಮಾನಗಳಲ್ಲಿಯೇ ನಾಟಕ ಹಸ್ತಪ್ರತಿಗಳಲ್ಲಿ ದಾಖಲಾಗಿಸಿ ರಂಗಪ್ರದರ್ಶನಗಳನ್ನು ಕಂಡಿದೆ. ಅದಲ್ಲದೆ ದೇವರು, ಅರಸರ ಕಥೆಯಲ್ಲದೇ ಸಾಮಾನ್ಯ ಜನರಾದ ದಲಿತರ ಕುರಿತು ನಾಟಕಗಳು ಬಂದಿರುವುದನ್ನು ಕಾಣಬಹುದು. ಪಳ್ಳು, ಕುರವಂಜಿ ಮುಂತಾದ ನಾಟಕಗಳು ದಲಿತರನ್ನೇ ಪ್ರಧಾನಪಾತ್ರಗಳಾಗಿ ಚಿತ್ರಿಸಿದವು. ಇದರ ನಂತರ ಬಿಳಿಯರ ವಿರುದ್ಧವಾಗಿ ಹೋರಾಡಿದ ಸ್ವಾತಂತ್ರ್ಯ ಚಳುವಳಿಯ ಕಾಲದ ನಾಟಕಗಳಲ್ಲಿ ದಲಿತರ ನೋವು, ದಲಿತರು ಹಿಂದೂಗಳಿಂದ ನಡೆಸಿಕೊಂಡ ಶೋಷಣೆಯನ್ನು ತಿಳಿಸುತ್ತದೆ. ಸಾಮಾಜಿಕ ಬದಲಾವಣೆಯನ್ನು ಮೂಲ ಉದ್ದೇಶವನ್ನಾಗಿ ಮಾಡಿಕೊಂಡ ದ್ರಾವಿಡ ಚಳುವಳಿಯ ನಾಟಕಗಳು ದುಡಿಯುವ ಜನರ ಸಂಕಷ್ಟಗಳು, ರಾಜಕೀಯ, ಮೂಢನಂಬಿಕೆಗಳನ್ನು ಕುರಿತು ಮಾತನಾಡಿದವು. ಆದರೆ ದಲಿತರ ಉಲ್ಲೇಖವಿದ್ದರೂ ಹೆಚ್ಚು ವಿವರಿಸದಿರುವುದನ್ನು ಕಾಣಬಹುದು. ಅಂಬೇಡ್ಕರ್ ಜನ್ಮ ಶತಮಾನೋತ್ಸವದ ನಂತರದಲ್ಲಿ ದಲಿತರ ಪರ ಚಿಂತನೆಗಳು, ನಾಟಕಗಳು

ಕಂಡುಬಂದವು. ದಲಿತ ನಾಟಕಗಳು ಜಾತಿ ನಾಶದ ಉದ್ದೇಶವನ್ನು ಇಟ್ಟುಕೊಂಡು ಸಮಾಜದಲ್ಲಿ ಜಾತಿಯನ್ನು ಬುಡ ಸಮೇತ ಕಿತ್ತು ಎಸೆಯುವ ಚಿಂತನೆಯನ್ನು ಬಿತ್ತರಿಸಿದವು.

ಹೆಚ್ಚಾಗಿ ತಮಿಳು ದಲಿತ ನಾಟಕಗಳಲ್ಲಿ ಕಂಡುಬರುವ ಸಂಗತಿಯೆಂದರೆ 'ನಾವು ಹಿಂದೂಗಳಲ್ಲ' ಎಂಬ ವಾಕ್ಯ ಅದರೊಂದಿಗೆ ಬ್ರಾಹ್ಮಣತ್ವವನ್ನು ಪ್ರಶ್ನಿಸುವುದು. ದಲಿತ ನಾಟಕಗಳಲ್ಲಿ ದಲಿತ ಸಂಗೀತ, ಪರೈ (ತಮಟೆ) ಬಾರಿಸುವುದು ಸಾಮಾನ್ಯವಾಗಿದ್ದು, ಇದೊಂದು ಬಿಡುಗಡೆಯ ಧ್ವನಿಯಾಗಿ ಕಂಡುಬರುತ್ತದೆ. ದಲಿತ ಸ್ತ್ರೀಯರ ಧಾರುಣ ಸ್ಥಿತಿಯನ್ನು ದಲಿತ ನಾಟಕಗಳು ಚಿತ್ರಿಸುತ್ತವೆ. ಅಲ್ಲದೆ ಕಾಮಕ್ಕಾಗಿ ದಲಿತ ಮಹಿಳೆಯರನ್ನು ಬಳಸಿಕೊಳ್ಳುವಾಗ ಏಕೆ ಜಾತಿ ಅಡ್ಡಬರುವುದಿಲ್ಲ ಎಂಬ ಚಿಂತನೆಯನ್ನು ಪ್ರಬಲವಾಗಿ ಮಂಡಿಸುತ್ತದೆ. ಅದರೊಂದಿಗೆ ಸ್ತ್ರೀಯರ ನರಬಲಿ ಕುರಿತ ವಿಷಯಗಳು ಕಂಡುಬರುತ್ತವೆ. ನಂತರ ಬುಡಕಟ್ಟು ಜನರ ಹಕ್ಕುಗಳು, ಮನುಧರ್ಮದ ಸಂಚುಗಳನ್ನು ದಲಿತ ನಾಟಕಗಳು ತಿಳಿಸುತ್ತವೆ.

ಅಧ್ಯಾಯ: ಏಳು

ಆತ್ಮಕಥೆಗಳು

ಇನ್ನೊಬ್ಬರ ಜೀವಿತದ ಕಥೆ ಹೇಳುವ, ಅದನ್ನು ಕಥನವಾಗಿ ಕಟ್ಟಿ ಜನತೆಯ ಮುಂದೆ ಹಾಡುವ ಮೌಖಿಕ ಪರಂಪರೆಯು ನಮ್ಮ ಜನಪದ ಸಂಸ್ಕೃತಿಯ ಭಾಗವಾಗಿದೆ. ರಾಜರುಗಳ ಕಥೆ, ಧಾರ್ಮಿಕ ನಾಯಕರುಗಳ ಕಥೆ, ಸಾಂಸ್ಕೃತಿಕ ನಾಯಕರುಗಳ ಕಥೆಗಳನ್ನು ಜನಪದರು ಸಮಾಜದ ಸಾಮಾನ್ಯ ಜನತೆಗೆ ಹಾಡಿನ ಮೂಲಕ ಹೇಳುವ ಕಾರ್ಯ ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದಾರೆ. ಆಧುನಿಕತೆ ಪ್ರವೇಶದ ತರುವಾಯ, ಈ ವೃತ್ತಿ ಗಾಯಕರು ಕಥೆ ಹೇಳುವುದನ್ನೇ ನಿಲ್ಲಿಸಿದ್ದಾರೆ. ಆದರೆ ತನ್ನ ಬಗ್ಗೆ ತಾನೇ ಬರೆದುಕೊಳ್ಳುವ ಪ್ರವೃತ್ತಿಯು ಇತ್ತೀಚಿನ ದಿನಮಾನದಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಮನುಷ್ಯರು ತಾವು ಬದುಕಿನಲ್ಲಿ ಕಂಡುಕೊಂಡ ಅಥವಾ ಅನುಭವಿಸಿದ ನೋವು, ನಲಿವು, ಸಾಧನೆಗಳು, ಆತ್ಮ ಪ್ರತಿಷ್ಠೆಯ ಕೌಟುಂಬಿಕ ಬದುಕನ್ನು ಬರಹದ ರೂಪದಲ್ಲಿ ದಾಖಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದು ಮನುಷ್ಯರು ತಮ್ಮ ಆತ್ಮ ತೃಪ್ತಿಗಾಗಿ, ತಮ್ಮ ಖಾಸಗಿ ಬದುಕಿನ ವಿವರಗಳನ್ನು ಬರವಣಿಗೆಯ ಮೂಲಕ ಓದುವ ವಲಯಕ್ಕೆ ತಲುಪಿಸಿ, ಆ ಮೂಲಕ ತಮ್ಮ ಅನುಭವಗಳನ್ನು ಇತರರ ಅನುಭವಗಳನ್ನಾಗಿಸಿ, ಅವರ ಜೀವನದಲ್ಲಿ ನಡೆದ ಘಟನೆಗಳನ್ನು ಮೆಲುಕು ಹಾಕುವಂತೆ ಮಾಡುತ್ತಾರೆ. ಈ ಮಾದರಿಯ ಬರವಣಿಗೆಯನ್ನು 'ಆತ್ಮಕಥೆ' ಎಂದು ಕರೆಯುತ್ತಾರೆ. 'ಆತ್ಮಕಥನಾ' ಮಾದರಿಯು ಆಂಗ್ಲ ಭಾಷೆಯ ಸಾಹಿತ್ಯದ ಪ್ರಕಾರಗಳಿಂದ ಬಂದದ್ದು. ಇಲ್ಲಿ ವ್ಯಕ್ತಿ ಬಾಲ್ಯದಿಂದ ವೃದ್ಧಾಪ್ಯದವರೆಗಿನ ಅನುಭವಗಳನ್ನು ಅನುಕ್ರಮವಾಗಿ ಹೇಳುವ ಒಂದು ಮಾದರಿ ಕ್ರಮವೇ ಆತ್ಮಕಥನವಾಗಿದೆ.

ಮೇಲ್ವರ್ಗದ ಆತ್ಮಕಥೆಗಳಿಗಿಂತ ದಲಿತ ಆತ್ಮಕಥೆಗಳು ಭಿನ್ನವಾದ ನಿರೂಪಣಾ ತಂತ್ರವನ್ನು ಅನುಸರಿಸಿಕೊಂಡಿವೆ. ಕಾರಣ ಅವು ದಲಿತ ಕೇರಿಯಿಂದ ಬಂದಿದ್ದರ ಪರಿಣಾಮವಾಗಿ ದಲಿತರ ಸಮಗ್ರ ಬದುಕಿನ ವಿವರಗಳು ವಾಸ್ತವದ ಸ್ಥಿತಿಯಲ್ಲಿ ಕಾಣಿಸುತ್ತವೆ. ದಲಿತ ಆತ್ಮಕಥೆಗಳಲ್ಲಿ ಜಾತಿ ಕೇಂದ್ರಿತ ಅವಮಾನ, ಹಸಿವು, ಬಡತನ, ಶೋಷಣೆ, ಸ್ವಾಭಿಮಾನ, ಪ್ರತಿರೋಧ ಮುಂತಾದವುಗಳು ಬರಹದ ಪ್ರಮುಖವಾದ ಅಂಶಗಳಾಗಿವೆ. ದಲಿತರು ಸಮಾಜದಲ್ಲಿ ಅವಮಾನದಿಂದ ಕುಗ್ಗಿ ಹೋಗಿ, ತಾನು ಅದನ್ನು ಪ್ರತಿರೋಧಿಸಲು ಶಿಕ್ಷಣ ಪಡೆದು ಸ್ವಾಭಿಮಾನ ಮತ್ತು ಆತ್ಮವಿಶ್ವಾಸದಿಂದ ಜೀವಿಸಲು ಅವರಿಗೆ ಶೈಕ್ಷಣಿಕ ಬೆಳವಣಿಗೆಯು ಪ್ರಮುಖ ಕಾರಣವಾಗುತ್ತದೆ.

ಸಮಾಜದಲ್ಲಿನ ಅಸಮಾನತೆಯನ್ನು ಹಾಗೇ ಮುಂದುವರೆಸಿಕೊಂಡು ಹೋಗಬೇಕೆಂಬ ಮೇಲ್ವರ್ಗದವರ ಆಶಯಕ್ಕೆ ವಿರೋಧವಾಗಿ ಅಂದಿನ ಸಾಮಾಜಿಕ ಸಂಗತಿಗಳನ್ನು ಎದುರಿಸುವ ತನ್ನ ಪಾತ್ರಗಳು ಆತ್ಮ ಕಥೆಯ ಕೇಂದ್ರ ಬಿಂದುವಾಗಿರುತ್ತವೆ. ದಲಿತ ಆತ್ಮಕಥೆಗಳಲ್ಲಿ ಮನುಷ್ಯ ಸಂಬಂಧಿತ ನೆಲೆಗಳಾದ ಧರ್ಮ, ಜಾತಿ, ಸಾಮಾಜಿಕ ಪ್ರಜ್ಞೆ, ರಾಜಕೀಯ ಹೋರಾಟ, ಹಸಿವು, ಅಸ್ಪೃಶ್ಯತೆ, ಉದ್ಯೋಗ, ಪ್ರೇಮ, ಮೇಲ್ವರ್ಗದವರ ಶೋಷಣೆ, ಮತಾಂತರ, ಅಸಮಾನತೆ, ಆಹಾರ, ಕಲೆ, ಸಂಸ್ಕೃತಿ, ಆಚರಣೆ, ಸಂಪ್ರದಾಯ, ನಂಬಿಕೆ ಮುಂತಾದವುಗಳು ಕಥಾ ವಸ್ತುಗಳಾಗಿರುತ್ತವೆ. ದಲಿತರ ಈ ಸಂಘರ್ಷಮಯ ಬದುಕನ್ನು ಯಥಾವತ್ತಾಗಿ ದಾಖಲಿಸುವ ಪ್ರಯತ್ನ ಆಯಾ ದಲಿತ ಲೇಖಕರಿಂದಲೇ ಸಾಧ್ಯವಾಗುತ್ತದೆ.

ಭಾರತೀಯ ಭಾಷೆಗಳಲ್ಲಿ ದಲಿತ ಸಾಹಿತ್ಯವು ಕಥೆ, ಕಾವ್ಯ, ನಾಟಕ, ಕಾದಂಬರಿ, ಆತ್ಮಕತೆ, ವಿಮರ್ಶೆ ಪ್ರಕಾರಗಳಲ್ಲಿ ಬೆಳೆದು ಬಂದಿದೆ. ಆದರೆ ದಲಿತ ಆತ್ಮಕಥೆಗಳು ಮೊದಲು ಆರಂಭಗೊಂಡಿದ್ದು ಮರಾಠಿಯಲ್ಲಿ. ದಲಿತ ಲೋಕದ ಕಗ್ಗತ್ತಲೆಯ ಬದುಕನ್ನು ಅಕ್ಷರ ಲೋಕಕ್ಕೆ ಪರಿಚಯಿಸಿದ್ದು ಈ ಮರಾಠಿ ದಲಿತ ಆತ್ಮಕಥೆಗಳು. ಲಕ್ಷ್ಮಣ ಗಾಯಕ್ವಾಡ ಅವರ 'ಉಚಲ್ಯಾ', ಶರಣ ಕುಮಾರ ಲಿಂಬಾಳೆ ಅವರ 'ಅಕ್ಕರಮಾಶಿ', ದಾದಾ ಸಾಹೇಬ ಮಲ್ಲಾರಿ ಅವರ 'ಗಬಾಳ', 'ಬಲುತಾ', 'ಉಪರಾ' ಮುಂತಾದವು ಪ್ರಮುಖ ಮರಾಠಿ ದಲಿತ ಆತ್ಮಕಥೆಗಳಾಗಿವೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ೭೦ರ ದಶಕದ ದಲಿತ ಸಾಹಿತ್ಯವು ದಲಿತ ಕೇರಿಗಳಿಗೆ ಕರೆದುಕೊಂಡು ಹೋಗಿರುವುದನ್ನು ನಾವು ಕಾಣಬಹುದು. ದಲಿತ ಚಳುವಳಿಯ ಭಾಗವಾಗಿ ಬೆಳೆದು ಬಂದ ದಲಿತ ಸಾಹಿತ್ಯವು ಹೊಲೆಮಾದಿಗರ ಕೇರಿಯ ಸಮಗ್ರ ಚಿತ್ರಣವನ್ನು ದಲಿತ ಆತ್ಮಕತೆಗಳಲ್ಲಿ ಕಟ್ಟಿಕೊಡುವ ಕಾರ್ಯ ಮಾಡಿತು. ಈ ಸಮಯದಲ್ಲಿ ರೂಪಗೊಂಡಿದ್ದ ಅಕ್ಷರ ಜಾಗೃತಿಯು ಮುಂದೆ ತನ್ನ ಸಮುದಾಯ ಸಾಮುದಾಯಿಕ ಬದುಕನ್ನು ಅಕ್ಷರರೂಪದಲ್ಲಿ ಹಿಡಿದಿಡುವ ಪ್ರಯತ್ನ ಮಾಡಿತು. ಅರವಿಂದ ಮಾಲಗತ್ತಿ ಅವರ 'ಗೌರ್ಮೆಂಟ್ ಬ್ರಾಹ್ಮಣ', ಸಿದ್ದಲಿಂಗಯ್ಯ ನವರ 'ಊರುಕೇರಿ', ತುಂಬಾಡಿ ರಾಮಯ್ಯ ನವರ 'ಮಣೆಗಾರ' ಮುಂತಾದವು ಪ್ರಮುಖ ದಲಿತ ಆತ್ಮಕಥೆಗಳಾಗಿವೆ. ದಕ್ಷಿಣ ಭಾರತದ ಇತರೆ ಭಾಷೆಗಳಾದ ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಯಲ್ಲಿಯೂ ಕೂಡ ದಲಿತ ಆತ್ಮಕಥೆಗಳು ರಚಿತಗೊಂಡಿವೆ. ತಮಿಳಿನಲ್ಲಿ ಭಾಮ ಅವರ 'ಕರಕ್ಕು', ಮೊದಲೂರ್ ರಮಾಮೃತ ಅಮ್ಮಾಳ್ ಅವರ 'ದಾಸಿಗಳಿನ್ ಮೋಸ ವಲೈ', ಪೂರಾಣಿ ಅವರ 'ಪೂರಾಣಿಯನ್ ನಿನ್ನೈವಲೈಗಳ್', ಅಳಗಿಯ ನಾಯಗಿ ಅಮ್ಮಾಳ ಅವರ 'ಕವಲೈ', ವಿದ್ಯಾ ಅವರ 'ನಾನ್ ಸರವಣನ್ ಇಲ್ಲೈ ವಿದ್ಯಾ' ಮುಂತಾದವುಗಳು ಪ್ರಮುಖ ದಲಿತ ಆತ್ಮಕಥೆಗಳಾಗಿವೆ. ಹಾಗೆ ಮಲಯಾಳಂ ಭಾಷೆಯಲ್ಲಿ ಲಲಿತಾಂಬಿಕಾ ಅಂತರ್ಜನಮ್ ಅವರ 'ಆತ್ಮಕತೆಗೊಂದು ಮುನ್ನುಡಿ, ಮಾಧವಿ ಕಟ್ಟಿ (ಕಮಲಾದಾಸ್) ಅವರ 'ಮೈಸ್ಟೋರಿ', ಅಜತಾರವರ 'ಓರ್ಮಕ್ಕುರಿಪುಗಳ್', ತಯ್ಯಿಲ್‌ರ 'ಇಡಜ್ಜಳಿಯಿಲೆ ಕುರಿಶು', ನಳಿನಿ ಜಮೀರಾರ 'ಒರು ಲೈಗಿಂಕ ತೊಳಿಲಾಳಿಯಡೆ' ಆತ್ಮಕತೆಗಳು ಪ್ರಮುಖವಾದವುಗಳು.

ಆತ್ಮಕಥೆ ಬರೆದುಕೊಳ್ಳಲು ಕಾರಣಗಳನ್ನು ಅಥವಾ ಅವುಗಳ ಪ್ರಸ್ತುತತೆಯನ್ನು ಈ ಕೆಳಗಿನಂತೆ ಅಪ್ಪಗೆರೆ ಸೋಮಶೇಖರ್ ಅವರು ದಲಿತ ಆತ್ಮಕಥೆ ಸಂಪುಟದ ಮುನ್ನುಡಿಯಲ್ಲಿ ಈ ರೀತಿಯಾಗಿ ಗುರುತಿಸಿದ್ದಾರೆ.

"ಬರಹಗಾರನ ಕೌಟುಂಬಿಕ ಹಿನ್ನೆಲೆ, ಮಹತ್ವ, ಕುಟುಂಬ ವರ್ಗ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಲೆಂದು ವೈಯಕ್ತಿಕ ಸಾಧನೆಯ ದಾಖಲಾತಿಗಾಗಿ" ಕೆಲವರು ಬರಹಗಳನ್ನು ಮಾಡುತ್ತಾರೆ ಎಂಬುದನ್ನು ಗುರುತಿಸುತ್ತಾರೆ. ಅವರು ಹೇಳುವಂತೆ "ಬದುಕಿನಲ್ಲಿ ಎದುರಾದ ಕಷ್ಟ, ಕಾರ್ಪಣ್ಯ, ಸಮಸ್ಯೆ, ಸವಾಲುಗಳನ್ನು ಮೀರಿ ಸಾಧನೆಯ ಉತ್ತುಂಗಕ್ಕೆ ಏರಿದ ಸಂಗತಿಗಳನ್ನು ದಾಖಲಿಸಲು, ತನ್ನದು ಆದರ್ಶ ವ್ಯಕ್ತಿತ್ವ ಎಂಬುದನ್ನು ದಾಖಲಿಸಲು, ತನ್ನ ಸಾಹಿತ್ಯಿಕ ಹಿರಿಮೆಯನ್ನು ಸಾರಲು" ಸಹ ಬರೆಯುವವರಿದ್ದಾರೆ. "ಬದುಕಿನಲ್ಲಿ ಎದುರಿಸಿದ ಜಾತಿ, ಅಸ್ಪೃಶ್ಯತೆಯ ಅವಮಾನ, ಹಸಿವು, ಬಡತನ, ಅಕ್ಷರ ಕಲಿಯುವಾಗಿನ ಸಮಸ್ಯೆ, ಸಾಮಾಜಿಕ ಚಳುವಳಿಗಳಲ್ಲಿ ಭಾಗವಹಿಸಿದ್ದನ್ನು ಹೇಳಲು ತನ್ನ ವ್ಯಕ್ತಿತ್ವವನ್ನು ಪ್ರಭಾವಿಸಿದ ಆದರ್ಶ ವ್ಯಕ್ತಿಗಳನ್ನು ನೆನೆಯಲು" ಕೂಡ ಆತ್ಮಕತೆಗಳನ್ನು ಬರೆವವರಿದ್ದಾರೆ. "ತನ್ನ ಬದುಕಿನ ಅನುಭವಗಳು ಓದುಗನಿಗೆ ಮಾದರಿಯಾಗಲೆಂದು" ಅಲ್ಲದೆ "ತನ್ನ ಹಾಗೂ ಸಮಾಜದ ಅನೇಕ ಸಣ್ಣತನಗಳನ್ನ ಹೇಳುತ್ತಲೇ ಅವುಗಳು ಬದಲಾಗಬೇಕೆಂಬ ಹಂಬಲವನ್ನು ನಿವೇದಿಸಲು" ಬರೆಯುವ ಬರಹಗಾರರಿದ್ದಾರೆ ಎಂಬುದನ್ನು ಅವರು ಗುರುತಿಸುತ್ತಾರೆ. "ತನ್ನ ಅನುಭವದ ದಾಖಲಾತಿಯ ಮೂಲಕ ತಾನು ಬೆಳೆದು ಬಂದ ಸಮಾಜ, ಸಮುದಾಯದ ಸ್ಥಿತಿಗತಿ, ಅನುಭವಗಳನ್ನು ತೆರೆದಿಡಲು" ಕೆಲವಂಶ ಮುಖ್ಯವಾಗಬಹುದು. "ಜಾತಿ, ಅಸ್ಪೃಶ್ಯತೆಯ ಅವಮಾನ, ಮೇಲರಿಮೆ- ಕೀಳರಿಮೆಗಳನ್ನು ಮೆಟ್ಟಿ ನಿಂತರೆ ವ್ಯಾಸಂಗ, ಚಿಂತನ, ವಾದ- ವಾಗ್ವಾದ ಇತ್ಯಾದಿಗಳನ್ನು ಸಾಮಾಜಿಕರಣಗೊಳಿಸುವ ಮೂಲಕ ಈ ಸಮಯದಲ್ಲಿ ಇಂದಿಗೂ ಹಸಿವು, ಬಡತನ, ಅಸ್ಪೃಶ್ಯತೆ, ಜಾತಿ, ಅವಮಾನ, ಅಸಮಾನತೆಗಳಿಗೆ ಸಿಲುಕಿ ನಲುಗಿ ಹೋಗಿರುವ ಬಹುಸಂಖ್ಯಾತರ ಬಗೆಗೆ ಪ್ರಾಮಾಣಿಕವಾಗಿ ಚಿಂತಿಸುವಂತೆ ಮಾಡಲು" ಆತ್ಮಕತೆಗಳನ್ನು ಬರೆಯುತ್ತಾರೆ ಎಂಬುದನ್ನು ಅದರಲ್ಲಿ ಬರೆಯುತ್ತಾರೆ. "ಜಾತಿ, ಮತ, ಧರ್ಮಗಳ ಗಡಿರೇಖೆಗಳನ್ನು ಮೀರಿ ಅನಿಕೇತನ ತತ್ವವಾದ ವಿಶ್ವಮಾನತ್ವವನ್ನು ರೂಪಿಸಿಕೊಳ್ಳಬೇಕಾಗಿರುವ ಅನಿವಾರ್ಯತೆ ಅಗತ್ಯವನ್ನು ಸಾರಲು ಬರೆದಿರುವುದನ್ನು ಸಹ ಅವರು ಗುರುತಿಸುತ್ತಾರೆ". ಜಾತಿ, ಶೋಷಣೆ, ಅಸಮಾನತೆ, ದೌರ್ಜನ್ಯ, ದಬ್ಬಾಳಿಕೆ, ಧರ್ಮಾಂಧತೆ, ಮತಾಂಧತೆ, ಹಿಂಸೆ, ಲಿಂಗ ತಾರತಮ್ಯರಹಿತ ಸಮ ಸಮಾಜದ ಅಸ್ತಿತ್ವದ ಕನಸನ್ನು ನನಸು ಮಾಡಲು ಬರೆದವರಿದ್ದಾರೆ" ಎಂಬುದನ್ನು ಗುರುತಿಸುತ್ತಾರೆ. ಈ ಎಲ್ಲಾ ಅಂಶಗಳು ಎಲ್ಲ ಆತ್ಮಕಥೆಗಳ ಹಿಂದಿರುವ ಮೂಲ ತುಡಿತವಾಗಿರುವ ಸಾಧ್ಯತೆಗಳಿರುತ್ತದೆ ಎಂಬುದನ್ನು ಅವರು ತಿಳಿಸಿದ್ದಾರೆ.

ತಮಿಳು ದಲಿತ ಆತ್ಮ ಕಥೆಗಳು

ಜಾತಿ ಕೇಂದ್ರಿತ ಅವಮಾನಕರ ಅನುಭವಗಳನ್ನು ಮೀರಿ ದಲಿತರು ಜೀವನ ಕಟ್ಟಿಕೊಳ್ಳುವ ಮನಸ್ಸು ಮಾಡಬೇಕು. ಸಾಮಾಜಿಕ ಬದುಕಿನಲ್ಲಿ ಹಲವು ಸೋಲು, ಗೆಲುವು, ಸ್ವೀಕಾರ

ನಿರಾಕರಣೆಯ ದ್ವಂದ್ವದ ಬದುಕು ಒಬ್ಬ ದಲಿತನಿಗೆ ಸಂಬಂಧಿಸಿದ್ದಲ್ಲ, ಅದು ಇಡೀ ದಲಿತ ಸಮುದಾಯಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಒಂದು ಸಮುದಾಯದ ಬದುಕನ್ನು ಇತರರು ಗೌರವಿಸದೆ, ಅವರ ಜೀವನವನ್ನು ನಿರಾಕರಿಸಿ ಅವರಿಗೆ ಯಾವುದೇ ಸಾಮಾಜಿಕ ಮನ್ನಣೆ ನೀಡದೆ ಹೋಗುವ ಸಂಗತಿಯು ಆ ಪ್ರದೇಶದಲ್ಲಿನ ಅಸಮಾನತೆಯನ್ನು ಎತ್ತಿ ಹಿಡಿದಂತಾಗುತ್ತದೆ. ದಲಿತರ ನೋವಿನ, ಅಪಮಾನದ ಮೂಕ ಧ್ವನಿಗೆ ಬರಹದ ಅಭಿವ್ಯಕ್ತಿಯನ್ನು ನೀಡಲು ನಿರಾಕರಿಸಿದ ಸಾಂಪ್ರದಾಯಿಕ ಸಮಾಜವು ಅವರ ಇರುವಿಕೆಯನ್ನು ಅವಮಾನಿಸಿದೆ. ಪರಿಣಾಮ ದಲಿತರೇ ತಮ್ಮ ಅಸ್ತಿತ್ವವನ್ನು, ತನ್ನ ಕಷ್ಟ ನೋವು ನಲಿವುಗಳ ಮೂಲಕ, ಒಂದು ಮಾದರಿಯ ಬರವಣಿಗೆಯ ಮೂಲಕ, ಕಥನ ಕ್ರಮವಾಗಿ ಆತ್ಮಕಥೆಗಳನ್ನು ಬರೆದಿದ್ದಾರೆ. ಅವುಗಳು ದಲಿತರ ಸ್ವಾಭಿಮಾನದ ಸಂಕೇತವೆಂದು ಪರಿಭಾವಿಸಬಹುದಾಗಿದೆ.

ದಲಿತರ ಈ ರೀತಿಯ ಬದಲಾವಣೆಯು ತಮಿಳು ಸಾಹಿತ್ಯವನ್ನು ೯೦ರ ದಶಕದಲ್ಲಿ ಪ್ರವೇಶ ಮಾಡಿತು. ಆರಂಭದ ದಲಿತ ಸಾಹಿತ್ಯವು ಕಥೆ, ಕಾವ್ಯ, ನಾಟಕ, ಕಾದಂಬರಿ ಮತ್ತು ಆತ್ಮಕಥೆಯ ವಿವಿಧ ಮಾದರಿಯನ್ನು ಬಳಸಿಕೊಂಡು ವಿಸ್ತರಿಸಿತು. ೯೦ರ ದಶಕವು ತಮಿಳುನಾಡಿನಲ್ಲಿ ಹೊಸ ಬಗೆಯ ಸಾಹಿತ್ಯ ಪ್ರಕಾರ ಉದಯವಾಗಲು ಕಾರಣವಾದ ಸಾಮಾಜಿಕ ಸಂದರ್ಭವು ಕೂಡ ಭಿನ್ನವಾಗಿದೆ. ಬೇರೆ ಭಾಷೆಯ ದಲಿತ ಸಾಹಿತ್ಯ ತಮಿಳಿಗೆ ಅನುವಾದಗೊಂಡಿತು. ಪೆರಿಯಾರ್ ಮತ್ತು ಅಂಬೇಡ್ಕರ್‌ರವರ ಚಿಂತನೆಗಳು ತಮಿಳಿನಲ್ಲಿ ದಲಿತ ಸಾಹಿತ್ಯ ಉದಯಕ್ಕೆ ಕಾರಣವಾದವು.

ತಮಿಳಿನಲ್ಲಿ ಮೊದಲ ದಲಿತ ಆತ್ಮಕಥೆಯಾಗಿ ಬಾಮರವರ 'ಕರುಕ್ಕು' ೧೯೯೨ ರಲ್ಲಿ ಪ್ರಕಟಿತಗೊಂಡಿತು. ಬಾಮ ಅವರು ತಮಿಳಿನ ಕ್ರೈಸ್ತ ಸಮಾಜಕ್ಕೆ ಮತಾಂತರಗೊಂಡ ದಲಿತ ಪರೈ ಸಮುದಾಯದವರು. ಅದರಲ್ಲಿ ಮಹಿಳೆ ತಮಿಳುನಾಡಿನಲ್ಲಿ ಮತಾಂತರಗೊಂಡ ದಲಿತ ಸಮುದಾಯವು ಬದುಕಿನ ವಿವಿಧ ಸ್ತರಗಳಲ್ಲಿ ಎದುರಿಸುವ ಅಪಮಾನ, ನೋವು, ಶೋಷಣೆ ಮುಂತಾದ ತಾರತಮ್ಯಗಳನ್ನು ಈ ಆತ್ಮಕಥೆಯು ಬಿಚ್ಚಿಡುತ್ತದೆ. ಮುಖ್ಯವಾಗಿ ಬಾಮ ಅವರು ಆತ್ಮಕಥೆಯಲ್ಲಿ ದಲಿತ ಮಹಿಳೆಯಾಗಿ, ತಾನು ಅನುಭವಿಸಿದ ಸಂಕಷ್ಟದ ಜೀವನವನ್ನು ಆತ್ಮಕಥೆಯಲ್ಲಿ ದಾಖಲಿಸುತ್ತಾರೆ. ದಲಿತ, ಮತಾಂತರಗೊಂಡ ದಲಿತ ಮತ್ತು ಮಹಿಳೆ ಈ ಮೂರು ಪ್ರಧಾನ ಅಂಶಗಳು ಈ ಆತ್ಮಕಥೆಯ ಪ್ರಮುಖ ಅಂಶಗಳಾಗಿವೆ.

ಎದೆಯ ಗಾಯಗಳ ಮಾಯಿಸುವ ದಾರಿಯಾಗಿ ಬರವಣಿಗೆಗೆ ಇಳಿದ ಬಾಮ ತನ್ನ ಆತ್ಮಕಥೆಗೆ 'ಕರಕು' ಅಂತ ಹೆಸರಿಟ್ಟಿದ್ದಾರೆ. ಕರಕ್ಕು ಎಂದರೆ ತಾಳೆಗರಿ. ಇದು ಎರಡು ಬದಿಗಳಲ್ಲೂ ಗರಗಸದಂತಹ ರಚನೆಯುಳ್ಳದ್ದು. ಮುಟ್ಟಿದರೆ ತರಚಿ ಗಾಯ ಮಾಡುತ್ತದೆ. ಆದರೆ ಈ ತಾಳೆಗರಿಯು ಬಹುಪಯೋಗಿ ಗರಿಯಾಗಿದೆ. ದಲಿತ ಸಮುದಾಯ ಮನೆಯ ಚಾವಣಿಗೆ ಮತ್ತು ಬದುಕಿನ ಅನಿವಾರ್ಯತೆಗೆ ತಾಳೆಗರಿಯನ್ನು ಮಾರಿ ಜೀವನ ನಿರ್ವಹಿಸುತ್ತಾರೆ. ಬಾಮ ಹೇಳಿಕೊಂಡಿರುವಂತೆ "ತಾವು ಚಿಕ್ಕವರಿದ್ದಾಗ ಸೌದೆಗಾಗಿ ತಾಳೆಗರಿಗಳನ್ನು ಆರಿಸುವಾಗ ಅದರೊಡನೆ

ಆಟವಾಡುವಾಗ ದೇಹ ಚರ್ಮ ಕೊಯ್ಯಿಸಿ ಗಾಯಗೊಳಿಸಿ ರಕ್ತಹರಿಸಿಕೊಳ್ಳುತ್ತಾ ದೇವರ ವಾಕ್ಯವೂ ಕೂಡ ಇಬ್ಬಾಯಿಯ ಹರಿತವಾದ ಅಲುಗಿನಂತೆ" ಎಂದು ಬೈಬಲ್‌ನಲ್ಲಿರುವುದರಿಂದ ಈ ವಾಕ್ಯದ ಪ್ರೇರಣೆಯಿಂದ ಬಾಮ ಅವರು ತಮ್ಮ ಆತ್ಮಕಥೆಗೆ ಕರಕ್ಕು ಅಂತ ಹೆಸರಿಟ್ಟಿದ್ದಾರೆ. ಕಾರಣ ದಲಿತ ಸಮುದಾಯವು ತಾಳೆಗರಿಯಿಂದ ಗಾಯಗೊಳ್ಳುತ್ತಾ ಮತ್ತೇ ಗಾಯಗೊಳ್ಳುವ ದಲಿತರು ಜಾತಿ ಮತ್ತು ಧರ್ಮಗಳೆಂಬ ಎರಡು ಅಸ್ತಿತ್ವವು ದಲಿತ ಸಮುದಾಯವನ್ನು ಎರಡು ಬದಿಯಿಂದಲೂ ಸೀಳುತ್ತಿರುವುದು ವಾಸ್ತವಿಕ ಸನ್ನಿವೇಶ. ಹಾಗಾಗಿ ಬಾಮ ಅವರು ತಮ್ಮ ಆತ್ಮಕಥೆಯನ್ನು ಸಾಂಕೇತಿಕವಾಗಿ ತಾಳೆಗರಿಗೆ ಹೋಲಿಸಿದ್ದಾರೆ. ಪರ್ಯೆ ಪಲ್ಲ- ಚಾಳಿಯಾರ್- ನಾಡಾರ್- ನಾಯ್ಕರ್ ಸಮುದಾಯಗಳ ನಡುವಿನ ಅಂತರ್ ಸಂಬಂಧಗಳು ಹಾಗೂ ಬಿಕ್ಕಟ್ಟುಗಳು ದಲಿತ ಕೇರಿಯ ಮಕ್ಕಳ ಶಿಕ್ಷಣ ಮನರಂಜನೆ, ದಲಿತರ ನಂಬಿಕೆಗಳು, ಪ್ರೇಮ, ಧಾರ್ಮಿಕತೆ, ನೋವು, ಕ್ಯಾಥೋಲಿಕ್ ಚರ್ಚಿನ ಪಾದ್ರಿ ಸನ್ಯಾಸಿನಿಯರು ಹೀಗೆ ಹಲವಾರು ಪಾತ್ರ ಹಾಗೂ ಘಟನೆಗಳು ಈ ಆತ್ಮಕಥೆಯಲ್ಲಿ ಪ್ರಮುಖವಾಗಿ ಕಾಣಿಸುತ್ತವೆ.

ಮತಾಂತರಗೊಂಡ ದಲಿತ ಸಮುದಾಯದ ಮಹಿಳೆ ಧರ್ಮದ ಬಗ್ಗೆ ಭ್ರಮನಿರಸನಗೊಂಡು ಧರ್ಮವನ್ನೇ ಪ್ರಶ್ನೆ ಮಾಡುವ ಬಾಮ ಅವರು ಕ್ರೈಸ್ತ ಸನ್ಯಾಸಿನಿಯರ ಕಾನ್ವೆಂಟ್ ಲೋಕದ ಒಳ ಹೊರಗು ಇರುವ ಸಂಗತಿಯನ್ನು ಹೊರಹಾಕಿದ್ದಾರೆ. ಮುಖ್ಯವಾಗಿ ಬಾಮ ಅವರ ಆತ್ಮಕಥೆಯಲ್ಲಿ ನಾನು ಎನ್ನುವ ಪದಕ್ಕೆ ದಲಿತ ಸಮುದಾಯವೆಂದು ತಿಳಿದುಕೊಂಡರೆ ತಮಿಳುನಾಡಿನ ಯಾವುದೇ ಗಲ್ಲಿಯ ಪರ್ಯೆ ಸಮುದಾಯದ ಮತಾಂತರ ದಲಿತ ಕ್ರೈಸ್ತ ವ್ಯಕ್ತಿಯ ಪ್ರತಿನಿಧಿ ಎಂದು ಭಾವಿಸಬಹುದು. ಇಡೀ ಸಮುದಾಯದ ಪರವಾಗಿ ಮಾತಾಡುವ ಎಚ್ಚರ ಹಾಗೂ ಅದರ ನೋವು ನಲಿವಿನೊಂದಿಗೆ ಹೇಳಿಕೊಳ್ಳುವ ಕಥನ ಮಾದರಿಯನ್ನು ನಾವು ಗಮನಿಸಬಹುದು.

ರಂಗರಾಜ ವನದುರ್ಗ ಅವರು ಬಾಮ ಕರುಕ್ಕು ಕನ್ನಡ ಅನುವಾದದ ಕೃತಿಗೆ ಹೊನ್ನುಡಿಯನ್ನು ಬರೆಯುತ್ತಾ ಹೀಗೆ ಹೇಳುತ್ತಾರೆ. "ಕರುಕ್ಕು ಭೂ ಮಾಲೀಕರ, ಮೇಲ್ಜಾತಿಯ ಅಟ್ಟಹಾಸಕ್ಕೆ ಬಸವಳಿದ ಅದೆಷ್ಟೋ ದಲಿತ ಕುಟುಂಬಗಳು ಕಣ್ಣೀರಿಟ್ಟಿವೆ. ದಕ್ಕದ ಅಕ್ಷರ, ಹಿಂಗದ ಹಸಿವು, ಸಿಗದ ಸೂರು, ಮೈಮುಚ್ಚುವ ಬಟ್ಟೆಯನ್ನು ಕೇಳಿದರೆ ಸೆರೆಮನೆಗೆ ತಳ್ಳಿವೆ. ಇದರ ವಿರುದ್ಧ ಸಿಡಿದೆದ್ದು ಬಾಮ ಹುಟ್ಟಿದ ಜಾತಿ ಪರ್ಯೆಯಾದರೆ ಬೆಳೆಸಿದ ಧರ್ಮ ಕ್ರಿಶ್ಚಿಯನ್ ಧರ್ಮ ಎಂಬುದೊಂದು ವಿಶೇಷವಾದರು ಇದು ಮೊದಲ ಭಾಗದಲ್ಲಿ ಕಥೆಯಾದರೆ, ಎರಡನೇ ಭಾಗದಲ್ಲಿ ವ್ಯಥೆಯಾಗುತ್ತದೆ. ಕ್ರಿಶ್ಚಿಯನ್ ಧರ್ಮದ ತೆಕ್ಕೆಯಲ್ಲಾದರೂ ದಲಿತರಿಗೆ ಶಾಂತಿ- ಸಮತೆ ಮಾತೃ-ಮಮತೆ ಸಿಗಬಹುದೆಂದುಕೊಂಡಿದ್ದ ಬಾಮಳಿಗೆ ನಂತರ ನಿರಾಸೆಯೇ ಗತಿಯಾಯಿತು. ಎಲ್ಲಾ ಧರ್ಮದಂತೆ ಇಲ್ಲಿಯೂ ಮೂಲಭೂತವಾದಿಗಳ ಮುಖವಾಡ, ಸಿರಿವಂತರ ಸೊಕ್ಕುಗಳೇ ವಿಜೃಂಭಿಸಿರುವುದನ್ನು ಬಾಮ ವಿರೋಧಿಸುತ್ತಾರೆ. ಸಿರಿವಂತರ ಸ್ವತ್ತಾಗಿರುವ, ಹಣವಂತರ ಹಕ್ಕಾಗಿರುವ ಶಾಲಾಕಾಲೇಜುಗಳನ್ನು ಧಿಕ್ಕರಿಸುತ್ತಾರೆ. ಪಾದ್ರಿ ಮದರ್‌ಗಳ ಧಾರ್ಮಿಕತೆ

ಮತ್ತು ಲೌಖಿಕ ದಾಹಗಳನ್ನು 'ಕರುಕ್ಕು'ವಿನ ಉದ್ದಕ್ಕೂ ಅನಾವರಣಗೊಳಿಸಿದ್ದಾರೆ. ಬಡವರಿಗೆ ಸಿಗದ, ದಲಿತರಿಗೆ ದಕ್ಕದ ಕ್ರಿಶ್ಚಿಯನ್ ಧರ್ಮವನ್ನು, ಆ ಧರ್ಮದ ಕನ್ಯಾ ಸ್ತ್ರೀತ್ವವನ್ನು ತ್ಯಜಿಸಿ ಹೊರಗೆ ಬಂದು ಬಂಡಾಯವಾಗುವ ಎಲ್ಲ ವಿವರಗಳು ಪ್ರಸ್ತುತ ಆತ್ಮಕಥೆಯಲ್ಲಿ ವ್ಯಕ್ತಗೊಂಡಿವೆ."

ಎಚ್.ಎಸ್.ಅನುಪಮಾ ಅವರು ತಮ್ಮ ಅನುವಾದ ಕೃತಿಯಾದ ತಾಳೆಗರಿ (ಕುವೆಂಪು ಭಾಷಾ ಭಾರತಿ ಪ್ರಾಧಿಕಾರ) ಲೇಖಕರ ಮಾತುಗಳನ್ನು ಹೇಳುವಾಗ ಈ ಆತ್ಮಕಥೆಯ ಮಹತ್ವ ಕುರಿತು ಈ ಮಾತುಗಳನ್ನಾಡುತ್ತಾರೆ. "ಎಲ್ಲ ಬರಹಗಳೂ ಆಡದ ಮಾತುಗಳಿಂದಲೇ ಜನ್ಮ ತಾಳುತ್ತವೆ. ಆತ್ಮಕಥೆಗಳು ಆಡದೇ ಉಳಿದ ಮಾತುಗಳಿಂದ ಅನುಭವಗಳನ್ನು ಬಿಚ್ಚಿಡುತ್ತವೆ. ದಲಿತ ಆತ್ಮಕತೆಗಳು ಉಳಿದವರು ಇದುವರೆಗು ಕೇಳಿಸಿಕೊಳ್ಳದ ಮಾತುಗಳು ಹೊತ್ತು ತರುತ್ತವೆ. ಅಸ್ಪೃಶ್ಯತೆಯ ಅವಮಾನಕರ ಅನುಭವಗಳನ್ನು ದಾಟಿ ಬರಲು ದಲಿತ ಮನಸ್ಸು ಹಲವು ಗಾಯಗಳನ್ನು ಅನುಭವಿಸುತ್ತದೆ. ಆ ಮನಸ್ಸಿನ ನೋವು, ನಲಿವು, ಸೋಲು-ಗೆಲವು, ಸ್ವೀಕಾರ - ನಿರಾಕರಣೆ ಕೇವಲ ಅವರ ಸಂಕೇತವಷ್ಟೇ ಅಲ್ಲ ಅಥವಾ ಆ ಸಮುದಾಯದ ಸಂಕೇತವಷ್ಟೇ ಅಲ್ಲ; ಬೇರೆ ಆಯ್ಕೆಯೇ ಇಲ್ಲದಂತೆ ಮಾಡಿರುವ ಸಮಾಜದ್ದೂ ಆಗಿದೆ. ಆದರೆ ದಲಿತರ ಅಭಿವ್ಯಕ್ತಿಗೆ ಅದರ ಸೃಜನಶೀಲ ಕಲಾತ್ಮಕತೆಯ ಬೆಳವಣಿಗೆಗೆ ಅವಕಾಶ ಸಿಗದೆ ಸಾವಿರಾರು ವರ್ಷ ಗತಿಸಿದವು ಎಂದೇ ದಲಿತ ಮನಸ್ಸು ವೈಯಕ್ತಿಕ ಅನುಭವದ ನೆಲೆಯನ್ನು ದಾಖಲಿಸುವುದರಲ್ಲಿಯೇ ತನ್ನ ಅಸ್ತಿತ್ವ ಸಂವೇದನೆಯನ್ನು ಪ್ರಕಟಪಡಿಸ ಬಯಸುತ್ತದೆ. ತನ್ನನ್ನು ಸಮುದಾಯದ ಮುಖೇನ ಗುರುತಿಸಿಕೊಳ್ಳುತ್ತ, ನಿರೂಪಿಸಿಕೊಳ್ಳುತ್ತ ಹೋಗುವ ಬರವಣಿಗೆಯ ಕ್ರಮ ದಲಿತ ಆತ್ಮ ಕಥನಗಳ ಮುಖ್ಯಗುಣವಾಗಿರುತ್ತದೆ. ದಮನಿತ ಸಮುದಾಯದ ಬಿಡುಗಡೆಯ ದಾರಿಗಳು ದಲಿತೇತರ ಚಿಂತನೆಯ ತಿಳಿವುಗಳನ್ನು ವಿಸ್ತರಿಸುವುದರಿಂದ ದಲಿತ ಆತ್ಮಕಥೆಗಳು ಸಾಹಿತ್ಯಿಕ ದೃಷ್ಟಿಯಿಂದ ಮಾತ್ರವಲ್ಲ ಸಮಾಜಶಾಸ್ತ್ರೀಯವಾಗಿಯೂ ಅಧ್ಯಯನ ಮಾಡಬಹುದಾಗಿದೆ"(ಎಚ್.ಎಸ್.ಅನುಪಮ, ತಾಳೆಗೆರೆ, ಮುನ್ನುಡಿ). ದಲಿತ ಆತ್ಮಕಥೆಗಳು ಸಾಮುದಾಯಿಕವಾಗಿರುವುದರಿಂದ ಒಂದು ಸಮುದಾಯದ ಸಾಂಸ್ಕೃತಿಕ ಅಂಶಗಳು, ಜನಾಂಗೀಯ ಆಚರಣೆಗಳು, ಸಮಾಜದೊಂದಿಗೆ ಇರುವ ಸಂಬಂಧಗಳು, ಸಂಪ್ರದಾಯದ ಸಂಗತಿಗಳನ್ನು ಒಳಗೊಂಡಿರುತ್ತವೆ. ಹಾಗಾಗಿ ಇಡೀ ದಲಿತ ಸಮುದಾಯದ ಅಧ್ಯಯನವಾಗಿ ನೋಡಬಹುದು ಎನ್ನುವ ಅಭಿಪ್ರಾಯವನ್ನು ಎಚ್.ಎಸ್.ಅನುಪಮಾ ಅವರು ವ್ಯಕ್ತಪಡಿಸಿದ್ದಾರೆ.

'ಕರುಕ್ಕು' ಒಂದು ಅನುಭವದ ಕಥೆಯಾಗಿ ನೋಡಬಹುದು. ಆತ್ಮಕಥೆಯಲ್ಲಿ ವ್ಯಕ್ತಿಯ ಬದುಕಿಗೆ ಅವನ ಜೀವನ ವಿಧಾನಕ್ಕೆ ಸಂಬಂಧಿಸಿದ ವೈಯಕ್ತಿಕ ವಿವರಗಳು ಬಾಲ್ಯದಿಂದ ಆರಂಭಗೊಂಡು ಒಂದಾದ ಮೇಲೊಂದರಂತೆ ಘಟನೆಗಳನ್ನು ಚಿತ್ರಿಸಿರುತ್ತಾರೆ. ಆದರೆ ಬಾಮ ಅವರು ಬರೀ ವೈಯಕ್ತಿಕ ವಿವರಗಳಿಗೆ ಹೋಗದೇ ಇಡೀ ಮತಾಂತರಗೊಂಡ ದಲಿತ ಪರಯ್ಯ ಸಮುದಾಯದ ಸಾಮಾಜಿಕ ಜೀವನ ವಿಧಾನವನ್ನು ಈ ಆತ್ಮಕಥೆಯ ಮೂಲಕ ತೆರೆದಿಡುತ್ತಾರೆ. ಮತಾಂತರಗೊಂಡಿರುವ ದಲಿತರ ಜೀವನವು ಹೇಗೆ ಭ್ರಮನಿರಸನಗೊಂಡಿದೆ

ಎನ್ನುವ ಸಂಗತಿಯನ್ನು ಬಿಚ್ಚಿಡುತ್ತಾರೆ. ಭಾರತದ ತಳಸಮುದಾಯಗಳು ಅದರಲ್ಲೂ ಮುಖ್ಯವಾಗಿ ದಲಿತರು ತಮ್ಮ ವಿಮೋಚನೆಗೆ ಮತಾಂತರ ಎನ್ನುವ ಕವಲು ದಾರಿಯನ್ನು ಆಯ್ಕೆ ಮಾಡಿಕೊಂಡರು. ಕಾರಣ ಸಾವಿರಾರು ವರ್ಷಗಳ ಸಾಮಾಜಿಕ ಹೀನ ಪರಿಸ್ಥಿತಿಯಿಂದ ಹೊರ ಬರಲೇಬೇಕೆಂಬ ಹಂಬಲ. ಹಾಗಾಗಿ ದಲಿತರು ಈ ಮತಾಂತರ ಮಾಯೆಗೆ ಸಿಲುಕಿದರು. ಅದರಲ್ಲೂ ತಮಿಳುನಾಡಿನ ದಲಿತರು ಕ್ರಿಶ್ಚಿಯಾನಿಟಿ– ಕ್ರೈಸ್ತ ಧರ್ಮದ ಆಚರಣೆಯನ್ನು ತಮ್ಮ ವಿಮೋಚನೆಯೆಂದು ಭಾವಿಸಿದರು. ಪರಿಣಾಮ ದೊಡ್ಡ ಸಂಖ್ಯೆಯಲ್ಲಿ ದಲಿತರು ಮತಾಂತರಗೊಂಡರು. ತಮಿಳುನಾಡಿನಲ್ಲಿ ಶೇ. ೮೦ ರಷ್ಟು ದಲಿತರು ಮತಾಂತರಗೊಂಡರು. ಈ ರೀತಿಯಾಗಿ ಮತಾಂತರಗೊಂಡ ದಲಿತ ಸಮುದಾಯಗಳಲ್ಲಿ ಪರ್ಯೆ ಸಮುದಾಯವು ಕೂಡ ಒಂದು. ಮಾನವ ಪ್ರೀತಿ ಬೋಧಿಸುವ ಕ್ರೈಸ್ತ ಧರ್ಮದಲ್ಲಿ ಒಳತಾರತಮ್ಯ ಇರುವುದನ್ನು ಬಾಮ ಅವರು ಹಲವು ಕಡೆಗಳಲ್ಲಿ ಸೂಕ್ಷ್ಮವಾಗಿ ಆತ್ಮಕಥೆಯಲ್ಲಿ ಚಿತ್ರಿಸಿದ್ದಾರೆ. ಅಲ್ಲದೆ ಕ್ರೈಸ್ತ ಧರ್ಮದಲ್ಲೂ ಅಸಮಾನತೆ, ಸಮಾನ ಗೌರವ ಇತರರನ್ನು ಬೆಳೆಸದ ಮನಸ್ಥಿತಿಯನ್ನು ಕಾಣದೆ ಹೋಗುತ್ತದೆ. ವ್ಯಕ್ತಿಯೊಬ್ಬನ ಜಾತಿ ಶ್ರೇಣಿಯು ಆತನ ಧರ್ಮ ಮತ್ತು ಸಮಾಜದಲ್ಲಿ ಸ್ಥಾನ ನಿರ್ಧರಿಸುವ ಅಂಶಗಳೆಂದು ಬಾಮ ಅವರಿಗೆ ತಿಳಿಯುತ್ತದೆ. ಹೀಗೆ ಒಂದು ಮತಾಂತರಗೊಂಡ ದಲಿತ ಪರಯ್ಯ ಸಮುದಾಯದ ಮಹಿಳೆಯು ಆಚರಣೆಯಲ್ಲಿ ಕ್ರೈಸ್ತರನ್ನು ಮೀರಿಸುವ ಹಂತಕ್ಕೂ ಹೋದರು. ಆದರೂ ಜಾತಿ ಕಾರಣದಿಂದ ಮತ್ತೆ ಅದೇ ಅವಮಾನ, ಅಸಮಾನತೆಯಂತಹ ಪ್ರಸಂಗಗಳು ಬಾಮ ಅವರಿಗೆ ದಲಿತತ್ವದ ಪ್ರಜ್ಞೆ ಮೂಡುವಂತೆ ಮಾಡುತ್ತದೆ.

ತಮಿಳು ದಲಿತ ಆತ್ಮಕಥೆಗಳು ಆ ಸಮುದಾಯದ ಸ್ಥಿತಿಗತಿಯನ್ನು ಯಥಾವತ್ತಾಗಿ ದಾಖಲಿಸುವ ಪ್ರಯತ್ನ ಮಾಡಿವೆ. ಈ ನಿಟ್ಟಿನಲ್ಲಿ ಬಾಮ ಅವರ 'ಕರುಕ್ಕು' ಮತ್ತು ಗುಣಸೇಖರನ್ ಅವರ 'ವಡು' ಪ್ರಮುಖವಾಗಿ ಕಾಣಬಹುದು. ತಮಿಳು ದಲಿತ ಆತ್ಮಕತೆಯಲ್ಲಿ ವ್ಯಕ್ತಗೊಂಡಿರುವ ಮತಾಂತರಗೊಂಡಿರುವ ದಲಿತ ಸಮುದಾಯವು ಅನುಭವಿಸಿರುವ ನೋವಿನ ತಾರತಮ್ಯದ ಪ್ರಧಾನ ಅಂಶಗಳನ್ನು ಈ ರೀತಿಯಾಗಿ ಪಟ್ಟಿ ಮಾಡಬಹುದಾಗಿದೆ.

ತಮಿಳು ದಲಿತ ಆತ್ಮಕಥೆಗಳಲ್ಲಿ: ಜಾತಿ ಶೋಷಣೆ ಮತ್ತು ಅಪಮಾನ

ದಲಿತ ಆತ್ಮಕಥೆಗಳು ಮೇಲ್ವರ್ಗದವರ ಜಾತಿ ಶೋಷಣೆ ಮತ್ತು ಅಪಮಾನಗಳ ಫಲವಾಗಿ ರೂಪುಗೊಂಡಿರುತ್ತವೆ. ದಲಿತರು ತಮ್ಮೊಳಗಿನ ತಣ್ಣನೆಯ ಪ್ರತಿರೋಧವನ್ನು ಬರಹದ ಮೂಲಕ ಹೊರ ಹಾಕುವ ಪ್ರಯತ್ನವಾಗಿ, ಮೇಲ್ವರ್ಗದ ಸಮುದಾಯದಿಂದ ಅನುಭವಿಸಿದ ನೋವು, ಅಪಮಾನ, ದಬ್ಬಾಳಿಕೆ, ಅಸ್ಪೃಶ್ಯತೆ, ಜೀತ ಪದ್ಧತಿಯನ್ನು ಹೇಗೆ ಅನುಭವಿಸಿಕೊಂಡು ಬಂದಿದ್ದಾರೆ ಎಂಬುದನ್ನು ಆತ್ಮಕಥೆಗಳಲ್ಲಿ ಕಾಣಬಹುದು.

ಬಾಮ ಅವರ ಈ ಆತ್ಮಕಥೆಯಲ್ಲಿ ಅಸ್ಪೃಶ್ಯತೆಯ ಆಚರಣೆ ಮುಟ್ಟುವ ಕ್ರಿಯೆಯಿಂದಾಗಿ ಹೇಗೆ ಮಲಿನಗೊಳ್ಳುತ್ತದೆ ಎನ್ನುವ ಘಟನೆಯನ್ನು ಹೀಗೆ ವಿವರಿಸಿದ್ದಾರೆ. "ನಮ್ಮ ಕೇರಿಯ

ಹಿರಿಯ ಬಲಿಷ್ಠ ವ್ಯಕ್ತಿಯೊಬ್ಬ ಅವಸರವಾಗಿ ನಡೆದು ಬರುತ್ತಿದ್ದ ಅವನ ಅವತಾರ ನೋಡಿಯೇ ನನಗೆ ನಗುವನ್ನು ತಡೆಯಲಾಗಲಿಲ್ಲ, ನಗು ಉಕ್ಕಿ ಬಂದಿತು. ಅಷ್ಟು ದೊಡ್ಡ ಆಳು, ಅವನ ಕೈಯಲ್ಲಿ ಒಂದು ಸಣ್ಣ ಪೊಟ್ಟಣ ಅದರಲ್ಲಿ ಬಾಳೆಕಾಯಿ ಬಜ್ಜಿಯೋ, ವಡೆಯೋ ಇರಬಹುದು ಎಂದು ಆ ಕಾಗದ ಮೇಲಿನ ಎಣ್ಣೆಯಿಂದ ತಿಳಿಯಬಹುದಿತ್ತು. ಆ ಪೊಟ್ಟಣವನ್ನು ಹಿಡಿಯದೆಯೇ ಅದಕ್ಕೆ ಕಟ್ಟಿದ ದಾರವನ್ನು ಹಿಡಿದು ಬರುತ್ತಿದ್ದ ಎಲ್ಲಿ ಆ ಪೊಟ್ಟಣ ಬಿಚ್ಚಿಕೊಂಡು ವಡೆ ನೆಲಕ್ಕೆ ಬಿದ್ದು ಬಿಡುವುದೋ ಎಂದು ಯೋಚಿಸುತ್ತಿರುವಾಗಲೇ ಆತ ಆ ಪೊಟ್ಟಣದ ದಾರವನ್ನು ಹಿಡಿದೇ ಬೆನ್ನುಬಾಗಿಸಿ ತನ್ನ ಬಲಗೈ ಮಣಿಕಟ್ಟನ್ನು ಎಡಗೈಯಲ್ಲಿ ಹಿಡಿದು ಎರಡೂ ಕೈಗಳನ್ನು ಚಾಚಿ ಅಲ್ಲಿ ಕುಳಿತಿದ್ದ ನಾಯರ್ ಕೈಯಲ್ಲಿ ಕೊಟ್ಟು ಕೈಕಟ್ಟಿ ತಲೆ ಬಾಗಿನಿಂತ. ನಾಯರ್ ಆ ಪೊಟ್ಟಣ ಬಿಚ್ಚಿ ಅದರಲ್ಲಿದ್ದ ಆಂಬೋಡೆಯನ್ನು ತಿಂದ"(ಕುರುಕ್ಕು ಕನ್ನಡ ಅನುವಾದ ಫ್ಲೋಮಿನ್‌ದಾಸ್, ಪು. ೧೬) ಬಾಮ ಅವರಿಗೆ ಮೂಲವಾಗಿ ಅಸ್ಪೃಶ್ಯತೆಯ ಆಚರಣೆ ಎಂದರೇನು ಎಂದು ತಿಳಿದ ಪ್ರಸಂಗ ಇದಾಗಿದೆ. ಬಾಮ ಅವರು 'ಯಾಕೆ ನಾವೇ ಮುಟ್ಟಬಾರದೆ' ಎಂದು ಪ್ರತಿರೋಧದ ಪ್ರಶ್ನೆ ಆ ಚಿಕ್ಕ ವಯಸ್ಸಿಗೆ ಬರುತ್ತದೆ. "ಬಾಳೆ ಎಲೆಯಲ್ಲಿ ಮೊದಲು ಸುತ್ತಿಟ್ಟ ನಂತರ ಪೇಪರಿನಲ್ಲಿ ಕಟ್ಟಿದ್ದರೂ ಅದನ್ನು ನಾವು ಮುಟ್ಟದರೆ ಮೈಲಿಗೆ ಆಗಿ ಬಿಡುವುದೇ? ನಮ್ಮವರು ಅವರಿಗೆ ಏಕೆ ವಡೆ ತಂದು ಕೊಡಬೇಕು? ಅಷ್ಟೇ ಹಿರಿಯ ಮನುಷ್ಯ ಆ ನಾಯರ್ ಮುಂದೇ ಬೆನ್ನು ಬಾಗಿ ನಿಂತು ತಲೆ ತಗ್ಗಿಸಿ ವಿನಯದಿಂದ ಕೊಡಬೇಕು. ಅವರೇನು ಅಷ್ಟು ದೊಡ್ಡವರೇ? ಅವರಂತೆ ನಮ್ಮವರೂ ಮನುಷ್ಯರಲ್ಲವೇ? ನಾಲ್ಕು ಕಾಸು ಇದ್ದ ಮಾತ್ರಕ್ಕೆ ಅವರುಗಳಿಗೇನು ಕೋಡು? ಮನುಷ್ಯತ್ವವನ್ನೇ ಅವರು ಮರೆತು ಬಿಡಬೇಕೆ? ಪರಯ ಜಾತಿಯವರೆಂದರೆ ಇಷ್ಟೊಂದು ಕೀಳಾಗಿ ಬಿಟ್ಟೆವೇ? ಬಾಮ ಅವರ ಆಲೋಚನೆಗಳಲ್ಲಿ ಈ ಪರಂಪರೆಯಿಂದ ನಡೆದುಕೊಂಡು ಬಂದ ಸಂಪ್ರದಾಯವನ್ನು ನಾವೇ ಯಾಕೆ ಮುಂದುವರೆಸುಕೊಂಡು ಹೋಗಬೇಕೆಂಬ ಮಾತು ಈ ವ್ಯವಸ್ಥೆಯಲ್ಲಿರುವ ಅಸ್ಪೃಶ್ಯತೆಯ ಆಚರಣೆಯನ್ನು ಎತ್ತಿ ತೋರಿಸುತ್ತದೆ. ಅದನ್ನು ಮೂಕರಾಗಿ ಸ್ವೀಕರಿಸುವ ಪರಯ್ಯ ಸಮುದಾಯವನ್ನು ಕೂಡ ಜಾಗೃತಿಗೊಳಿಸಬೇಕೆಂಬ ಹಂಬಲ ಬಾಮ ಅವರ ಮಾತುಗಳಲ್ಲಿ ಕಾಣಬಹುದಾಗಿದೆ. ಶಿಕ್ಷಣ ಕಲಿತ ಹೊಸ ತಲೆಮಾರಿನವರಲ್ಲಿ ಪ್ರತಿರೋಧವು ಹೇಗೆ ಅಡಕವಾಗಿರುತ್ತದೆ ಎನ್ನುವುದಕ್ಕೆ ಬಾಮ ತನ್ನ ಅಣ್ಣನ ಕಥೆಯನ್ನು ವಿವರಿಸುತ್ತಾರೆ. ಬಾಮ ಅವರ ಅಣ್ಣ ಬೇರೆ ಊರಿನಲ್ಲಿ ಓದುತ್ತಿರುವಾಗ ರಜೆಗೆ ಮನೆಗೆ ಬರುವ ಪ್ರಸಂಗದಲ್ಲಿ "ಒಂದು ದಿನ ಅವನು ಪುಸ್ತಕವನ್ನು ಪಡೆದು ಕೆರೆಯ ದಂಡೆಯ ಮಾರ್ಗವಾಗಿ ನಡೆದು ಬರುವಾಗ ನಾಯರ್ ಈತನನ್ನು ಕಂಡು ನೀನು ಯಾರಪ್ಪ? ಯಾವ ಊರು? ಎಂದು ಕೇಳಿದ. ಅಣ್ಣ ತನ್ನ ಹೆಸರು ಹೇಳುತ್ತಿದ್ದಂತೆ, ತಮ್ಮ ನಿನ್ನದು ಯಾವ ಚೇರಿ? ಎಂದು ಕೇಳಿದ. ಅದಕ್ಕೆ ನೇರವಾಗಿ ಆತನ ಮುಖಕ್ಕೆ ಹೊಡೆದಂತೆ "ನಾನು ಪರಯ್ಯ ಜಾತಿಯವನು" (ಕರುಕ್ಕು ಕನ್ನಡ ಅನುವಾದ ಫ್ಲೋಮಿನದಾಸ್ ಪು. ೧೮) ಎಂದು ಉತ್ತರ ಕೊಟ್ಟನಂತೆ ಆ ನಾಯ್ಯರ್‌ಗೆ ಧೈರ್ಯದಿಂದ.

"ಲೈಬ್ರರಿಯಲ್ಲೂ ಹೀಗೆಯೇ ಒಂದು ಘಟನೆ. ಅಲ್ಲಿಯೂ ಚೇರಿಯ ಹುಡುಗರು ಬಂದರೆ ಏನೋ ಒಂದು ರೀತಿಯ ಕೀಳು ಭಾವನೆ, ಒಮ್ಮೆ ಅಣ್ಣ ಸಹಿ ಮಾಡುವಾಗ ಬೇಕೆಂದೆ ತನ್ನ ಹೆಸರಿನ ಮುಂದೆ ಎಂ.ಎ ಎಂದು ಬರೆದನಂತೆ ಆ ಕೂಡಲೇ ಲೈಬ್ರರಿಯನ್ ಎದ್ದು ಸ್ಟೂಲ್ ಒಂದನ್ನು ತರಿಸಿ ಕುಳಿತುಕೊಳ್ಳಲು ಮನವಿ ಮಾಡಿದ್ದಲ್ಲದೆ, ಸಾರ್! ಸಾರ್! ಎಂದು ಕರೆಯಲಾರಂಭಿಸಿದನಂತೆ" (ಕರುಕ್ಕು ಕನ್ನಡ ಅನುವಾದ ಫ್ಲೋಮಿನದಾಸ್ ಪು. ೧೯)

ಈ ಎರಡು ಘಟನೆಗಳು ಬಾಮ ಅವರಿಗೆ ಓದುವ ಹಂಬಲವನ್ನು ಹೆಚ್ಚು ಮಾಡಿದವು. ಜಾತಿ ಯಾವುದಾದರೇನು ಶಿಕ್ಷಣ ಪಡೆದು ಅದರಿಂದ ನಾವು ಈ ಸಮಾಜದಲ್ಲಿ ತಲೆ ಎತ್ತಿ ಬದುಕಬಹುದು ಎನ್ನುವ ಧೈರ್ಯವನ್ನು ತಂದು ಕೊಟ್ಟವು ಎನ್ನುವ ಸತ್ಯ ಸಂಗತಿಯನ್ನು ತಮ್ಮ ಆತ್ಮಕಥೆಯಲ್ಲಿ ವಿವರಿಸುತ್ತಾರೆ.

ಮೈಲಿಗೆಗೆ ಸಂಬಂಧಿಸಿದ ಮತ್ತೊಂದು ಪ್ರಸಂಗವನ್ನು ಬಾಮ ಅವರು ಈ ರೀತಿಯಾಗಿ ವಿವರಿಸುತ್ತಾರೆ. "ನಾನೊಂದು ದಿನ ಅಜ್ಜಿಯೊಂದಿಗೆ ನಾಯ್ಯರ್ ಮನೆಗೆ ಹೋಗಿದ್ದೆ. ಎಲ್ಲ ಕುಳಿತು ಕೆಲಸಗಳನ್ನು ಮುಗಿಸಿ ಅಜ್ಜಿ ತಾನು ತಂದಿದ್ದ ಪಾತ್ರೆಯನ್ನು ಚರಂಡಿಯ ಪಕ್ಕದಲ್ಲಿ ಇರಿಸಿದಳು. ಆ ಪಾತ್ರೆಗೆ ನಾಯ್ಯಾರ್ ಹೆಂಗಸು ದೂರವೇ ನಿಂತು ಹಳಸಿದ ಸಾರನ್ನು ತಂದು ಎತ್ತರದಿಂದಲೇ ಪಾತ್ರೆಗೆ ಹಾಕಿದಳು. ಅವಳ ಪಾತ್ರೆ ಅಜ್ಜಿಯ ಪಾತ್ರೆಯನ್ನು ಮುಟ್ಟಕೂಡದು. ಹಾಗೆ ತಗುಲಿ ಬಿಟ್ಟರೆ ಮೈಲಿಗೆ ಆಗಿಬಿಡುವುದಂತೆ"(ಪು. ೧೮) ದಲಿತ ಆತ್ಮಕಥೆಗಳು ಜಾತಿ ಶೋಷಣೆ ಮತ್ತು ಅಪಮಾನಗಳಿಂದ ರೂಪಿತವಾಗಿರುತ್ತವೆ. ತಮ್ಮೊಳಗಿನ ತಣ್ಣನೆಯ ಪ್ರತಿರೋಧವನ್ನು ಬರವಣಿಗೆಯ ಮೂಲಕ ಹೊರಹಾಕುವ ಪ್ರಯತ್ನ ಮಾಡುತ್ತಾರೆ. ದಲಿತರು ತಾವು ಸಮಾಜದಿಂದ ಅನುಭವಿಸಿದ ನೋವು, ಅಪಮಾನ, ದಬ್ಬಾಳಿಕೆ, ಅಸ್ಪೃಶ್ಯತೆ, ಜೀತಪದ್ಧತಿ, ಬಡತನದಿಂದ ಪಾರಾಗಲು ಅನುಸರಿಸಿದ ಮಾರ್ಗಗಳು ಮುಂತಾದವುಗಳನ್ನು ಬರಹಕ್ಕೆ ತರುತ್ತಾರೆ. ತಮ್ಮ ನೋವನ್ನು ಸಮುದಾಯದ ನೋವನ್ನಾಗಿಸಿ, ಅದು ಓದುಗರ ಭಾವನೆಯಲ್ಲಿಯೂ ತಾವು ಈ ಹಿಂದೆ ಅನುಭವಿಸಿದ ಘಟನೆಗಳನ್ನು ಮೆಲುಕು ಹಾಕುವಂತೆ ಮಾಡುವ ಪ್ರಯತ್ನಗಳನ್ನು ಆತ್ಮಕಥೆಗಳ ಮೂಲಕ ಮಾಡುತ್ತಾರೆ. ದಲಿತ ಆತ್ಮಕಥೆಗಳು ಮುಖ್ಯವಾಗಿ ಜಾತಿಕೇಂದ್ರಿತ ಶೋಷಣೆ ಮತ್ತು ಅಪಮಾನಗಳನ್ನು ಮೆಟ್ಟಿನಿಲ್ಲುವ ಪ್ರಯತ್ನವಾಗಿ ತಾವು ಅನುಭವಿಸಿದ ಶೋಷಣೆಯ ವಿವಿಧ ನೆಲೆಗಳನ್ನು ಹಾಗು ಘಟನೆಗಳನ್ನು ಕಥನ ಮಾದರಿಯ ಕ್ರಮದಿಂದ ಚಿತ್ರಿಸುತ್ತಾರೆ. ತಮಿಳುನಾಡಿನ ಪರ್ಯೆ ಜನಾಂಗದಲ್ಲಿ ಜಾತಿಕೇಂದ್ರಿತ ಶೋಷಣೆ ಮತ್ತು ಅಪಮಾನಗಳನ್ನು ಆತ್ಮಕಥೆಯಲ್ಲಿ ವಿವರಿಸಿದ್ದಾರೆ. ಬಾಮ ಅವರು ಬಾಲ್ಯದಲ್ಲಿ ಕಂಡ ಒಂದು ಸಂಗತಿಯನ್ನು ಆತ್ಮಕಥೆಯಲ್ಲಿ ದಾಖಲಿಸುತ್ತಾ ತಿಂಡಿಪೊಟ್ಟಣ ಹಿಡಿಯದೆ ಅದಕ್ಕೆ ಕಟ್ಟಿದ ದಾರವನ್ನು ಹಿಡಿದು ತರುವ ಪರ್ಯೆ ಸಮುದಾಯದ ಹಿರಿಯ ವ್ಯಕ್ತಿಯನ್ನು ಕಂಡಾಗ ಅವರಿಗೆ ನಗೆ ಮತ್ತು ಆಕ್ರೋಶ ಎರಡೂ ಉಕ್ಕಿ ಬರುತ್ತದೆ. ಕಾರಣ ಇಷ್ಟೆ. ಆ ವ್ಯಕ್ತಿ ತಿಂಡಿ ಪೊಟ್ಟಣವನ್ನು ಹಿಡಿದು ತರುವಾಗ ಎಲ್ಲಿ ಅದು ತನ್ನ ಕೈತಾಗಿ ಮೈಲಿಗೆಯಾಗಿ ಬಿಡುತ್ತದೆಯೋ ಎಂಬ ಭಯದಲ್ಲಿ ದಾರವಿಡಿದು

ಅದನ್ನ ನೇತಾಡುವ ಹಾಗೆ ನಡೆದುಕೊಂಡು ಬರುತ್ತಾನೆ. ಇದನ್ನು ಕಂಡ ಬಾಮ ಅವರಿಗೆ ನಗು ಬರುತ್ತದೆ. ಮುಂದೆ ಆ ವ್ಯಕ್ತಿಯು ಅವನಿಗಿಂತ ಕಿರಿಯ ವಯಸ್ಸಿನ ನಾಯ್ಯರ್ ಸಮುದಾಯದ ವ್ಯಕ್ತಿಯ ಮುಂದೆ ಬೆನ್ನು ಬಾಗಿ ನಿಂತು, ಅವನಿಗೆ ನಮಸ್ಕಾರ ಮಾಡಿ ತಿಂಡಿ ಪೊಟ್ಟಣವನ್ನು ಕೈಯಲ್ಲಿ ಮುಟ್ಟದೆ ದೂರದಿಂದಲೇ ಆ ವ್ಯಕ್ತಿ ನೀಡುವ ಘಟನೆ ಬಾಮ ಅವರಿಗೆ ಆಕ್ರೋಶ ಉಂಟು ಮಾಡುತ್ತದೆ.

"ಆ ಹಿರಿಯ ಮನುಷ್ಯ ಹಾಗೆ ದಾರ ಹಿಡಿದು ಪೊಟ್ಟಣ ತಂದಿದ್ದು ಹುಡುಗಾಟವೂ ಅಲ್ಲ, ತಮಾಷೆಯೂ ಅಲ್ಲ ಅದೊಂದು ಗಂಭೀರ ವಿಷಯ ನಾಯ್ಕರ್ ಮಾಲ ಜಾತಿಯ ಮನುಷ್ಯ, ನಮ್ಮವನು ಕೀಳು ಜಾತಿಯವನು. ನಮ್ಮವನು ನಾಯ್ಕರ್ ತಿನ್ನುವ ವಡೆಯ ಪೊಟ್ಟಣ ಮುಟ್ಟಿದರೆ ಅದು ಮೈಲಿಗೆ ಆಗಿಬಿಡುವುದು ಎಂಬುದು ಅವರ ಭಾವನೆ. ಹಾಗೆಂದರೆ ನಮ್ಮ ಮನುಷ್ಯ ಹಾಗೆ ಆ ಪೊಟ್ಟಣವನ್ನು ಕೈಯಲ್ಲಿ ಮುಟ್ಟಿದರೆ ಅದರ ದಾರವನ್ನು ಹಿಡಿದೆ ತರಬೇಕಿತ್ತು"(ಕರುಕ್ಕು, ಬಾಮಾ, ಪು. ೧೬). ಊರುಗಳಲ್ಲಿ ದಲಿತರು ಈ ರೀತಿಯ ಜಾತಿಕೇಂದ್ರಿತ ಅಪಮಾನಗಳನ್ನು ತುಂಬಾ ಅನುಭವಿಸುತ್ತಿದ್ದಾರೆ. ಅದಕ್ಕೊಂದು ಸಣ್ಣ ಉದಾ. ಮಾತ್ರ ಬಾಮ ಅವರು ಕರುಕ್ಕು ಆತ್ಮಕಥೆಯಲ್ಲಿ ನೀಡುತ್ತಾರೆ. ಮನುಷ್ಯ ಮನುಷ್ಯನ ನಡುವಿನ ಈ ಕಂದಕವನ್ನು 'ಜಾತಿ'ಯು ಮತ್ತಷ್ಟು ಹೆಚ್ಚು ಮಾಡುತ್ತದೆ. ಕಾರಣ ಅವರು ತಲೆ ತಲೆಮಾರುಗಳಿಂದ ನಾಯ್ಕರ್ ಮನೆಗಳಲ್ಲಿ ಜೀತಕ್ಕಿದ್ದು ತಮ್ಮ ಹೊಟ್ಟೆ ತುಂಬಿಸಿಕೊಂಡವರು. ಆ ಕಾರಣಕ್ಕೆ ಮರು ಪ್ರಶ್ನೆ ಮಾಡದೆ ಎಲ್ಲವನ್ನು ಸಹಿಸಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ಬಾಮ ಅವರಿಗೆ ಈ ಘಟನೆ ತಾವು ದಲಿತತ್ವವನ್ನು ಕಂಡುಕೊಳ್ಳಲು ಸಹಾಯ ಮಾಡುತ್ತದೆ. ಅವರು ತಮ್ಮ ಮನದಾಳದ ನೋವನ್ನು ಈ ರೀತಿ ವ್ಯಕ್ತಪಡಿಸುತ್ತಾರೆ. "ಪರ್ಯೆ ಜಾತಿಯವರೆಂದರೆ ಇಷ್ಟೊಂದು ಕೀಳಾಗಿ ಬಿಟ್ಟಿವೇ, ಅವರಿಗೆ ನಾವೇಕೆ ಹೀಗೆ ಬಿಟ್ಟಿ ಕೆಲಸ ಮಾಡಿಕೊಡಬೇಕು? ಅವರುಗಳ ಜಮೀನುಗಳಲ್ಲಿ ಕೆಲಸ ಮಾಡಿದೆವೋ ಕೂಲಿ ಪಡೆದೆವೋ ಅಷ್ಟರಲ್ಲೇ ಇರಬೇಕು. ನಮ್ಮ ಅವರ ಸಂಬಂಧ"(ಅದೇ ಪು. ೧೭) ಎನ್ನುವ ಆಲೋಚನೆಗಳು ಬಾಮ ಅವರ ಪ್ರತಿರೋಧದ ನೆಲೆಗಳನ್ನು ನಾವು ಗುರುತಿಸಬಹುದಾಗಿದೆ.

"ನಾಯ್ಯರ್‌ಗಳ ಮನೆಯಲ್ಲಿ ಕೆಲಸ ಮಾಡುವಾಗ ನಾವು ಅವರ ಯಾವುದೇ ಪದಾರ್ಥಗಳನ್ನು ಪಾತ್ರೆಗಳನ್ನು ಮುಟ್ಟುವಂತಿರಲಿಲ್ಲ. ನಾವು ಅತ್ತ ಕಡೆ ಕೂಡ ಹೋಗುವಂತಿರಲಿಲ್ಲ. ಅವರು ಓಡಾಡುವಾಗ ನಾವು ದೂರ ಸರಿದೇ ನಿಲ್ಲಬೇಕಿತ್ತು. ಅವರು ಹೀಗೆಲ್ಲ ನಮ್ಮನ್ನು ಅಂದು ದೂರವಿಟ್ಟಾಗ ನಮ್ಮ ಮನಸ್ಸಿಗೆ ನೋವು, ಅಪಮಾನ, ನಾಚಿಕೆಯಾಗಿ ತಲೆ ತಗ್ಗಿಸುತ್ತಿದ್ದೆವು" (ಅದೇ, ಪು. ೫೪). ಬಾಮ ಅವರು ಬಾಲ್ಯದಲ್ಲಿ ಈ ರೀತಿ ಅಪಮಾನಗಳನ್ನು ಅನುಭವಿಸಿದರೂ ಅಂದಿನ ಪರಿಸ್ಥಿತಿಯಲ್ಲಿ ಪ್ರಶ್ನೆ ಮಾಡಲು ಸಾಧ್ಯವಾಗಿರಲಿಲ್ಲ. ಕಾರಣ ಆ ಸಮಯದ ಸಾಮಾಜಿಕ ಸ್ಥಿತಿಗತಿಯು ಪರ್ಯೆಯ ಸಮುದಾಯದ ವಿರುದ್ಧವೇ ಇದ್ದುದರಿಂದ ಅವರ ನೋವು ಅಪಮಾನಗಳಿಗೆ ಧ್ವನಿಯಾಗಿ ಶಿಕ್ಷಣದ ಬೆಳಕು ಅವರನ್ನು ಬರಹದ ಮೂಲಕ ಅಪಮಾನ ಮಾಡುವ ಸಂಗತಿಗಳನ್ನು

ಮುಟ್ಟಿದರೆ ಮೈಲಿಗೆ ಎನ್ನುವ ಮೇಲ್ವರ್ಗದ ಧೋರಣೆಯನ್ನು ಬಾಮ ಆತ್ಮಕತೆಯ ಮೂಲಕ ಪ್ರಶ್ನೆ ಮಾಡುತ್ತಾರೆ.

ಪರೈ ಜಾತಿಯ ಮತ್ತೊಂದು ತಮಿಳು ದಲಿತ ಆತ್ಮಕಥೆಯಾದ 'ವಡು'ವಿನಲ್ಲೂ ಗುಣಶೇಖರ್ ಇದೇ ರೀತಿಯ ಜಾತಿ ಕೇಂದ್ರಿತ ಶೋಷಣೆ ಮತ್ತು ಅಪಮಾನಕ್ಕೆ ಒಳಗಾಗುವ ಸಂಗತಿಯನ್ನು ವಿವರಿಸುತ್ತಾರೆ. "ಪರೈ ಸಮುದಾಯದ ಹುಡುಗನಾಗಿದ್ದ ಗುಣಶೇಖರ್ ಒಮ್ಮೆ ಶಾಲೆಯಲ್ಲಿ ಚೀಟಿ ಆಟದ ವ್ಯಾಪಾರದ ತಟ್ಟೆಯನ್ನು ಇಟ್ಟಿರುತ್ತಾರೆ. ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಈ ಚೀಟಿ ಕಿತ್ತಲು ಬರುತ್ತಾರೆ. ಒಬ್ಬ ಹುಡುಗ ೫೦ ಪೈಸೆಗೆ ೫ ಚೀಟಿಗಳನ್ನು ಕೀಳುತ್ತಾನೆ. ಅದರಲ್ಲಿ ಯಾವುದೇ ನಂಬರ್ ಬರುವುದಿಲ್ಲ. ಅವನು ಮುಂದುವರೆದು ಮತ್ತೆ ಚೀಟಿ ಕೀಳಲು ಮುಂದಾಗುತ್ತಾನೆ. ಆಗ ಗುಣಶೇಖರನ್ ಮತ್ತೆ ಚೀಟಿ ಕಿತ್ತಿದರೆ ಹಣ ನೀಡಬೇಕೆಂದು ಷರತ್ತು ವಿಧಿಸುತ್ತಾನೆ. ಅದಕ್ಕೆ ಒಪ್ಪಿದ ಆ ಹುಡುಗ ಮತ್ತೆ ಚೀಟಿಗಳನ್ನು ಕೀಳುತ್ತಾನೆ. ಅದರಲ್ಲಿ ನಂಬರ್ ಸಹ ಇರುತ್ತದೆ. ಆ ನಂಬರ್‌ಗೆ ರಬ್ಬರ್, ಗಡಿಯಾರ, ಚೆಂಡು ಮುಂತಾದ ಬಹುಮಾನಗಳು ಬರುತ್ತವೆ. ಬಹುಮಾನಗಳನ್ನು ನೀಡುವ ಪೂರ್ವದಲ್ಲಿ ಗುಣಶೇಖರನ್ ಅವನ ಬಳಿ ಹಣ ಕೇಳುತ್ತಾರೆ. ಅದಕ್ಕೆ ಆ ಹುಡುಗ ಹಣವಿಲ್ಲವೆಂದು ಹೇಳುತ್ತಾನೆ. ಆಗ ಇಬ್ಬರ ನಡುವೆ ವಾದ ವಿವಾದ ನಡೆಯುತ್ತದೆ. ಅದಕ್ಕೆ ಗುಣಶೇಖರನ್ 'ಲೇ ನನ್ನ ಅಣ್ಣ ಅರ್ಪುದಂ ಇಲ್ಲೇ ಓದುತ್ತಿದ್ದಾನೆ ತಿಳಿಯಿತೇ' ಎಂದು ಆ ಹುಡುಗನಿಗೆ ಅವನ ಅಣ್ಣನ ಬಗ್ಗೆ ಹೇಳುತ್ತಾನೆ. ಆ ಹುಡುಗ 'ಅರುಳಾಯಿ ಮಗ ಅರ್ಪುದುಂ ನಿನ್ನ ಅಣ್ಣನಾ?' ಎಂದು ಪ್ರಶ್ನೆ ಮಾಡುತ್ತಾನೆ. ಅದಕ್ಕೆ ಗುಣಶೇಖರನ್ ಹೌದು ಎಂದು ಉತ್ತರಿಸುತ್ತಾನೆ. ಆಗ ಆ ಹುಡುಗ ಹೋಗಲೇ ಹಣ ಕೊಡಲ್ಲ ಏನಲೇ ಮಾಡುತ್ತೀಯಾ, ಹೋಗಲೇ ಪರೈ ಹುಡುಗನೇ" (ಕರು.ಅಳ.ಗುಣಶೇಖರನ್, ವಡು, ಪು. ೫೧) ಎಂದು ಸೊಕ್ಕಿನಿಂದ ಹೇಳಿ ಓಡಿ ಹೋಗುತ್ತಾನೆ. ಅವನನ್ನು ಗುಣಶೇಖರನ್ ಹಿಂಬಾಲಿಸಿ ಅವನ ಮನೆಗೆ ನುಗ್ಗಿ ಅವನನ್ನು ಹೊಡೆದು ಬರುತ್ತಾನೆ. ಈ ಘಟನೆಯ ನಂತರ ಕೋನಾರ್ ಸಮುದಾಯದ ಮುಖಂಡರು ಗುಣಶೇಖರನ್ ಅವರ ಮನೆಗೆ ಬಂದು ಅವರ ದೊಡ್ಡಪ್ಪ ದೊಡ್ಡಮ್ಮನ ಮುಂದೆ "ನಿಮ್ಮ ಮನೆಯ ಹುಡುಗ ಹೇಗೆ ಕೋನಾರ್‌ರ ಬೀದಿಗೆ ಬರಬಹುದು, ಬಂದಿದ್ದಲ್ಲದೆ ಮನೆಯೊಳಗೆ ನುಗ್ಗಿದ್ದಾನೆ. ಜಾತಿ ತಿಳಿಯದೆ ಒಂದು ಮನೆಯೊಳಗೆ ನುಗ್ಗಿದ್ದಾನೆ, ಅಂದರೆ ಅವನಿಗೆ ಅದೆಷ್ಟು ಸೊಕ್ಕು ಇರಬಹುದು, ಎಲ್ಲಿ? ಅವನ ಕೈಯನ್ನು ಕಾಲನ್ನು ಕಟ್ಟಿ ಎತ್ತಿಕೊಂಡು ಹೋಗಬೇಕು" (ಅದೇ, ಪು. ೫೨) ಎಂದು ಗಲಾಟೆ ಮಾಡುತ್ತಾರೆ. ಹೇಗೋ ಅವರನ್ನು ಗುಣಶೇಖರನ್‌ರ ದೊಡ್ಡಮ್ಮ ದೊಡ್ಡಪ್ಪ ಸಮಾಧಾನ ಮಾಡಿ ಕಳಿಸಿಕೊಡುತ್ತಾರೆ. ಹುಡುಗನನ್ನು ಹೊಡೆದದ್ದನ್ನು ಕುರಿತು ಯಾರು ದೊಡ್ಡದಾಗಿ ಮಾತಾಡಿರಲಿಲ್ಲ. "ಜಾತಿ ತಿಳಿಯದೆ ಪರೈಯವನು ಕೋನಾರರ ಬೀದಿಗೆ ಹೋಗಿ ಮನೆಯೊಳಗೆ ನುಗ್ಗಿದ್ದೇ ದೊಡ್ಡದಾಗಿ ಮಾತಾಡಿದರು"(ಅದೇ, ಪು. ೫೨) ಪರೈ ಸಮುದಾಯದ ಕೀಳು ಜಾತಿ ಹುಡುಗ ಕೋನಾರ್‌ರ ಬೀದಿಗೆ ಹೋಗಿದ್ದು ಮಹಾ ಅಪರಾಧವೆಂಬಂತೆ ಆ ಹುಡುಗನ ಮನೆಯ ಮುಂದೆ ಕೋನಾರ್

ಸಮುದಾಯದ ಮುಖಂಡರು ಗಲಾಟೆ ಮಾಡುವುದಕ್ಕೆ ಬರುವುದು, ಅಂದಿನ ಜಾತಿ ಶೋಷಣೆಯಲ್ಲಿ ದಲಿತರು ಇಲ್ಲೇ ಇರಬೇಕು ನಮ್ಮ ಬೀದಿಗೆ ಬರಬಾರದು ಎಂಬ ಕಟ್ಟಲೇ ಮೀರಿದ ಕಾರಣ ಮುಂದೆ ಎಲ್ಲಾ ಪರ್ರೈ ಹುಡುಗರು ಅದೇ ಕೆಲಸ ಮಾಡಬಾರದು ಎಂದು ನಿಯಮವನ್ನು ಮತ್ತಷ್ಟು ಗಟ್ಟಿಗೊಳಿಸುವುದಕ್ಕೆ ಬಂದಿರುವುದನ್ನು ನಾವು ಗಮನಿಸಬಹುದು.

ಗುಣಶೇಖರನ್ ಅವರು ತಮ್ಮ 'ವಡು' ಆತ್ಮಕಥೆಯಲ್ಲಿ ಮೇಲ್ವರ್ಗದ ಜನತೆ ಜಾತಿ ಹೆಸರಿನಲ್ಲಿ ಪ್ರಾಣ ಹೋದರೂ ಪರವಾಗಿಲ್ಲ ನೀವು ನಮ್ಮನ್ನು ಮುಟ್ಟಬಾರದು ಎಂಬ ಅವಮಾನವೀಯತೆಯನ್ನು ದಾಖಲಿಸಿದ್ದಾರೆ. ಒಮ್ಮೆ ಕೋನಾರ್ ಜಾತಿಯವನಿಗೆ ಫಿಟ್ಸ್ ಬಂದು ದಾರಿಯಲ್ಲಿ ಬಿದ್ದಿದ್ದಾಗ ಗುಣಶೇಖರನ್‌ರ ಬಾವ ಮೈದುನ ಮುನಿಯಾಂಡಿ ಕೋನಾರ್ ಜಾತಿಯ ವ್ಯಕ್ತಿಯ ಕೈಗೆ ಕಬ್ಬಿಣ ಕೊಟ್ಟು ಬದುಕಿಸುತ್ತಾನೆ. ಅವರಿಗೆ ಎಚ್ಚರವಾಗದಿದ್ದಾಗ ಅವರನ್ನು ಎತ್ತಿಕೊಂಡು ಬಂದು ಬೇರೆ ಕಡೆ ಮಲಗಿಸಿ ನೀರು ಹಾಕಿ ಉಪಚರಿಸುತ್ತಾನೆ. ಆಗ ಆ ವ್ಯಕ್ತಿ ಎಚ್ಚರಗೊಂಡು ಕಣ್ಣು ಬಿಟ್ಟು ನೋಡಿದಾಗ, ಮುನಿಯಾಂಡಿ "ಅಯ್ಯಾ ನಾನೇ ಮುನಿಯಾಂಡಿ. ಕರುಪ್ಪನ ಮೊಮ್ಮಗ. ನಿಮಗೆ ಫಿಟ್ಸ್ ಬಂದು ಕೆಳಗೆ ಬಿದ್ದುಬಿಟ್ಟೀರಿ. ನಾನೇ ಓಡಿ ಬಂದು ನಿಮ್ಮನ್ನು ಎತ್ತಿಕೊಂಡು ಬಂದು ನೀರು ಹಾಕಿ ಎಬ್ಬಿಸಿದೆ" (ಅದೇ, ಪು. ೮೯) ಎಂದಾಗ ಕೋನಾರ್ ಜಾತಿಯ ವ್ಯಕ್ತಿಗೆ ಎಲ್ಲಿಲ್ಲದ ಸಿಟ್ಟು ಆಕ್ರೋಶ ಬಂದು ಬಿಡುತ್ತದೆ. ಪರ್ರೈ ಜಾತಿಯವನು ನನ್ನ ಮುಟ್ಟಿದಲ್ಲದೆ ಎತ್ತಿಕೊಂಡು ಬಂದು ನೀರು ಕುಡಿಸಿ ಮುಖ ತೊಳೆದು ನನ್ನನ್ನು ಎಚ್ಚರಿಸಿದ್ದಾನೆ. ಇದು ನಮ್ಮ ಜಾತಿಗೆ ತಿಳಿದರೆ ತನ್ನನು ಕೀಳಾಗಿ ಕಾಣುತ್ತಾರೆ ಎನ್ನುವ ಆಲೋಚನೆ ಅವನಿಗೆ ಬರುತ್ತದೆ. ಹಾಗಾಗಿ ಅವನು ತನ್ನನ್ನು ಬದುಕಿಸಿದ ಪರ್ರೈ ಮುನಿಯಾಂಡಿಗೆ "ಲೇ ನಿನ್ನನು ಯಾರು ಲೇ ನನ್ನನು ಮುಟ್ಟಿ ಎತ್ತು ಅಂದಿದ್ದು, ಪರ್ರೈ ಜಾತಿಯ ಹುಡುಗ ನನ್ನನ್ನು ಏಕಲೇ ಮುಟ್ಟಿ ಎತ್ತಿದೆ? ದೂರ ನಿಲ್ಲಲೇ ಓದಿಬಿಟ್ಟಿದ್ದೇವೆ ಎಂಬ ಸೊಕ್ಕಲೇ ನಿನಗೆ, ನನಗೆ ಫಿಟ್ಸ್ ಇವತ್ತು ನಿನ್ನೆಯಿಂದ ಅಲ್ಲ ಲೇ ಹುಟ್ಟಿನಿಂದಲೂ ಬರುತ್ತೆ ಹೋಗುತ್ತೆ ನೀನು ಯಾಕೆ ಮುಟ್ಟಿದೆ. ಇವತ್ತು ಸಂಜೆ ಊರಿನ ಪಂಚಾಯಿತಿಗೆ ಹಾಕಿಸುತ್ತೇನೆ ನಿನಗೆ ಅಲ್ಲೇ ನಿನಗೆ ಬುದ್ಧಿ ಕಲಿಸುತ್ತೀನಿ ಅಲ್ಲಿ ನೋಡಿಕೊಳ್ಳುತ್ತೀನಿ ಬಾರಲೇ"(ಅದೇ, ಪು. ೮೯)

ಪರ್ರೈ ಸಮುದಾಯದವರು ಮೇಲ್ವರ್ಗದ ಜಾತಿಯ ನೀತಿ ನಿಯಮಗಳನ್ನು ಮುರಿಯಬಾರದು. ಅವರು ಹಾಗೇ ಇರಬೇಕೆಂಬುದನ್ನು ಅಪೇಕ್ಷೆ ಪಡುತ್ತಾರೆ. ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಪಂಚಾಯಿತಿ, ದಂಡ, ಸಾಮಾಜಿಕ ಬಹಿಷ್ಕಾರದಂತಹ ಶಿಕ್ಷೆ ನೀಡುತ್ತಾರೆ. ಇವುಗಳಿಗೆ ಹೆದರಿ ದಲಿತ ಸಮುದಾಯವು ಮೇಲ್ವರ್ಗದ ಜನತೆಯು ವಿಧಿಸಿದ ನೀತಿ ನಿಯಮಗಳಿಗೆ ಬದ್ಧರಾಗಿ ಬದುಕುತ್ತಾರೆ. ಅಲ್ಲೊಂದು ಇಲ್ಲೊಂದು ಘಟನೆಗಳು ನಿಯಮ ಮೀರಿ ಜರುಗಿದ್ದರೂ ಅವುಗಳನ್ನು ಸಹಿಸಿಕೊಳ್ಳುವ ಮನಸ್ಥಿತಿ ಅವರಿಗೆ ಇರುವುದಿಲ್ಲ. ಹಾಗಾಗಿ ಪ್ರಾಣ ಉಳಿಸಿದ ವ್ಯಕ್ತಿಯನ್ನೇ ಪಂಚಾಯಿತಿಗೆ ಹಾಕಿಸಿ ಮಾನ ತೆಗೆಯುವ ಪ್ರಯತ್ನವನ್ನು ಈ ಮೇಲ್ವರ್ಗದವರು ಮಾಡುತ್ತಾರೆ.

ಅಸ್ಪೃಶ್ಯತೆಯ ಕಾರಣದಿಂದಾಗಿ ಪರೈ ಸಮುದಾಯದವನನ್ನು ಜಾತಿ ಶೋಷಣೆ ಮತ್ತು ಅವಮಾನಗಳಿಗೆ ಒಳಗು ಮಾಡುವುದನ್ನು ನೋಡಬಹುದು.

ಈ ಎರಡು ತಮಿಳು ಆತ್ಮಕಥೆಗಳಲ್ಲಿ ಪರೈ ಸಮುದಾಯದವರನ್ನು ಅವರು ಎಷ್ಟೇ ದೊಡ್ಡವರಾದರೂ ಅವರನ್ನು ಏಕವಚನದಿಂದಲೇ ಕರೆಯುವುದನ್ನು ಕಾಣಬಹುದು. ಬಾಮ ಅವರು ತನ್ನ ಅಜ್ಜಿಯ ಜೊತೆಗೆ ನಾಯ್ಕರ್‌ಗಳ ಮನೆ, ಹೊಲಗದ್ದೆಗಳಲ್ಲಿ ಕೆಲಸ ಮಾಡಲು ಹೋಗುತ್ತಿದ್ದರು. ಆ ಸಮಯದಲ್ಲಿ ನಿನ್ನೆ ಮೊನ್ನೆ ಹುಟ್ಟಿದ ನಾಯ್ಕರ್ ಮಕ್ಕಳು ಕೂಡ ಅಜ್ಜಿಯರನ್ನು ಮರ್ಯಾದೆ ಇಲ್ಲದೆಯೇ ಹಿರಿಯರೆನ್ನದೆ ಏಕವಚನದಲ್ಲೇ ಹೆಸರಿಡಿದೇ ಕರೆದು ಕೆಲಸ ಮಾಡಿಸುತ್ತಿದ್ದರು. ಆದರೆ ದಲಿತರು ಮಾತ್ರ ಅವರುಗಳನ್ನು 'ಅಯ್ಯಾ! ಬುದ್ಧಿ! ಸ್ವಾಮಿ ಎಂದು ಕರೆಯಬೇಕಿತ್ತು.' ಈ ರೀತಿ ಕರೆದರೆ ಮಾತ್ರ ಮೇಲ್ವರ್ಗದ ಜನತೆ ಅವರಿಗೆ ಕೆಲಸ ನೀಡುತ್ತಿದ್ದರು. ಮನೆಯಲ್ಲಿ ಉಳಿದ ಹಳಸಿದ ಪದಾರ್ಥಗಳನ್ನು ನೀಡುತ್ತಿದ್ದರು. ಇದನ್ನು ಪ್ರತಿಬಾರಿ ಪ್ರತಿರೋಧಿಸಲು ಪ್ರಯತ್ನಪಟ್ಟರು. ಬಾಮ ಅಜ್ಜಿಯರೊಂದಿಗೆ ನಮಗೆ ಅನ್ನವಿಡುವ ಮಹಾರಾಜರಮ್ಮ ಅವರು, ಅವರೇ ಇಲ್ಲವೆಂದ ಮೇಲೆ ನಮಗೆಲ್ಲಿಯ ಬದುಕು ಹೇಳಮ್ಮ? ಎಂದು ಬಾಮರ ಬಾಯಿ ಮುಚ್ಚಿಸುತ್ತಿದ್ದರು. 'ವಡು' ಆತ್ಮಕತೆಯಲ್ಲಿ ಗುಣಶೇಖರನ್ ಮೇಲ್ವರ್ಗದ ಹುಡುಗನಿಗೆ ಏಕವಚನದಿಂದ ಕರೆದಿದ್ದೆ ತಪ್ಪು ಎಂದು ಕೋನಾರ್ ಸಮುದಾಯ ಅವನ ಮನೆ ಮುಂದೆ ಗಲಾಟೆ ಮಾಡುವ ಸಂಗತಿಯನ್ನು ವಿವರಿಸುತ್ತಾರೆ. ಇದೇ ರೀತಿಯ ಇನ್ನೊಂದು ಘಟನೆಯಲ್ಲಿ ಗುಣಶೇಖರನ್ ತಮ್ಮ ತೋಟದ ಮನೆಯಲ್ಲಿ ಮಲಗಿದ್ದಾಗ ಯಾವುದೋ ಸಪ್ಪಳ ಕೇಳಿ ಎಚ್ಚರವಾಗಿ ನೋಡಿದಾಗ ತೋಟದಲ್ಲಿ ಹೂವು ಎಳೆಕಾಯಿ ಇದ್ದ ಮರದ ಕೊಂಬೆಗಳನ್ನು ಎಂಟು ವರ್ಷದ ಬಾಲಕನು ಮುರಿದು ಆಡುಗಳಿಗೆ ಹಾಕುತ್ತಿರುತ್ತಾನೆ. ಅದನ್ನು ನೋಡಿದ ಗುಣಶೇಖರನ್ 'ಯಾಕಲೇ ನಮ್ಮ ಮರದಲ್ಲಿರುವ ಹೂವನ್ನು, ಎಳೆಕಾಯಿಯನ್ನು ಹೀಗೆ ಎಲೆಯೊಂದಿಗೆ ಕಡೆದು ಹಾಕುತ್ತಿದ್ದೀಯಾ?' ಎಂದು ಕೇಳಿದೆ ಅಷ್ಟೆ. ಕಣ್ಣು ಮಿಟುಕಿಸುವ ಕ್ಷಣಾರ್ಧದಲ್ಲಿ ಜೋರಾಗಿ ನನ್ನ ಕೆನ್ನೆಗೆ ಬಾರಿಸಿ ಬಿಟ್ಟ. ಏನು ನಡೆಯಿತು ಎಂದು ಯೋಚಿಸುವಷ್ಟರಲ್ಲಿ ಅವನು ವೇಗವಾಗಿ ಓಡಿಹೋಗುತ್ತಿದ್ದ. ನಾನು ಇವನು ಯಾಕೆ ನನ್ನ ಹೊಡೆದು ಯಾಕಿಷ್ಟು ವೇಗವಾಗಿ ಓಡುತ್ತಿದ್ದಾನೆ ಎಂದು ಯೋಚಿಸುತ್ತಿದ್ದ ಸ್ವಲ್ಪ ಸಮಯದಲ್ಲಿ ಅವನು ಮುಂದೆ ಓಡಿ ಬರಲು ಹಿಂದೆ ನಾಲ್ಕೈದು ಹಿರಿಯ ವಯಸ್ಸಿನ ವ್ಯಕ್ತಿಗಳು ಬಂದರು" (ಅದೇ, ಪು. ೮೦) ಎಂಟು ವರ್ಷದ ಚಿಕ್ಕ ಹುಡುಗ ಮೇಲ್ಜಾತಿ ಎಂಬ ಒಂದೇ ಕಾರಣಕ್ಕೆ ತಪ್ಪು ಮಾಡಿದ್ದರೂ ಪರೈ ಜಾತಿಯ ಗುಣಶೇಖರನ್ ಲೇ ಅಂತ ಹೇಳಿದ್ದಕ್ಕೆ ಅವನ ಕೆನ್ನೆಗೆ ಬಾರಿಸುವುದು ಜಾತಿಯ ಕ್ರೂರತೆಯನ್ನು ತಿಳಿಸುತ್ತದೆ. ಈ ಘಟನೆಯನ್ನು ನೋಡಿದ ಗುಣಶೇಖರನ್‌ರ ಅಜ್ಜ ಕರುಪ್ಪ ಮುಂದೆ ಓಡಿ ಬಂದು ಗುಣಶೇಖರನ್‌ದು ತಪ್ಪು ಇಲ್ಲದಿದ್ದರು ಅವರಿಗೆ ನಮಸ್ಕರಿಸಿ "ಅಯ್ಯಾ! ಅಯ್ಯಾ! ನಗರದಿಂದ ಬಂದ ಹುಡುಗ ಗ್ರಾಮದ ನೀತಿ ನಿಯಮಗಳು ವ್ಯವಹಾರಗಳು ಅವನಿಗೆ ತಿಳಿದಿಲ್ಲ. ನೀವು ದಯಮಾಡಿ ಕ್ಷಮಿಸಿ ಅಯ್ಯಾ" (ಅದೇ, ಪು. ೮೦)

ಎಂದು ಅಂಗಲಾಚುವುದನ್ನು ಕಾಣಬಹುದು. ಗುಣಶೇಖರನ್‌ನಿಗೆ ಏನು ಮಾಡಬೇಡಿ ಎಂದು ಅವರನ್ನು ಬೇಡಿಕೊಳ್ಳುತ್ತಾನೆ. ಕೋನಾರ್ ಸಮುದಾಯದವರು ಗುಣಶೇಖರನ್‌ನ ಕಡೆಗೆ ನೋಡುತ್ತಾ "ಲೇ ಇಳೈಯನ್‌ಕುಡಿ ಹುಡುಗನೇ, ನಿನ್ನ ಅಜ್ಜ ಕರುಪ್ಪನಿಂದ ನೀನು ಉಳಿದುಕೊಂಡೆ, ಇಲ್ಲ! ಅಂದರೆ ಚರ್ಮ ಸುಲಿದು ಉಪ್ಪು ಹಾಕಿ ಬಿಡುತ್ತಿದ್ದೆವು. ಯಾರನ್ನು ನೋಡಿ, 'ಲೇ' ಎಂದು ಕರೆಯುತ್ತೀಯಾ ನಾಲಿಗೆ ಕತ್ತರಿಸಿ ಬಿಡುತ್ತೇವೆ. ನೀನು ಯಾವ ಜಾತಿ, ನಾವು ಯಾವ ಜಾತಿ ಎಂದು ತಿಳಿಯದೆ ಮಾತಾಡುತ್ತೀಯಾ? ಇಳೈಯಾನ್‌ಕುಡು ತುರುಕ ಹುಡುಗರ ಜೊತೆ ಸೇರಿ ಬುದ್ಧಿ ನಿನ್ನನ್ನು ಹಾಗೆ ಮಾತಾಡಿಸಿದೆ. ನೆಟ್ಟಗೆ ಜಾತಿ ನೋಡಿ ಮಾತಾಡು. ಬಾರಲೇ, ಹೋಗಲೇ ಅಂತ ಮಾತಾಡುತ್ತೀಯಾ! ಕರುಪ್ಪಾ, ಸರಿಯಾಗಿ ರೀತಿಯನ್ನು ಹೇಳಿ ಇಡು. ಇನ್ನೊಮ್ಮೆ ಹೀಗೆ ಮಾತಾಡಿದರೆ ಆಮೇಲೆ ಯಾರು ಅಂತಲೂ ನೋಡಲ್ಲ" (ಅದೇ, ಪು. ೮೦) ಎಂದು ಸಿಟ್ಟಿನಿಂದ ಗದರಿಸಿ ಬೈಯತೊಡಗಿದ್ದರು. ಇದನ್ನು ಗಮನಿಸುತ್ತಿದ್ದ ಗುಣಶೇಖರನಿಗೆ ಯಾವುದು ಅರ್ಥವಾಗಿರಲಿಲ್ಲ. ಆದರೆ ಒಂದು ಮಾತ್ರ ಸ್ಪಷ್ಟವಾಗುತ್ತಿತ್ತು. ಜಾತಿಯಲ್ಲಿ ನಾವು ಕೀಳು ಮೇಲ್ವರ್ಗದವರಿಗೆ ಎದುರು ಮಾತಾಡಬಾರದು ಅವರಿಗೆ ಲೇ ಎನ್ನುವ ಶಬ್ದ ಬಳಸಬಾರದೆಂದು.

ಸಾಮಾಜಿಕ ಮೌಲ್ಯ ನಿರ್ಧಾರ

ಬಾಮ ಅವರ ಆತ್ಮಕಥೆಯಲ್ಲಿ ದಲಿತರೆಂದರೆ ಕಳ್ಳರು ಎನ್ನುವ ಸಾಮಾಜಿಕ ಮೌಲ್ಯ ನಿರ್ಧಾರಕ್ಕೆ ಬದ್ಧರಾಗಿರುವ ಶಾಲೆಯ ಹೆಡ್ ಮಾಸ್ಟರ್ ಶಾಲೆಯಲ್ಲಿ ತೆಂಗಿನಕಾಯಿ ಕಿತ್ತಿದ ಆರೋಪ ಬಂದಾಗ ಪರೈ ಜಾತಿಯವಳು ಎನ್ನುವ ಕಾರಣಕ್ಕೆ "ನಿನ್ನ ಪರೈ ಜಾತಿಯ ಬುದ್ಧಿಯನ್ನು ತೋರಿಸಿಬಿಟ್ಟೆಯಲ್ಲ ಎಲ್ಲಾ ಮಕ್ಕಳು ಮನೆಗೆ ಹೋದಮೇಲೆ, ನೀನು ತೆಂಗಿನಕಾಯಿ ಕಿತ್ತಿದ್ದೀಯಾ" (ಅದೇ, ಪು. ೨೦) ಎನ್ನುವ ಮಾತುಗಳಲ್ಲಿ ಇದುವರೆಗೆ ಸಮಾಜವು ನಿರ್ಧರಿಸುವಂತೆ ಶಿಕ್ಷಣ ಪಡೆದು ಮಾಸ್ಟರ್ ಆಗಿರುವ ವ್ಯಕ್ತಿ ಕೂಡ ಹಾಗೆಯೇ ಮಾತನಾಡುವುದು ಸರಿಯಲ್ಲ. ಸಾಮಾಜಿಕ ಸ್ಥಿತಿಯನ್ನು ತಿಳಿಸುತ್ತದೆ. ಹಾಗೇ ಮುಂದುವರಿದು ಆ ಶಾಲೆಯ ಮುಖ್ಯ ಗುರುಗಳು ಸಹ "ನೀನು ಚೇರಿ ಹುಡುಗಿಯಲ್ಲವೇ ಸ್ವಲ್ಪ ತಲೆಹರಟೆ, ಕಿರಿಕ್ ಮಾಡ್ತಾನೇ ಇರ್ತೀಯ" (ಅದೇ ಪು. ೨೦) ಎಂದು ಹೇಳುವಾಗ ಅವರು ಕೂಡ ಪೂರ್ವಗ್ರಹಪೀಡಿತರಾಗಿ ಮಾತಾಡುವುದನ್ನು ನಾವು ಕಾಣಬಹುದು.

ಆತ್ಮಕಥೆಯಲ್ಲಿ ವ್ಯಕ್ತಗೊಂಡಿರುವ ಬಡತನ

ದಲಿತರು ಅದರಲ್ಲಿ ಪರೈ ಸಮುದಾಯದವರು ತುಂಬಾ ಶ್ರಮಜೀವಿಗಳು. ಗ್ರಾಮ ಸಂಸ್ಕೃತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಮೇಲ್ವರ್ಗದ ಬಿಟ್ಟಿ ಚಾಕರಿ ಮಾಡುವ ಕುಲಕಸುಬುಗಳ ಮೂಲಕವೇ ಜೀವನ ಸಾಗಿಸುವ ಇವರ ಬದುಕು ಅತ್ಯಂತ ಭೀಕರವಾಗಿ ಕಂಡು ಬರುತ್ತದೆ. ಈ ಎರಡು ತಮಿಳು ದಲಿತ ಆತ್ಮಕಥೆಗಳು ತಮಿಳಿನ ಪರೈ ಸಮುದಾಯಕ್ಕೆ ಸೇರಿದವು. ಆದರಿಂದ ಪರೈ ಸಮುದಾಯದ ಸಾಮಾಜಿಕ ಜೀವನ ಹಲವು ಸ್ತರಗಳನ್ನು ತನ್ನ

ಮೂಲದಲ್ಲೇ ಹಿಡಿದಿಡುವ ಕಾರ್ಯ ಮಾಡುತ್ತವೆ. ಬಾಮ ಮತ್ತು ಗುಣಶೇಖರ ಅವರು ಬಡತನದ ವಿವಿಧ ವಿನ್ಯಾಸಗಳು ಮತ್ತು ಅದರಿಂದ ಬಿಡುಗಡೆ ಪಡೆಯಲು ತಾವು ಅನುಭವಿಸಿದ ಕಷ್ಟಗಳನ್ನು ಆತ್ಮಕಥೆಗಳಲ್ಲಿ ವಿವರಿಸುವ ಪ್ರಯತ್ನ ಮಾಡುತ್ತಾರೆ.

ಬಾಮ ಅವರು ತಾವು ಅನುಭವಿಸಿದ ಬಡತನವನ್ನು ಹೀಗೆ ವಿವರಿಸುತ್ತಾರೆ. ಬಡತನಕ್ಕೆ ಜಾತಿಯೊಂದು ಪ್ರಮುಖ ಕಾರಣ. ನಾವು ನಾಯ್ಕರ್ ಮನೆಗಳಲ್ಲಿ ಬಿಟ್ಟಿ ಚಾಕರಿ ಮಾಡಬೇಕಿತ್ತು. ಅವರ ಸೇವೆ ಮಾಡಿದರೆ ಹೊಲಗದ್ದೆಗಳಲ್ಲಿ ದುಡಿದರೆ ಅವರು ಅದಕ್ಕೆ ಅನ್ನ ರೂಪದ ಸಂಬಳ ನೀಡುತ್ತಿದ್ದರು. ನಾಯ್ಕರ್‌ಗಳ ಮನೆಗಳಿಗೆ ಹೋಗಿ ದನದ ಕೊಟ್ಟಿಗೆಯಲ್ಲಿನ ಸಗಣಿ ತೆಗೆದು ತೊಳೆದು ಶುದ್ಧ ಮಾಡಿದರೆ ಮನೆಯ ಹೆಂಗಸರು ಹಿಂದಿನ ದಿನದ ತಂಗಳು ಅನ್ನ ಸಾರನ್ನು ತರುತ್ತಿದ್ದರು. ಅದು ತಮ್ಮ ಪಾಲಿಗೆ ದೇವರ ಪಂಚಾಮೃತ ಸಿಕ್ಕಂತೆಯೇ ಎನ್ನುವಂತೆ ಬಾಸವಾಗುತ್ತಿತ್ತು ಎನ್ನುವ ಮಾತುಗಳು ಅವರ ಬಡತನವನ್ನು ಸಾಕ್ಷೀಕರಿಸುತ್ತವೆ. ಅದೇ ರೀತಿ 'ವಡು' ಆತ್ಮಕಥೆಯಲ್ಲಿ ಗುಣಶೇಖರ ಓದುವಾಗ ಊಟ ಮಾಡಲು ಹಣವಿಲ್ಲದಿದ್ದಾಗ ಅವರು ಪಡುವ ಕಷ್ಟವನ್ನು ಈ ರೀತಿಯಾಗಿ ವಿವರಿಸಿದ್ದಾರೆ. ಬೇಸಿಗೆಯಲ್ಲಿ ಹಾಸ್ಟಲ್ ಮುಚ್ಚಿಬಿಡುತ್ತಾರೆ ಇದರಿಂದ ಗುಣಶೇಖರನ್‌ರು ಮೂರನೇ ವರ್ಷದ ಕೊನೆಯ ಪರೀಕ್ಷೆ ಬರೆಯುವಾಗ ಹಣ ಕಟ್ಟಿ ಹೋಟೆಲ್‌ನಲ್ಲಿ ಊಟ ಮಾಡುವ ಪರಿಸ್ಥಿತಿಯಲ್ಲಿ ಇರದ ಕಾರಣ ಮನೆಯಿಂದಲೇ ನಾಲ್ಕು ದಿನಕ್ಕೆ ಸಾಕಾಗುವಷ್ಟು ಒಂದು ತಾಳೆಯೋಲೆಯ ಪೊಟ್ಟಣದಲ್ಲಿ ಪುಳಿಯೋಗರೆಯನ್ನು ಕಟ್ಟಿಸಿಕೊಂಡು ತರುತ್ತಾರೆ. ಅದನ್ನು ತಿಳಿಸುತ್ತಾ "ಒಂದು ಎರಡು ದಿನ ಅದೇ ಪುಳಿಯೋಗರೆ ತಿಂದು ಪರೀಕ್ಷೆ ಬರೆದೆ ಮೂರನೇ ದಿನ ಅದು ಬೂಸು ಬಂದಿತು. ಅದನ್ನು ಬಿಟ್ಟರೆ ಬೇರೆ ದಾರಿಯಿಲ್ಲದೆ ಅದನ್ನೇ ಬೂಸು ಹಿಡಿದ ಭಾಗವನ್ನು ಮಾತ್ರ ತೆಗೆದು ಹಾಕಿ ತಿಂದೆ. ಇದರಿಂದ ನಾಲ್ಕನೇ ದಿನ ಕೊನೆಯ ಪರೀಕ್ಷೆಗೆ ನನಗೆ ರಕ್ತ ಭೇದಿ ಆಗಿತ್ತು. ವೈದ್ಯರ ಬಳಿ ಔಷದಿ ತೆಗೆದುಕೊಂಡು ಬೆಳಗಿನ ಪರೀಕ್ಷೆ ಬರೆದೆ. ಮಧ್ಯಾಹ್ನದ ಪರೀಕ್ಷೆಯನ್ನು ತುಂಬಾ ಕಷ್ಟ ಪಟ್ಟು ಬರೆದೆ. ಒಂದು ಲುಂಗಿಯನ್ನು ಒಳ ಉಡುಪಿನ ಮೇಲೆ ಕಟ್ಟಿ ಪ್ಯಾಂಟ್ ಹಾಕಿಕೊಂಡು ಧೈರ್ಯ ಮಾಡಿ ಪರೀಕ್ಷೆ ಬರೆದು ಪಾಸಾದೆ. ಒಂದು ವೇಳೆ ಪರೀಕ್ಷೆ ಬರೆಯದೇ ಹೆದರಿ ನಾನು ಓಡಿ ಹೋಗಿದ್ದರೆ ನನ್ನ ಜೀವನದ ದಿಕ್ಕು ಬದಲಾಗಿ ಹೋಗಿರಬಹುದಿತ್ತು"(ಅದೇ, ಪು. ೧೦೬) ಅಂತಹ ಕಡುಬಡತನದಲ್ಲಿ ಗುಣಶೇಖರನ್ ಶಿಕ್ಷಣ ಎಷ್ಟು ಮುಖ್ಯ ಎಂಬುದನ್ನು ತಿಳಿಸುತ್ತಾ ಧೈರ್ಯ ಬಿಡದೇ ಬೂಸು ಹಿಡಿದ ಪುಳಿಯೋಗರೆಯನ್ನೇ ತಿಂದು ಬದುಕಿರುವ ಚಿತ್ರಣಗಳನ್ನು ಚಿತ್ರಿಸುತ್ತಾರೆ. ಗುಣಶೇಖರನ್‌ರು ತಮ್ಮ ಬಡತನವನ್ನು ತಿಳಿಸುತ್ತಾ "ನಮ್ಮ ತಂದೆಯ ಬಳಿ ಓದಿದ ಮಲೇಶಿಯಾ ಸಿಂಗಾಪೂರನಲ್ಲಿ ವಾಸ ಮಾಡಿ ವಾಪಸ್ ಬರುವ ಜನರು ಅಂಗಿ, ಬನಿಯನ್ ಕೊಡುತ್ತಿದ್ದರು. ಆ ಬಟ್ಟೆಗಳನ್ನು ಹದಿನೈದು ರೂಪಾಯಿಗೆ ಪುಲ್ಲಪ್ಪನ್ ಅಂಗಡಿಯಲ್ಲಿ ಮಾರಿ ಮನೆಗೆ ಅಕ್ಕಿ ಬೇಳೆ ತಂದು ಹಾಕುತ್ತಾರೆ. ನಾವು ಅದೇ ಪುಲ್ಲಪ್ಪನ ಅಂಗಡಿಯಲ್ಲಿ ನಾಲ್ಕು ರೂಪಾಯಿಯಿಂದ ೧೦ ರೂಪಾಯಿಗಳ ಒಳಗಡೆ ಬಟ್ಟೆ

ತಂದು ಅದನ್ನು ನಮ್ಮ ಸೈಜಿಗೆ ಆಲ್ಟರ್ ಮಾಡಿ ಹಾಕಿಕೊಳ್ಳುತ್ತಿದ್ದವು(ಅದೇ ಪು. ೪೭) ಎಂದು ಬಡತನವನ್ನು ಎದುರಿಸಿದ ಪಾತ್ರ ಚಿತ್ರಣ ನೀಡುತ್ತಾರೆ.

ಎರಡೂ ದಲಿತ ಆತ್ಮಕಥೆಗಳಲ್ಲಿ ಬಡತನವು ಪ್ರಧಾನವಾದ ವಸ್ತುವಾದರೂ ಅದನ್ನು ಹೇಗೆ ಮೀರಿ ಆಹಾರ, ಪಡೆಯಬೇಕು ಮತ್ತು ಅದರಿಂದ ಹೇಗೆ ಹೊರ ಬರಬೇಕೆಂಬ ವಿಚಾರಗಳು ಕಂಡುಬರುತ್ತವೆ. ಪರೈ ಜಾತಿಯ ಪ್ರತಿಯೊಬ್ಬ ವ್ಯಕ್ತಿಯು ಮೇಲ್ವರ್ಗದವರ ಮನೆಯಲ್ಲಿ ಕೆಲಸ ಮಾಡಲೇಬೇಕಿತ್ತು. ಅಲ್ಲದೆ ಪರೈ ಸಮುದಾಯಕ್ಕೆ ವ್ಯವಸಾಯ ಮಾಡಿಕೊಂಡು ಜೀವನ ನಿರ್ವಹಿಸುವಷ್ಟು ಭೂಮಿ ಇರಲಿಲ್ಲ. ಜೊತೆಗೆ ಅವರು ಆರ್ಥಿಕವಾಗಿ ತುಂಬಾ ಬಡವರಾಗಿದ್ದಾರೆ. ಪರಿಣಾಮ ಅವರಿಗೆ ಮೇಲ್ವರ್ಗದ ಬಿಟ್ಟಿ ಚಾಕರಿ ಅನಿವಾರ್ಯವಾಗಿತ್ತು. ಇದನ್ನು ಮೀರಿ ನಡೆಯುವ, ಅದನ್ನು ಪ್ರತಿರೋಧಿಸುವ ಆಲೋಚನೆಯು ಈ ಸಮುದಾಯಕ್ಕಿರಲಿಲ್ಲ. ಕಾರಣ ಇವರು ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ತುಂಬಾ ಹಿಂದುಳಿದವರಾಗಿದ್ದರು. ಇದನ್ನೇ ಬಂಡವಾಳವಾಗಿಸಿಕೊಂಡ ಮೇಲ್ವರ್ಗದ ಜನತೆಯು ಇವರನ್ನು ತಮ್ಮ ಗುಲಾಮರಂತೆ ದುಡಿಸಿಕೊಂಡಿದ್ದಾರೆ.

ಹಿಂದೂ ಧರ್ಮದಲ್ಲಿನ ಜಾತಿ ವಿಭಾಗಗಳು: 'ವಡು' ಆತ್ಮಕಥೆಯಲ್ಲಿ ಗುಣಶೇಖರನ್‌ರು ದೇವಸ್ಥಾನ ಪ್ರವೇಶಿಸಲು ಅನುಭವಿಸಿದ ಸಂಕಷ್ಟವನ್ನು ದಾಖಲಿಸುತ್ತಾರೆ. "ಇಳೈಯೊನ್ ಕುಡಿಯಲ್ಲಿ ಆರ್ಯ, ವೈಶ್ಯ, ಶೆಟ್ಟಿಯರು ವಾಸವಾಗಿದ್ದ ಪ್ರದೇಶದಲ್ಲಿ ಒಂದು ಶಿವನ ದೇಗುಲವಿದೆ. ನಾನು ಚಿಕ್ಕ ವಯಸ್ಸಿನಿಂದ ಇಂದಿನವರೆಗೂ ಆ ದೇವಸ್ಥಾನದಲ್ಲಿ ಹೋಗಿದ್ದೇ ಇಲ್ಲ" (ಗುಣಶೇಖರನ್ ಕೆ. ಎ. ವಡು ಪು. ೨೩) ಎಂದು ಹೇಳುವುದರಲ್ಲಿ ದಲಿತರಿಗೆ ದೇವಸ್ಥಾನಕ್ಕೆ ಪ್ರವೇಶವೇ ಇರಲಿಲ್ಲ ಎಂಬುದನ್ನು ತಿಳಿಸುತ್ತಾರೆ. ಒಂದು ವೇಳೆ ಅದನ್ನು ಮೀರಿ ಒಳಗೆ ಹೋದರೆ ಅವರು ಯಾವ ರೀತಿಯಲ್ಲಿ ಭಯ ಪಡಬೇಕಿತ್ತು ಎಂಬುದನ್ನು ಈ ರೀತಿಯಾಗಿ ದಾಖಲಿಸುತ್ತಾರೆ.

"ದೇವಸ್ಥಾನದ ಒಳಗೆ ಕೀಳು ಜಾತಿಯವರನ್ನು ಬಿಡುವುದಿಲ್ಲ ಎಂಬುದಕ್ಕೆ ಒಂದೊಂದು ಬಾರಿಯು ದೇವಸ್ಥಾನದೊಳಗೆ ಹೋಗುವಾಗ ಎದೆ ಡಬ ಡಬವೆಂದು ಜೋರಾಗಿ ಬಡಿದುಕೊಳ್ಳುತ್ತದೆ. ದೇವಸ್ಥಾನದೊಳಗೆ ಪ್ರವೇಶಿಸಿದಾಗ ಹೇಗೆ ಹೆದರಿ ಹೆದರಿ ಹೋಗುತ್ತಿದ್ದೆವೋ ಹಾಗೆ ಹೊರಗೆ ಬರುವಾಗಲೂ ಅದೇ ಭಯ ಇರುತ್ತಿತ್ತು" (ಅದೇ ಪು. ೧೨೦) ಎಂಬ ಮಾತುಗಳು ದಲಿತರು ಓದಿ ಎಷ್ಟೇ ಮುಂದೆ ಬಂದರೂ ತಂಜಾವೂರ್ ದೊಡ್ಡ ದೇವಸ್ಥಾನದಲ್ಲಿ ಪ್ರವೇಶಿಸಿದಾಗ ಅವರಲ್ಲಿ ಆದ ಅನುಭವವನ್ನು ತಿಳಿಸುತ್ತಾರೆ.

ಶಾಲೆಗಳಲ್ಲಿ ಜಾತೀಯತೆ: ಶಾಲೆಯಲ್ಲಿ ದಲಿತ ವಿದ್ಯಾರ್ಥಿಗಳಿಗೆ ಸಿಗುತ್ತಿದ್ದ ಗೌರವವನ್ನು ಮನೋವೇದನೆಯಿಂದ ತಿಳಿಸುತ್ತಾರೆ. "ಹೈಸ್ಕೂಲ್‌ನಲ್ಲಿದ್ದ ಕ್ಲರ್ಕ್ ಒಬ್ಬರು ತಮ್ಮ ಕೈಯಲ್ಲಿ ಲಿಸ್ಟ್ ಒಂದನ್ನು ತಂದು.... ಈ ಕ್ಲಾಸ್‌ನಲ್ಲಿ ಪರೈಯರು ಎಷ್ಟು ಜನ? ಕೈಯನ್ನು ಎತ್ತಿ! ಪಳ್ಳರು ಎಷ್ಟು ಜನ? ಅವರೆಲ್ಲಾ ಎದ್ದು ನಿಲ್ಲಿ!. '(ಅದೇ ಪು. ೨೯) ಎಂದು ಜಾತಿ ಎಂದರೆ ಏನೆಂದೂ

ಸಹ ತಿಳಿಯದ ವಯಸ್ಸಿನಲ್ಲಿ ಜಾತಿ ಹೆಸರನ್ನು ಸೂಚಿಸಿ ಅವರ ಮನಸ್ಸಿನಲ್ಲಿ ಜಾತೀಯ ವಿಭಾಗವನ್ನು ಮಾಡುವುದನ್ನು ಗಮನಿಸಬಹುದು.

ಹಾಸ್ಟಲ್ ಹೆಸರು ಹೇಳಲು ಹಿಂಜರಿಕೆ: ಗುಣಶೇಖರನ್ ಹರಿಜನ ಹಾಸ್ಟಲ್‌ನಲ್ಲಿದ್ದು ಓದುತ್ತಿದ್ದರು. ಆ ಹಾಸ್ಟ್‌ಲ್‌ನ ವಾರ್ಡನ್ ಎಲ್ಲಾ ವಿದ್ಯಾರ್ಥಿಗಳಿಗೆ ಹೆಚ್ಚು ಹೇಳುತ್ತಿದ್ದ ಒಂದು ಮಾತು ಎಂದರೆ "ಇಳೈಯಾನ್‌ಕುಡಿ ಅಂಗಡಿ ಬೀದಿಗಳಲ್ಲಿ" ಸುಮ್ಮನೆ ತಿರುಗಬಾರದು ಯಾರಾದರು ಕೇಳಿದರೆ ಹರಿಜನ ಹಾಸ್ಟಲ್‌ನಲ್ಲಿ ಇದ್ದೇನೆ ಎಂದು ಹೇಳದೆ ಸುಳ್ಳು ಹೇಳಬೇಕು" (ಅದೇ ಪು. ೩೦) ಎಂದು ವಾರ್ಡನ್ ಹೇಳಲು ಮುಖ್ಯ ಕಾರಣ ಹರಿಜನ ಎಂದು ತಿಳಿದರೆ ಅಂಗಡಿ ಬೀದಿಗಳಲ್ಲಿ ನಡೆಯಲು ಪ್ರವೇಶ ಸಿಗುವುದಿಲ್ಲ ಹಾಗೂ ಶಿಕ್ಷೆಯೂ ಆಗಬಹುದು ಮತ್ತು ವಾರ್ಡನ್‌ಗೂ ಬೈಯುತ್ತಾರೆ ಎಂಬುದರಿಂದ ಸುಳ್ಳು ಹೇಳಬೇಕಿತ್ತು ಎಂದು ತಿಳಿಸುತ್ತಾರೆ.

ಲೇಖಕರ ಕವನ ವಾಚನ: ಮಧುರೈಯಲ್ಲಿ ಕವಿ ಮೀರಾರವರ ಮುಖಂಡತ್ವದಲ್ಲಿ ಕವನ ವಾಚನ ಕಾರ್ಯಕ್ರಮದಲ್ಲಿ ಲೇಖಕರು ಭಾಗವಹಿಸಿ ತಮ್ಮ ದುಃಖವನ್ನು ಕವಿತೆಯಲ್ಲಿ ದಾಖಲಿಸುತ್ತಾರೆ.

"ಹೇಳಿ ಅತ್ತು ಬಿಟ್ಟರೆ
ಬಾರ ಕಡಿಮೆ ಆಗುತ್ತದೆ ಎಂದು
ಹೇಳಿ ಅಳಲು ಬಂದೆ
ದುಃಖ ಹೆಚ್ಚಾಗಿ
ಗಂಟಲು ಕಟ್ಟಿಕೊಂಡಿದೆ" (ಅದೇ ಪು. ೯೯)

ಅವರು ತಾವು ಅನುಭವಿಸಿದ ದುಃಖಗಳನ್ನು ಯಾರ ಬಳಿಯಾದರು ಹೇಳಿ ಅತ್ತುಬಿಡಬೇಕು ಎಂದು ಯೋಚಿಸುತ್ತಾರೆ. ಆದರೆ ಅವರು ದುಃಖ ಹೆಚ್ಚಾಗಿ ಗಂಟಲು ಒಣಗಿ ಹೋಗಿತ್ತು ಎಂದು ತಿಳಿಸುತ್ತಾರೆ.

ಜಾತಿ ಎಂಬ ಗುರುತು: ಕಲ್ಲಿಡಿತ್ತಡಲೆ ಎಂಬ ಊರಿನಲ್ಲಿ ಜಾತ್ರೆ ನಡೆಯುತ್ತದೆ. ಆ ಜಾತ್ರೆಗೆ ತಮಟೆ, ಡೋಲು ಮುಂತಾದವುಗಳನ್ನು ನುಡಿಸಲು ಸಂಗೀತಗಾರರನ್ನು ತಂಜಾವೂರಿನಿಂದ ಕರೆತರಲಾಗಿತ್ತು. ಆಗ ಬಂದವರು ಗುಣಶೇಖರನ್‌ರ ಮನೆಗೆ ಯಾರಿಗೂ ತಿಳಿಯದೆ ಬೇಗ ಹೋಗಿ ಹೊರ ಬರುತ್ತಾರೆ. ಆಗ ತಮ್ಮ ತಾಯಿಯು 'ಅವರೆಲ್ಲಾ ಪರೈ ಮನೆಯವರು ಎನ್ನುತ್ತಾ ಇತರರಿಗೆ ತಿಳಿದರೆ ಕೇವಲ, ಅದರಿಂದಲೇ ನಮ್ಮ ಮನೆಗೆ ಈ ರೀತಿ ಊರಿನಲ್ಲಿ ಯಾರಿಗೂ ತಿಳಿಯದೆ ಬಂದು ಬೇಗ ಹೋಗಿದ್ದಾರೆ' ಎಂದು ಜಾತಿ ಹೆಸರು ಹೇಳಲು ಸಂಕೋಚ ಪಡುವ ಮನಸ್ಥಿತಿಯನ್ನು ಕಾಣಬಹುದು.

ನೀರು ಕುಡಿಯುವಾಗಲು ಜಾತಿ: ಕಬ್ಬಿನ ರಸದ ನೀರು ಕೇಳಿದರೂ, ಹಣ ಕೊಟ್ಟು ಖರೀದಿಸಬೇಕಾದರೂ ಮೊದಲು ಕೇಳುವ ಪ್ರಶ್ನೆ ನೀನು ಯಾವ ಜಾತಿ? ಎಂದು ಅದನ್ನೂ

ದಾಖಲಿಸುತ್ತಾ "ಸಾನರು ವಾಸವಿರುವಲ್ಲಿ ನಿಂತು, ಅವರು ತಾಳೆ ಎಲೆಯಿಂದ ಮಾಡಿದ ಒಂದು ತಟ್ಟೆಯಾಕಾರವನ್ನು ಹಿಡಿದುಕೊಂಡು ಐದು, ಹತ್ತು ಕಾಸಿಗೆ ಬೆಲ್ಲದ ರಸವನ್ನು ಹಾಕಿಸಿಕೊಂಡು ಕುಡಿಯುತ್ತೇವೆ. ಯಾವ ಗ್ರಾಮದಲ್ಲಿ ಪ್ರವೇಶಿಸಿದರು ಮೊದಲು ಕೇಳುವುದು ನೀವು ಯಾವ ಜಾತಿ? ಪರ್ರೈಯರ್ ಎಂದು ತಿಳಿದ ಕೂಡಲೇ ಚೊಂಬಿನಲ್ಲಿ ಕೊಡದೆ ತಾಳೆಯೋಲೆಯ ತಟ್ಟೆಯಾಕಾರವನ್ನು ಕೊಡುತ್ತಾರೆ. ಬೆಲ್ಲದ ರಸ ಕುಡಿದು ನಡೆಯಲು ಪ್ರಾರಂಭಿಸುತ್ತೇವೆ. ನಡೆದು ಸುತ್ತಿ ಸಾಕಾಗಿ ನೀರು ಕುಡಿಯುತ್ತೇವೆ. ನೀರು ಕೇಳುವಾಗಲೂ, ಸ್ವಲ್ಪ ನೀರು ಕೊಡಿ ಎಂದು ಕೇಳುವುದಕ್ಕು ಪೂರ್ವದಲ್ಲಿ ಯಾವ ಜನ? ಎಂಬ ಪ್ರಶ್ನೆ ದಾವಿಸಿಕೊಂಡು ಬರುತ್ತದೆ" (ಅದೇ, ಪು. ೪೫) ಎಂದು ಜಾತಿ ಗುರುತು ಬರುವುದನ್ನು ಕಾಣಬಹುದು.

ನೀರಿನ ತೊಟ್ಟಿಗಳು, ಬಾವಿಗಳು ಇದ್ದರೂ ಅಲ್ಲಿ ದಲಿತರು ನೀರು ಕುಡಿಯುವುದನ್ನು ತಡೆಯಿಡಿಯುವುದನ್ನು ಕಾಣಬಹುದು.

"ತೋವೂರು ಕಾಲುವೆ (ಹರಿ)ಯಲ್ಲಿ ಮಂಡಿಹಾಕಿ ನೀರನ್ನು ಕೈಯಿಂದ ತೆಗೆದು ಕುಡಿಯುತ್ತೇವೆ. ನೀರನ್ನು ಕುಡಿಯುವಾಗ ಕದಡದೆ ಜಾಗ್ರತವಾಗಿ ಕುಡಿಯಬೇಕಾಗುತ್ತದೆ. ಇಲ್ಲವೆಂದರೆ ನೀರಿನಲ್ಲಿ ಕೆಸರು ವಾಸನೆ ಬರುತ್ತದೆ. ಈ ನೀರಿನ ತೊರೆ ಯಾವ ಜಾತಿಯವರದೆಂದು ತಿಳಿಯದು ಒಂದು ವೇಳೆ ಮೇಲ್ಜಾತಿಯವರದಾಗಿದ್ದರೆ ನಮ್ಮನ್ನು ಕಟ್ಟಿ ಹಾಕಿ ಒದೆಯುತ್ತಾರೆ. ಓಡಿಬಂದುಬಿಡು ಎನ್ನುತ್ತಾ ನಾನು ಅಣ್ಣನು ಓಡಿ ಹೋಗುತ್ತೇವೆ ನೀರು ಕುಡಿಯುವುದಕ್ಕೂ ಜಾತಿ ಹೆಸರನ್ನು ಹೇಳಿ ನಮ್ಮನ್ನು ಗದರಿಸುವುದನ್ನು ನೋಡಿದ್ದೇವೆ" (ಅದೇ, ಪು. ೪೬) ಎಂದು ತೊರೆಯಲ್ಲಿ ವ್ಯವಸಾಯಕ್ಕೆ ಬಿಟ್ಟ ನೀರನ್ನು ಕುಡಿಯುವುದಕ್ಕೂ ಆಗದ ಸಾಮಾಜಿಕ ಪರಿಸ್ಥಿತಿಯನ್ನು 'ವಡು'ವಿನಲ್ಲಿ ಕಾಣಬಹುದು.

ಅಂತರ್ ಜಾತಿ ವಿವಾಹಗಳು: ಪ್ರೇಮ ವಿವಾಹಗಳಿಂದ ಜಾತಿಯನ್ನು ಅಳಿಸಬಹುದು ಎಂದರೂ ಜಾತಿ ಮೀರಿ ಪ್ರೀತಿಸಿದರೆ ಮದುವೆ ಮಾಡಿಕೊಂಡವರನ್ನು ಜೀವಂತವಾಗಿ ಸುಡುವ ಅಥವಾ ಅವರನ್ನು ಕೊಲೆ ಮಾಡುವ ಸಂದರ್ಭ ಬರುತ್ತದೆ. ಅದನ್ನು ಗುಣಶೇಖರನ್‌ರು ದಾಖಲಿಸುತ್ತಾ "ಜಾತಿ ಎಂದರೆ ಗ್ರಾಮ, ಗ್ರಾಮವೆಂದರೆ ಜಾತಿ ಗ್ರಾಮವನ್ನೇ ಗಾಂಧೀಜಿಯವರು ತುಂಬಾ ಇಷ್ಟಪಟ್ಟರು. ಗ್ರಾಮಗಳಲ್ಲಿ ಯಾವತ್ತು ಜಾತಿ ಕಲಹಗಳು ಮುಕ್ತಾಯವಾಗುತ್ತಿವೆಯೋ ಅವತ್ತೇ ಜಾತಿಯನ್ನು ಮೀರಿ ಮದುವೆ ಆಗಲು ಸಾಧ್ಯ. ಒಬ್ಬ ದಲಿತನಿಗೂ ಬೇರೆ ಒಂದು ಜಾತಿ ಹೆಣ್ಣಿಗೂ ಪ್ರೀತಿ ಬೆಳೆದರು ಅವರು ಓದಿದವರಾಗಿದ್ದರೂ ಗ್ರಾಮದಲ್ಲಿ ಜೀವಿಸಲು ಸಾಧ್ಯವಿಲ್ಲ. ಒಂದು ವೇಳೆ ಬದುಕಿದ್ದರೂ ಅವರು ಪಟ್ಟಣಕ್ಕೆ ಹೋಗಿಯೇ ಜೀವಿಸಬೇಕು. ಆಗಲೂ ಕೆಲವೊಮ್ಮೆ ಅಂತವರು ಜೀವಿಸಲು ಆಗುತ್ತಿಲ್ಲ. ಗ್ರಾಮದಲ್ಲಿ ಜೀವಿಸುವ ಮೇಲ್ಜಾತಿಯವರು ಜಾತಿಯನ್ನು ಕಾಪಾಡಲು ಪಟ್ಟಣದಲ್ಲಿ ಜಾತೀ ಮೀರಿ ಜೀವಿಸುತ್ತಿರುವ ದಂಪತಿಗಳನ್ನು ಹಿಡಿದು ತಂದು ಕಾಣದೆ ಹೆಣಗಳಾಗಿಸಿ ಬಿಡುತ್ತಾರೆ" (ಅದೇ, ಪು. ೬೬) ಎಂದು ಗುಣಶೇಖರನ್‌ರು

ಅಂತರ್ ಜಾತಿ ವಿವಾಹದ ಬಗ್ಗೆ ಅಭಿಪ್ರಾಯ ಪಡುತ್ತಾರೆ. ಮುಂದುವರೆದು 'ಮೈಕೇಲಮ್ಮಾ ಕಥೆ' ಎಂಬ ಜಾನಪದ ಕಥೆಯೊಂದನ್ನು ತಿಳಿಸುತ್ತಾರೆ. "ನಾವು ಇಬ್ಬರು ಮದುವೆ ಆಗೋಣ ಎಂದು ಸತ್ಯ ಮಾಡಿ, ಈಗ ಬೇರೆ ಒಬ್ಬ ಹುಡುಗನನ್ನು ಮದುವೆ ಮಾಡಿಕೊಳ್ಳಲು ನೋಡುತ್ತಿದ್ದೀಯೋ? ಎಂದು ಕೇಳಿದನಂತೆ ನಿನ್ನ ಜಾತಿಯಲ್ಲಿ ನನ್ನನು ಜೀವಿಸಲು ಬಿಡುತ್ತಾರಾ? ಎಂದು ಮೈಕೇಲಮ್ಮ ಹೇಳಿದಳಂತೆ, 'ದೇವಕೊಟ್ಟೈ ಪಟ್ಟಣದಲ್ಲಿ ಮನೆ ತೆಗೆಂಡು ಇರೋಣ' ಎಂದು ಆ ಹುಡುಗ ಹೇಳಲು ಇಬ್ಬರ ನಡುವೆ ಮಾತುಕಥೆ ಜೋರಾಯಿತಂತೆ ಕೊನೆಗೆ 'ಮದುವೆ ಮಾಡಿಕೊಂಡು ನಾವು ಓಡಿ ಹೋದರೂ, ನಮ್ಮ ಅಮ್ಮ ಅಪ್ಪನನ್ನು ಸೇರಿಸಿ ನನ್ನ ಜಾತಿ ಜನರನ್ನು ಸೇರಿಸಿ ನಿಮ್ಮ ಜನರು ಸಾಯಿಸಿಬಿಡುತ್ತಾರೆ. ನನ್ನನ್ನು ಮರೆತು ನಿಮ್ಮ ಜಾತಿಯಲ್ಲಿ ಒಂದು ಹುಡುಗಿಯನ್ನು ನೋಡಿ ಮದುವೆ ಮಾಡಿಕೊಂಡು ಚೆನ್ನಾಗಿ ಇರು" (ಅದೆ, ಪು. ೬೫) ಎಂದು ಹೇಳಿ ಮುಗಿಸುವಷ್ಟರಲ್ಲಿ ಅವಳ ತಲೆ ಕಡಿದು ತಾನೇ ಪೋಲಿಸ್ ಠಾಣೆಯಲ್ಲಿ ಖುದ್ದಾಗಿ ಹಾಜರಾಗಿ ಹದಿನಾಲ್ಕು ವರ್ಷ ಜೈಲು ಶಿಕ್ಷೆ ಅನುಭವಿಸಿದನಂತೆ ಮೈಕೇಲಮ್ಮ ಪರೈಯರ್ ಮನೆಯ ಹುಡುಗಿ ಅವಳ ಸೌಂದರ್ಯದಿಂದ ಉಡೈಯಾರ್ ಮನೆಯ ಯುವಕನು ಪ್ರೀತಿಸುತ್ತಾನೆ. ಆದರೆ ಮೈಕೇಲಮ್ಮಾಳಿಗೆ ಮನೆಯಲ್ಲಿ ಬೇರೊಂದು ಗಂಡು ನೋಡುವ ಸಂಗತಿಯನ್ನು ಸಹಿಸದೆ ಉಡೈಯಾರ್ ಜಾತಿಯ ಯುವಕನು ಮೈಕೇಲಮ್ಮಳನ್ನು ಕೊಲೆ ಮಾಡುತ್ತಾನೆ. ಇದರ ನಂತರ "ಆ ಕೊಲೆ ನಡೆದ ನಂತರ ಇಂದಿನವರೆಗೊ ಆ ಪ್ರದೇಶದಲ್ಲಿ ಜಾತಿ ಬಿಟ್ಟು ಜಾತಿಯಲ್ಲಿ ಪ್ರೀತಿಯೋ ಮದುವೆಯೋ ನಡದೇ ಇಲ್ಲ" (ಅದೇ, ಪು. ೬೫) ಈ ಘಟನೆಯಿಂದ ಜಾತಿ ಬಿಟ್ಟು ಬೇರೆ ಜಾತಿಯ ಒಳಗೂ ಪ್ರೀತಿ ಮಾಡುವುದಕ್ಕೆ ಹೆದರಿಕೆ ಇತ್ತು ಎಂಬುದನ್ನು ದಾಖಲಿಸುತ್ತಾರೆ.

ಉನ್ನತ ಉದ್ಯೋಗದಲ್ಲಿದ್ದರೂ ಮರ್ಯಾದೆ ಸಿಗದಿರುವುದು: ಗುಣಶೇಖರನ್‌ರ ಮೈದುನರಾದ ಮುನಿಯಾಂಡಿಯು ಪರೈಯರಾಗಿದ್ದರೂ, ಚೆನ್ನಾಗಿ ಓದಿ ಡಾಕ್ಟರ್ ಪದವಿ ಪಡೆದು ಮಧುರೈ ಆಸ್ಪತ್ರೆಯಲ್ಲಿ ಉದ್ಯೋಗ ಮಾಡುತ್ತಿದ್ದರು. ಅಲ್ಲಿ ಎಲ್ಲರೂ ಮುನಿಯಾಂಡಿಗೆ ನಮಸ್ತೆ ಹೊಡೆಯುತ್ತಿದ್ದರು. ಮಾರಂದೈಯ ಕೋನಾರ್ ಜನರು ಆಸ್ಪತ್ರೆಗೆ ತೋರಿಸಿಕೊಳ್ಳಲು ಬಂದರೆ ಮುನಿಯಾಂಡಿಯನ್ನು 'ಡಾಕ್ಟರ್ ತಮ್ಮಾ' ಎಂದು ಕರೆಯುತ್ತಿದ್ದರು. ಆದರೆ ಚೆನ್ನಾಗಿ ಆಗಿ ಊರಿಗೆ ಬರುವಾಗ ಬಸ್‌ಸ್ಟ್ಯಾಂಡ್‌ನಲ್ಲಿ 'ಅಪ್ಪಾ ಮುನಿಯಾಂಡಿ ನಾವು ಬರುತ್ತೀವಿ, ನೀನು ಮಾರಂದೈಗೆ ಬರುವಾಗ, ನೀನು ಹೇಳಿದ ಡಾಕ್ಟರ್ ಬಳಿ ಕೇಳಿ ಮಾತ್ರೆ, ಔಷಧಿಗಳನ್ನು ತೆಗೆದುಕೊಂಡು ಬಾ' ಎಂದು ತೋರಿಸಿಕೊಳ್ಳಲು ಬಂದ ಊರಿನವರು ಹೇಳುತ್ತಿದ್ದರು 'ಅಯ್ಯೋ! ಬೇರೆ ಯಾವುದೆ ಸಮಸ್ಯೆ ಇದ್ದರೆ ನೇರವಾಗಿ ಆಸ್ಪತ್ರೆಗೆ ಬಂದು ಬಿಡಿ ನಾನು ನೋಡಿಕೊಳ್ಳುತ್ತೇನೆ' ಎಂದು ನಮ್ಮ ಮೈದುನ ಹೇಳುತ್ತಾರಂತೆ 'ಸರಿ, ಮುನಿಯಾಂಡಿ ನಾವು ಹೋಗಿ ಬರುತ್ತೇವೆ. ಕರುಪ್ಪನಿಗೆ ಏನಾದರೂ ಹೇಳಬೇಕಾ......ಬರಲೆ? ಮುನಿಯಾಂಡಿ, ಬರ್ತೀವಿ' ಅಂತ ಹೇಳಿ ಹೋಗುತ್ತಾರೆ. ಇಳೈಯೋನ್ ಕುಡಿ ಗ್ರಾಮದಲ್ಲಿ ಮೈದುನನನ್ನು ನೋಡಿದರೆ ಮಾರಂದೈ ಜನರು 'ಏನಪ್ಪಾ

ಮುನಿಯೊಂಡಿ, ಐ! ಮುನಿಯಾಂಡಿ ಯಾವಾಗ ಮಧುರೈಯಿಂದ ಬಂದೆ ಯಾವಾಗ ಮಾರಂದೈಗೆ ಬರುತ್ತಿಯೊ? ಎಂದು ಮಾತಾಡುತ್ತಾರೆ. ಮಾರಂದೈ ಗ್ರಾಮಕ್ಕೆ ಮೈದುನನು ಹೋಗಿಬಿಟ್ಟರೆ, 'ಏನಲೇ ಮುನಿಯಾಂಡಿ' ಎಂದು ಬಾರಲೇ ಹೋಗಲೇ ಎಂದು ಕರೆಯುತ್ತಾರೆ" (ಅದೇ, ಪು. ೯೧-೯೨) ಎಂದು ದಾಖಲಿಸುತ್ತಾರೆ. ಇಲ್ಲಿ ಮುನಿಯಾಂಡಿಯನ್ನು ಪಟ್ಟಣದ ಆಸ್ಪತ್ರೆಯಲ್ಲಿ ಡಾಕ್ಟರ್ ತಮ್ಮಾ ಎಂದವರು ತಮ್ಮ ಗ್ರಾಮಕ್ಕೆ ಬಂದಾಗ ಏನಲೇ ಬಾರಲೇ ಎಂದು ಮರ್ಯಾದೆ ಕೊಡದೇ ಮಾತಾಡುತ್ತಾರೆ. ಕೆಲಸ ಆಗುವವರೆಗೆ ಕತ್ತೆ ಕಾಲು ಬೇಕಾದರೂ ಹಿಡಿಯಬೇಕು ಎಂಬ ಒಂದು ಗಾದೆ ಇದೆ. ಆದರೆ ಇಲ್ಲಿ ಅದು ಕಾರಣವಲ್ಲ, ಇಲ್ಲಿ ತನಗಿಂತ ಕೀಳಾದ ಜಾತಿಯವನನ್ನು ಸೇರಿದವನು ಎಂಬುದನ್ನು ಮತ್ತಷ್ಟು ಹುಬ್ಬೇರಿಸಿಕೊಂಡು ಈ ರೀತಿಯಾಗಿ ಮರ್ಯಾದೆ ಕೊಡದೆ ಮಾತಾಡುವುದನ್ನು ಕಾಣಬಹುದು.

ದಲಿತ ಮಹಿಳೆಯರ ಉಡುಪು: ಮನುಷ್ಯರಿಗೆ ನಾಗರೀಕತೆಯ ಸಂಕೇತವಾಗಿ ತಮ್ಮ ಉಡುಪಿನ ರಚನೆ ಇರುತ್ತದೆ. ಆದರೆ ದಲಿತರು ಮಾತ್ರ ಹೀಗೇ ಇರಬೇಕು ಎಂಬ ನಿಯಮಗಳು ಇವೆ. ಗುಣಶೇಖರನ್ ಬಳಿ ಅವರ ದೊಡ್ಡಮ್ಮ ಅರುಳಾಯಿ ತನಗೆ ಮತ್ತು ತನ್ನ ಜಾತಿಯ ಮಹಿಳೆಯರಿಗೆ ಹೇರಿದ ಜಾತಿ ಅಧಿಕಾರವನ್ನು ಈ ರೀತಿಯಾಗಿ ಹೇಳಿಕೊಳ್ಳುತ್ತಾರೆ. "ಕೀರನೂರನಿಂದ ತೋವೂರಿಗೆ ನಾನು ಮದುವೆ ಆಗಿ ಬಂದ ದಿನದಿಂದ ಮೇಲಿನ ಉಡುಪು (ಕುಪ್ಪಸ)ವನ್ನು ಧರಿಸಿಲ್ಲ. ನಮ್ಮ ಕಾಲನಿಯ ಮನೆಗಳ ಯಾವ ಹೆಂಗಸು ಸಹ ಕುಪ್ಪಸವನ್ನು ಹಾಕಬಾರದು ಎಂದು ಆ ಕಾಲದಲ್ಲೇ ಇಟ್ಟಿದ್ದ ಜಾತೀಯ ನಿಯಮ ಅದರಂತೆ ಆಗಿನಿಂದಲೇ ನನ್ನ ವಯಸ್ಸಿನಲ್ಲಿ ಮದುವೆ ಮಾಡಿಕೊಂಡು ಬಂದವರು ಇಂದಿನವರೆಗೆ ಕುಪ್ಪಸವನ್ನು ಹಾಕಿಲ್ಲ" (ಅದೇ, ಪು. ೫೨) ಎಂದು ನೋವಿನಿಂದ ಹೇಳುವುದನ್ನು ಕಾಣಬಹುದು ಒಬ್ಬ ದಲಿತಳಾದವಳು ಕುಪ್ಪಸವನ್ನು ಸಹ ತನ್ನ ಇಚ್ಛೆಯಂತೆ ಹಾಕಲು ಹಕ್ಕಿಲ್ಲ ಎಂಬ ಜಾತಿಯ ದಾರುಣ ಶೋಷಣೆ ಹೇಗೆಲ್ಲಾ ಕೆಲಸ ಮಾಡುತ್ತಿದೆ ಎಂಬುದನ್ನು ಊಹಿಸಬಹುದು.

ಕೂಲಿ ಕೆಲಸಗಾರರು: ಲೇಖಕರು ತಿಳಿಸುವಂತೆ ಪೊಂಗಲ್ (ಸಂಕ್ರಾಂತಿ) ಹಬ್ಬವನ್ನು ವೈಭವದಿಂದ ಆಚರಿಸುವಂತೆ ಕಾಣಿಸುತ್ತದೆ. ಅದರಲ್ಲೂ ಕೂಲಿ ಕೆಲಸಗಾರರು ರಾತ್ರಿಯ ಹೊತ್ತು ತುಂಬಾ ಸಮಯ ನಿದ್ದೆ ಮಾಡದೆ ಹಲವು ಕರಕುಶಲ ವಸ್ತುಗಳನ್ನು ಮಾಡುತ್ತಿದ್ದನ್ನು ದಾಖಲಿಸುತ್ತಾರೆ. ತಾಳೆಗರೆ, ತೆಂಗಿನ ಗರೆ ಮುಂತಾದವುಗಳಿಂದ ಹಲವು ವಿಧವಾದ ವಸ್ತುಗಳನ್ನು ತಯಾರಿಸಿ ತಮ್ಮ ಯಜಮಾನರಿಗೆ ನೀಡುತ್ತಿದ್ದುದ್ದನ್ನು ಕಾಣಬಹುದು. "ನಮ್ಮ ಅಯ್ಯೊ ಮನೆಗೆ ಪುಟ್ಟಿ ಮಾಡುತ್ತಿದ್ದೇನೆ ನಮ್ಮ ಚಿನ್ನಯ್ಯ ಮನೆಗೆ ಚಾಪೆ ಹೆಣ್ಣೆಯುತ್ತಿದ್ದೇನೆ" ಎಂದು ಹೇಳಿ ರಾತ್ರಿ ಕೆಲಸ ಮಾಡುತ್ತಿದ್ದರು. ಪೊಂಗಲ್ ದಿನದಂದು ಒಂದು ತಿಂಗಳ ಕಾಲ ಮಾಡಿಟ್ಟ, ಚಾಪೆ, ಪುಟ್ಟಿ, ಧಾನ್ಯ ಸಂಗ್ರಹಿಸುವ ಕಣಜ ಮುಂತಾದವುಗಳನ್ನು ಅವರವರ ಅಯ್ಯ ಮನೆಗೆ ನೀಡಿ ಅವರು ಕೊಡುವ ಹಣ, ಹೊಸಲುಂಗಿ, ಸೀರೆ, ಟವಲು ಇದರ ಜೊತೆ ಪೊಂಗ (ಸಿಹಿ) ಊಟವನ್ನು ತರುತ್ತಾರೆ" (ಅದೇ, ಪು. ೫೩) ಒಂದು ತಿಂಗಳ ಇವರ ಶ್ರಮವು ಒಂದು

ದಿನ ಸಿಗುವ ಅನ್ನಕ್ಕಾಗಿ ಸೀರೆ, ಲುಂಗಿಗೆ ಸಮವಾಗಿರುವುದನ್ನು ಕಾಣಬಹುದು. ಇದಲ್ಲದೆ ಎಲ್ಲಾ ಪರ್ಯೆಯರ ಮನೆಗೂ ಒಂದೊಂದು ಯಜಮಾನರ ಮನೆ ಇರುತ್ತದೆ. ಪರ್ಯೆಯರು 'ನಮ್ಮ ಐಯ್ಯ' ಮನೆ ಸಂತೋಷಿಸಿ ಸಂಭ್ರಮಿಸುವುದೂ ಉಂಟು.

"ಕಾಲನಿಯ ಒಂದೊಂದು ಪರ್ಯೆಯ ಮನೆಯವರೆಗೂ ಸಕ್ಕಲಿಯ ಮನೆಯವರಿಗೂ ಮೇಲ್ಜಾತಿಯರು ಒಂದು ಯಜಮಾನರ ಮನೆ ಇರುತ್ತದೆ 'ನಮ್ಮ ಐಯ್ಯ ಮನೆ, ಡಿಯ್ಯೊ ಮನೆ' ಎಂದು ಹೇಳದ ದಿನಗಳು ಇರುವುದಿಲ್ಲ ಇದೂ ಸಹ ಒಂದು ವಿಧವಾದ ಗುಲಾಮ ತನದ ರೀತಿ ಎಂದು ಈಗ ನೆನೆಸಿಕೊಳ್ಳುತ್ತೇನೆ. ನಮ್ಮ ದೊಡ್ಡಮ್ಮ ನನ್ನ ಬಳಿ ಚಾಪೆ, ಹೊಸ ತಾಳೆಯೋಲೆಯ ಬುಟ್ಟಿ, ಒಂದು ಹಳೆಯ ಬುಟ್ಟಿಯನ್ನು ನೀಡಿ 'ಹುಣಸೆ ಮರಗಳು ಇರುವ ಕಾಲುವೆ ಪಕ್ಕ ನಮ್ಮ ಐಯ್ಯೊ ಮನೆ ಯಾರೆಂದು ಕೇಳಿದರೆ ಅರುಳಾಯ ತಂಗಿ ಮಗ ಎಂದು ಹೇಳು, ಅವರು ಈ ಹಳೆಯ ಬುಟ್ಟಿಯಲ್ಲಿ ಸಿಹಿ ಅನ್ನ ಹಾಕುತ್ತಾರೆ. ಅದನ್ನು ತಗೊಂಡು ಈ ಹೊಸ ಬುಟ್ಟಿ, ಚಾಪೆಗಳನ್ನು ಅವರ ಬಳಿ ನೀಡಿ ಬಂದುಬಿಡು" ಎಂದು ಹೇಳಿ ಕಳುಹಿಸುತ್ತಾರೆ (ಅದೇ, ಪು. ೫೪) ಎಂದು ಹೇಳುತ್ತಾ ಗುಲಾಮತನ ಎಷ್ಟರ ಮಟ್ಟಿಗೆ ಬೇರೂರಿದೆ ಎಂದು ತಿಳಿಸುತ್ತಾ ಈ ರೀತಿಯ ಹೊಸ ಭಾಷೆ ಬುಟ್ಟಿಯನ್ನು ಅವರವರ ಯಜಮಾನರಿಗೆ ನೀಡುವುದು ಸಹ ಜನರ ಶ್ರಮವನ್ನು ದೋಚುವ ಸಂಗತಿಯಾಗಿದೆ.

ಬೀದಿಯೊಳಗೆ ಪ್ರವೇಶಕ್ಕೆ ರದ್ದು: ಗುಣಶೇಖರನ್‌ರ ಚಿಕ್ಕಪ್ಪನ ಮದುವೆಯ ನಂತರ ಸೇತ್ತೂರಿನಿಂದ ಎತ್ತಿನ ಗಾಡಿಯಲ್ಲಿ ಮಾರಂದೈಗೆ ಬರುತ್ತಾರೆ. ಸಂತೋಷವಾಗಿ ಸಂಭ್ರಮದಿಂದ ಇದ್ದ ಗುಂಪು ಊರು ಸಮೀಪಿಸಿದಂತೆ ಮೌನ ತಾಳುತ್ತಾರೆ. ಅವರ ಮುಖಗಳಲ್ಲಿ ಎಚ್ಚರಿಕೆ ಬಂದಂತೆ ಕಾಣಿಸಿತು. ಎದುರು ನೋಡಿದಂತೆ ಊರಿನೊಳಗೆ ಪ್ರವೇಶಿಸದಂತೆ ಕೋನಾರು ಜನರು ಎತ್ತಿನ ಬಂಡಿ ಹೋಗುವ ದಾರಿಯನ್ನು ಬಿಡದೆ ಅಡ್ಡವಾಗಿ ನಿಂತರು. ಇದಕ್ಕೆ ಲೇಖಕರ ಅಜ್ಜ ಬೇಗ ಹೋಗಿ ಕೇಳುತ್ತಾರೆ "ಏನ್ರಿ ಅಯ್ಯೋ ಮಂತ್ರಿ ಮಗಳ ಸಂಬಂಧ ನಮ್ಮ ಊರಿಗೆ ಬರುವಾಗ ಮರ್ಯಾದೆಯಿಂದ ಕರೆತರಬೇಕೆಂದು ಎತ್ತಿನ ಬಂಡಿಯಲ್ಲಿ ಹೆಣ್ಣನ್ನು ಮದು ಮಗನನ್ನು ಕರೆದುಕೊಂಡು ಬರುತ್ತಿದ್ದೇವೆ ಇಬ್ಬರೂ ಶಿಕ್ಷಕ ವೃತ್ತಿಗೆ ಓದಿದವರು ಇವರು ಗಾಡಿಯಲ್ಲಿ ಹೋಗಬಾರದೇ?" (ಅದೇ, ಪು. ೮೪) ಎಂದು ಅಂಗಾಚಿದಾಗ ಅದಕ್ಕೆ

"ಗಾಡಿ ಹೋಗಲಿ ಕರುಪ್ಪಾ..... ನಿಮ್ಮ ವಾಸಸ್ಥಳಕ್ಕೆ ಬೇರೆ ದಾರಿಯಲ್ಲಿ ಹೋಗಲಿ. ಇದು ನಮ್ಮ ಬೀದಿಯ ಮೂಲಕ ಹೋಗುವ ದಾರಿ ಎಂದು ನಿನಗೆ ತಿಳಿಯದೆ? ಎಂದು ಕೇಳಲು ಹೌದಯ್ಯ! ಈ ದಾರಿಯಲ್ಲೇ? ನಿಮ್ಮ ಜನಗಳು ಗಾಡಿಯಲ್ಲಿ ಹತ್ತಿಸಿಕೊಂಡು ನಾವು ಗಾಡಿ ಓಡಿಸಿಕೊಂಡು ಹೋಗಲಿಲ್ಲವೇ? ಎಂದು ಕೇಳಲು ಅವರು 'ಇಲ್ಲಿ ನೋಡು ಕರುಪ್ಪಾ, ಉಲ್ಟಾ ಪಲ್ಟಾ ಮಾತಾಡಬೇಡ! ನಮ್ಮ ವಾಸಸ್ಥಳದ ದಾರಿಯಲ್ಲಿ ನಾವು ಹೋಗಬಹುದು ನಿಮ್ಮ ಜನರು ಒಯ್ಯಾರವಾಗಿ ಗಾಡಿಯೊಳಗೆ ಕುಳಿತು ಹೋಗುತ್ತಾರೆ. ನಾವು ಅದನ್ನು ನೋಡಬೇಕು ಎಂದು ಹೇಳುತ್ತಿಯ? ಹೆಚ್ಚು ಮಾತು ಬೇಡ ಮಾತಾಡದೇ ಎತ್ತಿನ ಗಾಡಿಯನ್ನು ತೆಗೆದುಕೊಂಡು

ಬರೆ ದಾರಿ ನೋಡಿಕೊಂಡು ಹೋಗಿಬಿಡು" (ಅದೇ, ಪು. ೮೪) ಎಂದು ನಡೆಯುವ ದಾರಿಗೂ ಅಡ್ಡ ಬರುವುದನ್ನು ನೋಡಬಹುದು ಮುಂದುವರೆದು 'ಓದಿ ಬಿಟ್ಟರೆ ಜಾತಿ ಇಲ್ಲದೆ ಆಗಿ ಬಿಡುತ್ತಿದೆಯೊ? ನಾಲ್ಕು ಅಕ್ಷರ ಕಲಿತ ಕೂಡಲೇ ಗ್ರಾಮದಲ್ಲಿ ಇದ್ದೇನೆ ಎಂಬುದನ್ನು ಮರಿತಿದ್ದೀರಾ? ಎಂದು ಮುಂದುವರೆಯುವ ಸಂಭಾಷಣೆಗಳು ದಲಿತರು ಮೇಲ್ಜಾತಿಯ ಬೀದಿಗಳಲ್ಲಿ ನಡೆದರೆ ಪಾಪ ಎಂಬಂತೆ ನೋಡುವ ಮೇಲ್ಜಾತಿಯ ಮನಸ್ಥಿತಿಯನ್ನು ಕಾಣಬಹುದು.

ದಲಿತ ಆತ್ಮಕಥೆ ಮತ್ತು ಕ್ರೈಸ್ತ ಮತ: 'ಕರುಕ್ಕು' ಆತ್ಮಕಥೆಯಲ್ಲಿ ಕ್ರೈಸ್ತ ಮತದಲ್ಲಿ ನಡೆಯುವ ಸಂಚನ್ನು ತಿಳಿಸುತ್ತದೆ. ಬಾಮರವರು ಶಿಕ್ಷಣ ಪಡೆದು ಶಿಕ್ಷಕಿಯಾಗುವ ಕನಸನ್ನು ಹೊಂದಿರುತ್ತಾರೆ. ಅದೇ ರೀತಿ ಶಿಕ್ಷಣವನ್ನು ಪೂರೈಸುತ್ತಾರೆ. ಆದರೆ ಅವರಿಗೆ ಶಿಕ್ಷಕಿಯಾಗಿ ಕೆಲಸ ಸಿಗುವುದಿಲ್ಲ. ಇವರಿಂದ ದಲಿತ ಕ್ರೈಸ್ತರಿಗೆ ತನ್ನಿಂದ ಆಗುವ ಸಹಾಯ ಮಾಡಲು ಕನ್ಯಾಸ್ತ್ರೀಯಾಗಿ, ಕ್ರೈಸ್ತ ಮಿಷನರಿಯಲ್ಲಿ ಶಿಕ್ಷಕಿಯಾಗಿ ಹೋಗುತ್ತಾರೆ. ಆದರೆ ಕ್ರೈಸ್ತ ಕನ್ಯಾಮಠದಲ್ಲಿರುವ ಕನ್ಯಾಸ್ತ್ರೀಗಳು ಥಾಂಬಿಕವಾಗಿ ಜೀವನ ನಡೆಸುವುದನ್ನು ಕಾಣುತ್ತಾರೆ. ಬಡವರ ದಲಿತ ಕ್ರೈಸ್ತ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುವ ಸ್ಥಿತಿಯನ್ನು ದಾಖಲಿಸುತ್ತಾರೆ ಅಲ್ಲದೆ ಅಲ್ಲಿಯೂ ತಮ್ಮನ್ನು ದಲಿತವಾಗಿ ಕಾಣುವ ಕನ್ಯಾಸ್ತ್ರೀಯರ ನಡುವಿನ ಅಂತರವನ್ನು ನೋಡಬಹುದು. ಇದೆಲ್ಲವನ್ನು ಕಂಡ ಬಾಮಾರವರಿಗೆ ಅದರಿಂದ ವಿರಕ್ತಿ ಹೊಂದಿ ಆ ಮಠದಿಂದ ಹೊರ ಬರುತ್ತಾರೆ.

ವಡುವಿನಲ್ಲೂ ಮುಂತಾದವರಿಂದ ಹಿಂದೂ ಧರ್ಮದಲ್ಲಿನ ಕ್ರೂರ ಜಾತಿ ಶೋಷಣೆಯಿಂದ ಸ್ವಲ್ಪ ಮಟ್ಟಿಗಾದರೂ ಪ್ರಯೋಜನ ಹೊಂದಬಹುದು ಎಂದು ಅಭಿಪ್ರಾಯ ಪಡುತ್ತಾರೆ. "ಕ್ರೈಸ್ತ ಧರ್ಮದಲ್ಲಿ ಸೇರಿಬಿಟ್ಟರೆ ಕೀರನೂರನಂತಹ ಅತೀ ಮೋಸವಾದ ಜಾತಿ ಆವೇಶ ಹೊಂದಿರುವ ಗ್ರಾಮದಲ್ಲಿ ತಪ್ಪಿಸಿಕೊಂಡು ಓದಿ ದೊಡ್ಡವರಾಗುವ ಅವಕಾಶವೂ ಸಿಗುತ್ತದೆ ಎಂದು ಆಗಾಗ್ಗೆ ನೆನೆಸಿಕೊಳ್ಳುತ್ತೇನೆ" (ಕೆ.ಎ. ಗುಣಶೇಖರನ್, ವಡು, ಪು. ೭೩) ಎಂದು ಹೇಳುವಾಗ ಕೀರನೂರ್ ಗ್ರಾಮದಲ್ಲಿದ್ದ ಕ್ರೂರ ಜಾತಿ ಪದ್ಧತಿಯ ಆಚರಣೆಯನ್ನು ಕಾಣಬಹುದು ಮತ್ತು ಈ ಆಚರಣೆಯಿಂದ ತಪ್ಪಿಸಿಕೊಳ್ಳಲು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿ ಪ್ರಯೋಜನ ಪಡೆಯಬಹುದೆಂದು ತಿಳಿಸುತ್ತಾರೆ.

ಆತ್ಮಕಥೆಯಲ್ಲಿ ವ್ಯಕ್ತಗೊಂಡಿರುವ ದಲಿತ ಪ್ರಜ್ಞೆ

ಒಮ್ಮೆ ಕಾಲೇಜಿನಲ್ಲಿ ನಡೆದ ಹಾಡಿನ ಸ್ಪರ್ಧೆಯಲ್ಲಿ ಬರಹಗಾರರು ಸ್ಪರ್ಧಿಸಿದಾಗ ಇತರೆ ಜಾತಿಯವರು ಗುಣಶೇಖರನ್‌ರನ್ನು ಹಾಡಲು ಅನುಮತಿ ನೀಡಬಾರದು ಎಂದು ವಿರೋಧಿಸುತ್ತಾರೆ. ಆದರೆ ಅದು ಯಾವುದನ್ನು ಲೆಕ್ಕಿಸದೇ ಲೇಖಕರು ಹಾಡಲು ಪ್ರಾರಂಭಿಸುತ್ತಾರೆ.

"ತೀರ್ಥ ದಡದಲ್ಲಿ ದಕ್ಷಿಣ ಮೂಲೆಯಲ್ಲಿ" ಎಂದು ಭಾರತಿಯರು ಹಾಡನ್ನು ತುಂಬಾ ಸುಂದರವಾಗಿ ತಾಳ ತಪ್ಪದೇ ಹಾಡಿದರು ಗದ್ದಲ ಸದ್ದು ಎಲ್ಲವೂ ಕೆಲವು ಕ್ಷಣಗಳಲ್ಲಿ ನಿಂತಿತು. ಜಾತಿಯನ್ನು ಹಿಂದೆ ಸರಿಸಿ ನನ್ನ ಹಾಡಿನ ಟ್ಯಾಲೆಂಟ್‌ನ್ನು ಎಲ್ಲರೂ ಹೊಗಳಿದರು ಆ

ದಿನವನ್ನು ಹಲವು ಬಾರಿ ಜ್ಞಾಪಿಸಿಕೊಳ್ಳುತ್ತೇನೆ" (ವಡು, ಪು. ೯೬) ಎಂದು ವಿರೋಧದ ನಡುವೆಯು ಸ್ವ ಟ್ಯಾಲೆಂಟ್‌ನಿಂದ ಹೊಗಳಿಸಿಕೊಂಡದ್ದು ದಲಿತ ಪ್ರಜ್ಞೆಯನ್ನು ಚಿತ್ರಿಸುತ್ತದೆ. ಕ್ಷಮಾಪಣೆ ಕೋರಿ ಗುಣಶೇಖರನ್‌ಗೆ ಪತ್ರ ಬರೆದದ್ದನ್ನು ನೋಡಬಹುದು. "ನಿನ್ನ ಬಳಿ ಇಷ್ಟು ಟ್ಯಾಲೆಂಟ್ ಇರುವುದನ್ನು ತಿಳಿಯದೆ ನಿನ್ನ ಜಾತಿಯೊಂದನ್ನು ನೆನಪಿನಲ್ಲಿಟ್ಟುಕೊಂಡು ನಿನ್ನನ್ನು ತಪ್ಪಾಗಿ ತೀರ್ಮಾನಿಸಿಬಿಟ್ಟೆ" (ಅದೇ ಪು. ೯೭) ಎಂದು ಪತ್ರದಲ್ಲಿ ಬರೆದಿರುವುದು ಈ ಕಾಲದಲ್ಲಿ ಎಲ್ಲಾ ಜನರು ಕಲಿಯುವ ತಿಳಿಯುವ ಅಂಶವಾಗಿದೆ.

ಒಟ್ಟಾರೆ ತಮಿಳು-ಕನ್ನಡ ಸಾಹಿತ್ಯ ಕೃತಿಗಳಲ್ಲಿ ದಲಿತ ಬದುಕಿನ ಘೋರ ಚಿತ್ರಣಗಳ ಜೊತೆಗೆ ಅವರು ಅನುಭವಿಸಿದ ನೋವಿನ ಪರಿಸ್ಥಿತಿಗಳನ್ನು ದಾಖಲಿಸಲಾಗಿದೆ. ಅದರಲ್ಲಿಯೂ ದಲಿತ ಆತ್ಮಕತೆಗಳಾದ ವಡು ಮತ್ತು ಕರುಕ್ಕು ವಿಭಿನ್ನ ರೀತಿಯ ನಿರೂಪಣಾ ಮಾದರಿಯಲ್ಲಿ ಮೂಡಿಬಂದಿದ್ದರೂ ಆತ್ಮಕತೆಗಳಲ್ಲಿರುವ ದಲಿತ ಚಿಂತನೆ ನೋವು ಒಂದೇ ಆಗಿದೆ. ಧಾರ್ಮಿಕವಾಗಿ, ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಸಮಾಜದಲ್ಲಿ ಅಸ್ಪೃಶ್ಯರು ಅನುಭವಿಸುವ ಸಂಕಷ್ಟಗಳು ಹಾಗೇ ಅವರು ಎದುರಿಸುವ ಸವಾಲುಗಳನ್ನು ಚಿತ್ರಿಸಿವೆ. ಇಲ್ಲಿ ಲೇಖಕರು ಕೇವಲ ತಮ್ಮ ಅನುಭವವನ್ನು ಮಾತ್ರ ಹಂಚಿಕೊಳ್ಳದೆ ಅವರ ತಂದೆ-ತಾಯಿ, ಅಜ್ಜಿ-ತಾತ, ಅಣ್ಣ ಮುಂತಾದ ಸಂಬಂಧಗಳ ಬಗ್ಗೆ ತಿಳಿಸುತ್ತಾ ಅವರು ಅನುಭವಿಸಿದ ನೋವುಗಳನ್ನು ತಿಳಿಸುತ್ತಾರೆ. ಗಂಡಾಗಿದ್ದರೂ, ಹೆಣ್ಣಾಗಿದ್ದರೂ ದಲಿತರನ್ನು ಎಲ್ಲಾ ಕ್ಷೇತ್ರಗಳಲ್ಲೂ ಜಾತಿ ಶೋಷಣೆಯನ್ನು ಮಾಡುವ ಅಮಾನವೀಯ ಕೃತ್ಯಗಳನ್ನು ಸಾಹಿತ್ಯ ಕೃತಿಗಳ ಮೂಲಕ ತಿಳಿಯಬಹುದು.

ಶಾಲೆಗಳಲ್ಲಿ ದಲಿತ ವಿದ್ಯಾರ್ಥಿಗಳನ್ನು ದೂರವಿಡುವುದು, ಉನ್ನತ ಹುದ್ದೆಯಲ್ಲಿದ್ದರೂ ಮರ್ಯಾದೆ ಇಲ್ಲದೆ ನೋಡುವುದು, ಗ್ರಾಮಗಳಲ್ಲಿ ಕುಡಿಯುವ ನೀರು ಕೊಡಲು ನಿರಾಕರಿಸುವುದು, ಬೇರೆ ಜಾತಿಯವರು ಸಹಾಯ ಮಾಡುವುದನ್ನು ತಡೆಯುವುದು, ಅಂತರ್‌ಜಾತಿ ವಿವಾಹವಾದರೆ ದಲಿತರ (ಹೆಣ್ಣಾಗಿರಲಿ, ಗಂಡಾಗಿರಲಿ) ಜೀವ ತೆಗೆಯುವುದು, ರಸ್ತೆಗಳಲ್ಲಿ ಓಡಾಡಲು ತಡೆ ಹಿಡಿಯುವುದು, ಮೇಲ್ಜಾತಿಯವರನ್ನು ಮುಟ್ಟಿದರೆ ಶಿಕ್ಷೆ ನೀಡುವುದು, ಮತಾಂತರವಾದರೂ ದಲಿತರು ದಲಿತರಾಗಿಯೇ ಕಾಣುವುದು, ದಲಿತ ಸ್ತ್ರೀಯರನ್ನು ಕೀಳಾಗಿ ಕಾಣುವುದು ಮುಂತಾದ ದಲಿತರು ಅನುಭವಿಸುವ ಸಮಸ್ಯೆಗಳನ್ನು ಲೇಖಕರು ದಾಖಲಿಸುತ್ತಾರೆ. ಈ ಸಮಸ್ಯೆಗಳ ನಡುವೆ ತಮ್ಮ ಸ್ವಜಾತಿಯ ಭಾವನೆಗಳನ್ನು, ಗುರುತುಗಳನ್ನು ಕೀಳು ಮನೋಭಾವನೆ ಇಲ್ಲದೆ ದಾಖಲಿಸಿವೆ.

ತೌಲನಿಕ ಅಂಶಗಳು

ಹಸಿವು: ಮಾನವನ ಮೂಲಭೂತ ಅವಶ್ಯಕತೆಯಲ್ಲಿ ಆಹಾರವೂ ಒಂದು. ಈ ಆಹಾರ ಸಿಗದೆ ಹಸಿವಿನ ಘೋರ ಮುಖಗಳನ್ನು ಕನ್ನಡ-ತಮಿಳು ದಲಿತ ಆತ್ಮಕತೆಗಳು ಪರಿಚಯಿಸುತ್ತವೆ. ಊರಿನಲ್ಲಿ ನಡೆಯುವ ಮೇಲ್ಜಾತಿಯವರ ಮದುವೆಗಳಲ್ಲಿ ಕೊನೆಯ ಪಂತಿಯಲ್ಲಿ ಸ್ಥಳ ಹಿಡಿದು ಊಟ ಮಾಡುವುದು, ಊಟವನ್ನು ಬಚ್ಚಿಟ್ಟುಕೊಂಡು ಹೊರಗಡೆ ತರುವುದನ್ನು 'ಗೌವರ್ನಮೆಂಟ್ ಬ್ರಾಹ್ಮಣ'ದಲ್ಲಿ ಸಾಹಸದ ಕೆಲಸವಾಗಿ ಚಿತ್ರಿಸಿದರೆ, ಪರೀಕ್ಷೆ ದಿನಗಳಲ್ಲಿ ಹೋಟೆಲ್‌ನಲ್ಲಿ ಹಣ

ಕೊಟ್ಟು ತಿನ್ನಲಾಗದೆ ಬೂಜು ಹಿಡಿದ ಮೂರು ದಿನದ ಹಿಂದಿನ ಪುಳಿಯೊಗರೆಯನ್ನೇ ತಿನ್ನುವ ಚಿತ್ರಣ 'ವಡು'ವಿನಲ್ಲಿ ಕಾಣಬಹುದು.

ಅಸ್ಪೃಶ್ಯತೆ: ಎರಡೂ ಭಾಷೆಯ ಆತ್ಮಕತೆಗಳಲ್ಲಿ ಅಸ್ಪೃಶ್ಯತೆಯ ಕರಾಳ ಅನುಭವವನ್ನು ದಾಖಲಿಸಿದ್ದಾರೆ. 'ಊರು-ಕೇರಿ', 'ಗೌವರ್ನಮೆಂಟ್ ಬ್ರಾಹ್ಮಣ' ಮುಂತಾದ ಆತ್ಮಕತೆಗಳಲ್ಲಿ ಬರುವಂತೆ ಬಾಮಾರವರು ತಮ್ಮ 'ಕರುಕ್ಕು'ನಲ್ಲಿ ಪೊಟ್ಟಣದಲ್ಲಿ ವಡೆಯನ್ನು ಇಟ್ಟುಕೊಂಡು ಹೋಗುವ ಸಂದರ್ಭ, ಗುಣಶೇಖರನು 'ವಡು'ವಿನಲ್ಲಿ ಹೊಲದಲ್ಲಿ ಮೇಲ್ಜಾತಿಯವನನ್ನು ಮುಟ್ಟಿದ್ದಕ್ಕಾಗಿ ಹೊಡೆಸಿಕೊಳ್ಳುವ ಹಲವು ಪ್ರಸಂಗಗಳು ಕಾಣಬಹುದು.

ಮತಾಂತರ: ತಮಿಳು ದಲಿತ ಆತ್ಮಕತೆಗಳು ಮತಾಂತರದ ಕುರಿತು ಪ್ರಬಲವಾಗಿ ಅಂಟಿಕೊಂಡಿದೆ. ಅವರ ಜೀವನವೇ ಕ್ರೈಸ್ತ ಮತದೊಂದಿಗೆ ಕೊಂಡಿಯಂತೆ ಜೀವನದುದ್ದಕ್ಕೂ ಸಾಗುವುದನ್ನು ಕಾಣಬಹುದು. ಗುಣಶೇಖರನ್ ಮತ್ತು ಬಾಮಾ ಇಬ್ಬರೂ ಸಹ ಮತಾಂತರವನ್ನು ಒಪ್ಪಿಕೊಂಡವರು ಮತ್ತು ಅದರಿಂದ ಪ್ರಭಾವಿತರಾದವರು. ಆದರೆ ಕನ್ನಡದ ಮಟ್ಟಿಗಿನ ದಲಿತ ಆತ್ಮಕತೆಗಳು ಮತಾಂತರದ ಕುರಿತ ವಿಷಯವನ್ನು ಗಂಭೀರವಾಗಿ ಪ್ರಕಟಿಸುವುದಿಲ್ಲ.

ಅಂತರ್‌ಜಾತಿ ವಿವಾಹಗಳು: ಪ್ರೀತಿ, ಪ್ರೇಮದ ವಿಚಾರಗಳು ಕನ್ನಡ ಆತ್ಮಕತೆಗಳು ಪ್ರಕಟಿಸಿದಂತೆ ತಮಿಳಿನ ಆತ್ಮಕತೆಗಳಲ್ಲಿ ಕಂಡುಬರುವುದಿಲ್ಲ. ಗುಣಶೇಖರನ್‌ರು ಮೈಕೇಲಮ್ಮ ಮತ್ತು ಅವರ ಅಣ್ಣನ ಕುರಿತು ಪ್ರೇಮ ವಿವಾಹದ ಕಷ್ಟಗಳನ್ನು ತಿಳಿಸುವಾಗ ತಮಿಳು ಆತ್ಮಕತೆಗಳು ಈ ವಿಚಾರದಲ್ಲಿ ಹೆಚ್ಚು ಸಂಪ್ರದಾಯಿಕ ನೆಲೆಯಲ್ಲಿಯೇ ಚಿಂತನೆ ನಡೆಸುವುದನ್ನು ಕಾಣಬಹುದು.

ಕೀಳರಿಮೆ: ದಲಿತರನ್ನು ಕೀಳಾಗಿ ಕಾಣುವ ಪ್ರವೃತ್ತಿ ಎರಡೂ ಭಾಷೆಯ ಆತ್ಮಕತೆಗಳಲ್ಲೂ ಕಂಡುಬರುತ್ತದೆ. ದಲಿತರ ಉನ್ನತ ಹುದ್ದೆ ಪಡೆದರೆ ಅವರಿಗೆ ಗೌರವ ಸಿಗದಿರುವುದು, ದಲಿತರಲ್ಲಿಯೇ ಉದ್ಯೋಗ ಪಡೆದವರನ್ನು ತನ್ನವರಲ್ಲ ಎಂಬಂತೆ ಕಾಣುವುದು, ಶಾಲೆಗಳಲ್ಲಿ ದಲಿತರು ಎಂಬ ಕಾರಣಕ್ಕೆ ಇಲ್ಲದ ತಪ್ಪುಗಳನ್ನು ಹೊರಿಸುವುದನ್ನು ಕಾಣಬಹುದು.

ಬಡತನ: ಎರಡೂ ಆತ್ಮಕತೆಗಳು ಬಡತನದ ನೋವನ್ನು ಅನುಭವಿಸಿವೆ. 'ವಡು'ವಿನಲ್ಲಿ ಲೇಖಕರು ಸೌದೆ ಕಡಿಯುವುದು ಮಾರುವುದು, ಮೀನು ಹಿಡಿದು ಮಾರುವುದು, ಹಬ್ಬ ಹರಿದಿನಗಳಲ್ಲಿ ಎರಡನೇ ದರ್ಜೆಯ ಬಟ್ಟೆಗಳನ್ನು ಕೊಂಡುಕೊಳ್ಳುವುದು ಮುಂತಾದ ಅಂಶಗಳನ್ನು ತಿಳಿಸಿದರೆ 'ಕರುಕ್ಕು'ವಿನಲ್ಲಿ ಲೇಖಕರು ಇನ್ನೊಬ್ಬರ ಮನೆಯಲ್ಲಿ ಕೆಲಸ ಮಾಡುವುದು ಮುಂತಾದ ಅನುಭವವನ್ನು ತಿಳಿಸುತ್ತಾರೆ.

ಒಟ್ಟಾರೆ ತಮಿಳು ದಲಿತ ಆತ್ಮಕತೆಗಳು ಧಾರ್ಮಿಕವಾಗಿ, ಶಿಕ್ಷಣ ಕ್ಷೇತ್ರಗಳಲ್ಲಿ ಮತ್ತು ಸಮಾಜದಲ್ಲಿ ತಲಸ್ಪರ್ಶಿಯರು ಅನುಭವಿಸುವ ಸಂಕಷ್ಟಗಳನ್ನು ಚಿತ್ರಿಸಿವೆ. ಲೇಖಕರು ಮಾತ್ರವಲ್ಲದೆ ಅವರ ತಂದೆ, ತಾಯಿ, ಅಜ್ಜಿ, ತಾತಾ ಮುಂತಾದವರು ಜಾತಿಯ ಶೋಷಣೆಗೆ ಒಳಗಾದ ಸಂದರ್ಭಗಳನ್ನು ನೋವಿನಿಂದ ಹಂಚಿಕೊಳ್ಳುತ್ತಾರೆ. ಗಂಡಾಗಿದ್ದರೂ, ಹೆಣ್ಣಾಗಿದ್ದರೂ ಸಮಾಜ,

ಮತ, ಶಿಕ್ಷಣದ ಕ್ಷೇತ್ರಗಳು ಜಾತಿ ಶೋಷಣೆಯನ್ನು ಮಾಡುವ ಅಮಾನವೀಯ ಕೃತ್ಯವನ್ನು ತಿಳಿಯಬಹುದು.

ಶಾಲೆಗಳಲ್ಲಿ ದಲಿತ ವಿದ್ಯಾರ್ಥಿಗಳನ್ನು ದೂರವಿರಿಸುವುದು, ಉನ್ನತ ಹುದ್ದೆಯಲ್ಲಿದ್ದರೂ ಮರ್ಯಾದೆ ಇಲ್ಲದೆ ನೋಡುವುದು, ಗ್ರಾಮಗಳಲ್ಲಿ ಕುಡಿಯುವ ನೀರು ಕೊಡಲು ನಿರಾಕರಿಸುವುದು, ಬೇರೆ ಜಾತಿಯವರು ಸಹಾಯ ಮಾಡುವುದನ್ನು ತಡೆಯುವುದು, ಅಂತರ್‌ಜಾತಿ ವಿವಾಹವಾದರೆ ದಲಿತರು (ಗಂಡು–ಹೆಣ್ಣು) ಜೀವ ತೆಗೆಯುವುದು, ರಸ್ತೆಗಳಲ್ಲಿ ಓಡಾಡಲು ತಡೆಹಿಡಿಯುವುದು, ದಲಿತರಲ್ಲದವರನ್ನು ಇತರರನ್ನು ಮುಟ್ಟಿದರೆ ಶಿಕ್ಷೆಗೆ ಒಳಗಾಗುವುದು, ಮತಾಂತರ ಹೊಂದಿದರೂ ದಲಿತರಿಗೆ ಉಪಯೋಗವಾಗದ್ದು, ದಲಿತ ಸ್ತ್ರೀಯನ್ನು ಕೀಳಾಗಿ ಕಾಣುವುದು ಮುಂತಾದ ದಲಿತರು ಅನುಭವಿಸುವ ಸಮಸ್ಯೆಗಳನ್ನು ದಲಿತ ಆತ್ಮಕತೆಗಳು ದಾಖಲಿಸಿವೆ.

ಈ ರೀತಿಯ ಸಮಸ್ಯೆಗಳ ನಡುವೆ ತಮ್ಮ ಸ್ವಜಾತಿಯ ಭಾವನೆಗಳನ್ನು, ಗುರುತನ್ನು ಕೀಳು ಮನೋಭಾವನೆ ಇಲ್ಲದೆ ದಾಖಲಿಸಿವೆ. ತಮಿಳಿನ ಎರಡೂ ಆತ್ಮಕತೆಗಳು ಲೇಖಕರು ಅಸ್ಪೃಶ್ಯತೆಯ ನೋವನ್ನು ಅನುಭವಿಸಿದ್ದಾರೆ. ಆ ಶೋಷಣೆಗಳಿಂದ ಒಳಗಾಗಿದ್ದರೂ ತಮ್ಮ ಜೀವನವನ್ನು ಸಂಪೂರ್ಣವಾಗಿ ಕಳೆದುಕೊಳ್ಳದೆ ಜಾತೀಯತೆಯ ವಿರುದ್ಧ, ಮತೀಯತೆಯ, ಸ್ತ್ರೀ ಶೋಷಣೆಯ ವಿರುದ್ಧ ಜಾಗೃತಿ ಹೊಂದಿ ಹೋರಾಟಗಾರರಾಗಿ ತನ್ನ ಜೀವನವನ್ನು ಸಾಧನೆಯ ಮಟ್ಟಕ್ಕೆ ಕೊಂಡೊಯ್ಯುವುದನ್ನು ಕಾಣಬಹುದು.

ಇದರ ಮೂಲಕ ದಲಿತರು ಎಂದಿಗೂ ಯಾವ ಸಂದರ್ಭಗಳಲ್ಲೂ ಸ್ವ–ಗುರುತು ಮರ್ಯಾದೆಯನ್ನು ಹೊಂದಿದವರಂತೆ ಇರಬೇಕೆಂದು ತಮ್ಮ ಆತ್ಮಕತೆಗಳಿಂದ ತಿಳಿದುಕೊಳ್ಳಬಹುದು.

ಅಧ್ಯಾಯ: ಎಂಟು

ಸಮಾರೋಪ

ದಲಿತ ಜಾಗೃತಿಯೆಡೆಗೆ ಪಯಣ

ತಮಿಳು ಸಾಹಿತ್ಯವು ತನ್ನ ಪ್ರಾಚೀನತೆಯನ್ನು ಸಂಗಮ್ ಸಾಹಿತ್ಯದೊಂದಿಗೆ ಗುರುತಿಸಿ ಕೊಳ್ಳುತ್ತದೆ. ಇದರಿಂದ ತಮಿಳು ಸಾಹಿತ್ಯವು ಅತ್ಯಂತ ಪ್ರಾಚೀನ ಕಾಲದ ಸಾಹಿತ್ಯಗಳ ಸಾಲಿನಲ್ಲಿ ನಿಲ್ಲುತ್ತದೆ. ತಮಿಳು ಸಾಹಿತ್ಯಕ್ಕೆ ರಾಜಕೀಯವಾಗಿ, ಪ್ರಾದೇಶಿಕವಾಗಿ, ಧಾರ್ಮಿಕವಾಗಿಯೂ ಮನ್ನಣೆಯಿದೆ. ಸಂಗಮ್ ಸಾಹಿತ್ಯದಿಂದ ಆರಂಭವಾಗಿರುವ ಈ ದ್ರಾವಿಡ ಭಾಷೆಯು ತನ್ನ ದೇಶಿ ನೆಲೆಯ ಚಿಂತನೆಯಿಂದ ಇತರೆ ದ್ರಾವಿಡ ಭಾಷೆಗಳಿಗಿಂತ ಭಿನ್ನವಾದ ಸಾಂಸ್ಕೃತಿಕ ಆಯಾಮಗಳನ್ನು ಹೊಂದಿದೆ. ತಮಿಳು ಸಾಹಿತ್ಯದ ಪ್ರಾಚೀನ ಕಾವ್ಯಗಳಲ್ಲಿ ದಲಿತ ನಾಯಕರುಗಳನ್ನು ಕುರಿತು ಅಲ್ಲಲ್ಲಿನ ಉಲ್ಲೇಖಗಳಿಂದ ದಲಿತರ ಬದುಕಿನ ಸಾಮಾಜಿಕ ಸ್ಥಿತಿಯನ್ನು, ದಲಿತರು ಅನುಭವಿಸಿದ ಅಸ್ಪೃಶ್ಯತೆ, ಅಸಮಾನತೆ ಮುಂತಾದ ವಿವರಗಳನ್ನು ಗುರುತಿಸಬಹುದಾಗಿದೆ. ಇದೇ ರೀತಿಯಾಗಿ ಕನ್ನಡ ಸಾಹಿತ್ಯವು ತನ್ನದೇ ಆದ ಪ್ರಾಚೀನತೆಯನ್ನು ಹೊಂದಿದೆ. ತಮಿಳಿನ 'ಶಿಲಪ್ಪದಿಗಾರಂ' ಕಾವ್ಯದಲ್ಲಿ ವ್ಯಕ್ತವಾಗಿರುವ ನೀಲಗಿರಿಯ ಪ್ರದೇಶದಲ್ಲಿನ ಜನತೆಯ ಸಾಮಾಜಿಕ ಬದುಕಿನ ದಾಖಲೆಗಳನ್ನು ನಾವು ಕಾಣಬಹುದಾಗಿದೆ. ಅಲ್ಲದೆ ಕನ್ನಡ ಸಾಹಿತ್ಯವು ಹೆಚ್ಚು ಜನಪದದ ಮೌಖಿಕತೆಯ ಮೂಲಕವೇ ಗುರುತಿಸಿಕೊಂಡಿದೆ. ಹಾಗಾಗಿ ಜನತೆಯ ಬದುಕಿನ ವಿವರಗಳು ಅಲ್ಲಿ ಹಾಡಿನ ಮೂಲಕ ಹೇಳುವ ಪದ್ಧತಿಯನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗುರುತಿಸಬಹುದಾಗಿದೆ. ಕನ್ನಡ-ತಮಿಳು ಭಾಷೆಗಳಲ್ಲಿ ಪ್ರಾಚೀನ ಕಾವ್ಯಗಳ ಮೂಲಕವೇ ಸಮಾಜದ ಎಲ್ಲಾ ಬಗೆಯ ವಿವರಗಳಿದ್ದವು. ಆಧುನಿಕತೆಯ ಪ್ರವೇಶವಾದಾಗಿನಿಂದ ಸಾಹಿತ್ಯದಲ್ಲಿ ಬದಲಾವಣೆ ಕಾಣಿಸಿಕೊಂಡಿತು. ಇಂಗ್ಲಿಷ್ ಭಾಷೆಯಲ್ಲಿಯ ಮಾದರಿಗಳನ್ನು ದ್ರಾವಿಡ ಭಾಷೆಗಳು ಬಳಸಿಕೊಂಡು ಕತೆ, ಕಾದಂಬರಿ, ನಾಟಕ, ಕವಿತೆ, ಆತ್ಮಕಥೆ, ವಿಮರ್ಶೆ, ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಈ ಎರಡು ಭಾಷೆಗಳು ತಮ್ಮದಾಗಿಸಿಕೊಂಡು ಸಾಹಿತ್ಯವನ್ನು ಹೆಚ್ಚು ಹೆಚ್ಚು ವಿಸ್ತರಿಸಿಕೊಂಡವು. ಪರಿಣಾಮವಾಗಿ ಕಾಲಕಾಲಕ್ಕೆ ಹೊಸಬಗೆಯ ಆಲೋಚನೆಗಳು ಸಾಹಿತ್ಯವನ್ನ ಪ್ರವೇಶ ಮಾಡಿದವು.

'ಕನ್ನಡ–ತಮಿಳು ದಲಿತ ಸಾಹಿತ್ಯ: ತೌಲನಿಕ ಅಧ್ಯಯನ'ವೆಂಬ ಪ್ರಸ್ತುತ ಸಂಶೋಧನಾ ಮಹಾ ಪ್ರಬಂಧದಲ್ಲಿ ದ್ರಾವಿಡ ಭಾಷೆಗಳಾದ ಕನ್ನಡ ಮತ್ತು ತಮಿಳು ಭಾಷೆಯ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವ 'ದಲಿತತ್ವ'ದ ನೆಲೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಮುಖ್ಯವಾಗಿ ಎರಡೂ ಭಾಷೆಗಳಲ್ಲಿ ದಲಿತ ಸಾಹಿತ್ಯದ ಉಗಮ, ವಿಕಾಸ, ಬೆಳವಣಿಗೆ, ಪ್ರೇರಣೆ ಮತ್ತು ಪ್ರಭಾವಗಳನ್ನು ತಿಳಿಸಲಾಗಿದೆ. ಭಾರತೀಯ ಭಾಷೆಗಳಲ್ಲಿ ಮೊದಲು ದಲಿತ ಚಿಂತನೆಗಳು ಆರಂಭವಾಗಿದ್ದು ಮರಾಠಿಯಲ್ಲಿ. ಕಾರಣ ಸ್ವಾತಂತ್ರ್ಯ ನಂತರ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳು ಅಲ್ಲಿನ ದಲಿತರಿಗೆ ಬಹುಬೇಗ ತಲುಪಿದವು. ಅಲ್ಲದೆ ಅಂಬೇಡ್ಕರ್‌ರವರು ಮಹಾರಾಷ್ಟ್ರದಲ್ಲಿ ದಲಿತ ಸಂಘಟನೆಗಳನ್ನು, ಕಾರ್ಮಿಕ ಸಂಘಟನೆಗಳನ್ನು, ದಲಿತ ಜಾಗೃತಿ ವೇದಿಕೆಗಳನ್ನು ಸ್ಥಾಪಿಸುವುದರ ಮೂಲಕ ದಲಿತರ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದರು. ಇದರ ಫಲವಾಗಿ ಮಹಾರಾಷ್ಟ್ರದ ದಲಿತರು ಬಹುಬೇಗನೆ ಅಕ್ಷರಸ್ಥರಾದರು. ಈ ಅಕ್ಷರಸ್ಥರು ದಲಿತರ ಸಾಮಾಜಿಕ ಬದುಕನ್ನು ಸಾಹಿತ್ಯಕ್ಕೆ ಪ್ರವೇಶ ಮಾಡಿಸುವಲ್ಲಿ ಸಫಲರಾದರು. ಕತೆ, ಕಾದಂಬರಿ, ಕವಿತೆ, ನಾಟಕ, ಆತ್ಮಕತೆಗಳಂತಹ ಸಾಹಿತ್ಯ ಪ್ರಕಾರಗಳ ಮೂಲಕ ದಲಿತ ಸಾಹಿತ್ಯ ವಿಸ್ತರಿಸಿಕೊಂಡಿತು. ಮರಾಠಿ ದಲಿತ ಸಾಹಿತ್ಯದ ಪ್ರಭಾವವು ಭಾರತೀಯ ಇತರೆ ಭಾಷೆಗಳಲ್ಲಿ ದಲಿತ ಸಾಹಿತ್ಯ ಮೂಡಿಬರಲು ಪ್ರೇರಣೆಯಾಯಿತು. ಕನ್ನಡ, ತೆಲುಗು, ತಮಿಳು ಮಲಯಾಳಿ, ಹಿಂದಿ, ಗುಜರಾತಿ, ಬಂಗಾಳಿ, ಪಂಜಾಬಿ ಮುಂತಾದ ಭಾಷೆಗಳಲ್ಲಿ ದಲಿತತ್ವದ ಬರಹಗಳು ಆರಂಭವಾದವು. ದಲಿತ ಸಾಹಿತ್ಯವು ಸಾಹಿತ್ಯದ ಒಂದು ಮಾದರಿ ಬರವಣಿಗೆಯಾಗಿ ರೂಪಿತಗೊಂಡಿತು.

ದಲಿತ ಸಾಹಿತ್ಯ ಆರಂಭವಾಗಿದ್ದು ಮಹಾರಾಷ್ಟ್ರದಿಂದ. ನಂತರ ಅದು ಕನ್ನಡ, ತೆಲುಗು, ಗುಜರಾತಿ, ತಮಿಳು, ಮಲಯಾಳಂ, ಬಂಗಾಳಿ ಭರವಸೆಗಳಿಗೆ ತನ್ನ ಚಿಂತನೆಗಳನ್ನು ವಿಸ್ತರಿಸಿತು. ದಲಿತ ಸಾಹಿತ್ಯವು ಭಾರತದ ಇತರ ಭಾಷೆಗಳಲ್ಲಿ ಕಾಣಿಸಿಕೊಂಡ ಬಗೆ ಮತ್ತು ಅದರ ಚಿಂತನ ಸ್ವರೂಪವು ಹೇಗೆ ಒಂದು ಪ್ರದೇಶದ ಪರಿಸರದಿಂದ ಮತ್ತೊಂದು ಪ್ರದೇಶದ ಪರಿಸರಕ್ಕೆ ಭಿನ್ನವಾಗಿದೆ ಎನ್ನುವ ಮೂಲ ಅಂಶಗಳನ್ನು ತಿಳಿಯಬಹುದಾಗಿದೆ. ಉದಾ: ಮಹಾರಾಷ್ಟ್ರದಲ್ಲಿ ಮಹಾರ್, ಕರ್ನಾಟಕದಲ್ಲಿ ಹೊಲೆಯ, ಅದೇ ಬಂಗಾಳಿಯಲ್ಲಿ ದಲಿತ ಎನ್ನುವ ಜಾತಿಕೇಂದ್ರಿತ ಚಹರೆಗಳನ್ನು ಗುರುತಿಸಬಹುದು. ಹಾಗೆಯೇ ಶೋಷಣೆಯ ಸಂದರ್ಭಗಳು ಪ್ರಾದೇಶಿಕತೆಗೆ ಅನುಗುಣವಾಗಿ ವಿಭಿನ್ನವಾಗಿರುವುದನ್ನು ಈ ಎರಡು ಭಾಷೆಯ ದಲಿತ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ದಲಿತ ಸಾಹಿತ್ಯವು ಕನ್ನಡದಲ್ಲಿ ೭೦ರ ದಶಕದಲ್ಲಿ ಚಳುವಳಿಯ ಭಾಗವಾಗಿ ಬೆಳೆದು ಬಂದರೆ ತಮಿಳು ನಾಡಿನಲ್ಲಿ ೯೦ರ ದಶಕದಲ್ಲಿ ದಲಿತ ಸಾಹಿತ್ಯವು ಆರಂಭವಾಗಿ ವಿಕಾಸ ಹೊಂದುತ್ತದೆ. ಕನ್ನಡ ಮತ್ತು ತಮಿಳು ದಲಿತ ಸಾಹಿತ್ಯದ ನಡುವೆ ಸುಮಾರು ೨೦ ವರುಷಗಳ ಅಂತರವಿದ್ದರೂ ಕನ್ನಡ ದಲಿತ ಸಾಹಿತ್ಯದಂತೆಯೇ ವಿಕಾಸವನ್ನು ಹೊಂದಿದೆ. ಮುಖ್ಯವಾಗಿ

ಗಮನಿಸಬೇಕಾದ ಸಂಗತಿ ಎಂದರೆ ಕನ್ನಡ ದಲಿತ ಸಾಹಿತ್ಯವು ದಲಿತ ಚಳುವಳಿಯ ಭಾಗವಾಗಿ ರೂಪಿತಗೊಂಡರೆ ತಮಿಳುನಾಡಿನಲ್ಲಿ ದಲಿತರ ಜಾಗೃತಿ ಮತ್ತು ಶಿಕ್ಷಣದಿಂದ ರೂಪಿತವಾಗಿದೆ. ದಲಿತ ಸಾಹಿತ್ಯದ ವಿಕಾಸಕ್ಕೆ ಎರಡು ಭಾಷೆಗಳಲ್ಲಿ ತನ್ನದೇ ಆದ ಪ್ರೇರಣೆ ಮತ್ತು ಪ್ರಭಾವಗಳಿವೆ.

ಕನ್ನಡ ಮತ್ತು ತಮಿಳು ಭಾಷೆಯಲ್ಲಿ ರಚಿತಗೊಂಡಿರುವ ದಲಿತ ಸಾಹಿತ್ಯದಲ್ಲಿ ಮಹಿಳಾ ಶೋಷಣೆ, ಲಿಂಗತಾರತಮ್ಯ, ಅಸಮಾನತೆಯ ವಿರುದ್ಧ ತನ್ನದೇ ಆದ ಹೊಸ ಮಾದರಿಯನ್ನು ಬಳಸಿಕೊಂಡು ಸಾಮಾಜಿಕ ಸಂಗತಿಗಳ ವಿರುದ್ಧ ಧ್ವನಿ ಎತ್ತಿದೆ. ಹೊಸ ಮೌಲ್ಯಗಳನ್ನು ಪ್ರತಿಪಾದಿಸುವ ಈ ಮಹಿಳಾ ಸಾಹಿತ್ಯವು ಒಂದು ಸಂಘಟನಾತ್ಮಕ ನೆಲೆಯಲ್ಲಿ ಗುರುತಿಸಿಕೊಂಡಿದೆ. ಹಾಗಾಗಿ ಇದು ಸ್ತ್ರೀತತ್ವ, ಸ್ತ್ರೀವಾದಿತತ್ವ, ಸ್ತ್ರೀಯಾತ್ಮಕತೆಯೆಂಬ ಮೂರು ಪ್ರಧಾನ ನೆಲೆಯಲ್ಲಿ ಬೆಳವಣಿಗೆ ಹೊಂದಿದೆ. ಸಾಹಿತ್ಯವು ಮಾನವನ ಬದುಕನ್ನು ಪ್ರತಿನಿಧಿಸುವ ಕನ್ನಡಿಯಾಗಿ, ಜೀವನದ ಪ್ರತಿಬಿಂಬವಾಗಿ, ಸಮಾಜದಲ್ಲಿ ಘಟಿಸುವ ಸಂಗತಿಗಳನ್ನು ಓದು ವಲಯಕ್ಕೆ ತನ್ನದೇ ಆದ ವಿಭಿನ್ನ ನೆಲೆಗಳಲ್ಲಿ ಹೊಸ ದೃಷ್ಟಿಕೋನಗಳಲ್ಲಿ ಬರವಣಿಗೆಯ ರೂಪದಲ್ಲಿ ಮೂಡಿಬಂದಿದೆ. ಈ ರೀತಿಯಾಗಿರುವ ಸಾಹಿತ್ಯವು ಪುರುಷ ನೆಲೆಯಿಂದ ಬಿಡಿಸಿಕೊಂಡು ಮಹಿಳಾ ನೆಲೆಯಾಗಿ ರೂಪುಗೊಳ್ಳಲು ತನ್ನದೇ ಆದ ಸಾಮಾಜಿಕ ಒತ್ತಡಗಳೂ ಕಾರಣವಾಗಿವೆ. ಅವುಗಳನ್ನು ಕತೆ, ಕಾವ್ಯ, ಕಾದಂಬರಿ, ನಾಟಕ ಪ್ರಕಾರಗಳಲ್ಲಿ ಮಹಿಳೆಯು ತನ್ನ ಅಸ್ತಿತ್ವವನ್ನು ಬಳಸಿಕೊಂಡು ಅದನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಿಸುವ ಗಟ್ಟಿತನದಲ್ಲಿ ಸಮಾಜದ ಮುಂದೆ ನಿಲ್ಲುವಂತೆ ಮಾಡಿದೆ.

ತಮಿಳು-ಕನ್ನಡ ಭಾಷೆಯಲ್ಲಿ ರೂಪಿತಗೊಂಡಿರುವ ಅದರಲ್ಲೂ ಮುಖ್ಯವಾಗಿ ಆಧುನಿಕ ದಲಿತ ಕಾವ್ಯವನ್ನು ಕೇಂದ್ರವಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ. ಕನ್ನಡ ಮತ್ತು ತಮಿಳು ದ್ರಾವಿಡ ಭಾಷೆಗಳಾದರೂ ಕನ್ನಡ ದಲಿತ ಸಾಹಿತ್ಯ ಮೂಡಿಬಂದು ಸುಮಾರು ೩೦ ವರ್ಷಗಳ ನಂತರ ತಮಿಳಿನಲ್ಲಿ ದಲಿತ ಸಾಹಿತ್ಯದ ವಿಚಾರಗಳು ಚರ್ಚಿತವಾಗುತ್ತವೆ. ತನ್ನದೇ ಆದ ಸಾಮಾಜಿಕ ಸ್ಥಿತಿಗತಿಯ ಒತ್ತಡಗಳಿಗೂ ಸಾಮಾಜಿಕ ಆಯಾಮಗಳಿಗೂ ಕಾರಣವಾಗಿವೆ. ಕನ್ನಡದಲ್ಲಿ ೭೦ರ ದಶಕದಲ್ಲಿದ್ದ ಚಳುವಳಿಗಳ ಸ್ವರೂಪ ತಮಿಳುನಾಡಿನಲ್ಲಿ ಕಂಡು ಬರುವುದಿಲ್ಲ, ಹಾಗಾಗಿ ೯೦ರ ದಶಕದಲ್ಲಿ ತಮಿಳು ದಲಿತ ಸಾಹಿತ್ಯವು ತನ್ನ ವಿಸ್ತಾರವನ್ನು ಹೆಚ್ಚಿಸಿಕೊಂಡಿತು. ಆ ಕಾಲದಲ್ಲಿ ತಮಿಳು ದಲಿತ ಸಾಹಿತ್ಯವು ತನ್ನ ಬರವಣಿಗೆಯನ್ನು ದಲಿತ ಕೇರಿಯ ಕಡೆಗೆ ತಿರುಗಿಸಿತು. ಕನ್ನಡ ಮತ್ತು ತಮಿಳು ದಲಿತ ಸಾಹಿತ್ಯ ಕುರಿತು ಹೀಗೆ ಹೇಳಬಹುದಾದ ಅಂಶವೆಂದರೆ ಕರ್ನಾಟಕದಲ್ಲಿ ದಲಿತ ಸಾಹಿತ್ಯವು ಆರಂಭದಿಂದಲೂ ಹೋರಾಟದೊಂದಿಗೆ ಬೆಳೆದು ಬಂದಿದೆ. ಹೋರಾಟದ ಸಾಮಾಜಿಕ ಅಂಶಗಳು ಸಾಹಿತ್ಯಕ್ಕೆ ಒತ್ತಾಸೆಯಾಗಿ ನಿಂತಿವೆ. ಆದರೆ ತಮಿಳುನಾಡಿನಲ್ಲಿ ಈ ರೀತಿಯ ಪರಿಸ್ಥಿತಿ ಕಂಡು ಬರುವುದಿಲ್ಲ. ಅಲ್ಲಿನ ಸಾಮಾಜಿಕತೆ,

ಧಾರ್ಮಿಕತೆ ಆರ್ಥಿಕತೆಯ ನೆಲೆಗಳು ಭಿನ್ನವಾಗಿವೆ. ಹಾಗಾಗಿ ತಮಿಳುನಾಡಿನ ಸಂಘರ್ಷಮಯ ಇತಿಹಾಸವು ಒಂದು ಪ್ರಮುಖ ಜಾತಿ ಕೇಂದ್ರವಾಗಿ ಇರುವುದು ಕಾಣಬಹುದಾಗಿದೆ.

ದಲಿತ ಕಥಾ ಸಾಹಿತ್ಯವೂ ಪ್ರಮುಖವಾಗಿ ದಲಿತ ಕೇರಿಯ ಸಮಗ್ರ ಚಿತ್ರವನ್ನು ಕತೆ, ಕಾದಂಬರಿ ಮತ್ತು ಆತ್ಮಕಥೆಯಂತಹ ಪ್ರಕಾರಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದೆ. ದಲಿತರು ತಾವು ಅನುಭವಿಸಿದ ನೋವು-ನಲಿವು, ಸುಖ-ದುಃಖ, ಅಪಮಾನ, ನಿಂದನೆ, ಧಾರ್ಮಿಕ ಆಚರಣೆಯಲ್ಲಿ ಶೋಷಣೆ, ಲೈಂಗಿಕ ಕಿರುಕುಳ, ಮಹಿಳಾ ದೌರ್ಜನ್ಯ, ಜಾತಿ ಕೇಂದ್ರಿತ ಅವಮಾನ, ಮತಾಂತರದ ದ್ವಂದ್ವತೆ ನಿಲುವು ಮತ್ತು ಧರ್ಮ ಮುಂತಾದವುಗಳು ಮುಖ್ಯವಾದ ಕಥಾ ವಸ್ತುಗಳಾಗಿವೆ. ಆಧುನಿಕತೆಯ ಪ್ರವೇಶದಿಂದಾಗಿ ದಲಿತರಲ್ಲಿನ ಬದಲಾವಣೆಗಳು ಮೇಲ್ವರ್ಗದ ಜನರಲ್ಲಿ ಅಸಹನೆಯನ್ನುಂಟು ಮಾಡಿವೆ. ಆ ಕಾರಣದಿಂದಾಗಿ ದಲಿತರ ಮೇಲೆ ನಿರಂತರ ಶೋಷಣೆಯನ್ನು ಮಾಡುವ ಜನತೆಯ ಮಾನಸಿಕ ಸ್ಥಿತಿಯನ್ನು ದಲಿತ ಸಾಹಿತ್ಯ ತನ್ನ ಬರವಣಿಗೆಯಲ್ಲಿ ವ್ಯಕ್ತಪಡಿಸಿದೆ. ಈ ರೀತಿಯಾದ ಮಾನಸಿಕ ಸ್ಥಿತಿಯ ಹಿಂದಿರುವ ಸಾಮಾಜಿಕ, ಧಾರ್ಮಿಕತೆಯಂತಹ ಸಂಸ್ಥೆಗಳು ತಾತ್ವಿಕ ನಿಲುವುಗಳನ್ನು ಹಾಗೂ ದಲಿತ ಸಾಹಿತ್ಯವು ಪ್ರತಿರೋಧಿಸುವ, ಪ್ರಶ್ನೆ ಮಾಡುವ, ದಲಿತತ್ವದ ನೆಲೆಯಲ್ಲಿ ಆಲೋಚನೆ ಮಾಡುವಂತೆ ಸೈದ್ಧಾಂತಿಕ ನೆಲೆಗಟ್ಟನ್ನು ರೂಪಿಸಿದೆ. ದಲಿತ ಕಥಾ ಸಾಹಿತ್ಯವು ತಳ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಮುರಿದು ಕಟ್ಟುವ ಆಶಯವನ್ನು ಹೊಂದಿದೆ. ಹಾಗಾಗಿ ತಮ್ಮ ಮೌನದ ಪ್ರತಿಭಟನೆಯನ್ನು ಅಕ್ಷರ ಮಾಧ್ಯಮದ ಮೂಲಕ ಹೊರ ಹಾಕುತ್ತ ಜನತೆಯಲ್ಲಿ ಸಾಮುದಾಯಿಕ ಪ್ರಜ್ಞೆಯನ್ನು ಬೆಳೆಸುವ ಕಾರ್ಯ ಮಾಡುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಪ್ರತಿಯೊಂದು ಜ್ಞಾನ ಶಾಖೆಯಲ್ಲಿಯೂ ಚರ್ಚಿಸುವ ವಿಷಯವಾಗಿ ದಲಿತತ್ವ ಇರುತ್ತದೆ. ಅನಾದಿ ಕಾಲದಿಂದಲೂ ಮೇಲ್ಜಾತಿಯವರಿಂದ ಎಲ್ಲಾ ರೀತಿಯಲ್ಲೂ ಶೋಷಣೆಗೆ ಒಳಗಾದ ದಲಿತರು, ಬಿಡುಗಡೆ ಹೊಂದಬೇಕೆಂದು ಬಯಸುವ ದಲಿತತ್ವ ಒಂದು ಚಳವಳಿಯಾಗಿ ರೂಪುಗೊಂಡಿದೆ. ಸಂಪ್ರದಾಯವನ್ನು ಮೀರುವುದು, ಸಮಾನತೆ, ಜಾಗೃತಿ, ಸಂಸ್ಕೃತಿ, ರಾಜಕೀಯ, ಧಾರ್ಮಿಕ, ಆರ್ಥಿಕವಾಗಿ ಬಿಡುಗಡೆ ಹೊಂದುವುದು ಈ ದಲಿತತ್ವದ ಉದ್ದೇಶವಾಗಿದೆ. ಈ ಉದ್ದೇಶವನ್ನು ಕನ್ನಡ-ತಮಿಳು ದಲಿತ ಸಾಹಿತ್ಯ ದಾಖಲಿಸುತ್ತದೆ. ಆರಂಭದಲ್ಲಿ ಆವೇಶದಿಂದ ಮೂಡಿ ಬಂದ ದಲಿತ ಸಾಹಿತ್ಯ 'ಹಸಿವಿನಿಂದ ಸತ್ತವರು ಸೈಜುಕಲ್ಲು ಹೊತ್ತವರು' ಎಂದು ತನ್ನ ಜನರು ಪಟ್ಟ ಬಡತನ, ಶೋಷಣೆ, ದಬ್ಬಾಳಿಕೆ, ಅಸ್ಪೃಶ್ಯತೆಯನ್ನು ತಿಳಿಸಿ ನಂತರ ಸಮಾನತೆಯನ್ನು ಬಯಸುತ್ತದೆ. 'ದಲಿತರು ಬರುವರು ದಾರಿ ಬಿಡಿ, ದಲಿತರ ಕೈಗೆ ರಾಜ್ಯ ಕೊಡಿ' ಎನ್ನುತ್ತಾ ಶಿಕ್ಷಣ ಪಡೆದ ದಲಿತರು ಜಾಗೃತಿ ಮೂಡಿ ಪಯಣಿಸುವ ಹಂಬಲವನ್ನು ತಿಳಿಯಬಹುದು. ಒಟ್ಟಾರೆ ಜಾಗೃತಿ ಪಡೆದು ವ್ಯವಸ್ಥೆಯ ವಿರುದ್ಧ ಸಿಡಿದೆದ್ದಾಗಲೇ ದಲಿತರು ಮುನ್ನುಗ್ಗಬಹುದೆಂದು ಎರಡೂ ಭಾಷೆಯ ದಲಿತ ಸಾಹಿತ್ಯ ಪಠ್ಯಗಳು ತಿಳಿಸುತ್ತದೆ.

ಅಧ್ಯಯನದ ಫಲಿತಗಳು

* **ಹಸಿವು ಮತ್ತು ಆಹಾರ:** ಮನುಷ್ಯನಿಗೆ ಜೀವಿಸಲು ಬೇಕಾಗುವ ಅವಶ್ಯಕತೆಗಳಲ್ಲಿ ಆಹಾರವು ಒಂದಾಗಿದೆ. ಒಬ್ಬರಿಗೆ ಶ್ರೇಷ್ಠ ಎಂಬ ಆಹಾರವು ಮತ್ತೊಬ್ಬರಿಗೆ ಕನಿಷ್ಟವಾಗಿರುತ್ತದೆ. ಸುಲಭ, ಶೀಘ್ರ ಮತ್ತು ಕಡಿಮೆ ಬೆಲೆಯಲ್ಲಿ ಸಿಗುವ ಆಹಾರವನ್ನು ದಲಿತರು ಸೇವಿಸುವುದನ್ನು ಕಾಣಬಹುದು. ಮಾಂಸಹಾರವನ್ನು ದಲಿತರು ಪ್ರಿಯವಾಗಿ ಸ್ವೀಕರಿಸುವುದನ್ನು ನೋಡಬಹುದು. 'ಮಾಗಿ', 'ಹೊಲಗೇರಿಯ ರಾಜಕುಮಾರ' ಕಾದಂಬರಿಗಳಲ್ಲಿ ಎಮ್ಮೆ, ಕೋಣಗಳನ್ನು ಆಹಾರವಾಗಿ ಸ್ವೀಕರಿಸುವುದನ್ನು ಕಾಣಬಹುದು. ಆಹಾರದ ಜೊತೆಗೆ ಹಸಿವಿನ ಕರಾಳ ಅನುಭವವನ್ನು 'ಒಡಲಾಳ' ಮತ್ತು 'ಕುಸುಮಬಾಲೆ' ಕಾದಂಬರಿಗಳು ಚಿತ್ರಿಸುತ್ತದೆ.

ಸಿದ್ದಲಿಂಗಯ್ಯನವರ 'ನನ್ನ ಜನಗಳು', 'ಬೀಳು', ಮುನಿವೆಂಕಟಪ್ಪನವರ 'ನೀನೆಷ್ಟು ಭಯಂಕರ' ಮುಂತಾದ ಕವಿತೆಗಳು ಗೌರ್ನಮೆಂಟ್ ಬ್ರಾಹ್ಮಣ, ಅಂಲ್ಕೆ ಜನ ಆತ್ಮಕತೆ, ಊರು ಕೇರಿಗಳನ್ನು ಚಿತ್ರಿಸುತ್ತವೆ. ಈ ರೀತಿಯ ಪ್ರಸಂಗಗಳು ತಮಿಳು ದಲಿತ ಸಾಹಿತ್ಯದಲ್ಲಿ ಕಂಡುಬರುತ್ತದೆ. ದನ, ಹಂದಿ, ಮೀನು, ಇಲಿ ಮುಂತಾದ ಪ್ರಾಣಿಗಳು ಸುಲಭ ದರದಲ್ಲಿ ಸಿಗುವುದರಿಂದ ಇವುಗಳನ್ನು ತಿನ್ನುತ್ತಿದ್ದರು ಎಂದು ದಲಿತ ಲೇಖಕರು ದಾಖಲಿಸುತ್ತಾರೆ. ಅದರೊಂದಿಗೆ ರಾಗಿ ಗಂಜಿ, ಹಳೆಯ ಅನ್ನ, ಸಜ್ಜೆ ಗಂಜಿಯನ್ನು ಕುಡಿಯುತ್ತಿದ್ದುದ್ದನ್ನು ತಿಳಿಸುವುದನ್ನು ಕಾಣಬಹುದು.

* **ಮತಾಂತರ** : ಮತಾಂತರ ಕುರಿತ ಚರ್ಚೆಯನ್ನು ಕನ್ನಡ ದಲಿತ ಸಾಹಿತ್ಯ ನವೋದಯ ಮತ್ತು ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯದಲ್ಲಿ ಬರುವಂತೆ ಗಂಭೀರವಾಗಿ ಪರಿಗಣಿಸಿಲ್ಲ. ಮರಣ ಮಂಡಲ ಮಧ್ಯೆದೊಳಗೆ, ಹೊಲಗೇರಿಯ ರಾಜಕುಮಾರ ಕಾದಂಬರಿಗಳಲ್ಲಿ ಮತಾಂತರದ ಪ್ರಸ್ತಾಪ ಸಣ್ಣ ಪ್ರಮಾಣದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ. ಆದರೆ ತಮಿಳು ದಲಿತ ಸಾಹಿತ್ಯದ ಮಟ್ಟಿಗೆ ಮತಾಂತರದ ಪ್ರಕ್ರಿಯೆಯೆ ಗಂಭೀರವಾಗಿ ಪರಿಗಣಿಸಲ್ಪಟ್ಟಿದೆ. ಇದಕ್ಕೆ ಅಲ್ಲಿನ ದಲಿತರ ಮೇಲೆ ವಸಾಹತುಶಾಹಿಯ ನೇರ ಪ್ರಭಾವವೂ ಇರಬಹುದು.

* **ಅಸ್ಪಶ್ಯತೆ:** ಅಸ್ಪೃಶ್ಯತೆಯ ಆಚರಣೆ ಹಲವು ಬಗೆಯಲ್ಲಿ ನಡೆಸಿಕೊಂಡು ಬರುವುದನ್ನು ಕಾಣಬಹುದು. ಮುಟ್ಟಿದರೆ ಅಸ್ಪೃಶ್ಯತೆ, ಮಾತಿನಿಂದ ಕೇವಲವಾಗಿ ನಿಂದಿಸುವುದು, ದೈಹಿಕವಾಗಿ ಅವರ ಉಡುಗೆ–ತೊಡುಗೆಗಳಲ್ಲಿ ಅಸ್ಪೃಶ್ಯತೆಯ ಆಚರಣೆ ನಡೆಸಿಕೊಂಡು ಬರುವುದನ್ನು ಕನ್ನಡ–ತಮಿಳು ದಲಿತ ಸಾಹಿತ್ಯ ಗಂಭೀರವಾಗಿ ದಾಖಲಿಸುತ್ತದೆ. ಅಸ್ಪೃಶ್ಯತೆ ಕರಾಳ ಅನುಭವವನ್ನು ಆತ್ಮಕತೆಗಳು, ನಾಟಕಗಳು, ಹೆಚ್ಚು ಪರಿಣಾಮಕಾರಿಯಾಗಿ ಚಿತ್ರಿಸಿವೆ. 'ಗೌರ್ನಮೆಂಟ್ ಬ್ರಾಹ್ಮಣ', 'ಊರು ಕೇರಿ', 'ಅಂತ್ಯಜನ ಆತ್ಮಕತೆ', ತಮಿಳಿನ 'ವಡು', 'ಕರುಕ್ಕು' ಆತ್ಮಕತೆಗಳು ತಮಗೆ ಆದ ಅಸ್ಪೃಶ್ಯತೆಯ ಅನುಭವವನ್ನು ನೋವಿನೊಂದಿಗೆ ದಾಖಲಿಸುವುದನ್ನು ಕಾಣಬಹುದು. ಬಲಿ ಆಡುಗಳ್, ಪಿನಂ ತಿನ್ನುಂ ಶಾಸ್ತಿರಂಗಲ್ ಮುಂತಾದ ನಾಟಕಗಳು (ಅಸ್ಪೃಶ್ಯತೆಯ ದರ್ಶನ ಮಾಡಿಸುತ್ತದೆ. ದಲಿತ ಕಾವ್ಯವಂತು ಅಸ್ಪೃಶ್ಯತೆ ವಿರುದ್ಧ ಧ್ವನಿಸುವುದನ್ನು ಕಾಣುತ್ತೇವೆ). ಹೊಲಗೇರಿಯ

ರಾಜಕುಮಾರ, ಕುಸುಮಬಾಲೆ, ಮಾಗಿ, ಕಾರ್ಯ, ಒಡಲಾಳ, ತಮಿಳಿನಲ್ಲಿ ಪಳಿಯನ ಕಳಿದಲುಂ, ಕೋವೇರು ಕೆಳುದೈಗಳ್, ತಗಪ್ಪನ್ ಕೊಡಿ ಮುಂತಾದ ಕಾದಂಬರಿಗಳು ಎರಡೂ ಭಾಷೆಯ ಹಲವು ದಲಿತ ಕವನಗಳು, ಸಣ್ಣಕತೆಗಳು ಅಸ್ಪೃಶ್ಯತೆ ಕುರಿತು ತಮಗಾದ ನೋವನ್ನು ತಿಳಿಸುತ್ತಾ ಅದರ ವಿರುದ್ಧ ಗುಡುಗುತ್ತದೆ.

* **ಬಡತನ:** ದಲಿತರ ಜೀವನದಲ್ಲಿ ಒಂದಾಗಿ ಬೆರೆತಿರುವ ಅಂಶವಾಗಿದೆ. ದಲಿತರಲ್ಲದವರು ಇನ್ನಿತರೆ ಉದ್ಯೋಗಗಳನ್ನು ಮಾಡಿಕೊಂಡು ಜೀವನ ನಡೆಸಬಹುದು. ಆದರೆ ದಲಿತ ಇಂತದ್ದೇ ಕೆಲಸ ಹೀಗೆ ಇರಬೇಕು ಎಂಬ ನೀತಿಗಳಿದ್ದವು. ಕನ್ನಡ–ತಮಿಳು ಎರಡೂ ಭಾಷೆಗಳ ದಲಿತ ಸಾಹಿತ್ಯದ ಪಠ್ಯಗಳು ದಲಿತರು ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ ಎಂಬುದನ್ನು ತಿಳಿಸುತ್ತದೆ. ಅತೀ ಕೇವಲವಾದ ವೃತ್ತಿ ಮಾಡುತ್ತಾ ಅಲ್ಪ ಕೂಲಿಯನ್ನು ಪಡೆಯುವ ಶ್ರಮವನ್ನು ಶ್ರೀಮಂತ ವರ್ಗಗಳು ದೋಚುವ ಅಮಾನವೀಯ ಕೃತ್ಯವನ್ನು ದಾಖಲಿಸುತ್ತಾರೆ. ಕನ್ನಡದ ಎಲ್ಲಾ ದಲಿತ ಆತ್ಮಕತೆಗಳು, ಕಾದಂಬರಿಗಳು ಬಡತನದ ಕುರಿತು ಮಾತಾಡುತ್ತದೆ. ತಮಿಳಿನ ದಲಿತ ಪಠ್ಯಗಳು ಸಹ ಬಡತನದ ಮೂಲಕ ತಮ್ಮ ಜೀವನದ ದುರಂತವನ್ನು ತಿಳಿಸಿಕೊಡುತ್ತದೆ. ವಾಸ ಮಾಡಲು ಮನೆ ಇಲ್ಲದೆ, ಉಟ್ಟುಕೊಳ್ಳಲು ಬಟ್ಟೆ ಇಲ್ಲದ ಕಡು ಬಡತನ ಕಂಡುಬರುತ್ತದೆ.

* **ಭಾಷಾ ಬಳಕೆ:** ಕನ್ನಡ–ತಮಿಳು ಎರಡು ಭಾಷೆಗಳ ದಲಿತ ಸಾಹಿತ್ಯ ಬರಹವು ಆಯಾ ಪ್ರದೇಶಗಳ ಆಡು ಮಾತನ್ನು ಬಳಸಿಕೊಂಡಿದೆ. ಸಿದ್ದಲಿಂಗಯ್ಯನವರ ಇಕ್ರಲಾ, ಬಡಿಲ್ಲಾ ಎಂಬ ನುಡಿಗಳಂತೆ ಕುಸುಮಬಾಲೆಯಲ್ಲಿ ಬಳಕೆಯಾಗಿರುವ ಭಾಷೆಯಂತೆ ತಮಿಳಿನಲ್ಲಿ ಶಿಷ್ಟ ಭಾಷೆಯ ಬಳಕೆಯನ್ನು ವಿರೋಧಿಸಿ ದಲಿತ ಭಾಷೆ, ಕೇರಿ ಭಾಷೆಯನ್ನು ಬಳಸಿರುವುದನ್ನು ಕಾಣಬಹುದು. ವಡು, ಕರುಕ್ಕು, ಆತ್ಮಕತೆಗಳಲ್ಲಿ ಲೇಖಕರು ಬಳಸುವ ತೀರ ಆಡು ಮಾತನ್ನೇ ಬರವಣಿಗೆಯಲ್ಲಿ ಬಳಸಿರುವುದನ್ನು ನಾವು ಕಾಣಬಹುದು. ಎರಡು ಭಾಷೆಗಳ ದಲಿತ ಸಾಹಿತ್ಯಕ್ಕೆ ಈ ರೀತಿಯಾದ ಆಡುಮಾತಿನ ಬಳಕೆಯು ಒಂದು ರೀತಿಯಲ್ಲಿ ಶಿಷ್ಟ ಎಂಬ ಭಾಷೆಯ (ಸಂಸ್ಕೃತಿ)ಯನ್ನು ಮೀರುವ ಪ್ರಯತ್ನವೇ ಆಗಿದೆ.

* **ನೈಜ ಘಟನೆಗಳ ಆಧಾರಿದ ಪಠ್ಯಗಳು:** ದಲಿತರ ಮೇಲೆ ಮೇಲ್ವರ್ಗ, ಮೇಲ್ಜಾತಿಯವರು ನಡೆಸಿದ ಶೋಷಣೆ ದಬ್ಬಾಳಿಕೆಯ ಪ್ರಕರಣಗಳನ್ನು ದಲಿತ ಸಾಹಿತ್ಯ ತೀವ್ರವಾಗಿ ಖಂಡಿಸುತ್ತದೆ. ಕನ್ನಡ ದಲಿತ ಸಾಹಿತ್ಯದಲ್ಲಿ ನೈಜ ಘಟನೆಗಳನ್ನು ವಿರೋಧಿಸುವ ಬಗೆಯಲ್ಲಿ ಹೆಚ್ಚು ಕವನಗಳು ಮಾತ್ರ ಕಂಡುಬರುತ್ತದೆ. ಆದರೆ ತಮಿಳಿನಲ್ಲಿ ನೈಜ ಘಟನೆಗಳ ಶೋಷಣೆಯನ್ನು ದಲಿತ ಕವಿಗಳು ಕವನ, ಕತೆ, ನಾಟಕ, ಕಾದಂಬರಿಗಳ ಮೂಲಕ ವಿರೋಧಿಸುತ್ತಾರೆ. ಪಟ್ಟಾಲಿಯವರ 'ಕೀಳೈತ್ತೀ' ಕಾದಂಬರಿಯು ಕೀಳ್‌ವೆಣ್‌ಮಣಿಯ ದಲಿತರನ್ನು ಜೀವಂತವಾಗಿ ಸುಟ್ಟ ಪ್ರಕರಣದ ಆಧಾರವಾಗಿದೆ. ಅದರಲ್ಲಿ ಕೀಳ್‌ವೆಣ್‌ಮಣಿಯ ವಿರುದ್ಧ 'ರಾಮಯ್ಯಾವಿನ್ ಗುಡಿಸೈ' ಎಂಬ ನಾಟಕ ಹಲವು ಕವಿತೆಗಳನ್ನು ಕಾಣಬಹುದು. ಅದಲ್ಲದೆ ತಾಮರ ಬರಣಿ ಪ್ರಕರಣ, ಮೇಲವಳೈವು ಪ್ರಕರಣ ಇನ್ನು ಹಲವು ನೈಜ ಶೋಷಣೆಗಳ ವಿರುದ್ಧ ದಲಿತ ಕವಿಗಳು ಮಾತಾಡುತ್ತಾರೆ.

ಶಿಕ್ಷಣದಿಂದ ಬಿಡುಗಡೆ ಶಿಕ್ಷಣವು ಗುಲಾಮತನದಿಂದ ಪಡೆಯುವ ಸಾಧನವಾಗಿದೆ. ಆದರೆ ದಲಿತರು ಆರ್ಥಿಕವಾಗಿ ದುರ್ಬಲರಾದ ಕಾರಣ ಅವರು ತಮ್ಮ ಮಕ್ಕಳನ್ನು ಸಾಲೆಗೆ ಕಳುಹಿಸದಿರುವುದನ್ನು ಕಾಣಬಹುದು. ಅದರೊಂದಿಗೆ ದಲಿತರಿಗೆ ಶಾಲೆಗಳಲ್ಲಿ ನಡೆಯುತ್ತಿದ್ದ ಶೋಷಣೆಗಳು ದಲಿತ ಮಕ್ಕಳು ಶಾಲೆಯನ್ನು ಬಿಡುವ ಅನೇಕ ಪ್ರಸಂಗಗಳನ್ನು ದಲಿತ ಸಾಹಿತ್ಯ ತಿಳಿಸುತ್ತದೆ. ಆದರೂ ಆಧುನಿಕ ಶಿಕ್ಷಣ ಪಡೆಯುವುದರಿಂದ ಅಲ್ಪಮಟ್ಟಿಗಾದರೂ ಗುಲಾಮತನದಿಂದ ಜೀವನ ನಡೆಸಬಹುದೆಂದೆ ಎರಡು ಭಾಷೆಗಳ ದಲಿತ ಪಠ್ಯಗಳು ತಿಳಿಸುತ್ತವೆ. ಮಾಗಿ, ಒಡಲಾಳ, ಅಂತ್ಯಜನ ಆತ್ಮಕತೆ, ಗೌರ್ನಮೆಂಟ್ ಬ್ರಾಹ್ಮಣ, ಊರುಕೇರಿ, ಹೊಲಗೇರಿಯ ರಾಜಕುಮಾರ ಮುಂತಾದ ಪಠ್ಯಗಳು ಇದಕ್ಕೆ ಸಾಕ್ಷಿಯಾಗಿವೆ. ತಮಿಳಿನಲ್ಲಿ ದಲಿತ ಲೇಖಕರು ಶಿಕ್ಷಣ ಪಡೆಯುವುದರಿಂದ ಬಿಡುಗಡೆ ಸಾಧ್ಯ ಎಂದು ಒತ್ತಿ ಹೇಳುತ್ತಾರೆ. 'ಪಳಯನ ಕಳಿದಳುಂ', 'ವಡು', 'ಕರುಕ್ಕು' ಮುಂತಾದ ಕಥನಗಳು ಇದಕ್ಕೆ ಸಾಕ್ಷಿಯಾಗಿವೆ.

* **ಮಹಿಳೆ:** ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಎರಡನೆಯ ದರ್ಜೆಯ ಪ್ರಜೆಯಾಗಿಯೇ ಪರಿಗಣಿತವಾಗುತ್ತಾಳೆ. ಅದರಲ್ಲೂ ದಲಿತ ಮಹಿಳೆಯು ಶೋಷಣೆಯ ಒಳಗೆ ಶೋಷಣೆಗೆ ಒಳಗಾಗುವುದನ್ನು ಕಾಣಬಹುದು. ಮೇಲ್ವರ್ಗದ ಪುರುಷರಿಂದ ಮತ್ತು ಮಹಿಳೆಯರಿಂದ ದಲಿತ ಪುರುಷರಿಂದಲೂ ಸ್ತ್ರೀಯು ಶೋಷಣೆ ಅನುಭವಿಸುವುದನ್ನು ದಲಿತ ಸಾಹಿತ್ಯ ದಾಖಲಿಸುತ್ತದೆ. ಕುಡಿತದ ಅಮಲಿಗೆ ಗಂಡಸರು ದಾಸ್ಯರಾದಾಗ ಆ ಕುಟುಂಬವನ್ನು ದಿಟ್ಟತನದಿಂದ ಕಾಪಾಡುವ ಪಾತ್ರಗಳನ್ನು ಮಾಗಿ, ಪಳಯನ ಕಳಿದಳುಂ, ತೂರ್ವೈ ಮುಂತಾದ ಕಾದಂಬರಿಗಳಲ್ಲಿ ಕಾಣಬಹುದು. ಪುರುಷರಿಗಿಂತ ಮಹಿಳೆಯರು ಹೆಚ್ಚು ಶ್ರಮಜೀವನದಲ್ಲಿ ತೊಡಗಿರುವುದನ್ನು ಕಾಣಬಹುದು. ಇನ್ನು ಕೆಲವು ಸಮಯದಲ್ಲಿ ಮೇಲ್ಜಾತಿ ಪುರುಷರು ದಲಿತ ಮಹಿಳೆಯರ ಒಪ್ಪಿಗೆ ಇಲ್ಲದಿದ್ದರು ದಬ್ಬಾಳಿಕೆಯಿಂದ ಲೈಂಗಿಕವಾಗಿ ಅವರನ್ನು ಬಳಸಿಕೊಳ್ಳುವುದನ್ನು ಕಾಣಬಹುದು. ಕೆಲವು ವೇಳೆ ಯಜಮಾನ, ಅಬಲೆ, ಕೌಟುಂಬಿಕ ಸಾಲಕ್ಕೆ ಸ್ತ್ರೀಯರನ್ನು ಲೈಂಗಿಕವಾಗಿ ಬಳಸಿಕೊಳ್ಳುವುದು ಕಂಡುಬರುತ್ತದೆ.

* **ಚಳುವಳಿಗಳ ಪ್ರಭಾವ:** ಕನ್ನಡ ದಲಿತ ಸಾಹಿತ್ಯ ಚಳುವಳಿಯ ಮೂಲಕ ಹುಟ್ಟಿ ಬೆಳೆದರೆ ತಮಿಳು ದಲಿತ ಸಾಹಿತ್ಯ ಭಿನ್ನ ರಾಜಕೀಯ ಕಾರಣಗಳಿಂದ ಬೆಳೆಯಿತು. ಆದರೆ ಕನ್ನಡದ ದಲಿತ ಸಾಹಿತ್ಯದ ಮೇಲೆ ಚಳುವಳಿಯು ಪ್ರಭಾವ ಬೀರಿದಷ್ಟು ತಮಿಳು ಸಾಹಿತ್ಯದಲ್ಲಿ ಕಣ್ಮರೆಯಾಗುತ್ತಿದೆ. ದ್ರಾವಿಡ ಚಳುವಳಿಯ ಪ್ರಭಾವ ಕಂಡುಬಂದರೂ ಅದು ಕೇವಲ ಚದುರಿದ ಕವನ ಲೇಖನಗಳಲ್ಲಿ ಮಾತ್ರ ಸಿಗುತ್ತದೆ. ಸಾಹಿತ್ಯ ಪಠ್ಯಗಳಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಮಾರ್ಕ್ಸ್ ಚಿಂತನೆಯನ್ನು 'ಉಪ್ಪುವಯಲ್' ಮುಂತಾದ ಕಾದಂಬರಿಗಳಲ್ಲಿ ಕಾಣಬಹುದು. ಪೆರಿಯಾರ್‌ರ ಚಿಂತನೆಗಳು ತಮಿಳಿನಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ.

* **ಸಂಸ್ಕೃತಿಯನ್ನು ಮೀರುವಿಕೆ:** ಸಂಸ್ಕೃತಿಯನ್ನು ಮೀರುವುದು, ಪಾವಿತ್ರತೆಯನ್ನು ಒಡೆಯುವುದು, ಪುರಾಣ ಪಾತ್ರಗಳನ್ನು ವಿಮರ್ಶಿಸುವುದು ಕನ್ನಡ-ತಮಿಳು ಸಾಹಿತ್ಯಗಳಲ್ಲಿ

ಕಾಣಬಹುದು. ವೈದಿಕ ಸಂಸ್ಕೃತಿಯು ಮೂಲ ಬೇರುಗಳಾದ ರಾಮಾಯಣ, ಮಹಾಭಾರತ ಪ್ರಸಂಗಗಳನ್ನು ವಿಡಂಬಿಸಿ ರಾಮ, ಕೃಷ್ಣ ಮುಂತಾದ ಪಾತ್ರಗಳನ್ನು ವಿಮರ್ಶಿಸುತ್ತದೆ. ಗಂಗಾರಾಂ ಚಂಡಾಲರ 'ನಮ್ಮ ಹಾಡು', ಮಾಲಗತ್ತಿಯವರ 'ಒಂದೇ ದನಿ', ಹನುಮಂತಯ್ಯನವರ 'ದ್ರೋಣರಿದ್ದಾರೆ' ಮನಜರವರ 'ಅಪ್ಪ ಹೇಳಿದ ಉಪ್ಪು ನೀರು ಕತೆ' ಮುಂತಾದ ಕವಿತೆಗಳು ಸಿದ್ದಲಿಂಗಯ್ಯನವರ 'ಏಕಲವ್ಯ' ನಾಟಕಗಳು ಕನ್ನಡದಲ್ಲಿ ಕಂಡುಬಂದರೆ ತಮಿಳಿನಲ್ಲಿ ಇದೇ ರೀತಿಯಾಗಿ ವಿರೋಧಿಸುತ್ತಾ ಅಲ್ಲಿ ಅಲಕ್ಷಿತಗೊಂಡ ದಲಿತ ಪಾತ್ರಗಳನ್ನು ಮರು ಓದಿಗೆ ಒಳಪಡಿಸುತ್ತಾರೆ. ಅನ್ಬಾದವನ್‌ರ 'ಪಿನಂ ತಿನ್ನುಂ ಶಾಸ್ತಿರಂಗಲ್', ಗುಣಶೇಖರನ್‌ರ 'ಪವಳಕ್ಕೊಡಿ ಮಡಲ್ಱುಂ ಕುಡುಂಬ ವಳಕ್ಕು'ರಂತಹ ನಾಟಕಗಳು ಇದಯವೇಂದನ್‌ರ 'ಎವರುಂ ಅರಿಯಾದ ನಾಂ', 'ಎನ್.ಟಿ. ರಾಜಕುಮಾರರ 'ಕಾಟ್ಟಾಳನ್', ಇಂದಿರನ್‌ರ 'ಕಡವುಳುಕ್ಕು ಮುನ್ ಪಿರಂದವರ್‌ಗಳ್'ರಂತಹ ಕವನಗಳು ಪುರಾಣವನ್ನು ವಿರೋಧಿಸುತ್ತಾ ಅಲಕ್ಷಿತಗೊಂಡ ದಲಿತ ಪಾತ್ರಗಳನ್ನು ಮರು ಓದಿಗೆ ಒಳಪಡಿಸುತ್ತಾರೆ.

ಅನುಬಂಧ ೧

ಅ. ತಮಿಳಿನ ಪ್ರಧಾನ ಆಕರಗಳು

ಆತ್ಮಕಥೆ

೧. ಗುಣಶೇಖರನ್ ಕೆ.ಎ.; **'ವಡು'**, ಕಾಲಚ್ಚುವಡು ಪ್ರಕಾಶನ, ನಾಗರ್ ಕೋವಿಲ್, ೨೦೦೫

೨. ಬಾಮ; **'ಕರುಕ್ಕು'**, ಸಮೂಹ ಸಿಂದನೈ ಸೆಯಲ್ ಆಯ್‌ವು ಮೈಯಂ, ಮಧುರೈ, ೧೯೯೨

ಕವಿತೆಗಳು

೧. ಅಭಿಮಾನಿ; **'ನೋಕ್ಕಾಡು'**, ತಾಮರೈಚ್ಚೆಲ್ವಿ ಪ್ರಕಾಶನ, ಚೆನ್ನೈ, ೧೯೯೩

೨. ಅಭಿಮಾನಿ; **'ಎದಿರಾಗ'**, ಕಾವ್ಯ ಪ್ರಕಾಶನ, ಚೆನ್ನೈ, ೨೦೦೪

೩. ಅನ್ಬಾದವನ್; **'ಸೆಂಬಳುಪ್ಪಾಯ್‌ಚ್ ಸೂರಿಯನ್'** ಕಾವ್ಯ ಪ್ರಕಾಶನ, ಬೆಂಗಳೂರು, ೨೦೦೦

೪. ಅನ್ಬಾದವನ್; **'ನೆರುಪ್ಪಿಲ್ ಕಾಯಿಚ್ಚ ಪರೈ'**, ಕಾವ್ಯ ಪ್ರಕಾಶನ, ಚೆನ್ನೈ, ೨೦೦೩

೫. ಅಳಗಿಯ ಪೆರಿಯವನ್; **'ನೀ ನಿಗಳ್‌ಂದ ಪೋದು'** ತಮಿಳಿನಿ ಪ್ರಕಾಶನ, ಚೆನ್ನೈ, ೨೦೦೦

೬. ಅಳಗಿಯ ಪೆರಿಯವನ್; **'ಅರುಬ ನೆಂಜು'** ತಮಿಳಿನಿ ಪ್ರಕಾಶನ, ಚೆನ್ನೈ, ೨೦೦೫

೭. ಆದವನ್ ದೀಟ್ಚನ್ಯ; **'ಪೊಜ್ಜಿಯತ್ತಿಲಿರುಂದು ತುವಂಗುಂ ಆಟ್ಟಂ'** ಸಂಧ್ಯಾ ಪ್ರಕಾಶನ, ಚೆನ್ನೈ, ೨೦೦೩

೮. ಇಂದ್ರನ್; **'ಸಾಂಬಲ್ ವಾರ್ತ್ತೈಗಳ್'**, ಯಾಳಿ ಪದಿವು ಪ್ರಕಾಶನ, ಚೆನ್ನೈ, ೧೯೯೪

೯. ಇಂದ್ರನ್; **'ಅರೈಕ್ಕುಲ್ ವಂದ ಆಫ್ರಿಕ ವಾನಂ'**

೧೦. ಇದಯವೇಂದನ್ ವಿಳಿ.ಪಾ.; **'ಕನವುಗಳ್ ವಿರಿಯುಂ'** ಅನುರಾಗಂ ಪ್ರಕಾಶನ, ಚೆನ್ನೈ, ೨೦೦೨

೧೧. ಇದಯವೇಂದನ್ ವಿಳಿ.ಪಾ. **'ಎವರುಂ ಅರಿಯಾದ ನಾಂ'** ಮರುದಾ ಪ್ರಕಾಶನ, ಚೆನ್ನೈ, ೨೦೦೪

೧೨. ಕಂದಸ್ವಾಮಿ ತಯ್; **‘ತನಿ ಇರುಟ್ಟು’** ವಿಡಿಯಲ್ ಪ್ರಕಾಶನ, ಕೊಯಂಬತ್ತೂರ್, ೨೦೦೨

೧೩. ತಲೈಯಾರಿ: **‘ಎಂಗೇ ಎಮದು ಮುಗಂ?’** ಪಕ್‌ರುಳಿ ಪ್ರಕಾಶನ, ಚೆನ್ನೈ, ೧೯೯೬

೧೪. ಮದಿವಣ್ಣನ್ ಮ; **‘ನೆರಿಂದು’** ವೇರು ಪ್ರಕಾಶನ, ಆತ್ತೂರ್, ೨೦೦೦

೧೫. ಮದಿವಣ್ಣನ್ ಮ; **‘ನಮಕ್ಕಿಡೈಯಿಲಾನ್ ತೊಲೈವು’** ಕರುಪ್ಪುಪ್ ಪ್ರತಿಗಳು ಪ್ರಕಾಶನ, ಚೆನ್ನೈ, ೨೦೦೫

೧೬. ಮುರುಗಪಾಂಡಿಯನ್ ಅರಸು; **‘ಶಿಲ ದಲಿತ್ ಕವಿದೈಗಳ್’**, ಅನ್ನಂ ಪ್ರಕಾಶನ, ೧೯೯೪

೧೭. ರಾಜಕುಮಾರ್ ಎನ್.ಟಿ.; **‘ತೆರಿ’**, ತಿಣ್ಣೈ ಪ್ರಕಾಶನ, ಕುಮರಿ ಮಾವಟ್ಟಂ, ೧೯೯೭

೧೮. ರಾಜಕುಮಾರ್ ಎನ್.ಟಿ.; **‘ಒಡಕ್ಕು’**, ಕಲೈ ಇಲಕ್ಕಿಯಪ್ ಪೆರುಮಂಡ್ರಂ ತಿರುವಣ್ಣಾಮಲೈ, ೧೯೯೯

೧೯. ರಾಜಕುಮಾರ್ ಎನ್.ಟಿ.; **‘ಕಾಟ್ಟಾಲನ್’**, ತಮಿಳ್‌ನಾಡು ಕಲೈ ಇಲಕ್ಕಿಯಪ್ ಪೆರುಮಂಡ್ರಂ ತಿರುವಣ್ಣಾಮಲೈ, ೨೦೦೩

೨೦. ರಾಜಕುಮಾರ್ ಎನ್.ಟಿ.; **‘ರತ್ತ ಸಂದನ ಪಾವೈ’**, ತಮಿಳಿನಿ ಪ್ರಕಾಶನ, ಚೆನ್ನೈ, ೨೦೦೧

೨೧. ಯಾಳನ್ ಆದಿ; **‘ಸೆವಿಪ್ಪರೈ’**, ಬುದ್ಧಾ ಪ್ರಕಾಶನ, ಕೊಯಂಬತ್ತೂರ್, ೨೦೦೪

೨೨. ಯಾಳನ್ ಆದಿ; **‘ನೆಡುಂತೀ’**, ಕಲಗಂ ಪ್ರಕಾಶನ, ಚೆನ್ನೈ, ೨೦೦೬

೨೩. ಸುಕೃದಾರಾಣಿ; **‘ಇರವು ಮಿರುಗಂ’**, ಕಾಲಚ್ಚುವಡು ಪ್ರಕಾಶನ, ನಾಗರ್‌ಕೋವಿಲ್, ೨೦೦೪

೨೪. ಸುಕೃದಾರಾಣಿ; **‘ಅವಳೈ ಮೊಳಿಪೆಯರ್‌ತ್ತಲ್’**, ಕಾಲಚ್ಚುವಡು ಪ್ರಕಾಶನ, ನಾಗರ್‌ಕೋವಿಲ್, ೨೦೦೮

೨೫. ಸ್ವಾಮಿನಾಥನ್ ಕೋ.ವೈ.: **‘ಆಡುಂ ಪೆರಿಯ ಆಡುಂ’**, ಪಾಲಂ ಪ್ರಕಾಶನ, ಚೆನ್ನೈ, ೨೦೦೩

ಕಾದಂಬರಿಗಳು

೧. ಅಳಗಿಯ ಪೆರಿಯನ್; **‘ತಗಪ್ಪನ್ ಕೊಡಿ’**, ತಮಿಳಿನಿ ಪ್ರಕಾಶನ, ಚೆನ್ನೈ, ೨೦೦೨

೨. ಅರಿವಳಗನ್; **‘ಕಳಿಸಡೈ’**, ವಿಶ್ವವಿದ್ಯಾಲಯ ಪ್ರಕಾಶನ, ಚೆನ್ನೈ, ೨೦೦೩

೩. ಇಮೈಯಂ; **‘ಕೋವೈರು ಕಳುದೈಗಳ್’**, ಕ್ರಿಯಾ ಪ್ರಕಾಶನ, ಚೆನ್ನೈ, ೧೯೯೯

೪. ಧರ್ಮನ್ ಸೋ; **‘ತೂರ್ವೈ’**, ಅಗರಂ ಪ್ರಕಾಶನ, ತಂಜಾವೂರ್, ೧೯೯೬

೫. ಶ್ರೀಧರ ಗಣೇಶನ್; **‘ಉಪ್ಪು ವಯಲ್’**, ನ್ಯೂ ಸೆಂಚುರಿ ಬುಕ್‌ಹೌಸ್, ಚೆನ್ನೈ, ೧೯೯೮

೬. ಸಿವಕಾಮಿ ಪ.; **‘ಪಳೈಯನ್ ಕಳಿದಲುಂ’**, ತಮಿಳ್‌ಪ್ ಪುತ್ತಗಾಲಯಂ ಪ್ರಕಾಶನ, ಚೆನ್ನೈ, ೧೯೮೯

ನಾಟಕ

೧. ಅನ್ಬಾದವನ್; **'ಪಿಣಂ ತಿನ್ನುಂ ಶಾಸ್ತಿರಂಗಳ್'**, ಅಮೈದಿ! ಅಮೈದಿ! ಗುರುರಾಜ ಪ್ರಕಾಶನ, ಚೆನ್ನೈ, ೨೦೦೧

೨. ಗುಣಶೇಖರನ್ ಕೆ.ಎ.; **'ಬಲಿ ಆಡುಗಳ್'**, ನಿರಪ್ಪಿರಿಗೈ ಪತ್ರಿಕೆ ನವೆಂಬರ್ ೧೯೯೪

೩. ಗುಣಶೇಖರನ್ ಕೆ.ಎ.; **'ಪವಳಕ್ಕೊಡಿ ಮಟ್ರುಂ ಕುಡುಂಬ ವಳಕ್ಕು'**, ಅಡ್ಯೆಯಾಳಂ ಪ್ರಕಾಶನ, ತಿರುಚ್ಚಿ, ೨೦೦೧

೪. ಮುಗಿಲ್; **'ಇರಾಮೈಯಾವಿನ್ ಗುಡಿಸೈ'**, ದೀಟ್ಚನ್ಯ ಪ್ರಕಾಶನ, ತಿರುವಣ್ಣಾಮಲೈ, ೧೯೯೨

೫. ಪ್ರತಿಭಾ ಜಯಚಂದ್ರನ್; **'ಕೊಪ್ಪು'**, ಪುದಿಯ ಕೋಡಾಂಗಿ ಪತ್ರಿಕೆ, ಫೆಬ್ರವರಿ, ೨೦೦೨

೬. ಭಾರದಿ ಪ್ರಭು; **'ಏಕಲೈವಿ'**, ತುಡಿ ಚಳವಳಿ ಪ್ರಕಟನೆ, ಚೆನ್ನೈ, ೨೦೦೩

೭. ಸುಬ್ಬಯ್ಯಾ; **'ಕರುಪ್ಪು ಅರಂಗಂ'**, ೨೦೦೩

ಸಣ್ಣಕಥೆ

೧. ಅಭಿಮಾನಿ; **'ಊರುಚ್ಚೋರು'**, ಕಾವ್ಯ ಪ್ರಕಾಶನ, ಚೆನ್ನೈ, ೨೦೦೩

೨. ಅಳಗಿಯ ಪೆರಿಯನ್; **'ದಿಸೈಯೆಂದುಂ ಗ್ರಾಸುವರ್‌ಗಳ್ ಕೊಂಡ ಗ್ರಾಮಂ'**, ಕರುಪ್ಪ ಪ್ರತಿಗಳು, ಚೆನ್ನೈ, ೨೦೧೦

೩. ಇಮೈಯಂ; **'ಸಾವುಸೋರು'**, ಕ್ರಿಯಾ ಪ್ರಕಾಶನ, ಚೆನ್ನೈ, ೨೦೧೪

೪. ಉಂಜೈರಾಸನ್: **'ಎಗಿರು'**, (ದಲಿತ್ ಸಣ್ಣ ಕತೆಗಳು), ಪಕ್‌ರುಳಿ ಪ್ರಕಾಶನ, ಪರುಲಿ, ಚೆನ್ನೈ, ೧೯೯೬

೫. ಯಾಳಿನಿ ಮುನುಸ್ವಾಮಿ; **'ಕುರಲಟ್ರವನಿನ್ ಕುರಲ್'**, ಇರುವಾಟ್ಟಿ ಪ್ರಕಾಶನ, ಚೆನ್ನೈ, ೨೦೦೯

೬. ಸಿವಕಾಮಿ ಪ.; **'ದಲಿತ್ ಸಿರುಕದೈತ್ ತೊಗುಪ್ಪು'**, ಸಾಹಿತ್ಯ ಅಕಾಡೆಮಿ, ೨೦೧೪

ಆ. ಪೂರಕ ಆಕರಗಳು

೧. ಅರ್ಜುನ್ ಡಾಂಗ್ಲೆ; **ದಲಿತ ಇಲಕ್ಕಿಯಂ**, ತಮರೆಸೆಲ್ವಿ ಪ್ರಕಾಶನ, ೧೯೯೨

೨. ಅರಂಗಮಲ್ಲೀಗ; **ತಮಿಳ್ ಕವಿದೈಗಳಿಲ್ ಪೆಣ್ಣಿಯಮ್**; ನ್ಯೂ ಸೆಂಚುರಿ ಬುಕ್‌ಹೌಸ್, ೨೦೦೬

೩. ಇಂದಿರಾನ್ (ಅನು); **ಪಿನತ್ತೈ ಎರಿತ್ತೆ ವೆಲಿಚ್ಚಂ**; ಅಲೆಗಲ್ ಪ್ರಕಾಶನ, ೧೯೯೫

೪. ಕೈಲಾಸಪತಿ; **ತಮಿಳಿಲ್ ನಾವೆಲ್ ಇಲಕ್ಕಿಯಂ**; ನ್ಯೂ ಸೆಂಚುರಿ ಬುಕ್‌ಹೌಸ್, ೧೯೬೮, ಚೆನ್ನೈ

೫. ಕೇಶವನ್ ಕೋ; **ಸಮೂಗ ಬಿಡುದಲೈಯುಂ ತಾಳ್ತ ಪಟ್ಟೋರುಮ್**; ಸರವಣಬಾಳು ಪ್ರಕಾಶನ, ೧೯೯೪

೬. ಕೇಶವನ್ ಕೋ; **ಸಾದಿಯಂ**; ಸರವಣಬಾಳು ಪ್ರಕಾಶನ, ೧೯೯೫

೭. ಗುಣಶೇಖರನ್ ಕೆ.ಅ.,; **ದಲಿತ್ತಿಯಂ,** ಕಾವ್ಯ ಪ್ರಕಾಶನ, ೨೦೧೦

೮. ಚಿನ್ನಪ್ಪನ್ ಕು, **ತಮಿಳಿಲ್ ದಲಿತ್ ನಾಡಗಂಗಳ್**; ಮಯೂರ ಪ್ರಕಾಶನ, ೨೦೦೯

೯. ಜಗನ್ನಾಥನ್ ಕಿ.ವಾ., **ತಮಿಲ್ ನಾವಲಿನ್ ತೊಟ್ರಮುಂ ವಲರ್ಚ್ಚಿಯುಂ,** ತಮಿಳ್ ಉರವು ಪ್ರಕಾಶನ, ೧೯೬೬

೧೦. ತಣಿಗೈ ಸೆಲ್ವನ್; **ದಲಿತ್ತೀಯಂ,** ತಮಿಳೀಯಂ, ಹಿಂದೀಯಂ; ವಿಶ್ವವಿದ್ಯಾಲಯ ಪ್ರಕಾಶನ; ೧೯೯೮

೧೧. ತರುಮರಾಜ್ ಟಿ, (ಸಂ) **ಎಳುತ್ತು ಅರಸಿಯಲ್: ನವೀನ ತಮಿಳ್ ಸೂಳಳಿಲ್ ದಲಿತ್,** ಪುದುವಿಸೈ, ೧೬ ಸೆಪ್ಟೆಂಬರ್ ೨೦೦೯

೧೨. ಪಂಚಾಂಗಂ ಕ; **ಉಳೈಪ್ಪವರ್ ಆಯುದಂ,** ೨೦೦೬

೧೩. ಪೂರ್ಣಚಂದ್ರನ್ ಕ; **ತಮಿಳ್ ಇಲಕ್ಕಿಯತ್ತಿಲ್ ಒಡುಕ್ಕಪಟ್ಟೋರ್**; ಅಗರಂ ಪ್ರಕಾಶನ, ೨೦೦೪

೧೪. ದಲಿತ ಮುರಸು ಶಿಕ್ಷಕರ ಬಳಗ, **ದಲಿತ್ ಇಲಕ್ಕಿಯಮ್ ಕಡಂದು ವಂದ ಪಾದೈ– ಓರ್ ಉರೈಯಾಡಲ್,** ದಲಿತ ಮುರಸು ಪತ್ರಿಕೆ, ೨ ಏಪ್ರಿಲ್ ೨೦೧೪,

೧೫. ಪದ್ಮಾವತಿ ವಿವೇಕಾನಂದನ್, **ದಲಿತ್ ಇಲಕ್ಕಿಯಂ ಒರುಪಾರ್ವೈ ೧ ಮತ್ತು ೨,** ರಾಜಂ ಪ್ರಕಾಶನ, ೨೦೧೬

೧೬. ಪೆರುಮಾಳ್ ಅ.ಕಾ., **ತಮಿಳ್ ಇಲಕ್ಕಿಯ ವರಲಾರು,** ಸುದರ್ಶನ್ ಬುಕ್ಸ್, ೨೦೧೨

೧೭. ಪೊಣ್‌ರಾಜ್ ವೆ; **ತರ್ಕಾಕಾಲ ತಮಿಳಿಲ್ ಚೂಳಲಿಲ್ ದಲಿತ್ ಕವಿದೈಗಳ್**; ಕಾವ್ಯ ಪ್ರಕಾಶನ, ೨೦೧೨

೧೮. ಪೊಣ್‌ರಾಜ್ ವೆ; **ದಲಿತ್ತಿಯತ್ತಿನ್ ನೋಕ್ಕಂ ಪೊಕ್ಕುಂ**; ಕಾವ್ಯ ಪ್ರಕಾಶನ, ೨೦೧೦

೧೯. ಭಾರತಿ ಪೊಣ್ಣುಸ್ವಾಮಿ ಪಿ. ಕಾರ್‌ವಣ್ಣನ್ ಅ., ಮುತ್ತು ಕಂದನ್ ಸಿ (ಸಂ); **ವೆಟ್ಟಿ;** ಪರಿಸಲ್ ಪ್ರಕಾಶನ

೨೦. ಮದಿಯರಸನ್ ವೆ; **ತಮಿಳಗತ್ತಿನ್ ಒಡುಕ್ಕಪ್ಪಟ್ಟೋರ್ ಮೀದಾನ ವನ್‌ಮುರೈಗಳುಂ ಇಲಕ್ಕಿಯ ಪದವುಗಳುಂ,** ಕಾವ್ಯ ಪ್ರಕಾಶನ, ೨೦೧೬

೨೧. ಮದಿಯಳಗನ್ ಮ., **ತಮಿಳಿಲ್ ಪಿರ ತುರೈಕ್ ಕೋಟ್ಪಾಟ್ಟಯ ಆಯ್‌ವುಗಳ್,** ಉಲಗಲ್ ತಮಿಳಾರ್ಚ್ಚಿ ನಿರುವನಂ, ೨೦೦೫

೨೨. ಮಾರ್ಕ್ಸ್ ಅ.; **ದಲಿತ್ ಅರಸಿಯಲ್**; ನಿರಪ್ಪರಗೈ ಪತ್ರಿಕೆ; ೧೯೯೪

೨೩. ಮುರುಗೈಯನ್ ಆರ್.ಎಂ., **ತಮಿಳರ್ ತಂ ಸಾದೀಯ ಅಮೈಪ್ಪುಗಳ್,** ಪುದುವೈಪ್ ವಿಶ್ವವಿದ್ಯಾಲಯ, ೧೯೯೪

೨೪. ಮೋಗನಾ ಅ. **ದ್ರೌಪದಿ ಮಾಲೈಯಿಡು ನಾಡಗಂ,** ತಮಿಳ್ ಇಲಕ್ಕಿಯಲ್‌ತುರೈ, ೨೦೦೮

೨೫. ಯಾಳಿನಿ ಮುನುಸ್ವಾಮಿ, **ದಲಿತ್ ಇಲಕ್ಕಿಯಮುಂ ಅರಸಿಯಲುಂ,** ಇರುವಾಚ್ಚಿ ಪ್ರಕಾಶನ, ೨೦೦೭

೨೬. ರಾಜ್‌ಗೌತಮನ್; **ದಲಿತ್ ಪನ್‌ಪಾಡು**; ಗೌರಿ ಪ್ರಕಾಶನ, ೧೯೯೩

೨೭. ರಾಜ್‌ಗೌತಮನ್; **ದಲಿತ್ ಪಾರ್ವೈಯಿಲ್ ತಮಿಳು ಪನ್‌ಪಾಡು**; ಗೌರಿ ಪ್ರಕಾಶನ, ೧೯೯೪

೨೮. ರಾಜ್‌ಗೌತಮನ್; **ಪೊಯ್+ಅಪದ್ದಂ= ಉಣ್ಮೈ**; ವಿಲಿಂಬು ಟ್ರಸ್ಟ್, ೧೯೯೫

೨೯. ರಾಜ್‌ಗೌತಮನ್; **ದಲಿತ್ತೀಯ ವಿಮರ್ಶನ ಕಟ್ಟುರೈಗಳ್**; ಕಾಲಂತ್ಸುವಡು ಪ್ರಕಾಶನ, ೨೦೦೫

೩೦. ರಾಜ್‌ಗೌತಮನ್; **೮೦–ಗಳಿಲ್ ತಮಿಳ್ ಕಲಾಚ್ಚಾರಂ**; ಕಾವ್ಯ ಪ್ರಕಾಶನ; ೧೯೯೨

೩೧. ರಾಮಸ್ವಾಮಿ ಅ.; **ತಮಿಳ್ ದಲಿತ್ ಇಲಕ್ಕಿಯಂ**; ಕಾಲಚ್ಚುವಡು ಪ್ರಕಾಶನ, ೨೦೦೦

೩೨. ವಲ್ಲಿಕಣ್ಣನ್; **ಪುದುಕ್ಕವಿದೈನ್ ತೋಟ್ರುಮುಮಂ ವಲರ್‌ಚ್ಚಿಯುಂ**; ಅಣ್ಣಮ್; ೧೯೯೨

೩೩. ಷಣ್ಮುಗಂ ಡಿ.ಕೆ. ಅವ್ವೈ, **ನಾಡಗಕ್ಕಲೈ,** ಸಂಕ್ರದಾಸ್‌ಸ್ವಾಮಿ ನಿನೈವು ಮಂಡ್ರಂ, ೧೯೬೭

೩೪. ಷಣ್ಮುಕ ಸುಂದರಂ (ಸಂ) **ದಲಿತ್ತೀಯಂ**; ಕಾವ್ಯ ಪ್ರಕಾಶನ; ೧೯೯೬

೩೫. ಶಿವಗಾಮಿ; **ದಲಿತೀಯಂ ತಮಿಳೀಯಂ ಹಿಂದೂಯಂ**; ಮುನ್ನೋಟಂ ತಮಿಳಿಯಂ ಪ್ರಕಾಶನ, ೧೯೮೮

೩೬. ಶಿವತಂಭಿ ಕ. **ತಮಿಳಿಲ್ ಸಿರುಕದೈಯಿನ್ ತೋಟ್ರಮುಂ ವಲರ್‌ಚ್ಚಿಯುಂ**; ಪಾರಿ ಪ್ರಕಾಶನ, ೧೯೬೭

೩೭. ಸಜ್ಜನ್ ಅ; **ದಲಿತ್ತಿಯಂ ಇಯಕ್ಕಮುಂ ಇಲಕ್ಕಿಮುಂ**; ಕಾಳಸಗಮ್ ಪ್ರಕಾಶನ, ೨೦೦೪

೩೮. ಸಿವತಂಭೀ; **ತಮಿಳ್ ಇಲಕ್ಕಿಯ ವರಲಾರು**; ನ್ಯೂ ಸೆಂಚುರಿ ಬುಕ್‌ಹೌಸ್, ೧೯೯೮

೩೯. ಸುಕುಮಾರ್ ಬಾಲ, **ಉಲಗ ಅರಂಗು ವರಲಾಗು**, ಅನಾಮಿಕಾ ಸೌತ್ ಏಸಿಯನ್ ಬುಕ್ಸ್, ೧೯೯೬

೪೦. ಸುಬ ಗುಣಶೇಖರನ್, **ದಲಿತ ಇಲಕ್ಕಿಯಂ**; ಕಾವ್ಯ ಪ್ರಕಾಶನ, ೨೦೧೬

ಇ. ಆಂಗ್ಲಭಾಷಾ ಲೇಖನಗಳು/ ಕೃತಿಗಳು

1. Qurst for a meaningful life: A case study of K.A. Gunaselearan's the scar, by article, Ali Mojiz Rizvi, International Multidisciplanry Research Journal.

2. Discourse of Victimization: A study of K.A. Gunasekharas, the scar, by article, Dr. Amandeep. Mirrorview, Editied by Kousik Shastri.

3. Representaiton and Resistance: Startegies in Bama's Karakka and Raj Gauthaman's siluvai raj sarithiram, by article, Geetha Krishnamurthy, colonial writing routledge, U.K.

4. Sufferings of dalit in Bama's Karakka, by article, R. Janani and Mrs. Sridevi.

5. Bama's Karakka: Dalit Autogiography as testimonio, Promod K Nayar, University of Hyderabad.

6. The Polities of form in Dalit fiction: Bama's Sangati and Sivakamis the Grip of change, by article, pramad K Nayer Indian Journal of Gender studies.

7. A Dalit's voice of opperession, resistance and Empowerment: A Critique of K.A. Gunasekaran's the scar, by article, Ram Naresh Patil, An International Journal in English.

8. A Voice of Protest against racial margnalized through Dalith Literature, by article, Vadivelraja R. International Journal of English Research.

ಈ. ತಮಿಳು ಪತ್ರಿಕೆಗಳು

೧. ಕವಿತಾಚರನ್– ದ್ವೈಮಾಸಿಕ, ೧೯೯೨–೨೦೦೨

೨. ಕಾಲಚ್ಚುವಡು– ತ್ರೈಮಾಸಿಕ, ೧೯೮೮–೨೦೦೫

೩. ಕೋಡಾಂಗಿ– ವಾರ್ಷಿಕ, ೧೯೯೪

೪. ತಮಿಳ್ ನೇಯಂ– ಮಾಸಿಕ ಸಂಚಿಕೆ, ೨೦೦೧

೫. ದಲಿತ್– ವಾರ್ಷಿಕ, ೧೯೯೭–೨೦೦೨

೬. ದಲಿತ್ ಮುರಸು– ಮಾಸಿಕ, ೧೯೯೭ ಮತ್ತು ೨೦೦೫

೭. ನಿರಪ್ಪಿರಿಗ್ಯೆ– ಮಾಸಿಕ, ೧೯೯೦–೧೯೯೮

೮. ಪುದಿಯ ಕೋಡಾಂಗಿ– ಮಾಸಿಕ (ವಾರ್ಷಿಕ ವಿಶೇಷ ಸಂಚಿಕೆ) ೧೯೯೫–೯೬

೯. ವಡು– ತ್ರೈಮಾಸಿಕ, ೧೯೯೮–ಪ್ರಸ್ತುತ

ಉ. ಅಂತರ್ ಜಾಲ ಮಾಹಿತಿಗಳು

ಊ. ಪಿಎಚ್.ಡಿ. ಮಹಾಪ್ರಬಂಧಗಳು

೧. ಅನಂತ ಕೃಷ್ಣನ್ ಕ., **ದಲಿತ್ ಸಿರುಕದೈಗಳಿಲ್ ವಿಳಿಂಬುನಿಲೈ ಮಕ್ಕಳಿನ್ ವಾಳಕ್ಕೈ ಕೂರುಗಳ್**, ಮನೋನಮಣಿಯನ್ ಸುಂದನಾರ್ ವಿಶ್ವವಿದ್ಯಾಲಯ, ೨೦೧೩

೨. ಕರುಣಾನಿಧಿ; **ತರ್ಕಾಲಕ್ ಕವಿದೈಗಳಿಲ್ ದಲಿತ್ತೀಯ ಕೂರುಗಲ್**; (ಮಹಾಪ್ರಬಂಧ) ಪುದುವೈ ವಿಶ್ವವಿದ್ಯಾಲಯ; ೧೯೯೯

೩. ಕಾರ್ತಿಗೇಯನ್ ಕಾ., **ತಮಿಳಿಲ್ ಕ್ರಿಸ್ತ ನಾವಲ್‌ಗಳ್ ಓರ್ ಆಯ್‌ವು**, ಭಾರತಿಯಾರ್ ವಿಶ್ವವಿದ್ಯಾಲಯ, ೨೦೦೨

೪. ಕರುಣಾನಿಧಿ ವೆ.,; **ತರ್ಕಾಲಕ್ ಕವಿದೈಗಳಿಲ್ ದಲಿತ್ತೀಯ ಕೂರುಗಳ್**; ಪುದುವೈ ವಿಶ್ವವಿದ್ಯಾಲಯ, ೧೯೯೯

೫. ಗುರುಪ್ರಸಾದ್ ಮು; **ರಾಜಗೌತಮನಿನ್ ಪಡೈಪ್ಪುಲಗಂ ಕರುತ್ತುಲಗುಂ**, ಪಿಎಚ್.ಡಿ. ಮಹಾಪ್ರಬಂಧ, ಮಧುರೈ ಕಾಮರಾಸರ್ ವಿಶ್ವವಿದ್ಯಾಲಯ, ೨೦೧೪

೬. ಚಿನ್ನತಾಯಿ ಆರ್; **ವಿಳಿ.ಪಾ. ಇದಯವೆಂದನಿನ್ ಪಡೈಪ್ಪುಗಲ್**; ಪಿಎಚ್.ಡಿ. ಮಹಾಪ್ರಬಂಧ; ಮನೋಜ್ ಮನಿಯನಿಯನ್ ಸುಂದರನ್ ಆಗ, ವಿಶ್ವವಿದ್ಯಾಲಯ, ೨೦೧೧

೭. ತಮಿಳರಸನ್ ಪೆ., **ಅಳಗಿಯ ಪೆರಿಯವನ್ ಕಥೈಗಳ್ ಕಾಟ್ಟುಂ ಒಡುಕಪ್ಪಟ್ಟ ಮಕ್ಕಳಿನ್ ವಾಳ್‌ವಿಯಲ್**, ಪೆರಿಯಾರ್ ವಿಶ್ವವಿದ್ಯಾಲಯ, ೨೦೧೨

೮. ದುರೈ ಸು., **ತಮಿಳ್ ಇಲಕ್ಕಿಯ ಆಯ್ವಿಲ್ ಮಾರ್ಕ್ಸಿಯ ನೋಕ್ಕು**, ಪಾರತಿಯಾರ್ ವಿಶ್ವವಿದ್ಯಾಲಯ, ೧೯೯೭

೯. ಪರಮೇಶ್ವರನ್ ಕು., **ತಮಿಳ್ ದಲಿತ್ ಇಲಕ್ಕಿಯಂ ಒರು ಮದಿಪ್ಪೀಡು**, ಭಾರತಿದಾಸನ್ ವಿಶ್ವವಿದ್ಯಾಲಯ, ೨೦೦೨

೧೦. ಪೆರಿಯಸ್ವಾಮಿ ಕು., **ದಲಿತ್ತಿಯಚ್ ಸಿರುಕದೈಗಳಿಲ್ ಪಣ್ಪಾಟ್ಟುಪ್ ಪದಿವುಗಳ್**, ಪಿಎಚ್.ಡಿ. ಮಹಾಪ್ರಬಂಧ, ಭಾರತಿದಾಸನ್ ವಿಶ್ವವಿದ್ಯಾಲಯ, ೨೦೧೧

೧೧. ಮುತ್ತನ್ ವೆ; **ತಮಿಳಿಲಿಲ್ ದಲಿತ್ ನಾವೆಲ್‌ಗಳ್**; ಮಹಾಪ್ರಬಂಧ; ಪುದುವೈ ವಿಶ್ವವಿದ್ಯಾಲಯ, ೨೦೦೧

೧೨. ರಾಜೇಂದ್ರನ್ ರಾ., **ತಮಿಳ್ ನಾಡಗತ್ತಿಲ್ ದ್ರಾವಿಡ ಇಯಕ್ಕಿತ್ತಿನ್ ತಾಕ್ಕಂ**, ಭಾರತಿದಾಸನ್ ವಿಶ್ವವಿದ್ಯಾಲಯ, ೧೯೯೩

೧೩. ರಾಸು.ಎ.; **ಇರುವುದಾಂ ನೂಟ್ರಾಂಟ್ ತಮಿಳ್ ಕ್ರಿಸ್ತವಪ್ ಪುದಿನಂಗಳಿಲ್ ಒಡುಕ್ಕಪಟ್ಟೋರ್**; ಮಹಾಪ್ರಬಂಧ; ಭಾರದಿದಾಸನ್ ವಿಶ್ವವಿದ್ಯಾಲಯ; ೨೦೦೨

೧೪. ವೆಂಕಟಾಚಲಂ ರಾ., **ದಲಿತ್ ಕವಿದೈಗಳ್ ವಾಳ್ವುಂ ಅರಸಿಯಲುಂ**, ಪೆರಿಯಾರ್ ಯುನಿವರ್‌ಸಿಟಿ, ಪಿಎಚ್.ಡಿ. ಮಹಾಪ್ರಬಂಧ, ೨೦೧೩

೧೫. ವೆಂಕಟೇಶನ್ ಪೊ. **ಇಮೈಯಂ ಪಡೈಪ್ಪುಗಳಿಲ್ ವಿಳಿಂಬು ನಿಲೈ ಮಕ್ಕಳಿನ್ ಪದಿವುಗಳ್**, ಪಿಎಚ್.ಡಿ. ಮಹಾಪ್ರಬಂಧ, ಪೆರಿಯಾರ್ ವಿಶ್ವವಿದ್ಯಾಲಯ, ೨೦೧೫

ಅನುಬಂಧ ೨

ಪರಾಮರ್ಶನ ಗ್ರಂಥಗಳು

ಕನ್ನಡ

೧. ಅರ್ಜುನ ಗೊಳಸಂಗಿ, (ಸಂ) ೨೦೦೩, ಕನ್ನಡ ದಲಿತ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨. ಅರವಿಂದ ಮಾಲಗತ್ತಿ, ೧೯೮೮, ಕಾರ್ಯ, ಶೈಲ ಪ್ರಕಾಶನ, ನೇತಾಜಿಗಲ್ಲಿ, ಅಂಬೇಡ್ಕರ ರಸ್ತೆ ಮುದ್ದೇಬಿಹಾಳ್.

೩. ಅರವಿಂದ ಮಾಲಗತ್ತಿ, ೧೯೯೯, ದಲಿತ ಚಳುವಳಿ, ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ, ಚೇತನ ಬುಕ್ ಹೌಸ್ ಮೈಸೂರು.

೪. ಅರವಿಂದ ಮಾಲಗತ್ತಿ,(ಸಂ). ೨೦೦೨, ದಲಿತ ಮಾರ್ಗ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫. ಅರವಿಂದ ಮಾಲಗತ್ತಿ, ೧೯೯೯, ದಲಿತಯುಗ ಮತ್ತು ಕನ್ನಡ ಸಾಹಿತ್ಯ, ಚೇತನ ಬುಕ್ ಹೌಸ್ ಮೈಸೂರು.

೬. ಅರವಿಂದ ಮಾಲಗತ್ತಿ,(ಪ್ರಸಂ) ೨೦೧೪, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–೧ ದಲಿತ ತಾತ್ವಿಕ ವಿಮರ್ಶೆ ಪ್ರಸಾರಾಂಗ, ಮೈಸೂರು ವಿವಿ., ಮೈಸೂರು.

೭. ಅರವಿಂದ ಮಾಲಗತ್ತಿ,(ಪ್ರಸಂ)೨೦೧೪, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–೨ ದಲಿತ ಚಳವಳಿ, ಪ್ರಸಾರಾಂಗ, ಮೈಸೂರು ವಿವಿ., ಮೈಸೂರು.

೮. ಅರವಿಂದ ಮಾಲಗತ್ತಿ,(ಪ್ರಸಂ)೨೦೧೪, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–೩ ದಲಿತ ಜಾನಪದ ಶಾಸನ, ಪ್ರಸಾರಾಂಗ, ಮೈಸೂರು ವಿವಿ., ಮೈಸೂರು.

೯. ಅರವಿಂದ ಮಾಲಗತ್ತಿ,(ಪ್ರಸಂ)೨೦೧೪, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–೪ ದಲಿತ ಪ್ರಾಚೀನ ಸಾಹಿತ್ಯ, ಪ್ರಸಾರಾಂಗ, ಮೈಸೂರು ವಿವಿ., ಮೈಸೂರು.

೧೦. ಅರವಿಂದ ಮಾಲಗತ್ತಿ,(ಪ್ರಸಂ)೨೦೧೪, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–೫ ದಲಿತ ಕಾವ್ಯ, ಕಥೆ, ಆತ್ಮಕಥೆ, ಪ್ರಸಾರಾಂಗ, ಮೈಸೂರು ವಿವಿ., ಮೈಸೂರು.

೧೧. ಅರವಿಂದ ಮಾಲಗತ್ತಿ,(ಪ್ರಸಂ)೨೦೧೪, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–೬ ದಲಿತ ಕಾದಂಬರಿ ನಾಟಕ ಸಂಶೋಧನೆ ಪ್ರಸಾರಾಂಗ, ಮೈಸೂರು ವಿವಿ., ಮೈಸೂರು.

೧೨. ಅಂಬಳಿಕೆ ಹಿರಿಯಣ್ಣ, ೧೯೯೮, ಜನಪದ ಸಿದ್ಧಾಂತಗಳು, ಜಿ.ಎಸ್. ಗ್ರಂಥಮಾಲೆ, ಮೈಸೂರು.

೧೩. ಆಶಾದೇವಿ ಎಂ.ಎಸ್.(ಅನು), ೨೦೧೫, ಉರಿ ಚಮ್ಮಾಳಿಗೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೧೪. ಕೋಟಿಗಾನಹಳ್ಳಿ ರಾಮಯ್ಯ,(ಸಂ) ೨೦೦೫, ತಲಪರಿಗೆ, ಚೌಕಿ ಸಂಸ್ಕೃತಿ ಕೇಂದ್ರ, ಬೆಂಗಳೂರು.

೧೫. ಗುಂಡಪ್ಪ ಎಲ್., ತಮಿಳು ಸಾಹಿತ್ಯ ಚರಿತ್ರೆ, ಸಾಹಿತ್ಯ ಅಕಾಡೆಮಿ, ೧೯೮೦

೧೬. ಚಂದ್ರಶೇಖರ ಟಿ.ಆರ್(ಸಂ), ೧೯೯೯, ದಲಿತ ಅಧ್ಯಯನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೭. ಚಿದಾನಂದ ಮೂರ್ತಿ, ೧೯೮೫, ಮಧ್ಯಕಾಲಿನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೮. ಚಿನ್ನಸ್ವಾಮಿ ಸೋಸಲೆ, ೨೦೧೩, ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ಯಾಜಿ ಪ್ರಕಾಶನ ಹೊಸಪೇಟೆ.

೧೯. ಜವರಯ್ಯ, ಮ.ನ.ಜ ೧೯೮೨, ಮಾಗಿ, ಸಂಕ್ರಮಣ ಪ್ರಕಾಶನ ಧಾರವಾಡ.

೨೦. ದೇವನೂರು ಮಹಾದೇವ, ೧೯೯೨, ಕುಸುಮ ಬಾಲೆ, ಪತ್ರಿಕೆ ಪ್ರಕಾಶನ ನಂ ೯ ಆಂಜನೇಯ ದೇವಸ್ಥಾನ ರಸ್ತೆ ಬಸವನಗುಡಿ, ಬೆಂಗಳೂರು.

೨೧. ದಿವಾಕರ, ೨೦೧೩, ದಲಿತರು ವಿಮೋಚನೆಯ ಹಾದಿ ಒಂದು ಅವಲೋಕನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨೨. ಪರಮಶಿವಯ್ಯ ಜಿ.ಶಂ. ತಮಿಳುನಾಡಿನ ಜನಪದ, ನ್ಯಾಷನಲ್ ಬುಕ್ ಟ್ರಸ್ಟ್

೨೩. ಪುರುಷೋತ್ತಮ ಬಿಳಿಮಲೆ, ೧೯೯೮, ದಲಿತ ಜಗತ್ತು, ಹೊಸ ದಿಕ್ಕು ಪ್ರಕಾಶನ, ಬೆಂಗಳೂರು.

೨೪. ಪುಟ್ಟಯ್ಯ ಬಿ, ಎಂ. ೨೦೧೫, ಶ್ರಮ ಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೫. ಬರಗೂರು ರಾಮಚಂದ್ರಪ್ಪ, ೨೦೦೫, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ ಬೆಂಗಳೂರು.

೨೬. ಮುನಿವೆಂಕಟಪ್ಪ (ಸಂ), ೨೦೧೨, ದಲಿತ ಚಳವಳಿ ಚರಿತ್ರೆ ಸಂಪುಟ ೧ ರಚನ ಪ್ರಕಾಶನ ಮೈಸೂರು.

೨೭. ಮುನಿವೆಂಕಟಪ್ಪ (ಸಂ), ೨೦೧೨, ದಲಿತ ಚಳವಳಿ ಚರಿತ್ರೆ ಸಂಪುಟ ೨ ರಚನ ಪ್ರಕಾಶನ ಮೈಸೂರು.

೨೮. ಮುನಿವೆಂಕಟಪ್ಪ (ಸಂ), ೨೦೧೨, ದಲಿತ ಚಳವಳಿ ಚರಿತ್ರೆ ಸಂಪುಟ ೩ ರಚನ ಪ್ರಕಾಶನ ಮೈಸೂರು.

೨೯. ಮಹಾದೇವಯ್ಯ. ಪಿ (ಸಂ). ೨೦೦೬, ದಲಿತರು ಭಾಷೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೦. ಮೊಗಳ್ಳಿ ಗಣೇಶ್(ಸಂ), ದಲಿತ ಚಿಂತನೆ, ೨೦೦೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೧. ಮೊಗಳ್ಳಿ ಗಣೇಶ್, ೨೦೧೫, ಜಾತಿಪದ್ಧತಿ ಮತ್ತು ದಲಿತ ಸಂಸ್ಕೃತಿ; ಜಾತಿಮೀಮಾಂಸೆ, ಅಭಿನವ ಪ್ರಕಾಶನ ಬೆಂಗಳೂರು.

೩೨. ಮೊಗಳ್ಳಿ ಗಣೇಶ್, ೨೦೧೫, ದಲಿತ ಪದಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೩. ಮೋಹನ ಕುಂಟಾರ್ ಎ. ಪರಿಗ್ರಹ, ೨೦೧೧, ಸಿ.ವಿ.ಜಿ. ಇಂಡಿಯಾ, ಬೆಂಗಳೂರು.

೩೪. ಮುಳ್ಳೂರು ನಾಗರಾಜ, ೧೯೯೨, ಮರಣ ಮಂಡಲ ಮಧ್ಯದೊಳಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು

೩೫. ರಹಮತ್ ತರೀಕೆರೆ, ೨೦೧೪, ಸಂಶೋಧನ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೬. ರಹಮತ್ ತರೀಕೆರೆ, ೨೦೧೫, ಸಾಂಸ್ಕೃತಿಕ ಅಧ್ಯಯನ, ಅಭಿನವ ಪ್ರಕಾಶನ ಬೆಂಗಳೂರು.

೩೭. ರಂಗಸ್ವಾಮಿ ಎಮ್. ತಮಿಳು ಸಾಹಿತ್ಯ ಒಂದು ವಾರೆನೋಟ, ಗಾಯತ್ರಿ ಪ್ರಿಂಟರ್ಸ್ ಮೈಸೂರು, ೨೦೧೧

೩೮. ರಾಜಾರಾಮ ಹೆಗಡೆ(ಸಂ), ೨೦೦೪, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೯. ಶಂಕರಪ್ಪ ಎನ್., ತೋರಣಗಲ್ಲು, ತಮಿಳಗಂ-ಶಂಗಂ ಎಷ್ಟು ಪ್ರಾಚೀನ, ಕಾವ್ಯಕಲಾ ಪ್ರಕಾಶನ, ೨೦೦೯

೪೦. ಶೆಟ್ಟರ್ ಷ., ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ, ಅಭಿನವ ಪ್ರಕಾಶನ, ೨೦೧೨

೪೧. ಸೂಸನ್ ಬಾಸ್ಕೆಟ್(ಮೂಲ), ೨೦೦೮, ತೌಲನಿಕ ಸಾಹಿತ್ಯ, ಅಧ್ಯಯನ ಮಂಡಲ, ಬೆಂಗಳೂರು.

೪೨. ಸೋಮಣ್ಣ ಹೊಂಗಳ್ಳಿ, ತಮಿಳು ನಾಡಿನ ದಲಿತ ಸಾಹಿತ್ಯ, ಶರತ್ ಪ್ರಕಾಶನ ಮೈಸೂರು, ೨೦೦೯

೪೩. ಹನುಮಂತಯ್ಯ ಎಲ್., ೧೯೯೦, ದಲಿತಲೋಕದ ಒಳಗೆ, ಮಾಹಿತಿ ಪ್ರಕಾಶನ, ಬೆಂಗಳೂರು.

ಪಿಎಚ್.ಡಿ. ಮಹಾಪ್ರಬಂಧಗಳು

೧. ಕುಲಕರ್ಣಿ ಪ್ರ.ವಿ., "ತಮಿಳಿನಲ್ಲಿ ಕನ್ನಡದ ವೀರಶೈವ ಕೃತಿಗಳು" ಮದುರೈ ಕಾಮರಾಜ ವಿಶ್ವವಿದ್ಯಾಲಯ, ೧೯೮೩

೨. ಮಣಿ ಟಿ. 'ಕನ್ನಡ ಮತ್ತು ತಮಿಳು ಭಾಷೆಯಲ್ಲಿ ಆಧುನಿಕ ದಲಿತ ಕಾವ್ಯ-ಒಂದು ತೌಲನಿಕ ಅಧ್ಯಯನ', ಮೈಸೂರು ವಿಶ್ವವಿದ್ಯಾನಿಲಯ, ೨೦೧೦

೩. ಮಳರ್‌ವಿಳಿ ಕೆ., "ಮಾಸ್ತಿ ಮತ್ತು ಪುದುಮೈಪಿತ್ತನ್ ಸಣ್ಣ ಕಥೆಗಳ ತೌಲನಿಕ ಅಧ್ಯಯನ", ದ್ರಾವಿಡ ವಿಶ್ವವಿದ್ಯಾಲಯ, ೨೦೦೪

೪. ರಂಗಸ್ವಾಮಿ, "ಸ್ತ್ರೀವಾದಿ ಹಿನ್ನೆಲೆಯಿಂದ ಕನ್ನಡ ಮತ್ತು ತಮಿಳು ಮಹಿಳಾ ಸಾಹಿತ್ಯ ಅಧ್ಯಯನ", ಮೈಸೂರು ವಿಶ್ವವಿದ್ಯಾನಿಲಯ, ೨೦೦೬



ಭಾಷಾಂತರ ಅಧ್ಯಯನ ವಿಭಾಗ